# ನಮ್ಮ ಬ್ರಾಹ್ಮಣ್ಯ

*ಕೋಟ ವಾಸುದೇವ ಕಾರಂತ

ಬ್ರಾಹ್ಮಣರ ಜೀವನದೃಷ್ಟಿಯನ್ನು ಇಟ್ಟಿಗೆ ಮರಳು ಹಾಗೂ ತೆಂಗಿನನಾರಿನಿಂದ ಉಜ್ಜಿ ಹಸನುಗೊಳಿಸುವಂಥ ಪ್ರಯತ್ನ ಈ ಕೃತಿ.

ಬ್ರಾಹ್ಮಣವೆಂಬ ಶಬ್ದವನ್ನು ಬಹಿರಂಗವಾಗಿ ಹೇಳುವುದೇ ಅಪಮಾನದ ಸಂಗತಿ ಎಂಬ ಸನ್ನಿವೇಶದಲ್ಲಿ 'ನಮ್ಮ ಬ್ರಾಹ್ಮಣ್ಯ'ವೆಂಬ ಪುಸ್ತಕ ಬರೆದು ಪ್ರಕಟಿಸಿದ್ದು ಒಂದು ದೊಡ್ಡ ತಪಸ್ಸು.

ಬ್ರಾಹ್ಮಣ್ಯದ ಬಗ್ಗೆ ನಮ್ಮಲ್ಲಿ ಪ್ರಚಲಿತವಿರುವ [illegible] ಯಾಗಿ ಹೋಗಲಾಡಿಸಿದ [illegible] ವಾಸುದೇವ ಕಾರಂತರು. [illegible] ಪುಸ್ತಕ ಪುನರ್ಮುದ್ರಣ [illegible] ಕಾರಂತರ ತಪಸ್ಸಿನ ಫಲ.

ಗ್ರಂಥ ಸ್ವಾಮ್ಯ ವಿಭಾಗ
ಕೋಟ ವಾಸುದೇವ ಕಾರಂತ ಸಾಹಿತ್ಯಮಾಲೆ

# ನಮ ಬ್ರಾಹ್ಮಣ್ಯ

ಸನಾತನ ಧರ್ಮದ ಮೂಲಸಾರವನ್ನರಿಯಲು ಒಂದು ನೂತನ ಮಾರ್ಗದರ್ಶಿ

DEPARTMENT ... STATE CENTRAL LIBRARY
COPY RIGHT
BUREAU

ಲೇಖಕರು

**ಕೋಟ ವಾಸುದೇವ ಕಾರಂತ**

ಪ್ರಕಾಶಕರು

**ಕೋಟ ವಾಸುದೇವ ಕಾರಂತ ಸಾಹಿತ್ಯಮಾಲೆ**

'ಬೃಂದಾವನ' (ಹಿಮ್ಮನೆ), ನಂ. ೧೫, ರಂಗರಾವ್ ರಸ್ತೆ

ಶಂಕರಪುರ, ಬೆಂಗಳೂರು-೫೬೦ ೦೦೪

META ENTERED

NAMMA BRAHMANYA—A Novel Guide to know the real essence of Sanatana Dharma (Hindu Religion)
By : Kota Vasudeva Karanta (Late)
Published By : Kota Vasudeva Karanta Sahityamale.
'Brindavan' (out-House), No. 15, Ranga Rao Road
Shankarapura, Bangalore-560 004

Year : 1991 Pages : 232 Price : Rs. 18-00

ಪ್ರಥಮ ಮುದ್ರಣ : ೧೯೮೨
ದ್ವಿತೀಯ ಮುದ್ರಣ : ೧೯೯೧

ಕೃತಿಸ್ವಾಮ್ಯ : ಕೋಟ ವಾಸುದೇವ ಕೇಶವ ಕಾರಂತ
ಆರ್ಥಿಕ ಹೊಣೆಗಾರಿಕೆ : ಕೋಟ ವಾಸುದೇವ ಕಾರಂತ ಸಾಹಿತ್ಯಮಾಲೆ, ಬೆಂಗಳೂರು-೪
ಮುಖಪುಟ ವಿನ್ಯಾಸ : ಕೆ. ಆರ್. ಶಂಕರನಾರಾಯಣ
ಮುಖಪುಟ ರಚನೆ : ಎಸ್. ಆರ್. ಪಾಟೀಲ್

ಬೆಲೆ : ಹದಿನೆಂಟು ರೂಪಾಯಿಗಳು

ಓದುಗರಿಗೆ ಸೂಚನೆ : ನಾವು ಮುದ್ರಿಸಿರುವ ಮುಖಬೆಲೆಯನ್ನು ಯಾವ ಕಾರಣ ದಿಂದಲೂ ಬದಲಿಸುವಂತಿಲ್ಲ. ಚೀಟಿ ಅಂಟಿಸುವ ಅಥವಾ ತಿದ್ದುವ ಮೂಲಕ ನಮ್ಮ ಪ್ರಕಾಶನಗಳ ಯಾವುದೇ ಪುಸ್ತಕವನ್ನು ಹೆಚ್ಚು ಬೆಲೆಗೆ ಮಾರಾಟ ಮಾಡುವ ವರ್ತಕರ ವಿರುದ್ಧ ಸ್ಥಳೀಯ ಪೊಲೀಸರಲ್ಲಿ ದೂರು ಸಲ್ಲಿಸಬೇಕಾಗಿ ಓದುಗರಿಗೆ ಸೂಚನೆ.

—ಕೋ.ವಾ. ಕಾರಂತ ಸಾಹಿತ್ಯಮಾಲೆ ; ಅನಂತ ಪ್ರಕಾಶನ
ನಂ. ೧೫, ರಂಗರಾವ್ ರಸ್ತೆ, ಬೆಂಗಳೂರು-೪

894.814 308
KAR N91

ಮುದ್ರಕರು :
**ಶ್ರೀ ಶಕ್ತಿ ಗಣೇಶ್ ಪ್ರಿಂಟರ್ಸ್**
ನಂ. ೧೪೩, ರಿಸರ್ವಾಯರ್ ರಸ್ತೆ
ಬಸವನಗುಡಿ, ಬೆಂಗಳೂರು-೫೬೦ ೦೦೪

# ಮೊದಲ ಮುದ್ರಣದ ಮುನ್ನುಡಿ

ಲೌಕಿಕ ವೃತ್ತಿಗಳಿಂದ ಬಾಳುವ ಹೆಚ್ಚಿನ ಬ್ರಾಹ್ಮಣರಲ್ಲಿ ಬ್ರಾಹ್ಮಣ್ಯದ ಹಿರಿಮೆಯ ಜ್ಞಾನ, ಅದನ್ನು ಬಾಳಲಿಕ್ಕೆ ಬೇಕಾದ ಶಾಸ್ತ್ರಜ್ಞಾನ ತೀರಾ ಕಡಿಮೆಯಾಗುತ್ತ ಬಂದಿದೆ. ಅವರ ಕ್ರಮ ವಜ್ರ ಹಿಡಕೊಂಡು ಗಾಜೆಂದು ಬಿಸಾಡುವಂತಿದೆ. ಇದೆಷ್ಟಕ್ಕೂ ಆಗಕೂಡದು. ಅವರು ತಮ್ಮ ಬ್ರಾಹ್ಮಣ್ಯವನ್ನು ಚೆನ್ನಾಗಿ ಬಾಳಲಿಕ್ಕೆ ಬೇಕಾದ ಶಾಸ್ತ್ರಜ್ಞಾನ ಪಡೆಯುವುದು, ಅದರಂತೆ ಬಾಳುವುದು, ತಮ್ಮಿಂದ ಅಸಾಧ್ಯವೆಂದು ಆ ಯತ್ನಕ್ಕೇ ಹೋದವರಲ್ಲ. ಆದರೆ ಬ್ರಾಹ್ಮಣ್ಯದ ಮಹತ್ವ, ಅದರ ತಾತ್ಸಾರದಿಂದ ಮುಂದೆಬರುವ ನರಕಯಾತನೆ, ಅಲ್ಪ ಜನ್ಮಗಳು, ಸಾಮಾನ್ಯರೂ ಕೆಲವು ಮಟ್ಟಿಗಾದರೂ ಈ ಹಾನಿ ತಪ್ಪಿಸಿಕೊಂಡು ಬ್ರಾಹ್ಮಣ್ಯದ ಪ್ರಯೋಜನ ಪಡೆಯುವ ಸುಲಭ ಸಾಧ್ಯತೆ, ಅದಕ್ಕೆ ಬೇಕಾದ ಧರ್ಮಜ್ಞಾನದ ಸಾರ ಸಂಗ್ರಹ, ಮಾಡಿ ಒಂದೇ ಸಾಮಾನ್ಯ ಪುಸ್ತಕದಲ್ಲಿ ಕೊಟ್ಟರೆ ಅವರಲ್ಲಿ ಕೆಲವರಿಗಾದರೂ ಪೂರ್ವಜನ್ಮದ ವಾಸನೆಯ ಪ್ರೇರಣೆಯಿಂದ ಬ್ರಾಹ್ಮಣ್ಯದ ಬಗ್ಗೆ ಉತ್ಸಾಹ ಉಂಟಾಗಬಹುದು ಎಂಬ ಆಸೆಯಿಂದ ಅವರಂತೆಯೇ ಲೌಕಿಕ ಬ್ರಾಹ್ಮಣನಾದ ನಾನು ಈ ಲೌಕಿಕ ಬ್ರಾಹ್ಮಣ್ಯದ ಪಠ್ಯ ಪುಸ್ತಕ ತಯಾರಿಸಿರುವೆ. ಹೆಚ್ಚು ಅಭಿರುಚಿ ಕೆರಳಿದವರಿಗೆ ಹೆಚ್ಚಿನ ವಿವರಣೆಗಳಿರುವ ನನ್ನ ಬೇರೆ ಪುಸ್ತಕಗಳೂ ಇವೆ (ಪ್ರತಿಗಳು ಮುಗಿದವನ್ನು ದಯಮಾಡಿ ಕೇಳಬೇಡಿರಿ).

48502CR

ಭೂಲೋಕದಲ್ಲಿಯೇ ಅತ್ಯಂತ ಧಾರ್ಮಿಕ ದೇಶವೆಂದು ಖ್ಯಾತವಾಗಿದ್ದ ನಮಗೆ ಈಗಿನ ನಾಸ್ತಿಕ ಸೆಕ್ಯುಲರ್ ಸರ್ಕಾರ ಹೊಸ ಸಾಂಕ್ರಾಮಿಕರೋಗದಂತೆ ಬಂದು ಸನಾತನಿ ಯುವಕರ ಧರ್ಮ ಬಹಳ ನಾಶಮಾಡುತ್ತಿದೆ. ಇತರ ಸಾಂಕ್ರಾಮಿಕ ರೋಗಗಳು ತೋರಿಕೊಂಡಾಗ ಬುದ್ಧಿವಂತರು ಅದರ ವಿನಾಶಕ ಲಕ್ಷಣಗಳನ್ನು ಅರಿತುಕೊಂಡು ಜಾಗ್ರತೆ ಮಾಡುವಂತೆ, ದೇವರ ದಯದಿಂದ ಈಗ ಬೇಗ ಬೇಗ ಹೆಚ್ಚುತ್ತಿರುವ ಬ್ರಾಹ್ಮಣ ಸಂಘಗಳಾದರೂ ಈ ಹೊಸ ರೋಗದ ಬಗ್ಗೆ ಎಚ್ಚರಗೊಳ್ಳಲಿ, ಪ್ರಚಾರ ಮಾಡಲಿ, ಬ್ರಾಹ್ಮಣ್ಯ ರಕ್ಷಿಸಲಿ ಎಂದು ಈ ರೋಗದ ಲಕ್ಷಣಗಳನ್ನೂ ಚೆನ್ನಾಗಿ ವಿವರಿಸಿರುವೆ. ಹೆಚ್ಚಿನ ಶಾಸ್ತ್ರ

ಜ್ಞಾನವಿರುವವರು ಈ ಪುಸ್ತಕವು ಲೌಕಿಕರಲ್ಲಿ ಬ್ರಾಹ್ಮಣ್ಯ ಬಾಳಿಸಲಿಕ್ಕೆ ತಕ್ಕ ಯೋಗ್ಯತೆ ಪಡೆಯಲಿಕ್ಕೆ ತಮ್ಮ ಸೂಚನೆಗಳನ್ನು ದಯಮಾಡಿ ಕಳುಹಿಸಬೇಕಾಗಿ ಬೇಡಿಕೊಳ್ಳುತ್ತೇನೆ.

—ಕೋ. ವಾ. ಕಾರಂತ

# ಓದುಗರೊಂದಿಗೆ

"ಮಾಡಿದ ಕೆಲಸಕ್ಕೆ ಮನವೇ ಸಾಕ್ಷಿ; ತೋಡಿದ ಬಾವಿಗೆ ಜಲವೇ ಸಾಕ್ಷಿ" ಎಂಬುದೊಂದು ಅರ್ಥಪೂರ್ಣ ನಾಣ್ಣುಡಿ. ಇಂಥ ಜನಪ್ರಿಯ ನಾಣ್ಣುಡಿಗನು ಸಾರವಾಗಿ ದಿವಂಗತ ಕೋಟ ವಾಸುದೇವ ಕಾರಂತರು ಕನ್ನಡದ ಧಾರ್ಮಿಕ ಸಾಹಿತ್ಯ ಕ್ಷೇತ್ರದಲ್ಲಿ ನಡೆಸಿದ ಅದ್ವಿತೀಯ ಸೇವಾಕಾರ್ಯಕ್ಕೆ ಅವರು ರಚಿಸಿ, ಪ್ರಕಟಿಸಿ, ಉಚಿತವೆನಿಸುವ ಸ್ತರದಲ್ಲಿ ವಿತರಣೆ ಮಾಡಿದ ಅಪಾರ ಸಾಹಿತ್ಯ ರಾಶಿಯು ಸಾಕ್ಷಿಯಾಗಿದೆ.

ದೇವರು, ಧರ್ಮ, ಧಾರ್ಮಿಕಮನೋಭಾವ ಮುಂತಾದುವುಗಳ ವಿಚಾರ ದಲ್ಲಿ ಅತ್ಯಂತ ನಿರಾಸಕ್ತಿ ಹೊಂದಿದ ಇಂದಿನ ಸಮಾಜದಲ್ಲಿ ಈ ಮಹನೀಯರು ಸಾಗಿಸಿದ ಧರ್ಮಬದ್ಧ ಜೀವನ, ಹೊಂದಿದ್ದ ದೈವಭಕ್ತಿ, ತೋರಿಸಿದ ಧಾರ್ಮಿಕ ಶ್ರದ್ಧೆ, ಅನುಸರಿಸಿದ ರೀತಿ-ನೀತಿಗಳು, ಉಪದೇಶಿಸಿದ ಸನ್ಮಾರ್ಗ ದರ್ಶನ—ಇವುಗಳು ಅವಿಸ್ಮರಣೀಯ. ತಮ್ಮ ಸಾರ್ಥಕ ತುಂಬುಜೀವನದಲ್ಲಿ ಇವರು ಪಡೆದ ಸಿದ್ಧಿಗೆ ಸಾಕ್ಷಿಯೆಂದರೆ; ಇವರ ಜೀವಿತಾಂತ್ಯದಲ್ಲಿ ಇವರು ರೂಪಿಸಿ ಹೋದ "ಕೋಟ ವಾಸುದೇವ ಕಾರಂತ ಸಾಹಿತ್ಯಮಾಲೆ". ಈ ಮಹನೀಯರ ಮುಂದಾಲೋಚನೆಯ ಪರಿಣಾಮವಾಗಿ ಕಾರ್ಯೋನ್ಮುಖವಾದ ಕೋ. ವಾ. ಕಾರಂತ ಸಾಹಿತ್ಯಮಾಲೆಯು ಇದುವರೆವಿಗೂ ಅವರ ೫ ಸಾಹಿತ್ಯ ಕೃತಿಗಳನ್ನು ಪುನರ್ಮುದ್ರಣ ಮಾಡಿಸಿ, ಅವರ ಧಾರ್ಮಿಕ ಸಾಹಿತ್ಯ ಸೇವಾ ಕಾರ್ಯವು ಅವರ ಇಚ್ಛೆಯಂತೆಯೇ ನಿರಪೇಕ್ಷಮನೋಭಾವದಿಂದ, ಸಮಾಜದಲ್ಲಿನ ಆಸ್ತಿಕ ಮನೋಭಾವದ ಪುನರುತ್ಥಾನ ಮಾಡಲು ಸಾಕಷ್ಟು ಸೇವೆಸಲ್ಲಿಸಿದೆ. ಇದೀಗ

'ನಮ್ಮ ಬ್ರಾಹ್ಮಣ್ಯ' ಎಂಬ ಈ ಮಹತ್ವದ ಕೃತಿಯು ಒಂದು ದಶಕದ ಅವಧಿಯಲ್ಲಿ ಪುನರ್ಮುದ್ರಣವಾಗಿದೆ. **'ದಾನ ಮಾಡಬೇಕು'** ಎಂಬ ಇನ್ನೊಂದು ಅತಿ ಮಹತ್ವದ ಕೃತಿಯು ಪುನರ್ಮುದ್ರಣವಾಗಲಿದೆ.

ದಿ॥ ಕೋ. ವಾ. ಕಾರಂತರು ತಮ್ಮ ಜೀವಿತಾವಧಿಯಲ್ಲಿ ಪಡೆದ ಸಿದ್ಧಿಯನ್ನು ಸ್ಪಷ್ಟಪಡಿಸಲು ಇದಕ್ಕಿಂತ ಮಹತ್ವದ ಸಾಕ್ಷಿ ಇನ್ನೇನು ಬೇಕು ? ಈ ಧಾರ್ಮಿಕ ಸಾಹಿತ್ಯಸೇವಾ ಕಾರ್ಯವು ಇಷ್ಟು ಸುಸೂತ್ರವಾಗಿ ಮುನ್ನಡೆಯಲು ಸಹಕರಿಸುತ್ತಿರುವ ದಿ॥ ಕೋ. ವಾ. ಕಾರಂತರ ಉತ್ತರಾಧಿಕಾರಿಗಳೆಲ್ಲರಿಗೂ ನನ್ನ ನಮನಗಳು.

ಇಂಥ ಉಪಯುಕ್ತ ಮಾರ್ಗದರ್ಶನ ಗ್ರಂಥಗಳ ಪ್ರಕಟಣೆಯ ಕಾರ್ಯವು ಮನಸೋಇಚ್ಛೆ ಬಾಯಿಗೆ ಬಂದಂತೆ ಮಾತನಾಡಿದಷ್ಟು ಸುಲಭದ ಕಾರ್ಯವಲ್ಲ. ಈ ವಿಚಾರದಲ್ಲಿ ಸಾಕಷ್ಟು ಶ್ರದ್ಧೆ ಹೊಂದಿರುವ ಅಭಿಮಾನಿಗಳಾದರೂ ಸೂಕ್ತ ಗಮನ ಹರಿಸಿ, ಈ ಧರ್ಮ ಪ್ರಚಾರದ ಕಾರ್ಯದಲ್ಲಿ ನೆರವು ನೀಡುವ ಕೃಪೆ ಮಾಡುವರೆಂದು ನಿರೀಕ್ಷಿಸಿದ್ದೇನೆ. ಮುದ್ರಣ ಕಾರ್ಯದಲ್ಲಿ ಸಾಕಷ್ಟು ವಿಳಂಬವಾದರೂ ಉತ್ತಮವಾಗಿ ಕಾರ್ಯ ನಿರ್ವಹಿಸುವ ಮೂಲಕ ನೆರವಾಗುತ್ತಿರುವ ಶ್ರೀ ಶಕ್ತಿ ಗಣೇಶ್ ಪ್ರಿಂಟರ್ಸ್‌ನವರಿಗೆ ಕೃತಜ್ಞತೆಗಳು. ಈ ಕೃತಿಯ ವಾಚನದಿಂದ ತಮ್ಮ ಜೀವಿತದ ಗುರಿಯನ್ನು ಅರ್ಥಪೂರ್ಣವಾಗಿ ಬದಲಿಸಿಕೊಳ್ಳುವ ಸಾಧಕರೆಲ್ಲರಿಗೂ ಸರ್ವಶಕ್ತನು ಸೂಕ್ತನೆರವು ನೀಡಲೆಂದು ಪ್ರಾರ್ಥನೆ.

ಇಂಥ ಧಾರ್ಮಿಕ ವಿಷಯದ ಕೃತಿಗಳನ್ನು ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕೊಂಡುಕೊಂಡು ಬಂಧುಮಿತ್ರರ ಶುಭ ಸಮಾರಂಭಗಳಲ್ಲಿ ಕೊಡುಗೆಯಾಗಿ ನೀಡಿ ಧರ್ಮಪ್ರಚಾರಕ್ಕೆ ನೆರವಾಗಬೇಕಾಗಿ ವಿನಂತಿ.

**ಸುಧಾರ್ಥಿ, ಹಾಸನ**
ಗೌರವ ಕಾರ್ಯದರ್ಶಿ
ಕೋ. ವಾ. ಕಾರಂತ ಸಾಹಿತ್ಯಮಾಲೆ

೧೫, 'ಬೃಂದಾವನ', ರಂಗರಾವ್ ರಸ್ತೆ
ಶಂಕರಪುರ, ಬೆಂಗಳೂರು-೫

# ಕೋ. ನಾ. ಕಾರಂತರ ಕೆಲವು ಪ್ರಮುಖ ಕೃತಿಗಳು

| | | |
|---|---|---|
| ೧. | ದೇವರ ಸ್ತೋತ್ರಗಳು | ರೂ. ೨-೦೦ |
| ೨. | ಅದ್ವಿತೀಯ ಆಚಾರ್ಯ ಶ್ರೀ ಶಂಕರಾಚಾರ್ಯರು | ರೂ. ೨-೭೦ |
| ೩. | ದೇವಸ್ಥಾನಗಳ ಸದುಪಯೋಗ | ರೂ. ೭-೫೦ |
| ೪. | ಮನೆಯಲ್ಲಿ ದೇವರು | ರೂ. ೮-೦೦ |
| ೫. | ಪುನರ್ಜನ್ಮ | ರೂ. ೨೦-೦೦ |
| ೬. | ದೇವರನ್ನು ನಂಬುವ | ರೂ. ೩೨-೦೦ |
| ೭. | ಗಾಯತ್ರೀ ಜಪ | ರೂ. ೨೦-೮೦ |
| ೮. | ನಮ್ಮ ಬ್ರಾಹ್ಮಣ್ಯ | ರೂ. ೧೮-೦೦ |
| ೯. | Conquest of Body through Jaathi Dharmas | ೩-೦೦ |
| ೧೦. | Science is Dharma's enemy | ರೂ. ೧-೦೦ |
| ೧೧. | ಬ್ರಾಹ್ಮಣರು ಏನು ಓದಬೇಕು ? | |
| ೧೨. | ಬ್ರಾಹ್ಮಣ್ಯದ ರಕ್ಷಣೆ | |
| ೧೩. | ಮಗಳಿಗೆ ಧರ್ಮಬೋಧೆ | |
| ೧೪. | ದಾನ ಮಾಡಬೇಕು | |
| ೧೫. | ನಮ್ಮ ಪುರೋಹಿತರು | |
| ೧೬. | ಜಾತಿಧರ್ಮದ ಮಹತ್ವ | |

ಕ್ರಮಸಂಖ್ಯೆ ೧೧ ರಿಂದ ೧೬ ರವರೆಗಿನ ಪ್ರತಿಗಳು ದೊರೆಯುವುದಿಲ್ಲ. ಪುನರ್ಮುದ್ರಣವಾಗಬೇಕು.

# ಪರಿವಿಡಿ

ವಿಷಯ ಪುಟ

| | | |
|---|---|---|
| ೧. | ದೇವರನ್ನೂ ಧರ್ಮವನ್ನೂ ಏಕೆ ನಂಬಬೇಕು? | ೧೧ |
| ೨. | ದೇವರು, ಆತ್ಮ ಮತ್ತು ನಮ್ಮ ದೇಹ | ೧೭ |
| ೩. | ಲೋಕದ ಧರ್ಮಗಳಲ್ಲಿ ಬ್ರಾಹ್ಮಣ್ಯದ ಹಿರಿಮೆಯ ಸ್ಥಾನ | ೨೩ |
| ೪. | ನಮ್ಮ ಧರ್ಮದ ದಿವ್ಯಜ್ಞಾನಕ್ಕೆ ವಿಜ್ಞಾನದ ರಂಜುವಾತಂಗಳು | ೩೭ |
| ೫. | ಯಾರು ಬ್ರಾಹ್ಮಣ ? | ೪೨ |
| ೬. | ಗಾಯತ್ರಿಯ ಹಿರಿಮೆ | ೪೭ |
| ೭. | ಸದಾಚಾರಗಳು | ೫೪ |
| ೮. | ಆಹಾರ ದೋಷ, ಸಂಪರ್ಕ ದೋಷ | ೭೩ |
| ೯. | ಬ್ರಾಹ್ಮಣರಿಗೆ ಕೆಲವು ಧರ್ಮಗಳು | ೮೬ |
| ೧೦. | ಬ್ರಾಹ್ಮಣ ಜೀವನಕ್ಕೆ ಬಾಲಕನ ಉತ್ತಮ ತರಬೇತಿ ಅತ್ಯಗತ್ಯ | ೯೮ |
| ೧೧. | ಪಿತೃಭಕ್ತಿ ಮತ್ತು ಶ್ರಾದ್ಧಗಳ ಅವಶ್ಯಕತೆ | ೧೦೬ |
| ೧೨. | ಮನೆಯಲ್ಲಿ ದೇವರ ಪೂಜೆ | ೧೧೩ |
| ೧೩. | ನಮ್ಮ ದೇವಸ್ಥಾನಗಳು | ೧೧೬ |
| ೧೪. | ನಮ್ಮ ಪುರೋಹಿತರು | ೧೨೦ |
| ೧೫. | ದಾನ | ೧೨೬ |
| ೧೬. | ಬ್ರಾಹ್ಮಣ ವೃತ್ತಿಗಳು | ೧೩೨ |
| ೧೭. | ಬ್ರಾಹ್ಮಣರ ಓದು | ೧೩೭ |
| ೧೮. | ಬ್ರಾಹ್ಮಣರಿಗೆ ಧರ್ಮದ ಅತಿ ಹೆಚ್ಚಿನ ಶಿಕ್ಷೆ | ೧೩೯ |
| ೧೯. | ಬ್ರಾಹ್ಮಣರೂ ಮಂಷ್ಕರಗಳೂ | ೧೪೩ |
| ೨೦. | ಗಂಡಸರೂ ಹೆಂಗಸರೂ ಸಮಾನರಲ್ಲ | ೧೪೯ |
| ೨೧. | ವಿಜ್ಞಾನದಿಂದ ಅಧರ್ಮದ ಪ್ರೇರಣೆ | ೧೬೨ |
| ೨೨. | ಜಾತಿ ಧರ್ಮದ ನಾಶದಿಂದ ನಮ್ಮ ಸಂಪೂರ್ಣ ಧರ್ಮನಾಶ | ೧೮೦ |
| ೨೩. | ಸರ್ಕಾರದ ಹಿಂದೂ ದೇವಸ್ಥಾನಗಳ ಆಡಳಿತದ ಕೆಡುಕುಗಳು | ೧೮೬ |
| ೨೪. | ನಮ್ಮ ಸೆಕ್ಯುಲರ್ ರಾಜ್ಯಕ್ರಮದಿಂದ ನೈತಿಕತೆಯ ನಾಶ | ೨೦೮ |
| ೨೫. | ಉತ್ತಮ ಬ್ರಾಹ್ಮಣಜೀವನ ನಡೆಸುವ | ೨೧೭ |

# ಕಾರಂತರ ಕೃತಿಗಳನ್ನು ಕುರಿತು ಕೆಲವೊಂದು ಅಭಿಪ್ರಾಯಗಳು

"ವಿಷಯಂಗಳನ್ನು ವಿವರವಾಗಿ ಮನಸ್ಸಿನಲ್ಲಿ ಮನನ ಮಾಡಿಕೊಂಡು ಅದನ್ನು ಮನವರಿಕೆಯಾಗುವಂತೆ ಹೇಳುವವರಲ್ಲಿ ವಾಸುದೇವ ಕಾರಂತರಂಥವರು ಕನ್ನಡನಾಡಿನಲ್ಲಿ ಯಾರೂ ಇಲ್ಲವೇ ಇಲ್ಲ ಎಂದರೆ ಅದು ಅತಿಶಯೋಕ್ತಿಯೇನೂ ಅಲ್ಲ".

—ಶ್ರೀ ಶೃಂಗೇರಿ ಶ್ರೀ ಶ್ರೀಗಳವರು

## ಗಾಯತ್ರೀ ಜಪ

ವರ್ಣಾಶ್ರಮ ಧರ್ಮದ ಅಭಿಮಾನಿಗಳೆಲ್ಲರೂ ಇದನ್ನು ಓದಿ ಬ್ರಾಹ್ಮಣ್ಯದ ಹಿರಿಮೆಯನ್ನು ಮನಗೊಂಡು ತಮ್ಮ ಮಿತ್ರರಲ್ಲಿಯೂ ಅದರಲ್ಲಿ ಅನುರಾಗ ಉಂಟಾಗುವಂತೆ ಮಾಡಬೇಕು........ಅತ್ಯವಶ್ಯಕವಾಗಿ ಓದಲೇ ಬೇಕಾದ ಪುಸ್ತಕ".

—ಆಧ್ಯಾತ್ಮ ಪ್ರಕಾಶ

"ಶಾಸ್ತ್ರವೇತ್ತರಾದ ಬ್ರಾಹ್ಮಣ ಎಂದರೇ ಸಿಡಿದುಬೀಳುತ್ತ ಬಾಯಿಗೆ ಬಂದಂತೆ ಬೈದು ಹಿಯ್ಯಾಳಿಸುವ ಹೀನಚಾಳಿ ಹೊಂದಿರುವವರೆಲ್ಲರೂ ನಿಜವಾದ ಬ್ರಾಹ್ಮಣ್ಯದ ಮಹತ್ವವನ್ನರಿಯಬೇಕಾದರೆ ಈ ಕೃತಿಯನ್ನು ಅತ್ಯವಶ್ಯಕವಾಗಿ ಓದಲೇಬೇಕು. ಕೋ.ವಾ. ಕಾರಂತರಂಥ ಮಹಾನ್‌ವ್ಯಕ್ತಿಯು ರಚಿಸಿದ ಇಂಥ ಸಾರ್ಥಕ ಸಾಹಿತ್ಯಕೃತಿಯು ಇಂದಿಗೆ ಇಪ್ಪತ್ತಾರು ವರ್ಷಗಳಷ್ಟು ಹಿಂದೆ ಪ್ರಕಟವಾದದ್ದು ಇದುವರೆವಿಗೂ ಪುನರ್ಮುದ್ರಣದ ಯೋಗ ಕೂಡಿ ಬಂದಿರಲಿಲ್ಲ. ಇದು ನಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನವು ತಲುಪಿದಿರುವ ಅವನತಿಯ ಹಾದಿಯನ್ನು ಸೂಚಿಸುವುದಾಗಿದೆ".

—ಹಾಸನ ಮಾಧ್ಯಮ

## ದೇವರನ್ನು ನಂಬುವ

ಕೈಗೆ ಸಿಕ್ಕಿದ ಕೂಡಲೇ ಓದಲು ಪ್ರಾರಂಭಿಸಿ, ಓದಿ ಮುಗಿಸಿಯೇ ಪುಸ್ತಕವನ್ನು ಕೆಳಗಿಟ್ಟೆ........ದೇವರು ನಿಮ್ಮಿಂದ ಈ ವಯಸ್ಸಿನಲ್ಲಿ ಇಂಥ ಪುಣ್ಯ ಕೆಲಸ ಮಾಡಿಸಿಕೊಳ್ಳುತ್ತಿದ್ದಾನೆ ಎಂಬುದು ಆನಂದದ ಸಂಗತಿ".

—ಸ್ವಾಮಿ ಜಗದಾತ್ಮಾನಂದರು, ಮೈಸೂರು

"ಅಮೂಲ್ಯವಾದ ಗ್ರಂಥವನ್ನು ಬರೆದು ನಮಗೆ ಮಹದುಪಕಾರ ಮಾಡಿದ್ದಾರೆ.........ನಾಸ್ತಿಕರನ್ನು ಆಸ್ತಿಕರನ್ನಾಗಿ ಮಾಡುವ ಗ್ರಂಥವಿದು".

—ಶ್ರೀ ಶಂಕರ ಕೃಪ

"ಈ ಗ್ರಂಥವು ತುಂಬಾ ಸ್ವಾರಸ್ಯವಾಗಿದೆ........ಧರ್ಮದ ಮಾಹಿತಿಯನ್ನು ಅನೇಕಾನೇಕ ಸಂಲಭ ಸುಂದರ ದೃಷ್ಟಾಂತಗಳ ಮೂಲಕ ಬಿಂಬಿಸಿದ್ದಾರೆ".

—ಸಂಯುಕ್ತ ಕರ್ನಾಟಕ

"ದೇವರಿದ್ದಾನೆ ಎಂಬುದಕ್ಕೆ ನೂರಾರು ನಿದರ್ಶನಗಳನ್ನು ಕೊಟ್ಟು ಕತೆಗಳ ಮೂಲಕ ಆಸ್ತಿಕ ತತ್ತ್ವವನ್ನು ಎತ್ತಿ ಹಿಡಿದಿದ್ದಾರೆ. ಇಂದಿನ ನಾಸ್ತಿಕತೆಯ ಪ್ರಚಾರದ ಕಾಲದಲ್ಲಿ ಈ ಪುಸ್ತಕ ಹೊರ ಬಂದಿರುವುದು ಶ್ಲಾಘನೀಯ........ ನಾಸ್ತಿಕರ ಕಣ್ತೆರೆಸುವ ಗ್ರಂಥ".

—ಕನ್ನಡನುಡಿ

## ದಾನ ಮಾಡಬೇಕು

"ಇಡೀ ಗ್ರಂಥದಲ್ಲೆಲ್ಲ ಅನರ್ಘ್ಯ ವಿಷಯಗಳು ತುಂಬಿ ತುಳುಕಾಡುತ್ತವೆ. ಪುಸ್ತಕದ ಯಾವ ಪುಟವನ್ನು ತೆರೆದರೂ ಮನನಕ್ಕೆ ಅಲ್ಲಿ ಒಂದು ವಿಚಾರ ಸಿಕ್ಕೇ ತೀರುವುದು".

—ಆಧ್ಯಾತ್ಮ ಪ್ರಕಾಶ

"ಹಿಂದೂ ಧರ್ಮದ ನೈತಿಕ ಜೀವನದ ಮೂಲ ಬೆಲೆಗಳು ಎಂಥವರಿಗಾದರೂ ಮನಮುಟ್ಟುವಂತೆ ಪ್ರತಿಪಾದಿಸಿದ್ದಾರೆ".

—ಡಾ॥ ಕೆ. ಕೃಷ್ಣಮೂರ್ತಿ

"ದಾನದ ಸ್ಥಾನ, ಮಹತ್ವವನ್ನು ಮಾರ್ಮಿಕವಾಗಿ ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ಮನಮುಟ್ಟುವಂತೆ ತಿಳಿಯಹೇಳಿದ್ದಾರೆ........ಶ್ರುತಿ ಸ್ಮೃತಿ ಇತಿಹಾಸಗಳಿಂದ ಸೂಕ್ತವಾದ ಸೂಕ್ತಿಗಳನ್ನೂ, ಶ್ಲೋಕಗಳನ್ನೂ, ಮಹಾತ್ಮರು, ಜ್ಞಾನಿಗಳು, ತಪಸ್ವಿಗಳು ಹೇಳಿರುವ ವಾಕ್ಯಗಳನ್ನೂ ಉದಾಹರಿಸಿ ಹೃದಯಂಗಮವಾಗಿ ಪ್ರತಿಪಾದಿಸಿದ್ದಾರೆ. ಪ್ರತಿಯೊಬ್ಬ ಆಸ್ತಿಕ ಹಿಂದುವಿಗೂ ಇದೊಂದು ಧಾರ್ಮಿಕ ಕೈಪಿಡಿ".

—ಶ್ರೀ ಶಂಕರ ಕೃಪ

## ಪುನರ್ಜನ್ಮ

"ಲೋಕ ಕಂಟಕರಾಗಿರುವ ದುಷ್ಟಪ್ರವೃತ್ತಿಯ ಕೆಲವು ಜನರಿಗೆ ಈ ಗ್ರಂಥವು ಪಾಪಭೀತಿಯನ್ನು ಹುಟ್ಟಿಸಿ ಅಂಥವರನ್ನು ತಿದ್ದುವುದರಲ್ಲಿ ಸಂಶಯ ವಿಲ್ಲ. ಎಂಥ ದುಷ್ಟರಿಗೂ ಯಾವಾಗಲಾದರೊಮ್ಮೆ ತಮ್ಮ ಪಾಪಕರ್ಮಗಳ ವಿಷಯಕ್ಕೆ ಅರಿವುಂಟಾಗುವುದು ಸಾಧ್ಯವಿದೆ. ಆಗ ಸನ್ಮಾರ್ಗಕ್ಕೆ ಬರಲು ಈ ಗ್ರಂಥದಲ್ಲಿರುವ ವಿಷಯಗಳು ಖಂಡಿತವಾಗಿ ಸಹಾಯಕವಾಗುವುವು. ಲೇಖಕರ ಈ ಕ್ರಮಕ್ಕೆ ನಮ್ಮ ಅಭಿನಂದನೆಗಳು". —ಅಧ್ಯಾತ್ಮ ಪ್ರಕಾಶ

"ಪುಸ್ತಕದತುಂಬಾ ಪುನರ್ಜನ್ಮದ ಅನುಭವೀನಿದರ್ಶನಗಳಿದ್ದು ಓದುಗರ ಗರ ಮನಸ್ಸನ್ನು ಸೆರೆಹಿಡಿಯುತ್ತವೆ. ವಿಚಾರಪರರನ್ನಾಗಿ ಮಾಡುತ್ತವೆ. ಅಂತರ್ಮುಖಿಗಳನ್ನಾಗಿ ಮಾಡುತ್ತವೆ. ಪದೇಪದೇ ಓದಬೇಕಾದ ಪುಸ್ತಕ. ಯಾವ ಭಾಗದಿಂದ ಆರಂಭಿಸಿದರೂ ಓದಿಸಿಕೊಂಡು ಹೋಗುವ ಪುಸ್ತಕ. ಎಲ್ಲ ವಿಚಾರಗಳನ್ನೂ ನೂರಾರು ನಿದರ್ಶನಗಳ ಮೂಲಕ ಪ್ರತಿಪಾದಿಸಿದ್ದಾರೆ. ಶಾಸ್ತ್ರ ಗ್ರಂಥಗಳು, ಅನೇಕ ಪತ್ರಿಕೆ ಲೇಖನಗಳು ಮುಂತಾದವುಗಳ ಆಧಾರ ವನ್ನು ವಿಪುಲವಾಗಿಕೊಟ್ಟು ಸಮರ್ಥಿಸಿದ್ದಾರೆ........ಲೇಖಕರು ವಿಜ್ಞಾನಶಾಸ್ತ್ರ ವನ್ನು ಚೆನ್ನಾಗಿ ಅಧ್ಯಯನ ಮಾಡಿದವರು. ಅದರ ಇತಿಮಿತಿಗಳನ್ನು ಚೆನ್ನಾಗಿ ಬಲ್ಲವರು. ಶಾಸ್ತ್ರವೊಂದೇ ಮಾನವನ ಶ್ರೇಯಪ್ರೇಯಗಳ ಮಾರ್ಗದರ್ಶಿ ಎಂಬುದನ್ನು ದೃಢವಾಗಿ ನಂಬಿದವರು. ತಾವು ನಂಬಿದ ಸತ್ಯವನ್ನು ನಿರ್ಭಯ ವಾಗಿ ಪ್ರಚಾರ ಮಾಡುತ್ತ ಬಂದ ಧೀಮಂತರು. ಶ್ರೀ ಪರಶುರಾಮರಂತೆ ಧರ್ಮಕ್ಕಾಗಿ ಅಹರ್ನಿಶ ಶ್ರಮಿಸಿರುವ ಈ ಅಪೂರ್ವ ವ್ಯಕ್ತಿ ಒಂದು ಸಂಸ್ಥೆ ಗಿಂತಲೂ ಹೆಚ್ಚಿನ ಕಾರ್ಯ ನಿರ್ವಹಿಸಿದ್ದಾರೆ........ನಮ್ಮ ತರುಣ ಪೀಳಿಗೆ ಒಮ್ಮೆಯಾದರೂ ಇವರ ಈ ಗ್ರಂಥ ಓದಲೇಬೇಕು. —ಶ್ರೀ ಶಂಕರ ಕೃಪ

"ಸಮಾಜ ಕಂಟಕರಾಗಿ ಬದುಕುವ ಜನಗಳಿಗೆ ಇಂಥ ಉತ್ತಮವಾದ ಮಾರ್ಗದರ್ಶನ ಗ್ರಂಥಗಳ ಪರಿಚಯವಾದರೆ ಅವರು ಖಂಡಿತವಾಗಿ ಸನ್ಮಾರ್ಗಕ್ಕೆ ಬರುತ್ತಾರೆಂಬುದನ್ನು ಈ ಗ್ರಂಥ ನನಗೆ ಪ್ರತ್ಯಕ್ಷವಾಗಿ ತೋರಿಸಿಕೊಟ್ಟಿದೆ. ಕಾರಂತರ ಶ್ರಮ, ತಪಸ್ಸು ನಿಜಕ್ಕೂ ಸಿದ್ಧಿ ಪಡೆದಿದೆಯೆಂಬುದರಲ್ಲಿ ಸಂಶಯ ವಿಲ್ಲ". —ಓದುಗರೊಬ್ಬರ ಪತ್ರ

# ೧. ದೇವರನ್ನೂ ಧರ್ಮವನ್ನೂ ಏಕೆ ನಂಬಬೇಕು ?

ನಮ್ಮ ದೇಶವು ಈ ಹಿಂದೆ ಅನೇಕ ಸಾವಿರ ವರ್ಷಗಳ ಕಾಲಗಳಲ್ಲೆಲ್ಲ ಭೂಲೋಕದಲ್ಲಿ ದೇವರಲ್ಲಿ ಭಕ್ತಿಗೆ, ಧರ್ಮದಲ್ಲಿ ಪ್ರೀತಿಗೆ, ಪಾಪದ ಭೀತಿಗೆ, ಅತ್ಯಂತ ಖ್ಯಾತವಾಗಿತ್ತು. ಅಂತೆಯೇ ಇಲ್ಲಿಯಷ್ಟು ನೈತಿಕತೆ, ತಂದೆ ತಾಯಿ ಗಳಲ್ಲಿ ಪ್ರೀತಿ, ಗೌರವ, ವಿಧೇಯತೆ ಮತ್ತೆಲ್ಲೂ ಇರಲಿಲ್ಲ. ಮನುಷ್ಯನು ನಿರಂತರವಾಗಿ ಅಂತರಾಳದಲ್ಲಿ ಬಯಸುವ ನಿಜವಾದ ತರದ ಸುಖಶಾಂತಿಗೆ ಇವೆಲ್ಲ ಅತ್ಯಗತ್ಯ. ಆದರೆ ಸ್ವರಾಜ್ಯ ಬಂದ ಅನಂತರ, ಮುಖ್ಯವಾಗಿ ಪ್ರಥಮ ಪ್ರಧಾನಿಗಳಾಗಿ ಬಂದ ದಿ॥ ನೆಹರೂ ಅವರು ಕೇವಲ ನಾಸ್ತಿಕರಾಗಿದ್ದರಾದ್ದ ರಿಂದ ಉಂಟಾದ ದೇವರನ್ನು ದೂರ ಇಡುವ ಸೆಕ್ಯುಲರ್ ಕ್ರಮದ ಸರ್ಕಾರ ದಿಂದಾಗಿ ಆಮೇಲೆ ದೇವರಲ್ಲಿ ಭಕ್ತಿ, ಧರ್ಮದಲ್ಲಿ ಆಸಕ್ತಿ, ಪಾಪದ ಭೀತಿ ಬಹು ತೀವ್ರವಾಗಿ ಕ್ಷೀಣಿಸುತ್ತಲೇ ಬಂದಿವೆ. ಇದರ ಪರಿಣಾಮವಾಗಿ ಅನೈತಿಕತೆಯು ಭಯಂಕರ ಮಟ್ಟದಲ್ಲಿ ಹೆಚ್ಚುತ್ತ ಬಂದಿದೆ. ನೈತಿಕತೆಗೆ ಅಗತ್ಯವಾದ ಧರ್ಮದ ಅಭ್ಯಾಸದ ತಳಗಟ್ಟಿಲ್ಲದೆ ಸೆಕ್ಯುಲರ್ ಸರ್ಕಾರವು ಕಟ್ಟುತ್ತಿರುವ ಈ ದೇಶದ ಅಭಿವೃದ್ಧಿಯ ಕಟ್ಟಡವು ಪ್ರಜೆಗಳ ತಲೆಯ ಮೇಲೆಯೇ ಪುನಃಪುನಃ ಕುಸಿಯು ತ್ತಲೇ ಹೋಗದಿರದು. ದೇವರು ಎಲ್ಲ ಅನ್ಯಾಯ ಕಾಣಲಾಪ, ಪೊಲೀಸರಲ್ಲ !

ದೇವರಲ್ಲಿ ಭಕ್ತಿ, ಧರ್ಮದಲ್ಲಿ ಆಸಕ್ತಿ, ಪಾಪದ ಭೀತಿ, ನಮ್ಮಲ್ಲಿ ನಮ್ಮ ಮಕ್ಕಳಲ್ಲಿ ಅತ್ಯಗತ್ಯ ಏಕೆ ನೋಡುವ. ಸೆಕ್ಯುಲರ್ ಸರ್ಕಾರದ ವಾತಾವರಣ ದಲ್ಲಿ ಬೆಳೆದ ಈ ಕಾಲದ ನಮ್ಮವರು, ಮುಖ್ಯವಾಗಿ ಯುವಕರು ಭಾವಿಸುವು ದೇನನ್ನೆಂದರೆ ತಮ್ಮ ಬಾಳಿಗೆ ಬೇಕಾದುದ್ದನ್ನೆಲ್ಲ ತಾವೇ ಸ್ವಪ್ರಯತ್ನದಿಂದ ದೊರಕಿಸಿಕೊಳ್ಳುತ್ತಿದ್ದೇವೆ, ದೇವರನ್ನು ಮರೆತರೆ ಅಡ್ಡಿಯಿಲ್ಲ ಎಂದು. ಆದರೆ ನಾವು ಸ್ವಶಕ್ತಿಯಿಂದ ಬಾಳುತ್ತೇವೆ ಎಂಬುದು ತೀರಾ ತಪ್ಪು. ನಾವು ಹುಟ್ಟಿ ದಂದಿನಿಂದ ಶ್ವಾಸೋಚ್ಛ್ವಾಸ ನಡೆಸುತ್ತ ನಾವು ಬಾಳಲು ಅತ್ಯಗತ್ಯವಾದ ಶುದ್ಧ ಗಾಳಿ ಎಳೆಕೊಂಡು ಕಶ್ಮಲವಾಗಿ ಅಂಗಾರಾಮ್ಲಕ ತುಂಬಿದ ಅಶುದ್ಧಗಾಳಿ ಬಿಡುತ್ತ ಬಂದಿದ್ದೇವೆ. ಬಿಟ್ಟ ಅಶುದ್ಧಗಾಳಿಯನ್ನೇ ನಾವು ಪುನಃಪುನಃ ಶ್ವಾಸಿಸಿ ದರೆ ಆ ಹೆಚ್ಚುತ್ತಿರುವ ಕಶ್ಮಲ ನಮಗೆ ವಿಷವಾಗಿ ನಾವು ಸಾಯುತ್ತೇವೆ. ಆದರೆ ಹಾಗಾಗದಂತೆ ನಾವೇ ಏನೂ ವ್ಯವಸ್ಥೆಮಾಡಿದ್ದಿಲ್ಲ. ದೇವರೇ ವನಸ್ಪತಿ ಗಳು ಈ ಗಾಳಿಯ ಅಶುದ್ಧಭಾಗ ಹೀರಿ ಅದರಲ್ಲಿನ ಅಂಗಾರ ತಮ್ಮ ಬೆಳವಣಿ ಗೆಗೆ ಇಟ್ಟುಕೊಂಡು ಶುದ್ಧಮಾಡಿ ಬಿಡುತ್ತಿರುತ್ತವೆ. ಆದ್ದರಿಂದಲೇ ನಮ್ಮ

ಬಾಳು ಸಾಧ್ಯವಾಗಿದೆ. ನಾವೇ ಉಂಡು ತಿಂದು ಸ್ವಂತ ಶಕ್ತಿಯಿಂದ ಬೆಳೆಯು ತ್ತೇವೆ, ಕೆಲಸ ಮಾಡುತ್ತೇವೆ ಎಂದು ಭಾವಿಸುತ್ತೇವೆ. ಆದರೆ ಉಂಡ ಆಹಾರ ದಿಂದ ಕೆಲಸಮಾಡಲು ಬೇಕಾದ ಶಕ್ತಿಯನ್ನು ಸ್ವಪ್ರಯತ್ನದಿಂದ ತಯಾರಿಸುವ ಜ್ಞಾನ ನಮಗಿಲ್ಲ. ಮತ್ತು ತಿಂದ ಅನ್ನದಿಂದ ನಾವೇ ಸ್ವಶಕ್ತಿಯಿಂದ ದೇಹ ಬೆಳೆಸಲಿಕ್ಕೆ ಬೇಕಾಗಿರುವ ಒಂದು ಹುಂಡು ರಕ್ತ, ಒಂದು ತುಣುಕು ಮಾಂಸ ಕೂಡ ನಾವೇ ಮಾಡಲಾರೆವು ; ಮಾಡಿದ್ದಿಲ್ಲ. ಅವನ್ನೆಲ್ಲ ದೇವರ ಆಜ್ಞೆಯಂತೆ ನಮ್ಮೊಳಗಿರುವ ಪ್ರಕೃತಿದೇವಿಯು, ದೇವರು ನಮಗೆ ಕೊಟ್ಟಷ್ಟು ಆಯುಷ್ಯ ಮುಗಿಯುವವರೆಗೆ ಮಾಡುತ್ತಿರುತ್ತಾಳೆ. ಅನ್ನಕ್ಕೆ ಬೇಕಾದ ಅಕ್ಕಿ ಬೆಳೆಸಲಿ ಕ್ಕಾಗಿ, ಭತ್ತದ ಬೀಜ ಮೊಳಕೆ ಬರಲಿಕ್ಕೆ, ಸಸಿ ಬೆಳೆಯಲಿಕ್ಕೆ, ಅದು ಭತ್ತದ ಕದಿರು ಬಿಡಲಿಕ್ಕೆ ಪ್ರೇರಿಸುವವಳೂ ಪ್ರಕೃತಿದೇವಿಯೇ. ಬೆಳೆ ಬೆಳೆಯಲಿಕ್ಕೆ ಬೇಕಾದ ಗಾಳಿ, ಬಿಸಿಲು, ಮಣ್ಣು, ನೀರುಗಳನ್ನು ದೇವರು ಮಾಡಿಟ್ಟವನ್ನು ನಾವು ಉಪಯೋಗಿಸುತ್ತೇವೆಯಷ್ಟೆ ! ಕೃತಕ ಗೊಬ್ಬರಕ್ಕೆ ಕೂಡ ಬೇಕಾದ ವಸ್ತುಗಳನ್ನೂ ದೇವರೇ ನಿರ್ಮಿಸಿದವ. ನಾವು ಯಾರೂ ನಮ್ಮದೇ ನಿರ್ಧಾರ ದಂತೆ, ನಮಗೆ ಬೇಕಾದಲ್ಲಿ, ಬೇಕಾದ ರೀತಿಯಲ್ಲಿ ಜನ್ಮ ನಿರ್ಧರಿಸಿ ಬಂದವರೂ ಅಲ್ಲ. ದೇವರೇ ಅವನ್ನು ನಿರ್ಧರಿಸಿ ನಮ್ಮನ್ನು ಉಂಟುಮಾಡಿರುವವ.

ಹೀಗೆ ನಮ್ಮನ್ನು ನಿರ್ಮಿಸಿದ, ಬಾಳಿಸುವ ದೇವರ ಬಗೆಗೆ, ಬಾಳಲು ಆಶಿಸುವ ನಾವು, ಕೃತಜ್ಞತೆ ಭಕ್ತಿ ಇದ್ದವರಾಗಬೇಡವೇ ? ನಾವು ಪೋಷಿಸಿ, ಲಾಲಿಸಿ, ಬೆಳೆಸಿದ ನಮ್ಮ ಮಕ್ಕಳಿಗೆ ನಮ್ಮ ಬಗೆಗೆ ಕೃತಜ್ಞತೆ ಇಲ್ಲವಾದರೆ ನಮಗೆ ಎಷ್ಟೆಲ್ಲ ವ್ಯಥೆಯಾಗುತ್ತದೆ ! ಕೃತಜ್ಞತೆಯಿಲ್ಲದವ ಅತ್ಯಂತ ಪಾಪಿಷ್ಠ ಎನ್ನು ತ್ತದೆ ಶಾಸ್ತ್ರ. ಎಂದಮೇಲೆ ನಾವು ದೇವರಲ್ಲಿ ಕೃತಜ್ಞತೆ ಅಭ್ಯಸಿಸಲೇಬೇಕು. ಆಗ ನಮ್ಮ ಮಕ್ಕಳೂ ಕೃತಜ್ಞತೆ ಕಲಿತಾರು. ಲೋಕದಲ್ಲಿ ನ್ಯಾಯಪರತೆ ಬೆಳೆ ದೀತು. ಮನುಷ್ಯನು ಹಲವುತರದ ಅನಿರೀಕ್ಷಿತ ಕಷ್ಟಗಳನ್ನು ಅನುಭವಿಸಬೇಕಾ ಗುತ್ತದೆ. ಕೆಲವನ್ನು ಇತರರ ಸಹಾಯದಿಂದ ಗೆಲ್ಲಬಹುದು. ಆದರೆ ಆ ಸಹಾಯಕರಿಗೇ ಅವರು ಗೆಲ್ಲಲಾರದ ಕಷ್ಟಗಳು ಬರುತ್ತಿರುವುದುಂಟು. ಆದರೆ ದೇವರೊಬ್ಬನೇ ಸರ್ವತರದ ಕಷ್ಟಗಳಲ್ಲಿಯೂ ಸಹಾಯ ಕೊಡಬಲ್ಲ ಸರ್ವ ಸಮರ್ಥ. ಅವನ ಕೃಪೆ ಪಡೆಯುವ ಅರ್ಹತೆ ಬೆಳೆಸದಿರುವುದು ಮೂರ್ಖತನ. ಮತ್ತು ನಮ್ಮ ಮಕ್ಕಳ ಹಿತಚಿಂತನೆ ಬಹಳ ಮಾಡುವ ನಾವು ಅದಕ್ಕೆ ನಮ್ಮ ಜೀವನದ ಮೇಲ್ಪಂಕ್ತಿಯಿಂದ ಅವರಿಗೂ ದೇವರನ್ನು ನಂಬುವ ಶಕ್ತಿ ಕೊಡು ವುದಕ್ಕಿಂತ ಹೆಚ್ಚಿನ ಪಿತ್ರಾರ್ಜಿತ ಖಂಡಿತ ಬೇರೇನೂ ಕೊಡಲಾರೆವು.

ದೇವರು ಈ ಲೋಕವನ್ನೂ ನಮ್ಮನ್ನೂ ನಿರ್ಮಿಸಿದ್ದಾನೆ, ಆಳುತ್ತಾನೆ. ಸರ್ಕಾರವು ದೇಶವನ್ನಾಳಲಿಕ್ಕೆ ಅಗತ್ಯವಾದ ಕಾನೂನುಗಳನ್ನು ಮಾಡಿ ಅವಲ್ಲಿ ತನ್ನ ಸಹಾಯ ಪಡೆಯಲಿಕ್ಕೆ ಕ್ರಮಗಳನ್ನೂ ಅವುಗಳ ಉಲ್ಲಂಘನೆಗಳಿಗೆ ಶಿಕ್ಷೆಗಳನ್ನೂ ತಿಳಿಸಿ, ಅವನ್ನು ಬಳಕೆಗೆ ತಂದು ರಾಜ್ಯ ಆಳುತ್ತದೆ. ಅಂತೆಯೇ ದೇವರು ಲೋಕವನ್ನು ಆಳಲಿಕ್ಕೆ ಶಾಸ್ತ್ರನಿರ್ಮಿಸಿ ಅದರಲ್ಲಿ ವಿವರಿಸಲ್ಪಟ್ಟಿರುವ ತನ್ನ ನಿಯಮಗಳನ್ನು ಸಾರಿದ್ದಾನೆ. ಅವಲ್ಲಿರುವ ವಿಧಿಗಳನ್ನು ಅಗತ್ಯವಾಗಿ ತಿಳಕೊಂಡು ಪಾಲಿಸಿ ಅವನ ಧಾರಾಳ ಸಹಾಯ ಪಡೆಯಬಹುದು ; ಅಥವಾ ನಿಷೇಧಗಳನ್ನು ತಿಳಕೊಳ್ಳದೆ (ಅಥವಾ ಬೇಕೆಂದೇ) ಉಲ್ಲಂಘಿಸಿ ಅವನ ಶಿಕ್ಷೆ ಪಡೆಯುವಂತಾದೀತು. ನಮ್ಮಲ್ಲಿ ಯಾರೂ "ನಾನು ಸರ್ಕಾರ ನಂಬುತ್ತೇನೆ; ಅದು ಅಗತ್ಯ ಬೇಕು, ಆದರೆ ಅದರ ಕಾನೂನುಗಳನ್ನು ನಂಬುವುದಿಲ್ಲ ; ಆದ್ದರಿಂದ ಅವನ್ನು ಬೇಕಾದಂತೆ ಉಲ್ಲಂಘಿಸುತ್ತೇನೆ" ಎನ್ನುವುದಿಲ್ಲ. ಏಕೆಂದರೆ ಅಂಥವನನ್ನು ಸರ್ಕಾರವು ದುಷ್ಟನೆಂದೇ ಭಾವಿಸಿ ಶಿಕ್ಷಿಸದೆ ಬಿಡದು. ಆದರೆ ಅನೇಕರು, ಮುಖ್ಯವಾಗಿ "ವಿದ್ಯಾವಂತ"ರೆಂಬ ವರ್ಗದವರು, ತಾವು ದೇವರನ್ನು ನಂಬುತ್ತೇವೆ, ಆದರೆ ಶಾಸ್ತ್ರವು ತೀರಾ ಹಳತಿನ ಕಾಲದ್ದಿದ್ದು ಈಗಿನ ಕಾಲಕ್ಕೆ ಅನ್ವೈಸದು ; ಅದನ್ನು ನಂಬುವುದಿಲ್ಲ ; ಆದ್ದರಿಂದ ಅದನ್ನು ಕಲಿಯಲಿಕ್ಕೂ ಹೋಗಲಿಲ್ಲ : ಆಚರಿಸುವುದೂ ಇಲ್ಲ ಎನ್ನುವುದೇ ರೂಢಿ (ಫ್ಯಾಷನ್) ಆಗಿಬಿಟ್ಟಿದೆ. ಹೊಸ ಯುವಕರು ಈ ದಾರಿಯಲ್ಲಿ ಮತ್ತೂ ಮುಂದೆಹೋಗಿ ಧರ್ಮವೇ ಬೇಡವಾದವರು, ಪಾಪದಭೀತಿ ಏನೇನೂ ಇಲ್ಲದವರಾಗುತ್ತಿದ್ದಾರೆ.

ಸರ್ಕಾರದ ಆಡಳಿತದ ನಿಯಮಗಳ ವಿಚಾರದಲ್ಲಿ ಈಗಿನ ಜನರಿಗೆ ಕೆಲವು ಮಟ್ಟಿಗಾದರೂ ಭಯ ಭೀತಿ ಇರುತ್ತದೆ. ಆದರೆ ದೇವರ ಆಡಳಿತದ ವಿಚಾರದಲ್ಲಿ ಹೆಚ್ಚುತ್ತಿರುವ ಅಶ್ರದ್ಧೆ ಏಕೆ ಇದೆ ಎಂಬುದು ಒಂದು ಅತಿ ಮುಖ್ಯ ವಿಚಾರ. ಆದರೆ ಚುಟುಕಾಗಿ ವಿವರಿಸಲಾಗುವುದಲ್ಲ. ಸರ್ಕಾರವು ಅದರ ಸಹಾಯ ಕೊಡಲಿಕ್ಕೋ ಶಿಕ್ಷೆ ಕೊಡಲಿಕ್ಕೋ ಇರುವ ಅದರ ಶಾಲೆ, ಆಸ್ಪತ್ರೆ, ಆಫೀಸು, ಸಿಬ್ಬಂದಿ, ಪೊಲೀಸು, ಕೋರ್ಟು, ಜೈಲು ಎಲ್ಲ ಪ್ರತ್ಯಕ್ಷ ತರದ್ದು; ತಾತ್ಸರಿಸುವಂತಿಲ್ಲ, ಆದರೆ ದೇವರೂ ಅವನ ಪರಿವಾರ ದೇವತೆಗಳೂ ಶಿಕ್ಷೆ ಅನುಭವಿಸಲು ಕೊಡುವ ಪ್ರೇತಜನ್ಮ, ನರಕವಾಸ, ನಾಯಿಜನ್ಮ ಮುಂತಾದವು ಜನರ ಕರ್ಮಗಳಿಗೆ ಪ್ರತ್ಯಕ್ಷವಾಗಿ ಹೊಂದಿಕೆಯಾಗಿಬರುವುದು ತೋರುವುದಿಲ್ಲ, ಆದರೆ ಅಷ್ಟಕ್ಕೆ ಅವು ಇಲ್ಲ, ನಿರ್ಲಕ್ಷಿಸುವ ಎನ್ನುವುದು ಅತ್ಯಂತ ಅಪಾಯದ ಮಾರ್ಗ. ಕಗ್ಗತ್ತಲೆಯಲ್ಲಿ ದಾರಿಯಲ್ಲಿ ಬಾವಿ, ಹಾವು ತೋರುವುದಿಲ್ಲ : ಅವು

ಇಲ್ಲ ಎಂದರೆ ಅದು ಅಪಾಯ. ಪೊಲೀಸರಿಂದ ತಪ್ಪಿಸಿಕೊಳ್ಳುವವರು ಬಹಳ. ಆದರೆ ಸರ್ವಜ್ಞನಾದ, ಸರ್ವವ್ಯಾಪಿಯಾದ ದೇವರಿಂದಲ್ಲ. ಇದನ್ನು ಮನ ಮುಟ್ಟುವಂತೆ ರುಜುಪಡಿಸಲು ನಾನು ದೇವರ ಕೃಪೆಯನ್ನು ಪ್ರಾರ್ಥನೆಯ ಮೂಲಕ ಪಡೆದ ಖಚಿತ ದೃಷ್ಟಾಂತಗಳಿರುವ ಈ ಕಾಲದ ವಾರ್ತಾ ಪತ್ರಿಕೆಗಳ ಮತ್ತು ಕೆಲವು ಇತರ ಖಚಿತ ದಾಖಲೆಗಳಿರುವ ಸುಮಾರು ೧೦೦ ಕತೆಗಳನ್ನು **'ದೇವರನ್ನು ನಂಬುವ'** ಎಂಬ ಪುಸ್ತಕದಲ್ಲಿ ಪ್ರಕಟಿಸಿರುವೆ. ಅಂತೆಯೇ ಮಾನವನಿಗೆ ದೇವರ ಶಿಕ್ಷೆಯಾಗಿ—ನಾಯಿ ಜನ್ಮ, ಮೊಸಳೆ ಜನ್ಮ, ಪ್ರೇತದ ಜನ್ಮ—ಉಂಟಾದ ಮನಮುಟ್ಟುವಂತೆ ವಿವರಿಸಿರುವ ೩೪೦ ಪುಟಗಳ **'ಪುನರ್ಜನ್ಮ'** ಎಂಬ ಪುಸ್ತಕದಲ್ಲಿ ವಿಸ್ತಾರವಾಗಿ ತಿಳಿಸಿರುವೆ. ಇವನ್ನು ಓದಿ ನಿಜತ್ವದ ಬಗೆಗೆ ಶ್ರದ್ಧೆ ಹೊಂದುವುದು, ಮಕ್ಕಳಿಂದ ಓದಿಸಿ ಶ್ರದ್ಧೆ ಹುಟ್ಟಿಸು ವುದು ಧಾರಾಳವಾಗಿ ನಡೆಯಲಿ.

"ಪುನರ್ಜನ್ಮ"ದಲ್ಲಿ ಜೀವಾತ್ಮನು ತನ್ನ ಹಳೇ ದೇಹಬಿಟ್ಟು ಹೊಸದೇಹ ಪಡೆಯುವುದಕ್ಕೆ ಖಚಿತ ದೃಷ್ಟಾಂತಗಳನ್ನು ಹಲವನ್ನು ಕೊಟ್ಟಿರುವೆ. ಜೀವಾತ್ಮರು ಹಲವಾರು ಜನ್ಮಗಳನ್ನು ಪಡೆದುದಕ್ಕೂ ಪತ್ರಿಕೆ ವರದಿಗಳ ದೃಷ್ಟಾಂತಗಳಿವೆ. ನಮ್ಮ ಶಾಸ್ತ್ರವಂತೂ ಜೀವಾತ್ಮನಿಗೆ ಲಕ್ಷಲಕ್ಷಾಂತರ ಜನ್ಮ ಗಳು ಖಂಡಿತ ಇವೆ ; ಕೆಲವಂತೂ ಮಾಡಿದ ತಪ್ಪಿಗಾಗಿ ಕ್ರಿಮಿಕೀಟಗಳಂಥ ತೀರಾ ಅಲ್ಪಜನ್ಮಗಳೂ ಆಗಬಹುದು ಎಂದು ಸಾರಿದೆ. ಎಂದರೆ ಲಕ್ಷಾಂತರ, ಕೋಟ್ಯಾಂತರ, ಜನ್ಮಗಳನ್ನು ಪಡೆಯುವ ನಮ್ಮ ಆತ್ಮನಿಗೆ ಈ ದೇಹಗಳೆಲ್ಲ ನಾವು ಹಳತಾದಂತೆ ಬದಲಾಯಿಸುವ ಅಂಗಿಗಳಂತೆ ಮಾತ್ರ ; ಅಥವಾ ಬಾಡಿಗೆ ಮನೆಗಳಂತೆ ಮಾತ್ರ. ಯಾವ ಮನುಷ್ಯನೂ ತನ್ನ ಮನೆಯ ವಿಪರೀತ ಶೃಂಗಾರಕ್ಕೆಂದು, ಅಂಗಿಯ ಆಡಂಬರಕ್ಕೆಂದು, ತಾನು ಉಪವಾಸ ಬೀಳುವ ಮೂರ್ಖತನ ಮಾಡುವುದಿಲ್ಲ. ಅಂತೆಯೇ ನಮಗೆತೋರದಿದ್ದರೂ ನಮ್ಮೊಳಗೆ ಖಂಡಿತ ಇರುವ ಮತ್ತು ಶಾಸ್ತ್ರ ಹೇಳುವ ಆತ್ಮನ ಹಿತ ಸಾಧಿಸುವುದನ್ನು ಕಲಿ ಯದೆ, ದೇಹದ ಭೋಗದಲ್ಲೇ ಮುಳುಗಿರುವುದು ತೀರಾ ಮೂರ್ಖತನವಾಗು ತ್ತದೆ. ಆತ್ಮಹಿತಕ್ಕೆ ದಾರಿ, ದೇವರ ಚಿಂತನೆ, ಅವನನ್ನು ಮೆಚ್ಚಿಸುವ ಕ್ರಮ ಗಳು. ಆದ್ದರಿಂದ ದೇವರ ತಾತ್ಸಾರವೆಂದರೆ ನಮಗೆ ನಾವೇ ತಂದುಕೊಳ್ಳುವ ಅತ್ಯಂತ ಘಾಸಿ ತರುವ ಅಪಾಯದ ಕ್ರಮ.

ಸ್ವರಾಜ್ಯ ಬರುವವರೆಗೂ ಈ ದೇಶದಲ್ಲಿ ಜನರಿಗೆ ದೇವರಲ್ಲಿ ಭಕ್ತಿ, ಶಾಸ್ತ್ರದಂತೆ ಬಾಳುವ ಧಾರ್ಮಿಕ ಕ್ರಮಗಳು, ಬಹುಮಟ್ಟಿಗೆ ಸರ್ವತ್ರ ರೂಢಿ

ಯಾಗಿದ್ದವು. ಆದರೆ ಆಮೇಲೆಬಂದ ಸೆಕ್ಯುಲರ್‌ಸರ್ಕಾರಕ್ಕೆ ದೇವರವಿಚಾರವೇ ಬೇಡವಾಯಿತು. ಪ್ರತಿ ಚಿಕ್ಕ ವಿಷಯವನ್ನು ಕೂಡಾ ದೇವರ ಪ್ರಾರ್ಥನೆ ಯೊಡನೆ ಆರಂಭಿಸುತ್ತ ಬಂದಿದ್ದ ಈ ದೇಶವು ಮೂರು ತೀರಾ ಆಪತ್ತನ್ನು ತರಬಹುದಾಗಿದ್ದ ಯುದ್ಧಗಳಕಾಲದಲ್ಲಿ ಕೂಡಾ ಜಯಕ್ಕಾಗಿ ದೇವರಸಹಾಯ ಬೇಡಲು ಧಿಕ್ಕರಿಸಿತ್ತು. ಹಲವು ಇತರ ರೀತಿಗಳಲ್ಲಿಯೂ ದೇವರನ್ನು ದೂರ ಇಡುವ ನಾಸ್ತಿಕತೆಯ ಅಭ್ಯಾಸಗಳು ಹೆಚ್ಚುತ್ತ ಬಂದಿವೆ. ಜನರ ಲಕ್ಷ್ಯವೆಲ್ಲ ದೇಹ (ಅದರ ಭಾಗವೇ ಆದ ಮನಸ್ಸು ಮತ್ತು ಬುದ್ಧಿಗಳ) ನೆಮ್ಮದಿಗಾಗಿ ಮಾತ್ರ ಹೊರತು ನಮ್ಮ ಅತಿ ಪವಿತ್ರ ಭಾಗವಾದ ಆತ್ಮದ ಹಿತವೇ ಜನರಿಗೆ, ಮುಖ್ಯವಾಗಿ ಅವರಲ್ಲಿ ಯುವಕರಿಗೆ, ಬೇಡವಾಗುತ್ತ ಬಂದಿದೆ. ರಾಜಕೀಯ ಮುಖಂಡರು ದೇಶದ ಸೇವೆಯ ಧ್ಯೇಯ ತ್ಯಜಿಸಿ, ದೇಹದ ಭೋಗದ ತೀರಾ ಸ್ವಾರ್ಥದೃಷ್ಟಿಯವರೂ ಪಾಪದ ಭೀತಿಯಿಲ್ಲದವರೂ ಆಗಿದ್ದಾರೆ. ಸರ್ಕಾರೀ ನೌಕರರು ಸಂಬಳಕ್ಕೆ ತಕ್ಕುದಾದ ಕೆಲಸವಲ್ಲ, ಲಂಚದಲ್ಲಿ ಮುಳುಗಿದ್ದು, ಪಾಪದ ಭೀತಿ ತ್ಯಜಿಸಿದ್ದಾರೆ. ವ್ಯಾಪಾರಿಗಳು ಸಂದರ್ಭ ಸಿಕ್ಕಿದಾಗಲೆಲ್ಲ ಜನರ ಸುಲಿಗೆ ಮಾಡುವ ಪಾಪದ ಭಯವಿಲ್ಲದ ವರ್ಗದವರಾಗಿದ್ದಾರೆ. ಮುಂದಿನ ಪ್ರಜೆಗಳಾಗಲಿರುವ ವಿದ್ಯಾರ್ಥಿಗಳಿಗೆ ದೇಶದಹಿರಿಮೆಗೆ ಅಗತ್ಯವಾದ ಸಮರ್ಥತೆ ಬೆಳೆಸುವ ಯೋಚನೆಯೇ ಇಲ್ಲ. ಹೇಗಾದರೂ ಪಾಸಾಗಿ, ಹೇಗಾದರೂ ಸರ್ಕಾರದ ಹುದ್ದೆ ಗಿಟ್ಟಿಸಿಕೊಂಡು, ಬಡವರಿಂದ ತುಂಬಿರುವ ಈ ದೇಶದ ಹಣದ ಸಂಬಳ ನುಂಗುತ್ತ ಬಾಳುವ ಎಂಬ ಪಾಪದಕಲ್ಪನೆಯ ಗುರಿ ಮಾತ್ರ!

ಮನುಷ್ಯ ಬುದ್ಧಿ ಪಡೆದು ಬಂದವ. ಜೀವನದಲ್ಲಿ ಒಂದು ಸ್ವಲ್ಪಕಾಲದ ವಿಪರೀತ ಭೋಗಕ್ಕಾಗಿ ಅನಂತರದ ಬಹಳ ಕಾಲದ ಬಾಳನ್ನು ಬಹಳ ಬಡಸ್ತಿಕೆ ಯಲ್ಲಿ, ರೋಗದಲ್ಲಿ, ಕಳೆಯುವಂತೆ ಮಾಡಿಕೊಂಡವನನ್ನು ನಾಸ್ತಿಕರು ಕೂಡಾ ಕೇವಲ ಮೂರ್ಖನೆಂದೇ ಕರೆಯುತ್ತಾರೆ. ಅಂತೆಯೇ ಆತ್ಮಚಿಂತನೆಯಿಲ್ಲದೆ ಈ ಒಂದು ಜನ್ಮದ ದೇಹದ ಬಹಳ ಸುಖಕ್ಕಾಗಿ ತುಂಬಾ ಪಾಪ ಕಟ್ಟಿಕೊಂಡು ಮುಂದಿನ ಬಹಳ ಜನ್ಮಗಳ ವಿಪರೀತ ಕಷ್ಟ ಅನುಭವಿಸುವಂತೆ ಮಾಡಿಕೊಳ್ಳು ವುದು ಬುದ್ಧಿಯ ತೀರಾ ದುರುಪಯೋಗವೇ ಆಗುತ್ತದೆ. ದೇವರನ್ನು, ಶಾಸ್ತ್ರವನ್ನು, ಆತ್ಮದ ಹಿರಿಮೆಯನ್ನು, ಅರ್ಥಮಾಡಿಕೊಂಡವರಿಗೆಲ್ಲ ಹೀಗೆಲ್ಲ ನಮ್ಮ ಸೆಕ್ಯುಲರ್ ಸರ್ಕಾರವು ಉಂಟುಮಾಡಿದ ಕೇವಲ ದೇಹದ ಭೋಗದ ವಾತಾವರಣವು ನಮ್ಮ ಯುವಕರನ್ನು ಅಪಾರಮಟ್ಟದಲ್ಲಿ ತೀರಾ ಅನ್ಯಾಯದ, ಪಾಪದಜೀವನಕ್ಕೆ ತಳ್ಳುವುದುಕಂಡು ಬಹಳವ್ಯಸನವಾಗದಿರದು. ನಮ್ಮ ದೇಶ

ಏಕೆ ಹೀಗೆಲ್ಲ ಆಯಿತು ? ದೇಶದ ಪ್ರಥಮ ಪ್ರಧಾನಿಯಾಗಿ ಬಂದ ನೆಹರೂ ಅವರು ದೇಶದ ಬಿಡುಗಡೆಗಾಗಿ ತ್ಯಾಗಮಾಡಿದವರಿದ್ದು ಜನರಿಗೆ ಅವರಲ್ಲಿ ಸಂಪೂರ್ಣ ಭರವಸೆಯಿತ್ತು. ಆದರೆ ಅವರು ಕೇವಲ ನಾಸ್ತಿಕರೆಂಬುದು ಜನರಿಗೆ ತಿಳಿದಿರಲಿಲ್ಲ. ಅವರು ಇಂಗ್ಲೆಂಡಲ್ಲಿ ವಿದ್ಯೆ ಕಲಿಯುತ್ತಿದ್ದಾಗ ಲೋಕದಲ್ಲಿ ವಿಜ್ಞಾನದ ಪ್ರಭಾವವು ಬಹಳ ಬೆಳೆಯುತ್ತಿದ್ದು, ಅತಿ ದೊಡ್ಡ ದೇಶಗಳಾದ ರಷ್ಯಾ, ಚೈನಾಗಳು ಇನ್ನು ತಮಗೆ ದೇವರು, ಶಾಸ್ತ್ರ ಅನಗತ್ಯ ; ಕೇವಲ ವಿಜ್ಞಾನದ ಬೆಂಬಲವೇ ಸಾಕು ಎಂದು ತೀರ್ಮಾನಿಸಿದವು. ಪಾಶ್ಚಾತ್ಯ ದೇಶಗಳು ವಿಜ್ಞಾನದ ಸಹಾಯದಿಂದ ಅದ್ಭುತ ಲೌಕಿಕ ಹಿರಿಮೆ ಬೆಳೆಸುತ್ತಿದ್ದವು. ನಮ್ಮ ಧರ್ಮದ ಶ್ರೇಷ್ಠತೆ ಅರಿಯದ ನೆಹರೂ ಅವರು ನಾಸ್ತಿಕರಾದರು. ನಮ್ಮ ದೇಶವನ್ನೂ ತಾನು ಬಹಳ ಹಿರಿಮೆಗೆ ಏರಿಸಲಿಕ್ಕೆ ಜನರ ಧರ್ಮದ ವಿಪರೀತ ಹುಚ್ಚನ್ನು ಬಿಡಿಸಲೇಬೇಕೆಂದು ತೀರ್ಮಾನಿಸಿ ಸೆಕ್ಯುಲರ್‌ರಾಜ್ಯಕ್ರಮ ಉಂಟಾಗಲಿಕ್ಕೆ ಮುಖ್ಯ ಕಾರಣರಾದರು. ನಮಗೆ ಇನ್ನು ಕಾರ್ಖಾನೆಗಳೇ ದೇವರು, ಅಣೆಕಟ್ಟುಗಳೇ ದೇವರು ಎಂದೂ ಅವರು ಸಾರುತ್ತಿದ್ದರು ! ಅವರಿಂದ ದೊಡ್ಡ ದೊಡ್ಡ ಹುದ್ದೆ ಪಡೆದಿದ್ದ, ಪಡೆಯಲಿಕ್ಕಿದ್ದ, ಇತರ ಹಿಂದೂ ಮುಖಂಡರು ಸ್ವಾರ್ಥದೃಷ್ಟಿಯಿಂದಾಗಿ ಅವರನ್ನು ಎದುರಿಸಲು ಬಯಸಲಿಲ್ಲ. ಅಂದಿನಿಂದ ನಮ್ಮ ರಾಜಕೀಯ ಮುಖಂಡರು ಸ್ವಾರ್ಥದಲ್ಲಿ ಮುಳುಗುತ್ತ ಬಂದಿದ್ದಾರೆ, ಪಾಪದ ಭೀತಿ, ದೇವರ ಭಯ ಮನುಷ್ಯನಲ್ಲಿದ್ದರೆ ಅದು ಅವನನ್ನು ನಿರಂತರವಾಗಿ ಅನ್ಯಾಯದಿಂದ ತಡೆಯುತ್ತಿರುತ್ತದೆ. ಆದರೆ ನೆಹರೂ ಅವರು ಎತ್ತಿಹಿಡಿದ ಜಡ ಕಾರ್ಖಾನೆಗಳೆಂಬ ಹೊಸ ದೇವರಿಗೆ ಕೇವಲ ಹಣದ ರಾಶಿ ಬೆಳೆಸುವುದು ಮಾತ್ರ ಗೊತ್ತಿದೆ. ಈಗ ಕೇವಲ ಹಣವೇ ಎಲ್ಲರಿಗೂ ದೇವರಾಗುತ್ತಿದೆ. ಅದರ ಆಸೆಗೆ ಮಿತಿಯೋ ಇಲ್ಲ, ತಡೆಯೋ ಇಲ್ಲ. ನೆಹರೂ ಅವರ ಮಗಳು, ಈಗಿನ ಪ್ರಧಾನಿ, ದೇವಸ್ಥಾನಗಳಿಗೆ ಹೋಗುತ್ತಾರೆ ಎಂಬುದರ ಅರ್ಥ ನೆಹರೂ ಅವರು ಆರಂಭಿಸಿದ ಕೇವಲ ನಾಸ್ತಿಕ ದಾರಿ ಸರಿಯಲ್ಲ ಎಂದು ಒಪ್ಪಿಕೊಂಡಂತೆ, ಅಂತೂ ಪ್ರತಿಯೊಬ್ಬನಿಗೂ ವೈಯಕ್ತಿಕವಾಗಿ ತನ್ನ ಮತ್ತು ತನ್ನ ಮಕ್ಕಳ ಉದ್ಧಾರದ ಹೊಣೆ ಖಂಡಿತ ಇದೆ. ಧಾರ್ಮಿಕ ಜೀವನದ ಅವಶ್ಯಕತೆ ಅರ್ಥಮಾಡಿಕೊಂಡು, ಧರ್ಮ ಕಲಿತು, ಸಾಧ್ಯವಾದಷ್ಟು ಮಟ್ಟಿಗೆ ಅಭ್ಯಸಿಸುವುದು ಮಾತ್ರವೇ ದೇವರು ಕೊಟ್ಟ ಬುದ್ಧಿಯ ಸದುಪಯೋಗವಾದೀತು. ಈ ಭಾಗದಲ್ಲಿ ಬ್ರಾಹ್ಮಣರ ಹೊಣೆ ಅತಿ ಹೆಚ್ಚಿನದಾಗಿದೆ.

# ೨. ದೇವರು, ಆತ್ಮ, ನಮ್ಮ ದೇಹ

ಬ್ರಾಹ್ಮಣರಾಗಿ ಜನಿಸಿದವರಿಗೆ ನಮ್ಮ ಶಾಸ್ತ್ರವು ವಿಧಿಸಿರುವ ಅತಿಹೆಚ್ಚಿನ ಧರ್ಮ ಅರ್ಥಮಾಡಿಕೊಳ್ಳಬೇಕಾದರೆ ದೇವರು ಆತ್ಮ ಮತ್ತು ನಮ್ಮ ದೇಹ ಗಳ ಸಂಬಂಧ ತಿಳಿದಿರಲೇಬೇಕು. ದೇವರಿಂದಲೇ ಬಂದ ನಮ್ಮ ಪವಿತ್ರವಾದ ವೇದ ಇರುವುದೇ ನಾವು ಸ್ವಪ್ರಯತ್ನದಿಂದ ಮಾತ್ರವೇ ತಿಳಿಕೊಳ್ಳಲಸಾಧ್ಯ ವಾದ ಈ ಅಗತ್ಯ ವಿಷಯವನ್ನು ನಮಗೆ ತಿಳಿಸುವುದಕ್ಕಾಗಿ. ವಿಷಯವು ಬಹಳ ಗಹನವಾದುದೂ ಕಷ್ಟತರದ್ದೂ ಇದ್ದರೂ ಇಲ್ಲಿ ಸಾಮಾನ್ಯರ ಪ್ರಯೋಜನಕ್ಕಾಗಿ ಸಾಮಾನ್ಯರ ಮಟ್ಟಕ್ಕಿಳಿಸಿ ಸುಲಭ ಮಾಡಿ ಹೇಳುತ್ತೇನೆ.

ಸೃಷ್ಟಿಯ ಆದಿಯಲ್ಲಿ ಎಲ್ಲಕ್ಕೂ ಮೂಲವಾದ ಪರಬ್ರಹ್ಮವು ಕೇವಲ ಒಂದೇ ಒಂದಾಗಿ ಇತ್ತು (ಋಗ್ವೇದ ೧೦, ೧೨೯ ಛಾಂದೋಗ್ಯ ೬,೨,೧). ಅದು ಸೃಷ್ಟಿಯನ್ನು ಎಂದರೆ ಅಪರಿಮಿತ ಸಂಖ್ಯೆಯ ಲೋಕಗಳನ್ನು ಮಾಡಿ ಅವಲ್ಲಿ ಅಪರಿಮಿತ ಜಡ ಮತ್ತು ಜೀವಿಗಳನ್ನು ತುಂಬಲಿಕ್ಕಾಗಿ ನಿರ್ಧರಿಸಿತು. ಆಗ ಅದರಿಂದ ಪ್ರಕೃತಿದೇವಿ ಮತ್ತು ಪರಮಾತ್ಮರು ಉತ್ಪನ್ನರಾದರು. ಪರಮಾತ್ಮ ನಿಂದ, ಬೆಂಕಿಯಿಂದ ಕಿಡಿಗಳು ಹೊರಟಂತೆ ಆತ್ಮರು ಹೊರಟರು. ಪ್ರಕೃತಿ ದೇವಿಯು ಅವಕ್ಕೆಲ್ಲ ಜಡವಸ್ತುಗಳಿಂದುಂಟಾದ ದೇಹಗಳೆಂಬ ಹೊದಿಕೆಗಳನ್ನು ಹಾಕಿ ಬೇರೆ ಬೇರೆ ಜೀವಾತ್ಮರನ್ನಾಗಿ ಮಾಡಿದಳು. ಚಿನ್ನದ ಗಟ್ಟಿಯಿಂದ ತೆಗೆದ ತುಂಡುಗಳಿಗೆಲ್ಲ ಕೇವಲ ಚಿನ್ನದ ಲಕ್ಷಣಗಳೇ ಇರುವಂತೆ, ಪರಮಾತ್ಮ ನಿಂದ ಬಂದ ಆತ್ಮರೆಲ್ಲ ದೇವರಂತೆ ಸತ್ (ಶಾಶ್ವತತೆ ಅಥವಾ ನಾಶವಿಲ್ಲದಿರು ವುದು) ಚಿತ್ (ಬಾಳುವ, ಅರಿಯುವ, ಜ್ಞಾನಶಕ್ತಿ ಇರುವುದು) ಆನಂದ (ತಮ್ಮಲ್ಲೇ ಪರಮಾನಂದ ತುಂಬಿದ್ದು ಹೊರಗಿನ ಸುಖದ ಅವಶ್ಯಕತೆಯೇ ಇಲ್ಲದಿರುವುದು) ಎಂಬ ಗುಣಗಳು ಇರುವವೇ ಆಗಿವೆ. ಆದರೆ ಈ ಸೃಷ್ಟಿಯ ಆಟ ಆರಂಭಿಸುವುದಕ್ಕೂ ಮುಂಚೆ ಪರಬ್ರಹ್ಮವು ಹೀಗೆ ಬಹುವಾಗಲು ನಿರ್ಧರಿಸಿದಾಗ, ಸೃಷ್ಟಿಯ ಆತ್ಮರೆಲ್ಲರೂ ಆ ಪರಬ್ರಹ್ಮನ ಅಂಶವೇ ಆಗಿದ್ದ ರಾದ್ದರಿಂದ, ಆಗ ಆದ ನಿರ್ಧಾರವು ಅವರದ್ದೂ ಆಗಿದ್ದು ಅವರೆಲ್ಲರಿಗೂ ಅನ್ವಯಿಸುತ್ತದೆ. ಆದ್ದರಿಂದ ಅವೆಲ್ಲವೂ ಸೃಷ್ಟಿಯಲ್ಲಿನ ದೇಹವೆಂಬ ಬಂಧನ ವನ್ನು ಒಪ್ಪಿಕೊಂಡು ತಮ್ಮ ಅದ್ಭುತ ಆತ್ಮಶಕ್ತಿಯನ್ನು ದೇಹದ ಬಂಧನ ದೊಳಗೆ, ಆ ಬಂಧನದ ಮಟ್ಟದಲ್ಲಿ, ಕುಂಠಿಸಿಕೊಂಡಿರುತ್ತವೆ.

ಸೃಷ್ಟಿಯ ಕಾಲದ ಪೂರ್ವ ಭಾಗದಲ್ಲಿ, ಮುಖ್ಯವಾಗಿ ೮೪ ಲಕ್ಷ ಪ್ರಾಣಿ ಜನ್ಮಗಳಲ್ಲಿ, ಪ್ರಕೃತಿದೇವಿಯು ಜೀವಾತ್ಮರಿಗೆ ದೇಹದ ಮೂಲಕ ಬಾಹ್ಯ ಮೋಹಕ ವಸ್ತುಗಳ ಸಂಪರ್ಕದಿಂದ ಬರುವ ಕಣ್ಣಿಗೆ ಸೌಂದರ್ಯ ದೃಶ್ಯದ ಸುಖ, ನಾಲಿಗೆಗೆ ರುಚಿಯಾದ ತಿಂಡಿಗಳ ಸುಖ, ಜನನೇಂದ್ರಿಯಕ್ಕೆ ಕಾಮದ ಭೋಗ ಮುಂತಾದವನ್ನು ಧಾರಾಳವಾಗಿ ಉಣ್ಣಿಸುತ್ತ, ಅವುಗಳ ಅಭ್ಯಾಸ ಬಲವಾಗಿ ಹಿಡಿಸಿ, ತನ್ಮೂಲಕ ಸ್ವಂತ ಆನಂದದ ಜ್ಞಾನ ಸಂಪೂರ್ಣ ಮರೆಸಿ, ತಾವು ಕೇವಲ ದೇಹವೆಂಬ ಅಜ್ಞಾನ ತುಂಬಿಸುತ್ತಾಳೆ. ಈ ಬಂಧನವು ಸಂಪೂರ್ಣ ಬಿಗಿಯಾದ ಮೇಲೆ ಜೀವಾತ್ಮರಿಗೆ ಮಾನವ ಜನ್ಮಗಳನ್ನು ಸ್ವಂತ ಬುದ್ಧಿಯನ್ನೂ ಕೊಟ್ಟು ತಾನು ಹಾಕಿದ ದೇಹದ ಬಂಧನದಿಂದ ಹೇಗೆ ಬಿಡಿಸಿ ಕೊಳ್ಳುತ್ತೀರಿ ನೋಡುವ, ಎನ್ನು ಸೃಷ್ಟಿಯ ಆಟದ ಮುಖ್ಯ ರಂಗಕ್ಕೆ ನೂಕು ತ್ತಾಳೆ. ಆಗ ಪರಮಾತ್ಮನು ತನ್ನ ಅಂಶವೇ ಆದ, ಆದರೆ ದೇಹದ ಬಂಧನ ಹೊಂದಿದ ಆತ್ಮರ ಬಿಡುಗಡೆಗೆ ದಾರಿ ತೋರಿಸುವ ಶಾಸ್ತ್ರಜ್ಞಾನವನ್ನು ಅವ ರಿಗೆ ಒದಗಿಸುತ್ತಾನೆ. ಏಕೆಂದರೆ ಆ ಬಂಧನ ಹಾಕಿದ ಪ್ರಕೃತಿ ದೇವಿಯು ಪರಬ್ರಹ್ಮನಿಗಿಂತ ಸ್ವಲ್ಪ ಮಾತ್ರ ಕೆಳಗಿನ ಮಟ್ಟದವಳಿದ್ದು ಅವಳು ಹೆಣೆದ ಅತ್ಯಂತ ಸಮರ್ಥವಾದ ದೇಹದ ಬಂಧನಗಳನ್ನು, ಅದಕ್ಕೆ ಬಲಿ ಬಿದ್ದು ಅಲ್ಪ ವಾಗಿ ಮಾಡಲ್ಪಟ್ಟ ಮಾನವನು ಸ್ವಂತ ಜ್ಞಾನದಿಂದ, ಸ್ವಂತ ಶಕ್ತಿಯಿಂದ, ಎಂದೆಂದೂ ಬಿಡಿಸಿಕೊಳ್ಳಲಾರನು. ಆದ್ದರಿಂದಲೇ ಕೇವಲ ಲೌಕಿಕ ಕ್ಷೇತ್ರ ಹಿಡಿದ ಎಷ್ಟೇ ಮೇಧಾವಿಯೆಂದು ಖ್ಯಾತನಾದವನಿಗೂ ಒಳಗೊಳಗೆ ಒಂದಲ್ಲ ಒಂದು ಆ ತರದ ಇಂದ್ರಿಯ ಚಪಲತೆಯ ಅತಿ ಬಿಗುವಾದ ಬಂಧನ ಇದ್ದೇ ಇರುತ್ತದೆ ; ಅವ ಗೆಲ್ಲಲಾರದ್ದಾಗಿ ಉಳಿಯುತ್ತದೆ ; ಅದು ಮುಂದೆ ಅವನಿಗೆ ಸಾಲು ಸಾಲು ಜನ್ಮಗಳನ್ನು, ಪ್ರಾಣಿ ಜನ್ಮಗಳನ್ನೂ ಕೂಡ ತರುತ್ತಿರುತ್ತದೆ. ಬಿಡುಗಡೆ ಶಾಸ್ತ್ರದ ಸಹಾಯದಿಂದ ಮಾತ್ರ ಸಾಧ್ಯ ಎಂಬುದನ್ನು ಬ್ರಾಹ್ಮಣರು ಎಂದೆಂದೂ ಮರೆಯಬಾರದು.

ಮನುಷ್ಯನಲ್ಲಿ ಸ್ಥೂಲ ದೇಹ, ಅದರೊಳಗಿರುವ ಮನಸ್ಸು ಬುದ್ಧಿ, ಆತ್ಮ ಎಂಬ ಭಾಗಗಳಿವೆ. ದೇಹವು ಸ್ಥೂಲವಿದ್ದು ಪರಿಚಯಕ್ಕೆ ಅತಿ ಸುಲಭ ವಾದ್ದರಿಂದ ನಾವೆಂದರೇ ದೇಹವೆಂಬ ಭಾವನೆ ಸರ್ವತ್ರವಿದೆ. ವಿದ್ಯೆ ಕಲಿತ ವರಿಗೆ, ಮನೋಬುದ್ಧಿಗಳು ಸೂಕ್ಷ್ಮ ತರದವಿದ್ದು, ದೃಷ್ಟಿಗೆ ಅವ್ಯಕ್ತ ವಾದರೂ ಅವೂ ತಮ್ಮ ಭಾಗ ಎಂಬ ಅರಿವು ಬರುತ್ತದೆ. ಆದರೆ ಅತ್ಯಂತ ಸೂಕ್ಷ್ಮವಾದ ಆತ್ಮನ ಅರಿವು ಇರುವವರು, ಆ ಅರಿವಿಗಾಗಿ ಶಾಸ್ತ್ರೋಕ್ತ

ಕ್ರಮದ ಸಾಧನೆಗಳನ್ನು ಅತ್ಯಂತ ಧಾರಾಳವಾಗಿ ಮಾಡಿದವರು ಮಾತ್ರವೇ. ಆದರೂ ನಾವು ಬಾಳುವುದೇ ಅವ್ಯಕ್ತ ಆತ್ಮದ ಶಕ್ತಿಯಿಂದ ಎಂಬು ದನ್ನು ಅತಿ ಸುಲಭವಾಗಿ ಅರ್ಥಮಾಡಿಕೊಳ್ಳುವುದು ಎಲ್ಲರಿಗೂ ಸಾಧ್ಯವಿದೆ. ಹೇಗೆಂದರೆ, ತಾವೆಂದರೆ ದೇಹ ಮನಸ್ಸು ಬುದ್ಧಿ ಮಾತ್ರ ಎಂದು ಭಾವಿಸುವ ವರೂ, ಘಾಢನಿದ್ರೆಯಲ್ಲಿ ಅವು ಮೂರೂ ತೀರಾ ಜಡವಾಗಿ ಬಿದ್ದಿರುವಾಗಲೂ ಬದುಕಿರುತ್ತಾರಲ್ಲ! ಅವನ್ನು ಏಳಾರುವ, ನಿದ್ರೆಬೇಕಾದಾಗಲೂ ನಿರಂತರವಾಗಿ ನಮ್ಮನ್ನೂ ಬಾಳಿಸುವ ಶಕ್ತಿ, ಆಗ ಒಂದು ಇರಲೇಬೇಕಲ್ಲವೇ ? ಅದೇ ಆತ್ಮ. ದೇಹವು ಕೇವಲ ಜಡವಸ್ತುಗಳಾದ ಅನ್ನ ತರಕಾರಿ ಮುಂತಾದವುಗಳಿಂದ ನಿರ್ಮಿತವಾದುದು. ಈ ಜಡವಸ್ತುಗಳಿಂದ ಚೈತನ್ಯವಿರುವ ಜೀವಿ ಉಂಟಾಗ ಲಾರನು. ದೇಹವನ್ನು ಮರಣದಲ್ಲಿ ಜೀವಾತ್ಮ ತ್ಯಜಿಸಿದೊಡನೆ ಆ ಅಲ್ಪ ದೇಹವು ಕೂಡಲೆ ಬಿದ್ದು ಕೊಳೆಯಲಿಕ್ಕಾರಂಭಿಸುತ್ತದೆ. ಏಕೆಂದರೆ ತೀರಾ ಅಲ್ಪಕಾಲ ಬಾಳುವ ಆಹಾರದ ವಸ್ತುಗಳಿಂದ ಮಾಡಿದ ದೇಹವನ್ನು ಆಧರಿಸಿ ಪಾಲಿಸಿಕೊಂಡು ಬಂದದ್ದು ಆತ್ಮನೇ. ದೇವರ ಇಷ್ಟದಂತೆ ಆಯುಷ್ಯ ಮುಗಿ ದಾಗ ಈ ಜೀವಾತ್ಮನು ಸ್ಥೂಲ ದೇಹದೊಳಗಿರುವ ಸೂಕ್ಷ್ಮ ಶರೀರದ ಮನಸ್ಸು ಬುದ್ಧಿಗಳ ಮತ್ತು ಕರ್ಮಫಲಗಳ ಸಾರಗಳನ್ನೊಳಗೊಂಡು ಹೊರಟು ಹೋಗಿ ಪುನಃ ಪುನಃ ಲಕ್ಷಾಂತರ, ಕೋಟ್ಯಾಂತರ, ಜನ್ಮ ಪಡೆಯುತ್ತಿರುತ್ತಾನೆ. ಇವೆಲ್ಲ ಜನ್ಮಗಳು ಏಕೆ ಎಂದರೆ ೮೪ ಲಕ್ಷ ಪ್ರಾಣಿ ಜನ್ಮಗಳಲ್ಲಿ ಬಲವಾಗುತ್ತ ಬಂದ ದೇಹದ ಬಂಧನಗಳನ್ನು ಕೇವಲ ಶಾಸ್ತ್ರೋಕ್ತ ಜೀವನ ನಡೆಸುತ್ತ, ತನ್ಮೂಲಕ ದೇಹದ ಕಟ್ಟುಗಳನ್ನು ಸಡಲಿಸಿ ಬಿಡಿಸಿಕೊಳ್ಳುತ್ತ ಬರಲಿಕ್ಕೂ, ಲಕ್ಷಾಂತರ ಜನ್ಮಗಳೇ ಬೇಕಾಗುತ್ತವೆ. ಭಾಗವತದಲ್ಲಿ ಹೇಳಿದೆ, ಕೇವಲವಾಗಿ ಧರ್ಮಶಾಸ್ತ್ರ ವಿಧಿಸಿದಂತೆ ಬಾಳುತ್ತ ಬಂದ ಜೀವಾತ್ಮನು ನರಕಕ್ಕಾಗಲಿ ಸ್ವರ್ಗ ಕ್ಕಾಗಲಿ ಹೋಗನು. ಪುನಃ ಪುನಃ ಹೆಚ್ಚು ಧಾರ್ಮಿಕ ಮಟ್ಟದ ಮಾನವ ಜನ್ಮಗಳನ್ನು ಹೊಂದುತ್ತ ಮೋಕ್ಷಕ್ಕೆ ಹೋಗುತ್ತಾನೆ ಎಂದು. ಕಟ್ಟಕಡೆಗೆ ಹೇಗೆ ದೇಹದ ಕಟ್ಟುಗಳನ್ನೆಲ್ಲ ಬಿಡಿಸಿಕೊಂಡ ಆತ್ಮನು ಕೇವಲ ತಾನೇ ತಾನಾಗಿ ತಾನು ಹೊರಟು ಬಂದಿದ್ದ ಪರಮಾತ್ಮನನ್ನೇ ಪುನಃ ಹೊಂದಿ, ಸಮುದ್ರದಿಂದ ಬಂದ ಮಳೆ ನೀರು ಚರಂಡಿ, ತೋಡು, ಹೊಳೆಗಳ ಮೂಲಕ ಪುನಃ ಸಮುದ್ರ ವನ್ನೇ ಸೇರಿ ಅದರಲ್ಲಿ ಐಕ್ಯವಾದಂತೆ ಪರಮಾತ್ಮನನ್ನು ಸೇರಿ ಪರಮಾನಂದದ ಮುಕ್ತಿ ಪಡೆಯುತ್ತಾನೆ ಸೃಷ್ಟಿಯ ಆಟದಲ್ಲಿ ತನ್ನ ಹೊಣೆ ಮುಗಿಸುತ್ತಾನೆ. ಆದರೆ ಅತ್ಯಧಿಕ ಭಾಗದ ಜನರು ದೇವರನ್ನು ಹೊಂದಲಿಕ್ಕಿರುವ ಈ

ಸರಳವಾದ ದಾರಿ ಹಿಡಿಯುವುದಿಲ್ಲ. ತಾವು ಎಂದೂ ಕಂಡರಿಯದ ಈ ಪರಮಾತ್ಮನ ಅರಿವು ಮುಂದೆ ಲಕ್ಷಾಂತರ ಜನ್ಮಗಳಲ್ಲಿ ಎಂದರೆ ಎಂದೋ ಏನೋ ಲಭಿಸಿತು ಎನ್ನುವ ಆನಂದದ ಸ್ಥಿತಿ ಅವರನ್ನು ಆಕರ್ಷಿಸದು. ಅದ ಕ್ಕಿಂತ ಅತಿ ಬಲವಾಗಿ ಅವರನ್ನು ಪ್ರೇರಿಸುವುದು ಸ್ಪಷ್ಟ ಹಿಂದಿನ ದೀರ್ಘ ಕಾಲದ ಪ್ರತ್ಯಕ್ಷ ಅನುಭವದ್ದಾದ ದೇಹದ ಚಪಲತೆಯ ಸುಖಗಳು ಮಾತ್ರ. ಆದ್ದರಿಂದ ಮಾನವ ಜನ್ಮಕ್ಕೆ ಬಂದಾಗ ಲಭಿಸಿದ ಪ್ರಾಣಿಜನ್ಮಗಳಲ್ಲಿ ಪಡೆಯು ತ್ತಿದ್ದ ದೇಹ ಸುಖವನ್ನು ಬುದ್ಧಿಶಕ್ತಿಯಿಂದ ನೂರಾರು ಪಾಲು ಹೆಚ್ಚಿಸುವುದ ರಲ್ಲೇ ಅವರು ಮುಳುಗಿರುತ್ತಾರೆ. ದನ ಕೇವಲ ಹುಲ್ಲು ತಿಂದು ಸುಖ ಪಡುತ್ತದಾದರೆ ಮಾನವನು ತನ್ನ ಬುದ್ಧಿಯನ್ನು ಪಾಕಶಾಸ್ತ್ರಕ್ಕೆ ಧಾರಾಳವಾಗಿ ಹಾಕಿ ನಾಲಿಗೆ ಚಪಲತೆಗೆ ಅಪರಿಮಿತ ಬಲಿ ಬೀಳುತ್ತಿದ್ದಾನೆ. ತಂಬಾಕು, ಕಾಫಿ, ಟೀ, ಮದ್ಯ, ಅಫೀಮು ಸತ್ವಗಳ ಸೆಳೆತ ಬೆಳೆಸಿದ್ದಾನೆ. ಸಾಮಾನ್ಯ ಮಟ್ಟ ದಲ್ಲಿ ಕೂಡ ಕಾಮ ಗೆಲ್ಲುವುದು ಕಷ್ಟವಾಗಿರುವಾಗ ಹಲವು ರೀತಿಗಳಲ್ಲಿ ಅದರ ನಿರಂತರ ಪ್ರಚೋದನೆ ಬೆಳೆಸಿ ಅದರಲ್ಲಿ ಮುಳುಗಿದ್ದಾನೆ. ಅಂತೆಯೇ ಇತರ ತರದ ದೇಹದ ಬಂಧನಗಳನ್ನೂ ತಾನೇ ಬುದ್ಧಿಶಕ್ತಿಯ ದುರುಪಯೋಗದಿಂದ ಬಿಗಿಮಾಡುತ್ತ ಬಂದಿದ್ದಾನೆ. ಆತ್ಮದ ವಿಚಾರ, ದೇವರ ವಿಚಾರ, ಮೋಕ್ಷದ ವಿಚಾರಗಳಿಗೆ ಆಸ್ಪದವೇ ಇಲ್ಲದಂತೆ ಮಾಡಿಕೊಂಡು, ಶಾಸ್ತ್ರದ ಧಿಕ್ಕಾರ ಮಾಡುತ್ತ ಅದಕ್ಕಾಗಿ ಅಪರಿಮಿತ ಜನ್ಮಗಳ ಶಿಕ್ಷೆ ಪಡೆಯುತ್ತಿದ್ದಾನೆ. ಅಂಥ ವರು ತಮ್ಮ ತಪ್ಪುದಾರಿ ಬಿಟ್ಟು ದೇವರನ್ನು ಹೊಂದಲಿಕ್ಕೆ ಕೋಟಿ ಜನ್ಮಗಳೇ ಬೇಕಾಗುತ್ತದೆ. ಈ ಜನ್ಮಗಳಲ್ಲೆಲ್ಲ ಅವನು ಅತ್ಯಂತ ಶ್ರಮಪಟ್ಟು ಗಳಿಸು ತ್ತಿರುವ ಸುಖವು ಆತ್ಮದ ಅರಿವಿಂದ ಬರುವ ಆತ್ಮಾನಂದದ ತೀರಾ ತೀರಾ ಅತ್ಯಲ್ಪ ಅಂಶ ಮಾತ್ರ. (ತೈತ್ತಿರಿಯ ಉಪನಿಷತ್ತು ಬ್ರಹ್ಮಾನಂದವಲ್ಲಿ) ಮತ್ತು ಅದರೊಡನೆ ತಪ್ಪದೆ ಅಪಾರ ಮಟ್ಟದಲ್ಲಿ ದುಃಖ, ನಿರಾಶೆ, ವ್ಯಾಕುಲತೆಗಳನ್ನು ನುಂಗುತ್ತಿರುತ್ತಾನೆ. ಧರ್ಮದ ಕ್ಷೇತ್ರದಲ್ಲಿ ಅತ್ಯಂತ ಮುಂದೆ ಹೋಗಿ ಆತ್ಮಾ ನಂದ ಪಡೆದ ನಮ್ಮ ಮಹಾಪುರುಷರೆಲ್ಲ ನಮ್ಮ ಮೇಲಿನ ಕರುಣೆಯಿಂದ ಹೇಳುತ್ತಿದ್ದುದು ಇದನ್ನು ಮಾತ್ರ. ಮಹಾನಗರವಾದ ಕಲ್ಕತ್ತಾದಲ್ಲಿ ಕಿಕ್ಕಿರಿದು ತುಂಬಿದ್ದ ಲೌಕಿಕ ಭಾವನೆಯ ಜನರೆಲ್ಲ ಹೀಗೆ ತಮ್ಮ ಹಕ್ಕಿನದಾದ ಆತ್ಮಾನಂದದಿಂದ ವಂಚಿತರಾಗಿ ಬಾಳುವುದನ್ನು ಎಣಿಸಿಕೊಂಡು, ಅವರಿಗೆ ನಿಜ ತತ್ವ ಬೋಧಿಸಲು ತನ್ನಲ್ಲಿಗೆ ತರಬೇತಿಗೆ ಶಿಷ್ಯರು ಬರಲಿಕ್ಕಿದ್ದಾರೆ ಎಂದು ಭಗವತಿ ಹೇಳಿದ್ದು ಇನ್ನೂ ನಡೆಯಲಿಲ್ಲವಲ್ಲ ಎಂದು ಶ್ರೀ ರಾಮಕೃಷ್ಣ ಪರಮ

ಹಂಸರು ಅತ್ಯಂತ ದುಃಖದಿಂದ ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದು
ದುಂಟಂತೆ !

ಆದ್ದರಿಂದ ಆತ್ಮಾನಂದದ ನಿಧಿಯು ನಮ್ಮಲ್ಲಿ ಪ್ರತಿಯೊಬ್ಬನಲ್ಲಿಯೂ
ಹುದುಗಿರುವುದು ಪರಮಸತ್ಯ. ಆದರೆ ಅದರ ಲಾಭಹೊಂದಲಿಕ್ಕೆ ಆತ್ಮಾನುಭವ
ಪಡೆಯಬೇಕು. ಅದಕ್ಕೆ ದೇವರಿಂದ ಮತ್ತು ಆತ್ಮಾನುಭವಪಡೆದ ಮಹಾತ್ಮರ
ಮೂಲಕ ನಮಗೆ ಲಭಿಸಿರುವ ಶಾಸ್ತ್ರದ ಜ್ಞಾನದ ಅಭ್ಯಾಸ ಬೇಕೇ ಬೇಕು. ಈ
ಅಭ್ಯಾಸವು ಅಪಾರ ಸಂಖ್ಯೆಯ ಜನ್ಮಗಳ ಶ್ರಮಬೇಕಾದುದು. ಪಶುವಿನಂತೆ
ತಾನು ಕೇವಲ ದೇಹವೆಂದು ಭಾವಿಸುವ ಪಶು-ಮಾನವನಿಂದ ಹೊರಟು ಅಲ್ಪ
ಜ್ಞಾನದ ಧರ್ಮಗಳ ಅಭ್ಯಾಸ, ದೇಹದ ಬಿಡುಗಡೆಯ ಹೆಚ್ಚು ಹೆಚ್ಚು ಜ್ಞಾನ
ಸಾಧನೆಗಳಿರುವ ಮನುಷ್ಯ ಮಾನವನಾಗಿ ಬಹಳ ಕಷ್ಟಸುಖ ಭೋಗಿಸಿ ಕಟ್ಟ
ಕಡೆಗೆ ಆತ್ಮಶಕ್ತಿ ಪ್ರಕಟವಾಗುತ್ತ ಬರುವ ದೈವೀ-ಮಾನವಮಟ್ಟಕ್ಕೆ ಏರುವ
ವರೆಗೂ ಬೇಕಾದ ಸಾಧನೆಗಳನ್ನೆಲ್ಲವನ್ನು ತಪ್ಪದೆ ಒಳಗೊಂಡ ಪೂರ್ಣ ಧರ್ಮ
ವೆಂದರೆ ನಮ್ಮ ಸನಾತನ ಧರ್ಮ ಮಾತ್ರ ! ಅದರಲ್ಲಿ ತರಬೇತು ಹೊಂದುತ್ತ
ಈಗ ಬ್ರಾಹ್ಮಣರಾಗಿ ಜನಿಸಿದುದು ನಮ್ಮ ಅಪಾರ ಭಾಗ್ಯ.

ಹೀಗೆ ಸಾಧನೆಯ ತುತ್ತುದಿಯಾದ, ಬಿಡುವಿಲ್ಲದ ಆತ್ಮಾನಂದದ
ಅನುಭವ ಉಂಟಾಗುವವರೆಗೂ ಈ ಆನಂದದ ತೃಷೆಯು ಅದರ ಅಲ್ಪತರದ
ಮತ್ತು ಈ ತೃಷೆಯು ವಿಕೃತ ರೂಪವಾದ ದೇಹದ ಸುಖದ ಬಯಕೆಯಾಗಿ
ಮಾತ್ರ ಕಾಣಿಸಿಕೊಳ್ಳುತ್ತದೆ. ಮನುಷ್ಯನು ತನ್ನ ಎಲ್ಲ ಕಾರ್ಯಗಳನ್ನೂ ಈ
ದೇಹ ಸುಖ ಲಭಿಸಲೆಂದು (ಅಥವಾ ಅದಕ್ಕೆ ಅಡ್ಡಿತರುವ ದುಃಖ ನಾಶವಾಗ
ಲೆಂದು) ನಡೆಸುತ್ತಾನೆ. ಗೃಹಿಣಿಯು ತನ್ನ ಅತಿಬೆಲೆಯುಳ್ಳ ವಜ್ರದಉಂಗುರ
ಕಳಕೊಂಡವಳು ಸುಮ್ಮನೆ ಇರಲಾರಳು. ಅದಕ್ಕಾಗಿ ಹುಡುಕುತ್ತಲೇ ಇರುವಳು.
ತಾನೇ ಅದನ್ನು ಮನೆಯೊಳಗೆ ತಪ್ಪಾಗಿ ಇಟ್ಟು ಮರೆತು, ಆದರೆ ಹಿತ್ತಲಲ್ಲೆ ಕಳ
ಕೊಂಡೆ ಎಂಬ ಭ್ರಮೆಯನ್ನು ಹೊಂದಿನಿರಂತರವಾಗಿ ಹಿತ್ತಲಲ್ಲಿ ಹುಡುಕುತ್ತಿರು
ವವಳಂತೆ ನಡೆಯುತ್ತಿದೆ ಸುಖದಬಯಕೆಯ ನಮ್ಮ ಯತ್ನ. ಲೌಕಿಕ ಭಾವನೆಯ
ಸಾಮಾನ್ಯ ಮನುಷ್ಯನಿಗೆ ದೇಹದಸುಖಗಳ ಬಯಕೆಗಳು ಮುಗಿಯುವುದೆಂಬು
ದಿಲ್ಲ. ತನ್ನ ಕೆಲವು ಬಯಕೆಗಳು ಪೂರೈಸಲ್ಪಟ್ಟರೆ ಸಂಪೂರ್ಣ ಸುಖಿ
ಯಾದೇನು ಎಂದು ಭಾವಿಸುವ ಅವ ಸ್ವಲ್ಪ ಯೋಚಿಸಿದರೆ ತಿಳಿದೀತು, ಆ
ಬಯಕೆಗಳು ಆಗಲೇ ಪೂರೈಸಲ್ಪಟ್ಟಿರುವ ತನ್ನ ಪರಿಚಿತರೇ ಯಾರೂ ತೃಪ್ತ
ರಾಗಿರದುದು. ಅದನ್ನು ಕಂಡೂ ಅವ ಪಾಠ ಕಲಿಯನು. ಆ ಬಯಕೆಗಳು

ಪೂರೈಸಲ್ಪಟ್ಟು ಅತಿ ಸ್ವಲ್ಪಕಾಲ ಶಾಂತಿ ಬಂದರೂ ಅಷ್ಟರಲ್ಲೇ ಮತ್ತೆ ಕೆಲವು ಹೊಸ ಬಯಕೆಗಳು ಉದ್ಭವಿಸುತ್ತವೆ. ಆ ಬಯಕೆಯು ಇತರ ವಸ್ತುಗಳಿದ್ದ ಪರಿಚಿತರೂ ಏನೂ ಸುಖಿಗಳಲ್ಲ ಎಂದು ಕಂಡೂ ಅವ ಸುಮ್ಮನಿರದೆ ಅವಕ್ಕೆ ಶತಪ್ರಯತ್ನ ಮಾಡುತ್ತಾನೆ. ಅವನ್ನು ಪಡೆದೂ ಶಾಂತನಾಗದೆ, ತನಗೆ ಸಾಧ್ಯ ತೋರುವ ಮತ್ತೂ ಇತರ ಹೊಸಬಯಕೆಗಳ ಬೆನ್ನು ಹಿಡಿದು ಜೀವನ ಸವೆಸುತ್ತಾನೆ. ಈ ಬಯಕೆಗಳಂತಿರಲಿ, ಇವುಗಳ ತರದ ಸಾವಿರಾರು ಪಾಲು ಹೆಚ್ಚಿನ ಮಟ್ಟದ ಭೋಗದ ವಸ್ತುಗಳನ್ನು ತನಗೆ ಬೇಕೆಂದು ಬಯಸಿ ಕೂಡಿಹಾಕಿ ಅವುಗಳ ನಡುವೆ ಬಾಳುವ ಚಕ್ರವರ್ತಿಯೂ ಏನೂ ಸುಖಿಯಲ್ಲ ಎಂಬುದನ್ನೂ ಅರಿತ ಅವ ಏನೇನೂ ಪಾಠ ಕಲಿಯಲಾರ. ಅಪರಿಮಿತ ಭೋಗದ ಹೊಸ ಹೊಸ ವಸ್ತುಗಳು ನಿರಂತರವಾಗಿ ಉಂಟಾಗುತ್ತಿರುವ ವೈಜ್ಞಾನಿಕ ಕಾಲದಲ್ಲಂತೂ ಅವು ಆಸೆ ಕೆರಳಿಸುತ್ತಿರುವುದು, ಅವುಗಳ ಬೆನ್ನು ಹತ್ತುವ ನಿರಂತರ ಶ್ರಮ, ಹೋರಾಟ, ಮನಸ್ಸಿನ ಶಾಂತತೆಯನ್ನು ಚೂರು ಚೂರು ಮಾಡುತ್ತ ಪಾಶ್ಚಾತ್ಯ ದೇಶಗಳಲ್ಲಿ ಆಸ್ಪತ್ರೆಗಳ ಅರ್ಧಪಾಲು ಹಾಸಿಗೆಗಳು ಈಗ ಮನೋರೋಗಿಗಳಿಂದ ತುಂಬಿವೆ ; ಅಲ್ಲಿ ಹತ್ತರಲ್ಲೊಬ್ಬ ಮನೋರೋಗದಿಂದ ಪೀಡಿತನಾಗುತ್ತಿದ್ದಾನೆ ! ಆದರೆ ಹೀಗೆ ಹಾಳು ಬಯಕೆ ಹೆಚ್ಚಿಸುವ ವಿಜ್ಞಾನವನ್ನು ಅಲ್ಲಿ ಮತ್ತಷ್ಟೂ ಹೆಚ್ಚು ಹೆಚ್ಚು ಬೆಳೆಸುತ್ತಿದ್ದಾರೆ !

ಮತ್ತು ದೇಹದ ಭೋಗದ ವಸ್ತುಗಳೆಲ್ಲ ದೇಹದ ಹೊರಗಿಂದ ಬರಬೇಕಾದವು. ಅವು ಎಂದೂ ಜನರ ಬಯಕೆ ಪೂರೈಸುವಷ್ಟು ಧಾರಾಳ ಇದ್ದದ್ದಿಲ್ಲ. ಆದ್ದರಿಂದ ಅವಕ್ಕಾಗಿ ಹೋರಾಟ ಬಹಳ, ಸಾಲದ್ದಕ್ಕೆ ಕೇವಲ ಲೌಕಿಕ ಭಾವನೆಯುವರಲ್ಲಿ ದೇವರ ಭಯ ಪಾಪದ ಶಿಕ್ಷೆಯ ಭೀತಿ ಇಲ್ಲದ್ದರಿಂದ, ಅನ್ಯಾಯದ ದಾರಿಯಲ್ಲಿ ಸಂಪಾದಿಸುವ ಯತ್ನ ಭಯಂಕರ ತೀವ್ರತೆಯಿಂದ ಈಗ ಹೆಚ್ಚುತ್ತಿದೆ. ಲೋಕದಲ್ಲಿ ಎಲ್ಲೆಲ್ಲೂ ಅನ್ಯಾಯದ ಹೊಸ ರೂಪಗಳು ಹಳೆಯವಕ್ಕೆ ಸೇರುತ್ತ, ಹೊಸ ಹೊಸ ಮಟ್ಟದ ಜೀವನದ ಅಭದ್ರತೆ, ಭಯ, ಅಶಾಂತತೆ, ವ್ಯಾಕುಲತೆ ನಮ್ಮ ಜೀವನ ಕವಿಯುತ್ತಿದೆ. ಆದರೆ ಧರ್ಮ ಬೇಡದವರಿಗೆ ಎಂದೂ ಬುದ್ಧಿ ಬಾರದು !

ಮುಕ್ತಿಯಲ್ಲಿ ಇಷ್ಟದೇವರ ಲೋಕ ಸೇರಿ ಆ ಆನಂದದ ವಾತಾವರಣದಲ್ಲಿ ದೇಹ ಹೊಂದಿಯೇ ಬಾಳುವ ಸುಖ ಸಾಲೋಕ್ಯ ಮುಕ್ತಿ. ಅಲ್ಲಿ ದೇವರ ಸಮೀಪವಿದ್ದು ದರ್ಶನ ಪಡೆಯಲಾಪುದು ಸಾಮೀಪ್ಯ ಮುಕ್ತಿ. ದೇವರ ರೂಪ ಕೂಡ ಪಡೆಯುವುದು ಸಾರೂಪ್ಯ ಮುಕ್ತಿ. ಆದರೆ ಅವನಲ್ಲಿ ಐಕ್ಯ

ನಾಗುವುದು ಸಾಯುಜ್ಯ ಮುಕ್ತಿ. ಅದರಿಂದ ಮಾತ್ರ ಹಿಂದೆ ಬರಲಿಕ್ಕಿಲ್ಲ. ಇಲ್ಲವಾದರೆ ಜಯವಿಜಯರಂತೆ ಅಹಂಕಾರ ಉಳಕೊಂಡು ಇಲ್ಲಿ ಪುನಃ ಈ ದುಃಖಮಿಶ್ರ ಜನ್ಮಗಳನ್ನು ಪಡೆಯಬೇಕಾದೀತು.

# ೩. ಲೋಕದ ಧರ್ಮಗಳಲ್ಲಿ ಬ್ರಾಹ್ಮಣ್ಯದ ಹಿರಿಮೆಯ ಸ್ಥಾನ

ಶಾಸ್ತ್ರದ ಸಹಾಯ ಪಡೆದು ದೇಹದ ಬಂಧನದಿಂದ ಬಿಡಿಸಿಕೊಳ್ಳಲಿಕ್ಕೆ, ಈಗಿನಮಟ್ಟದಲ್ಲಿ ಕುಂಠಿತವಾದ ಆತ್ಮನ ಶಕ್ತಿ ಬಿಡುಗಡೆಯಾಗಲಿಕ್ಕೆ, ಕಟ್ಟಕಡೆಗೆ ಅಪರಿಮಿತ ಹಿರಿಮೆಯು ನಮ್ಮದೇ ಆದ ನಿರಂತರವಾದ ಆತ್ಮಾನಂದದಲ್ಲಿರಲಿಕ್ಕೆ ನಮ್ಮ ಮಾನವ ಜನ್ಮಗಳ ಸುಸಂದರ್ಭವನ್ನು ಉಪಯೋಗ ಮಾಡದೆ, ದೇಹದ ಮೂಲಕ ಸಿಕ್ಕುವ ತೀರಾ ಅಲ್ಪತರದ್ದೂ ದುಃಖ ಮಿಶ್ರದ್ದೂ ಆದ, ಆತ್ಮನನ್ನು ಮತ್ತಷ್ಟು ಕುಂಠಿಸುವ, ಲೌಕಿಕ ಸುಖಗಳಿಗಾಗಿ ಶ್ರಮಿಸುತ್ತಿರುವುದೆಂದರೆ ರಾಜಾಧಿರಾಜನ ಸ್ಥಾನದಲ್ಲಿರಲಾಪವ ಭ್ರಮೆಯಿಂದ ಕ್ಷುದ್ರ ಭಿಕ್ಷುಕನಾಗಿ ಊರೂರು ಅಲೆಯುತ್ತ ಬೇಡಿ ತಿನ್ನುವ ಬಾಳು ನಡೆಸಿದಂತೆ ಅಲ್ಲವೇ ?

ಮಾನವ ಜನ್ಮದ ಉದ್ದೇಶವೇ ಆತ್ಮಶಕ್ತಿ ಬೆಳೆಸಿ ಅದು ದೇವರನ್ನು ಹೊಂದುವುದನ್ನು ಸಾಧ್ಯಮಾಡುವ ಧಾರ್ಮಿಕ ಸಾಧನೆಗಾಗಿ, ಎಂಬುದನ್ನು ದೇವರು ನಮ್ಮಲ್ಲಿ ನೆಟ್ಟಿರುವ ಒಂದು ಸ್ವಭಾವವು ರುಜುಪಡಿಸುತ್ತದೆ. ಅದೇನೆಂದರೆ ಪ್ರತಿಮನುಷ್ಯನಿಗೆ ತನ್ನಮಟ್ಟದೊಳಗೆ ತನ್ನ ಹಿರಿಮೆಬೆಳೆಸುವ ಅಭಿಲಾಷೆ ಇದ್ದೇ ಇದೆ. ಅದಿರುವುದು ಮಾನವಜನ್ಮಕ್ಕೆ ಬಂದು ಬುದ್ಧಿಬೆಳೆಯಲಾರಂಭಿಸಿದಾಗ ಮಾತ್ರ ; ಪ್ರಾಣಿಗಳಲ್ಲಿಲ್ಲ. ಜನರಿಗೆ ಹಿರಿಮೆ ಬೇಕು. ಆದರೆ ಅದನ್ನು ಹೇಗೆಸಾಧಿಸಬೇಕೆಂಬ ಬಗೆಗೆ ಅವರಲ್ಲಿ ಬಹಳ ಭಿನ್ನಾಭಿಪ್ರಾಯಗಳಿವೆ. ವ್ಯಾಪಾರ ಮಾಡಿ ಅಥವಾ ಕಾರ್ಖಾನೆ ನಡೆಸಿ ತುಂಬಾ ಹಣಗಳಿಸಿ ಮೇಲ್ಮಟ್ಟದವನಾಗಬೇಕು ; ಜಟ್ಟಿಯಾಗಿ, ಕ್ರಿಕೆಟ್‌ಪಟುವಾಗಿ, ಖ್ಯಾತನಾಗಬೇಕು ; ತುಂಬ ವಿದ್ಯೆ ಕಲಿತು ಘನಪಂಡಿತನಾಗಬೇಕು ; ಗಣನೀಯ ರಾಜಕೀಯ ಮುಖಂಡನಾಗಬೇಕು ; ಸಿನೆಮಾ ತಾರೆಯಾಗಬೇಕು ; ಸಮರ್ಥ ವಿಜ್ಞಾನಿಯಾಗಬೇಕು ಎಂಬ ತರತರದ ಗುರಿಯಿರುವವರಿದ್ದಾರೆ. ಒಂದೊಂದು ಖ್ಯಾತ ತರದವರಿಗೂ ಅವರನ್ನು ಮೆಚ್ಚುವ ಆ ಭಾವನೆಯ ಜನರ ತಂಡಗಳಿವೆ. ಆದರೆ ಈ ತರತರದ

ಹಿರಿಮೆಯೆಲ್ಲ ಹೀಗೆ ಅವರವರ ತಂಡದೊಳಗೆ ಮಾತ್ರ ; ತತ್ಕಾಲದ್ದು ಮಾತ್ರ, ಆಳವಾದದ್ದೇನೂ ಅಲ್ಲದ್ದು ಮಾತ್ರ. ಎಂದರೆ ಇದು ದೇವರು ಮಾನವರಲ್ಲೆಲ್ಲ ನೆಟ್ಟ ಹಿರಿಮೆಯ ಗುರಿಯ ಸ್ವರೂಪವಲ್ಲ. ಆದರೆ ಧಾರ್ಮಿಕ ಮಹಾಪುರುಷರಾದ ಶ್ರೀರಾಮ, ಶ್ರೀಕೃಷ್ಣ ನಮ್ಮ ಆಚಾರ್ಯರು, ಬುದ್ಧ, ಕ್ರಿಸ್ತ, ಮುಹಮ್ಮದ್ ಪೈಗಂಬರರು ಪಡೆಯುತ್ತ ಬಂದ ಗೌರವವು ಲೌಕಿಕರಾದ ಚಕ್ರವರ್ತಿ, ರಾಜ, ಮಂತ್ರಿ, ಸಾಮಾನ್ಯ ಪ್ರಜೆ, ಧನಿಕ. ಪಂಡಿತ, ಪಾಮರ, ವಿಜ್ಞಾನಿ, ಯುವಕ, ಮುದುಕ, ಸ್ತ್ರೀ ಎಂಬ ಭೇಧವಿಲ್ಲದೆ ಜನರ ಎಲ್ಲ ವರ್ಗದವರಿಂದಲೂ ಉಕ್ಕಿಬಂದ ಗೌರವ. ಅವರವರ ಕಾಲದಲ್ಲಿ ಮಾತ್ರವಲ್ಲ ಅಂದಿನಿಂದ ಇಂದಿನವರೆಗೂ ಸಾವಿರಾರು ವರ್ಷಗಳ ಕಾಲದಲ್ಲೆಲ್ಲ ಅದು ತೋರುತ್ತ ಬಂದಿದೆ. ಮತ್ತು ಲೌಕಿಕರು ಪಡೆಯುವ ಗೌರವಕ್ಕೆ ಹೋಲಿಸಿದಾಗ ಅದು ಅತ್ಯಂತ ಅದ್ಭುತಮಟ್ಟದ್ದಾಗಿದೆ. ಯಾರೇ ಆಗಲಿ ತಾನು ಅತ್ಯಂತ ಮೆಚ್ಚಿದ, ಉಪಕಾರ ಮಾಡಿದ, ಲೌಕಿಕ ಹಿರಿಮೆಯುವನೆದುರಲ್ಲಿ ಅಥವಾ ಚಿತ್ರಇಟ್ಟು ವರ್ಷಕ್ಕೊಮ್ಮೆಯಾದರೂ ಅದರ ಮುಂದೆ, ಉದ್ದಂಡ ನಮಸ್ಕರಿಸುವುದೆಂಬುದಿಲ್ಲ. ಆದರೆ ಕೋಟ್ಯಾನುಕೋಟಿ ಜನರು ತಾವುಮೆಚ್ಚಿದ ಧಾರ್ಮಿಕ ಪುರುಷರಿಗೆ ಮುಂಚೆ ಮತ್ತು ಅವರ ಕಾಲದ ಅನಂತರ ಇಂದಿನವರೆಗೂ ಅವರ ಪ್ರತೀಕಗಳಿಗೆ ಅತ್ಯಂತ ಭಕ್ತಿಯಿಂದ ಅವರ ಸ್ಮರಣೆಮಾಡುತ್ತ ತುಂಬಿದ ಹೃದಯದಿಂದ ಪ್ರೇಮಾಶ್ರು ಸುರಿಸುತ್ತ ಅತ್ಯಂತ ನಮ್ರತೆಯಿಂದ ನಮಸ್ಕರಿಸುತ್ತ ಬಂದಿದ್ದಾರೆ. ತಮ್ಮ ಜೀವನ ತಿದ್ದಿಕೊಳ್ಳಲು ಸ್ವಪ್ರಯತ್ನದಿಂದ ಸಾಧ್ಯವಾಗದೆ ವ್ಯಸನಪಡುತ್ತ ಈ ಮಹಾಪುರುಷರ ಸಹಾಯಬೇಡುತ್ತ ತಮ್ಮ ಜೀವನ ಉದ್ಧಾರ ಮಾಡಿಕೊಂಡವರು ಬಹಳ.

ವೇದಕಾಲದಿಂದ ಬ್ರಾಹ್ಮಣರು ಆಶಿಸಿದ್ದು, ಬೆಳೆಸಿಕೊಂಡು ಬಂದದ್ದು, ದೇವರು ಅತಿಮೆಚ್ಚುವ ಈ ತರದ ಧಾರ್ಮಿಕಹಿರಿಮೆಯನ್ನು ಹೊರತು ಅವರು ತಮ್ಮ ವಿಶೇಷ ಬುದ್ಧಿಶಕ್ತಿಯಿಂದ ರಾಜ್ಯಕಟ್ಟಲು ಬಯಸಲಿಲ್ಲ, ಕೋಟ್ಯಾಧೀಶ್ವರರಾಗಲೂ ಯತ್ನಿಸಲಿಲ್ಲ. ದೇಶದಲ್ಲಿ ಅಲ್ಪಸಂಖ್ಯಾತರಾದರೂ ದೇಶದ ಧಾರ್ಮಿಕಸಂಸ್ಕೃತಿ ರೂಪಿಸಿದ್ದೇ ಅವರು. ಅವರಪೀಳಿಗೆಯುವರು ನಾವು.

ಆದರೆ ಇದು ಕಲಿಯುಗ. ಅದರ ಆರಂಭದ ಸಂಧ್ಯಾಕಾಲ ೫೦೦೦ ವರ್ಷ ಕಳೆದು, ಈ ಶತಮಾನದೊಡನೆ ಪೂರ್ಣ ಕಲಿಯುಗದ ಕೆಟ್ಟಕಾಲದಲ್ಲಿದ್ದೇವೆ. ಈಗ ದೇವರ ಇಚ್ಛೆಯೇ ಕಲಿಯ ಶಕ್ತಿ ಜನರನ್ನು ಮಂಕುಮಾಡಲಿ ಎಂಬುದಾಗಿದೆ. ಆದ್ದರಿಂದಲೇ ಜನರ ಮನಸ್ಸನ್ನು ದೇವರಿಂದ ಕೇವಲ

ದೇಹದ ಭೋಗಗಳಿಗೆ, ಹಣಕ್ಕೆ, ಸೆಳೆಯಲಿಕ್ಕೆಂದು ಕಲಿಯ ಅತ್ಯಂತ ಸಮರ್ಥ ಸೇನಾಧಿಪತಿಯಾದ ವಿಜ್ಞಾನ ಉಂಟಾಗಿ ಪಾಪ ತುಂಬಿಕೊಂಡೇ ಜನಿಸುವ ಜನರನ್ನು ಭಗವಂತನಿಂದ ತನ್ನ ಕಡೆಗೆ ಸೆಳೆದು ನಾಸ್ತಿಕರನ್ನಾಗಿ ಮಾಡುತ್ತಿದೆ. ಲೋಕದ ಅತಿದೊಡ್ಡ ದೇಶಗಳಾದ ಚೈನಾ, ರಷ್ಯಾ ನಾಸ್ತಿಕ ರಾಜ್ಯಗಳಾದವು. ಯೂರೋಪಿನ, ಅಮೇರಿಕದ, ಅತಿಹೆಚ್ಚಿನ ಜನರು—ದೇವರು ಇರಬಹುದು, ಆದರೆ ಎಲ್ಲೋ ಏನೋ, ತಮಗೆ ತಾವೇ ಬೆಳೆಸಲಾಪ ವಿಜ್ಞಾನವೇ ತಮ್ಮ ಹಿರಿಮೆ ಬೆಳೆಸಲು ಧಾರಾಳವಾಗಿ ಸಾಕು ಎಂಬ ನಿರ್ಧಾರದವರಾಗಿದ್ದಾರೆ. ನಮಗೂ ಈಗ ಅವರೇ ಹಾಳು ಗುರುಗಳು !

ಆದರೆ ಯಾರಿಗೆ ಗೌರವ ಕೊಡಬೇಕು ಎಂಬ ಬಗೆಗೆ ವಿಜ್ಞಾನದ ಭಕ್ತರು ಎಷ್ಟೆಲ್ಲ ತಪ್ಪಿಬೀಳಲು ಸಾಧ್ಯ ಎಂಬುದಕ್ಕೆ ಕೇವಲ ಕಳೆದ ೫೦ ವರ್ಷಗಳಲ್ಲಿ ನಡೆದ ಮೂರು ಅತಿದೊಡ್ಡ ದೃಷ್ಟಾಂತಗಳನ್ನು ನೋಡಬಹುದು. ಹಿಂದೆ ವಿಜ್ಞಾನದಲ್ಲಿ ಬಹಳ ಖ್ಯಾತರಾಗಿದ್ದ ಜರ್ಮನರು ಹಿಟ್ಲರನನ್ನು ಮುಖಂಡನನ್ನಾಗಿ ಮಾಡಿಕೊಂಡು ಗಗನಕ್ಕೇರಿಸಿದರು. ಈ ಶತಮಾನದ ಎರಡನೇ ಘೋರಯುದ್ಧಕ್ಕೆ ಮುಖ್ಯ ಕಾರಣನಾದ ಅವನಿಂದಾಗಿ ೬೦ ಮಿಲಿಯ ಜನರು ಯುದ್ಧದಲ್ಲಿ ಬಲಿಯಾದರು ! ಅವನ ಅಪಾರ ಕ್ರೂರತೆ ಮುಂತಾದವಕ್ಕೆ ಜರ್ಮನರು ಆಮೇಲೆ ತುಂಬಾ ನಾಚಿಕೆ ಪಟ್ಟರು. ಆಮೇಲೆ "ಹೆಯ್ಲ್ ಹಿಟ್ಲರ್" ಕೂಗು ಜರ್ಮನಿಯಲ್ಲಿ ನಿಂತಿತು, ರಷ್ಯಾದವರು ಸ್ಟಾಲಿನ್ನನನ್ನು ದೇವರ ಮಟ್ಟಕ್ಕೆ ಏರಿಸಿ ಅವನಅತಿದೊಡ್ಡ ಚಿತ್ರಗಳೊಡನೆ ಭಾರೀ ಮೆರವಣಿಗೆ, ಯಾವ ದೇವರಿಗೂ ನಡೆಸದಷ್ಟು ನಡೆಸಿದರು. ಅವನ ಮರಣಾನಂತರ ಅವನೊಬ್ಬ ಅಧಿಕಾರದ ಆಸೆ ತುಂಬಿದ್ದ ಭಯಂಕರ ಕೊಲೆಗಾರನಾಗಿದ್ದ ಎಂಬುದು ಗೊತ್ತಾಗಿ ಅವನ ಹೆಣವನ್ನು ಅದರ ವೈಭವಯುಕ್ತ ಗೋರಿಯಿಂದ ತೆಗೆದು ಸಾಮಾನ್ಯ ತರದ ಗೋರಿಗೆ ಹಾಕಿದರು. ಆಮೇಲೆ ಹಲವು ವರ್ಷಗಳವರೆಗೂ ಅದಕ್ಕೆ ಒಂದೇ ಒಂದು ಪುಷ್ಪಾಹಾರ ಬಿದ್ದಿರಲಿಲ್ಲ ! ಚೈನಾದ ಮುಖಂಡರು ಮಾಓ ಅವರು ಸಾಯುವವರೆಗೂ ಹೇಳಿದ್ದೆಲ್ಲ ವೇದವಾಕ್ಯವಾಗಿತ್ತಾದರೂ ಮರಣ ಹೊಂದಿದ ಸ್ವಲ್ಪ ವರ್ಷಗಳಲ್ಲೇ ಅವರು ಹಲವು ರೀತಿಗಳಲ್ಲಿ ತಪ್ಪಿಬಿದ್ದವರು ಎಂಬುದು ಅಲ್ಲಿ ಸಾರಲ್ಪಡುತ್ತಿದೆ. ಆದರೆ ಧರ್ಮ ಹೇಳುವ ಮಹಾಪುರುಷರ ವಿಚಾರದಲ್ಲಿ ಎಷ್ಟೆಲ್ಲ ಸಾವಿರ ವರ್ಷ ಕಾಲ ಅವರ ಹೆಸರು ಬಾಳಿ ಬಂದಿದೆ ! ವಿಜ್ಞಾನಕ್ಕೆ ಅತ್ಯಂತ ಶಾಶ್ವತನಾದ ದೇವರ ವಿಚಾರ, ನಮ್ಮ ಆತ್ಮನ ಹಿರಿಮೆಯ ವಿಚಾರ, ಏನೇನೂ ತಿಳಿಯದು. ಆದರೂ ನಮ್ಮ ದೇಶವನ್ನು

ಅತ್ಯಂತ ಧಾರ್ಮಿಕ ದೇಶವೆಂಬ ಖ್ಯಾತಿ ತಂದ ನಮ್ಮ ಮಹಾ ಪುರುಷರ ದಾರಿ ಬಿಟ್ಟು ವಿಜ್ಞಾನದ ಬೆಂಬಲ ಧಾರಾಳ ಸಾಕು ಎಂದು ನಮ್ಮ ಲೌಕಿಕ ಭಾವನೆಯ ಮುಖಂಡರು ಸೆಕ್ಯುಲರ್ ಸರ್ಕಾರವನ್ನು ಕಟ್ಟಿದರು! ಅದರಿಂದ ಅಪಾರ ಹಾನಿ ಬೆಳೆಯುತ್ತಿದೆ. ಆದರೆ ಬ್ರಾಹ್ಮಣರು ವಿಜ್ಞಾನದ ಅಪಾಯಗಳ ಸೆಳತಕ್ಕೆ ಬಲಿ ಬೀಳದೆ, ನಿಜವಾದ ಹಿರಿಮೆಯ ಧಾರ್ಮಿಕ ದಾರಿ ಆದಷ್ಟು ಅಭ್ಯಸಿಸಲಿ.

ಇನ್ನೊಂದು ರೀತಿಯಲ್ಲಿಯೂ ಬ್ರಾಹ್ಮಣನು ತನ್ನ ಜನ್ಮದ ವಿಶೇಷ ಹಿರಿಮೆಯನ್ನು ಅರ್ಥ ಮಾಡಿಕೊಳ್ಳಲು ಬರುತ್ತದೆ. ಹಾಗೆ ಅರ್ಥಮಾಡಿ ಕೊಳ್ಳುವುದು ಅಗತ್ಯ. ಮಂಗುವಿಗೆ ವಜ್ರವೇ ಸಿಕ್ಕಿದರೂ ಗಾಜಿನ ತುಂಡೆಂದೇ ಭಾವಿಸಿ ಸ್ವಲ್ಪ ಆಡಿ ಬಿಸಾಡುತ್ತದೆ. ಮನುಷ್ಯ ತಾನು ಉತ್ತಮ ಕುಲದವ, ಧರ್ಮದವ, ಗೌರವದ ಲೌಕಿಕ ಹುದ್ದೆಯವ ಎಂಬ ಸ್ಮರಣೆ ಅಲ್ಪ ಕೆಲಸ ಗಳನ್ನು ಮಾಡಲು ಅವನ ಮನಸ್ಸು ಸೆಳೆದಾಗ ತಡೆಗಟ್ಟಲು ಸಹಾಯವಾಗು ತ್ತದೆ. ಮುಖ್ಯವಾಗಿ ನಮ್ಮ ಯುವಕರಲ್ಲಿ—ಎಲ್ಲರೂ ಸರಿಸಮಾನರು ಎಂಬ ಸರ್ಕಾರದ ವಾದದ ಈ ಕಾಲದಲ್ಲಿ—ತಮ್ಮ ಜಾತಿಯ ನಿಜವಾದ ಹಿರಿಮೆಯ ಅರಿವು ಇದ್ದರೆ ಅದು ಅವರ ಧಾರ್ಮಿಕ ಪತನಕ್ಕೆ ಬಿಡದು.

ಜನರಲ್ಲಿ ಸಾಮಾನ್ಯವಾಗಿ ನಾಲ್ಕು ಧರ್ಮದವರು ಇದ್ದಾರೆ. ಮೊದ ಲನೆಯದಾಗಿ ಕಾಡು ಜನರು, ಮೂಲ ನಿವಾಸಿಗಳು, ನೀಗ್ರೋಸ್, ರೆಡ್ ಇಂಡಿಯನ್ಸ್, ಬುಶ್‌ಮೆನ್, ನಮ್ಮ ಗಿರಿಜನರು, ಹೊಲೆಯರು, ಚಂಡಾಳರು ಮುಂತಾದವರ ವರ್ಗ ಜೀವಾತ್ಮನು ಲಕ್ಷಾಂತರ ಪ್ರಾಣಿ ಜನ್ಮಗಳಲ್ಲಿದ್ದಾಗ ಸ್ವಂತ ಬುದ್ಧಿಯಿಂದಲ್ಲ, ಪ್ರಕೃತಿದೇವಿ ಕೊಟ್ಟ ಸ್ವಭಾವ ಗುಣಗಳಿಂದ ಬಾಳುತ್ತಿದ್ದು ಆಮೇಲೆ ಪಶು–ಮಾನವರಾಗಿ ಜನ್ಮ ಪಡೆದ ವರ್ಗವಿದ್ದು ಅದರಲ್ಲಿ ಈ ಪ್ರಕೃತಿ ಸ್ವಭಾವಗಳು ಕಡಿಮೆಯಾಗುತ್ತ ಸ್ವಂತ ಬುದ್ಧಿ ಚಿಗುರುತ್ತ ಬರುತ್ತದೆ. ಆದರೆ ಅದು ಇನ್ನೂ ಬಹಳ ಮಂದವು ತಮೋಗುಣದ್ದೂ ಆಗಿರುತ್ತದೆ. ಆದ್ದರಿಂದ ಅವರು ಸ್ವಂತ ಬೆಳೆ ಬೆಳೆಸಲಿಕ್ಕೆ, ಜ್ಞಾನ ಧರ್ಮ ಬೆಳೆಸಲಿಕ್ಕೆ, ಹೊರಟವರೇ ಅಲ್ಲ. ಅವರಿಗೆ ಕಾಡಲ್ಲಿ ಸಿಕ್ಕಿದ್ದರಿಂದ ತೃಪ್ತಿ. ರಜೋಗುಣದ ನಾಗರಿಕರ ವಿಶೇಷ ವಿದ್ಯೆಯ ಶ್ರಮ, ಬೇಸಾಯ ಕೈಗಾರಿಕೆಗಳ ಶ್ರಮ, ಐಶ್ವರ್ಯ ಸಂಗ್ರಹದ ಶ್ರಮ, ವಿನೋದಗಳಲ್ಲಿ ಚತುರತೆಯ ಶ್ರಮ, ಧರ್ಮ ಅವರಿಗೆ ಅನಾವಶ್ಯಕವಾಗಿ ತೋರುತ್ತದೆ. ಏಕಮಾತ್ರ ದೇವರು ಲೋಕ ಸೃಷ್ಟಿಸಿದನು, ನಮ್ಮನ್ನೂ ಕಾಪಾಡುತ್ತಾನೆ, ಆದರೆ ಅವ ಅಗೋಚರ. ನಮ್ಮಲ್ಲಿ ಶಾಶ್ವತನಾದ ಆತ್ಮನಿದ್ದಾನೆ. ಧರ್ಮದಂತೆ ಬಾಳಿ ದೇವರನ್ನು ಮೆಚ್ಚಿಸಿದರೆ ಮುಂದೆ ಸುಖ ;

ಇಲ್ಲವಾದರೆ ನರಕಯಾತನೆ ಇದೆ ಮುಂತಾದ ಎಲ್ಲಾ ಧರ್ಮಗಳ ಸಾರ ತತ್ವವು ಅವರಿಗೆ ಅರ್ಥವಾಗುವುದಿಲ್ಲ; ಅಪಾರ್ಥ ಮಾಡಿಕೊಳ್ಳುತ್ತಾರೆ; ಅವರು ನಾಗರಿಕತೆಯ ದಾರಿ ಹಿಡಿಯಲು ಬಹಳ ತಲೆಮಾರುಗಳೇ ಬೇಕಾದೀತು ಎಂದು ನೀಗ್ರೊ ಮುಂತಾದವರನ್ನು ಮತಾಂತರ ಮಾಡಿದವನೊಬ್ಬ ತನ್ನ ಅನುಭವ ಬರೆದಿಟ್ಟಿದ್ದಾನೆ.

ಎಂದರೆ ಅವರಿಗೆ ಧಾರ್ಮಿಕ ಜೀವನಕ್ಕೆ ಬೇಕಾದ ಬುದ್ಧಿಮಟ್ಟ, ಚುರುಕುತನದ ಜನ್ಮ, ದೇವರಿನ್ನೂ ಕೊಟ್ಟಿಲ್ಲ ಅವರೆಲ್ಲ ಕೇವಲ ಭೂತಾರಾಧಕ ಮಟ್ಟದವರು. ಭೂತಗಳು ಧಾರಾಳ ಇವೆ ಭಕ್ತರಿಗೆ ಸಹಾಯ ಕೊಡಲಾಪವು. ಪಾತ್ರಿಗಳ ಮೂಲಕ ಬೆಂಕಿಕೆಂಡದ ಮೇಲೆ ನಡೆಯುವ ಮುಂತಾದ ಪವಾಡ ತೋರಿಸಿ ಒಲಿಸಿಕೊಂಡು ರಕ್ತಮಾಂಸ ಸೂರೆ ಪಡೆದು, ಅವರಿಗೂ ತಮ್ಮ ಸಹಾಯವನ್ನು ಕೊಡುತ್ತವೆ. ಈ ಭಕ್ತರಂತೆಯೇ ಈ ಭೂತಗಳಲ್ಲೂ ನೈತಿಕತೆಯ ಜ್ಞಾನಮಟ್ಟ ಕಡಿಮೆ. ಕೆಲವು ತೀರಾ ನೀಚತರದವು. ಕರ್ನಾಟಕದ ಬಂಜಾರರ ಭೂತ ಮಿಟ್ಟೆಭುಂಕ್ಯನು ತನ್ನವರಿಗೆ ದರೋಡೆಯಲ್ಲಿ ಬಹಳ ಸಹಾಯ ಮಾಡುತ್ತಿದ್ದ.

ನಮ್ಮ ದೇಶದ ಹೊಲೆಯರು ಚಂಡಾಳರು ಶ್ವಪಚರು ಕೇವಲ ಭೂತಾರಾಧಕರಾಗಿದ್ದು ಸನಾತನ ಧರ್ಮದ ಭಾಗದವರೇ ಅಲ್ಲ. ಆದ್ದರಿಂದ ನಮ್ಮ ಶಾಸ್ತ್ರದಲ್ಲಿ ಅವರಿಗೆ ಯಾವ ಧಾರ್ಮಿಕ ವಿಧಿ ನಿಷೇಧಗಳು, ವೃತ್ತಿಗಳು ಕೂಡಾ, ಹೇಳಲಿಲ್ಲ. ಶುಚಿತ್ವ, ಆಹಾರನಿಯಮ ಯಾವುದೂ ಇಲ್ಲದ ಅವರು ಬಹಳ ತಾಮಸಿಕರಿದ್ದು ಸಂಪರ್ಕಕ್ಕೆ ಯೋಗ್ಯರಲ್ಲ; ನಮ್ಮಿಂದ ದೂರ ವಾಸಿಸಬೇಕಾದವರು; ಅಂತ್ಯವಾಸಿಗಳು ಎಂದಿತು ಶಾಸ್ತ್ರ. ಆದ್ದರಿಂದ ಹರಿಜನರೆಂಬ ಗಾಂಧಿಯವರಿಟ್ಟ ಹೆಸರು ಏನೂ ಸರಿಯಲ್ಲ. ಏಕೆಂದರೆ ಧಾರ್ಮಿಕ ದೇವರಾದ ಶ್ರೀಹರಿಯ ಭಕ್ತರು ಅವರು ಯಾರೂ ಆಗಿರಲಿಲ್ಲ. ಅವರು ಕಾಡುಜನರಂತೆ ಗಿರಿಜನರಂತೆಯೂ ಅಲ್ಲ. ಬಹಳ ಪಾಪ ಮಾಡಿದವರಿಗೆ ನಾಯಿ, ಹಂದಿ, ಅಥವಾ ಚಂಡಾಳರ ಜನ್ಮ ಬರುತ್ತದೆ ಎಂದು ಛಾಂದೋಗ್ಯ ಉಪನಿಷತ್ತಲ್ಲಿ ಇದೆ. ಆದ್ದರಿಂದ ಅವರದ್ದು, ಸರ್ಕಾರ ಕೆಲವರಿಗೆ ನಿಯಮಿಸುವ ಕಠಿಣ ಜೈಲು ಶಿಕ್ಷೆಯಂತೆ. ಆಗ ಯಾವ ಹಕ್ಕೂ ಇಲ್ಲ ; ಇತರರಿಂದ ದೂರ ಇರಬೇಕಾಗುತ್ತದೆ (ದೇವರ ಈ ತರದ ಇತರ ಶಿಕ್ಷೆಗಳೆಂದರೆ ಪ್ರಾಯಶಃ ಕುಷ್ಟರೋಗಿ ಜನ್ಮ ಮುಂತಾದವು). ಮನುಸ್ಮೃತಿಯಲ್ಲಿ ಈ ಚಂಡಾಳರು ನರಾಧಮರು ಎಂದು ಹೇಳಲಿಕ್ಕೂ ಈ ಕಠಿಣ ಶಿಕ್ಷೆಯ ಜನ್ಮವೇ ಕಾರಣ. ಅಂತೂ ಅವರು ಸನಾತನ ಧರ್ಮದವರಲ್ಲ, ಭೂತಾರಾಧಕರು ಮಾತ್ರ. ಅವರು ಹಿಂದೂಗಳು ; ಎಂದರೆ

ಹಿಂದೂ ದೇಶದ ನಿವಾಸಿಗಳು ಸರಿ. ಆದರೆ ಹಿಂದೂ ಧರ್ಮದವರಲ್ಲ, ಯಾವ ಧರ್ಮದವರೂ ಅಲ್ಲ.

ಅತ್ಯಂತ ದೀರ್ಘಕಾಲದ ಹಿಂದೆ ಭೂಲೋಕದ ಬಹುಭಾಗಗಳಲ್ಲಿ (ಅಮೇರಿಕ, ಆಫ್ರಿಕ, ಆಸ್ಟ್ರೇಲಿಯ ಮುಂತಾದವಲ್ಲಿ) ಕೇವಲ ಈ ಪಶು–ಮಾನವ ಭೂತಾರಾಧಕರು ತುಂಬಿದ್ದಾಗಲೂ ಈ ದೇಶದಲ್ಲಿ ಮಾತ್ರವೇ ಅತ್ಯಧಿಕವಾಗಿ ಅತ್ಯಂತ ನಾಗರಿಕ ಧರ್ಮಿಷ್ಠ ಜನರು ಧಾರಾಳವಾಗಿ ಇದ್ದರು. ಆ ಕಾಲದ ಯಾಜ್ಞವಲ್ಕ್ಯರು, ವಸಿಷ್ಠರು, ಜನಕರು, ಶ್ರೀರಾಮ, ಸೀತೆ ಧಾರ್ಮಿಕ ಜೀವನದ ತುತ್ತ್ತುದಿಯ ಆದರ್ಶರು. ಬ್ರಾಹ್ಮಣರ ಧರ್ಮ ಆಗಲೇ ಪೂರ್ಣ ರೂಪ ಹೊಂದಿತ್ತು ! ಇಂದಿನವರೆಗೂ ಬಾಳಿಕೊಂಡು ಬಂದ ಸನಾತನ ಧರ್ಮದವರು ಧರ್ಮದ ಭಾಗದಲ್ಲಿ ಇತರ ದೇಶದವರಿಂದ ಕಲಿತು ತಿದ್ದಿಕೊಳ್ಳಲು ಏನೂ ಇಲ್ಲ. ಬ್ರಾಹ್ಮಣರು ಇದನ್ನು ನಿನಪಿನಲ್ಲಿಡಲಿ. ಇನ್ನು ಭೂಲೋಕದ ಮುಖ್ಯ ಧರ್ಮಗಳ ವಿಚಾರ ನೋಡುವ. ಅವಲ್ಲಿ ಮೂರು ಮಟ್ಟದ ಧರ್ಮಗಳಿವೆ.

**ಪ್ರಥಮ ಮಟ್ಟದ ಧರ್ಮಗಳು :** ಅವು ಹೇಳುತ್ತವೆ—ಕೇವಲ ಒಂದು ಜನ್ಮ, ತಮ್ಮದು ಮಾತ್ರ ದೇವರು ಮೆಚ್ಚುವ ಧರ್ಮ, ಇತರವು ಅಲ್ಲ. ಒಂದು ಜನ್ಮದ ಸಾಧನೆಗಾಗಿ ಅವಲ್ಲಿ ಚಿಕ್ಕ ಧರ್ಮ ಶಾಸ್ತ್ರಗಳಿವೆ. ಅವಲ್ಲಿ ಹೇಳಿದಂತೆ ತಮ್ಮವರಲ್ಲಿ ಪ್ರೀತಿ, ನ್ಯಾಯ, ಅಹಿಂಸೆ, ಪರೋಪಕಾರ ದಾನ ನಡೆಸಿದರೆ ದೇವರು ಮೆಚ್ಚುತ್ತಾನೆ. ಶಾಶ್ವತ ಸ್ವರ್ಗಸುಖ ಕೊಡುತ್ತಾನೆ. ಆದರೆ ತಮ್ಮವರಿಗೆ ಶಾಸ್ತ್ರವು ಖಂಡಿಸುವ ಹಿಂಸೆ, ಮೋಸ, ಕಳವು, ಅನ್ಯಾಯ, ಕೊಲೆ, ವ್ಯಭಿಚಾರ ಮಾಡಿದರೆ ಅದರಿಂದ ಶಾಶ್ವತ ನರಕಯಾತನೆಯ ಶಿಕ್ಷೆ ಬರಲಿಕ್ಕಿದೆ. ಇತರರಾದ ತಪ್ಪು ಧರ್ಮದವರನ್ನು ಮತಾಂತರ ಮಾಡಿದರೆ ದೇವರು ಮೆಚ್ಚುತ್ತಾನೆ. ಪ್ರಾಣಿಗಳಿಗೆ ಆತ್ಮ ಇಲ್ಲ; ಅವನ್ನು ಮನುಷ್ಯನ ಭೋಗಕ್ಕಾಗಿ ಮಾತ್ರ ದೇವರು ನಿರ್ಮಿಸಿದ್ದು, ಎನ್ನುತ್ತವೆ ಅವು. ಇವಕ್ಕೆ ಕ್ರಿಶ್ಚನ್, ಮುಸಲ್ಮಾನ್ ಧರ್ಮಗಳು ದೃಷ್ಟಾಂತಗಳು. ಒಂದರಲ್ಲಿ ಏಕಪತ್ನೀ ವ್ರತ ಹೇಳಿದರೆ ಮತ್ತೊಂದರಲ್ಲಿ ಬಹುಪತ್ನಿತ್ವ ಒಪ್ಪಲ್ಪಟ್ಟಿದೆ. ಒಂದು ಮದ್ಯ ನಿಷೇಧಿಸಿಯಾದರೆ ಮತ್ತೊಂದು ಅದನ್ನು ಒಪ್ಪುತ್ತದೆ. ಎಂದರೆ ಅವಲ್ಲಿ ಪೂರ್ಣಸಾಧನೆಗಳಿಲ್ಲ. ಮುಂಚೆ ಧರ್ಮವನ್ನು ಅಭ್ಯಸಿಸದಿದ್ದ ಕಾಡುಜನರನ್ನು ಇವು ಧಾರಾಳವಾಗಿ ಮತಾಂತರ ಮಾಡಿವೆ. ಎಂದರೆ ಇವು ಧಾರ್ಮಿಕ ಜೀವನಕ್ಕೆ ಪ್ರಾಥಮಿಕ ಶಾಲೆಗಳಂತೆ ಮಾತ್ರ.

ಸನಾತನ ಧರ್ಮದ ದೃಷ್ಟಿಯಲ್ಲಿ ಇವುಗಳಲ್ಲಿ ಅನೇಕ ಕೊರತೆಗಳು ತೋರುತ್ತವೆ. ಜೀವಾತ್ಮನಿಗೆ ನಿಜಕ್ಕೂ ಧಾರಾಳವಾಗಿ ಪುನರ್ಜನ್ಮಗಳಿವೆ ಎಂಬುದಕ್ಕೆ ಈಗ ಖಚಿತ ದೃಷ್ಟಾಂತಗಳು ಲೋಕದ ಎಲ್ಲ ಕಡೆಗಳಿಂದಲೂ ಬಂದಿವೆ. ಒಂದು ಜನ್ಮ ಮಾತ್ರ ಎನ್ನುವ ಜನರಲ್ಲಿಂದ ಕೂಡ ಅವು ಬಂದಿವೆ. ಕೇವಲ ಒಂದು ಜನ್ಮ ಎನ್ನುವುದು ವಿದ್ಯೆ ಕಲಿಯಲಿಕ್ಕೆ ಪ್ರಾಥಮಿಕ ಶಾಲೆ ಮಾತ್ರ ಸಾಕು ಎಂದಂತೆ, ಅದಕ್ಕೆ ತಕ್ಕ ಚಿಕ್ಕ ಧರ್ಮದ ಪುಸ್ತಕ, ಸ್ವಲ್ಪ ಧಾರ್ಮಿಕ ಸಾಧನೆಗಳು, ಅವಕ್ಕೆ ಫಲವಾಗಿ ಹೆಚ್ಚೆಂದರೆ ಸ್ವರ್ಗಸುಖ, ಹೇಳಿವೆ, ಈ ಸ್ವರ್ಗಸುಖವನ್ನು ಸನಾತನ ಧರ್ಮವೂ ಹೇಳಿದೆ. ಆದರೆ ಅದು ಇಲ್ಲಿಗಿಂತ ಹೆಚ್ಚಿನ ಭೋಗದ್ದು ಮಾತ್ರ ; ಪುನಃ ಇಲ್ಲಿ ಜನ್ಮ ಪಡೆಯಬೇಕಾಗುತ್ತದೆ ; ಆದ್ದರಿಂದ ಅದು ಅಲ್ಪತರದ್ದು ಎಂದಿದೆ.

ನಾವು ಒಂದು ಜೈಲಿಗೆ ಹೋದರೆ ಅಲ್ಲಿ ೬ ತಿಂಗಳ ಶಿಕ್ಷೆಯವರು, ೫ ವರ್ಷದ ಶಿಕ್ಷೆಯವರು, ೧೦ ವರ್ಷ ಶಿಕ್ಷೆ ಪಡೆದವರು ಮುಂತಾಗಿ ಅವರವರ ದುಷ್ಕಾರ್ಯಕ್ಕೆ ತಕ್ಕಮಟ್ಟದ ಶಿಕ್ಷೆ ಪಡೆದವರನ್ನು ಕಾಣುತ್ತೇವೆ, ಹೊರತು ಎಂಥ ತಪ್ಪೇ ಮಾಡಲಿ, ಕೇವಲ ಒಂದೇ ತರದ ಒಂದೇ ಅವಧಿಯ ಶಿಕ್ಷೆಯವ ರನ್ನಲ್ಲ. ಆದರೆ ಈ ಒಂದು ಜನ್ಮದ ಧರ್ಮಗಳ ಹೇಳಿಕೆ ಪುಣ್ಯಕಾರ್ಯಗಳಿಗಿಂತ ತಪ್ಪನ್ನೆ ಹೆಚ್ಚು ಮಾಡಿದವರಿಗೆ (ಅದು ಸ್ವಲ್ಪವಿರಲಿ, ಹೆಚ್ಚೇ ಇರಲಿ) ಶಾಶ್ವತ ನರಕ—ಎಂದರೆ ಎಂದೆಂದೂ, ಕೋಟಿ ಕೋಟಿ ಮಿಲಿಯಗಟ್ಟಲೆ ವರ್ಷಗಳಾದರೂ ಮುಗಿಯದ—ನರಕಶಿಕ್ಷೆಯಂತೆ! ಅಂತೆಯೇ ಪುಣ್ಯಾತ್ಮರಿಗೆ ನಿರಂತರ ಸ್ವರ್ಗಸುಖವಂತೆ. ಎಂದರೆ ಇವಕ್ಕೆ ಕಾರಣಯುಕ್ತ ನ್ಯಾಯದ ಕಲ್ಪನೆಯ ಹೊಂದಿಕೆಯೇ ಇಲ್ಲ! ಪುನರ್ಜನ್ಮ ಖಂಡಿತ ಇದೆಯಾದರೂ ಒಂದೇ ಜನ್ಮ ಎಂದು ಈ ಧರ್ಮಗಳು ಹೇಳುವುದು ಜೀವಾತ್ಮರು ತಮ್ಮ ಈ ಜನ್ಮ ಎಷ್ಟಕ್ಕೂ ಹಾಳುಮಾಡಿಕೊಳ್ಳದಿರಲಿ ಎಂದು ಬೆದರಿಸಲಿಕ್ಕೆ ಮಾತ್ರ ಇರಬೇಕು (ಮಕ್ಕಳಿಗೆ ನಾವು ಗುಮ್ಮ ಬರುತ್ತಾನೆ ಎಂದು ಹೆದರಿಸಿದಂತೆ)! ನಿಜಕ್ಕೂ ಒಂದೇ ಜನ್ಮವಾದರೆ ಅದನ್ನು ಪಡೆಯುವ ಜೀವಾತ್ಮರೆಲ್ಲರೂ ಹೊಸತಾದವರು, ಮುಂಚೆ ಏನೇನೂ ಪಾಪ ಪುಣ್ಯ ಮಾಡದವರು ಆಗಿರಲೇಬೇಕು. ಆದ್ದರಿಂದ ಈ ಎಲ್ಲ ತೀರಾ ಹೊಸ ಜೀವಾತ್ಮರಿಗೂ ಒಂದೇ ತರದ ಶಕ್ತಿಯೊಡನೆ ಜನ್ಮ ಕೊಟ್ಟು ಧರ್ಮ ಕಲಿಯಲು ಅಸ್ಪದ, ಆ ಧರ್ಮ ಅರ್ಥ ಮಾಡಿಕೊಳ್ಳುವ ಒಂದೇ ತರದ ಶಕ್ತಿ, ಬಾಳಲು ಆಯುಷ್ಯ ಕೊಟ್ಟು ಅನಂತರ ಅವರ ಕರ್ಮಗಳ ಫಲದ ತುಲನೆ ಮತ್ತು ಶಿಕ್ಷೆ ಬೇಡವೇ ? ಮತ್ತು ಕೋಟಿ

ಕೋಟಿ ಜೀವಾತ್ಮರು ಈ ಧರ್ಮಸ್ಥಾಪಕರ ಕಾಲಕ್ಕೂ ಮುಂಚೆಯೇ ಜನಿಸಿದವರ ಶಿಕ್ಷೆ ಹೇಗೆ ನ್ಯಾಯ? ಮತ್ತು ಅವರಲ್ಲಿ ಅರ್ಧ ಪಾಲು, ಮುಕ್ಕಾಲು ಪಾಲು, ಕಾಡು ಜನರಿದ್ದು ಧರ್ಮದ ಅರ್ಥಮಾಡಿಕೊಳ್ಳಲು ಬೇಕಾದ ಬುದ್ಧಿ ಮಟ್ಟ ದೇವರು ಕೊಡದಿರುವವರ ಗತಿ ಏನು? ಈ ಧರ್ಮಗಳು ನಿರ್ಮಾಣವಾದ ಅನಂತರವೂ ಬಹಳ ಕಾಲದವರೆಗೂ ಲೋಕದ ಎಷ್ಟೆಲ್ಲ ಭಾಗಗಳಲ್ಲಿ ಅವನ್ನು ತಿಳಿಸುವವರೇ ಇದ್ದಿರಲಿಲ್ಲವಲ್ಲ! ಹೊಸ ಜೀವಾತ್ಮರಾದರೆ ರಷ್ಯಾದಲ್ಲಿ, ಚೈನಾದಲ್ಲಿ ಜನ್ಮಪಡೆದ ಮಕ್ಕಳಿಗೆ ಧರ್ಮವನ್ನು ಕಲಿಯಲು ಆಸ್ಪದವೇ ಇರದ್ದು ಕೋಟಿ ಕೋಟಿ ಜೀವಾತ್ಮರದ್ದು ತಪ್ಪೇ ಅದು? ಅಲ್ಲದೆ, ಮೂಢನಾಗಿ ಜನಿಸಿದವ, ಹುಟ್ಟಿ ಬುದ್ಧಿ ಬರುವ ಮುಂಚೆ ಮೃತನಾದವ, ಕೇವಲ ಮೂರ್ಖರ ಮನೆಯಲ್ಲಿ ಜನಿಸಿದವ, ದರೋಡೆಕೋರರ ಮಕ್ಕಳು, ಉತ್ತಮ ಜೀವನಕ್ಕೆ ಮೇಲ್ಪಂಗ್ತಿಯೇ ಇಲ್ಲದವರಾದುದು ಅವರ ತಪ್ಪೇ? ಒಂದು ಮಾನವ ಜನ್ಮವೆಂಬುದು ಅಪಾರ ಕಾಲದ ದೃಷ್ಟಿಯಲ್ಲಿ ತೀರಾ ಚಿಕ್ಕದು. ಅದರಲ್ಲಿ ಮಾಡಿದತಪ್ಪಿಗೆ ನರಕ ಸೇರಿ ಲಕ್ಷಗಟ್ಟಲೆವರ್ಷ ನರಕಯಾತನೆ ಅನುಭವಿಸಿ ಕೃಪಾಮಯನಾದ ದೇವರೇ, ಕ್ಷಮಿಸು, ಇನ್ನೊಂದು ಸಂದರ್ಭ ಕೊಡು, ಖಂಡಿತ ತಪ್ಪುಮಾಡೆನು ಎಂದು ಬೇಡಿಕೊಂಡವನಿಗೂ ಕರುಣೆ ತೋರಲಾರದ ದೇವರು, ದೇವರೇ? ಇವಕ್ಕೆಲ್ಲ ಒಂದು ಜನ್ಮ ಮಾತ್ರ ಎನ್ನುವ ಧರ್ಮಗಳಲ್ಲಿ ಉತ್ತರವಿಲ್ಲ.

**ಎರಡನೇ ಮಟ್ಟದ ಧರ್ಮಗಳು :** ಇವು ಜೀವಾತ್ಮನಿಗೆ ನಿಜಕ್ಕೂ ಧಾರಾಳವಾಗಿ ಇರುವ ಪುನರ್ಜನ್ಮಗಳನ್ನು ಒಪ್ಪುತ್ತವೆ. ಅದಕ್ಕೆ ತಳಹದಿಯಾಗಿ ಕರ್ಮಫಲದ ತತ್ವ ಒಪ್ಪುತ್ತವೆ. ತಮ್ಮ ಶಾಸ್ತ್ರ ಹೇಳುವ ಒಳ್ಳೆಯ ಕರ್ಮಕ್ಕೆ ಒಳ್ಳೆಯ ಫಲ, ಕೆಟ್ಟದ್ದಕ್ಕೆ ಕೆಟ್ಟ ಫಲ, ಶಿಕ್ಷೆ ಇದ್ದೇ ಇದೆ. ಪ್ರಾಣಿಗಳಲ್ಲಿ ಸಹ ಜೀವಾತ್ಮರಿದ್ದಾರೆ. ಆದ್ದರಿಂದ ಅವುಗಳಲ್ಲಿಯೂ ಕರುಣೆ, ದಯೆ ತೋರಿಸಬೇಕು. ಉತ್ತಮ ಶಾಸ್ತ್ರೋಕ್ತ ಜೀವನ ನಡೆಸುತ್ತ ಹೋದ ಜೀವಾತ್ಮನಿಗೆ ತಂತಮ್ಮದಿಯ ಹಿರಿಮೆಯ ಸ್ಥಾನವಾಗಿ ೨೪ ಬುದ್ಧರ ೨೪ ತೀರ್ಥಂಕರರ ಮಟ್ಟ ಸಿಕ್ಕುತ್ತದೆ. ಇತರ ಧರ್ಮದವರೂ ಜೀವಾತ್ಮರೇ. ಅವರಿಗೆ ಅನ್ಯಾಯ, ಮೋಸ, ಕೊಲೆ ಮಾಡುವುದು ಸಲ್ಲದು. ಈ ಧರ್ಮದವರು ಮುಂಚೆ ತಮ್ಮ ಧರ್ಮವನ್ನು ವಿವರಿಸಿ ಬೋಧಿಸಿ ಮಾತ್ರ ಮತಾಂತರ ಮಾಡಿದ್ದುಂಟೇ ಹೊರತು ಅನ್ಯಾಯದ, ಬಲಾತ್ಕಾರದ, ಲಂಚದ ದಾರಿಗಳಿಂದಲ್ಲ. ಈ ಧರ್ಮದವರು ಅಪಾರ ಸಂಖ್ಯೆಯ ಜನ್ಮಗಳನ್ನು ಜೀವಾತ್ಮ

ನಿಗೆ ಒಪ್ಪುತ್ತಾರಾದರೂ, ಜನ್ಮಗಳ ಕ್ರಮಬದ್ಧ ಉಪಯೋಗದ ವ್ಯವಸ್ಥೆ ಮಾಡಿಕೊಂಡಿಲ್ಲ. ಅವರದ್ದು ಒಂದನೇ ಕ್ಲಾಸಿಂದ ಎಂ.ಎ.ವರೆಗೆ ಕಲಿಯುವ ಹುಡುಗರನ್ನೆಲ್ಲ ಒಂದೇ ಕ್ಲಾಸಲ್ಲಿ, ಹಾಲಲ್ಲಿ ಹಾಕಿ ಇಟ್ಟಂತೆ. ಆ ಗುಲ್ಲು, ವಿನೋದ, ಕೂಗುಗಳಲ್ಲಿ ಎಂ.ಎ. ಓದುವ ಹುಡುಗ ಕಲಿಯುವುದು ತೀರಾ ಅಸಾಧ್ಯ.

**ಮೂರನೆ ಮಟ್ಟದ ಸನಾತನ ಧರ್ಮ :** ಈ ಧರ್ಮದಲ್ಲಿ ಮಾತ್ರವೇ ಜೀವಾತ್ಮನಿಗೆ ತಾನು ಹೊರಟು ಬಂದಿದ್ದ ಪರಮಾತ್ಮನಲ್ಲಿ ಪುನಃ ಐಕ್ಯವಾಗುವ ಅದ್ವಿತೀಯ ಹಿರಿಮೆಯ ಮುಕ್ತಿ ಹೇಳಿದೆ. ಅದಕ್ಕಿಂತ ಹೆಚ್ಚಿನ ಧಾರ್ಮಿಕ ತರಬೇತಿ ಇರಲಾರದಷ್ಟೆ! ಆದರೆ ಆ ಸಾಧನೆಯು ಅತ್ಯಂತ ಕಷ್ಟತರದ್ದು; ಅತೀ ದೀರ್ಘಕಾಲದ ಸಾಧನೆ ಬೇಕಾದುದು, ಅಂತಹ ಬಹಳ ದೀರ್ಘಕಾಲ ಬೇಕಾಗುವ ಯಾವುದೇ ತರಬೇತಿಗೇ ಆಗಲಿ, ಇರುವ ಅತ್ಯುಪಯುಕ್ತವಾದ ಕ್ರಮವೆಂದರೆ ವಿದ್ಯಾರ್ಥಿಗಳನ್ನು ಅವರ ಹಿಂದಿನ ತರಬೇತಿಯ ಸಮರ್ಥತೆಗೆ ತಕ್ಕಂತೆ ವಿಂಗಡಿಸಿ, ವರ್ಗಗಳಾಗಿ ಮಾಡುವುದು, ಕೆಳವರ್ಗದ ಪಾಠ ಮುಗಿಸಿದವರಿಗೆ ಹೆಚ್ಚು ಸಮರ್ಥತೆ ಬೇಕಾಗುವ, ಹೆಚ್ಚು ಶ್ರಮದ ವ್ಯಾಸಂಗ ಬೇಕಾಗುವ ಮೇಲಿನ ವರ್ಗಕ್ಕೆ ಏರಿಸುವುದು, ಅಲ್ಲಿ ಹಿಂದಿಗಿಂತ ಹೆಚ್ಚಿನ ಕಷ್ಟದ ಅಭ್ಯಾಸಗಳಿರುವುದು, ಅಂತೆಯೇ ತುತ್ತುದಿಯವರೆಗೆ ಮೆಟ್ಟಿಲು ಮೆಟ್ಟಿಲಾಗಿ ಅವರ ಧಾರ್ಮಿಕ ಶಕ್ತಿ ಏರಿಸುತ್ತ ಹೋಗುವುದು ಎಂಬುದು ಎಲ್ಲಾ ದೇಶಗಳ ವಿಶ್ವವಿದ್ಯಾಲಯಗಳ ಕ್ರಮವೇ ಆಗಿದೆ. ವಿಶ್ವವಿದ್ಯಾಲಯಗಳ ಆರಂಭದ ಮಟ್ಟವಾಗಿ ಪ್ರೈಮರಿ ಶಾಲೆಗಳಿರುವಂತೆ ಸನಾತನ ಧರ್ಮದಲ್ಲಿ ಆರಂಭಕ್ಕೆ ಶೂದ್ರ ವರ್ಣವಿದೆ. ಅದರೊಳಗೆ ಅಂತ್ಯಜ ಎಂಬ ಕೆಳ ಶೂದ್ರರು, ಹತ್ತಿರದವರೆಂಬ ಉತ್ತಮ ಶೂದ್ರರು ಇದ್ದಾರೆ. ಶೂದ್ರರು ಕಲಿಯಬೇಕಾದ್ದುದು ಮುಖ್ಯವಾಗಿ ತಮ್ಮ ತಮೋಗುಣದ ಆಲಸ್ಯ ತ್ಯಜಿಸಲಿಕ್ಕೆ, ಉತ್ತಮ ಧ್ಯೇಯಕ್ಕೆ ಅಗತ್ಯವಾದ ಚಟುವಟಿಕೆ ಬೆಳೆಸಲಿಕ್ಕೆ. ಮೇಲು ವರ್ಣದವರ ಸೇವೆ ಮಾಡುತ್ತ ಇದನ್ನು ಅವರು ಕಲಿಯುತ್ತಾರೆ.

ವಿಶ್ವವಿದ್ಯಾಲಯದ ಎರಡನೆ ಮಟ್ಟದ್ದಾಗಿ ಹೈಸ್ಕೂಲುಗಳು ಇರುವಂತೆ ಸನಾತನ ಧರ್ಮದ ವೈಶ್ಯ ವರ್ಣದಲ್ಲಿ ಜನ್ಮ ಪಡೆದಿರುವವರು ತುಂಬಾ ಚಟುವಟಿಕೆಯಿಂದ ದೇಹದ ಭೋಗಕ್ಕೆ ಬೇಕಾದ ದ್ರವ್ಯ ಸಂಪಾದನೆಯೆಂಬ ಗುರಿ ಇಟ್ಟುಕೊಂಡು ಶ್ರಮಿಸುತ್ತಾರೆ. ಆದರೆ ಧರ್ಮವು ಅವರಿಗೆ "ಮರಣದ ಆಚೆಯೂ ಬಾಳು ಇದೆ, ಆಗಲೂ ಸುಖ ಬೇಡವೇ? ಧಾರಾಳವಾಗಿ ದಾನ

ಮಾಡುವ ಅಭ್ಯಾಸವನ್ನೂ ಕಲಿತುಕೊಳ್ಳಿರಿ" ಎಂದು ಮುಂದಿನ ಅವರ ಸುಖಕ್ಕಾಗಿ ಬೋಧಿಸಿ ಧರ್ಮಿಷ್ಟರನ್ನಾಗಿ ಮಾಡುತ್ತದೆ.

ವಿದ್ಯಾಪೀಠದ ಮತ್ತೂ ಮುಂದಿನ ಮೆಟ್ಟಲಾಗಿ ಪಿ.ಯು.ಸಿ. ಇರುವಂತೆ ಸನಾತನ ಧರ್ಮದ ಮೂರನೆ ವರ್ಣವಾಗಿ ಕ್ಷತ್ರಿಯರು ಇದ್ದಾರೆ. ಅವರು ವೈಶ್ಯ ಜನ್ಮದಲ್ಲಿ ಪಡೆದ ರಜೋಗುಣದ ಚಟುವಟಿಕೆಗಳಿಗೆ ಸುಲಭತರದ್ದಾದ ಧಾರ್ಮಿಕ ಪಾಠವಾದ ದಾನಗಳಲ್ಲದೆ ಕ್ಷತ್ರಿಯ ಜನ್ಮದಲ್ಲಿ ಹೊಂದ್ದಿಯ ಅಧಿಕಾರ ಬಲದಿಂದ ಪ್ರಜೆಗಳ ಆಸ್ತಿ, ಹಣ, ಸ್ತ್ರೀಯರನ್ನೂ ಸೆಳೆಯಲು ಆಸ್ಪದ, ಆಕರ್ಷಣೆ, ಇದ್ದಾಗಲೂ ಅವನ್ನು ಬಲವಾದ ಧರ್ಮದ ಶಿಸ್ತಿಂದ ತಡೆಗಟ್ಟುವ ಶಕ್ತಿ ಬೆಳೆಸುವುದು, ಪ್ರಜೆಗಳನ್ನು ಮಕ್ಕಳಂತೆ ಧರ್ಮದಿಂದ ಆಳುವುದು, ಅಗತ್ಯ ಬಿದ್ದಾಗ ಅವರ ರಕ್ಷಣೆಗಾಗಿ ಯುದ್ಧದಲ್ಲಿ ದೇಹ ತ್ಯಾಗ ಮಾಡುವುದು, ಮುಖ್ಯವಾಗಿ ಧಾರಾಳವಾದ ಧಾರ್ಮಿಕ ಶಿಸ್ತಿಂದ, ತ್ಯಾಗದಿಂದ ಮಾತ್ರ ಗಳಿಸಬೇಕಾದ ಕೀರ್ತಿ ಶರೀರವೆಂಬ ಧ್ಯೇಯ ಸಾಧಿಸಲ್ಪಡಬೇಕಾಗಿದೆ (ಈಗಿನ ಸೆಕ್ಯುಲರ್ ಸರ್ಕಾರದ ಬಹುಮಟ್ಟಿನ ರಾಜಕೀಯ ಮುಖಂಡರ ಧ್ಯೇಯ ಇದಕ್ಕೆ ಸರೀ ವಿರುದ್ಧ ತರದ್ದು ಮಾತ್ರ! ಅವರಿಗೆ ಹಣ ಭೋಗ ಕೀರ್ತಿ ಅಧಿಕಾರ ಎಲ್ಲ ಬೇಕು ! ತ್ಯಾಗ ಗೊತ್ತಿಲ್ಲ).

ವಿಶ್ವವಿದ್ಯಾಪೀಠದ ತುತ್ತುದಿಯಾದ ಕಾಲೇಜಿನ ಬಿ.ಎ., ಎಂ.ಎ. ಕ್ಲಾಸಿನಂತೆ ಸನಾತನ ಧರ್ಮದ ತುದಿಯ ಮೆಟ್ಟಲಾಗಿ ಬ್ರಾಹ್ಮಣ ಜನ್ಮವಿದೆ. ಕ್ಷತ್ರಿಯನು ಎಲ್ಲೋ ಅಪರೂಪಕ್ಕೆ ಯುದ್ಧದಲ್ಲಿ ದೇಹ ತ್ಯಾಗ ಮಾಡಬೇಕಾದರೆ ಬ್ರಾಹ್ಮಣನು ಆಧ್ಯಾತ್ಮ ಸಾಧನೆಯಲ್ಲಿ ತನ್ನ ದೇಹವನ್ನು ಸವೆಯುತ್ತಲೇ ಹೋಗಬೇಕು. ಏಕೆಂದರೆ ಅವನು ಈಗ ಮುಕ್ತಿಯ ಗುರಿ ಮುಟ್ಟಲಿಕ್ಕೆ ಅತಿ ಸಮೀಪವಿದ್ದಾನೆ. ಅವ ಎಂ.ಎ. ವಿದ್ಯಾರ್ಥಿಯಂತೆ ಯಾವ ವಿನೋದಕ್ಕೂ ಕಾಲ ಹಾಳು ಮಾಡದೆ ಕೇವಲ ತನ್ನ ಅಧ್ಯಯನದಲ್ಲಿ ಮುಳುಗಿರುವವ. ಆಗ ಅವ ಮುಕ್ತಿಯ ಪರಮಾನಂದದ ಗುರಿ ಸಾಧಿಸಲಾಪನು ಎನ್ನುತ್ತದೆ ಶಾಸ್ತ್ರ.

ಇತರ ಧರ್ಮಗಳಲ್ಲಿಯೂ ಅತ್ಯಂತ ಮೇಲ್ಮಟ್ಟದ ಧಾರ್ಮಿಕ ಸಾಧಕರು (ತೀರಾ ತೀರಾ ಅಪರೂಪಕ್ಕೆ) ಜನಿಸಿ ಆ ಧರ್ಮಗಳಲ್ಲಿ ಜನರಿಗೆ ಶ್ರದ್ಧೆ ಹೆಚ್ಚಿಸಿದ್ದುಂಟು (ದೃಷ್ಟಾಂತಕ್ಕೆ ಕೆಥೊಲಿಕ್ ಧರ್ಮದಲ್ಲಿ ಅಸೀಸಿಯ ಪ್ರೆನ್ಸಿಸ್). ಆದರೆ ಆ ಧರ್ಮಗಳಲ್ಲಿ ಆ ಮಟ್ಟಕ್ಕೇರಲು ಬೇಕಾದ ಅಪಾರಮಟ್ಟದ ಸಾಧನಾ ಕ್ರಮಗಳ ವಿವರವೇ ಇಲ್ಲ. ಆದ್ದರಿಂದ ಆ ಜೀವಾತ್ಮರನ್ನು ಹಿಂದೆ ಸನಾತನ ಧರ್ಮದಲ್ಲಿ ತರಬೇತು ಹೊಂದಿಸಿ ದೇವರು ಅಲ್ಲಿ ಕಳುಹಿಸಿದ್ದಿರಬೇಕು.

ಮಾತ್ರವಲ್ಲ, ಸನಾತನಧರ್ಮ ಮಾತ್ರವೇ ಜನರನ್ನು ವರ್ಣದ ತಂಡತಂಡಗಳಾಗಿ ತರಬೇತುಮಾಡುತ್ತ ದೊಡ್ಡಮಟ್ಟದಲ್ಲಿ ತುತ್ತತುದಿಗೆ ಏರಿಸುತ್ತ ಬಂದ ವಿಶೇಷ ಶಕ್ತಿತೋರಿಸಿದೆ. ಲೌಕಿಕವಿದ್ಯೆಯ ಭಾಗದಲ್ಲಿ ಮುಂಚೆ ತೀರಾತೀರಾ ಅಪರೂಪಕ್ಕೆ ಮಾತ್ರ ವಿಶ್ವವಿದ್ಯಾನಿಲಯಗಳಿದ್ದಾಗ, ಅಲ್ಲಿ ಸುತ್ತಲು ಮಾತ್ರ ಅನೇಕ ಎಂ.ಎ., ಎಂ.ಬಿ.ಬಿ.ಎಸ್. ಮುಂತಾದ ಪದವೀಧರರಿರುತ್ತಿದ್ದರೇ ಹೊರತು, ಕೇವಲ ಪ್ರಾಥಮಿಕ ಶಾಲೆಗಳಲ್ಲಿದ್ದಲ್ಲಿ ಎಂದೂ ಅಲ್ಲ. ಅಂತೆಯೇ ಕೇವಲ ನಮ್ಮ ದೇಶದಲ್ಲಿ ಮಾತ್ರವೇ ನಮ್ಮ ಧಾರ್ಮಿಕ ವಿಶ್ವವಿದ್ಯಾಲಯವಾದ ಸನಾತನ ಧರ್ಮವಿದ್ದುದರಿಂದಲೇ ಈ ದೇಶದಲ್ಲಿ ಅಪಾರ ಸಂಖ್ಯೆಯ ಸಂತರು ಪರಮ ಹಂಸರು, ಮಹಾಋಷಿಗಳು ಉಂಟಾಗುತ್ತಿದ್ದರು. ಪ್ರತಿ ಶತಮಾನದಲ್ಲೂ ಹಾಗೆ ಉಂಟಾದವರು ಇಡೀ ಭೂಲೋಕದಲ್ಲೇ ಅದ್ವಿತೀಯರಾಗಿದ್ದರು, ದೃಷ್ಟಾಂತಕ್ಕೆ ಕೇವಲ ಕಳೆದ ೧೦೦ ವರ್ಷಗಳಲ್ಲಿನ ನಮ್ಮಲ್ಲಿ ಪರಮಹಂಸ ಶ್ರೀ ರಾಮಕೃಷ್ಣರು, ವಿವೇಕಾನಂದರು, ಪರಮಹಂಸ ಯೋಗಾನಂದರು, ರಮಣ ಮಹಾಋಷಿಗಳು, ಅರಬಿಂದೋ ಅವರು, ತ್ರೈಲಿಂಗಸ್ವಾಮಿಯವರು, ಲೋಕದ ಜನರನ್ನೆಲ್ಲ ಬೆರಗು ಮಾಡಿದ ಎಣೆ ಇಲ್ಲದವರು. ಹೀಗೆ ತನ್ನ ಫಲದ ರುಜುವಾತಿಂದ ನಮ್ಮ ಧರ್ಮ ಅದ್ವಿತೀಯ ಹಿರಿಮೆ ತೋರಿಸುತ್ತ ಬಂದಿದೆ. ಆದ್ದರಿಂದ ಭಾಗವತ ಹೇಳುತ್ತದೆ, ಇತರ ಧರ್ಮದ ಮಾನವರಿಗಿಂತ ಸನಾತನ ಧರ್ಮದ ವರ್ಣದವರು ಉತ್ತಮರು. ಅವರಲ್ಲಿ ಬ್ರಾಹ್ಮಣ ಅತ್ಯುತ್ತಮ ಎಂದು (೩.೨೯.೩೧) ಮನುಸ್ಮೃತಿಯಲ್ಲಿ ಹೇಳಿದೆ.

ಸಹಿ ಧರ್ಮಾರ್ಥ ಮುತ್ಪನ್ನೋ (೧.೯೭), ಎಂದರೆ ಬ್ರಾಹ್ಮಣನು ಧರ್ಮವನ್ನಾಚರಿಸಲಿಕ್ಕಾಗಿಯೇ ಜನ್ಮಪಡೆದವ. ಆದ್ದರಿಂದ ಅವ ಎಂ.ಎ.ಯ ತುದೀ ಕ್ಲಾಸಿನಲ್ಲಿರುವವನಂತೆ; ಯಾತ್ರಿಕನು ಕಾಶಿಗೆ ಅತಿ ಹತ್ತಿರದ ಸ್ಟೇಶನ್ನನ್ನು ಮುಟ್ಟಿದವನಂತೆ. ಅಂಥವರು ಕಠಿಣ ಶ್ರಮದಿಂದ ಸಾಧನೆ ಪೂರೈಸದೆ ತಮ್ಮ ಸಮಯ ವ್ಯರ್ಥ ಮಾಡುವುದೆಂದರೆ ಅತ್ಯಂತ ಮೂರ್ಖತನವಾಗದೇ ? ಭಾಗವತ ಹೇಳುತ್ತದೆ (೧೧,೧೭.೪೨).

ಬ್ರಾಹ್ಮಣಸ್ಯ ಹಿ ದೇಹೋಽಯಂ ಕ್ಷುದ್ರಕಾಮಾಯ ನೇಷ್ಯತೇ ।
ಕೃಚ್ಛ್ರಾಯ ತಪಸೇ ಚೇಹ ಪ್ರೇತ್ಯಾನಂತ ಸುಖಾಯಚ ॥

ಎಂದರೆ ಬ್ರಾಹ್ಮಣ ಜನ್ಮವು ಚಿಕ್ಕಪುಟ್ಟ ಸುಖಗಳಲ್ಲಿ ಕಳೆಯಲು ಉಂಟಾದದ್ದಲ್ಲ. ಈ ಲೋಕದಲ್ಲಿ ಬಾಳಿಕೊಂಡಿರುವಾಗ ತಪಸ್ಸಿನಲ್ಲಿಯೂ ಆಮೇಲೆ ಅನಂತವಾದ ಮೋಕ್ಷ ಸುಖ ಪಡೆಯಲಿಕ್ಕೂ ಅದು ಕೊಡಲ್ಪಟ್ಟಿದೆ !

ಮಾತ್ರವಲ್ಲ ಈ ಸಾಧನಾ ಜೀವನದಲ್ಲಿ ಬ್ರಾಹ್ಮಣರ ಮೇಲೆ ಭಗವಂತನು ಮತ್ತೊಂದು ಮಹತ್ವದ ಹೊಣೆಯನ್ನೂ ಹಾಕಿದ್ದಾನೆ. ಸಮಾಜದ ಗುರು ಸ್ಥಾನವನ್ನು ಅವರಿಗೆ ಕೊಟ್ಟಿದ್ದಾನೆ. ಜನರಲ್ಲಿ ಅತಿಹೆಚ್ಚು ಬಲ್ಲವರೇ ಅತ್ಯುತ್ತಮ ಉಪಾಧ್ಯಾಯರಾದಾರು, ಅಪಾರ ಶಿಷ್ಯವರ್ಗವನ್ನು ಉತ್ತಮ ರಾಗಿ ಮಾಡ್ಯಾರು. ಅದರ ಬದಲಿಗೆ (ಈ ಕಾಲದ ಸರ್ಕಾರದ ಗುರಿಯಂತೆ) ಅಲ್ಪರು, ಕುಡುಕರು, ತಮಸ್ಸಿಂದ ತುಂಬಿದವರೇ ಅಧಿಕ ಸಂಖ್ಯೆಯ ಗುರು ಗಳಾದರೆ ಶಿಷ್ಯವರ್ಗ ಹಾಳಾಗದಿರದು. ದೇಶದ ಅಧಃಪತನ ಖಂಡಿತ. ಶಾಸ್ತ್ರದ ನೂರನೆ ನೂರಂಶದ ಅಭ್ಯಾಸ ಬ್ರಾಹ್ಮಣನಿಗೆ ವಿಧಿಸಿದೆ. ಕ್ಷತ್ರಿಯನಿಗೆ ಅದರ ಎಷ್ಟೋ ಕಡಿಮೆ ಅಂಶ, ವೈಶ್ಯನಿಗೆ ಮತ್ತೂ ಕಡಿಮೆ ಅಂಶ ಶೂದ್ರನಿಗೆ ಅತಿಚಿಕ್ಕ ಅಂಶಮಾತ್ರ ವಿಧಿಸಲ್ಪಟ್ಟಿದೆ. ಆದ್ದರಿಂದ ಸಮಾಜಕ್ಕೆ ಬ್ರಾಹ್ಮಣರೇ ಗುರುವಾಗುವುದು ಮಾತ್ರ ಶ್ರೇಯಸ್ಕರ. ಮನು ಹೇಳುತ್ತಾನೆ (೧೦,೧).

(ತ್ರಯೋವರ್ಣಾಃ) ಪ್ರಬ್ರೂಯಾದ್ಬ್ರಾಹ್ಮಣಸ್ತ್ವೇಷಾಂ ನೇತರಾವಿತಿ ನಿಶ್ಚಯಃ ॥

ಎಂದರೆ ಬ್ರಾಹ್ಮಣನು ಮಾತ್ರವೇ ದ್ವಿಜರಿಗೆ ಧರ್ಮ ಉಪದೇಶಿಸ ತಕ್ಕದ್ದು ; ಕ್ಷತ್ರಿಯರು ವೈಶ್ಯರು ಅಲ್ಲ. ಮಹಾಭಾರತದಲ್ಲಿ ಹೇಳಿದೆ.

ಚಾತುರ್ವರ್ಣ್ಯಂ ಚತುರಾಶ್ರಾಮ್ಯ ಧರ್ಮಾಃ ।
ಸರ್ವೇಸಸ್ಯ ಬ್ರಾಹ್ಮಣಾನಾಂ ವಿನಾಶಾತ್ ॥

ಬ್ರಾಹ್ಮಣ್ಯವನ್ನು ನಾಶಮಾಡಿದರೆ ಉಳಿದ ವರ್ಣಗಳೂ ನಾಶವಾಗ ದಿರವು.

ಬ್ರಾಹ್ಮಣೇಷು ಪ್ರಮೂಢೇಷು ಧರ್ಮೋ ವಿಪ್ರಣಶೇದ್ಧ್ರುವಂ ॥

ಧರ್ಮೋಪದೇಶಕರಾದ ಬ್ರಾಹ್ಮಣರು ಮೂಢರಾದರೆ ಧರ್ಮವು ನಿಶ್ಚಯವಾಗಿಯೂ ನಶಿಸಿ ಹೋಗುವುದು. ಶ್ರೀ ಆದಿಶಂಕರಾಚಾರ್ಯರು ಭಗವದ್ಗೀತಾ ಭಾಷ್ಯದಲ್ಲಿ ಹೇಳಿದ್ದಾರೆ.

ಬ್ರಾಹ್ಮಣತ್ವಸ್ಯಹಿ ರಕ್ಷಣೇನ ರಕ್ಷಿತಃಸ್ಯಾತ್ ವೈದಿಕೋ ಧರ್ಮಃ ।
ತದಧೀನ ತ್ವಾತ್ ವರ್ಣಾಶ್ರಮ ಭೇದಾನಾಂ ॥

ಬ್ರಾಹ್ಮಣನನ್ನು ಕಾಪಾಡಿದರೇನೆ ವೈದಿಕಧರ್ಮವನ್ನು ಕಾಪಾಡಿದಂತಾ ಗುತ್ತದೆ ; ಏಕೆಂದರೆ ವರ್ಣಾಶ್ರಮ ಭೇದಗಳು ಅದರ ಅಧೀನವಾಗಿವೆ.

ಪುರುಷಸೂಕ್ತದಲ್ಲಿ ಬ್ರಾಹ್ಮಣರು ಪರಮಾತ್ಮನ ಮುಖದಿಂದ ಉಂಟಾ ದರು ಎಂದಿದೆ ; ಕ್ಷತ್ರಿಯರು ತೋಳುಗಳಿಂದ, ವೈಶ್ಯರು ಸೊಂಟದಿಂದ ಮತ್ತು ಶೂದ್ರರು ಪಾದದಿಂದ. ಆದ್ದರಿಂದ ಬ್ರಾಹ್ಮಣರು ಧರ್ಮ ಬೋಧಿಸಲಿಕೆ ಉಂಟಾದವರು, ಸಮಾಜದ ಗುರುಗಳಾಗಬೇಕಾದವರು.

ಭಗವಂತನು ಮಾನವಜನ್ಮಗಳ ಅತ್ಯಂತ ಹಿರಿಮೆಗೆ ಧರ್ಮದ ಸಾಧನೆಯನ್ನು ಗುರಿಯಾಗಿ ಮಾಡಿ, ಆ ಸಾಧನೆಗೆ ಬೇಕಾದ ವೇದ, ಧರ್ಮಗ್ರಂಥಗಳನ್ನು ಉಂಟುಮಾಡಿ, ತನ್ನಿಂದ ಹೊರಟಿದ್ದ ಆತ್ಮರು ಪುನಃ ತನ್ನನ್ನು ಹೊಂದಲಿ ಎಂದು ಆಶಿಸುತ್ತಾನೆ. ಆ ಕಾರ್ಯಕ್ಕೆ ಸಹಾಯ ಮಾಡುವ ಬ್ರಾಹ್ಮಣ ವರ್ಗವು ಅತ್ಯಂತ ಹಿರಿಮೆಯುದ್ದಾದ ಗಾಯತ್ರೀಮಂತ್ರವನ್ನು, ಗುರುವನ್ನು ಹುಡುಕುತ್ತ ಹೋಗದೆಯೇ ಉಪನಯನದ ಮೂಲಕ ಪಡೆದಿರುವುದು ತನ್ನ ಧಾರ್ಮಿಕ ಹಿರಿಮೆ ಧಾರಾಳವಾಗಿ ಬೆಳೆಸಿ, ಇತರರಿಗೂ ಧರ್ಮ ಬೋಧಿಸಲಿ ಎಂದು. ಈ ಎಲ್ಲ ಕಾರಣಗಳಿಂದ ಧರ್ಮವನ್ನು ಪೂರ್ಣರೂಪದಲ್ಲಿ ಅಭ್ಯಸಿಸುವ ಬ್ರಾಹ್ಮಣರು ಭಗವಂತನಿಗೆ ಬಹಳ ಪ್ರಿಯರು, ದೇವರು ಬ್ರಾಹ್ಮಣಪ್ರಿಯ ಎಂದೂ ಶಾಸ್ತ್ರ ಹಲವು ಕಡೆಗಳಲ್ಲಿ ಸಾರಿದೆ!

ಆದ್ದರಿಂದ ಬ್ರಾಹ್ಮಣಜನ್ಮವನ್ನು ದೇವರಿಂದ ಪಡೆದವ ತನ್ನ ಹಿರಿಮೆ ಅರಿಯದಿರುವುದು, ಅದರ ಮುಖ್ಯ ಉದ್ದೇಶ ತಿಳಿಯದಿರುವುದು, ತನ್ನ ಬ್ರಾಹ್ಮಣ್ಯ ಬಾಳಿಸಿಕೊಳ್ಳದಿರುವುದು ಇತರ ವರ್ಣದವರ ಧಾರ್ಮಿಕ ಬಾಳಿಗೆ ಸಹಾಯ ಮಾಡದಿರುವುದು, ದೇವರ ಉದ್ದೇಶ ಮತ್ತು ಕ್ರಮಗಳನ್ನು ತಾತ್ಸಾರಿಸಿದಂತೆಯೇ ಸರಿ. ಹೀಗೆ ತನ್ನ ಧರ್ಮ ನಾಶಮಾಡಿಕೊಳ್ಳುವವನನ್ನು ಧರ್ಮವು ನಾಶಮಾಡುತ್ತದೆ (ಮನು ೮,೧೫).

ಸನಾತನ ಧರ್ಮದ ಅದ್ವಿತೀಯ ಹಿರಿಮೆಯನ್ನು ಇನ್ನೊಂದು ರೀತಿಯಲ್ಲಿಯೂ ಕಾಣಬಹುದು. ಎಲ್ಲ ಧರ್ಮಗಳೂ ದೇವರು ಒಬ್ಬನೇ, ಅವನೇ ನಮ್ಮನ್ನೂ, ಎಲ್ಲರನ್ನೂ ಸೃಷ್ಟಿಸಿದವ ಎನ್ನುತ್ತವೆ. ಪುನರ್ಜನ್ಮಗಳು ನಿಜವಾದ್ದರಿಂದ ಕೆಲವು ಜೀವಾತ್ಮರು ಸ್ವಲ್ಪ ಮಾತ್ರ ಮಾನವಜನ್ಮಗಳಲ್ಲಿ ಧರ್ಮ ಕಲಿತವರು, ಕೆಲವರು ಅನೇಕ ಜನ್ಮಗಳ ಸಾಧನೆಯಿರುವವರು, ಕೆಲವರು ಕೆಲವು ಜನ್ಮ ವ್ಯರ್ಥಮಾಡಿಕೊಂಡವರು, ಕೆಲವರು ಕಾಲಹೋದಂತೆ ಹೆಚ್ಚು ವ್ಯತ್ಯಾಸಗಳಿರುವ ಧಾರ್ಮಿಕ ಶಕ್ತಿ, ಒಲವು ಇರುವವರು ಕೆಲವರು ಕಲಿಯ ಮಹಾತ್ಮೆಯಿಂದ ಸಾಧನಾಶಕ್ತಿ ಮುಂಚಿನವರಿಗಿದ್ದಷ್ಟು ಇರದೆ, ಸುಲಭ ಧರ್ಮ ಬೇಕಾಗುವವರು, ಎಲ್ಲರನ್ನೂ ಆ ದೇವರೇ ಧರ್ಮದ ದಾರಿ ಹಿಡಿಸಲಿಕ್ಕೆಂದೇ ಬೇರೆ ಬೇರೆ ಮಟ್ಟದ ಧರ್ಮಸ್ಥಾಪಕರನ್ನು ಕಳುಹಿಸುತ್ತಾನೆ; ಕಳುಹಿಸಲೇಬೇಕಾಗುತ್ತದೆ. ಆದ್ದರಿಂದ ಎಲ್ಲಾ ಧರ್ಮಗಳೂ ಅವನ ಕಡೆಗೆ ಒಯ್ಯುವಾಪ ದಾರಿಗಳು. ಕೆಲವು ಮಾತ್ರ ತೀರಾ ಉದ್ದುದ್ದ, ಡೊಂಕು ಡೊಂಕು ಆದವು. ಸನಾತನ ಧರ್ಮ ಮಾತ್ರ ತೀರಾ ಸರಳವೂ ಪೂರ್ಣರೂಪದ್ದೂ ಆಗಿ ಅನಂತ

ಕಾಲಕ್ಕೂ ಬಾಳುವಂಥದ್ದು. ವಿದ್ಯಾಪೀಠದ ಹಲವು ಮಟ್ಟದ ಮಕ್ಕಳಿಗೆ ಅವರವರ ಬುದ್ಧಿ ಗ್ರಹಿಸಲಾಪ ಮಟ್ಟದ ಪಾಠಗಳು ಮಾತ್ರ ಇರಬೇಕಾದಂತೆ, ಕೆಲವು ಧರ್ಮಗಳಲ್ಲಿ ಆ ಜೀವಾತ್ಮರ ಮಟ್ಟಕ್ಕೆ ತಕ್ಕ ಧಾರ್ಮಿಕ ಸಾಧನೆಗಳಿವೆ. ಜೆಸಸ್ ಕ್ರೈಸ್ತರು ಧರ್ಮ ಕಲಿಸಿದ ಶಿಷ್ಯರಲ್ಲಿ ಅನೇಕರು ಬೆಸ್ತರಾಗಿದ್ದರು! ಚಿಕ್ಕಬಾಲಕನ ಪಠ್ಯಪುಸ್ತಕದಲ್ಲಿ, ಸೂರ್ಯ ಉದಯಿಸಿದಾಗ ಬೆಳಗಾಗುತ್ತದೆ ಎಂದಿದೆಯೇ ಹೊರತು, ಭೂಮಿ ತನ್ನ ಅಕ್ಷದ ಮೇಲೆ ಸುತ್ತುವುದರಿಂದ ಹಗಲು ರಾತ್ರಿ ಉಂಟಾಗುವುದು ಎಂಬ ಸತ್ಯ ಹೇಳುವುದಿಲ್ಲ. ಅಂತೆಯೇ ತೀರಾ ಕ್ರೂರಿಗಳಿಗೆ ಬೋಧಿಸಿದ ಧರ್ಮದಲ್ಲಿ—ಈ ಧರ್ಮ ಮಾತ್ರ ಸತ್ಯ, ಆದ್ದರಿಂದ ಅದನ್ನು ಅನುಸರಿಸುವ ನೀವು ಮಾತ್ರ ದೇವರಿಗೆ ಪ್ರಿಯರು, ನೀವು ಅಣ್ಣ ತಮ್ಮಂದಿರಂತೆ ನಿಮ್ಮೊಳಗೆ ಪ್ರೀತಿ, ಅಹಿಂಸೆ, ನಿರ್ವಂಚನೆ, ಸತ್ಯತೆ, ದಯೆ, ದಾನ, ಅವ್ಯಭಿಚಾರ ಮುಂತಾದ ಗುಣಗಳನ್ನು ಬೆಳೆಸಿ ದೇವರನ್ನು ಸಂತೋಷಪಡಿಸಿರಿ—ಎಂದಿದೆ. ಆದರೆ ಕ್ರೂರಸ್ವಭಾವ ಒಮ್ಮೆಗೇ ಬಿಡುವುದು ಅಸಾಧ್ಯ. ಆದ್ದರಿಂದ ಅದಕ್ಕೂ ಆಸ್ಪದ ಕೊಡಲಿಕ್ಕೆ—ಇತರ ಧರ್ಮಗಳೆಲ್ಲ ದೇವರು ಮೆಚ್ಚದ ತಪ್ಪು ಧರ್ಮಗಳು; ಅವುಗಳ ಅನುಯಾಯಿಗಳನ್ನು ನಿಮ್ಮ ಸತ್ಯಧರ್ಮಕ್ಕೆ ಸೆಳೆಯಲಿಕ್ಕೆ ಕ್ರೂರತೆ, ಬೆದರಿಕೆ, ಹಿಂಸೆ, ಕುಹಕ ಉಪಾಯಗಳು ಮುಂತಾದುವನ್ನು ಉಪಯೋಗಿಸಿದರೆ ಅಡ್ಡಿಯಿಲ್ಲ—ಎಂಬಂತೆ ಆರಂಭಕಾಲದಿಂದ ಅವುಗಳು ವರ್ತಿಸುತ್ತ ಬಂದದ್ದೇ ಕಾಣುತ್ತೇವೆ.

ಆದರೆ ಒಬ್ಬನೇ ದೇವರು ಎಲ್ಲರನ್ನೂ ಉಂಟುಮಾಡಿ ಅವರವರ ಧರ್ಮ, ಅದರ ಬಗೆಗೆ ವಾತ್ಸಲ್ಯ ಕೊಟ್ಟವನೆಂಬುದರಿಂದ ಸನಾತನ ಧರ್ಮದ ವಿಶಾಲ ಭಾವನೆ ಮಾತ್ರ ದೇವರು ಮೆಚ್ಚುವ ನಿಜವಾದ ದಾರಿಯಾಗಿದೆ. ಭೂಲೋಕದಲ್ಲೇ ಕೇವಲ ಸನಾತನ ಧರ್ಮವು ಈ ತರದ ಉದಾರ ಭಾವನೆ ಸಾರುತ್ತ, ಅಭ್ಯಸಿಸುತ್ತ ಬಂದಿದೆ; ತನ್ಮೂಲಕ ತನ್ನ ನಿಜವಾದ ಸತ್ಯತೆ, ಹಿರಿಮೆ ಸ್ಥಾಪಿಸಿದೆ.

ಈ ಎಲ್ಲ ಧರ್ಮಗಳ ವಿಮರ್ಶೆಯ ಸಾರಾಂಶ–ಹಿರಿಮೆಯಲ್ಲಿ ಧಾರ್ಮಿಕ ಹಿರಿಮೆಯೇ ಅತಿ ಶ್ರೇಷ್ಠ; ಧರ್ಮಗಳಲ್ಲಿ ಸನಾತನ ಧರ್ಮವೇ ಅತಿ ಶ್ರೇಷ್ಠ. ಅದರ ವರ್ಣಗಳಲ್ಲಿ ಬ್ರಾಹ್ಮಣ ವರ್ಣವೇ ಅತಿ ಶ್ರೇಷ್ಠ. ಆ ಭಾಗ್ಯಲೋಕದ ಜನರಲ್ಲಿ ಎಲ್ಲೋ ಸಾವಿರಕ್ಕೆ ಒಬ್ಬರು ಆದ ಬ್ರಾಹ್ಮಣರಿಗಿದೆ. ಅವರು ತಮಗೆ ದೇವರು ಕೊಟ್ಟ ಆ ಅಪೂರ್ವ ಹಿರಿಮೆಯ ಸದುಪಯೋಗ ಮಾಡಲಿ!

# ೪. ನಮ್ಮ ಧರ್ಮದ ದಿವ್ಯಜ್ಞಾನಕ್ಕೆ ವಿಜ್ಞಾನದ ರುಜುವಾತುಗಳು

ಈ ಕಾಲದಲ್ಲಿ ನಮ್ಮವರಿಗೆ—ಮುಖ್ಯವಾಗಿ ಯುವಕರಿಗೆ—ಪಾಶ್ಚಾತ್ಯರು ಬೆಳೆಸಿರುವ ವಿಜ್ಞಾನದ ಅದ್ಭುತ ಹಿರಿಮೆಯೆಂದರೆ ಅತ್ಯಂತ ಗೌರವ; ಆದರೆ ನಮ್ಮ ಹಳೇ ಕಾಲದ ಧರ್ಮವೆಂದರೆ ತಾತ್ಸಾರ. ವಿಜ್ಞಾನದಲ್ಲಿ ಹಲವು ಸಾವಿರ ಅತಿ ಮೇಧಾವೀ ಶೋಧಕರು ಅತ್ಯಂತ ಶ್ರಮಪಟ್ಟು, ಏಕಾಗ್ರತೆ ಬೆಳೆಸಿ ಮತ್ತು ಅತ್ಯಂತ ನಾಜೂಕಾದ ಹೊಸ ಹೊಸ ತರದ ವೈಜ್ಞಾನಿಕ ಸಲಕರಣೆಗಳನ್ನುಂಟು ಮಾಡಿ, ಅವುಗಳ ಸಹಾಯದಿಂದ ಪ್ರಕೃತಿದೇವಿಯು ಕೆಲಸ ಮಾಡುವ ನಿಯಮಗಳಲ್ಲಿ ಕೆಲವನ್ನು ಕಂಡುಕೊಂಡು ಪ್ರಕಟಿಸಿದ್ದಾರೆ. ಅದ್ಭುತ ಆಳವಾದ ಜ್ಞಾನ ಲಭಿಸಿಕೊಂಡಿದ್ದಾರೆ. ವಿಜ್ಞಾನವು ನಮ್ಮ ಸುತ್ತಲಿನ ವಿಶ್ವದ ವಿಚಾರದ ನಿಜತ್ವದ ಬಗೆಗೆ ಇತರ ಎಲ್ಲ ಧರ್ಮಗಳು ಹೇಳಿದುದನ್ನೂ ತಪ್ಪು ಎಂದು ರುಜುಪಡಿಸಿದೆ. ಆದರೆ ನಮ್ಮ ಅತ್ಯಂತ ಹಿಂದಿನ ಕಾಲದ್ದಾದ ಸನಾತನ ಧರ್ಮದ ವಿಶ್ವದ ವಿಚಾರದ ಹೇಳಿಕೆಗಳನ್ನು ಮಾತ್ರ ಪುಷ್ಟೀಕರಿಸಿದೆ. ಸನಾತನ ಧರ್ಮವು ಈ ಕಾಲದ ವಿಜ್ಞಾನದ ಅದ್ಭುತ ಸೂಕ್ಷ್ಮತೆಯ ಸಲಕರಣೆಗಳ ಸಹಾಯವೇನೂ ಇಲ್ಲದೆಯೂ ವಿಶ್ವದ ಸ್ಪಷ್ಟಜ್ಞಾನ ಪಡೆದಿರಬೇಕಾದರೆ ಅದು ಕೇವಲ ದಿವ್ಯಜ್ಞಾನದಿಂದ ಬಂದದ್ದು ಮಾತ್ರ ಎಂದು ನಿರ್ಧರಿಸಬೇಕಾಗುತ್ತದೆ. ಈ ತರದ ಅತಿ ಆಳವಾದ ಜ್ಞಾನದ ಕೆಲವು ಉದಾಹರಣೆಗಳನ್ನು ನೋಡಿರಿ.

ವಿಜ್ಞಾನದ ಹೇಳಿಕೆಯಂತೆ ವಿಶ್ವವು ಸಾಮಾನ್ಯರ ಎಣಿಕೆಯಂತೆ ಕಲ್ಲು ಮಣ್ಣು ಮುಂತಾದ ಘನವಸ್ತುಗಳ ಮೂಲದಿಂದ ಉಂಟಾದುದಲ್ಲ. ಅವೆಲ್ಲವೂ ಕೇವಲ ಅಣುಗಳಿಂದ ಉಂಟಾದವು ; ಆದರೆ ಪ್ರತಿ ಅಣುವಿನಲ್ಲಿಯೂ ಅಪಾರ ಠೊಳ್ಳಲ್ಲಿ ವಿದ್ಯುತ್ ಕಣಗಳು ಅತಿ ಬಿರುಸಾಗಿ ಸುತ್ತುತ್ತಲೇ ಇವೆ. ಎಂದರೆ ವಿಶ್ವವು ಕೇವಲ ಶಕ್ತಿಯ ರಚನೆ ಎಂದಾಯಿತು. ನಮ್ಮ ಶಾಸ್ತ್ರವೂ ಅದನ್ನೇ ಹೇಳುತ್ತದೆ. ಸೃಷ್ಟಿಯ ಸಂಕಲ್ಪದಂತೆ ಪರಬ್ರಹ್ಮನಿಂದ ಪರಾಶಕ್ತಿ ದೇವಿಯು ಉದ್ಭವಿಸಿದಳು. ವಿಶ್ವ ಉಂಟುಮಾಡಿದ ಅವಳೇ ಪ್ರಕೃತಿದೇವಿಯೂ ಆಗಿದ್ದಾಳೆ, ಎಂದು!

ಪ್ರತಿ ಅಣುವಿನಲ್ಲಿಯೂ ವಿದ್ಯುತ್ ಕಣಗಳು ಬಿರುಸಾಗಿ ಸುತ್ತುತ್ತಲೇ ಇರುವುದರಿಂದ ಹಾಗೆ ಮಾಡಲಿಕ್ಕೆ ಅದರೊಳಗೆ ಸರ್ಕಸ್ಸಿನ ರಿಂಗ್ ಮಾಸ್ಟರ

ರಂತೆ ದೇವರೇ ಇರಬೇಕಷ್ಟೆ ! ಆದ್ದರಿಂದ ಶಾಸ್ತ್ರವು ದೇವರನ್ನು ಅಣೋರಣೀ ಯಾನ್ ಎಂದು ಕರೆದಿದೆ !

ವಿಜ್ಞಾನದ ಶೋಧನೆಯಂತೆ ನಮ್ಮ ಸುತ್ತಲೂ ತೋರುವ ಪ್ರತಿ ನಕ್ಷತ್ರವೂ ನಮ್ಮ ಸೂರ್ಯನಂತೆಯೇ. ಆದರೆ ವಿಪರೀತ ದೂರ ಇರುವುದ ರಿಂದ ಅತಿ ಚಿಕ್ಕ ನಕ್ಷತ್ರವಾಗಿ ಕಾಣುತ್ತಾನೆ. ದೂರದರ್ಶಕದ ಶಕ್ತಿ ಹೆಚ್ಚಿಸಿ ದಂತೆ, ತೋರುವ ನಕ್ಷತ್ರಗಳ ಸಂಖ್ಯೆ ವಿಪರೀತ ಹೆಚ್ಚುತ್ತಲೇ ಬಂದಿದೆ. ಪ್ರತಿ ಸೂರ್ಯಮಂಡಲವೂ ನಮ್ಮ ಶಾಸ್ತ್ರದ ಹೇಳಿಕೆಯಂತೆ ಒಂದು ಬ್ರಹ್ಮನ ಬ್ರಹ್ಮಾಂಡ ಮತ್ತು ಅವು ಅಪರಿಮಿತ ಸಂಖ್ಯೆಯಲ್ಲಿರುವುದರಿಂದ ದೇವರು ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ ಎಂದು ಶಾಸ್ತ್ರ ಕರೆದಿದೆ ! ಈ ಬ್ರಹ್ಮಾಂಡಗಳಲ್ಲಿ ಕೆಲವು ಚಿಕ್ಕವು, ಕೆಲವು ಅತಿ ದೊಡ್ಡವು ಎಲ್ಲ ಇವೆ ಎನ್ನು ತ್ತದೆ ವಿಜ್ಞಾನ. ಇದನ್ನೇ ಒಮ್ಮೆ ಬ್ರಹ್ಮರ ಸಭೆ ಕೂಡಿದಾಗ ಅದರಲ್ಲಿ ನಾಲ್ಕು ತಲೆ, ಹತ್ತು ತಲೆ, ಸಾವಿರ ತಲೆಗಳ ಬ್ರಹ್ಮರೂ ಇದ್ದರು ಎಂದು ನಮ್ಮ ಪುರಾಣದಲ್ಲಿ ಕತೆರೂಪದಲ್ಲಿ ಹೇಳಿದೆ.

ನಮ್ಮ ವಿಶ್ವದ ಉತ್ಪತ್ತಿಯು ಆದಿ ಆರಂಭದ ಕಾಲವಾಗಿ ಸುಮಾರು ೪,೫೦೦ ಮಿಲಿಯ ವರ್ಷಗಳಾಗಿವೆ ಎನ್ನುತ್ತದೆ ವಿಜ್ಞಾನ. ನಮ್ಮ ಶಾಸ್ತ್ರದ ಹೇಳಿಕೆ ಏನೆಂದರೆ ವಿಶ್ವದ ಆ ಕೇವಲ ಅವ್ಯಕ್ತದ ಮೂಲದ ಅನಂತರ ಸೂರ್ಯ, ಗ್ರಹಗಳು, ಭೂಮಿ ಉಂಟಾಗಿ ಬ್ರಹ್ಮನು ಗಿಡಮರ ಕ್ರಿಮಿಕೀಟ ಪ್ರಾಣಿಗಳ ಸೃಷ್ಟಿಯನ್ನು ಆರಂಭಿಸಿ ಸುಮಾರು ೨,೦೦೦ ಮಿಲಿಯ ವರ್ಷಗಳಾದವು ಎಂದು. ನಾವು ನಿತ್ಯದ ಸಂಕಲ್ಪದಲ್ಲಿ ಇದನ್ನು ಹೇಳುತ್ತಿದ್ದೇವೆ. ಇದಕ್ಕೆ ವಿರುದ್ಧವಾಗಿ ಬೈಬಲ್ ಹೇಳಿಕೆ ನೋಡಿರಿ. ದೇವರು ವಿಶ್ವವನ್ನು ಸುಮಾರು ೬,೦೦೦ ವರ್ಷಗಳ ಹಿಂದೆ ಮಾತ್ರ ಸೃಷ್ಟಿಸಿದ ; ಆರು ದಿನಗಳಲ್ಲಿ ಅದನ್ನು ಮಾಡಿದ. ವಿಶ್ವಕ್ಕೆ ಭೂಮಿಯೇ ಕೇಂದ್ರ. ಅದರ ಸುತ್ತಲೂ ಸೂರ್ಯ, ಚಂದ್ರ, ಎಲ್ಲಾ ನಕ್ಷತ್ರಗಳು ಸುತ್ತುತ್ತಿವೆ ಎಂಬುದಾಗಿದೆ. ಈ ತರದ ತಪ್ಪು ಗಳು ಕೆಲವರಿಗೆ ಬೈಬಲಿನಲ್ಲಿ ನಂಬಿಕೆಯನ್ನೇ ಕೆಡಿಸಿದ್ದುಂಟು !

ನಮ್ಮ ಧರ್ಮವು ನಮಗೆ ಲಕ್ಷಾಂತರ, ಕೋಟ್ಯಾಂತರ ಪುನರ್ಜನ್ಮ ಹೇಳಿದೆ. ವಾರ್ತಾ ಪತ್ರಿಕೆಗಳ ಕಾಲದ ಮುಂಚೆ ಇತರ ಧರ್ಮಗಳು (ನಮ್ಮ ಧರ್ಮದಿಂದ ಶಾಖೆಯಾಗಿ ಹೋದವಲ್ಲ) ಜೀವಾತ್ಮನಿಗೆ ಕೇವಲ ಒಂದು ಜನ್ಮ ಮಾತ್ರ ಎನ್ನುತ್ತಿದ್ದವು. ಈಗಲೂ ಅದನ್ನೇ ಉರು ಹಾಕುತ್ತಿದ್ದಾವೆ ; ಆದರೆ ಮುಖ್ಯವಾಗಿ ಆ ಧರ್ಮಗಳೇ ಇರುವ ದೇಶಗಳಿಂದಲೂ ಪುನರ್ಜನ್ಮ ಪಡೆದವರ

ಹೇಳಿಕೆಗಳು ಸಾವಿರಾರು ಕತೆಗಳ ವರದಿಗಳು ವಾರ್ತಾ ಪತ್ರಿಕೆಗಳಲ್ಲಿ ಪ್ರಕಟವಾಗಿ, ಅನೇಕರು ಪ್ರಾಜ್ಞರಿಂದ ಪರಿಶೀಲಿಸಲ್ಪಟ್ಟು ಪುನರ್ಜನ್ಮವಲ್ಲದೆ ಬೇರೆ ವಿವರಣೆ ಅವಕ್ಕೆ ಹೊಂದಿಕೆಯಾಗುವುದಿಲ್ಲ ಎಂದು ಒಪ್ಪಲ್ಪಟ್ಟಿವೆ (ನನ್ನ 'ಪುನರ್ಜನ್ಮ' ಪುಸ್ತಕ ನೋಡಿರಿ). ಎಂದರೆ ನಮ್ಮ ಧರ್ಮ ಹೇಳುವಂತೆ, ಪುನರ್ಜನ್ಮಗಳು ನಿಜಕ್ಕೂ ಧಾರಾಳವಾಗಿ ಇವೆ. ಆದ್ದರಿಂದ ಹಳೆ ಮತ್ತು ಹೊಸ ಜೀವಾತ್ಮರ ಧಾರ್ಮಿಕ ಶಕ್ತಿಗಳಲ್ಲಿ, ಕರ್ಮಫಲ, ಅನುಭವ, ಒಲವುಗಳಲ್ಲಿ ವ್ಯತ್ಯಾಸಗಳು ಇರಲೇಬೇಕು. ಎಂದರೆ ಅವು ಮುಂದೆ ಕಲಿಯಬೇಕಾದ ಧರ್ಮಗಳ ಪಾಠಗಳಲ್ಲೂ, ಧಾರ್ಮಿಕ ಸಾಧನೆಗಳಲ್ಲೂ ವ್ಯತ್ಯಾಸಗಳು ಅಗತ್ಯವಾಗಿ ಇದ್ದು ವರ್ಣಗಳ ವಿಭಾಗಕ್ಕೆ ಅವಶ್ಯಕತೆ ಉಂಟು. ಈ ಪುನರ್ಜನ್ಮಗಳ ವಾರ್ತೆಗಳೂ ಕೇವಲ ಒಂದು ಜನ್ಮ ಎನ್ನುವ ಧರ್ಮಗಳ ಬಗೆಗೆ ಮೇಧಾವಿಗಳಲ್ಲಿ ಅಪನಂಬಿಕೆ ಹುಟ್ಟಿಸಿವೆ. ಇದೂ ನಮ್ಮ ಧರ್ಮದ ದಿವ್ಯಜ್ಞಾನದ ದೃಷ್ಟಾಂತ. ಮುಂದೆ ಸದಾಚಾರದ ಅಭ್ಯಾಸದ ಭಾಗದಲ್ಲಿಯೂ ಪಾಶ್ಚಾತ್ಯರ ಕೆಲವು ಶೋಧನೆಗಳು ನಮ್ಮ ಧರ್ಮದ ಹಿರಿಮೆಯನ್ನು ಸಮರ್ಥಿಸುವುದು ತಿಳಿಸಲ್ಪಡುವುದು.

ಬ್ರಾಹ್ಮಣರಿಗೆ ಅತಿ ಮುಖ್ಯವಾಗಿ ಅನ್ವಯಿಸುವ ಪಾಶ್ಚಾತ್ಯ ವಿಜ್ಞಾನಗಳ ಒಂದು ಶೋಧನೆಯೆಂದರೆ ತಳಿ ಶಾಸ್ತ್ರದ ಪ್ರಯೋಗ. ಸನಾತನ ಧರ್ಮದಲ್ಲಿ ಮೇಲು ಜಾತಿಯವರಿಗೆ ಹೆಚ್ಚು ಹೆಚ್ಚು ಕಷ್ಟತರದ್ದಾದ ಸದಾಚಾರಗಳು (ಸ್ನಾನ, ಜಪ, ಪೂಜೆ, ಆಹಾರ ನಿಯಮಗಳು, ಪತಿವ್ರತಾಧರ್ಮ, ವ್ರತೋಪವಾಸಗಳು, ಧ್ಯಾನ ತಪಸ್ಸು ವಿಧಿಸಲ್ಪಟ್ಟಿವೆ. ಇತರ ಸಾಮಾನ್ಯ ತರದ ಧರ್ಮಗಳ ಜನರು ಅಭ್ಯಸಿಸುವ ಸದಾಚಾರಗಳಿಗಿಂತ ಇದು ಅಭ್ಯಸಿಸಲು ಬಹಳ ಕಷ್ಟ ತರದವು; ಆದರೆ ಮುಕ್ತಿಯ ಗುರಿ ಮುಟ್ಟಲಿಕ್ಕೆ ಅಗತ್ಯ. ಮಕ್ಕಳು ಅತಿ ಹೆಚ್ಚಿನವರು ಧಾರಾಳವಾಗಿ ಪ್ರಾಥಮಿಕ ಶಾಲೆಯಲ್ಲಿ ತೇರ್ಗಡೆ ಹೊಂದುತ್ತಿರಬಹುದು. ಆದರೆ ಹೈಸ್ಕೂಲಲ್ಲಿ ತೇರ್ಗಡೆ ಹೊಂದಲಾಗದವನಿಗೆ ಬಿ.ಎ., ಎಂ.ಎ., ಕ್ಲಾಸುಗಳು ಸಂಪೂರ್ಣ ವ್ಯರ್ಥ. ಆದ್ದರಿಂದ ಮೇಲು ಮೇಲು ವರ್ಣಗಳ ಹೆಚ್ಚು ಹೆಚ್ಚು ಬಿಗುವಾದ ಸದಾಚಾರಗಳನ್ನು ಅಭ್ಯಸಿಸಲಿಕ್ಕೆ ಬೇಕಾದ ಮೇಲು ತರದ ಧಾರ್ಮಿಕ ಶಕ್ತಿಯಿರುವ ದೇಹದವರು ಜನಿಸುವಂತೆ, ನಮ್ಮ ಧರ್ಮವು ಮಾತ್ರವೇ ಉತ್ತಮ ಜಾತಿಯವರು ಉತ್ತಮ ಸಮಾನ ಜಾತಿಯ ಸ್ತ್ರೀಯರನ್ನು ಮಾತ್ರ ವಿವಾಹವಾಗುವ ಕ್ರಮ ಆಚರಿಸಿಕೊಂಡು ಬಂದಿದೆ. ಈ ಕಾಲದ ವಿಜ್ಞಾನವೂ ಪ್ರಾಣಿಗಳ ಲೌಕಿಕ ಹಿರಿಮೆ ಬೆಳೆಸ

ಲಿಕ್ಕೆ ಈ ತಳಿಶಾಸ್ತ್ರದ ಕ್ರಮವನ್ನೇ ಕಂಡುಕೊಂಡು ಉಪಯೋಗಿಸುತ್ತ ಬಂದಿದೆ. ಹೇಗೆಂದರೆ ನಮ್ಮ ಊರ ದನಗಳು ಕೇವಲ ಒಂದು ಲೀಟರ್ ಹಾಲು ಮಾತ್ರ ಕೊಡಲಾಪ ದೇಹ ಶಕ್ತಿ ಪಡೆದು ಬಂದವು; ಆದರೆ ಅಪರೂಪಕ್ಕೆ ದನಗಳಲ್ಲಿ ಸ್ವಲ್ಪ ಹೆಚ್ಚು ಹಾಲು ಕೊಡುವವೂ ಉಂಟಾಗುತ್ತವೆ. ಅವಕ್ಕೆ ಅದೇ ತರದ ಹಿರಿಮೆಯ ಪೀಳಿಗೆಯ ಹೋರಿಯನ್ನು ಜೊತೆಕೂಡಿಸಿದರೆ ಅವುಗಳ ಪೀಳಿಗೆಯ ದನಗಳು ತಪ್ಪದೆ ಹೆಚ್ಚು ಹಾಲು ಕೊಡುತ್ತವೆ. ವಿಜ್ಞಾನಿಯು ಹೀಗೆ ಮಾಡುತ್ತ ಬಂದು ೨೦–೩೦ ಲೀಟರ್ ಹಾಲು ಕೊಡುವ ಜರ್ಸಿ, ಸ್ವಿಸ್ ಬ್ರೌನ್ ಮುಂತಾದ ಅತ್ಯುತ್ತಮ ಹಾಲು ಕೊಡುವ ಶಕ್ತಿಯ ದನಗಳನ್ನು ಅಲ್ಲಿ ರೂಢಿಗೆ ತಂದಿದ್ದಾನೆ. ಅಂತೆಯೇ ಅತಿ ವೇಗವಾಗಿ ಓಡುವ ಜೂಜಿನ ಕುದುರೆ, ತುಂಬಾ ಮಾಂಸ ಬೆಳೆಸುವ ಹಂದಿ, ಧಾರಾಳವಾಗಿ ತತ್ತಿ ಇಡುವ ಕೋಳಿಗಳು ಮುಂತಾದವನ್ನು ಪಾಶ್ಚಾತ್ಯ ವಿಜ್ಞಾನಿಗಳು ತಳಿಶಾಸ್ತ್ರದ (genetics) ಸಹಾಯದಿಂದ ಉಂಟು ಮಾಡಿದ್ದಾರೆ. ಅವರಿಂದ ಈ ಉತ್ತಮ ಶಕ್ತಿಯ ಪ್ರಾಣಿಗಳನ್ನು ತರಿಸಿಕೊಂಡು ನಮ್ಮ ಸರ್ಕಾರವೂ ತಳಿಶಾಸ್ತ್ರದ ಪ್ರಯೋಜನ ಪಡೆಯುತ್ತಿದೆ. ಈ ಕ್ರಮ ಅನುಸರಿಸುವವರು ತಮ್ಮ ಉತ್ತಮ ಶಕ್ತಿಯ ದನಕ್ಕೆ ಎಷ್ಟಕ್ಕೂ ಅಲ್ಪ ತರದ ಹೋರಿಯ ಜೊತೆ ಕೂಡಲು ಬಿಡರು. ಬಿಟ್ಟವ ಕೇವಲ ಮೂರ್ಖನೆಂದೇ ಪರಿಗಣಿಸಲ್ಪಡುವನು. ಅಂತೆಯೇ ಸರ್ಕಾರದ ಲಂಚಕ್ಕೆ ಬಲಿಬಿದ್ದು ಮೇಲು ಜಾತಿಯವ ಕೆಳ ಜಾತಿಯವಳನ್ನು ವಿವಾಹವಾಗುವವನೂ ಮೂರ್ಖನೇ ಆಗನೇ ?

ದಿವ್ಯಜ್ಞಾನದ ಸನಾತನ ಧರ್ಮದಲ್ಲಿ, ದೇವರು ಈ ಪುಣ್ಯಭೂಮಿಯಲ್ಲಿ 'ಚಾತುರ್ವರ್ಣ್ಯಂ ಮಯಾಸೃಷ್ಟಂ' ಮಾಡಿದುದರಿಂದ, ಈ ವಿಶೇಷ ಧಾರ್ಮಿಕ ಅಭ್ಯಾಸಗಳ ಶಕ್ತಿಯಿರುವ ಬ್ರಾಹ್ಮಣ ಕುಟುಂಬದ ವಧುವಿಗೆ, ಸಮಾನ ಧಾರ್ಮಿಕ ಶಕ್ತಿಯ ನಂಟಸ್ತಿಕೆಗಾಗಿ ತಕ್ಕ ಜಾತಿ–ಕುಲ–ಗೋತ್ರಗಳ ವರನನ್ನೇ ತಲಾಸು ಮಾಡಿ ವಿವಾಹ ಮಾಡುವ ಕ್ರಮವು ನಡೆಯುತ್ತ ಬಂದಿದೆ. ತನ್ಮೂಲಕ ಬ್ರಾಹ್ಮಣಧರ್ಮದ ವಿಶೇಷವೇಲ್ಪಟ್ಟದ ಸದಾಚಾರಗಳ ಪಾಲನೆಗೆ ಬೇಕಾದ ಧಾರ್ಮಿಕ ದೇಹವಿರುವ ಪೀಳಿಗೆಯೇ ಉಂಟಾಗುತ್ತ ಬಂದಿದೆ. ತಳಿಶಾಸ್ತ್ರವು ಪ್ರಾಣಿಗಳಿಗೆ ಮಾತ್ರವಲ್ಲ, ಮನುಷ್ಯರಿಗೂ ಅನ್ವಯಿಸುತ್ತದೆ ಎಂದು ಪಾಶ್ಚಾತ್ಯವಿಜ್ಞಾನಿ ಸಾರಿದ್ದಾನೆ. ಆದರೆ ಕೇವಲ ಮುಖದ ಚಂದಕ್ಕೆ ಮರುಳಾಗಿ ವಿವಾಹವಾಗುವ ಕ್ರಮವಿರುವ ಪಾಶ್ಚಾತ್ಯ ಮಾನವರಲ್ಲಿ ಅದು ಪ್ರಚಾರಕ್ಕೆ ಬರಲು ಸಾಧ್ಯವಾಗಲಿಲ್ಲ. ಸಂಯಮನ ಹೆಚ್ಚಿರುವ ಸನಾತನಿಗಳಲ್ಲಿ ಅದು

ಧಾರಾಳವಾಗಿ ಸಾಧ್ಯವಾಯಿತು. ಆದರೆ ಪ್ರಾಣಿಗಳ ಕ್ಷೇತ್ರದಲ್ಲಿ ತಳಿಶಾಸ್ತ್ರ ವನ್ನು ಬಹಳವಾಗಿ ಅಭ್ಯಸಿಸುವ ನಮ್ಮ ಸರ್ಕಾರವೇ ಬ್ರಾಹ್ಮಣರೂ ಇತರ ವರ್ಣದವರೂ ಈ ಕ್ರಮ ಅಭ್ಯಸಿಸುವುದನ್ನು ನಾಶಮಾಡಬೇಕೆಂದು ಪ್ರಯತ್ನ ಮಾಡುತ್ತ ಬಂದದ್ದು ಆಶ್ಚರ್ಯಕರವಾದ ಧರ್ಮದ ದ್ರೋಹವೇ ಆಗುತ್ತದೆ.

ನಮ್ಮ ಧರ್ಮದಲ್ಲಿ ಪರಧರ್ಮದವರ ೧,೦೦೦ ವರ್ಷಗಳ ತುಳಿತದಿಂದ ಅನೇಕ ದೋಷಗಳು ಬೆಳೆದಿವೆ. ಅವುಗಳನ್ನು ಎತ್ತಿ ತೋರಿಸಿ ನಮ್ಮ ಧರ್ಮ ಖಂಡಿಸುವುದು ಕಷ್ಟವಲ್ಲ. ಆದರೆ ಇತರ ಎಲ್ಲ ದೇಶಗಳಲ್ಲಿ ಪರಕೀಯರ ಹಾವಳಿ ನಡೆದಲ್ಲೆಲ್ಲ ದೇಶದ ಸಂಸ್ಕೃತಿ, ಧರ್ಮ ಕೇವಲ ೫೦–೧೦೦ ವರ್ಷ ಗಳಲ್ಲಿ ಸಂಪೂರ್ಣ ನಾಶ ಹೊಂದಿದುದೇ ಕ್ರಮವಾಗಿರುವಾಗ ನಮ್ಮ ದೇಶದಲ್ಲಿ ಸನಾತನ ಧರ್ಮವು, ಬಹಳ ಘಾಸಿ ಹೊಂದಿದ ಸ್ಥಿತಿಯಲ್ಲಾದರೂ, ಇನ್ನೂ ಬಾಳಿಕೊಂಡಿರುವುದು ಅದರ ಅದ್ವಿತೀಯ ಹಿರಿಮೆಗೆ, ಸತ್ಯತೆಗೆ, ಧಾರಾಳವಾದ ಸಾಕ್ಷಿಯಾಗಿದೆ. ಆದರೆ ಅದರ ೧,೦೦೦ ವರ್ಷಗಳ ಕಾಲದ ಅವನತಿಗಿಂತ ಕೇವಲ ೪೪ ವರ್ಷಗಳ ನಮ್ಮವರೇ ಉಂಟುಮಾಡಿದ ಸೆಕ್ಯುಲರ್ ಪ್ರಜಾ ರಾಜ್ಯದ ಕಾಲದಲ್ಲಿ ನಮ್ಮವರು ಧರ್ಮಭ್ರಷ್ಟರಾಗುತ್ತ ಬಂದಷ್ಟು ಹಿಂದೆ ಎಂದೂ ಆದದ್ದಿಲ್ಲ. ಆದಕ್ಕೆ ಕಾರಣ ಈಗಿನ ಧರ್ಮ ನಾಶಕರು ನಮ್ಮವರೇ ಆಗಿದ್ದು ಕೋಟೆಯೊಳಗಿನ ಶತ್ರುವಂತೆ, ನಮ್ಮ ಹಿತ್ತಲೊಳಗೇ ವಾಸಿಸುವ ಹಾವಿನಂತೆ, ಇದ್ದು ಅಂಥವರಿಂದ ಅತ್ಯಂತ ಭಯಂಕರ ಹಾನಿ ಸಾಧ್ಯ ವಾಯಿತು. ಇದನ್ನು ನಮ್ಮ ಧರ್ಮ ಬೇಕಾದವರು ತಡೆಗಟ್ಟಲು ನಿರ್ಧರಿಸ ಬೇಕು.

ಅದ್ವಿತೀಯ ಹಿರಿಮೆಯ ನಮ್ಮ ಧರ್ಮವು ಎಲ್ಲ ಜನರ ಧಾರ್ಮಿಕ ಮಟ್ಟದ ಸರಿಸಮಾನತೆ ಎಂದೂ ಒಪ್ಪಿದ್ದೇ ಅಲ್ಲ. ಅವರವರ ಧಾರ್ಮಿಕ ಮಟ್ಟಗಳ ವ್ಯತ್ಯಾಸಗಳಿಗೆ ತಕ್ಕಂತೆ ಮಾತ್ರವೇ ಧರ್ಮದ ಅಭ್ಯಾಸ ನಡೆಸಲು ಹೇಳಿದ ಧರ್ಮ ನಮ್ಮದು ಮಾತ್ರ. ಈ ದೇಶದ ಅತ್ಯಧಿಕ ಭಾಗದವರಾದ ಹಿಂದೂ ಧರ್ಮದವರ ಈ ಅಭ್ಯಾಸಕ್ಕೆ ಲಕ್ಷ್ಯಕೊಡದೆ ಕುರುಡರಂತೆ ಕೇವಲ ಒಂದು ಜನ್ಮ ಮಾತ್ರವೆಂದು ಹೇಳುವ ಪಾಶ್ಚಾತ್ಯರ ರಾಜ್ಯಕ್ರಮದ ಸರಿ ಸಮಾನತೆ ತತ್ವ ಆರಿಸಿ ಪ್ರಜಾರಾಜ್ಯ ಕಟ್ಟಿದ್ದೆಂದರೆ, ನಮ್ಮ ಅತ್ಯಂತ ಪವಿತ್ರ ವಾದ ಆತ್ಮನ ಏಳಿಗೆ ಪೂರ್ಣ ಬದಿಗೊತ್ತಿ, ಕೇವಲ ಅಲ್ಪತರದ್ದಾದ ದೇಹದ ಸುಖಕ್ಕೆ ಮಾತ್ರ ಸರ್ವಲಕ್ಷ್ಯ ಕೊಟ್ಟಂತೆ. ಪ್ರಜಾರಾಜ್ಯದಲ್ಲಿ ದೇಶದ ಧರ್ಮ ಬೇಡವಾದ ಸ್ವಾರ್ಥಿಗಳು ಸೇರಿ ಜಾತಿ ಬೇಡವಾದ ಸರ್ಕಾರ ನಿರ್ಮಿಸಿದರೆ,

ಧರ್ಮದಲ್ಲಿ ಹಿರಿಯಸ್ಥಾನ ಪಡೆದುಬಂದವರು ಶತಪ್ರಯತ್ನಮಾಡಿ ಧರ್ಮ ಬೇಕಾದವರನ್ನು ಕೂಡಿಸಿ ಧರ್ಮ ಬೇಡವಾದ ಸರ್ಕಾರ ಅಳಿದು ಧಾರ್ಮಿಕ ಸರ್ಕಾರ ಕಟ್ಟಲು ಯತ್ನಿಸಲೇಬೇಕು. ಏಕೆಂದರೆ ನಾವೂ ನಮ್ಮ ಮಕ್ಕಳೂ, ಪೀಳಿಗೆಯವರೂ ಇಲ್ಲಲ್ಲದೆ ಮತ್ತೆಲ್ಲಿ ಬಾಳುವುದು? ಧರ್ಮ ಬೇಡವಾದ ಸ್ವಾರ್ಥಿಗಳಿಂದ ನಮ್ಮ ಧರ್ಮನಾಶವಾಗಲಿಕ್ಕೆ, ನಮ್ಮ ಮಕ್ಕಳು ನಾಸ್ತಿಕ ರಾಗಲಿಕ್ಕೆ, ದೇಶವು ಅನೈತಿಕತೆಯಿಂದ ತುಂಬಲಿಕ್ಕೆ, ಬಿಡುವುದೇ? ಇದಕ್ಕೆ ಪ್ರಪ್ರಥಮವಾಗಿ ಬ್ರಾಹ್ಮಣರು ತಮ್ಮ ಧರ್ಮ ಅರಿತು ಅಭ್ಯಸಿಸಲು ಕಲಿಯ ಬೇಕು. ಆಗ ತೀರ ಸ್ವಲ್ಪವಾದರೂ, ಅವರ ಸಹಾಯಕ್ಕೆ ಧರ್ಮದ ಬೆಂಬಲ, ದೇವರ ಸಹಾಯ. ಸಿಕ್ಕದಿರದು.

ಧರ್ಮೋ ರಕ್ಷತಿ ರಕ್ಷಿತಃ ॥ (ಮನು ೮,೧೫)

ತನ್ನ ಧರ್ಮವನ್ನು ರಕ್ಷಿಸುವವನನ್ನು ಧರ್ಮವು ರಕ್ಷಿಸುತ್ತದೆ. ಧರ್ಮವು ವಿಶ್ವವನ್ನೇ ನಡೆಸುತ್ತದೆ. ಆ ಅಪಾರಶಕ್ತಿ ನಮ್ಮ ಬೆಂಬಲಕ್ಕೆ ನಿಲ್ಲುವಂತೆ ಮಾಡುವ.

## ೫. ಯಾರು ಬ್ರಾಹ್ಮಣ?

ಬ್ರಾಹ್ಮಣ್ಯದ ಸರಿಯಾದ ಅಭ್ಯಾಸಕ್ಕೆ, ಅದು ಬಹಳ ಹಿರಿಮೆಯ ಜನ್ಮ, ಲಭಿಸಿದ್ದು ತನ್ನ ಪುಣ್ಯ, ಹಿಂದಿನ ಅಪಾರ ಜನ್ಮಗಳ ಧರ್ಮಾಚರಣೆಯ ಫಲ, ಆದ್ದರಿಂದ ಅದರ ಪ್ರಯೋಜನ ಹೊಂದಲೇಬೇಕು ಎಂಬ ದೃಢ ನಿಶ್ಚಯ ಬೇಕು. ಆದರೆ ಶಾಸ್ತ್ರ ಚೆನ್ನಾಗಿ ಕಲಿಯದ ಈ ಕಾಲದ ಅನೇಕ ಬ್ರಾಹ್ಮಣ ಯುವಕರ ಶ್ರದ್ಧೆ ಕೆಡಿಸಲಿಕ್ಕೆ ಕೆಲವು ಕುತರ್ಕಗಳೂ ಪ್ರಚಾರದಲ್ಲಿವೆ. ಅವಕ್ಕೆ ಉತ್ತರ ತಿಳಿದಿರಬೇಕು.

**ಹುಟ್ಟಿಂದ ಬ್ರಾಹ್ಮಣ್ಯವಲ್ಲ ಎಂಬ ವಾದ :** ಮಹಾಭಾರತದಲ್ಲಿ 'ಜನ್ಮನೈವ ಮಹಾಭಾಗಾ ಬ್ರಾಹ್ಮಣೋನಾಮ ಜಾಯತೇ' (ಅನುಶಾಸನಿಕ ೩೫-೧) ಎಂದು ಹೇಳಿದೆ. ಜನ್ಮದಿಂದಲೇ ಬ್ರಾಹ್ಮಣನು ಉಂಟಾಗುತ್ತಾನೆ. ನಮಗೆ ವೇದಕ್ಕಿಂತ ಮೇಲಿನ ಆಧಾರವಿಲ್ಲವಷ್ಟೆ! ಛಾಂದೋಗ್ಯ ಉಪನಿಷತ್ತಿನಲ್ಲಿ (೫, ೧೦, ೭) ಜೀವಾತ್ಮರು ಮರಣದ ನಂತರ ಪರಲೋಕಗಳಲ್ಲಿ ತಮ್ಮ ಕರ್ಮಗಳಿಗೆ ತಕ್ಕಫಲದ ಹೆಚ್ಚಿನ ಅಂಶ ಅನುಭವಿಸಿದ ಮೇಲೆ ಉಳಿದ ಉತ್ತಮ ಕರ್ಮಶೇಷದಿಂದ ಬ್ರಾಹ್ಮಣ, ಕ್ಷತ್ರಿಯ ಅಥವಾ ವೈಶ್ಯ ಜನ್ಮವನ್ನೋ ಅಥವಾ

ಕೆಟ್ಟ ಕರ್ಮದ ಶೇಷದಿಂದ ನಾಯಿ ಹಂದಿ ಅಥವಾ ಚಂಡಾಲ ಜನ್ಮವನ್ನೋ ಪಡೆಯುತ್ತಾರೆ ಎಂದಿದೆ. ನಮ್ಮ ಹುಟ್ಟನ್ನು ನಾವಲ್ಲ, ತಂದೆ ತಾಯಿ ಅಲ್ಲ, ದೇವರೇ ನಿರ್ಧರಿಸುವುದಷ್ಟೆ. ಆದ್ದರಿಂದ ಬ್ರಾಹ್ಮಣ ಜನ್ಮದ ತಳಹದಿ ಹುಟ್ಟಿಂದಲೇ. ತಂದೆ ತಾಯಿ ಬ್ರಾಹ್ಮಣರಿದ್ದು ಶಾಸ್ತ್ರೋಕ್ತ ಕ್ರಮದಿಂದ ವಿವಾಹವಾದವರಾಗಿರಬೇಕು (ಮನು ೧೦,೫). ಆದರೆ ಇದಕ್ಕೂ ಒಂದು ತರದ ಅಪವಾದವಿದೆ. ಬ್ರಾಹ್ಮಣನು ಶೂದ್ರಳನ್ನು ವಿವಾಹವಾದರೆ (ಇದು ನಿಷೇಧಿಸಲ್ಪಟ್ಟಿದೆ) ಅವರ ಮಗಳು ಬ್ರಾಹ್ಮಣನನ್ನು ವಿವಾಹವಾದರೆ, ಹೀಗೆಯೇ ಆಗುತ್ತ ಹೋದರೆ, ಏಳನೇ ಜನ್ಮದಲ್ಲಿ ಬ್ರಾಹ್ಮಣ ಜನ್ಮ ಲಭಿಸುತ್ತದೆ (ಮನು ೧೦,೬೪). ಇದು ತಳಿಶಾಸ್ತ್ರಕ್ಕೂ ಸಮ್ಮತವೇ. ಊರ ದನಕ್ಕೆ ಜರ್ಸಿ ಹೋರಿಯ ವೀರ್ಯ ಈ ರೀತಿಯಲ್ಲಿ ಸೇರಿಸುತ್ತ ಬಂದರೆ ಏಳನೇ ಪೀಳಿಗೆಯ ದನ ಜರ್ಸಿ ದನದ ಅತಿ ಹೆಚ್ಚು ಹಾಲು ಕೊಡುವ ದೇಹ ಪಡೆದೀತು ಎಂದಂತೆ ಇದು. ಆದರೆ ಸುಮಾರು ೧೫೦–೨೦೦ ವರ್ಷಗಳು ಬೇಕಾಗುವ ಈ ಕ್ರಮ ಮಾನವರಲ್ಲಿ ಬ್ರಾಹ್ಮಣರಾಗಲಿಕ್ಕೆ ತೀರಾ ಅಸಂಭವವಾಗಿದ್ದಿರಬೇಕು.

ಹುಟ್ಟಿಂದ ಬ್ರಾಹ್ಮಣ್ಯ ಅಲ್ಲ ಎಂಬ ವಾದಕ್ಕೆ ಪುರಾಣಗಳಿಂದಲೇ ಕೆಲವು ದೃಷ್ಟಾಂತಗಳನ್ನು ಎತ್ತಿ ಉದಹರಿಸುವುದುಂಟು. ಇದರಲ್ಲಿ ಮುಖ್ಯವಾದುದು ಕ್ಷತ್ರಿಯ ವಿಶ್ವಾಮಿತ್ರ ಬ್ರಹ್ಮರ್ಷಿಯಾದುದು. ಈ ಕತೆ ಭಾಗವತದಲ್ಲಿಯೂ (೯,೧೩), ಭಾರತದಲ್ಲಿಯೂ (ಶಾಂತಿಪರ್ವ) ಬರುತ್ತದೆ. ಋಚಕ ಋಷಿಗಳು ತಮ್ಮ ಪತ್ನಿಯ ಕೇಳಿಕೆಯಂತೆ ಅತ್ಯುತ್ತಮ ಬ್ರಾಹ್ಮಣ ಪುತ್ರ ಜನಿಸಲಿಕ್ಕೆ ಮತ್ತು ತಮ್ಮ ಕ್ಷತ್ರಿಯ ಅತ್ತೆಯ ಕೇಳಿಕೆಯಂತೆ ಅವಳಿಗೆ ಉತ್ತಮ ಕ್ಷತ್ರಿಯ ಪುತ್ರ ಜನಿಸಲಿಕ್ಕೆ ಮಂತ್ರಚರು ಮಾಡಿಕೊಟ್ಟರು. ಭುಂಜಿಸುವಾಗ ಅದು ಅದಲು ಬದಲಾಯಿತು. ಈ ವಿಚಾರ ತಿಳಿದಾಗ ಋಚಕರು ಪತ್ನಿಗೆ ಹೇಳಿದರು, ನಿನಗೆ ಅತ್ಯಂತಶ್ರೇಷ್ಠನಾದ ಬ್ರಾಹ್ಮಣನು ತಮ್ಮನಾಗಿ ಜನಿಸುತ್ತಾನೆ (ಅನಂತರ ಜನಿಸಿದ ವಿಶ್ವಾಮಿತ್ರರೇ ಅವರು). ಆದರೆ ನಿನಗೆ ಮಾತ್ರ ಬ್ರಾಹ್ಮಣರೂಪದ ದುರಹಂಕಾರೀ ಕ್ಷತ್ರಿಯರನ್ನು ಸಂಹರಿಸುವವ, ಕ್ಷತ್ರಿಯ ಗುಣದವ ಜನಿಸು ತ್ತಾನೆ ಎಂದರು. ಆದರೆ ಅವಳು ತನಗೆ ಅಂಥ ಮಗ ಜನಿಸದಿರಲಿ ಎಂದು ಬಹಳ ಬೇಡಿಕೊಂಡಾಗ, ಹಾಗಾದರೆ ಅವ ನಿನ್ನ ಮೊಮ್ಮಗನಾಗಿ ಜನಿಸಲಿ ಎಂದರು. ಅವನೇ ಪರಶುರಾಮ.

ವ್ಯಾಸರ ತಾಯಿ ಸತ್ಯವತಿಯು ಶೂದ್ರಳಲ್ಲವೇ ಎಂಬ ಪ್ರಶ್ನೆಯೂ ಇದೆ. ಅವಳನ್ನು ಬೆಸ್ತರ ರಾಜನು ಸಾಕಿದನು ನಿಜ. ಆದರೆ ಅವಳ ಜನನವು ಉಪ

ಚರವಸು ಎಂಬ ಕ್ಷತ್ರಿಯು ರಾಜನ ವೀರ್ಯವು ನೀರಿಗೆ ಬಿದ್ದಾಗ ಅದನ್ನು ನುಂಗಿದ ಮೀನಿನ ಹೊಟ್ಟೆಯಲ್ಲಿ ಆಗಿತ್ತು. ಅದನ್ನು ಬೆಸ್ತರು ಹಿಡಿದು ಬಗೆದಾಗ ಸಿಕ್ಕಿದ ಮಗುವನ್ನು ಅವರು ತಮ್ಮ ರಾಜನಿಗೆ ಕೊಟ್ಟರು. ಪರಾಶರ ಋಷಿ ಗಳು ಅವಳಿಗೆ ಈ ವಿಚಾರ ಹೇಳಿದ್ದರು. ಪುರಾಣಗಳಲ್ಲಿ, ಕ್ಷತ್ರಿಯರು ಬ್ರಾಹ್ಮಣ ರಾದ ಕತೆಗಳೂ ಅಲ್ಪಸ್ವಲ್ಪ ಇವೆ; ಆದರೆ ಹೇಗೆ ಎಂಬ ವಿವರ ಅಲ್ಲಿಲ್ಲ. ಇದರ ಕೋಟಿ ಕೋಟಿ ಪಾಲು ಬ್ರಾಹ್ಮಣರು, ಕ್ಷತ್ರಿಯರು, ಜನ್ಮದಿಂದಲೇ ತಮ್ಮ ಜಾತಿ ಪಡೆದದ್ದೇ ಕೇಳುತ್ತೇವೆ. ವ್ಯಾಸರಿಂದ ಶೂದ್ರ ದಾಸಿಯಲ್ಲಿ ಜನಿಸಿದ ಖ್ಯಾತ ಶ್ರೇಷ್ಠ ಧರ್ಮಿಷ್ಠ ವಿದುರನು ಕೆಳಜಾತಿಯವನಾಗಿಯೇ ಪರಿಗಣಿಸಲ್ಪಟ್ಟನು. ಆದಿಯಲ್ಲಿ ಕೃತಯುಗದಲ್ಲಿ ಕೇವಲ ಬ್ರಾಹ್ಮಣರು ಮಾತ್ರ ಇದ್ದರು. ಅವರಿಂದ ನಾಲ್ಕು ವರ್ಣಗಳು ನಂತರ ಉಂಟಾದುವು. ಕೆಲವು ಕಾಲದವರೆಗೆ ಬ್ರಾಹ್ಮಣರಲ್ಲಿ ಕ್ಷತ್ರಿಯರಲ್ಲಿ ಬಹಳ ವ್ಯತ್ಯಾಸವಿರಲಿಲ್ಲ. ಕನ್ಯಾ ವಿವಾಹವಾಗುತ್ತಿತ್ತು. ಕಲಿಯುಗದಲ್ಲಿ ಅದನ್ನು ಶಾಸ್ತ್ರ ನಿಷೇಧಿಸಿದೆ. ಶಾಸ್ತ್ರದಲ್ಲಿ, ಪುರಾಣಗಳಲ್ಲಿ, ಚಾರಿತ್ರಿಕ ಕಾಲದಲ್ಲಿ, ನಾಲ್ಕು ವರ್ಣಗಳ ವಿಚಾರವು ಧಾರಾಳವಾಗಿ ಇದೆ. ಆದರೆ ಈ ವರ್ಣಕ್ರಮ ನಡೆದುಕೊಂಡು ಬಂದುದು ಕೇವಲವಾಗಿ ಹುಟ್ಟಿಂದ ಜಾತಿ ಎಂಬ ರೀತಿಯಿಂದ ಮಾತ್ರ.

ಯುಧಿಷ್ಠಿರನು ಉರಗ ರೂಪದ ನಹುಷನಿಗೆ ಮತ್ತು ಯಕ್ಷನಿಗೆ ವರ್ಣವು ಶೀಲದಿಂದ ಮಾತ್ರ ನಿರ್ಧರಿಸಬೇಕಾದುದು ಎಂದಿದ್ದನು.

> ಸತ್ಯಂ ದಾನಂ ಕ್ಷಮಾ ಶೀಲಮಾನೃಶಂಸ್ಯಂ ತಪೋಘೃಣಾ ।
> ದೃಶ್ಯಂತೇ ಯತ್ರ ನಾಗೇಂದ್ರ ಸ ಬ್ರಾಹ್ಮಣ ಇತಿ ಸ್ಮೃತಃ ॥

ಎಂದರೆ ಸತ್ಯ ದಾನ ಕ್ಷಮೆ ಶೀಲ ಸೌಮ್ಯತೆ ತಪಸ್ಸು ಕರುಣೆ ಯಾರಲ್ಲಿ ಕಂಡು ಬರುತ್ತದೆಯೋ ಅವನು ಬ್ರಾಹ್ಮಣ, ಇವು ಇಲ್ಲದಿರುವವನು ಶೂದ್ರ ಎಂದೇ ಎಣಿಸಲ್ಪಡಬೇಕೆಂದಿರುವನು. ಶೀಲವೇ ಹೊರತು ಕುಲ, ವೇದಾಧ್ಯ ಯನ, ಸಂಸ್ಕೃತಿ ಮಾತ್ರ ಬ್ರಾಹ್ಮಣ ಲಕ್ಷಣವಲ್ಲ ಎಂದೂ ತಿಳಿಸಿದ್ದಾನೆ. ಆದರೆ ಇದನ್ನು ಶಾಸ್ತ್ರದ ವಿಶಾಲವಾದ ಹೇಳಿಕೆಯ ಹಿನ್ನೆಲೆಯಲ್ಲಿ ಮಾತ್ರ ಅರ್ಥಮಾಡಿ ಕೊಳ್ಳಬೇಕು. ಕೇವಲ ಶೀಲದ ದೃಷ್ಟಿಯಿಂದ ಶ್ರೀರಾಮಚಂದ್ರ, ಭರತ ಯುಧಿಷ್ಠಿರ, ಶ್ರೀಕೃಷ್ಣ ಇವರು ಅದ್ವಿತೀಯ ಹಿರಿಮೆಯ ಮಾನವರಾಗಿದ್ದರು. ರಾಮಾಯಣ, ಮಹಾಭಾರತ, ಭಾಗವತಗಳಲ್ಲಿ ಎಲ್ಲಿಯೂ ಅವರನ್ನು ಅವರ ಕಾಲದ ಸಮಾಜವು ಬ್ರಾಹ್ಮಣರೆಂದು ವರ್ಗೀಕರಿಸಿದ್ದಾಗಲೀ ಅವರೂ ಕ್ಷತ್ರಿಯ ರಂತಲ್ಲ, ಬ್ರಾಹ್ಮಣರಂತೆ ವರ್ತಿಸುತ್ತಿದ್ದರೆಂದಾಗಲಿ ಕಂಡು ಬರುವುದಿಲ್ಲ.

ಮಾತ್ರವಲ್ಲ ಶಾಸ್ತ್ರದ ನಿಯಮಗಳನ್ನು ಎತ್ತಿ ಹಿಡಿಯಲಿಕ್ಕಾಗಿ, ಬ್ರಾಹ್ಮಣರಿಗಿಂತಲೂ ಹೆಚ್ಚಿನ ಹಿರಿಮೆಯವರಾದರೂ ಈ ಶ್ರೀರಾಮ ಮುಂತಾದವರು ಬ್ರಾಹ್ಮಣರಿಗೆ ಬಹಳ ಗೌರವ ತೋರಿಸುತ್ತಿದ್ದರು, ಅವರ ಸೇವೆ ಕೂಡ ಮಾಡಿದ್ದರು. ಆದ್ದರಿಂದ ಯುಧಿಷ್ಠಿರನ ಹೇಳಿಕೆಯ ಅರ್ಥ ಶೀಲವು ಬ್ರಾಹ್ಮಣನ ಅತ್ಯಂತ ಅವಶ್ಯಕವಾದ ಮತ್ತು ಹಿರಿಮೆಯ ಗುಣವಾಗಬೇಕು, ಉಳಿದ ಬಾಹ್ಯಾಚಾರ, ಪಾಂಡಿತ್ಯ, ಅಷ್ಟು ಹೆಚ್ಚಿನ ಮಹತ್ವದ್ದಲ್ಲ ಎಂಬುದಾಗಿದೆ. ಶ್ರೀ ಶಂಕರಾಚಾರ್ಯರು ಒಬ್ಬ ಮುದುಕ ಢುಕ್ರಿಂಕರಣೆ ಸೂತ್ರ ಕಂಠಪಾಠ ಮಾಡುವುದನ್ನು ಖಂಡಿಸಿದ್ದರ ಅರ್ಥ ವ್ಯಾಕರಣ ವ್ಯರ್ಥವೆಂದಲ್ಲ, ಆದರೆ ಮುದುಕರಿಗೆ ಮೋಕ್ಷದ ಚಿಂತನೆ ಹೆಚ್ಚು ಮಹತ್ವದ್ದು ಎಂಬುದು. ಸನ್ಯಾಸಿಯ ಕಮಂಡಲು ಎಲ್ಲ ತೀರ್ಥಗಳಲ್ಲಿ ಮುಳುಗಿರಲಿಲ್ಲವೆ, ಅದಕ್ಕೆ ಮೋಕ್ಷವಾಯಿತೇ? ಎಂಬವರ ವಾದ, ತೀರ್ಥಯಾತ್ರೆ ಮಾತ್ರ ಸಾಲದು ಎಂಬುದಲ್ಲವೇ? ಇದೊಂದು ವಿಶೇಷ ಒತ್ತಿ ಹೇಳುವ ಕ್ರಮ ಮಾತ್ರ.

ಹೀಗೆ ಹುಟ್ಟಿಂದ ತಳಹದಿ ಸಿಕ್ಕಿದ ಬ್ರಾಹ್ಮಣ್ಯವು ಅನಂತರ ನಡೆಸುವ ಸಂಸ್ಕಾರಗಳು, ವರ್ಣಾಚಾರಗಳ ಪಾಲನೆಗಳಿಂದ ಉಳಿಯುತ್ತದೆ ಎಂಬುದು ಸರ್ವತ್ರ ಅಭ್ಯಸಿಸಲ್ಪಡುತ್ತ ಬಂದ ಕ್ರಮವಾಗಿತ್ತಲ್ಲದೆ ಕೇವಲ ಶೀಲದಿಂದ ಎಂದು ಜನರ ಪರೀಕ್ಷೆ ನಡೆಸಿ ಆಮೇಲೆ ವರ್ಣಗಳ ಚೀಟಿ ಹಚ್ಚಿದ್ದು ನಮ್ಮಲ್ಲಿ ಎಲ್ಲಿಯೂ, ಯಾವಾಗಲಾದರೂ, ನಡೆದು ಬಂದ ವಿಚಾರವೇ ಇಲ್ಲ. ಏಕೆಂದರೆ ಅದು ಅನುಷ್ಠಾನಕ್ಕೆ ಸಾಧ್ಯವೇ ಅಲ್ಲ. ಜನರ ಶೀಲ ಸ್ಪಷ್ಟರೂಪು ಗೊಳ್ಳುವುದು ೨೫-೩೦ ವರ್ಷಗಳ ನಂತರ (ಆಮೇಲೂ ಕಠಿಣ ಸಂದರ್ಭಗಳಲ್ಲಿ ತಪ್ಪಿ ಬೀಳುವವರಿದ್ದಾರೆ!), ಯೌವನದಲ್ಲಿ ಮಾತ್ರ ಅವರ ಶೀಲ ಪರೀಕ್ಷಿಸಿ ವರ್ಗೀಕರಿಸಿದರೆ ಅವರಲ್ಲಿ ಬ್ರಾಹ್ಮಣ ಎಂಬುವನಿಗೆ ಜನನಕಾಲದಿಂದ ಆಗಬೇಕಾಗಿದ್ದ ಸಂಸ್ಕಾರಗಳೆಲ್ಲ ಆಗದಿದ್ದು ಅವ ತೀರಾ ಪಾಪಿಷ್ಠನಾಗಿ ಬೆಳೆದು ಬಂದಿದ್ದನಲ್ಲ! ಆಮೇಲೊ ಬ್ರಾಹ್ಮಣ ಎಂದು ನಿರ್ಧರಿಸಿ ಬ್ರಾಹ್ಮಣ ಕನ್ಯೆಯನ್ನು ವಿವಾಹವಾದವನು ಶೀಲದಲ್ಲಿ ತಪ್ಪಿದರೆ, ಅವನ ಪತ್ನಿಯ ಗತಿ ಏನು? ಶೀಲದಿಂದ ತಪ್ಪದೆ ವರ್ಗೀಕರಿಸಲಿಕ್ಕೆ ಶ್ರೀ ರಾಮಕೃಷ್ಣ ಪರಮಹಂಸರಂಥವರಿಗೆ ಸಾಧ್ಯವಿತ್ತು, ಆದರೆ ತೀರಾ ಅಪರೂಪರಾದ ಅಂಥವರನ್ನು ಎಲ್ಲಿ ಹುಡುಕಿಕೊಂಡು ಹೋಗುವುದು? ಅವರು ಈ ಕೆಲಸಕ್ಕೆ ಒಪ್ಪಾರೇ? ಇನ್ನು ವರ್ಗೀಕರಿಸಲ್ಪಟ್ಟ ಅನೇಕಾನೇಕರು ಈ ವರ್ಗೀಕರಣ ಧಿಕ್ಕರಿಸದಿರರೇ? ದುರ್ಯೋಧನ ಶಿಶುಪಾಲರು ಕ್ಷತ್ರಿಯರಾಗಿಯೇ ಬಾಳಿರಲಿಲ್ಲವೇ?

ಇನ್ನೊಂದು ವಾದ ಬ್ರಹ್ಮಜ್ಞಾನವಿರುವವರು ಮಾತ್ರ ಬ್ರಾಹ್ಮಣರು ಎಂದು. ಶಾಸ್ತ್ರದಲ್ಲಿ ಕೋಟ್ಯಾನುಕೋಟಿ ಬ್ರಾಹ್ಮಣ ಸಮಾಜದವರು ತಮ್ಮ ಸಂಸ್ಕಾರಗಳಿಗೆ ಬ್ರಾಹ್ಮಣ ಪುರೋಹಿತರನ್ನು ಕರೆಸಿಕೊಳ್ಳಬೇಕು ಎಂದೇ ಇದೆ, ತಾವೇ ತಮ್ಮ ಸಂಸ್ಕಾರ ಪಿತೃಶ್ರಾದ್ಧ, ವ್ರತ ನಡೆಸುವುದಲ್ಲ. ಇದಕ್ಕೆ ಬ್ರಹ್ಮ ಜ್ಞಾನಿಗಳಾದ, ಲೋಕದಲ್ಲಿ ಎಲ್ಲೋ ಶ್ರೀ ರಾಮಕೃಷ್ಣರಂತೆ, ಶ್ರೀ ರಮಣ ಮಹಾಋಷಿಗಳಂತೆ ಜೀವನ್ಮುಕ್ತರಾಗಿರುವವರನ್ನು ಹುಡುಕಿಕೊಂಡು ಹೋಗಿ, ಗುರುತಿಸಿ, ಪೌರೋಹಿತ್ಯಕ್ಕೆ ಕರೆದೇ ನಡೆಸಬೇಕೆಂದಾದರೆ ಬ್ರಾಹ್ಮಣ ಆಚಾರಗಳೆಲ್ಲ ಎಂದೋ ನಾಶವಾಗಿ ಹೋಗುತ್ತಿದ್ದವು ಖಂಡಿತ !

ಯಾರು ಬ್ರಾಹ್ಮಣ ಜನ್ಮ ಪಡೆದು ಬಂದಿದ್ದರೂ ಈಗ ಅದರಿಂದ ಭ್ರಷ್ಟ ನಾಗಿದ್ದಾನೆ ಎಂಬುದನ್ನೂ ಅಗತ್ಯವಾಗಿ ತಿಳಿದಿರಬೇಕು. ಇದಕ್ಕೆ ಉತ್ತರ ಮುಂದೆ ಗಾಯತ್ರೀ ವಿಚಾರದ, ಸದಾಚಾರದ ಅಧ್ಯಾಯಗಳಲ್ಲಿ ಸ್ವಲ್ಪ ತಿಳಿಯ ಬಹುದು. ಯಾವ ಕ್ರಮ ಬಾಳಲಿಕ್ಕೂ ಶಿಸ್ತು ಬೇಕು ; ಶಿಸ್ತು ತಪ್ಪಿದವರಿಗೆ ಶಿಕ್ಷೆ ವಿಧಿಸುವ ವ್ಯವಸ್ಥೆ ಬೇಕು. ಮುಂಚೆ ನಮ್ಮ ಎಲ್ಲ ಜಾತಿಗಳಲ್ಲಿಯೂ ಅದೇ ಇತ್ತು. ಬ್ರಾಹ್ಮಣರಿಗೆ ಮಠದ ಗುರುಗಳು ಅಥವಾ ಸಮಾಜದ ಮುಖಂಡರು ಕೆಲವು ಮುಖ್ಯತರದ ಧಾರ್ಮಿಕ ತಪ್ಪುಗಳಿಗೆ ಅಥವಾ ಲೋಪಗಳಿಗೆ ಸಾಧ್ಯ ವಿದ್ದಲ್ಲಿ ಪ್ರಾಯಶ್ಚಿತ್ತ ಅಥವಾ ಅದಕ್ಕೆ ಒಪ್ಪದಿದ್ದರೆ, ಅಥವಾ ಆ ಮಟ್ಟ ಮೀರಿದ್ದಾದರೆ ಜಾತಿಯಿಂದ ಬಹಿಷ್ಕಾರ ಹಾಕುತ್ತಿದ್ದರು. ಅನಂತರ ಜಾತಿ ಯವರು ಅವನನ್ನು ಕೂಡಿಕೊಳ್ಳುತ್ತಿರಲಿಲ್ಲ, ಅವ ಪತಿತ, ಅದರಿಂದ ಕೆಳಕ್ಕೆ ಬಿದ್ದವ, ಸಂಪೂರ್ಣ ಬೇರೆಯಾದವ, ಅಲ್ಪ ಎಂದು ಮಾಡುತ್ತಿದ್ದರು. ಆದ್ದ ರಿಂದ ಬ್ರಾಹ್ಮಣ ಸಮಾಜದಲ್ಲಿ ಬ್ರಾಹ್ಮಣ್ಯದ ಸದಾಚಾರಗಳ ಪಾಲನೆ ಮಾಡು ವವರು ಮಾತ್ರ ಇರುತ್ತಿದ್ದರು.

ಆದರೆ ಬ್ರಿಟಿಷರ ರಾಜ್ಯದ ಕಾಲದಲ್ಲಿ ಸದಾಚಾರ ಪಾಲಿಸದ ಕೆಲವು ದುರಾಚಾರಿಗಳಾದ ಆಂಗ್ಲ ಕ್ರಮದ ವಿದ್ಯೆ ಕಲಿತವರು, ತಮ್ಮನ್ನು ಜಾತಿಕಟ್ಟು ಮಾಡಿದರೆ ಕೋರ್ಟಿಗೆ ಎಳೆದು ಕುಗೆಡಿಸುವೆವು ಎಂಬ ಬೆದರಿಕೆ ಹುಟ್ಟಿಸಿದ್ದು, ತಮ್ಮ ಶಾಸ್ತ್ರದಲ್ಲಿ ಪ್ರವೀಣರಲ್ಲದ, ಯಾವ್ಯಾವುದೋ ಬೇರೆ ಜಾತಿಯ ಜಡ್ಜರ ತೀರ್ಮಾನ ಏನಾಗುತ್ತದೋ ಎಂಬ ಭಯ, ಈ ಬಹಿಷ್ಕಾರದ ಕ್ರಮ ಮುಂದರಿಯದಂತೆ ಮಾಡಿತು. ಆಮೇಲೆ ಬ್ರಾಹ್ಮಣ ಆಚಾರಗಳ ಧಿಕ್ಕಾರ ಹೆಚ್ಚುತ್ತ ಬಂದಿದೆ. ಜಾತಿಕ್ರಮವೇ ತಪ್ಪು, ಅದು ನಾಶವಾಗಬೇಕು ಎಂಬ ನಮ್ಮ ಈಗಿನ ರಾಜಕೀಯ ಮುಖಂಡರ ಧೋರಣೆ ಯುವಕರಲ್ಲಿ ಜಾತಿಕ್ರಮ

ಗಳ ಶಾಸ್ತ್ರಜ್ಞಾನಕ್ಕೆ ತಾತ್ಸಾರ, ಅವುಗಳ ಅಜ್ಞಾನ,, ವಿಪರೀತ ಬೆಳೆಸಿದೆ. ಗಾಯತ್ರೀಜಪ ಮಾಡದಿರುವುದು, ಮದ್ಯ ಮಾಂಸಗಳ ಸೇವನೆ ಮುಂತಾದವು ಅವರಲ್ಲಿನ ಬ್ರಾಹ್ಮಣ್ಯ ಸ್ಪಷ್ಟವಾಗಿ ಕೆಡಿಸಿದೆ. ಆದರೆ ಅವರು ತಾವು ಬ್ರಾಹ್ಮಣರೆಂದೇ ಹೇಳಿಕೊಳ್ಳುತ್ತ, ಮಕ್ಕಳಿಗೆ ಬ್ರಾಹ್ಮಣ ನಂಟಸ್ತಿಕೆ ಅಪೇಕ್ಷಿಸುತ್ತ, ಪಡೆಯುತ್ತ ಇದ್ದಾರೆ! ತಮ್ಮ ಬ್ರಾಹ್ಮಣ್ಯದ ನಾಶ ಮಾತ್ರವಲ್ಲ, ಸಮಾಜದ ಅವನತಿಯನ್ನೂ ಸಾಧಿಸುತ್ತಿದ್ದಾರೆ. ಕುಟುಂಬದಲ್ಲಿ ಇನ್ನೂ ಶ್ರದ್ಧೆಯಿರುವ ಮಕ್ಕಳ ಸದಾಚಾರಗಳ ಅಭ್ಯಾಸಗಳನ್ನು ತಮ್ಮ ತಾತ್ಸಾರಗಳಿಂದ, ವ್ಯಂಗ್ಯಟೀಕೆಗಳಿಂದ, ತಮಾಷೆಗಳಿಂದ ನಾಶಮಾಡುತ್ತ ಮನೆಯೊಳಗಿನ ಹಾವಿನಂತೆ ವರ್ತಿಸುತ್ತಿದ್ದಾರೆ.

ಪ್ರಾಯಶ್ಚಿತ್ತಗಳ ಉಪವಾಸ ಮುಂತಾದವು ತರುವ ಕಷ್ಟಕ್ಕಿಂತ, ಹಾಗೆ ತಿದ್ದಿಕೊಳ್ಳದೆ ಸತ್ತವರಿಗೆ ಎಷ್ಟುಕ್ಕೂ ತಪ್ಪಿಸಿಕೊಳ್ಳಲಾರದ ನರಕದ ಶಿಕ್ಷೆ ಚಂಡಾಲ, ನಾಯಿ, ಹಂದಿ, ಕ್ರಿಮಿಕೀಟಗಳ ಜನ್ಮಗಳ ಶಿಕ್ಷೆ ಆಮೇಲೆ ಪುನಃ ಬ್ರಾಹ್ಮಣಜನ್ಮ ಬರುವುದು ಎಷ್ಟೆಲ್ಲ ಕಾಲದ ಮೇಲೆಯೋ ಏನೋ ಅದರ ಯೋಚನೆಯೇಬೇಡ ಎಂಬುದು ತೀರಾ ಮೂರ್ಖತನ. ಏಕೆಂದರೆ ಅದು ಈ ಕಾಲದ ಭೋಗದ ಸಾವಿರಪಾಲು ಹೆಚ್ಚು ಕಷ್ಟತರುವ ವ್ಯಾಪಾರ! ಪಾಪಕ್ಕೆ ಶಿಕ್ಷೆಗಳ ವಿಚಾರ. "ಪುನರ್ಜನ್ಮ"ದಲ್ಲಿ ಸ್ವಲ್ಪ ಸಂಗ್ರಹವಿದೆ. ನೋಡಿಕೊಳ್ಳುವುದುತ್ತಮ.

## ೬. ಗಾಯತ್ರಿಯ ಹಿರಿಮೆ

ಬ್ರಾಹ್ಮಣರು ತಮ್ಮ ಜನ್ಮದ ಹಿರಿಮೆ ಅರ್ಥಮಾಡಿಕೊಂಡು ಅದನ್ನು ಬಾಳಿಸಬೇಕು. ಅದಕ್ಕಾಗಿ ತಮ್ಮ ವರ್ಣದ ಆಚಾರಗಳನ್ನು ಅರಿತು ಪಾಲಿಸಬೇಕು. ಅವಲ್ಲಿ ಗಾಯತ್ರೀಜಪ ಅತಿಮುಖ್ಯ.

ಸಾವಿತ್ರ್ಯಾಸ್ತು ಪರಂ ನಾಸ್ತಿ । (ಮನು ೨,೮೩)

ಎಂದರೆ ನಮಗೆ ಗಾಯತ್ರಿಗಿಂತ ಶ್ರೇಷ್ಠವಾದ ಬೇರೆ ಮಂತ್ರವಿಲ್ಲ.

ಗಾಯತ್ರ್ಯೇವ ಪರೋವಿಷ್ಣುಃ ಗಾಯತ್ರ್ಯೇವ ಪರಶಿವಃ
ಗಾಯತ್ರ್ಯೇವ ಪರೋಬ್ರಹ್ಮಾ (ಬೃಹತ್ಪರಾಶರ ಸಂಧ್ಯಾಭಾಷ್ಯ)

ಗಾಯತ್ರಿಯೇ ವಿಷ್ಣು ಶಿವ ಬ್ರಹ್ಮ ಮೂವರೂ ಆಗಿರುತ್ತಾಳೆ.

ಪರಬ್ರಹ್ಮ ಸ್ವರೂಪಾ ಚ ನಿರ್ವಾಣ ಸುಖದಾಯಿನಿ (ದೇವೀಭಾಗವತ)

ಗಾಯತ್ರಿಯೇ ಪರಬ್ರಹ್ಮ ಸ್ವರೂಪಳು ನಿರ್ವಾಣ ಮುಕ್ತಿ ಕೊಡ ಲಾಪಳು.

ಬ್ರಹ್ಮಾದಯೋಽಪಿ ಸಂಧ್ಯಾಯಾಂ ಯಾಂ ಸಂಧ್ಯಾಸಮುಪಾಸತೇ (ದೇವೀಭಾಗವತ)

ಬ್ರಹ್ಮನಿಂದ ಹಿಡಿದು ಮಾನವನವರೆಗೆ ಎಲ್ಲರೂ ಅದನ್ನು ಉಪಾಸಿಸು ತ್ತಾರೆ. ರಾಮಾಯಣದಲ್ಲಿ ವಿಶ್ವಾಮಿತ್ರ ಮಹಾಋಷಿಗಳೇ ಶ್ರೀರಾಮ ಲಕ್ಷ್ಮಣರನ್ನು ಸಂಧ್ಯಾಕಾಲ ಬಂತು ಎಂದು ಎಚ್ಚರಿಸಿದ ಕತೆ ಬರುತ್ತದೆ. ಶ್ರೀಕೃಷ್ಣನು ಸಂಧಾನಕ್ಕೆ ಹೊರಟಾಗ ದಾರಿಯಲ್ಲಿ ಸಂಜೆಯಾದಾಗ ಸಂಧ್ಯೋಪಾಸನೆ ಮಾಡಿದ ಎನ್ನುತ್ತದೆ ಮಹಾಭಾರತ, ಭಾಗವತದಲ್ಲಿ (೧೦. ೭ ೭೦) ಅವನ ನಿತ್ಯಕ್ರಮ ವಿವರಿಸುತ್ತ ಅವನು ಗಾಯತ್ರೀಜಪ ಮಾಡುತ್ತಿದ್ದ ಎಂದಿದೆ.

ತಸ್ಮಾತ್ಸರ್ವೇ ದ್ವಿಜಾ ಶಾಕ್ತಾ ನ ಶೈವಾ ನ ಚ ವೈಷ್ಣವಾಃ ।
ಆದಿಶಕ್ತಿ ಮುಪಾಸಂತೇ ಗಾಯತ್ರೀಂ ವೇದಮಾತರಂ॥ (ದೇವೀಭಾಗವತ ೧೧,೧೬)

ಶಕ್ತಿಯನ್ನೇ ಪ್ರಧಾನ ದೇವತೆಯಾಗಿ ಆರಾಧಿಸುವ ದ್ವಿಜರೂ ಶಾಕ್ತರೂ, ಅಂತೆಯೇ ಶೈವರೂ ವೈಷ್ಣವರೂ ಎಲ್ಲ ಗಾಯತ್ರಿಯ ಉಪಾಸಕರೇ. **ಉಪನಯನವಾದವರು** ಶಿವ ವಿಷ್ಣು ದೇವರುಗಳ ನಾಮ ಜಪಗಳನ್ನು ಮಾಡದಿದ್ದರೆ ಭ್ರಷ್ಟರಾಗುವುದಿಲ್ಲ. ಆದರೆ **ಗಾಯತ್ರೀ ಜಪಿಸದಿದ್ದರೆ ಭ್ರಷ್ಟರೇ ಆಗುತ್ತಾರೆ.**

ಗಾಯತ್ರ್ಯಾ ಬ್ರಾಹ್ಮಣಮಸೃಜತೇ । (ವಸಿಷ್ಠಸ್ಮೃತಿ ೪,೩)

ದ್ವಿಜನಿಗೆ ಬ್ರಾಹ್ಮಣ್ಯವು ಬರುವುದೇ ಗಾಯತ್ರಿಯಿಂದ. ಶಾಸ್ತ್ರದಲ್ಲಿ ಹಲವು ಕಡೆಗಳಲ್ಲಿ ದೇವರು **ಬ್ರಾಹ್ಮಣ ಪ್ರಿಯ** ಎಂದು ಹೇಳಿದೆ.

ಗಾಯತ್ರೀಂ ವಿಪ್ರಕಲ್ಯಾಣಿ ವಿಪ್ರಕೈವಲ್ಯಶಮನೀ । (ಸಹಸ್ರನಾಮ)

ಬ್ರಾಹ್ಮಣರಿಗೆ ಕಲ್ಯಾಣವನ್ನುಂಟುಮಾಡುವವಳು, ಅವರಿಗೆ ಮುಕ್ತಿ ದಯಪಾಲಿಸುವವಳು ಎಂದಿದೆ.

ಸಂಧ್ಯಾಯಾಂ ತು ಕರ್ತವ್ಯಂ ದ್ವಿಜೇನಾತ್ಮವಿದಾ ಸದಾ ॥ (ಅತ್ರಿ ಸಂ.)

ಆದ್ದರಿಂದ ತನ್ನ ಶ್ರೇಯಸ್ಸನ್ನು ಬಯಸುವ ದ್ವಿಜನು **ಸಂಧ್ಯಾವಂದನೆಯನ್ನು ತಪ್ಪದೆ ಮಾಡಬೇಕು.**

ಯಸ್ಯ ನಾಸ್ತ್ಯಾದರಸ್ತತ್ರ ನ ಸ ಬ್ರಾಹ್ಮಣ ಉಚ್ಯತೇ ॥ (ಕಾತ್ಯಾಯನ)

**ಸಂಧ್ಯಾವಂದನೆಯಲ್ಲಿ ಆದರ ಇಲ್ಲದವ ಬ್ರಾಹ್ಮಣನಲ್ಲ.**

ಸಂಧ್ಯಾ ಹೀನೋಽಶುಚಿರ್ನಿತ್ಯ ಮನರ್ಹಸ್ಸರ್ವ ಕರ್ಮಸು ।
ಯದನ್ಯತ್ಕುರುತೇ ಕರ್ಮ ನ ತಸ್ಯ ಫಲಮಶ್ನುತೇ ॥ (ದಕ್ಷ)

ಸಂಧ್ಯೋಪಾಸನೆ ಬಿಟ್ಟದ್ದರಿಂದ ಅವ ಅಶುಚಿಯಾಗಿದ್ದಾನೆ. ಆದ್ದರಿಂದ ಅವನು ಬೇರೆ **ವೇದೋಕ್ತಕರ್ಮಗಳನ್ನು ಮಾಡಿದರೂ ಫಲಹೊಂದನು.** ಅವನು ಮಾಡುವ ಅಧಿಕಾರವನ್ನೇ ಕಳಕೊಂಡಿರುತ್ತಾನೆ (ದೇವೀಭಾಗವತ ೧೬,೯).

ನ ತಿಷ್ಠತಿ ತು ಯಃ ಪೂರ್ವಾಂ ನೋಪಾಸ್ತೇಯಶ್ಚ ಪಶ್ಚಿಮಾಂ ।
ಸ ಶೂದ್ರವದ್ಬಹಿಷ್ಕಾರ್ಯಃ ಸರ್ವೇಭ್ಯೋದ್ವಿಜಕರ್ಮಣಃ ॥ (ಮನು ೨,೧೦೩)

ಅವನನ್ನು ಶೂದ್ರನಂತೆ ಎಲ್ಲ ಬ್ರಾಹ್ಮಣ ಕರ್ಮಗಳಿಂದಲೂ ಬಹಿಷ್ಕರಿಸ ಬೇಕು. ಕಲಿಯುಗಕ್ಕೇ ಅನ್ವಯಿಸುವ ಪರಾಶರ ಸ್ಮೃತಿಯಲ್ಲಂತೂ ಜಪಬಿಟ್ಟವ ಶೂದ್ರನಿಗಿಂತಲೂ ನಿಕೃಷ್ಟ ಎಂದು ಹೇಳಿದೆ! ಹೀಗೆ ಅವನು ಅಯೋಗ್ಯ ನಾಗುವ ಬ್ರಾಹ್ಮಣ ಕರ್ಮಗಳೆಂದರೆ ಪಿತೃಶ್ರಾದ್ಧ, ಮಕ್ಕಳಿಗೆ ಮಾಡುವ ನಾಮಕರಣ, ಉಪನಯನ, ವಿವಾಹ ಸಂಸ್ಕಾರಗಳು, ಮೃತರಾದವರ ಕ್ರಿಯೆ ಗಳು ಮುಂತಾದವು.

ಗಾಯತ್ರೀ ಮಾತ್ರನಿಷ್ಠಸ್ತು ಕೃತಕೃತ್ಯೋ ಭವೇ ದ್ವಿಜಃ ॥ (ದೇವೀಭಾಗವತ)

ಆದರೆ ಕೇವಲ ಗಾಯತ್ರಿಯಿಂದ ಅವನು ತನ್ನ ಬ್ರಾಹ್ಮಣ ಜನ್ಮ ಸಾರ್ಥಕ ಮಾಡಿಕೊಳ್ಳಬಹುದು.

ಗಾಯತ್ರೀಂ ತು ಗುರೋರ್ಲಬ್ಧ್ವಾ । (ಗೌತಮ)
ಗಾಯತ್ರೀಂ ಗುರುಣಾಽದಿಷ್ಟಾಂ । (ವಸಿಷ್ಠ)

ಧಾರ್ಮಿಕ ಸಾಧನೆಯ ಆಸೆ ಉಂಟಾದವರು ಗುರುವಿನಿಂದ ಅತಿಯೋಗ್ಯ ವಾದ ಮಂತ್ರದ ಉಪದೇಶ ಪಡೆಯಲಿಕ್ಕೆಂದು ಯೋಗ್ಯ ಗುರುವನ್ನು ಬಹಳ ಹುಡುಕುವುದುಂಟು. ಬೇಗ ಸಫಲರಾಗದಿರುವುದುಂಟು. ಆದರೆ ಬ್ರಾಹ್ಮಣ ಬಾಲಕನಿಗೆ ಏನೂ ಪ್ರಯಾಸವಿಲ್ಲದೆ ಅಂಥ ಅತ್ಯಂತ ಶ್ರೇಷ್ಠ ಮಂತ್ರ, ಸಾಯುಜ್ಯ ಮೋಕ್ಷ ಕೂಡಾ ತರಬಲ್ಲ ಮಂತ್ರ, ಮನೆಯಲ್ಲೇ ಉಪನಯನ ಸಂಸ್ಕಾರದ ಮೂಲಕ ಲಭಿಸಲಿಕ್ಕೆ ಅವ ಹಿಂದೆ ಎಷ್ಟೆಲ್ಲ ಜನ್ಮಗಳಲ್ಲಿ ಧಾರ್ಮಿಕ ಸಾಧನೆ ನಡೆಸಿರಲೇಬೇಕು! ನಾನು ಚಿಕ್ಕವನಿದ್ದಾಗ ನನ್ನ ಊರಲ್ಲಿ ತುಂಬ ಬ್ರಾಹ್ಮಣರ ಮನೆಗಳಿರುವಲ್ಲಿ, ಒಬ್ಬನೇ ಒಬ್ಬನೂ ಜಪ ಬಿಟ್ಟವನನ್ನು ನಾನು ಕಂಡಿರಲಿಲ್ಲ, ಕೇಳಿರಲಿಲ್ಲ.

ಆದರೆ ನಾಸ್ತಿಕ ಸೆಕ್ಯುಲರ್ ಸರ್ಕಾರ ಬಂದ ಮೇಲೆ ದೇಶದಲ್ಲಿ ಜಾತಿಯ ಖಂಡನೆಯ, ಸರ್ಕಾರದ ನಾಸ್ತಿಕ ಧೋರಣೆಯ ಪರಿಣಾಮವಾಗಿ ಈಗ ಜಪ

ಮಾಡದಿರುವ "ಬ್ರಾಹ್ಮಣ"ರೇ ತುಂಬಿ ಹೋಗಿದ್ದಾರೆ. ಉಪನಯನದ ಮೂಲಕ ತಮಗೆ ಸಿಕ್ಕಿದ ಮಂತ್ರವು ವಜ್ರವಲ್ಲ, ಏನೂ ಬೆಲೆ ಇಲ್ಲದ ಗಾಜಿನ ಹರಳು ಎಂದು ಬಿಸಾಟವರೇ ಕಾಣುತ್ತಾರೆ.

ಒಲೆಗೆ ಬೆಂಕಿ ಹೂಡಿ ಆಮೇಲೆ ಅದನ್ನು ಪೋಷಿಸುತ್ತ ಬಂದವ ಮಾತ್ರ ಮತ್ತೊಬ್ಬನಿಗೆ ಅದರಿಂದ ಬೆಂಕಿ ಕೊಡಲಾಪನು. ಅಂತೆಯೇ ಗಾಯತ್ರೀ ಉಪದೇಶ ಪಡೆದು ನಿತ್ಯ ಜಪ ಮಾಡುತ್ತ ಬಂದವ ಮಾತ್ರ ಮಗನಿಗೆ ಉಪನಯನದ ವೇಳೆ ಗಾಯತ್ರೀ ಉಪದೇಶ ಕೊಡಬಲ್ಲನು. ಜಪ ಬಿಟ್ಟವ (ಒಲೆಯಲ್ಲಿ ಬೆಂಕಿ ಇಲ್ಲದವನಂತೆ) ಉಪದೇಶ ಕೊಡುವ ನಾಟಕ ಮಾಡಿಯಾನು ಅಷ್ಟೆ; ಅದರಿಂದ ಏನೂ ಫಲವಿಲ್ಲ. ಜಪ ಬಿಟ್ಟು ಶೂದ್ರ ಮಟ್ಟಕ್ಕೆ ಬಂದವ ಮಗನಿಗೆ ಬ್ರಾಹ್ಮಣ್ಯ ತರುವ ಮಂತ್ರ ಹೇಗೆ ಉಪದೇಶಿಸಿಯಾನು? ಹಿರಿಯ ಬಂಧುಗಳ ಅಭಾವದಲ್ಲಿ ಗಾಯತ್ರೀ ಉಪದೇಶ ಮಾಡುವ ಅಣ್ಣ ೧೨,೦೦೦ ಸಾರಿ ಜಪ ಮಾಡಿರಬೇಕು. ಜಪ ಬಿಟ್ಟು ಅನಂತರ ಪುನಃ ಪ್ರಾರಂಭಿಸಿದವನೂ (ಅವನಿಗೆ ಪುನರುಪನಯನ ಹೇಳಿದೆ!) ಅನಂತರವೂ ೧೨,೦೦೦ ಜಪ ಮಾಡಿದವನಾಗಿರಬೇಕು.

ಬ್ರಾಹ್ಮಣ ಬಾಲಕನಿಗೆ ೫ ರಿಂದ ೮ ವರ್ಷಗಳವರೆಗೆ ಉಪನಯನಕ್ಕೆ ಉತ್ತಮ ಕಾಲ. ೯ ರಿಂದ ೧೧ ಮಧ್ಯಮ ಕಾಲ; ೧೨ ರಿಂದ ೧೬ (ಗರ್ಭ ಕೂಡಿ) ಕನಿಷ್ಠ ಕಾಲ. ಆಗಲೂ ಉಪನಯನ ಆಗದವ ಪತಿತ ಸಾವಿತ್ರಿಕ ಅಥವಾ ವ್ರಾತ್ಯನಾಗುತ್ತಾನೆ (ಮನು ೨,೩೯). ಆವನು ಆಮೇಲೆ ಯಾವಾಗಲೂ ಅಪವಿತ್ರನು. ಅವನಿಗೆ ಆಪತ್ಕಾಲದಲ್ಲಿಕೂಡಾ ಬ್ರಾಹ್ಮಣರು ವೇದೋಪದೇಶ ಮಾಡಕೂಡದು, ಕನ್ಯಾದಾನ ಮಾಡಕೂಡದು: ಅವನಿಗೆ ಆಮೇಲೆ ಉಪನಯನವಾಗಬೇಕಾದರೆ ಮೂರು ಪ್ರಜಾಪತ್ಯ ಕೃಚ್ಛ್ರ ನಡೆಸಬೇಕು (ಮನು ೧೧,೧೯೧) ಹೊರತು ಅಲ್ಪತರದ ಪ್ರಾಯಶ್ಚಿತ್ತವನ್ನಲ್ಲ. ಈ ಕಾಲದಲ್ಲಿ ಹೀಗೆ ಉಪನಯನ ಮುಂದೆ ಹಾಕಿ ಕಟ್ಟಕಡೆಗೆ ಚುಟುಕಾಗಿ, ಕೇವಲವಾಗಿ ಉಪನಯನವಾಗಿದೆ ಎಂದು ಹೇಳಲಿಕ್ಕೆ ಮಾತ್ರ ಅದನ್ನು ಮಾಡುವುದು ಹೆಚ್ಚುತ್ತಿದೆ. ಆದರೆ ಕಾಲ ಮೀರಿ, ಯುಕ್ತ ಪ್ರಾಯಶ್ಚಿತ್ತವಿಲ್ಲದೆ ನಡೆಸಿದ ಉಪನಯನದಿಂದುಂಟಾಗುವ ಜಪದ ಲೋಪದೋಷಗಳ ಪಾಪವೆಲ್ಲ ತಂದೆಗೆ ಬಾರದೆ? ಸಕಾಲದಲ್ಲಿ ಉಪನಯನ ಮಾಡದಿರಲಿಕ್ಕೆ ಲೌಕಿಕ ಆಡಂಬರಗಳೊಡನೆ ಅದನ್ನು ನಡೆಸಲಾರದ ಅನಾನುಕೂಲತೆ ಕಾರಣವಂತೆ! ಕೇವಲ ಈ ಆಡಂಬರಕ್ಕಾಗಿ ಮಗನಲ್ಲಿ ಪಾಪತುಂಬುವುದು ಅವನಿಗೆ ಮಾಡುವ ಭಯಂಕರ ಅನ್ಯಾಯ.

ರಾಜ್ಯ ಕೇಂದ್ರ ಗ್ರಂಥಾಲಯ
ಬೆಂಗಳೂರು.



ಅತಿಚಿಕ್ಕ ಲೌಕಿಕ ಮಟ್ಟದಲ್ಲಾದರೂ ಸಕಾಲದಲ್ಲಿ ಉಪನಯನ ಮಾಡಿದರೆ ಪ್ರಯೋಜನ ಕಂಡೀತು. ಈಗಳಿನ ಕಾಲದಲ್ಲಿ ಮಕ್ಕಳು ಬೆಳೆದಂತೆ ಅವರಲ್ಲಿ ಬಹಳ ಅಶುದ್ಧಭಾವನೆಗಳು ತುಂಬುತ್ತವೆ. ಸಕಾಲದಲ್ಲಿ ಕ್ರಮದಂತೆ ಉಪನಯನ ಮಾಡುವುದರಿಂದ ಅಂದಿನಿಂದ ಅವನಲ್ಲಿ ನಿತ್ಯ ಜಪವು ರಕ್ಷೆಯಾಗಿ ನಿಲ್ಲುವುದು ಸಾಧ್ಯ, ಸೆಕ್ಯುಲರ್ ಕ್ರಮ ತುಂಬಿರುವ ಈ ಕಾಲದಲ್ಲಿ ಬಾಲಕರ ಮನಸ್ಸು ಅವರ ಕೀಳುತರದ ಸಂಗಾತಿಗಳಿಂದ, ಹಾಳು ಓದಿಂದ, ಮಡಿ ಮೈಲಿಗೆ ಶುದ್ಧ ಆಚಾರ ಮನೆಯಲ್ಲಿ ಹಿರಿಯರಲ್ಲಿ ವಿಧೇಯತೆ ಮುಂತಾದ ಉತ್ತಮ ಧಾರ್ಮಿಕ ಅಭ್ಯಾಸಗಳ ಅಭಾವದಿಂದ ಬಹಳ ಹೊಲಸಾಗಿರುತ್ತದೆ. ಅವರು ಗಾಯತ್ರೀ ಜಪಕ್ಕೆ ಯೋಗ್ಯತೆ ಕಳಕೊಂಡಿರುತ್ತಾರೆ. ಅಂಥವರಿಗೆ ಜಪ ಏನೂ ಒಗ್ಗುವುದಿಲ್ಲ. ಅಂಥ ಅನಧಿಕಾರಿಗಳನ್ನು ಗಾಯತ್ರೀದೇವಿ ಸಹಿಸಳು. ಸದಾಚಾರಗಳು ದೇಹದ ಮೇಲೆ ಸಾತ್ವಿಕ ಶಿಸ್ತು ಬೆಳೆಸುತ್ತವೆ. ಜಪಕ್ಕೆ ಅದು ಬೇಕು. ಜಪ ಬಿಟ್ಟ ತನ್ನ ಹುಡುಗನಿಗೆ ಜಪಮಾಡಲು ಬೋಧಿಸಲು ಒಬ್ಬಳು ನನ್ನನ್ನು ಕೇಳಿಕೊಂಡಳು. ಹಾಗೆ ಮಾಡಿ ಅವನನ್ನು ಒಪ್ಪಿಸಿದೆ. ಆದರೆ ಅನಂತರ ಎರಡುದಿನ ಜಪಮಾಡಿದ, ಮತ್ತೆ ಮಾಡಲು ಆಗಲಿಲ್ಲ. ಶಿಸ್ತಿಲ್ಲದ ಹೊಲಸಾದ ಮನಸ್ಸಿಗೆ ಅದು ಸಾಧ್ಯವಿಲ್ಲ.

485026R

ಜಪ ಬಿಟ್ಟುದರ ಪರಿಣಾಮ ಯೋಚಿಸಿದಷ್ಟಕ್ಕೂ ಅತ್ಯಂತ ಭಯಂಕರ ತೋರುತ್ತದೆ! ಅಂಥವರು ತಾವು ಬ್ರಾಹ್ಮಣರೆಂದು ಭಾವಿಸುತ್ತ ಬಾಳುವುದು, ತಮ್ಮನ್ನೇ ತಾವು ವಂಚಿಸಿಕೊಳ್ಳುತ್ತಿರುವುದಾಗಿದೆ. ಜಪಬಿಟ್ಟವನಿಗೆ,

ವ್ರಜಂತೀಹ ದುರಾತ್ಮಾನ ಸ್ತಾಮಿಸ್ರ ನರಕಂ ನೃಪ ॥ (ವಿಷ್ಣುಪುರಾಣ)

ಸೈನ್ಯ ಬಿಟ್ಟು ಓಡಿಬಂದವರನ್ನು ಸರ್ಕಾರವು ಶಿಕ್ಷಿಸುವಂತೆ ಜಪ ಬಿಟ್ಟು ದೂರವಾದವರನ್ನು ಯಮ ತಾಮಿಸ್ರ ನರಕಕ್ಕೆ ಹಾಕುತ್ತಾನೆ. ಜಪಬಿಟ್ಟವನು,

ಜೀವಮಾನೋಭವೇಚ್ಛೂದ್ರೋಮೃತಃ ಶ್ವಾನೋಭಿಜಾಯತೇ॥ (ದೇ.ಭಾಗವತ)

ಎಂದರೆ ಅವರ ಮುಂದಿನ ಜನ್ಮ ನಾಯಿಯಾಗಿ! ಪುನಃ ಬ್ರಾಹ್ಮಣಜನ್ಮ ಎಂದೋ ಏನೋ! ಆದರೆ ಜಪಮಾಡುತ್ತಿರುವ ಬ್ರಾಹ್ಮಣನಿಗೆ ಗಾಯತ್ರೀ ದೇವಿಯ ಅಭಯ ವಾಕ್ಯವಿದೆ :

ಗಾಯಂತಂ ತ್ರಾಯತೇ ಯಸ್ಮಾತ್ ಗಾಯತ್ರೀತ್ಯಭಿಧೀಯತೇ ॥

ತನ್ನ ಉಪಾಸನೆ ಮಾಡುವವರನ್ನು ತಾನು ರಕ್ಷಣೆಮಾಡುತ್ತೇನೆ ಎಂದು. ಆದ್ದರಿಂದಲೇ ಗಾಯತ್ರೀ ಎಂದು ಅವಳ ಹೆಸರು. ಅಥರ್ವಣವೇದದಲ್ಲಿ ಹೇಳಿದೆ (೧೯,೭೧,೧).

894.814 308
KHR N91

ಸ್ತುತಾಮಯಾ ವರದಾ ವೇದಮಾತಾ
ಪ್ರಚೋದಯಂತಾಂ ಪಾವಮಾನೀ ದ್ವಿಜಾನಾಂ ।
ಆಯುಃ ಪ್ರಾಣಂ ಪ್ರಜಾಂ ಪಶುಂ ಕೀರ್ತಿಂ
ದ್ರವಿಣಂ ಬ್ರಹ್ಮವರ್ಚಸಂ ಮಹ್ಯಂ ದತ್ವಾ ವ್ರಜತ ಬ್ರಹ್ಮಲೋಕಂ ॥

ನನ್ನಿಂದ ಸ್ತುತಿಸಲ್ಪಟ್ಟ ವರಕೊಡುವವಳಾದ ವೇದಮಾತೆಯಾದ ಪಾಪ ಪರಿಹಾರಕಳಾದ ಗಾಯತ್ರಿಯು ಬ್ರಾಹ್ಮಣರನ್ನು ಪ್ರೇರಿಸಲಿ; ಅವರಿಗೆ ಆಯಸ್ಸು, ಪ್ರಾಣಧಾರಣೆ ವಸ್ತುಗಳು, ಮಕ್ಕಳು, ಗೋವು, ಕೀರ್ತಿ, ಐಶ್ವರ್ಯ, ಬ್ರಹ್ಮವರ್ಚಸ್ಸು ಕೊಡಲಿ! ಆಮೇಲೆ ಅವರು ಬ್ರಹ್ಮಲೋಕಕ್ಕೆ ಹೋಗಲಿ! ಎಂದರೆ ಗಾಯತ್ರೀ ಉಪದೇಶ ಪಡೆದು ಜಪ ಮಾಡುವ ಬ್ರಾಹ್ಮಣನ ಲೌಕಿಕ ಅನುಕೂಲತೆಗಾಗಿ ಅವಳು ಆಯಸ್ಸು, ಸಂತಾನ, ಐಶ್ವರ್ಯಗಳನ್ನೂ ಕೊಡುತ್ತಾಳೆ. ಮಂತ್ರ ಉಪಾಸಕನ ಪಾಪವನ್ನು ನಾಶ ಮಾಡುತ್ತಲೇ ಬರುತ್ತಾಳೆ.

ಗಾಯಂತಂ ತ್ರಾಯತೇ ಯಸ್ಮಾತ್ಪಾತಕಾದುಪ ಪಾತಕಾತ್ ।
ಯದಹ್ನಾತ್ಕುರುತೇ ಪಾಪಂ ತದಹ್ನಾತ್ಪ್ರತಿ ಮುಚ್ಯತೇ ।
ಯದ್ರಾತ್ರಿಯಾತ್ಕುರುತೇ ಪಾಪಂ ತದ್ರಾತ್ರಿಯಾತ್ಪ್ರತಿ ಮುಚ್ಯತೇ ॥

ದಿನ ನಿತ್ಯದಲ್ಲಿ ಹಗಲಲ್ಲಿ ಮಾಡಿದ ಪಾಪ ಹಗಲಿನ ಉಪಾಸನೆಯಿಂದ ರಾತ್ರಿ ಮಾಡಿದ ಪಾಪ ರಾತ್ರಿಯ ಉಪಾಸನೆಯಿಂದ ನಾಶವಾಗುತ್ತದೆ.

ದಶೇನ ಜನ್ಮಜನಿತಂ ಶತೇನ ಚ ಪುರಾಕೃತಂ ।
ಸಹಸ್ರೇಣ ತ್ರಿಜನ್ಮೋತ್ಥಂ ಗಾಯತ್ರೀಹಂತಿ ದುಃಷ್ಕೃತಂ॥ (ಬೃಹತ್ಪರಾಶರ ೫,೬೨)

ಮೂರು ಹೊತ್ತಲ್ಲೂ ಕೇವಲ ೧೦ ಗಾಯತ್ರೀಜಪ ಮಾಡಿದರೂ ಈ ಜನ್ಮದ ಪಾಪಗಳು ನಾಶವಾಗುತ್ತವೆ (ಎಂದರೆ ಪುನಃ ಬ್ರಾಹ್ಮಣ ಜನ್ಮ ಸಾಧ್ಯ). ೧೦೦ ಸಾರಿ ಜಪದಿಂದ ಹಿಂದಿನ ಜನ್ಮದ ಪಾಪ, ೧,೦೦೦ ದಿಂದ ಮೂರು ಜನ್ಮಗಳ ಪಾಪ ನಾಶ. ಆದರೆ ಮಹಾಪಾತಕಗಳ ಪಾಪ ಏಳು ಜನ್ಮಗಳವರೆಗೂ ಪೂರ್ಣ ನಾಶವಾಗುವುದಿಲ್ಲವಾದ್ದರಿಂದ ೧,೦೦೦ಕ್ಕೂ ಜಾಸ್ತಿ ಜಪಮಾಡುವುದು ಬಹಳ ಭದ್ರವಾದ ದಾರಿ. ವಯಸ್ಸಾದ ಮೇಲಾದರೂ ೧,೦೦೦ ಗಾಯತ್ರೀ ಜಪದ ಅಭ್ಯಾಸವನ್ನು ಬ್ರಾಹ್ಮಣರು ಹಿಡಿಯುವುದುತ್ತಮ.

ಜಪ ಮಾಡುವಾಗ ಜಪದ ಉದ್ದೇಶವಾಗಿ ಪಾಪಕ್ಷಯವಾಗಲಿ ಎಂದು ಮಾತ್ರವಲ್ಲ—ಸಾಯುಜ್ಯಂ ವಿನಿಯೋಗ ಎಂದರೆ ಸಾಯುಜ್ಯ ಮುಕ್ತಿ ಲಭಿಸಲಿಕ್ಕೆ ಎಂದು ಹೇಳುವುದೂ ಕ್ರಮ. ನಾಲ್ಕು ತರದ್ದಾದ ಮುಕ್ತಿಗಳಲ್ಲಿ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮುಕ್ತಿಗಳನ್ನು ಭಕ್ತಿಯ ದಾರಿ ಮುಟ್ಟಿಸೀತು. ಆದರೆ ಇವೆಲ್ಲ ಹೊಂದಿದ್ದ ಜಯವಿಜಯರಿಗೆ ಭೂಲೋಕದಲ್ಲಿ ಜನ್ಮ

ಪುನಃ ಪಡೆಯಬೇಕಾಯಿತು. ವೈಕುಂಠದಲ್ಲೂ ಅಹಂಕಾರ ಮಮಕಾರ ಹೋಗಿರಲಿಲ್ಲ. ಆದರೆ ಸಾಯುಜ್ಯಮುಕ್ತಿಯಲ್ಲಿ ಪರಬ್ರಹ್ಮನಲ್ಲೇ ಐಕ್ಯನಾಗುತ್ತಾನೆ. ಅದಕ್ಕಿಂತ ಮೇಲ್ತರದ ಮುಕ್ತಿಯಿಲ್ಲ. ಇತರ ಧರ್ಮಗಳಿಗೆ ಈ ಮುಕ್ತಿಯ ಕಲ್ಪನೆಯೇ ಇಲ್ಲ.

ಆಯುಷ್ಯವು ಶಾಶ್ವತವಲ್ಲ. ನಮ್ಮಲ್ಲಿ ಹಲವು ತರದ ದೋಷಗಳಿವೆ. ಆದ್ದರಿಂದ ಜನ್ಮವನ್ನು ಆದಷ್ಟು ಚೆನ್ನಾಗಿ ಶೀಘ್ರವಾಗಿ ಧಾರ್ಮಿಕಸಾಧನೆಯಲ್ಲಿ ವಿನಿಯೋಗಿಸಲಿಕ್ಕೆಂದು ನಮಗೆ ಜಪ ಮಾತ್ರವಲ್ಲ, ಪೂಜೆ, ವ್ರತಗಳು, ಉಪವಾಸ, ಹೋಮ, ಬ್ರಹ್ಮಯಜ್ಞ, ವೈಶ್ವದೇವ ಮುಂತಾದವನ್ನೂ ಶಾಸ್ತ್ರ ವಿಧಿಸಿದೆ. ಆದರೆ ಈ ಕಾಲದಲ್ಲಿ ತೊಡಕುಗಳೇ ಹೆಚ್ಚಾಗಿದ್ದು ಇವನ್ನೆಲ್ಲ ಬಿಡುವವರೇ ಅತ್ಯಧಿಕ ; ಆದರೆ ಏನಿಲ್ಲದಿದ್ದರೂ ಗಾಯತ್ರೀ ಜಪವನ್ನಾದರೂ ಆದಷ್ಟು ಮಾಡಬೇಕು. ಏಕೆಂದರೆ

> ಸರ್ವಕರ್ಮವಿಹೀನೋಽಪಿ ವಿದ್ಯಾಹೀನಶ್ಚಯೋ ದ್ವಿಜಃ ।
> ಸಂಧ್ಯಯೋಸ್ತತ್ಪರಶ್ಚೇತ್ಸ್ಯಾತ್ ಸ ಸಾಕ್ಷಾದ್ಬ್ರಹ್ಮಣಾ ಸಮಃ ॥
> (ಆಶ್ವಲಾಯನ ಸ್ಮೃತಿರತ್ನ ೪–೧೪೬)

ಬ್ರಾಹ್ಮಣನು ಇತರ ವೈದಿಕ ಕರ್ಮಗಳನ್ನೆಲ್ಲ ಬಿಟ್ಟವನಿದ್ದರೂ ವಿದ್ಯಾಹೀನನಾಗಿದ್ದರೂ ಸಂಧ್ಯೋಪಾಸನೆಯನ್ನು ತಪ್ಪದೆ ಮನಸ್ಸಿಟ್ಟು ನಡೆಸುತ್ತಿದ್ದರೆ ಅವನು ಬ್ರಹ್ಮನಿಗೆ ಸಮನು.

ಸಾಮಾನ್ಯ ಮನುಷ್ಯನ ಹಿರಿಮೆ ಬುದ್ಧಿಶಕ್ತಿಯಲ್ಲಿದೆ. ಗಾಯತ್ರೀ ದೇವಿಯು ಜಪದಮೂಲಕ ಬ್ರಾಹ್ಮಣನಿಗೆ ಅದನ್ನು ದಯಪಾಲಿಸುತ್ತಾ ಬಂದು ಅವನ ಹಿರಿಮೆಸ್ಥಾಪಿಸಿದಳು. ಬ್ರಾಹ್ಮಣರು ದೇಶದಲ್ಲಿ ಕೇವಲ ೨ ಶತಾಂಶದವರು. ಅವರು ಬೇಕೆಂದೇ ಶ್ರೀಮಂತಿಕೆ ಆಶಿಸಿದವರಲ್ಲ. ರಾಜಕೀಯ ಅಧಿಕಾರ ದೂರ ಇಟ್ಟವರು. ಆದರೂ ಅವರು ಈ ದೇಶದ ಸಂಸ್ಕೃತಿಯನ್ನು ರೂಪಿಸಿ ಇತರ ವರ್ಗದವರಿಗೆ ಗುರುಗಳೂ ಆದರ್ಶರೂ, ಗೌರವ ಪಡೆಯುವವರೂ ಆದರು. ದೇವರ ಮತ್ತು ಗಾಯತ್ರೀದೇವಿಯ ಪ್ರಿಯರಾದ ಅವರು ಪ್ರಪ್ರಥಮವಾಗಿ ಗಾಯತ್ರಿಜಪದ ಸಹಾಯ ಪಡೆಯುವುದು ಅತ್ಯಂತ ಅಗತ್ಯವಾದ ಕಾರ್ಯ. ಬ್ರಾಹ್ಮಣರಿಗೆ ಕಾಲ ಬಹಳ ಕಷ್ಟವಾಗುತ್ತ ಬರುತ್ತಿದೆ. ಆದರೆ ಅವರು ತಪ್ಪದೆ ೧೦೮ ಗಾಯತ್ರೀ ಜಪ ಮಾಡುತ್ತ, ತಾನು ಬ್ರಾಹ್ಮಣ ಎಂದು ದುರಭ್ಯಾಸಗಳನ್ನು ಬೆಳೆಸದಿದ್ದರೆ, ಹೆಚ್ಚು ಬುದ್ಧಿಶಕ್ತಿ ಬೆಳೆಸಿ ಸುಲಭವಾಗದಿರದು. ಜಪಮಾಡುವಾಗ ಗಾಯತ್ರಿಯ ಅರ್ಥ ನೆನೆಸುತ್ತಿರುವುದುತ್ತಮ.

**ಯಃ**-ಯಾವನು, **ನಃ**-ನಮ್ಮ, **ಧೀಯಃ**-ಬುದ್ಧಿಯನ್ನು, **ಪ್ರಚೋದಯಾತ್**-ಪ್ರೇರಿಸುತ್ತಾನೆಯೋ, **ತತ್**-ಆ, **ದೇವಸ್ಯ**-ದೇವನಾದ, (ಪ್ರಕಾಶಮಾನನಾದ) **ಸವಿತುಃ**-ಜಗತ್ಕಾರಣನಾದ ಪರಮಾತ್ಮನ (ಸೂರ್ಯನ), **ವರೇಣ್ಯಂ**-ಶ್ರೇಷ್ಠವಾದ, **ಭರ್ಗ**-ತೇಜಸ್ಸನ್ನು, **ಧೀಮಹಿ**-ಧ್ಯಾನಿಸುತ್ತೇವೆ.

ಅಥವಾ ಸಾಮಾನ್ಯರು ಬಯಸುವ ಪ್ರಾರ್ಥನಾ ರೂಪದಲ್ಲಾದರೆ, ತತ್-ಯಾವನು, ದೇವಸ್ಯ-ಪ್ರಕಾಶಮಾನನಾದ, ಸವಿತುಃ-ಜಗತ್ಕಾರಣನಾದ ಪರಮಾತ್ಮನ, ವರೇಣ್ಯಂ-ಅತಿ ಶ್ರೇಷ್ಠವಾದ, ಭರ್ಗ-ದಿವ್ಯ ತೇಜಸ್ಸನ್ನು, ಧೀಮಹಿ-ಧ್ಯಾನಿಸುತ್ತೇವೆ. ಯಃ-ನಮ್ಮಿಂದ ಧ್ಯಾನಿಸಲ್ಪಟ್ಟ ಆ ತೇಜಸ್ಸು. ನಃ-ನಮ್ಮ, ಧೀಯಃ-ಬುದ್ಧಿಗಳನ್ನು, ಪ್ರಚೋದಯಾತ್-ಪ್ರೇರಿಸಲಿ. ಕನ್ನಡದಲ್ಲಿ ಈ ಪ್ರಾರ್ಥನೆಯು ನೆನಪಿಗೆ :—ಆ ಜಗತ್ಕಾರಣನ (ತತ್‌ಸವಿತುಃ) ಅಪಾರ ದಿವ್ಯತರ ತೇಜಸ್ಸನ್ನು (ವರೇಣ್ಯಂ ಭರ್ಗಃ ದೇವಸ್ಯ) ಧ್ಯಾನಿಪೆವು ನಾವ್ (ಧೀಮಹಿ) ಪ್ರೇರಿಸೈ ಎಮ್ಮಯ ಸದ್ಬುದ್ಧಿಯನ್ನು (ಧಿಯಃ ಯಃ ನಃ ಪ್ರಚೋದಯಾತ್).

ದೇವರೊಡನೆ ನಾವು ಹಾಗೆಮಾಡು, ಹೀಗೆಮಾಡು ಎಂದು ಬೇಡುವುದು ಒಳ್ಳೆಯದಲ್ಲ. ಏಕೆಂದರೆ ನಾವೇ ನಿರ್ಧರಿಸಿದಾಗ ನಮ್ಮ ಕಳ್ಳಮನಸ್ಸು, ಅಲ್ಪ ಬುದ್ಧಿ, ನಮಗೆ ಒಳ್ಳೆಯದಲ್ಲದ್ದನ್ನು ಬೇಡಬಹುದು. ಆದ್ದರಿಂದ ನಮಗೆ ಸದ್ಬುದ್ಧಿ ಕೊಡು ಎಂಬ ಪ್ರಾರ್ಥನೆಗಿಂತ ಉತ್ತಮ ಪ್ರಾರ್ಥನೆಯೇ ಇಲ್ಲ. ಬ್ರಾಹ್ಮಣನು ಶ್ರೀಗಾಯತ್ರೀದೇವಿಯ ಮೂಲಕ ತನಗೆ ಮಾತ್ರವಲ್ಲ, ಇತರರಿಗೂ ಸದ್ಬುದ್ಧಿ ಬೇಡುತ್ತಾನೆ. ಸಾಯುಜ್ಯ ಮುಕ್ತಿಗೆಂದು ಗಾಯತ್ರೀಜಪ ಮಾಡುವವನು, ಎಲ್ಲರಲ್ಲಿಯೂ ಪರಮಾತ್ಮನಿದ್ದಾನೆ, ಎಂಬ ಭಾವನೆಹೊಂದುವ ಗುರಿ ಇಡಬೇಕು. ಅವನಿಗೆ ಹೆಚ್ಚು ಐಶ್ವರ್ಯ ಹೇಳಲಿಲ್ಲ. ಆದರೆ ಅವ ಜಪದಲ್ಲಿ ಹೀಗೆ ಲೋಕದ ಕಲ್ಯಾಣ ಬಯಸಿದರೆ, ಐಶ್ವರ್ಯವಂತರಿಗೆ ಹೆಚ್ಚು ದಾನದ ಮೂಲಕ ಬರುವ ಪುಣ್ಯಕ್ಕಿಂತ ಎಷ್ಟೋ ಹೆಚ್ಚಿನ ಪುಣ್ಯ ಪಡೆಯದಿರನು.

## ೭. ಸದಾಚಾರಗಳು

ಶಾಸ್ತ್ರವು ಬ್ರಾಹ್ಮಣರಿಗೆ ಏನು ಮಾಡಬೇಕು ಎಂದು ವಿಧಿಸಿದವನ್ನು ಆಚರಿಸುವುದು, ಏನು ಮಾಡಕೂಡದು ಎಂಬ ನಿಷೇಧದವುಗಳನ್ನು ತ್ಯಜಿಸಿ

ಬಾಳುವುದು, ನಮಗೆ ಸದಾಚಾರವಾಗುತ್ತದೆ. ಶಾಸ್ತ್ರವು ಬ್ರಾಹ್ಮಣನಿಗೆ ಅತ್ಯಂತ ಧಾರಾಳವಾಗಿ, ಸಾಧಾರಣವಾಗಿ ಜೀವನದ ಪ್ರತಿಭಾಗದಲ್ಲಿ, ಹೇಗೆ ವರ್ತಿಸಬೇಕೆಂದು ಹೇಳಿದೆ. ಮುಂಚೆ ಹಳ್ಳಿಯಲ್ಲಿ ಜನಿಸಿದವರಿಗೆ—ಗುರುಕುಲದ ಕ್ರಮ ಎಂದೋ ನಿಂತು ಹೋಗಿದ್ದರೂ—ತಂದೆತಾಯಿಗಳಲ್ಲಿ ವಿಧೇಯತೆಯೇ ಕ್ರಮವಾಗಿದ್ದು ಅವರ ಆಚರಣೆಗಳನ್ನು ಕಂಡು ಕಲಿತು ಅನುಸರಿಸುವುದು, ಆಗಾಗ ಮನೆಗೆ ಪುರೋಹಿತರು ಬರುತ್ತಿದ್ದು ಅವರ ಮತ್ತೂ ಮೇಲ್ಮಟ್ಟದ ಧಾರ್ಮಿಕ ಜೀವನದ ಸಹಾಯದಿಂದ ಅವರು ಕೊಡುತ್ತಿದ್ದ ಸೂಚನೆಗಳಿಗೂ ಗೌರವ ಕೊಟ್ಟು ಅನುಸರಿಸುವುದು ಸರ್ವತ್ರ ಕ್ರಮವಾಗಿತ್ತು. ಬ್ರಿಟಿಷ್ ಸರ್ಕಾರವು ನಮ್ಮ ಧಾರ್ಮಿಕ ಜೀವನಕ್ಕೆ ತೊಡಕು ಹಾಕುತ್ತಿರಲಿಲ್ಲ. ನಮ್ಮಲ್ಲಿ ಅತಿ ಹೆಚ್ಚಿನ ಅಂಶದ ಜನರು, ತುತ್ತುದಿಯ ಮಟ್ಟದವರು, ಧಾರ್ಮಿಕ ಜೀವನ ನಡೆಸುವುದೆಂದರೆ ಶಾಸ್ತ್ರಹೇಳುವ ನಮ್ಮ ಅಪಾರಸಂಖ್ಯೆಯ ಸದಾಚಾರ ಗಳ ಜ್ಞಾನ ಪಡೆದು ಅವುಗಳನ್ನು—ಅತಿಹೆಚ್ಚಿನ ಮಟ್ಟಿಗೆ ಕಾಯಕವಾಗಿ—ಆಚರಿಸುವುದಾಗಿದೆ. ಸ್ನಾನ, ಜಪ, ಪೂಜೆ, ಹೋಮ, ನಡೆಸಲೇಬೇಕಾದ ೬ ವ್ರತಗಳು, ಶ್ರಾದ್ಧ, ಪಿತೃತರ್ಪಣ, ಸಂಸ್ಕಾರಗಳು, ದೇಹದ ಪರಿಶುದ್ಧತೆ, ಇತರರ ಎಂಜಲ ನಿಷೇಧ, ಕೆಳಧರ್ಮದವರ ತಿಂಡಿತಿನಿಸುಗಳ ನಿಷೇಧ, ದೇವ ಸ್ಥಾನಗಳ ಸದುಪಯೋಗ, ಉತ್ತಮ ನಡತೆ, ಸಾಧ್ಯವಾದ ದಾನ ಧರ್ಮ ಮತ್ತು ಅತಿಥಿ ಸತ್ಕಾರ, ಶಾಸ್ತ್ರದ ದೃಷ್ಟಿಯಿಂದ ಉತ್ತಮ ಕುಲಗಳ ನುಟಸ್ತಿಕೆಯ ಆಸೆ, ಧರ್ಮ ತಿಳಿಯುವುದರಿಂದ ಬರುವ ಭಕ್ತಿಯು, ಜ್ಞಾನದ ಅಭ್ಯಾಸ ನಡೆಸುತ್ತಿದ್ದರು. ತಮ್ಮ ಧರ್ಮದಂತೆ ಬಾಳಲೇಬೇಕು ಎಂಬ ಭಾವನೆಯೇ ಅಲ್ಲದೆ ಶಾಸ್ತ್ರ ತಪ್ಪು ಎಂಬ ಭಾವನೆ ಎಲ್ಲೂ ಇರಲಿಲ್ಲ. ಬ್ರಾಹ್ಮಣ ರಿಗೆ ಬ್ರಾಹ್ಮಣರ ಬಹುಮಟ್ಟದ ಸಂಪರ್ಕವೇ ಇದ್ದು, ಇತರರೊಡನೆ ಅದು ಕೇವಲ ಲೌಕಿಕ ವ್ಯವಹಾರಕಿದ್ದು, ಯಾರೂ ಧರ್ಮದ ಶ್ರದ್ಧೆ ಕೆಡಿಸುತ್ತಿರಲಿಲ್ಲ.

ಆದರೆ ದೇವರು ಮತ್ತು ಧರ್ಮಾಚರಣೆ ಬೇಡದ ಸೆಕ್ಯುಲರ್ ಸರ್ಕಾರ ಬಂದ ಮೇಲೆ ಮುಂಚಿನದಕ್ಕಿಂತ ಸರೀ ವಿರುದ್ಧ ಧೋರಣೆ ಬಹು ಬೇಗ ದೇಶ ದಲ್ಲಿ ಹಬ್ಬಿದೆ. ಅದು ಆರಂಭವಾದ ಅನಂತರದ ಕಾಲದಲ್ಲಿ ಬೆಳೆಯುತ್ತ ಬಂದ ನಮ್ಮ ಯುವಕರ ಸದಾಚಾರಗಳನ್ನು ಅತ್ಯಂತ ಹೆಚ್ಚಿನ ಮಟ್ಟದಲ್ಲಿ ಕೆಡಿಸುತ್ತ ಬಂದಿದೆ. ಮುಖ್ಯವಾಗಿ ಜಾತಿಯ ಆಚಾರದಿಂದಲೇ ಬಾಳುತ್ತಿರುವ ನಮ್ಮಲ್ಲಿ ಜಾತಿ ಕ್ರಮವೇ ತಪ್ಪು, ಅದರ ಜನರನ್ನು ವಿಂಗಡಿಸುವ ತಳಹದಿಯೇ ತಪ್ಪು, ಅವು ಯೋಗ್ಯತೆ ಏನೂ ಹೆಚ್ಚಿಸದ ಗೊಡ್ಡು ಆಚಾರಗಳು, ನಾಚಿಕೆ ಪಡಬೇಕಾ

ದವು, ಎಂಬ ಖಂಡನೆ ೪೦ ವರ್ಷಗಳಿಂದ ನಿರಂತರವಾಗಿ ನಡೆದು ಬಂದಿದೆ. ಹಿಂದೂ ರಾಜಕೀಯ ಮುಖಂಡರಿಂದ ಮಾತ್ರವಲ್ಲ, ಅವರಿಂದ ಪ್ರೇರಿತರಾದ ಕೆಳಧರ್ಮದವರ ಉಪಾಧ್ಯಾಯರಿಂದ, ಕ್ರಿಶ್ಚನ್ ಶಾಲೆಯವರಿಂದ, ಶಾಲೆಗಳ ಟ್ರಿಪ್‌ಗಳಲ್ಲಿ ಹಾಸ್ಟೆಲ್‌ಗಳಲ್ಲಿ ವರ್ಣಧರ್ಮಗಳ ತಾತ್ಸಾರದಿಂದ ಸಂದರ್ಭಕಂಡು ಎಳೆ ಮಕ್ಕಳಿಗೆ ಸದಾಚಾರಗಳು ಗೊಡ್ಡು ತರದವು ಎಂದು ಚುಚ್ಚಿ ಮಾತಾಡು ವುದರ ಮೂಲಕ, ಬ್ರಾಹ್ಮಣ್ಯಕ್ಕೆ ಬಹಳ ಹಾನಿ ನಡೆಯುತ್ತಿದೆ. ಹಾಲು ಕೊಡದ ಗೊಡ್ಡು ದನದ ಪೋಷಣೆ ಹೇಗೆ ವ್ಯರ್ಥವೋ ಅಂತೆಯೇ ಅನೇಕ ನಮ್ಮ ಸದಾಚಾರಗಳ ಅಭ್ಯಾಸ ವ್ಯರ್ಥ ಎಂಬ ಭಾವನೆ ಮೇಲಿನ ಕ್ರಮದಿಂದ ಬ್ರಾಹ್ಮಣ ಮಕ್ಕಳಲ್ಲಿಯೂ ಬಹಳ ಪ್ರಚಾರ ಹೊಂದಿದೆ. ದಿನಕ್ಕೆ ಎರಡು ಸ್ನಾನ, ಆದರೆ ಮೈಕೊಳೆ ತೆಗೆಯುವ ಸಾಬೂನು ಇಲ್ಲ; ಉಟ್ಟ ಬಟ್ಟೆಯ ಕೊಳೆ ಹಾಗೆಯೇ ; ಅದು ಕಾಗೆಯ ಸ್ನಾನದಂತೆ ಮಾತ್ರ ! ನಮ್ಮ ಪ್ರಾರ್ಥನೆ ಯನ್ನು ಮನಃಪೂರ್ವಕವಾಗಿ ಕನ್ನಡದಲ್ಲಿ ಮಾಡಿದರೆ ದೇವರಿಗೆ ಅರ್ಥ ವಾಗದೇ ? ಹಾಗಿಲ್ಲ. ಅರ್ಥವಾಗದ ಮಂತ್ರ ಹೇಳುತ್ತ ನಿತ್ಯ ಜಪ ಏನು ಪ್ರಯೋಜನ ? ಎಲ್ಲರೂ ದೇವರ ಮಕ್ಕಳು ಬಡವರಿಗೆ ದಯೆ ತೋರಿಸುವು ದನ್ನು ಎಲ್ಲ ಧರ್ಮಗಳು ಮೆಚ್ಚುತ್ತವೆ. ಹಾಗಲ್ಲ, ಹೋಮ ಮಾಡಿ ಉತ್ತಮ ತುಪ್ಪ ಸುರಿದು ಹಾಳು ಮಾಡಬೇಕೆ ? ತಂದೆಗೆ ಮಕ್ಕಳಲ್ಲಿ ಮೇಲು ಕೀಳು ಇದೆಯೇ ? ಕೆಲವರು ತಾವು ಮೇಲು ಜಾತಿ ಎಂದು ಇತರರನ್ನು ದೂರ ಇಡು ವುದನ್ನು ದೇವರು ಹೇಗೆ ಮೆಚ್ಚ್ಯಾನು ? ತುಳಸಿ ಗಿಡಕ್ಕೊ ಸುತ್ತು ಬರಬೇಕೆ ? ಮುಂತಾದ "ಗೊಡ್ಡು" ಆಚಾರಗಳ ವಿವರಣೆಗೆ ಮಕ್ಕಳು ಏನೂ ಉತ್ತರ ಕೊಡಲಾರವು, ಈ ಖಂಡನೆ ಮನಸ್ಸಲ್ಲಿ ಕುತಂತ್ರದೆ. ಸಾಲದ್ದಕ್ಕೆ ಈ ಕಾಲದ ಅನೇಕ ತಂದೆ ತಾಯಿಗಳೂ ಆ ಭಾವನೆಯಲ್ಲಿ ಬೆಳೆದವರೇ; ಆಂಗ್ಲ ವಿದ್ಯೆಯ ಬೆನ್ನು ಹತ್ತಿ ನಮ್ಮ ಧರ್ಮಶಾಸ್ತ್ರ ಸ್ವಲ್ಪವೂ ಕಲಿಯದವರೇ ; ಎಲ್ಲೆಲ್ಲೋ ಹಂದ್ದೆಯಲ್ಲಿ ಹಿರಿಯರಿಂದ ದೂರ ಬಾಳುವವರೇ; ಆದರಲ್ಲೂ ಪತಿ ಪತ್ನಿ ಯರಿಬ್ಬರೂ ಹೀಗೆ "ವಿದ್ಯೆ" ಕಲಿತವರಾದರೆ, ಪೇಟೆಯಲ್ಲಿ ಬೆಳೆಯುತ್ತಿದ್ದರೆ, ಇಬ್ಬರೂ ಹುದ್ದೆಯಲ್ಲಿದ್ದರೆ, ಅವರ ಮನೆಯಲ್ಲಿ ಸದಾಚಾರಗಳು ತೀರಾ ತೀರಾ ಸ್ವಲ್ಪ ಮಾತ್ರ ಆಗದಿರದು.

ಮಕ್ಕಳು ಈ ಕಾಲದಲ್ಲಿ ತುಂಬಿರುವ ಇತರ ವರ್ಗದವರ ನಿಕಟ ಸ್ನೇಹ ಬೆಳೆಸಿ ಅವರ ಅಭಿಪ್ರಾಯಗಳಿಂದ, ಹಾಳು ಓದುಗಳಿಂದ, ಬಹಳ ಪ್ರಭಾವಿತ ರಾಗುತ್ತಿದ್ದಾರೆ. ನಮ್ಮ ಧರ್ಮ, ಧರ್ಮದಂತೆ ಆದಷ್ಟು ಹೆಚಿನ ಮಟ್ಟ,

ದಲ್ಲಿ ಅಭ್ಯಸಿಸುವ ಬ್ರಾಹ್ಮಣರು ಮಾತ್ರವೇ ಧಾರ್ಮಿಕ ಬೋಧಕರಾಗಬೇಕು, ಧಾರ್ಮಿಕ ಪ್ರಶ್ನೆಗಳಿಗೆ ಪರಿಹಾರ ಹೇಳುವವರು, ಗುರುಗಳು, ಆಗಬೇಕೆಂದಿದೆ ಶಾಸ್ತ್ರದಲ್ಲಿ. ಆದರೆ ಈಗಿನ ಕ್ರಮ, ಕೇವಲ ಬುದ್ಧಿ ಚುರುಕುತನ ಮತ್ತು ಆಕರ್ಷಣೀಯವಾಗಿ ಬರೆಯುವ ಶಕ್ತಿಯಿರುವವ ತನಗೆ ತೋರಿದಂತೆಲ್ಲ ತನ್ನ ಅಭಿಪ್ರಾಯಗಳನ್ನು ಲೇಖನಗಳ ಮೂಲಕ ಪ್ರಕಟಿಸುವುದು ಧಾರಾಳ ನಡೆಯುತ್ತದೆ. ಅದಕ್ಕೆ ಶಾಶ್ವತ ಧರ್ಮದ ತಳಹದಿ ಬೇಕೆಂದಿಲ್ಲ. ಬ್ರಾಹ್ಮಣಯುವಕರಿಗೆ ಅವನ್ನು ಓದಿ, ಎಲ್ಲಿ ಬರಹಗಾರ ತಪ್ಪಿ ಬಿದ್ದಿದ್ದಾನೆ ಎಂದು ತಿಳಿಯುವ ಶಕ್ತಿಯೂ ಇಲ್ಲ. ಈ ಬರಹಗಾರರಲ್ಲಿ ಉತ್ತಮ ಶೀಲವಿಲ್ಲದವರೂ ಖ್ಯಾತರಾಗುವುದುಂಟು !

**ಆಚಾರಗಳು ಗೊಡ್ಡೇ? :** ಹಿಂದೆ ನನ್ನ ಊರ ಸಾವಿರಾರು ಬ್ರಾಹ್ಮಣರೆಲ್ಲ ಸಾಮಾನ್ಯ ಮಟ್ಟದಲ್ಲಿ ಸದಾಚಾರ ಪಾಲಿಸುತ್ತಿದ್ದವರೇ. ಆದರೆ ಅವರು ಅಂಥ ೫೦–೬೦ ವರ್ಷದ ಆಚರಣೆಯಿಂದ ಕೂಡ ಅತಿ ಸ್ಪಷ್ಟವಾಗಿ ಧಾರ್ಮಿಕ ಶ್ರೇಷ್ಠತೆ ಪಡೆದವರಾಗಿರಲಿಲ್ಲ. ಹಾಗೆ ಪಡೆದವರು ಕೇವಲ ಇಬ್ಬರು ಮಾತ್ರ ಇದ್ದರು. ಆದರೆ ಉಳಿದವರು ಎಷ್ಟಕ್ಕೂ ಧರ್ಮ ಬಿಟ್ಟವರೂ ತಪ್ಪಿ ಬಿದ್ದವರೂ ಆಗಿರಲಿಲ್ಲ. ಅತ್ಯಂತ ನಿಧಾನವಾಗಿ ತಮ್ಮ ಧರ್ಮದ ದಾರಿಯಲ್ಲಿ ಮುಂದುವರಿಯುತ್ತಿದ್ದವರು ಮಾತ್ರ ಆಗಿದ್ದರು. ಎಂದರೆ ನಮ್ಮ ಧರ್ಮಾಚರಣೆಗಳು ಅತ್ಯಂತ ನಿಧಾನವಾಗಿ ಫಲ ಕೊಡುವ, ಮೇಲು ಮೇಲಿಂದ ಕಾಣುವವರಿಗೆ ಫಲ ಕೊಡದಷ್ಟು "ಗೊಡ್ಡು" ತರದವೋ ಎಂಬ ಭಾವನೆ ತರುವವೇ ಆಗಿವೆ ನಿಜ. ಏಕೆಂಬುದಕ್ಕೆ ಕಾರಣ ತಿಳಿದಿರಬೇಕು. ಆದ್ದರಿಂದ ಬೇರೆ ಬೇರೆ ರೀತಿಗಳಲ್ಲಿ ವಿವರಿಸುತ್ತೇನೆ.

ಈ ಕಾಲದಲ್ಲಿ ವಿಜ್ಞಾನದ ಅಪರಿಮಿತ ಸಾಧನೆಗಳಿಂದಾಗಿ ಜನರ ದೃಷ್ಟಿಕೋನ ಬಹಳ ಬದಲಾಗಿದೆ. ಬಟ್ಟೆಬರೆ, ವಾಹನಗಳು. ವಿನೋದಗಳು ಸೌಕರ್ಯಗಳು, ಸಂಪಾದನೆಯ ತೀವ್ರತೆ, ಪುಸ್ತಕಗಳ ಮಟ್ಟ, ಮದ್ದಿನಶಕ್ತಿ, ತಿಂಡಿತಿನಿಸುಗಳಲ್ಲಿ ವಿಶೇಷತೆ, ಎಲ್ಲ ಬೇಗ ಬೇಗ ಹೊಸಮಟ್ಟಗಳಿಗೆ ಏರುತ್ತಲೇ ಇವೆ. ಶೀಘ್ರ ಫಲ ಬೇಕು ; ಇಲ್ಲವಾದರೆ ನಿರುತ್ಸಾಹ, ಸರ್ವಸಾಮಾನ್ಯ ಗುಣವಾಗಿದೆ. ಆದರೆ ದೇವರು ಹಾಕಿದ ಧರ್ಮದ ಅಭ್ಯಾಸಗಳ ದಾರಿ ಮುಂಚೆಯೂ ಈಗಲೂ, ಮುಂದೆಯೂ ಆ ತರದ್ದಾಗಲಾರದು. ಅದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಪ್ರಕೃತಿದೇವಿಯು ನೂರಲ್ಲ, ಸಾವಿರವಲ್ಲ, ೮೪ ಲಕ್ಷ ಪ್ರಾಣಿಜನ್ಮಗಳಲ್ಲಿ ಆತ್ಮನನ್ನು ದೇಹದ ಇಂದ್ರಿಯ ಚಪಲತೆಗಳ

ಸೆಳೆತದಲ್ಲಿ ಬಂಧಿಸುತ್ತ ಬಂದಿದ್ದಾಳೆ. ಅತ್ಯಂತ ಉದ್ದದ ಸರಿಗೆಯನ್ನು ಸುತ್ತುತ್ತ ಗಂಟು ಮಾಡಿದ್ದನ್ನು ಬಿಡಿಸಲಿಕ್ಕೆ ಅಂತೆಯೇ ಆದರೆ ವಿರುದ್ಧವಾಗಿ ಅಷ್ಟೇ ಪ್ರಯಾಸದಿಂದ ಬಿಡಿಸುತ್ತ ಬರುವುದು ಮಾತ್ರ ದಾರಿ. ಸದಾಚಾರಗಳ ಅಭ್ಯಾಸವಿರುವುದು ದೇಹದ ಬಂಧನ ಬಿಡಿಸಲಿಕ್ಕೆ. ತಾನು ದೇಹವೆಂಬ ಭಾವನೆ ಇರುವವರೆಗೂ—ಎಂದರೆ ಚಿತ್ತಶುದ್ಧಿ ಆಗುವವರೆಗೂ ಈ—ಕಾಯಿಕ ತಳಹದಿಯ ಸದಾಚಾರಗಳನ್ನು ತಪ್ಪದೆ, ನಿಧಾನವಾಗಿ, ಮಾಡುತ್ತಲೇ ಬರಬೇಕು. ಅದಕ್ಕೆ ಅವಸರದ ಪರಿಹಾರವೇ ಇಲ್ಲ. ಈ ಕಾಲದವರು ಜಪ, ಪೂಜೆ, ಸಂಸ್ಕಾರಗಳು, ವ್ರತ, ಕ್ಷೇತ್ರಯಾತ್ರೆ, ಮುಂತಾದವನ್ನು ಈ ಕಾಲದ ಅವಸರಕ್ಕೆ ಸಿಕ್ಕಿಸಿ ಹೇಗೋ ಹೇಗೋ ಮುಗಿಸಿ, ಫಲದಲ್ಲಿ ದೊಡ್ಡ ಅಂಶ ಕಳಕೊಳ್ಳುತ್ತಿದ್ದಾರೆ. ಮಕ್ಕಳನ್ನು ಜಪ ಮಾಡಲು ಒತ್ತಾಯಿಸಿ ಮಾಡಿಸಿದಾಗಲೂ, ಕೆಲವು ಕಾಲದ ಮೇಲೆ (ಏನು ಫಲ ಕಾಣದೆ) ಅಭಿರುಚಿ ತಪ್ಪಿ, ಜಪವೆಂದರೆ ಅತಿ ಪ್ರಯಾಸದ ಕೆಲಸವೆಂಬ ಮನೋಭಾವನೆ ಬಂದು ಅದರ ಅಭ್ಯಾಸ ಬಿಟ್ಟುಬಿಡುತ್ತಾರೆ. ಆದರೆ ಆತ್ಮ, ದೇಹದ ಬಂಧನ ಕ್ರಮ, ದೇವರು, ಪ್ರಕೃತಿದೇವಿಯ ಶಕ್ತಿ, ಒಂದೂ ಈ ಅವಸರದ ಕಾಲಕ್ಕೊಂದು ಏನೂ ಬದಲಾಗದ್ದರಿಂದ ಈ ಅವಸರದ ಕಾಲದವರ ಭಾವನೆಯು ಸದಾಚಾರಗಳ ಸುಧಾರಣೆ ಫಲ ಕೊಡದು.

ವಿಜ್ಞಾನದ ಅಪರಿಮಿತ ಹೊಸ ಹೊಸ ಸುಖದ ಮಟ್ಟಕ್ಕೇರಿಸುವ ಸಲಕರಣೆಗಳ ನಿರ್ಮಾಣದ ಈ ಕಾಲದ ಮಾನವನು ತಾನು ಎಷ್ಟೇ ಬುದ್ಧಿವಂತ ಎಂದು ಭಾವಿಸುತ್ತಿದ್ದರೂ, ಪ್ರಕೃತಿ ದೇವಿಯು ಆವನನ್ನು ಮುಂಚಿನಂತೆಯೇ ಅತ್ಯಂತ ಸುಲಭ ತರದ, ಯಾವ ಹೊಸ ರೂಪದ ಪ್ರಯಾಸಕ್ಕೂ ಹೋಗದ, ಇಂದ್ರಿಯ ಚಪಲತೆಗಳ ಹಳೆ ಶಕ್ತಿಯ ಬಂಧನದಿಂದಲೇ ಅತ್ಯಂತ ಬಲವಾಗಿ ಬಂಧಿಸಲಾಪಳು ಎಂಬುದಕ್ಕೆ ಒಂದು ದೃಷ್ಟಾಂತ ಕೊಡುತ್ತೇನೆ. ಹಲವಾರು ರಾಜ್ಯಗಳನ್ನುಗೆದ್ದ ಅತ್ಯಂತ ಸಮರ್ಥಚಕ್ರವರ್ತಿ ಕೂಡತನ್ನ ರಾಣಿವಾಸದಲ್ಲಿರುವಾಗ ಕೇವಲ ಮಂಗನಂತೆಯೇ ವರ್ತಿಸುತ್ತಾನಲ್ಲವೇ ? ನಾವು ನಿಷ್ಪಕ್ಷಪಾತದ ವಿವೇಚನೆ ನಡೆಸಿದಾಗ ಕಾಮಕೇಳಿಯ ಪ್ರತಿ ಭಾಗವೂ ಅಷ್ಟೊಂದು ತೀರಾ ಅಲ್ಪತೆಯ ಸ್ವಕಲ್ಪನೆಯ ಸುಖ ಕಾಣುವ ಬಂಧನ ಎಂದೂ ತಿಳಿಯದಿರದು. ಸದಾಚಾರ ಅಭ್ಯಸಿಸಿ ವೈರಾಗ್ಯ ಬೆಳೆಸಿದವ ಮತ್ತೂ ಆಳದ ಸಾಧನೆ ನಿರ್ಣೈಸಿದಾಗ ಎಲ್ಲಾ ಇಂದ್ರಿಯಗಳ ಪ್ರತಿ ಈಗಿನ ಅತಿ ವಿಶೇಷ ತರದ ಸೆಳೆತವನ್ನೂ ಕೇವಲ ಅತ್ಯಂತ ಅವಶ್ಯಕತೆಯ ಅತಿ ಕಡಿಮೆ ಮಟ್ಟಕ್ಕೆ ಇಳಿಸಿ ಸಾಧನೆ ಮಾಡಲು ಏನೂ ಕಷ್ಟವಾಗುವುದಿಲ್ಲ !

ನಾನು ಹೇಳಿದ ಹಿಂದಿನ ಕಾಲದ ಸಾಮಾನ್ಯರ ಸದಾಚಾರಗಳ ಅತಿ ನಿಧಾನದ ಅಭ್ಯಾಸಗಳು ಬಹಳ ಏನೂ ಫಲಕೊಟ್ಟಂತೆ ತೋರದಿರುತ್ತಿದ್ದರೂ ಅವರನ್ನು ಎಷ್ಟಕ್ಕೂ ಆ ಮಟ್ಟದಿಂದ ಕೆಳಗೆ ಜಾರು ಬಿಡುತ್ತಿರಲಿಲ್ಲ ; ಅವರು ಹಾಳಾಗುತ್ತಿರಲಿಲ್ಲ. ಅವರದ್ದು ಅತಿ ದೂರದ ಕಗ್ಗಾಡಿನ ಮೂಲಕ ಹೋಗುವ ದಾರಿಯಲ್ಲಿ ಆದರೆ ದಾರಿಬಲ್ಲ ರಕ್ಷಕನೊಡನೆ ಅತ್ಯಂತ ನಿಧಾನವಾಗಿ ಪ್ರಯಾಣ ಮಾಡುವವರಂತೆ. ಪ್ರಯಾಣ ಮಾಡಿದಷ್ಟಕ್ಕೂ ಕೆಲವು ಕಾಲ ಕಗ್ಗಾಡೇ ತೋರುತ್ತಿದೆ. ಆದರೆ ಈ ಕಾಲದ ತಾವೇ ಬುದ್ಧಿವಂತರೆಂಬ ರಾಜಕೀಯ ಮುಖಂಡರ ಅತ್ಯಂತ ಧಾರ್ಮಿಕ ಹಾನಿಯ ಸೆಕ್ಯುಲರ್ ಸರ್ಕಾರದ ಪ್ರೇರಣೆಯಿಂದಾಗಿ ತಮ್ಮ ವರ್ಣ ಆಚಾರ ತಾತ್ಸಾರಿಸಿದ ಯುವಕರ ಪರಿಸ್ಥಿತಿ ಹೇಗೆ ಎಂದರೆ ಸಹಾಯಕನಿಲ್ಲದೆ ಆ ದಾರಿ ಹಿಡಿದು, ಆದರೆ ಸ್ವಂತ ಬುದ್ಧಿಯೇ ಸಾಕೆಂದು, ಕಾಡು ನಂಗ್ಗಿ ದಾರಿ ತಪ್ಪಿ ದಿಕ್ಕುತಪ್ಪಿ ಮತ್ತೆ ಸ್ವಲ್ಪವೂ ದಾರಿ ಕಾಣದೆ ಕಾಡುಮೃಗಗಳಿಗೆ ಬಲಿಯಾಗುವವರ ಸ್ಥಿತಿಯಾಗಿದೆ. ಈ ಜಾತಿ ಧರ್ಮದಸದಾಚಾರ ಬೇಡವಾದವರೂ ಹೀಗೆಯೆ ದೇಹದಮೇಲಿನ ಸದಾಚಾರದ ಶಿಸ್ತೇ ಇಲ್ಲದವರಾಗಿ ನೈತಿಕ ಪತನ ಹೊಂದಿ, ನಕಲು ತೆಗೆದು ಪರೀಕ್ಷೆಯಲ್ಲಿ ತೇರ್ಗಡೆ, ದರೋಡೆ ಮೂಲಕ ಸಂಪಾದನೆ, ತಮ್ಮ ಸಿಟ್ಟು ತೋರಿಸಲು ಸಾರ್ವಜನಿಕ ಬಸ್ಸುಗಳ ನಾಶ, ಪಂಪುಗಳನ್ನು ಹಾಳುಮಾಡಿ ಮುಷ್ಕರ ಹೂಡಿ ಪಟ್ಟಣದ ಜನರಿಗೆ ೩೬ ಗಂಟೆ ನೀರೇ ಇಲ್ಲದಂತೆ ಮಾಡುವುದು (ಡಿಲ್ಲಿಯಲ್ಲಾದಂತೆ) ಮುಂತಾದ ಅನಾಚಾರಗಳ ಮೂಲಕ ಮುಂದೆ ಸಾವಿರಾರು ಹಾಳು ಜನ್ಮಗಳಿಗೆ ಸಾಕಾಗುವ ಪಾಪ ಕಟ್ಟಿಕೊಳ್ಳುತ್ತಿದ್ದಾರೆ. ಮುಂದೆ ಪುನಃ ಅವರಿಗೆ ಬ್ರಾಹ್ಮಣ ಜನ್ಮವನ್ನು ದೇವರು ಕೊಡುವುದು ಎಂದೋ ಏನೋ ! ಈ ಗತಿಗೆ ಇಳಿಸಿದ ರಾಜಕೀಯ ಮುಖಂಡರ ಗತಿ ಮತ್ತಷ್ಟು ಹಾಳು. "ಗೊಡ್ಡು" ಜಾತಿ ಆಚಾರಗಳು, ಅಪಾರ ಸಾರಿ ಮತ್ತಷ್ಟು ಮರುಕಳಿಸಬೇಕಾದವು, ಕೆಲವರಿಗೆ ವ್ಯರ್ಥ ತೋರುವುದು ನಿಜ. ಆದರೆ ಶ್ರೀರಾಮಕೃಷ್ಣ ಪರಮಹಂಸರು ಅವಕ್ಕೆ ಒಂದು ಚಿಕ್ಕ ಆದರೆ ಅತ್ಯಂತ ಹೋಲ್ಕೆಯ ಉಪಮೆ ಕೊಟ್ಟಿದ್ದಾರೆ. ಭತ್ತದ ಹೊಟ್ಟು, ಮಾವಿನ ಹಣ್ಣಿನಸಿಪ್ಪೆ ವ್ಯರ್ಥವೆಂದು ಬಿಸಾಡಲ್ಪಡುವವೇ. ಆದರೆ ಆರಂಭದಿಂದ ತುದಿಯದಾಗಿ ಅಕ್ಕಿ ಬೆಳೆಯುವ ವರೆಗೆ ಈ ಹೊಟ್ಟು, ಕಾಯಿಗೆ ಸಿಪ್ಪೆ ಅತ್ಯಗತ್ಯ. ರಾಜಕೀಯ ಮುಖಂಡರ ಹೇಳಿಕೆ ಅಕ್ಕಿ ಮಾತ್ರ ಬೇಕಾದ ನಾವು ಅಕ್ಕಿಯನ್ನೇ ನೇರವಾಗಿ ನೆಡಬೇಕೆಂಬಷ್ಟು ಮೂಢತನದ್ದು.

ನಮ್ಮಲ್ಲಿ ಆತ್ಮನಿಗಿರುವ ಈಗಿನ ಬಂಧನ ಬಿಡಿಸಲಿಕ್ಕೆ ನಮಗೆ ನಮ್ಮ ದೇಹದ ಮೇಲೆ ಧರ್ಮದ ಶಿಸ್ತು ಧಾರಾಳವಾಗಿ ಹೊರಿಸಲಾಪ ಅತ್ಯಂತ ಹೆಚ್ಚಿನ ಹತೋಟಿ ಬೇಕೇಬೇಕು. ಮಕ್ಕಳಲ್ಲಿ ಆ ಶಕ್ತಿ ಇನ್ನೂ ಬೆಳೆದಿರುವುದಿಲ್ಲ. ಆದ್ದರಿಂದ ಮಕ್ಕಳಿಗೆ, ನೀವೇ ಪಾಠ ಓದಿ ಕಲಿತುಕೊಳ್ಳಿರಿ, ಎಂದು ಯಾರೂ ಬಿಡುವುದಿಲ್ಲ. ಸಮರ್ಥ ಮತ್ತು ಶಿಸ್ತು ಹೊರಿಸುವ ಕಠಿಣತೆಯ ಉಪಾಧ್ಯಾಯರ ಕೆಳಗೆ ಅವರಿದ್ದರೆ, ಮಕ್ಕಳು ಅವರಿಗೆ ಹೆದರಿ ಅವರು ಹೊರಿಸಿದ ಅಪಾರ ಸಂಖ್ಯೆಯ ಕಷ್ಟತರದ ಸಾಧನೆಗಳನ್ನೂ ಮಾಡುತ್ತ, ದೇಹ ಹತೋಟಿಗೆ ತರುತ್ತ ಕ್ರಮೇಣ ಎಂದರೆ ೨೫-೩೦ ವರ್ಷಗಳ ಅನಂತರ ಮಾತ್ರ ತಾವೇ ತಮ್ಮ ಹಿತ ಅರಿತು ಸಾಧನೆಮಾಡಲಾಪ ಮಟ್ಟಮುಟ್ಟುತ್ತಾರೆ. ಅದು ಶಾಲೆಯ ಪಾಠಗಳ ಬಗೆಗೆ.

ಆದರೆ ಧಾರ್ಮಿಕ ಜೀವನದ ವಿಚಾರದಲ್ಲಿ ಬಹುಮಟ್ಟಿನ ದೊಡ್ಡವರೂ ಮಕ್ಕಳಂತೆ ಮಾತ್ರ. ತಾವೇ ದೇಹದ ಇಂದ್ರಿಯ ಚಪಲತೆಗಳ ಸೆಳತದಲ್ಲೂ ತಮ್ಮ ವರ್ಣಧರ್ಮ ಅತಿಚೆನ್ನಾಗಿ ಹೊರಿಸುವ ಬಿಗಿತ ಹಾಕಲಾರರು. ಆದ್ದರಿಂದ ಅವರು ತಾವು ಅತ್ಯಂತ ಗೌರವಿಸುವ "ಗುರುವಿನ ಗುಲಾಮ"ರಾಗಬೇಕು. ಅಥವಾ ದೇವರಿಂದಲೇ ಬಂದ ಶಾಸ್ತ್ರ ಅರ್ಥಮಾಡಿಕೊಂಡು ಅದರಲ್ಲಿ ಸಂಪೂರ್ಣ ಶ್ರದ್ಧೆಹೊಂದಿ ದೇವರು ದಯೆಪಾಲಿಸಿದ ಬ್ರಾಹ್ಮಣ್ಯ ತಾನು ರಕ್ಷಿಸಿಕೊಳ್ಳಲೇಬೇಕು, ತನ್ಮೂಲಕ ಅವನ ಮತ್ತೂ ಹೆಚ್ಚಿನ ಸಹಾಯ, ದಯೆ ಪಡೆಯಬೇಕು ಎಂಬ ಅತೀವಶ್ರದ್ಧೆಯ ದಾರಿಹಿಡಿಯಬೇಕು. ಅಥವಾ ಇಷ್ಟದೇವರಲ್ಲಿ ಶರಣುಹೋಗುವಷ್ಟು ಭಕ್ತಿ ಬೆಳೆಸಿ ನಿರಂತರವಾಗಿ ಅವನ ಪ್ರೇರಣೆ ಬೇಡುತ್ತ, ತಪ್ಪಿಬೀಳದಂತೆ ಹೆದರುತ್ತ ಮುಂದುವರಿಯಬೇಕು.

ನಮ್ಮ ಧರ್ಮದ ಸಾಧನೆಯಲ್ಲಿ ಮಾತ್ರ "ಗೊಡ್ಡು" ತರದ, ಪುನಃ ಪುನಃ ಮರುಕಳಿಸುವ ಸಾಧನೆಗಳಲ್ಲ. ಸಾಮಾನ್ಯನಿಗೂ ಯುದ್ಧಕಾಲದಲ್ಲಿ ಅಗತ್ಯವಾದ ಶಕ್ತಿತರಲಿಕ್ಕೆ ಸರ್ಕಾರದ ಮಿಲಿಟರಿ ಭಾಗವೇ ಧಾರಾಳವಾಗಿ ಅಭ್ಯಸಿಸುವ ಈ "ಗೊಡ್ಡು" ತರದ ಕ್ರಮ ನೋಡಿರಿ. ಯುದ್ಧದಕಾಲದಲ್ಲಿ ಯುವಕರನ್ನು ಕಡ್ಡಾಯವಾಗಿ ಸೈನ್ಯಕ್ಕೆ ಸೇರಿಸಿಕೊಂಡು ಆಮೇಲೆ ಕೆಲವುಕಾಲ ಅವರನ್ನು ಮೈದಾನದಲ್ಲಿ ಲೆಫ್ಟ್-ರೈಟ್ ಹೇಳುತ್ತ ನಿತ್ಯ ಹಲವು ಗಂಟೆಗಳ ಕಾಲ ನಡೆಸಿ ದಣಿಸುತ್ತಾರೆ. ಸಿಪಾಯಿಗಳಿಗೆ ತಮ್ಮ ಸ್ವಂತ ಮನಸ್ಸಿಂದಾದರೆ ಇನ್ನು ಒಂದು ಹೆಜ್ಜೆ ಕೂಡ ಇಡಲಾರೆವು ಎಂದು ತೋರಿದಾಗಲೂ ಅಧಿಕಾರಿಯ ವಾಣಿಗೆ ಹೆದರಿ ಅವರು ಡ್ರಿಲ್ ಮಾಡುತ್ತಾರೆ. ಎಂದರೆ

ತನ್ಮೂಲಕ ಅವರ ಕಾಲು ಅವರ ಇಷ್ಟವನ್ನಲ್ಲ ಅಧಿಕಾರಿಯ ಆಜ್ಞೆಗೆ ನೇರವಾಗಿ ಕಟ್ಟುಬೀಳುವ ಮಟ್ಟ ಸಾಧಿಸಲ್ಪಡುತ್ತದೆ. ಆ ಯುವಕರ ಅಪರಿಮಿತ ಆಯಾಸ ತಿಳಿದ ತಂದೆಗೆ ಯುದ್ಧವು ಸಮತಟ್ಟಾದ ಮೈದಾನದಲ್ಲಿ ಲೆಫ್ಟ್‌ರೈಟ್ ಮಾಡಂತ್ತ ಎಂದೂ ನಡೆಯಲಾರದು ; ಏಕೆ ಈ ವ್ಯರ್ಥ ಆಯಾಸದ ಗೊಡ್ಡು ಕ್ರಮ, ಎಂದು ಕನಿಕರವಾಗದಿರದು. ಆದರೆ ತನ್ಮೂಲಕ ಅಲ್ಲಿ ಸಾಧಿಸಿದ ಅಧಿಕಾರಿ--ಸೈನಿಕ ಸಂಬಂಧ, ಯುದ್ಧರಂಗದಲ್ಲಿ ಮುನ್ನುಗ್ಗಲಿಕ್ಕೆ ಆಜ್ಞೆ ಕೊಟ್ಟಾಗ ಕೆಲಸ ಮಾಡುತ್ತದೆ. ಅಲ್ಲಿನ ಅಪಾರ ಸಂಖ್ಯೆಯ ಕೋವಿಗಳ ಸಿಡಿತ, ಜನರು ಅಲ್ಲಲ್ಲಿ ಬಿದ್ದು ನರಳುವುದು, ರಕ್ತ ಸುರಿಸುವುದು, ಸಾಯುವುದು, ಫಿರಂಗಿಗಳು ಬೆಂಕಿ ಕಾರುವುದು, ಬಾಂಬುಗಳು ಹೊಟ್ಟುತ್ತಿರುವುದು, ವಿಮಾನಗಳ ಕಿರಿಚಾಟ. ಆಗ ಎಂಥ ಹೊಸಬರನ್ನೂ ಭಯದಲ್ಲಿ ಮುಳುಗಿಸಿ ಬಿಡುತ್ತವಂತೆ. ಭಯದಿಂದ ಮನಸ್ಸು ತತ್ತರಿಸಿ ಸ್ವಂತ ಬುದ್ಧಿಯಿಂದಾದರೆ ಅವರ ಕಾಲುಗಳು ಸ್ತಬ್ಧವಾಗದಿರವು. ಆದರೆ ಅಧಿಕಾರಿಯ ಆಜ್ಞೆಗೆ ಗಂಟು ಬೀಳಲು ತರಬೇತು ಹೊಂದಿದ ಅವರ ಕಾಲುಗಳು ತಪ್ಪದೆ ಮುಂದೆನುಗ್ಗುತ್ತವೆ. ಡ್ರಿಲ್ಲು ಅತ್ಯಗತ್ಯ ಎಂಬುದು ಆ ಕ್ಷೇತ್ರದ ಎಲ್ಲಾ ಅನುಭವಸ್ಥರ ಮಾಹಿತ್ಯ. ಅದನ್ನರಿಯದೆ ಅದು ಅರ್ಥವಿಲ್ಲದ ಗೊಡ್ಡುಕ್ರಮ ಎನ್ನುವುದು ಮೂರ್ಖತನ. ಅಂತೆಯೇ ದೇಹದ ಬಂಧನ ಗೆಲ್ಲಲು ಧರ್ಮ ವಿಧಿಸುವ ಸದಾಚಾರಗಳು ಎಷ್ಟಕ್ಕೂ ವ್ಯರ್ಥವಲ್ಲ. ಅವುಗಳ ಖಂಡನೆ ಮೂರ್ಖತನ.

ಬಹಳ ಮುಂಚಿನಕಾಲದಲ್ಲಿ ಹೆಚ್ಚಿನ ಬ್ರಾಹ್ಮಣರಿಗೆಲ್ಲ ಮೋಕ್ಷಪಡೆಯುವ ಆಸೆ ಇತ್ತು. ಇದಕ್ಕೆ ದಾರಿ ಕಲಿಯಲು ಒಬ್ಬ ತಂದೆ ಮಗನನ್ನು ಗುರುವಿನೆಡೆಗೆ ಕಳುಹಿಸಿದರು. ಗುರುವು ಅವನಿಗೆ ನಿತ್ಯ ಶಾಸ್ತ್ರ ಪಾಠ ಹೇಳಲಿಲ್ಲ. ೪೦೦ ಸೊರಗಿದ ದನಗಳನ್ನು ಅವನ ವಶಕೊಟ್ಟು ಇವನ್ನು ಚೆನ್ನಾಗಿ ಸಾಕಿಕೊಂಡಿರು; ೧,೦೦೦ ಆದಾಗ ಹಿಂದೆ ಕೊಂಡುಬಾ ಎಂದು ಕಳುಹಿಸಿದರು. ಈ ಕಾಲದ ತಂದೆಯಾಗಿದ್ದರೆ ಈ ವಾರ್ತೆ ಕೇಳಿದೊಡನೆ ಸಿಟ್ಟಿಗೆದ್ದು "ಈ ಅಪಾರಮಟ್ಟದ ಶ್ರಮದ ಗೊಡ್ಡು ಕೆಲಸಕ್ಕೆ ನಾನು ಹುಡುಗನನ್ನು ಕಳುಹಿಸಿದ್ದೇ ? ಇದು ವಿದ್ಯೆಯೇ ಅಲ್ಲ" ಎಂದು ಅವನನ್ನು ಕೂಡಲೆ ಹಿಂದೆ ಕರಕೊಂಡು ಬರುತ್ತಿದ್ದರು. ಆದರೆ ಗುರುವೆಂದರೆ ದೇವರಿಗಿಂತ ಹೆಚ್ಚು, ಅವರ ಸಂಪೂರ್ಣ ವಿಧೇಯಂತೆಯೇ ತನಗೆ ದಾರಿ, ಎಂದು ಚೆನ್ನಾಗಿ ನಂಬಿದ್ದ ಆ ಶಿಷ್ಯ ಅಷ್ಟೆಲ್ಲ ದನಗಳ ರಕ್ಷಣೆಪೋಷಣೆಗಳಲ್ಲಿ ತನ್ನ ದೇಹಸುಖ, ಮನಸ್ಸಿನನೆಮ್ಮದಿ, ಸಂಪೂರ್ಣ ನಿರ್ಲಕ್ಷಿಸಿ ಆ ಕಾರ್ಯದ ಸಾಧನೆ ಮಾಡಿಯೇ ಬಿಟ್ಟ. ಹೀಗೆ ಗುರುಭಕ್ತಿಯಿಂದ

ದೇಹ ಸಂಪೂರ್ಣ ಗೆದ್ದ ಅವನಿಗೆ ವಾಯು, ಅಗ್ನಿ, ಸೂರ್ಯ ದೇವತೆಗಳು
ಪ್ರತ್ಯಕ್ಷರಾಗಿ ಆತ್ಮಜ್ಞಾನ ಬೋಧಿಸಿದರು. ಗುರುವು ಅದನ್ನು ಪೂರ್ಣಮಾಡಿ
ದರು! ಇದು ಕಟ್ಟುಕತೆಯಲ್ಲ. ನಮಗೆ ಅತ್ಯಂತಪವಿತ್ರವಾದ ವೇದದಲ್ಲಿಬರುವ
ಕತೆ. ಗುರು ಗೌತಮ ಋಷಿಗಳು, ಶಿಷ್ಯ ಸತ್ಯಕಾಮ. ಅವನಿಗೆ ಕೇವಲ ಸ್ವಂತ
ನಿರ್ಧಾರದಿಂದ ಇಷ್ಟೊಂದು ದೇಹ ಗೆಲ್ಲುವ ಸಾಹಸ ಸಾಧ್ಯವಾಗುತ್ತಿರಲಿಲ್ಲ.
ಗುರುವಿನ ಅಪ್ಪಣೆಯೇ ದೇವರ ಆಜ್ಞೆಯೆಂಬ ಸಂಪೂರ್ಣ ನಂಬಿಕೆಯಿಂದ
ಮಾತ್ರ ಸಾಧನೆ ಮಾಡಿದ, ದೇಹಗೆದ್ದ, ಆತ್ಮಸಾಕ್ಷಾತ್ಕಾರ ಪಡೆದ! ತಾನು
ಆತ್ಮ, ದೇಹವಲ್ಲ ಎಂಬ ವಿದ್ಯೆಗಿಂತ ದೊಡ್ಡದು ಏನೂ ಇಲ್ಲ. ಗೊಡ್ಡು
ಸದಾಚಾರಗಳನ್ನೂ ಆ ರೀತಿ ನಂಬಿ ಆಚರಿಸಬೇಕು.

ಸ್ತ್ರೀಯರ ದೇಹದ ಪ್ರತಿಕಣವೂ ಗಂಡಸರದಕ್ಕಿಂತ ಬೇರೆಯೇ ತರದ್ದು,
ಏಕೆಂದರೆ ದೇವರು ಅವರನ್ನು ನಿರ್ಮಿಸಿದ ಉದ್ದೇಶ ಗಂಡಸರಿಗಿರುವುದಲ್ಲ,
ಎಂದು ವೈದ್ಯಭಾಗದಲ್ಲಿ ನೋಬೆಲ್ ಪಾರಿತೋಷಕ ಪಡೆದ ಎಲೆಕ್ಸಿಸ್ ಕೆರೆಲ್
ಹೇಳಿದ್ದುಂಟು. ಧಾರ್ಮಿಕ ಹಿರಿಮೆ ಸಾಧಿಸಲಿಕ್ಕೆ ಅವರಿಗೆ ಗಂಡಸರಿಗೆ ದಾರಿ
ಯಾದ ಗುರುಕುಲ ವಾಸ, ವೇದಾಧ್ಯಯನ, ವ್ರತ, ಉಪವಾಸ, ಜಪ,
ಪೌರೋಹಿತ್ಯ ಮುಂತಾದವನ್ನು ಶಾಸ್ತ್ರವಿಧಿಸಲಿಲ್ಲ. ಕೇವಲವಾಗಿ ಪತಿಯೇ
ತನ್ನ ದೇವರು ಎಂಬ ಭಾವನೆಯಿಂದ ಅವನ ಸೇವೆಯೇ ಅತ್ಯಂತ ಮುಖ್ಯ
ಮಾಡಿದೆ. ಆದ್ದರಿಂದ ಸೀತೆ ಪತಿಯೊಡನೆ ವನವಾಸಕ್ಕೆ ಹೋಗಿ ಅಲ್ಲಿನ ಕಷ್ಟ
ಗಳಲ್ಲೂ ಅವನ ಸೇವೆ ಮಾತ್ರ ಕರ್ತವ್ಯ ಎಂದು ಮಾಡಿದಳು. ಅದರಿಂದಾಗಿ
ಹಿಂದೂ ಧಾರ್ಮಿಕ ಸ್ತ್ರೀಯರಿಗೆ ಈಗಲೂ ಆದರ್ಶಳಾಗಿ ನಿಂತಿದ್ದಾಳೆ.
ಸಾಮಾನ್ಯ ಗಂಡಸರೆಲ್ಲ ಸ್ಪಷ್ಟವಾಗಿ ಅಲ್ಪ ಮಾನವರೇ. ಅವರ ಗೊಡ್ಡು
ಸೇವೆ ಮಾತ್ರವೇ ಮೋಕ್ಷಕ್ಕೆ ಹೇಗೆ ದಾರಿಯಾಗಲು ಸಾಧ್ಯ ಎಂದು ವಾದಿಸಿದ
ವರು ಯಾರೂ ನಮ್ಮಲ್ಲಿ ಆದರ್ಶರಾಗಲಿಲ್ಲ. ಆದರೆ ಆದರ್ಶ ಪತ್ನಿ ಮಾತ್ರ
ತನ್ನ ಸ್ವಂತದೇಹದ ನೆಮ್ಮದಿಯನ್ನು ಸಂಪೂರ್ಣತ್ಯಜಿಸಿ ಪತಿಸೇವೆ ಮಾಡುತ್ತಲೇ
ಇದ್ದು ದೇಹದ ಬಂಧನ ಗೆದ್ದವಳಾಗುತ್ತಾಳೆ.

ನನಗೆ ಬೆಂಕಿಯಿಂದ ಬೆರಳು ಸ್ವಲ್ಪ ಸುಟ್ಟಾಗಲೆಲ್ಲ ಸಹಗಮನ ಮಾಡಿದ
ಸ್ತ್ರೀಯರ ಮರಣಕಾಲದ ದೇಹದ ಮೇಲಿನ ಅದ್ಭುತ ಹತೋಟಿ ನೆನಪಿಗೆ ಬರು
ತ್ತದೆ. ಟ್ರೂತ್ ಪತ್ರಿಕೆಯಲ್ಲಿ ಅಪರೂಪಕ್ಕೆ ಹೀಗೆ ಸಹಗಮನಗಳ ವಾರ್ತೆ ಈ
ಪುಣ್ಯಭೂಮಿಯಲ್ಲಿ ನಡೆದದ್ದು ಬರುತ್ತಿರುತ್ತದೆ. ಸೀರೆಗೆ ಸೀಮೆಎಣ್ಣೆ ಸುರಿದು
ಬೆಂಕಿಕೊಟ್ಟುಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದು ಅಷ್ಟು ಕಷ್ಟವಾಗದು.

ಹೊಗೆಯಲ್ಲಿ ಶ್ವಾಸಕಟ್ಟಿ ಫಕ್ಕನೆ ಆವರಿಸುವ ವಿಪರೀತ ಬೆಂಕಿಯು ಕಾವಿಂದ ಬಹುಬೇಗ ಬೋಧೆತಪ್ಪಿ ಆಮೇಲೆ ನೋವಿನ ಅರಿವಾಗದು. ಆದರೆ ಚಿತೆಯ ಮೇಲೆ ಕುಳಿತಾಗ ಅದಕ್ಕೆ ಹಚ್ಚಿದ ಬೆಂಕಿ ಅತಿ ನಿಧಾನವಾಗಿ ಕಾವು ಹೆಚ್ಚುತ್ತ ಮೈ ಅಲ್ಲಲ್ಲಿ ಹೆಚ್ಚು ಸುಡುತ್ತ ಅರ್ಧಗಳಿಗೆಯವರೆಗೂ ಭಯಂಕರ ಆದರೆ ಬೋಧೆ ತಪ್ಪಿಸದ ಉರಿ ಅನುಭವಿಸಬೇಕಾದರೆ ಆ ಸಾಧ್ವಿ ದೇಹ ಗೆದ್ದ ಮಟ್ಟವು ದೇವತೆಯಾಗುವ ಯೋಗ್ಯತೆ ತರುವುದು ಆಶ್ಚರ್ಯವಲ್ಲ. ತೀರಾ ಮಾನವ ಮಟ್ಟದವನಾದ ನನಗೆ ಆ ಸಾಧನೆಯ ಸಾಧ್ಯತೆ ಕಲ್ಪನೆ ಮೀರುತ್ತದೆ. ಕೇವಲ ಪತಿವ್ರತಾ ಧರ್ಮದ ಸಾಧನೆಯಿಂದ ಸ್ತ್ರೀಯು ದೈವೀಮಟ್ಟಕ್ಕೆ ಏರಲು ಈ ತರದ ಸಾಧನೆ ಸಾಕಾಗುತ್ತದೆ ಎಂಬುದಕ್ಕೆ ಅಮೃತ ಬಜಾರ್ ಪತ್ರಿಕೆಯಲ್ಲಿ ಬಂದ ತಾರೀಖು ೨೫-೮-೮೦ರ ಒಂದು ಅದ್ಭುತ ವರದಿ ದೃಷ್ಟಾಂತವಾದೀತು. ಮಥುರಾ ಕ್ಷೇತ್ರದಿಂದ ೧೬ ಕಿಲೋಮೀಟರ್ ದೂರದ ಶ್ರೀ ಪಾಲ್ಸನ್ ಗ್ರಾಮದ ಹಿಂದೂ ಸ್ತ್ರೀಯೊಬ್ಬಳು ಐದು ಚಿಕ್ಕ ಮಕ್ಕಳ ತಾಯಿ, (ಜಾತಿ ವರದಿಯಲ್ಲಿಲ್ಲ) ಪತಿಯ ಮರಣದೊಡನೆ ಸಹಗಮನ ನಿರ್ಧರಿಸಿದಳು. ಚಿತೆಯಲ್ಲಿ ಪತಿಯ ಶವ ದೊಡನೆ ಕುಳಿತಾಗ ಪೊಲೀಸರು ಆತ್ಮಹತ್ಯೆಯು ಕಾನೂನಿಗೆ ವಿರುದ್ಧವೆಂದು ತಡೆಯಲು ಬಂದರು. ಪೊಲೀಸ್ ಆಫೀಸರನು ಉಪಾಯಮಾಡಿ ಸಹಗಮನದ ಮುಂಚೆ (ದೂರದ) ಯಮುನಾನದಿಯಲ್ಲಿ ಸ್ನಾನಮಾಡಲು ಪ್ರೇರಿಸಿ ಅವಳನ್ನು ಕಳುಹಿಸಿದ. ಹಿಂದೆ ಬಂದಾಗ ಹೆಣ ಬಹಳ ಸುಟ್ಟಾಗಿತ್ತು. ಅವಳನ್ನು ಖೈದು ಮಾಡಿ ೩೬ ಗಂಟೆಗಳ ನಂತರ ಬಿಟ್ಟರು. ಅವಳು ಪುನಃ ಮಿಂದು ಬಿಳಿ ಬಟ್ಟೆ ಉಟ್ಟು ಪತಿಯ ದಹನ ಸಂಸ್ಕಾರ ಆದಲ್ಲಿ ಹೋದಳು. ಅಲ್ಲಿ ಒಬ್ಬ ಸಂತರು ತೋರಿಕೊಂಡು ಅವಳೊಡನೆ ಸ್ವಲ್ಪ ಮಾತಾಡಿದರು. ಅವಳು ದಹನದ ಜಾಗದಲ್ಲಿ ಗಂಗಾತೀರ್ಥ ಕುಡಿದು ಮೈಮೇಲೂ ಪ್ರೋಕ್ಷಿಸಿಕೊಂಡು ಕೈಮುಗಿದು ಕುಳಿತಳು. ಫಕ್ಕನೆ ಬೆಂಕಿ ಉಂಟಾಗಿ ಒಂದೂವರೆ ಗಂಟೆಯಲ್ಲಿ ಅವಳ ದೇಹ ಪೂರ್ಣ ಸುಟ್ಟಿತು. ಆಮೇಲೆ ಆ ಜಾಗ ದಿನಕ್ಕೂ ಸಾವಿರಾರು ಜನರು, ಧಾರಾಳ ಕಾಣಿಕೆ ಬರುವ ಕ್ಷೇತ್ರ ಆಗಿದೆ. ಆದರೆ ಈ ಕಾಲದ ಮಂಗಳಂದಿರ ತರಬೇತಿ ಕ್ರಮ ಧರ್ಮ ಹೇಳುವ ದೇಹ ಗೆಲ್ಲುವ ಧ್ಯೇಯದಿಂದ ಬಹಳ ದೂರ ಕೊಂಡೊಯ್ಯುತ್ತಿದೆಯಲ್ಲ !

ಮಹಾಭಾರತದಲ್ಲಿ ಧರ್ಮವ್ಯಾಧನು ಕೇವಲವಾಗಿ ಮಾತಾಪಿತೃಗಳು ತನ್ನ ದೇವರೆಂದು ಅವರ ಸೇವೆಮಾಡುತ್ತ ಆತ್ಮಜ್ಞಾನ ಪಡೆದ ಕತೆ ಬರುತ್ತದೆ. ಮುಂದಿ ತಂದೆತಾಯಿಗಳ ಸೇವೆಯೆಂಬ ಅವರ ಸ್ನಾನ ಊಟ ನಿದ್ರೆ ಮಾಡಿಸುವ

ಅಲ್ಪಕೆಲಸಗಳೆಲ್ಲ ಗೊಡ್ಡುತರದವು, ತಾನು ತಪಸ್ಸೆಂಬ ಶ್ರೇಷ್ಠಸಾಧನೆ ಮಾಡು ತ್ತೇನೆಂದು ಮನೆ ಬಿಟ್ಟಿದ್ದ ಕೌಶಿಕನೆಂಬ ಬ್ರಾಹ್ಮಣ ಯುವಕನನ್ನು ಕೆಳಜಾತಿಯ ಈ ಧರ್ಮವ್ಯಾಧ ತಾನು ಪಡೆದಿದ್ದ ದಿವ್ಯಜ್ಞಾನದಿಂದ ಬೆರಗು ಮಾಡುತ್ತಾನೆ. "ಮುಂಚೆ ಹೋಗಿ ಮಾತಾಪಿತೃಗಳ ಸೇವೆ ಮಾಡು" ಎಂಬ ಅವನ ಆದೇಶ ಪಡೆದು ಕೌಶಿಕನು ಹಾಗೆಯೇ ಮಾಡುತ್ತಾನೆ. ಪಿತೃಋಣ ತೀರಿಸದೆ ತಪಸ್ಸಲ್ಲ.

ಕ್ಷತ್ರಿಯರು ಯುದ್ಧದಲ್ಲಿ ಮರಣಕ್ಕೆ ಹೆದರದೆ ಹೋರಾಡಿ ಮಡಿಯು ವುದೇ ಅತ್ಯಂತ ಉತ್ತಮ ಸಾವು, ಹಾಸಿಗೆಯ ಮೇಲಿನ ಮರಣ ಉತ್ತಮವಲ್ಲ ಎಂಬ ಶಾಸ್ತ್ರ ನಿರ್ದೇಶವಿರುವವರು. ಆದ್ದರಿಂದ ಯುದ್ಧದ ಮರಣವೇ ಅವ ರಿಗೆ ಅತಿ ಶ್ರೇಯಸ್ಕರ. ಅರ್ಜುನನ ವೀರಪುತ್ರ ಅಭಿಮನ್ಯು ಕುರುಕ್ಷೇತ್ರದಲ್ಲಿ ಹಲವಾರು ಅತಿರಥರ ಎದುರು ಒಬ್ಬನೇ ಸಿಕ್ಕಿಬಿದ್ದೇನು ಎಂಬುದಕ್ಕೆ ಆಸ್ಪದವಿದ್ದ ರಣರಂಗದಲ್ಲಿ ಧುಮುಕಿ ಅತ್ಯಂತ ವೀರನಂತೆ ಹೋರಾಡಿ ಮಡಿದ. ಈ ವಾರ್ತೆ ಅರ್ಜುನನಿಗೆ ಸಿಡಿಲು ಬಡಿದಂತಾಯಿತು. "ಅವನಿಗೆ ವೀರಸ್ವರ್ಗ ಖಂಡಿತ ; ಅದಲ್ಲವೇ ಪ್ರತಿ ಕ್ಷತ್ರಿಯ ವೀರನ ಜೀವನದ ಗುರಿ. ಹಾಗೆ ಮಗ ಅತ್ಯುತ್ತಮ ಮರಣ ಹೊಂದಿದಾಗ ವ್ಯಸನ ಪಡಬಾರದು" ಎಂದು ಶ್ರೀಕೃಷ್ಣ ಸಮಾಧಾನ ಮಾಡಿದ.

ಆದರೆ ಯುದ್ಧದಲ್ಲಿ ಧೈರ್ಯದಿಂದ ಥಕ್ಕನೆ ದೇಹ ತ್ಯಜಿಸಿದವನೂ ಬಹಳ ಕಾಲದ ಮುಂದೆ ಪುನಃ ಜನಿಸಿದಾಗ, ಕಾಮದ ಸೆಳೆತ, ಅಹಂಕಾರ, ಅಧಿಕಾರದ ಆಸೆ, ಎಲ್ಲ ಪೂರ್ಣ ಬಿಟ್ಟವನಾಗಬೇಕೆಂದಿಲ್ಲ. ದೇಹದ ಬಂಧನ ಪೂರ್ಣ ಕಳಚಿರಲಿಲ್ಲದ್ದರಿಂದ ಬ್ರಾಹ್ಮಣನಾಗಿ ಜನಿಸಿ ದೇವಋಣ, ಋಷಿಋಣ, ಪಿತೃಋಣ ತೀರಿಸಿ, ಮನೆ ಸಂಸಾರ ತ್ಯಜಿಸಿ ಸನ್ಯಾಸಿಯಾಗಿ ಭಿಕ್ಷೆಯಿಂದ ಬಂದ ಅಲ್ಪ ಆಹಾರದಲ್ಲಿ ತೃಪ್ತಿ, ಬಾರದಿದ್ದಾಗಲೂ ಸಂಪೂರ್ಣ ತಾಳ್ಮೆ, ನಿರಂತರ ವಾಗಿ ಕೇವಲ ಆತ್ಮಚಿಂತನೆ, ಇಂದ್ರಿಯ ಸೆಳೆತಗಳ ಸಂಪೂರ್ಣ ಗೆಲುವು ನಡೆಸಿ ಸಾಯುಜ್ಯ ಮುಕ್ತಿ ಸಾಧಿಸುವುದು ತಂತ್ರಾದಿಯ ಸಾಧನೆ. ಅದೂ ನಮ್ಮಲ್ಲಿ ತೀರಾ ಅಪೂರ್ವವಲ್ಲ. ಕಾಶ್ಮೀರದಲ್ಲಿ ಈಗಲೂ ಬ್ರಾಹ್ಮಣರಲ್ಲಿ ಪುತ್ರಸಂತಾನ ವಾದ ಮೇಲೆ ಸಂಸಾರ ಸಂಪೂರ್ಣ ತ್ಯಜಿಸಿ ತಪಸ್ಸಿಗೆ ಹೋಗುವವರಿದ್ದಾರಂತೆ. ಹಾಗೆ ಬರೆದವರ ತಂದೆ ಹಾಗೆ ಮಾಡಿದ್ದರು. ಬರೆದವರೂ ಧ್ಯಾನದ ಮೂಲಕ ಕುಂಡಲಿನಿ ಶಕ್ತಿ ಎಬ್ಬಿಸಿ ಅದ್ಭುತ ಅನುಭವ ಪಡೆದವರು. ಮೈಸೂರು ಮಹಾರಾಜರಿಂದ ಬಹಳ ಬಿರುದುಗಳನ್ನು ಪಡೆದ ಸಂಸ್ಕೃತವಿದ್ವಾಂಸರೊಬ್ಬರು (ನಾನು ಅವರೊಡನೆ ಪತ್ರ ವ್ಯವಹಾರ ಮಾಡುತ್ತಿದ್ದೆ) ಥಕ್ಕನೆ ಎಲ್ಲ ಬಿಟ್ಟು

ಸಾಧನೆಗೆ ಹೋಗಿಬಿಟ್ಟರು! ತಿರುಪತಿ ಬೆಟ್ಟದಮೇಲೆ ನಾನು ಸ್ವಲ್ಪ ದಿನ ಇದ್ದಾಗ, ತೀರ್ಥಗಳಿಗೆ ಹೋಗುವ ದಾರಿಯಲ್ಲಿ ಕುಳಿತು, ಬಂದುದರಲ್ಲಿ ಬಾಳುತ್ತ, ದೇವರ ಧ್ಯಾನದಲ್ಲಿ ಧಾರಾಳ ಸಮಯ ಕಳೆಯುತ್ತಿದ್ದ ಒಬ್ಬರು ಬ್ರಾಹ್ಮಣ ತ್ಯಾಗಿಗಳ ಪರಿಚಯವಾಗಿತ್ತು. ಆದರೆ ಬಿಡು ಸನ್ಯಾಸಿಯಾಗಿ ಭಿಕ್ಷೆಯಿಂದ ಬಾಳುತ್ತಿದ್ದವರೊಬ್ಬರು ಕಾಲಗತಿ ಕಷ್ಟವಾಗುತ್ತ ಬಂದುದೂ ಹೇಳಿದ್ದುಂಟು. ತಮ್ಮ ಊರಿಗೆ ಬಂದ ಬ್ರಾಹ್ಮಣ ಸನ್ಯಾಸಿ ಹಸಿದಿದ್ದರೆ ಊರಿಗೇ ಕೇಡು, ಸರ್ತಿಯಂತೆ ಕರೆದು ಆತಿಥ್ಯಮಾಡಬೇಕು ಎಂದು ಈ ಕಾಲದ ಎಷ್ಟು ಬ್ರಾಹ್ಮಣ ಮನೆಯವರಿಗೆ ಗೊತ್ತಿದೆ? ಇಲ್ಲಿ ಬೆಳಗ್ಗೆ ೫ ಗಂಟೆಗೆ ಇಗರ್ಜಿಯಲ್ಲಿ ಗಂಟೆ ಬಾರಿಸುತ್ತಾರೆ, ಕೇಳುತ್ತದೆ. ಕೆಥೊಲಿಕ್ಕರಲ್ಲಿ ಎಷ್ಟೆಲ್ಲ ಜನರು ಮತ್ತು ಯುವತಿಯರು ಇಗರ್ಜಿ ಸೇರಿ, ಗುರುಗಳು, ನನ್ಸ್, ಆಗಿ ಸಂಸಾರದ ಬಂಧನ ಗೆಲ್ಲುವವರಾಗಿದ್ದಾರೆ! ಆದರೆ ನಮ್ಮ ಧರ್ಮದಮಟ್ಟ, ಅದರ ಹಿರಿಮೆ, ಅತ್ಯಂತ ಹೆಚ್ಚಿನದಾದರೂ ನಮ್ಮಲ್ಲಿ ಅತ್ಯಧಿಕರಬಾಳು ತಕ್ಕುದಲ್ಲವಾಗಿದೆಯಲ್ಲ!

ಈ ಕಾಲದಲ್ಲಿ ಬ್ರಾಹ್ಮಣ ಆಚಾರಗಳ ಪಾಲನೆಯ ವಿಚಾರ ಮಾತು ಬಂದಾಗ ಸರ್ವಸಾಮಾನ್ಯವಾಗಿ ಬರುವ ಆಕ್ಷೇಪ, ಈಗ ಅದೆಲ್ಲ ಸಾಧ್ಯವೇ? ಅವೆಲ್ಲ ಬಹಳ ಮುಂಚಿನ ಕಾಲಕ್ಕೆ ಅನ್ವಯಿಸುವವು, ಈ ಕಾಲವೇ ಬೇರೆ, ಅವನ್ನು ಬಿಡದೆ ಉಪಾಯವಿಲ್ಲ; ನಮ್ಮ ಅಂತಃಕರಣದ ಹೇಳಿಕೆಯಂತೆ ಬಾಳುವುದು ಮಾತ್ರ ಸಾಧ್ಯ ಎಂಬುದಾಗಿದೆ. ಕಾರ್ಯ ರೂಪದಲ್ಲಿ ಇದು ಕೇವಲ ರಾಜ್ಯದ ಕಾನೂನುಗಳ ಹಿಡಿತ ತಪ್ಪಿಸಿಕೊಂಡು ಬಾಳಿ ಬಿಟ್ಟರಾಯಿತು, ಎಂಬುದಾಗಿದೆ. ಹೀಗೆ ಮಾಡುತ್ತ ಮನಃಪೂರ್ವಕವಾಗಿಯೂ ತಾವು ದೇವರು ಒಪ್ಪಬಹುದಾದ ಜೀವನ ನಡೆಸುತ್ತಿದ್ದೇವೆ ಎಂದು ಭಾವಿಸುವವರಿದ್ದಾರೆ. ತಾವು ಮಾಡುವ ಕೆಲವು ಕಾರ್ಯಗಳು ತಮಗೇ ಅಧರ್ಮದವು ಎಂದು ಕಂಡಾಗಲೂ, ಏನು ಮಾಡುವುದು, ಬಾಳಬೇಕಲ್ಲ ಎಂಬ ಸಮಾಧಾನ ತಂದುಕೊಳ್ಳುತ್ತಾರೆ. ಈ ಕಾಲಕ್ಕೆ ತಮಗೆ ಅಸಾಧ್ಯ ಆಚಾರಗಳೆಂಬವು ಅವರು ಅಲ್ಲಿ ಇಲ್ಲಿ ಸ್ವಲ್ಪ ಕೇಳಿ ಮಾತ್ರ, ಅವರು ಬ್ರಾಹ್ಮಣ ಧರ್ಮ ಏನೆಂದು ಕಲಿಯಲಿಕ್ಕೆ ಯತ್ನಿಸಿದವರೇ ಅಲ್ಲ. ಅವುಗಳ ಉದ್ದೇಶ, ಮಹತ್ವ, ಅರ್ಥಮಾಡಿಕೊಳ್ಳುವ ಗೋಜಿಗೆ ಹೋದವರೇ ಅಲ್ಲ. ಕಲಿತದ್ದು ಮುಖ್ಯವಾಗಿ ದೇಹ ದಂಡಿಸದ ಅಶಾಸ್ತ್ರೀಯ ಆಚರಣೆಗಳನ್ನು ಮಾತ್ರ. ಆದರೂ, ಒಂದು ತರದ ವಾತಾವರಣದಲ್ಲಿ ಸುಲಭ ಸಾಧ್ಯವಾದ ಸದಾಚಾರಗಳು ಸಂಪೂರ್ಣ ಬೇರೆಯೇ ಆದ ವಾತಾವರಣದಲ್ಲಿ ಕಷ್ಟವಾಗದಿರದು ನಿಜ.

ಕಷ್ಟದ ಪರಿಸ್ಥಿತಿಯಲ್ಲಿ ಕೆಲವು ಆಚರಣೆಗಳನ್ನು ಸಡಲಿಸಲು, ಕಡಿಮೆ ಮಾಡಲು, ಬದಲಾಯಿಸಲು, ಧರ್ಮಶಾಸ್ತ್ರವೇ "ಆಪದ್ಧರ್ಮ"ವೆಂಬ ರಿಯಾಯಿತಿ ಹೇಳಿದೆ. ಆದರೆ ಅಲ್ಲೂ ಅದೇನಾಗಬೇಕೆಂದು ತಿಳಿಸಿದೆಯೇ ಹೊರತು ನಾವು ನಾವೇ ತೀರ್ಮಾನಿಸಲು ಖುಷಿ ತೋರಿದಂತೆ ಆಚಾರ ಬಿಡಲು, ಅದು ಹೇಳಲಿಲ್ಲ. ಮತ್ತು ತಾತ್ಕಾಲಿಕ ಆಪತ್ತಲ್ಲ, ಸದಾಚಾರಗಳನ್ನು ಖಾಯಂ ಅಸಾಧ್ಯ ಮಾಡುವ ಪರಿಸ್ಥಿತಿ (ದೃಷ್ಟಾಂತಕ್ಕೆ ಅಮೇರಿಕದಲ್ಲಿ ಜೀವನ) ನಾವೇ ಉಂಟುಮಾಡಿಕೊಂಡು ಬಾಳಲಿಕ್ಕೆ ಅದು ಒಪ್ಪುವುದೇ ಇಲ್ಲ.

ಈ ಕಾಲದಲ್ಲಿ ಶಾಸ್ತ್ರ ಹೇಳುವ ಅಪಾರಮಟ್ಟದ ಬ್ರಾಹ್ಮಣ ಆಚಾರ ಅಸಾಧ್ಯ, ಈ ಕಾಲಕ್ಕೆ ತಕ್ಕಂತೆ ಅದನ್ನು ತಿದ್ದಲೇಬೇಕು ; ಅದರ ಸ್ವಲ್ಪ ಭಾಗ ಸಾಕು ; ಎನ್ನುವವರಿಗೆ ತಾವು ಹಾಕುವ ದಾರಿ ಮುಂದೆ ಎಲ್ಲಿಗೆ ಮುಟ್ಟೀತು ಎಂಬ ಭಾವನೆಯೇ ಇಲ್ಲ. ಹಳ್ಳಿಯಲ್ಲಿ ಬಾಳುತ್ತ ಬ್ರಾಹ್ಮಣ ಧರ್ಮದ ಅರ್ಧ ಪಾಲು ಆಚರಿಸುವವನ ಮಗ ಜಿಲ್ಲೆಯ ಮುಖ್ಯ ಪಟ್ಟಣ ಸೇರಿ ಅಲ್ಲಿ ತಂದೆಯ ಕಾಲು ಅಂಶದ ಆಚರಣೆ ಮಾತ್ರ ನಡೆಸುತ್ತಾನೆ. ಅವನ ಮಗ ಬೊಂಬಾಯಿ ಪಟ್ಟಣ ಸೇರಿ ತನ್ನ ತಂದೆಯ ಕಾಲಂಶ ಮಾತ್ರ ಆಚರಿಸುತ್ತಾನೆ. ಅವನ ಮಗನಿಗೆ (ಈಗಿನ ಸಾಮಾನ್ಯ ಯಾರ ಮಗನಿಗೇ ಆಗಲಿ) ತಂದೆಯ ಆಚರಣೆ ಏನೂ ಹಿಡಿಸುವುದಿಲ್ಲ. ಅದರ ಕಾಲುಪಾಲೂ ಬೇಡ ತೋರುತ್ತದೆ. ಎಂದರೆ ಕೇವಲ ನಾಲ್ಕು ತಲೆಮಾರಲ್ಲೀಗ ಅರ್ಧ × ಕಾಲು × ಕಾಲು × ಕಾಲು = ನೂರಿಪ್ಪತ್ತೆಂಟನೇ ಒಂದು ಎಂಬ ತೀರಾ ಅಲ್ಪಅಂಶಕ್ಕೆ ಆಚಾರ ಇಳಿಯುತ್ತಿದೆ. ಹೀಗೆ ಉಳಿದಿರುವುದು ಬ್ರಾಹ್ಮಣ್ಯ ಹೇಗೆ ಆದೀತು ? ಅದರ ನಾಶವೆಂದೇ ಕರೆಯಬೇಡವೇ ? ಆದರೂ ತಕ್ಕಮಟ್ಟಿಗೆ ತಾನು ಬ್ರಾಹ್ಮಣನಾಗಿ ಬಾಳುತ್ತಿದ್ದೇನೆ ಎಂಬುದು ತೀರಾ ತನ್ನನ್ನು ತಾನೇ ವಂಚಿಸಿಕೊಂಡಂತಾಗದೇ? ಆದರೂ ಕಾಲಗತಿಯಿಂದ ಜಪ, ಪೂಜೆ ಮುಂತಾದವನ್ನು ಸಂಕ್ಷಿಪ್ತ ಮಾಡುವುದು ತೀರಾ ಅಗತ್ಯವಿದ್ದವರು ಅವರ ವರ್ಗದ ಉತ್ತಮಪುರೋಹಿತರ ಒಂದು ಪರಿಷತ್ತನ್ನು ಏರ್ಪಡಿಸಿ ಅದಕ್ಕೆ ತಮ್ಮ ಕಷ್ಟ ಹೇಳಿಕೊಂಡು ಚುಟುಕು ಮಾಡಿಸಿಕೊಂಡರೆ ಲೋಪದ ದೋಷ ಬಾರದು (ಮನು ೧೨,೧೧೦). ಆದರೆ ಚುಟುಕಾದ ಮಟ್ಟದಲ್ಲಿ ಪುಣ್ಯ ಕಡಿಮೆ.

ನಮ್ಮ ಧರ್ಮಗ್ರಂಥಗಳಿರುವುದೆಲ್ಲ ಮೂಲಸಂಸ್ಕೃತದಲ್ಲಿ. ಸನಾತನಿಗಳಲ್ಲಿ ಅತ್ಯಧಿಕ ಅಂಶದವರಿಗೆ ಬೇಕಾಗುವುದು ಅವುಗಳಲ್ಲಿ ಸದಾಚಾರಗಳನ್ನು ತಿಳಿಸುವ ಭಾಗ. ಅವರು ಆರಂಭದ ಕ್ಲಾಸಿಂದ ಚಿತ್ತಶುದ್ಧಿ ಉಂಟಾಗುವವರೆಗಿನ ಬಿ.ಎ.

ತುದಿಯ ವಿದ್ಯಾರ್ಥಿಗಳಂತೆ. ಬ್ರಾಹ್ಮಣನು ನಿತ್ಯವೂ ಧರ್ಮಗಳನ್ನು ಓದು ತ್ತಲೇ ಹೋಗಬೇಕು ಎಂದು ಶಾಸ್ತ್ರದ ನಿರ್ದೇಶವಿದೆಯಾದರೂ, ಸದಾಚಾರ ಗಳ ಕನ್ನಡ ಭಾಷಾಂತರಗಳು ಇರುವುದು ತೀರಾ ತೀರಾ ಸ್ವಲ್ಪ. ಕ್ರಿಶ್ಚನ್ನರಿಗೆ ಬೈಬಲ್ಲು ಪ್ರತಿ ಭಾಷೆಯಲ್ಲಿರುವಂತೆ ಇಗರ್ಜಿಗಳು ಮಾಡಿವೆ. ಆದರೆ ನಮ್ಮಲ್ಲಿ ಅದು ಹಾಗೆ ನಡೆದದ್ದೇ ಇಲ್ಲ. ಇದರಿಂದಾಗಿ ಸಾಮಾನ್ಯ ಬ್ರಾಹ್ಮಣರಲ್ಲಿ ಮನೆಗಳಲ್ಲಿರಬೇಕಾದ (ಪುರಾಣಗಳಲ್ಲದೆ) ಧಾರ್ಮಿಕ ಗ್ರಂಥಗಳೇ ಇಲ್ಲ. ಅವನ್ನು ಓದಿ ತಮ್ಮ ಆಚರಣೆ ಬಲಪಡಿಸುವ ಅಭ್ಯಾಸವೇ ಇಲ್ಲ. ಸ್ವಲ್ಪ ಗ್ರಂಥಗಳುಪ್ರಕಟವಾದಾಗ, ಅವನ್ನು ಕ್ರಯಕ್ಕೆ ಕೊಂಡುಕೊಳ್ಳುವ ಅಭ್ಯಾಸವೇ ಅತ್ಯಧಿಕರಲ್ಲಿ ಉಂಟಾಗದಿರುವುದರಿಂದ ಅವು ಪುನಃ ಪುನಃ ಮುದ್ರಣ ಕಾಣವು; (ದೃಷ್ಟಾಂತಕ್ಕೆ ಮನುಸ್ಮೃತಿಯ ಉತ್ತಮ ಭಾಷಾಂತರ, ಶ್ರೀ ಶ್ರೀನಿವಾಸಾ ಚಾರ್ಯರದ್ದು, ಶ್ರೀ ಸಿ.ಎನ್. ಶಾಸ್ತ್ರಿಯವರ ಆರ್ಯಧರ್ಮ, ಶ್ರೀ ಪುರೋ ಹಿತ ಶಂಕರ ನಾರಾಯಣಭಟ್ಟರ ಸಂಧ್ಯಾಭಾಷ್ಯ ಒಂದೇ ಮುದ್ರಣ ಕಂಡವು). ದಿನಪತ್ರಿಕೆ, ವಾರಪತ್ರಿಕೆಗಳಿಗೆ ಧಾರಾಳ ಹಣ ಹಾಕುವ ಮನೆಯವರಿಗೂ, ಧಾರ್ಮಿಕ ಪುಸ್ತಕ ಮಾತ್ರ ಧರ್ಮಕ್ಕೆ ಸಿಕ್ಕಿದರೆ ಓದುವ ಎಂಬ ಅಭ್ಯಾಸ ಮಾತ್ರ. ಧರ್ಮಪ್ರಚಾರಕ್ಕೆಂದು ಓದಲುಕೊಟ್ಟರೆ ಅನೇಕರಿಗೆ ಪುಸ್ತಕ ಉತ್ತಮ ತೋರಿದಾಗ ಕದ್ದು ಇಟ್ಟುಕೊಳ್ಳುವ ಅಭ್ಯಾಸವೂ ಇದೆ; (ಎಂದರೆ ಅವರು ಧರ್ಮ ಅರಿಯಲು ಹಾಕುವ ತಳಹದಿ ಕೇವಲ ಅಧರ್ಮದ್ದು!) ಧಾರ್ಮಿಕ ಪುಸ್ತಕಗಳು ಪುನಃ ಪುನಃ ಓದಬೇಕಾದವು. ಮನೆಯಲ್ಲಿದ್ದರೆ ಮಕ್ಕಳಲ್ಲೊಬ್ಬ ನಾದರೂ ಓದಿ ಪ್ರಯೋಜನ ಪಡೆದಾನು. ಅವನ್ನು ಕೊಂಡುಕೊಳ್ಳುವ ಅಭ್ಯಾಸದಿಂದ ಧಾರಾಳವಾಗಿ ಮತ್ತು ಹೆಚ್ಚು ಹೆಚ್ಚು ಉಪಯುಕ್ತಪುಸ್ತಕಗಳೂ ಪ್ರಕಟವಾಗುತ್ತ ಬಂದಾವು.

ಆದರೆ ಈ ಧಾರ್ಮಿಕ ಬಿ.ಎ.ವರೆಗಿನ ಪಠ್ಯಪುಸ್ತಕಗಳಂತಿರುವವುಗಳ ಅಭಾವ ವಿಪರೀತವಿದ್ದರೂ, ಎಂ.ಎ. ಮಟ್ಟದ್ದಾದ, ವೇದಾಂತದ ಪುಸ್ತಕಗಳು ಮುಖ್ಯವಾಗಿ ಆಂಗ್ಲಭಾಷೆಯಲ್ಲಿ, ಧಾರಾಳವಿವೆ! ಮತ್ತು ಅತ್ಯಂತ ಮೇಧಾವಿ ಗಳೂ ವಾಕ್ಚಾತುರ್ಯ ಇದ್ದವರೂ ಅತಿ ಚೆನ್ನಾಗಿ ವೇದಾಂತದ ಭಾಷಣ ಮಾಡುವುದು ಪೇಟೆಯವರು ಕೇಳಬಹುದು. ಹಾಗೆ ಕೇಳುವುದು ಫ್ಯಾಶನ್ ಕೂಡಾ ಆಗಿದೆ! ಆದರೆ ಅದು ಬಿ.ಎ.ವರೆಗಿನ ಪಠ್ಯಪುಸ್ತಕದ ಅಭಾವದಿಂದ, ಆ ಭಾಗದ ಭಾಷಣಗಳ ಅಭಾವದಿಂದ, ಅವರು ಕೇಳದೆ, ಕಲಿಯದೆ, ನೇರ ವಾಗಿ ಎಂ.ಎ. ಕ್ಲಾಸಲ್ಲಿ ಕುಳಿತಂತೆ. ಆದರಿಂದಾಗಿ ಅವರು ಕೇಳಿದ್ದು ತಲೆಯಲ್ಲಿ

ಉಳಿಯುವುದೂ, ಅವರು ಕಾರ್ಯರೂಪದಲ್ಲಿ ವೈರಾಗ್ಯ, ಸಾಧನೆ, ನಡೆಸು ವುದೂ ಸಾಧ್ಯವಿಲ್ಲ; ಕಾಣುವುದೂ ಇಲ್ಲ. ತಂದೆಯಂತೆ ಎಂ.ಬಿ.ಬಿ.ಎಸ್. ಡಾಕ್ಟರನಾಗಬೇಕೆಂದು ಅಭಿಲಾಷೆಯಿರುವ ಮಗ ಆ ಭಾವನೆ ತೀರಾ ಅಪ ರೂಪಕ್ಕೆ ತಂದುಕೊಂಡರೆ ಸಾಕು. ಪ್ರಕೃತದಲ್ಲಿ ತಾನಿರುವ ಏಳನೇ ಕ್ಲಾಸಿನ ಪಾಠಗಳಲ್ಲಿ ಅದಕ್ಕಿಂತ ಸಾವಿರಪಾಲು ಹೆಚ್ಚು ಸಮಯ ಕಳೆಯಬೇಡವೇ? ಅಂತೆಯೇ ಸದಾಚಾರಗಳ ಪುಸ್ತಕಗಳನ್ನು ಅತ್ಯಂತ ಧಾರಾಳವಾಗಿ ಕೊಂಡು ಕೊಂಡು ಮನೆಯಲ್ಲಿಟ್ಟು ಆಗಾಗ ನೋಡಿಕೊಳ್ಳುವ ಅಭ್ಯಾಸ ಬಾರದೆ ನಮ್ಮ ಬ್ರಾಹ್ಮಣ್ಯ ಬಾಳುವುದು ಅತಿ ಸಂಶಯ. ಒಂದು ಸೂಚನೆ; ಅಂಥ ಪುಸ್ತಕ ಗಳನ್ನು ಮದುವೆ, ಉಪನಯನಗಳಲ್ಲಿ ಉಡುಗೊರೆ ಕೊಡುವ ಅಭ್ಯಾಸ ವಾದರೂ ಧಾರಾಳವಾಗಿ ಪ್ರಚಾರಕ್ಕೆ ಬರಲಿ.

ಸದಾಚಾರಗಳನ್ನು ಬಹಳ ಜನರ ಅನುಕೂಲಕ್ಕೆಂದು ಕಡಿಮೆ ಮಾಡು ವುದು ಸಾಧ್ಯವೇ ಅಲ್ಲ. ಏಕೆ ಎಂಬುದನ್ನು ಬ್ರಾಹ್ಮಣರು ಅಗತ್ಯ ತಿಳಿದಿರ ಬೇಕು. ಅತಿಮುಖ್ಯ ವಿಚಾರವಾದ ದೇವರು, ಆತ್ಮ, ಆತ್ಮನು ದೇವರನ್ನು ಹೊಂದುವ ದಾರಿಗಳು, ಯಾವ ಕಾಲಕ್ಕೂ ಬಹಳ ಬದಲಾಗಲಾರವು. ನಮ್ಮ ಸದಾಚಾರಗಳ ಮುಖ್ಯ ವಿವರಣೆಯಿರುವ ಸ್ಮೃತಿಗಳಲ್ಲಿ ಮನುಸ್ಮೃತಿಯು ಕೃತ ಯುಗಕ್ಕೂ, ಯಾಜ್ಞವಲ್ಕ್ಯ ಸ್ಮೃತಿಯು ತ್ರೇತಾಯುಗಕ್ಕೂ, ಶಂಖಲಿಖಿತ ಸ್ಮೃತಿಯು ದ್ವಾಪರಕ್ಕೂ, ಪರಾಶರಸ್ಮೃತಿಯು ಕಲಿಯುಗಕ್ಕೂ ಅನ್ವಯಿಸು ತ್ತವೆ. ಎಂದರೆ ಅವು ಹಲವು ಲಕ್ಷ ವರ್ಷಗಳ ಕಾಲದ ಒಂದೊಂದು ಪೂರ್ಣ ಯುಗಕ್ಕೇ ಅನ್ವಯಿಸುತ್ತವೆಯೇ ಹೊರತು, ತಲೆಮಾರಿಗೊಮ್ಮೆ ಬದಲಾಯಿ ಸುವ ಕ್ರಮದವೇ ಅಲ್ಲ. ಮತ್ತು ಸ್ಮೃತಿಗಳಲ್ಲಿ ಕೂಡ, ನಂತರದವು ಮುಂಚಿನ ಸ್ಮೃತಿಯಲ್ಲಿ ಸ್ವಲ್ಪಭಾಗಗಳನ್ನು ಮಾತ್ರ ಬದಲಾಯಿಸಿವೆಯೇ ಹೊರತು ಇಡೀ ರದ್ದು ಮಾಡಲಿಲ್ಲ (ಕಾನೂನುಗಳಲ್ಲಿ ಸ್ವಲ್ಪಸ್ವಲ್ಪ ಭಾಗ ಆಗಾಗ ಬದಲಾಯಿಸಿ ದಂತೆ). ಆದ್ದರಿಂದ ಪೂರ್ಣರೂಪದ ಮನುಸ್ಮೃತಿಯ ಬಹಳ ಭಾಗಗಳು ಈ ಯುಗಕ್ಕೂ ಅನ್ವಯಿಸುತ್ತವೆ. ಅದೂ ಅಲ್ಲದೆ ಧರ್ಮಶಾಸ್ತ್ರದಲ್ಲಿ ಬದಲಾವಣೆ ಗಳನ್ನು ದಿವ್ಯಜ್ಞಾನವಿರುವ ಮಹಾಋಷಿಗಳು ಮಾಡಿದರೇ ಹೊರತು, ಶಾಸ್ತ್ರ ಕಲಿಯದ, ಅರ್ಥಮಾಡಿಕೊಳ್ಳದ, ಆತ್ಮಹಿತದ ಚಿಂತನೆಯಿಂದಲ್ಲ, ಕೇವಲ ದೇಹದ ಭೋಗಕ್ಕೆ ದಾಸರಾದ ನಮ್ಮಂಥ ಅಲ್ಪರೂ ಬೇಕಾದಂತೆ ಅವರವರೇ ನಿರ್ಧರಿಸಿ ಸದಾಚಾರಬಿಡುವ ಕ್ರಮವಲ್ಲ. "ನನಗೆ ಸಾಧ್ಯವಿದ್ದಂತೆ ಬಾಳುತ್ತೇನೆ. ದೇವರು ಈ ಕಾಲದ ಕಷ್ಟಕಂಡು ಒಪ್ಪದಿರನು" ಎಂದು ಭಾವಿಸುವುದು ಕೇವಲ

ತನ್ನ ವಂಚನೆ ಮಾತ್ರ ಆದೀತು. ಅತ್ಯಧಿಕರಲ್ಲಿ ಅವರ ಬುದ್ಧಿಯು ಬಹು ಮಟ್ಟಿಗೆ ಅವರ ದೇಹದ ಚಪಲತೆಗಳ ವಕೀಲನಾಗುತ್ತದೆ. ಅರ್ಜುನನ ಆ ತರದ ಅಂತಃಕರಣದ ಹೇಳಿಕೆ ತಿದ್ದಲಿಕ್ಕೆ ಶ್ರೀಕೃಷ್ಣ ಭಗವದ್ಗೀತೆ ಹೇಳಬೇಕಾಯಿತು ! ದಿವ್ಯಜ್ಞಾನದ ಮೂಲದ್ವಾದ ನಮ್ಮ ಧರ್ಮವನ್ನು ತಪ್ಪದೆ ಕಲಿತು ಕೊಂಡು, ಅದು ಮಾತ್ರ ಏಕೆ ಸರಿ ಎಂಬುದನ್ನು ಹಿರಿಯರಿಂದ, ಗುರುಗಳಿಂದ ಅರ್ಥಮಾಡಿಕೊಂಡು ಗೀತೆ ಹೇಳುವ "ವ್ಯವಸಾಯಾತ್ಮಿಕಾ ಬುದ್ಧಿ" ಮಾಡಿ ಕೊಂಡಾಗ ಮಾತ್ರ ಅದರ ಪ್ರೇರಣೆ ಸರಿಯಾದೀತು. ಧರ್ಮವನ್ನು ಕಲಿಯಲೇ ಬೇಕು. ಅದು ಮಾತ್ರ ಭದ್ರವಾದ ದಾರಿ. ಅದನ್ನು ಚುಟುಕುಮಾಡುತ್ತಲೇ ಬರುವುದಲ್ಲ. ನಮ್ಮ ಶಾಸ್ತ್ರದ ಅಭ್ಯಾಸ ಏನೂ ಸಾಲದಾದಾಗಲೂ ಧರ್ಮ ಓದುತ್ತ ಹೆಚ್ಚಿನ ಸಾಧನೆಗೆ ಅನುಕೂಲತೆ ಅವನಿಂದ ಬೇಡುತ್ತ ಇದ್ದರೆ, ನಿಧಾನ ವಾಗಿ ಸಾಧನಾ ಬಲ, ಮನಃಪೂರ್ವಕತೆ ಹೆಚ್ಚುತ್ತದೆ. ಕ್ರಮೇಣ ಮುಂಚೆ ಸಾಧ್ಯವಾಗದ ಆಚರಣೆಗಳೂ ಸಾಧ್ಯವಾಗುತ್ತವೆ, ನಮಗೆ ಮತ್ತೂ ಉತ್ತಮ ಜೀವನಕ್ಕೆ ಈ ಜನ್ಮದಲ್ಲೇ ಅಥವಾ ಮರುಜನ್ಮದಲ್ಲಾದರೂ ದೇವರು ಸಾಧ್ಯ ಮಾಡ್ಯಾನು. ಸಾಯುವವರೆಗೂ ಧರ್ಮ ಓದಬೇಕೆಂದಿದೆ. ಕಲ್ಕಿಅವತಾರವು ಬ್ರಾಹ್ಮಣ ಮನೆಯಲ್ಲಿ ಆರಂಭ ಎನ್ನುತ್ತದೆ ಶಾಸ್ತ್ರ. ಅದಕ್ಕೆ ಲಕ್ಷಾಂತರ ವರ್ಷ ಗಳಿವೆ. ಜಾತಿಧರ್ಮ, ಬ್ರಾಹ್ಮಣ್ಯ ಬೇಕೆಂಬವರಿಗೆ ಜಾತಿ ಅಷ್ಟರವರೆಗೂ ಬಾಳುತ್ತದೆ; ಸಹಾಯ ಕೊಡುತ್ತದೆ. ಜಾತಿ ಇಲ್ಲ, ಎಲ್ಲ ನಾಶವಾಗಿದೆ ಎಂದು ಕುಳಿತವರಿಗೆ ಈಗಲೇ ಅದು ನಾಶವಾಗಿದೆ. ಆದರೆ ಜಾತಿ ಎಲ್ಲಿದೆ, ಎಲ್ಲ ನಾಶವಾಗಿದೆ, ಎನ್ನುವವರಲ್ಲಿಯೂ, ಸಾವಿರಕ್ಕೊಬ್ಬ ಎಲ್ಲೋ ಈಗ ಜಾತಿ ಬಿಟ್ಟು ವಿವಾಹವಾಗುತ್ತಾನೆ! ಉಳಿದವರು ತಮ್ಮ ಜಾತಿ ಬಾಳಿಸಲಿ. ಸದಾ ಚಾರಗಳನ್ನು ಧಾರಾಳವಾಗಿ ಮತ್ತು ನಿರಂತರವಾಗಿ ಸ್ವಲ್ಪವೂ ಆಲಸ್ಯಮಾಡದೆ ಅಭ್ಯಸಿಸುವುದರ ಮೂಲಕ ದೇಹದ ಮೇಲಿನ ಹತೋಟಿ ಧಾರಾಳವಾಗಿ ಬೆಳೆದು, ಪಳಗಿದ ಕುದುರೆ ಧಾರಾಳ ಅಭ್ಯಾಸದಿಂದ ತನ್ನ ಉದ್ಧಟತನ ತೋರಿಸುವುದನ್ನೇ ಮರೆತು ಕೇವಲ ಸವಾರನ ವಶವರ್ತಿ ಆಗುತ್ತದೆ. ಎಂದರೆ ದೇಹ ಗೆಲ್ಲುವುದು ಸಾಧ್ಯವಾಗುತ್ತದೆ. ಆಗ ಆತ್ಮನ ಹಿರಿಮೆ ಪ್ರಕಟಿಸುವ-ಧ್ಯಾನ ಭಕ್ತಿ-ಸಾಧನೆಗಳಿಗೆ ದೇಹ ಚೆನ್ನಾಗಿ ಬಗ್ಗುತ್ತದೆ. ಇದೇ ನಿಜವಾದ ಧರ್ಮದ ಅಭ್ಯಾಸ, ಸದಾಚಾರ ಅದಕ್ಕೆ ತಳಹದಿ ತರಬೇತಿ ಮಾತ್ರ.

ಆಚಾರಃ ಪ್ರಭವೋ ಧರ್ಮ (ನಾರದ ಪುರಾಣ)

ಆಚಾರದಿಂದ ಉತ್ತಮವಾದ ಧರ್ಮದ ಸಾಧನೆ ಉಂಟಾಗುತ್ತದೆ.

ಆಚಾರಃ ಪರಮೋಧರ್ಮಃ ಶ್ರುತ್ಯುಕ್ತಃ ಸ್ಮಾರ್ತ ಏವಚ ।
ತಸ್ಮಾದಸ್ಮಿನ್ ಸಾದಾಯುಕ್ತೋ ನಿತ್ಯಂ ಸ್ಯಾದಾತ್ಮವಾನ್ ದ್ವಿಜಃ॥(ಮನು ೧.೧೦೬)

(ಸಾಮಾನ್ಯರಿಗೆ) ವೇದ ಮತ್ತು ಸ್ಮೃತಿಗಳಲ್ಲಿ ಹೇಳಿದ ಆಚಾರಗಳೇ ಮುಖ್ಯವಾದ ಧರ್ಮಗಳು. ತನ್ನ ಹಿತವನ್ನು ಅಪೇಕ್ಷಿಸುವ ಬ್ರಾಹ್ಮಣನು ಆಚಾರಗಳಲ್ಲಿ ನಿತ್ಯವೂ ಪ್ರಯತ್ನವುಳ್ಳವನಾಗಬೇಕು.

ಚತುರ್ಣಾಮಪಿ ವರ್ಣಾನಾಂ ಆಚಾರೋ ಧರ್ಮಪಾಲಕ ।
ಆಚಾರ ಭ್ರಷ್ಟ ದೇಹಾನಾಂ ಭವೇದ್ ಧರ್ಮಪರಾಙ್ಮುಖ ॥ (ಪರಾಶರ)

ನಾಲ್ಕೂ ವರ್ಣದವರಿಗೆ ಅವರವರ ವರ್ಣಗಳ ಸದಾಚಾರಗಳೇ ಧರ್ಮ ಪಾಲಿಸುತ್ತವೆ ಆದರೆ ಆಚಾರಬಿಟ್ಟ ದೇಹಗಳು ಧರ್ಮಕ್ಕೆ ವಿಮುಖವಾಗುತ್ತವೆ.

ವಿಜ್ಞಾನದ ಪ್ರತಾಪ, ಸೆಕ್ಯುಲರ್ ಕ್ರಮದ ಸರ್ಕಾರ, ಜನಸಂಖ್ಯೆ ಹೆಚ್ಚುತ್ತ ಜೀವನದ ಹೋರಾಟ ಕಠಿಣವಾಗುತ್ತಿರುವುದು, ಧರ್ಮದ ಪಾಲನೆ ಯನ್ನು ಬಹಳ ಕಷ್ಟವಮಾಡುತ್ತಿದೆ. ಆದ್ದರಿಂದ ಈಗ ಆಪದ್ಧರ್ಮದ ಕಾಲ. ಎಂದರೆ ಬ್ರಾಹ್ಮಣನೂ ಕ್ಷತ್ರಿಯರ ಧರ್ಮವಾದ ಸರ್ಕಾರೀಹುದ್ದೆಗಳಲ್ಲಿರುವುದು ಅಥವಾ ವೈಶ್ಯಧರ್ಮವಾದ ವ್ಯಾಪಾರ, ಬೇಸಾಯ ವೃತ್ತಿಗಳು, ಗೋಪಾಲನೆ ಮುಂತಾದ ಕ್ರಮದಿಂದ ಜೀವನನಡೆಸಿದರೂ ಪಾಪಬಾರದು ಎನ್ನುತ್ತದೆ ಶಾಸ್ತ್ರ. (ಇದು ಸಂಪಾದನೆ ವೃತ್ತಿಯಾಗಿ ಮಾತ್ರ, ಸಾಧ್ಯವಾದ ಬ್ರಾಹ್ಮಣ ಸದಾಚಾರ ಗಳನ್ನು ಬ್ರಾಹ್ಮಣಮಟ್ಟದಲ್ಲಿಯೇ ನಡೆಸಬೇಕು) ಮತ್ತು ಇವನ್ನು ಅತಿ ಸುಲಭ ಜೀವನಕ್ಕೆ ತಕ್ಕುದಾಗಿ ಮಾತ್ರ ನಡೆಸಬೇಕೇಹೊರತು ಆಪದ್ಧರ್ಮದ ಅವಶ್ಯಕತೆ ಮೀರಿ ವ್ಯಾಪಾರ, ಕಾರ್ಖಾನೆ ಮುಂತಾದವನ್ನು ಐಶ್ವರ್ಯ ಹೆಚ್ಚಿಸಲು ದೊಡ್ಡದು ಮಾಡುತ್ತ ಹೋಗುವುದಲ್ಲ ; ಹುದ್ದೆಗೆಂದು ಭ್ರಷ್ಟತೆ ತರುವ ಖಂಡಾಂತರ ವಾಸವಲ್ಲ. ಆಪತ್ತನ್ನು ದಾಟಿದೊಡನೆ ಆಪದ್ಧರ್ಮ ಬಿಡದಿದ್ದರೆ ಆಗ ಮಾಡುವ ಧಾರ್ಮಿಕ ಖರ್ಚು ಪರಲೋಕದಲ್ಲಿ ಫಲಕೊಡದು (ಎಂದರೆ ಅವನ ದ್ರವ್ಯ ಶುಕ್ಲದ್ರವ್ಯವಾಗದು (ಮನು ೧೧.೨೮). ಆದ್ದರಿಂದ ಆಗ ವ್ಯಾಪಾರ ಮುಂತಾದವನ್ನು ಮಕ್ಕಳಿಗೆವಹಿಸಿ ನಿವೃತ್ತ ಬ್ರಾಹ್ಮಣ ಜೀವನ ನಡೆಸ ಬೇಕು. ಇತರ ಕೆಳಗಿನ ಹುದ್ದೆಯಲ್ಲಿ ತ್ರಾಸತರುವ ಹೆಚ್ಚಿನ ಜವಾಬ್ದಾರಿಯ ತೇರ್ಗಡೆಯನ್ನು ಒಪ್ಪದಿರುವುದುತ್ತಮ. ಅಥವಾ ಪುರೋಹಿತರೂ ದೇವಸ್ಥಾನಗಳೂ ಇಲ್ಲದ ಪ್ರದೇಶಗಳಿಗೆ ವರ್ಗವಾಗಿ ಅಲ್ಲಿನ ವಾಸದಿಂದ ಸದಾಚಾರ ಕೆಡುವಲ್ಲಿ ವರ್ಗಕ್ಕೆ ಒಪ್ಪದಿರುವುದು ಉತ್ತಮ ; ಆದರೆ ಸಿಕ್ಕಿದ ಹುದ್ದೆ ಥಕ್ಕನೆ ಬಿಡುವಂತಿಲ್ಲವಾದ್ದರಿಂದ ಇದ್ದಲ್ಲೇ ಇದ್ದರೂ ಸಂಪಾದನೆ

ಆಪದ್ಧರ್ಮದ ಮಟ್ಟ ಮೀರುತ್ತ ಬಂದಾಗ, ಮುಂಚಿಗಿಂತ ಹೆಚ್ಚಿನ ದಾನ ಧರ್ಮ, ಧರ್ಮಪ್ರಚಾರಕ್ಕೆ ವೇದ ಪಾಲನೆಗೆ ಮುಂತಾಗಿ ಸಹಾಯ ಮಾಡುವುದು ಅಗತ್ಯ ಹೊರತು ; ಮೂಢಪತ್ನಿಯರ ಮಾತು ಕೇಳಿ ಕುಟುಂಬದ ಐಶ್ವರ್ಯದ ಮೆರವಣಿಗೆ ಹೆಚ್ಚಿಸುವುದು ಮಾಡಲೇಕೂಡದು.

ಕಲಿಕಾಲಕ್ಕೆ ಭಕ್ತಿಯೇ ಮುಖ್ಯ ಸಾಧನೆ, ನಾವು ಎಷ್ಟೇ ಪಾಪ ಮಾಡಿದರೂ ಅದನ್ನೆಲ್ಲ ಧ್ವಂಸ ಮಾಡುವ ಶಕ್ತಿ ಹರಿನಾಮಕ್ಕಿದೆ ಎಂಬ ವಾದವಿದೆ. ಆದರೆ ಮನುಸ್ಮೃತಿಯಲ್ಲಿ, ಮಹಾಭಾರತದಲ್ಲಿ, ದಾನವೇ ಈ ಕಾಲಕ್ಕೆ ಸುಲಭಸಾಧನ ಎಂದೂ ಇದೆ. ಗೀತೆಯಲ್ಲಿ ಶ್ರೀಕೃಷ್ಣನು ಯಜ್ಞದಾನ ತಪಸ್ಸು ಬಿಡಕೂಡದು ಎಂದಿದ್ದಾನೆ. ತಪಸ್ಸೆಂದರೆ ಜಾತಿಧರ್ಮವನ್ನು ದೇಹದ ಕಷ್ಟ ಎಣಿಸದೆ ಧಾರಾಳವಾಗಿ ನಡೆಸುವುದು ಎಂಬ ಅರ್ಥವೂ ಇದೆ. ಮತ್ತು ನಾವು ಹೆಚ್ಚಿಂದ ನೋಡುವ ಭಕ್ತಿ ತೀರಾ ಕೆಳಮಟ್ಟದ್ದು, ಗೌಣ ಭಕ್ತಿ. ನಿಜವಾದ ಭಕ್ತಿ ಎಂದರೆ ಪರಾಭಕ್ತಿ. ಅದರಲ್ಲಿ ತನ್ನದೆಂಬುದು ಏನೂ ಇಲ್ಲ ಎಂಬಷ್ಟು ದೇವರಿಗೆ ಶರಣು ಹೋಗಬೇಕು. ಆಗ ಮಾತ್ರ ಮುಂಚಿನ ಸದಾಚಾರಗಳು ಚಿತ್ತಶುದ್ಧಿ ಬೆಳೆಸಿಯಾಗಿದೆಯಾದ್ದರಿಂದ ಮುಂದೆ ಅನಗತ್ಯ. ಸಾಮಾನ್ಯರ ಪಾಲಿಗೆ ನಾರದ ಪುರಾಣದಲ್ಲಿ ೧೫, ೧೫೩ ; ೪, ೨೪ ಹೇಳಿದಂತೆ ಅನ್ವಯಿಸುವ ಕ್ರಮವ್ಯಾವುದೆಂದರೆ :

> ಯಃ ಸ್ವಧರ್ಮಂ ಪರಿತ್ಯಜ್ಯ ಭಕ್ತಿಮಾತ್ರೇಣ ಜೀವತಿ ।
> ನ ತಸ್ಯ ತುಷ್ಯತೇ ವಿಷ್ಣುರಾಚಾರೇಣೈವ ತುಷ್ಯತಿ ॥

ಯಾರು ಅವನ ಸ್ವಧರ್ಮವನ್ನು ತ್ಯಜಿಸಿ ಭಕ್ತಿ ಮಾತ್ರದಿಂದ ಜೀವಿಸುತ್ತಾನೆಯೋ ಅವನನ್ನು ವಿಷ್ಣುವು ಮೆಚ್ಚುವುದಿಲ್ಲ ; ಉತ್ತಮ ಆಚಾರದಿಂದ ಮಾತ್ರವೇ ಅವ ಸಂತೋಷ ಪಡುತ್ತಾನೆ ; ಭಕ್ತಿಯನ್ನು ಸ್ವಧರ್ಮಕ್ಕೆ ಅವಿರುದ್ಧವಾಗಿ ಅಭ್ಯಸಿಸಬೇಕು. ವಿಹಿತ ಕರ್ಮಗಳನ್ನು ಮಾಡದವರು ಕುಂಭೀಪಾಕ ಮೊದಲಾದ ಘೋರ ನರಕಗಳ ಯಾತನೆ ಹೊಂದುತ್ತಾರೆ ಎಂದು ಮನುಸ್ಮೃತಿಯಲ್ಲಿದೆ (೧೨,೭೬). ವಿಷ್ಣುಪುರಾಣ ಹೀಗೆ ಹೇಳುತ್ತದೆ: ಪ್ರತಿಯೊಬ್ಬನೂ ತನ್ನ ವರ್ಣಾಶ್ರಮಕ್ಕೆ ವಿಹಿತವಾದ ಜಾತಿಧರ್ಮಗಳನ್ನು ನಡೆಸುತ್ತಿರಬೇಕು. ಇದರ ಹೊರತು ಹರಿಯನ್ನು ಒಲಿಸಲು ಬೇರೆದಾರಿ ಇಲ್ಲ (ತೃತೀಯಾಂಶ). ಆಪತ್ಕಾಲ ಬಿಟ್ಟು ಬೇರೆ ಸಮಯದಲ್ಲಿ ಹದಿನೈದು ದಿನ ನಿತ್ಯಕರ್ಮ (ಜಪ ಮುಂತಾದವನ್ನು) ಬಿಟ್ಟರೂ ಶುದ್ಧವಾಗಲಿಕ್ಕೆ ಬಹಳ ದೊಡ್ಡ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುತ್ತದೆ. ವರ್ಷಗಟ್ಟಲೆ

ಬೇಕೆಂದೇ ಬಿಟ್ಟರೆ ಎಂಥ ಪ್ರಾಯಶ್ಚಿತ್ತದಿಂದಲೂ ಶುದ್ಧಿಯಾಗದು. ನಾರದ ಭಕ್ತಿಸೂತ್ರದಲ್ಲೂ (೧೨,೧೩) ಶಾಸ್ತ್ರದ ನಿಯಮಗಳನ್ನು ಬಿಡುವುದು ಭಕ್ತಿಯ ದಾರಿಯಲ್ಲಿ ಅಪಾಯಂಕರ ಎಂದೇ ಹೇಳಿದೆ. ಶಾಸ್ತ್ರ ವಿಧಿಸಿರುವ ತಮ್ಮ ತಮ್ಮ ಧರ್ಮ ಬಿಟ್ಟವರಾದ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರು ಜ್ವಾಲಾಮುಖ, ಕಟಿಪೂತ, ಮೈತ್ರಾಕ್ಷ ಜ್ಯೋತಿಕ ಮತ್ತು ಚೈಲಾಶಕರೆಂಬ ಅಸಹ್ಯ ತರದ ಪ್ರೇತರಾಗುವರು (ಮನು ೧೨,೭೧,೭೨) ; ತಮ್ಮ ಕರ್ಮಗಳ ದೋಷಗಳಿಂದಾಗಿ ಮರ ಬಳ್ಳಿ ಪಕ್ಷಿ ಮೃಗ ಚಂಡಾಲಾದಿ ಜನ್ಮ ಹೊಂದುವರು (ಮನು ೧೨,೯) ; ಬ್ರಾಹ್ಮಣನು ಪತಿತರ ಸಂಸರ್ಗದಿಂದ ಬ್ರಹ್ಮರಾಕ್ಷಸ ಜನ್ಮ ಪಡೆಯುವನು (ಮನು ೧೨,೬೦) ; ತಮ್ಮ ತಮ್ಮ ಶಾಸ್ತ್ರೀಯ ಕರ್ಮ ಮಾಡದವರು ಕುಂಭೀಪಾಕ ಮೊದಲಾದ ಘೋರ ನರಕಗಳನ್ನು ಸೇರಬೇಕಾಗುತ್ತದೆ (ಮನು ೧೨,೭೬).

ಆದರೆ ಬ್ರಾಹ್ಮಣನು ಕಾಯಕವಾಗಿ ಮಡಿ ಮೈಲಿಗೆ, ಶುದ್ಧ ಆಹಾರ ಮುಂತಾದ ಆಚಾರಗಳನ್ನು ಚೆನ್ನಾಗಿ ಆಚರಿಸಿದರೆ ಸಾಲದು. ಬಹಳ ಶೀಲವಂತನಾಗಿರಲೇಬೇಕು ಏಕೆಂದರೆ ಅದು ಮಾತ್ರ ಮೇಲ್ತರದ ಮಟ್ಟದ ಸಾಧನೆ; ತನ್ನಲ್ಲಿರುವ ಆತ್ಮ, ಪರರಲ್ಲಿರುವ ಆತ್ಮರು ಎಲ್ಲ ಪರಮಾತ್ಮನ ಅಂಶ; ಪರರಿಗೆ ಅನ್ಯಾಯ ಮಾಡಕೂಡದು; ಎಂಬುದರ ಪ್ರತ್ಯಕ್ಷ ಸಾಧನೆ. ಆದ್ದರಿಂದ ಧರ್ಮರಾಯನು ಸತ್ಯ, ಧರ್ಮ, ತಾಳ್ಮೆ, ಶೀಲ, ಅಹಿಂಸೆ, ದಾನ, ದಯೆಗಳ ಗುಣಗಳುಳ್ಳವನು, ಪರಬ್ರಹ್ಮನ ಅರಿವಿಗೆ ಯತ್ನಿಸುವವನು, ಶೂದ್ರ ಜನ್ಮದವನಾದರೂ ಶೂದ್ರನಲ್ಲ, ಬ್ರಾಹ್ಮಣನು; ಅವಿಲ್ಲದವ ಬ್ರಾಹ್ಮಣ ಜನ್ಮದವ ಬ್ರಾಹ್ಮಣನಲ್ಲ, ಎಂದಿರುವನು. ಇದನ್ನು ಬ್ರಾಹ್ಮಣರು ನೆನಪಲ್ಲಿಟ್ಟುಕೊಳ್ಳಲೇಬೇಕು. ಆದರೆ ಕಾರ್ಯರೂಪದಲ್ಲಿ ವರ್ಣಗಳ ಮೆಟ್ಟಿಲುಗಳನ್ನು ಶೀಲದ ಮೇಲೆ ಮಾತ್ರ ರಚಿಸಲು ಬರುವುದಿಲ್ಲ. ಶೀಲ ಬೆಳೆದು ಸ್ಪಷ್ಟವಾಗುವ ಪ್ರಾಯ ಬಂದಮೇಲೆ ಮಾತ್ರ ಜಾತಿ ತರಬೇತಿಗೆ ಜನರನ್ನು ಪರೀಕ್ಷಿಸಿ ವರ್ಗೀಕರಿಸುವುದೆಂದರೆ ಬಾಲ್ಯದ ಉತ್ತಮ ಸಂಸ್ಕಾರಗಳ ಕಾಲ ಮೀರಿ ಹಾನಿ ಬರುತ್ತದೆ; ವರ್ಗೀಕರಣದಿಂದ ಕುಟುಂಬಗಳು ಚೂರುಚೂರಾಗುತ್ತವೆ. ಈ ತರದ ವರ್ಗೀಕರಣ ಮಾಡುವ ಮಹತ್ವದವರೂ ಲಭಿಸಲಾರರು ; ಹಾಗೆ ಮಾಡಿದರೂ ವರ್ಗೀಕರಣ ಒಪ್ಪದೆ ಬಹಳ ಧಿಕ್ಕಾರ ನಡೆದಾವು. ಈ ಕ್ರಮ ಸಮಾಜದಲ್ಲಿ ಅಭ್ಯಾಸಕ್ಕೆ ಬರಲಾರದು. ಆದ್ದರಿಂದ ಎಂದೂ ಅಭ್ಯಾಸದಲ್ಲಿರಲಿಲ್ಲ. ಶ್ರೀರಾಮ, ಶ್ರೀಕೃಷ್ಣ, ಯುಧಿಷ್ಠಿರರಂತೆ ಅತ್ಯಂತ ಶೀಲ

ವಂತರೂ ಹಿರಿಮೆಯುಳ್ಳವರೂ ಅವರ ಕಾಲದಲ್ಲಿ ಬ್ರಾಹ್ಮಣರೆಂದು ವರ್ಗೀಕರಿಸಲ್ಪಟ್ಟಿರಲಿಲ್ಲ. ಅವರೂ ತಮ್ಮ ಹುಟ್ಟಿನ ಕ್ರಮದ ಕ್ಷತ್ರಿಯರಂತೆ ಮಾತ್ರ ಬಾಳಿದರು; ತಾವು ಬ್ರಾಹ್ಮಣರೆಂದುಕೊಳ್ಳಲಿಲ್ಲ ಎಂಬುದು ಗಮನಾರ್ಹ.

# ೮. ಆಹಾರ ದೋಷ, ಸಂಪರ್ಕ ದೋಷ

## (ಸದಾಚಾರ ಮುಂದುವರಿದುದು)

ಸದಾಚಾರಗಳ ಒಂದು ಮುಖ್ಯ ಭಾಗ ಶುದ್ಧ ಆಹಾರದ ನಿಯಮಗಳು. ಅತ್ಯಂತ ಹಿರಿಮೆಯದಾದ ಸಾಯುಜ್ಯ ಮುಕ್ತಿಯ ಗುರಿ ಇರುವ ನಮ್ಮ ಧರ್ಮವು ಆ ಗುರಿಯ ಕಲ್ಪನೆಯೇ ಇಲ್ಲದ ಇತರ ಧರ್ಮಗಳಿಗಿಂತ ಎಷ್ಟೋ ಹೆಚ್ಚು ಆಹಾರದ ನಿಯಮಗಳನ್ನು ಸನಾತನಿಗಳಿಗೆ ವಿಧಿಸಿದೆ. ಏಕೆಂದರೆ, ಅವು ಶುದ್ಧ ಮನಸ್ಸಿಗೆ ಬಹಳ ಸಹಾಯಕ.

ಅನ್ನಮಯಂ ಹಿ ಸೌಮ್ಯಮನಃ ।
ಆಹಾರ ಶುದ್ಧೌ ಸತ್ವ ಶುದ್ಧಿಃ ॥

೧) ಉತ್ತಮ ಆಹಾರವು ಸ್ವಭಾವತಃ ಸಾತ್ವಿಕವಾಗಿರಬೇಕು. ೨) ಶುದ್ಧವಾಗಿರುವವರಿಂದ ತಯಾರಿಸಲ್ಪಟ್ಟಿರಬೇಕು. ೩) ದೇವರಿಗೆ ಅರ್ಪಿಸಲ್ಪಟ್ಟಿದ್ದರೆ ಉತ್ತಮ. ೪) ಅದಕ್ಕೆ ಕಶ್ಮಲ ತಾಗಿರಕೂಡದು. ೫) ಶುದ್ಧವಾದವರಿಂದ ಬಡಿಸಲ್ಪಡಬೇಕು (ಶುದ್ಧಸ್ಥಳದಲ್ಲಿ). ೬) ಶುಕ್ಲ ದ್ರವ್ಯದ್ದು (ಅವರಿಗೆ ವಿಧಿಸಿದ ಧಾರ್ಮಿಕ ರೀತಿಯಿಂದ ಸಂಪಾದಿಸಲ್ಪಟ್ಟ ಹಣ) ಮಾತ್ರ ಉತ್ತಮ.

**ಆಹಾರ ದೋಷ:** ಸತ್ವಗುಣ ಬೆಳೆಸಬೇಕಾದ ಬ್ರಾಹ್ಮಣನು ಸಾತ್ವಿಕ ಆಹಾರ ಸೇವಿಸಬೇಕು. ಅವನಿಗೆ ಅತ್ಯಂತ ಹಾನಿಕರವಾದವು ಮದ್ಯಮಾಂಸ. ಮದ್ಯವು ಮನಸ್ಸನ್ನು ಅತ್ಯಂತ ತಮಸ್ಸಿಗೆ ಸೆಳೆಯುತ್ತದೆ. ಬುದ್ಧಿಯ ಹೆಚ್ಚಿನ ಭಾಗ ಮಂದ ಮಾಡಿ ಮಾಡಕೂಡದ ಕಾರ್ಯಗಳನ್ನು ಮಾಡಿಸುತ್ತದೆ. ಪಾಪ ತುಂಬಿಸುತ್ತದೆ. ಒಂದು ದೃಷ್ಟಾಂತ ನೋಡಿರಿ. ಸೇಲಂ ಸರ್ಕಾರೀ ಇಂಜನಿಯರಿಂಗ್ ಕಾಲೇಜಿನ ಸುಮಾರು ೨೫೦ ವಿದ್ಯಾರ್ಥಿಗಳು ಒಂದು ಹಳ್ಳಿಯ ಸಮೀಪ ಕ್ಯಾಂಪು ಮಾಡಿದಾಗ ಇಬ್ಬರು ಹುಡುಗರಿಗೂ ಹಳ್ಳಿಯ ಚಿಪ್ಪಿಗನಿಗೂ ಕಲಹವಾಯಿತು. ಊರಿನ ಬಹುಮಟ್ಟಿನವರು ದೂರದ

ಜಾತ್ರೆಗೆ ಹೋದ ಸಂದರ್ಭ ಕಂಡು ಎಲ್ಲ ಹುಡುಗರೂ ಕೂಡಿ ದರ್ಜಿ ಮತ್ತು ಅವನ ಗರ್ಭಿಣಿ ಪತ್ನಿಗೆ ಬಡಿದರು, ಹಳ್ಳಿಯ ಹತ್ತು ಹುಲ್ಲು ಮಾಡಿನ ಗುಡಿಸಲುಗಳನ್ನು ಮತ್ತು ನಾಲ್ಕು ಅಂಗಡಿಗಳನ್ನು ಸುಟ್ಟರು. ಉಳಿದ ಹಂಚಿನ ಮಾಡಿನವಕ್ಕೆ ಧಾರಾಳವಾಗಿ ಕಲ್ಲೆಸೆದರು. ಅಲ್ಲಿನ ಸಿನೆಮಾ ಮಂದಿರದ ಪ್ರೊಜೆಕ್ಟರ್ ಮತ್ತು ಪರದೆ ಹಾಳುಮಾಡಿದರು. ಒಂದು ಅಂಗಡಿಯ ೨೫ ಚೀಲ ಸಾಮಾನು ಚೆಲ್ಲಿ ಹಾಕಿದರು. ಪಂಚಾಯತಿ ಆಫೀಸಿನ ಕುರ್ಚಿ ಮೇಜು ರಿಕಾರ್ಡು ಸುಟ್ಟರು. ಮಾರಿಯಮ್ಮನ ಗುಡಿಯ ಚಪ್ಪರ ಬೀಳಿಸಿ ದರು. ಅದರಲ್ಲಿನ ಮೂರು ಅಡಿ ಎತ್ತರದ ಕಂಚಿನ ದೇವಿಯ ಮೂರ್ತಿ ಎಲ್ಲೋ ಎಸೆದರು. ಸಹಾಯಕ ಉಪಾಧ್ಯಾಯರು ತಡೆಯಲು ಬಂದವರಿಗೆ ಏಟು ಕೊಟ್ಟರು. ಬಹುಮಟ್ಟಿನ ಹುಡುಗರು ಮದ್ಯ ಕುಡಿದಿದ್ದರು. (ಹಿಂದೂ ತಾ॥ ೧೫-೨-೮೦ ವರದಿ) ಮದ್ಯದ ಅಮಲಲ್ಲಿ ಬುದ್ಧಿಯ ಸೌಮ್ಯ ಭಾಗ ಮಂದವಾಗಿ ಭಯಂಕರ ಪಾಪದ ಕಾರ್ಯಗಳು ನಡೆಸಲ್ಪಡುತ್ತವೆ. ಆದರೆ ಜಾತಿ ನಾಶದ ಕರೆಯಿಂದಾಗಿ ಎಷ್ಟೆಲ್ಲ ಬ್ರಾಹ್ಮಣರು ಈಗಲೀಗ ಮದ್ಯದ ಅಭ್ಯಾಸಕ್ಕಿಳಿದಿದ್ದಾರೆ! ಸೆಕ್ಯುಲರ್ ಸರ್ಕಾರದ ಪರಿಣಾಮವಾಗಿ ಮೇಲು ಜಾತಿಯವರೂ ಕೆಳ ಮಟ್ಟದವರ ಸಂಪರ್ಕ ಬೆಳೆಸಿ ಆಹಾರದಲ್ಲೂ ಬೆರೆತು ಈಗ ಎಲ್ಲೆಲ್ಲೂ ಮದ್ಯದ ಸೇವನೆ ಸಮಾಜದ ವಿಶೇಷ ಸಮಾರಂಭದ ಅತಿಥ್ಯ ದಲ್ಲಿ ಮುಖ್ಯ ಭಾಗವಾಗುತ್ತಿದೆ! ಹಿಂದಿನ ಹಿಂದೂ ಧರ್ಮದ ರಾಜ್ಯಗಳಲ್ಲಿ ಅದನ್ನು ಲೋಕದಲ್ಲೇ ಅತಿ ಕಡಿಮೆ ಅಭ್ಯಾಸಕ್ಕೆ ಇಳಿಸಿದ್ದರು. ಕೂಲಿ ಕೆಲಸದವರು ತಮ್ಮ ಕೂಲಿ ದರ ಏರಿಸುತ್ತ ಹೋಗಲಿಕ್ಕೆ ಮದ್ಯದ ವ್ಯರ್ಥ ಖರ್ಚು ಧಾರಾಳ ಕಾರಣ.

ಸರ್ಕಾರಕ್ಕೆ ಅಬ್ಕಾರಿ ತೆರಿಗೆಯ ಗರವೂ ಕಾರಣ. ಧಾರ್ಮಿಕ ಸಾಧನೆಯ ಬಹಳ ಮೇಲು ಮಟ್ಟದಲ್ಲಿರಬೇಕಾದ ಬ್ರಾಹ್ಮಣನಿಗಂತೂ ಮದ್ಯ ತೀರಾತೀರಾ ನಿಷಿದ್ಧ. ಮದ್ಯ ಕುಡಿಯುವ ಬ್ರಾಹ್ಮಣನು ಶೂದ್ರತ್ವ ಹೊಂದುತ್ತಾನೆ. ಪ್ರಾಯಶ್ಚಿತ್ತ ಕುದಿಯುವ ಗೋಮೂತ್ರ ಅಥವಾ ಕುದಿಯುವ ತುಪ್ಪ ಕುಡಿದು ಸಾಯುವುದು! (ಮನು ೧೧,೯೧). ಇಲ್ಲವಾದರೆ ಅವ ಹುಳ, ಕೀಟ, ಹಾತೆ ಮುಂತಾದ ಅತಿ ಅಲ್ಪ ತರದ ಪ್ರಾಣಿಜನ್ಮಕ್ಕೆ ನೂಕಲ್ಪಡುತ್ತಾನೆ (ಮನು ೧೨, ೬೫). ಅದರ ಅಭ್ಯಾಸ ಅತಿ ಸುಲಭ, ಬಿಡುವುದು ಅತ್ಯಂತ ಕಷ್ಟ. ದೇಶದಲ್ಲಿ ಧರ್ಮದ ಅಭ್ಯಾಸ, ನಾಶವಾಗುತ್ತ ಬಂದು, ಸೆಕ್ಯುಲರ್ ಸರ್ಕಾರ ಸಾರುವ ಸರಿಸಮಾನತೆ ತತ್ವದಿಂದ ಎಷ್ಟೆಲ್ಲ ಯುವಕರು ಭಯಂಕರ ಹಾಳು ಭವಿಷ್ಯಕ್ಕೆ

ನೂಕಲ್ಪಡುತ್ತಿದ್ದಾರೆ! ಹೀಗೆ ಕೆಡಿಸುವ ಶಕ್ತಿ ಮಾತ್ರ ಸೆಕ್ಯುಲರ್ ಸರ್ಕಾರಕ್ಕಿದೆ, ಉದ್ಧಾರ ಮಾಡುವ ಶಕ್ತಿಯಿಲ್ಲ !

ಮಾಂಸದ ಅಭ್ಯಾಸವು ಹಿಡಿದನಂತರ ಬಿಡುವುದು ಕಷ್ಟ. ಹೊಲೆಯರೂ ಪಂಚಮರೂ ಸನಾತನ ಧರ್ಮದವರಲ್ಲ, ಅದರ ಹೊರಗಿನವರು. ಆದ್ದರಿಂದ ಅವರಿಗೆ ಯಾವತರದ ಮಾಂಸಕ್ಕೂ ನಿಷೇಧವೇ ಇಲ್ಲ. ಆದರೆ ಶೂದ್ರರಿಗೆ ಅನೇಕತರದ (ತಾಮಸಿಕತೆ ಹೆಚ್ಚಿಸುವ) ಮಾಂಸ ನಿಷೇಧಿಸಲ್ಪಟ್ಟಿದೆ. ವೈಶ್ಯರು ಮಾಂಸಕ್ಕೆ ತಾವೇ ಪ್ರಾಣಿಗಳನ್ನು ಕೊಲ್ಲಕೂಡದು. ಕೆಲವನ್ನು ಕೊಂಡು ಕೊಂಡು ದೇವರಿಗೆ ಅರ್ಪಿಸಿ ತಿನ್ನಬಹುದು. ಬ್ರಾಹ್ಮಣರಿಗೆ ಮಾಂಸಾಹಾರ ಕಲಿಯುಗದಲ್ಲಿ ನಿಷಿದ್ಧ. ಕೇವಲ ಒಂದು ವರ್ಗದ ಯಜ್ಞಗಳಲ್ಲಿ, ಅಗ್ನಿಗೆ ಅರ್ಪಿಸಿದ ಪ್ರಾಣಿಯ ಅತಿಚಿಕ್ಕ ಭಾಗ ಪ್ರಸಾದವಾಗಿ ತಕ್ಕೊಳ್ಳಬಹುದಾದರೂ ಅದಕ್ಕೂ ಹಿಟ್ಟಿನ ಪ್ರಾಣಿ ಅರ್ಪಿಸಬೇಕೆಂಬ ವರ್ಗವಿದೆ. ಮನುಷ್ಯನು ತಕ್ಕಂತೆ ಬಾಳಲು ಬಹಳ ಆಶಿಸುವ, ತನ್ನಂತೆ ಪ್ರತ್ಯಕ್ಷವಾಗಿ ಸುಖದುಃಖ ಅನುಭವಿಸುವ, ತನ್ನಂತೆ ಜೀವಾತ್ಮನನ್ನೊಳಗೊಂಡ, ಪ್ರಾಣಿಯ ಇಡೀ ಜೀವನವನ್ನು ಕೇವಲ ಅಲ್ಪಕಾಲದ ನಾಲಿಗೆಯ ರುಚಿಗಾಗಿ ಕೊಂದು ತಿನ್ನುವುದು ಬಹಳ ಧರ್ಮಿಷ್ಠರಾಗಲು ಬಯಸುವವರಿಗೆ ನ್ಯಾಯವಾಗದು. ಸಾತ್ವಿಕತೆಗೂ ವಿರೋಧವಾಗದಿರದು. ಆದ್ದರಿಂದಲೇ "ಮಾಂಸ" ಎಂಬ ಶಬ್ದಕ್ಕೆ "ಪರಲೋಕದಲ್ಲಿ ಆ ಪ್ರಾಣಿಯು ನಿನ್ನನ್ನು ತಿನ್ನುತ್ತದೆ" ಎಂಬ ಅರ್ಥವಿದೆ. ಮತ್ತು ಮಾಂಸ ತ್ಯಜಿಸಿ ಬಾಳುವವರಿಗೆ ದೊಡ್ಡ ಯಜ್ಞ ಮಾಡಿದ ಪುಣ್ಯವಿದೆ ಎಂದೂ ಶಾಸ್ತ್ರವು ಸಾರುತ್ತದೆ (ಮನು ೫-೫೫,೫೬). ಆದರೆ ಈಗ ಶಾಸ್ತ್ರದ ಅಜ್ಞಾನದಿಂದ ಮತ್ತು ಮಿಶ್ರ ಹಾಸ್ಟೆಲ್ಲುಗಳ ವಾಸದಿಂದ ಮುಂತಾಗಿ ಎಷ್ಟೆಲ್ಲ ಬ್ರಾಹ್ಮಣ ಹುಡುಗರು ಅವರಿಗೆ ಬಹಳ ಪಾಪ ತರುವ ಮಾಂಸಹಾರ ನಡೆಸುತ್ತಿದ್ದಾರೆ ! ಮಾತ್ರವಲ್ಲ ಹಿಂದೂ ಧರ್ಮದವರಿಗೆ ಗೋವು ದೇವರೇ ಆಗಿರುವಾಗ, ಮಾಂಸ ಎಷ್ಟಕ್ಕೂ ತಿನ್ನಕೂಡದಾಗಿರುವಾಗ, ಗೋಮಾಂಸವನ್ನೂ ಸಂಗದೋಷದಿಂದ ತಿನ್ನುತ್ತಿದ್ದಾರೆ !

ಸೆಕ್ಯುಲರ್ ಸರ್ಕಾರದ ಜಾತಿ ಕ್ರಮದ ಖಂಡನೆಯ ಆರಂಭದ ಮುಂಚೆ ಹಳ್ಳಿಗಳ ಬ್ರಾಹ್ಮಣ ಯುವಕರಿಗೆ ಮಾಂಸ ಮದ್ಯ ತ್ಯಜಿಸಿ ಬಾಳುವುದು ಅತ್ಯಂತ ಸುಲಭವಾಗಿತ್ತು. ಅದರಲ್ಲಿ ಒಂದು ಸಾಧನೆಯ ಶ್ರಮವೇ ಇರಲಿಲ್ಲ. ಈಗ ಹಾಗಲ್ಲ. ಇತರ ವರ್ಗದವರಲ್ಲಿಯೂ ಇವುಗಳ ಉಪಯೋಗ ಹೆಚ್ಚುತ್ತ ಬಂದಿರುವುದು ಧರ್ಮದ ದೃಷ್ಟಿಯಿಂದ ಸೆಕ್ಯುಲರ್ ಸರ್ಕಾರದ ಒಂದು

ಭಯಂಕರವಾದ, ಅನಾವಶ್ಯಕವಾದ, ದೇಶದಲ್ಲಿ ಪಾಪ ತುಂಬಿಸುವ, ದೊಡ್ಡ ದೋಷ.

ಹೆಚ್ಚು ಬ್ರಾಹ್ಮಣ್ಯ ಬೇಕಾದ ಸಾಧಕರು ಸಸ್ಯಾಹಾರದಲ್ಲಿ ಕೂಡ ಕೆಲವು ತರದವನ್ನು (ನೀರುಳ್ಳಿ ಮುಂತಾದ ತಾಮಸಿಕತೆ, ರಾಜಸಿಕತೆ ಹೆಚ್ಚಿಸುವು ವನ್ನು) ತ್ಯಜಿಸಬೇಕು.

**ಸಂಪರ್ಕ ದೋಷ :** ಸನಾತನ ಧರ್ಮವು ತನ್ನ ದಿವ್ಯ ಜ್ಞಾನದಿಂದ ಸಂಪರ್ಕದೋಷದ ಲಕ್ಷಣಗಳನ್ನು ಕಂಡುಕೊಂಡಿದೆ. ನಮ್ಮ ಸೂಕ್ಷ್ಮದೇಹವು ಸ್ಥೂಲದೇಹವನ್ನು ಆವರಿಸಿಕೊಂಡು ಅದನ್ನು ಮೀರಿಕೊಂಡು ಇದೆ. ಅದು ಸಾತ್ವಿಕ ಮನುಷ್ಯರಿಂದ ಸಾತ್ವಿಕ ಕಣಗಳಿಂದ, ರಾಜಸಿಕರಿಂದ ರಾಜಸಿಕ ಕಣ ಗಳಿಂದ, ತಾಮಸಿಕರಿಂದ ತಾಮಸಿಕಕಣಗಳಿಂದ ಮಾಡಲ್ಪಟ್ಟಿದೆ. ಮಹಾತ್ಮರಲ್ಲಿ ಶುದ್ಧಸತ್ವಗುಣದ ಕಣಗಳ ಮಂಡಲವು ಮುಖದ ಸುತ್ತಲಿನ ದಿವ್ಯಪ್ರಭೆಯಾಗಿ ಕೆಲವರಿಗೆ ಕಂಡದ್ದುಂಟು. ಮನುಷ್ಯರಲ್ಲಿ ಅವರವರ ಮಿಶ್ರಗುಣ ಹೊಂದಿ ಕೊಂಡು ಅಪಾರ ಸಂಖ್ಯೆಯ ಬೇಧಗಳ ಸೂಕ್ಷ್ಮ ಕವಚಗಳಿವೆ. ಪೋಲೀಸರ ನಾಯಿಗಳು ಕೊಲೆ ಮಾಡಿದವನು ಬಿಟ್ಟುಹೋಗಿದ್ದ ಕರವಸ್ತ್ರ ಮುಂತಾದ ವನ್ನು ಮೂಸಿ, ಅವನ ಹೆಜ್ಜೆಗಳಲ್ಲಿ ಅದೇ ವಾಸನೆಗುರುತಿಸುತ್ತ ಪೋಲೀಸರನ್ನು ಅವನಿದ್ದೆಡೆಗೆ ಕರಕೊಂಡು ಹೋದದ್ದುಂಟು. ನಮಗೆ ಹಾಗೆ ಗುರುತಿಸುವ ಶಕ್ತಿ ಇಲ್ಲದಷ್ಟಕ್ಕೆ ಪ್ರತಿ ಮನುಷ್ಯನಿಗೆ ಈ ತರದ ಸೂಕ್ಷ್ಮಕಣಗಳ ಕವಚ ಅವರ ಕೆಟ್ಟ ಪರಿಣಾಮ ಏನೂ ಇಲ್ಲ ಎಂದು ಭಾವಿಸಿದರೆ ತೀರಾ ತಪ್ಪಾಗುತ್ತದೆ.

ತರಕಾರಿ ಕೊಳೆತರೆ ಅಲ್ಪಸ್ವಲ್ಪ ವಾಸನೆ ಬರಬಹುದು. ತರಕಾರಿ ಮಾತ್ರ ತಿನ್ನುವವರಿಂದಲೂ ಹೆಚ್ಚು ಅಶುದ್ಧಕಣಗಳು ಬರುವುದಿಲ್ಲ. ಆದರೆ ಮೀನು ಕೊಂದೊಡನೆ ಬೇಗ ಮೀನಿನ ವಾಸನೆ ಹರಡುತ್ತದೆ. ಮಾಂಸ ಕೊಳೆತಾಗ ವಿಪರೀತ ವಾಸನೆ ಉಂಟಾಗುತ್ತದೆ. ಎಂದರೆ ಅದರಿಂದ ಅತ್ಯಂತ ಧಾರಾಳವಾಗಿ ಬಹಳ ಅಶುದ್ಧ ಕಣಗಳು ಹೊರಡುತ್ತವೆ. ಮಾಂಸಗಳಲ್ಲಿ ಬಹಳ ತಾಮಸಿಕ ವಲ್ಲದವನ್ನು ಮಾತ್ರವೇ ನಮ್ಮಶಾಸ್ತ್ರವು ಕ್ಷತ್ರಿಯ ವೈಶ್ಯ ಶೂದ್ರರಿಗೆ ವಿಧಿಸಿದೆ. ಅವರಿಗೆ ತಾಮಸಿಕದವನ್ನು ನಿಷೇಧಿಸಿದೆ. ನಮ್ಮ ಧರ್ಮದವರಲ್ಲದ, ಆದ್ದ ರಿಂದ ಆಹಾರನಿಯಮ, ಶೌಚದನಿಯಮ, ಒಂದೂ ವಿಧಿಸಲ್ಪಡದ ಹೊಲೆಯ, ಶ್ವಪಚ, ಚಂಡಾಲ ಮುಂತಾದ ಅಂತ್ಯವಾಸಿ ವರ್ಗದವರು, ನಾಯಿಮಾಂಸ ಕಾಗೆ, ಹಾವು, ಹೆಗ್ಗಣ ಮುಂತಾದವುಗಳ ಅತಿ ತಾಮಸಿಕ ಮಾಂಸ ತಿನ್ನುವುದು ಮಾತ್ರವಲ್ಲ, ತಾನಾಗಿ ಸತ್ತ ದನ ಮುಂತಾದವನ್ನು ತಿನ್ನುತ್ತಾರೆ. ತಿನ್ನಲಿ

ಕ್ಕೆಂದು ಕೊಲ್ಲದೆ, ಅದೇ ದೇಹ ಶಿಥಿಲವಾಗಿ ಎಂದರೆ ಕೊಳೆಯಲಿಕ್ಕೆ ಆಗಲೇ ಆರಂಭಿಸಿದ ಪ್ರಾಣಿ ಸತ್ತಮೇಲೆ ಮತ್ತಷ್ಟು ಬೇಗ ತಿಂದವರ ದೇಹದ ಮೂಲಕ ಅತಿ ತಾಮಸಿಕ ಕಣಗಳಾಗಿ ಸುತ್ತಲೂ ಹರಡುತ್ತದೆ ಎಂಬುದರಿಂದ ಶಾಸ್ತ್ರವು ಅಂಥವರ ಸಂಪರ್ಕ ಸಾತ್ವಿಕರಿಗೆ, ರಾಜಸಿಕರಿಗೆ ಕೆಟ್ಟದ್ದು ಎಂದಿದೆ. ಇಂಥ ಸಂಪರ್ಕದೋಷ ಕೆಲಸ ಮಾಡುತ್ತದೆ, ನಿಜಕ್ಕೂ ಇದೆ ಎಂಬುದಕ್ಕೆ ಕೆಲವು ಪ್ರತ್ಯಕ್ಷ ಅನುಭವಗಳ ಉದಾಹರಣೆ ಕೊಡುವುದುತ್ತಮ.

ಬಂಗಾಳದ ಪ್ರಖ್ಯಾತ ತಾರಕೇಶ್ವರ ದೇವಸ್ಥಾನದ ಮಹಂತರೊಮ್ಮೆ ಕಲ್ಕತ್ತಾದ ಅವರ ಶಿಷ್ಯ ಬ್ರಾಹ್ಮಣ ಪೋಲಿಸು ಸೂಪರಿಂಟೆಂಡೆಂಟರಲ್ಲಿ ತಿಂಡಿ ಮನೆಯಲ್ಲಿ ಮಾಡಿದ್ದು ಎಂದು ತಿನ್ನಲು ಒತ್ತಾಯಿಸಲ್ಪಟ್ಟಾಗ, ತಿಂದರು. ರಾತ್ರಿ ಮಹಂತರಿಗೆ ಸ್ವಪ್ನದಲ್ಲಿ ಎಲ್ಲೆಲ್ಲೂ ದನದ ರಕ್ತ ಹರಿಯುವ ದೃಶ್ಯ ತೋರಿ ಅವರು ಬಹಳ ಗಡಿಬಿಡಿಗೊಂಡರು. ಇದಕ್ಕೆ ಕಾರಣ ನಿರ್ಧರಿಸಲು ಪುನಃ ತಮ್ಮ ಶಿಷ್ಯರ ಮನೆಗೆ ಬಂದು ಅಲ್ಲಿನ ಅಡಿಗೆಯವನನ್ನು ಕಟುವಾಗಿ ಪ್ರಶ್ನಿಸಿದರು. ಅವ ಹೆದರಿ, ತಾನು ಮುಂಚೆ ಮಾಂಸಮಾರುವ ಅಂಗಡಿಯಲ್ಲಿ ಕೆಲಸಮಾಡಿಕೊಂಡಿದ್ದ ವಿಚಾರ ಹೇಳಿದ. ಈ ಘಟನೆಯನ್ನು ಟ್ರೂತ್ ಪತ್ರಿಕೆ ಪ್ರಕಟಿಸಿತ್ತು. ಇಂಥ ಮತ್ತೊಂದು ಘಟನೆ ಜೀವೋತ್ತಮ ಪತ್ರಿಕೆಯಲ್ಲಿ ವರದಿ ಬಂದಿತ್ತು. ದೇಶಕ್ಕೆ ಸ್ವರಾಜ್ಯ ಸಿಕ್ಕುವ ಮುಂಚೆ, ಬ್ರಿಟಿಷರು ಜೈಲಿಗೆ ಹಾಕಿದ್ದ ರಾಜಕೀಯ ಮುಖಂಡರೊಬ್ಬರು ತುಂಬಾ ಸಾತ್ವಿಕರು, ಒಂದು ರಾತ್ರಿ ತಾನು ತನ್ನ ತಾಯಿಯನ್ನು ಕೊಲೆಮಾಡಿದ ಸ್ವಪ್ನಕಂಡು ಅತ್ಯಂತ ಕಳವಳಗೊಂಡರು. ಆಮೇಲೆ ವಿಚಾರಿಸಿದಾಗ ಮುಂಚಿನ ದಿನ ಅಡಿಗೆ ಮಾಡಿದವ ನಿತ್ಯದವನಲ್ಲ. ಅವನ ಅಭಾವದಲ್ಲಿ ತಾಯಿಯ ಕೊಲೆಮಾಡಿ ಖೈದಿಯಾದವ, ಎಂದು ತಿಳಿದು ಬಂತು.

ಮುಸಲ್ಮಾನರಲ್ಲಿ ಧಾರ್ಮಿಕ ಸಾಧನೆಯಲ್ಲಿ ಬಹಳ ಮಾನ್ಯರಾದ ಇಬ್ರಾಹಿಂ ಎಂಬವರ ಶಿಷ್ಯನೊಬ್ಬ ಕಠಿಣ ಸಾಧನೆ ಮಾಡುತ್ತಿದ್ದರೂ ಅವನಿಗೆ ಧ್ಯಾನವು ಅಸಾಧ್ಯವಾಗುತ್ತಿರುವುದು ಕೇಳಿ ಅವನಲ್ಲಿಗೆ ಹೋಗಿ ಅವನ ಅಡಿಗೆಯವನು ಅಧರ್ಮಿಯೆಂದು ಕಂಡುಕೊಂಡು, ಶಿಷ್ಯನಿಗೆ ತಮ್ಮ ಮನೆಯಲ್ಲೇ ಊಟ ಹಾಕುತ್ತ ಬಂದಾಗ ದೇವರ ಧ್ಯಾನ ಸಾಧ್ಯವಾಯಿತು ಎಂದು ಅವರ ಕತೆಯಲ್ಲಿದೆ.

ಸತ್ತ ಮನುಷ್ಯನ ದೇಹದಿಂದ ಅತಿ ಧಾರಾಳವಾಗಿ ತಾಮಸಿಕ ಕಣಗಳು ಹೊರಡುತ್ತಿರುತ್ತವೆಯಾದ್ದರಿಂದ ಹೆಣ ಹೊತ್ತವರು, ಅದನ್ನು ಹಿಂಬಾಲಿಸಿದ

ಬಂಧುಗಳು, ಅನಂತರ ಬಟ್ಟೆ ಕೂಡ ಸ್ನಾನಮಾಡಿಕೊಳ್ಳಬೇಕೆಂಬ ನಿಯಮವಿದೆ. ವೈದ್ಯವಿದ್ಯಾರ್ಥಿಗಳು ದೇಹದ ರಚನೆ ಕಲಿಯಲಿಕ್ಕೆ ಆಗಾಗ ಮಾನವನ ಹೆಣದ ತುಂಡು ಹತ್ತಿರ ಇಟ್ಟುಕೊಂಡು ಪಠ್ಯಪುಸ್ತಕದಂತೆ ಕತ್ತರಿಸಿ ಪರೀಕ್ಷಿಸುತ್ತ ಒಂದು ವರ್ಷ ಪಾಠ ಕಲಿಯುವುದು ಆ ವಿದ್ಯಾರ್ಥಿಗಳ ಸೂಕ್ಷ್ಮ ಶರೀರಕ್ಕೆ ತುಂಬಾ ಹಾನಿ ತಾರದಿರದು. ಮದ್ಯ ಮಾಡಲಿಕ್ಕೆ ಬೆಲ್ಲ, ಹಣ್ಣು ಮುಂತಾದ ವನ್ನು ಕೊಳೆಸುತ್ತಾರೆ. ಅದರಲ್ಲುಂಟಾಗುವ ಮದ್ಯಸಾರ (ಆಲ್ಕೋಹಾಲ್) ಅತ್ಯಂತ ಬೇಗ ಆವಿಯಾಗುವ ವಸ್ತು. ಕಳ್ಳಭಟ್ಟಿಯಿಂದ ಶರಾಬು ತಯಾರಿಸು ವವರು ಅತ್ಯಂತ ಹೊಲಸು ಪದಾರ್ಥಗಳಿಂದ ಹಾಗೆ ಮಾಡುತ್ತಾರೆ ಎಂದು ಪತ್ರಿಕೆಗಳಲ್ಲಿ ವರದಿ ಇತ್ತು. ಅಂಥ ಮದ್ಯ ಕುಡಿದವರ ದೇಹದಿಂದ ಬಹಳ ತಾಮಸಿಕ ಕಣಗಳು ಸುತ್ತಲೂ ಹರಡುತ್ತಿರದೆ ಇರಲಾರವು. ಅವು ಸಾತ್ವಿಕ ರಿಗೆ ಹಾನಿ ಮಾಡದಿರವು.

ಸಾತ್ವಿಕರು ಅತಿ ಕೆಳವರ್ಗದವರ ಈ ತರದ ದೋಷಗಳಿಗೆ ಹೆದರ ಬೇಕಾದುದು ಯಾರಮೇಲಿನ ತಾತ್ಸಾರದಿಂದಲ್ಲ, ದ್ವೇಷದಿಂದಲ್ಲ, ಕೇವಲವಾಗಿ ತಮಗೆ ಸಾತ್ವಿಕತೆ ಬೆಳೆಸಲು ಹಾನಿಬಾರದಿರಲಿ ಎಂದು. ಸಾತ್ವಿಕತೆಯ ಶ್ರೇಷ್ಠತೆ ಭಗವದ್ಗೀತೆಯಲ್ಲೂ ಹೊಗಳಲ್ಪಟ್ಟಿದೆ. ಈ ದೋಷ ಅತಿ ಕೆಳಜಾತಿಯವ ರೆಂಬ ಹೊರಗಿನವರಲ್ಲಿ ಮಾತ್ರವಲ್ಲ ತನ್ನವರಲ್ಲೇ ಉಂಟಾಗುವ ದೃಷ್ಟಾಂತ ಗಳನ್ನೂ ಶಾಸ್ತ್ರ ತಿಳಿಸಿದೆ. ಮಗಳೇ ಆಗಲಿ ಪತ್ನಿಯೇ ಆಗಲಿ, ಯಾರೇ ಆಗಲಿ ಋತುವಾದ ಸ್ತ್ರೀಯ ದೇಹದಿಂದ ಆ ಮೂರು ದಿನ ತೀರಾ ಅಶುದ್ಧ ತಾಮಸಿಕ ಕಣಗಳು ಹೊರಡುತ್ತಿರುತ್ತವೆ. ಇದರ ಪರೀಕ್ಷೆ ಸುಲಭ. ಋತು ವಾದವಳೂ, ಆಗದವಳು ಒಂದೊಂದು ಅತಿ ತೆಳುವಾದ (ಅರ್ಧ ದಿನ ಮಾತ್ರ ಅರಳಿ ಬಾಡುವ) ಹೂಗಳನ್ನು ಹಿಡಕೊಂಡು ನಿಂತಾಗ, ಮುಟ್ಟಾದವಳ ಕೈಯ ಹೂವು ಮಾತ್ರ ಬೇಗ ಬಾಡುತ್ತದೆ. ಅವಳ ಬೆವರಲ್ಲಿ ವಿಷವಿದೆ ಎಂದೂ ಕಂಡು ಬಂದಿದೆ. ಅಂತೆಯೇ ಕುಟುಂಬದಲ್ಲಿ ಮರಣವಾದಾಗ, ಜನನವಾದಾಗ, (ಮತ್ತು ಹೆಚ್ಚಾಗಿ ಹೆತ್ತವಳು) ಹತ್ತುದಿನ ತೀರಾ ಅಶುದ್ಧರು, ಬಂಧುಗಳೂ ಅಶುದ್ಧರು ಎಂದು ಶಾಸ್ತ್ರ ಹೇಳುತ್ತದೆ. ಇದಕ್ಕೆ ಶೋಧನೆ ನಡೆದದ್ದಿಲ್ಲ. ಆದರೆ ಆ ಅಶುದ್ಧ ಕಾಲದಲ್ಲಿ ಬ್ರಾಹ್ಮಣನು ವೇದಮಂತ್ರ ಹೇಳಕೂಡದು ಎಂದಿರುವುದರಿಂದ ಆ ದಿವ್ಯ ಮಂತ್ರಗಳು ಉಂಟುಮಾಡುವ ಅತ್ಯಂತ ಸೂಕ್ಷ್ಮ ತರದ ಕಂಪನಗಳು ಆಗಿನ ತಾಮಸಿಕತೆಗೆ ಒಗ್ಗದೆ ಹಾನಿ ತಂದೀತು ಎಂಬುದು ಕಾರಣವಿರಬೇಕು. ಆಗ ಪವಿತ್ರವಾದ ದೇವರ ಪೂಜಾಕಾರ್ಯ, ಧ್ಯಾನ,

ಶುಭಕಾರ್ಯಗಳಾದ ಸಂಸ್ಕಾರಗಳು ಮುಂತಾದುವನ್ನೂ ಮಾಡುವಂತಿಲ್ಲ, ಬ್ರಾಹ್ಮಣ ಜಾತಿಯವನೊಬ್ಬ ತುಂಬಾ ಕರ್ಮಭ್ರಷ್ಟನಾಗಿ ಪಾಪ ಬಹಳ ತುಂಬಿಸಿಕೊಂಡರೂ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ, ಪತಿತ ಎಂದರೆ ಜಾತಿಯಿಂದ ಹೊರಗೆ ದೂಡಲ್ಪಟ್ಟವ ಆಗಿ ಬಹಳ ಪಾಪಿಷ್ಠನಾಗಿರುತ್ತಾನೆ. ಅವನಿಗೂ ಬಹಳ ತಾಮಸಿಕ ಕಣಗಳ ದೇಹ ವಿಸ್ತಾರ ಇರುವುದರಿಂದ ಅಸ್ಪೃಶ್ಯನು.

ಇನ್ನು ಕಾರ್ಯರೂಪದಲ್ಲಿ ಈ ದೋಷವು ಕೆಲಸ ಮಾಡಿದ ದೃಷ್ಟಾಂತ ಗಳನ್ನು ನೋಡುವ. ಜನರು ಗುಂಪುಕೂಡಿ ತಮ್ಮ ಅಸಮಾಧಾನ ಪ್ರದರ್ಶಿಸಲು ಹೊರಟಾಗ ಗುಂಪಲ್ಲಿನ ಅನೇಕರು ವೈಯಕ್ತಿಕವಾಗಿ ಸ್ವಾಭಾವಿಕವಾಗಿ ಕ್ರೂರ ಕಾರ್ಯಗಳಲ್ಲಿ ಕೊಲೆಗಳಲ್ಲಿ ಸೇರಿಕೊಳ್ಳದಿರುವ ತರದವರಾಗಿದ್ದರೂ ಗುಂಪು ಕೋಪದಲ್ಲಿ ಸಿಕ್ಕಿದಾಗ ಕ್ರೂರಕೊಲೆಗಳಲ್ಲಿ ಅವರೂ ಸೇರಿಕೊಳ್ಳುವುದೇ ರೂಢಿ ಏಕೆ ಎಂದು ಪರಿಶೋಧಿಸಲು ಒಂದು ತಜ್ಞರ ಸಮಿತಿಯು ಡಾ॥ ಎಡ್ವರ್ಡ್ ಹಾಲರ ಅಧ್ಯಕ್ಷತೆಯಲ್ಲಿ ನೇಮಕವಾಯಿತು. ಹೀಗಾಗುವುದು ಪಂಗಡದ ಕೆಲವು ಸ್ವಾಭಾವಿಕ ದುಷ್ಟರು ವಿಪರೀತ ದ್ವೇಷ, ಕ್ರೋಧ ಕಾರುತ್ತಿರುವಾಗ ಅವರ ನಿಕಟ. ಸಾಮೀಪ್ಯದಿಂದ ಇತರ ಸೌಮ್ಯರ ದೇಹದ ಸೂಕ್ಷ್ಮಕಣಗಳ ವಿಸ್ತಾರಗಳೂ ಘಾಸಿ ಹೊಂದಿ ಅವೂ ಕೆಟ್ಟು ಅವರ ಮನೋಭಾವನೆಯೂ ರೋಷದಿಂದ ತುಂಬುವುದೇ ಕಾರಣ ಎಂದು ಈ ಸಮಿತಿಯು ವರದಿಮಾಡಿತು. ಡಾ॥ ಹಾಲರ ಹೇಳಿಕೆಯಂತೆ ಈ ದೇಹದ ಸೂಕ್ಷ್ಮ ಕಣಗಳ ವಿಸ್ತಾರವು ೧೦ ಅಡಿಗಳವರೆಗೂ ತೆಳುವಾಗುತ್ತ ಚಾಚುತ್ತಿದೆ. ಈ ತರದ ಸಂಪರ್ಕ ದೋಷದ ವಿಚಾರವಾಗಿ ನಮ್ಮ ಶಾಸ್ತ್ರ ಹೇಳುತ್ತದೆ (ನಾರದ ಪಂಚರಾತ್ರ ೨,೨,೭) :

ಅಲಾಪಾದ್ಗಾತ್ರ ಸಂಸ್ಪರ್ಶಾತ್ ಶಯನಾತ್ ಸಹ ಭೋಜನಾತ್ ।
ಸಂಚರಂತಿ ಹಿ ಪಾಪಾನಿ ಪುಣ್ಯಂ ಚೈವ ತಥಾ ವಿಶೇತ್ ॥

ಒಬ್ಬ ಇನ್ನೊಬ್ಬನೊಡನೆ ಮಾತಾಡಿದರೆ, ಮುಟ್ಟಿದರೆ, ಅವನ ಬಳಿ ನಿದ್ರಿಸಿದರೆ, ಅವನೊಡನೆ ಊಟಕ್ಕೆ ಕುಳಿತರೆ, ಅವನ ಪಾಪ ಇವನಿಗೆ ಇವನದ್ದು ಅವನಿಗೆ ಹರಿಯುತ್ತದೆ ; ಅಂತೆಯೇ ಪುಣ್ಯವೂ.

ಸಂಸರ್ಗಜಾ ಗುಣಾದೋಷ್ ಭವಂತ್ಯೇವ ಜೀವಿನಾಮ್ ।

ಸಂಗದಿಂದ ಜೀವಿಗಳು ಒಳ್ಳೆಯ ಅಥವಾ ಕೆಟ್ಟ ಗುಣಗಳನ್ನು ಹೊಂದು ತ್ತಾರೆ. ಇದಕ್ಕೆ ಕಾರಣ ನಮ್ಮ ಸೂಕ್ಷ್ಮ ರೀತಿಯಲ್ಲಿ ನಮ್ಮ ಸುತ್ತಲೂ ಚಾಚಿಕೊಂಡಿರುವುದು. ತೀರಾ ನಮ್ಮ ಮಟ್ಟದವರ ಹೊರತು ಕೆಳತರದ

ಇತರರ ಸಂಪರ್ಕ ಅದಕ್ಕೆ ಬಹಳ ದೋಷಕರವಾಗಬಹುದು. ಆದ್ದರಿಂದ ನಮ್ಮಲ್ಲಿ ಕೈ ಕುಲುಕುವ ಕ್ರಮವಿಲ್ಲ. ನಮಸ್ಕಾರದ ಒಂದು ಅರ್ಥ ತನ್ನ ಗಡಿಯು ಸುತ್ತಲೂ ಮುಂದೆಯೂ ಇದೆ ಎಂದು ಸೂಚಿಸುವುದಾಗಿದೆ. ಆದರೆ ಕೇವಲ ನಮ್ಮವರಾದವರನ್ನು ಮಾತ್ರ ನಾವು ತಬ್ಬಿಕೊಳ್ಳುತ್ತೇವೆ. ಅಪರಿಚಿತರ ನಡುವೆ, ಬಸ್ಸಲ್ಲಿ ಜಾಗ ಇದ್ದರೆ, ನಾಗರಿಕರು ಪ್ರತ್ಯೇಕ ಸ್ವಲ್ಪ ದೂರವಾಗಿ ಕುಳಿತಿರುವುದು ಸ್ವಾಭಾವಿಕ. ಈ ಸೂಕ್ಷ್ಮದೇಹದ ಪರಿಶುದ್ಧತೆಗೆ ಕೇವಲ ಶುದ್ಧನೀರ ಸ್ನಾನ ಸಾಕು. ಮಂತ್ರ ಹೇಳುತ್ತ ನೀರ ಸ್ನಾನ ಮತ್ತೂ ಉತ್ತಮ. ಆದರೆ ಸಾಬೂನು ಬೇಕೆಂದಿಲ್ಲ, ಪ್ರಾಣಿಯ ಚರ್ಬಿ ಸಾಬೂನಂತೂ ಹಾನಿಕರ !

**ದುಷ್ಟರ ಹಣದ ಅಸಾತ್ವಿಕ ಅನ್ನ:** ಭೀಷ್ಮರು ಶರಶಯ್ಯೆಯಲ್ಲಿ ಉತ್ತರಾಯಣದ ಆರಂಭ ಕಾಯುತ್ತ ಮಲಗಿದ್ದಾಗ ಯುಧಿಷ್ಠಿರಾದಿಗಳಿಗೆ ಅತ್ಯಂತ ಉತ್ತಮಧರ್ಮ ಬೋಧಿಸಿದರು. ಆದರೆ ದ್ರೌಪದಿಯ ವಸ್ತ್ರಸಭೆಯಲ್ಲಿ ಸೆಳೆದ ವಿಪರೀತ ಅನ್ಯಾಯ ನಡೆದಾಗ ಮಾತೆತ್ತಿರಲಿಲ್ಲ. ಈ ವ್ಯತ್ಯಾಸ ಏಕೆ ಎಂಬ ಪ್ರಶ್ನೆಗೆ—**"ಆಗ ದುಷ್ಟ ದುರ್ಯೋಧನನ ಅನ್ನದ ರಕ್ತ ನನ್ನಲ್ಲಿ ತುಂಬಿತ್ತು. ಯುದ್ಧದ ಘಾತದಲ್ಲಿ ಅದೆಲ್ಲ ಈಗ ಸೋರಿಹೋಗಿದೆ"** ಎಂದು ವಿವರಣೆ ಇತ್ತರು ಎಂದು ಕತೆಯಿದೆ.

ಶ್ರೀ ರಾಮಕೃಷ್ಣ ಪರಮಹಂಸರು ಅವರನ್ನು ನೋಡಲು ಬಂದ ದುಷ್ಟರು ಅರ್ಪಿಸಿದ ತಿಂಡಿಯನ್ನು ತಮ್ಮ ಸಾಮಾನ್ಯ ಮಟ್ಟದ ಶಿಷ್ಯರಿಗೆ ತಿನ್ನಲು ಬಿಡುತ್ತಿರಲಿಲ್ಲ. ಸ್ವಾಮಿ ವಿವೇಕಾನಂದರು ಮಾತ್ರ ತಿಂದರೆ ಹಾನಿ ಹೊಂದರು ಎನ್ನುತ್ತಿದ್ದರು. ಕಡೇ ಕಾಯಿಲೆಯಲ್ಲಿ ಮಲಗಿದ್ದಾಗ ಅನ್ನದಗಂಜಿ ತಂದಾಗ, ಕುಡಿಯುವ ಮುಂಚೆ ಹಾಸಿಗೆ ಮುಟ್ಟಿಕೊಂಡಿದ್ದ ಲಾಟೂ ಮಹಾರಾಜರನ್ನು ನಿಲ್ಲಲು ಹೇಳುತ್ತ, ತನ್ನದು ಎಷ್ಟೆಂದರೂ ಬ್ರಾಹ್ಮಣಶರೀರ ಮತ್ತು ತಿನ್ನುವುದು ಅನ್ನ, ಎಂಬ ವಿವರಣೆ ಕೊಟ್ಟಿದ್ದರು. ಅವರಲ್ಲಿಗೆ ನಂತರ ಸ್ವಾಮಿ ಶಿವಾನಂದರೆಂದು ಖ್ಯಾತರಾದ ಶಿಷ್ಯರು ಬಂದಾಗ ಒಬ್ಬ ವೈಶ್ಯರ ಮನೆಯಲ್ಲಿ ಉಳಕೊಳ್ಳಲು ವ್ಯವಸ್ಥೆ ಮಾಡಿ ಅಲ್ಲಿಯ ಅನ್ನ ಎಷ್ಟಕ್ಕೂ ತಿನ್ನಬೇಡ ಎಂದು ಎಚ್ಚರ ಕೊಟ್ಟಿದ್ದರು. ನಮ್ಮ ಶಾಸ್ತ್ರದಲ್ಲಿ ಬ್ರಾಹ್ಮಣನು ತ್ಯಜಿಸಬೇಕಾದ ಅನ್ನದ ದೊಡ್ಡ ಪಟ್ಟಿ **'ದಾನ ಮಾಡಬೇಕು'** ಅಧ್ಯಾಯ ೨೮ರಲ್ಲಿ ನೋಡಿಕೊಳ್ಳುವುದುತ್ತಮ. ಕೆಲವು ಮಾದರಿಗಳು— ವಿಪರೀತ ಬಡ್ಡಿ ತಕ್ಕೊಳ್ಳುವವನ, ಕಳ್ಳನ, ಸೂಳೆಯ, ಮಹಾಪಾತಕಿಯ,

ಕಾಲವಿಹಾರಿದರೂ ಉಪನಯನವಾಗದ ಬ್ರಾಹ್ಮಣ ಹುಡುಗನ, ಗರ್ಭಹತ್ಯೆ, ಶಿಶುಹತ್ಯೆ ಮಾಡಿದವ ನೋಡಿದ ಅನ್ನ, ತನ್ನ ಗುರುವಲ್ಲದೆ ಇತರರ ಎಂಜಲಾದ ಅನ್ನ, ವ್ಯಭಿಚಾರಿಣಿಯ ಅನ್ನ, ಸೂತಕದವನ, ವಾರ್ಧಕನ (ಎಂದರೆ ವಿಪರೀತ ಲಾಭಕ್ಕೆ ಸಾಮಾನು ಮಾರುವವನ) ಅನ್ನ, ಗಾಣಿಗನ ಅನ್ನ, ತಂದೆತಾಯಿಯರ ಶ್ರಾದ್ಧ ಮಾಡದವನ ಅನ್ನ, ದುಷ್ಟನ ಅನ್ನ ಮುಂತಾದವು ತ್ಯಜಿಸಬೇಕಾದವು. ಗುರುಚರಿತ್ರೆಯಲ್ಲೂ ನಿಷಿದ್ಧ ಅನ್ನಗಳ ಉತ್ತಮ ಪಟ್ಟಿಯಿದೆ. ಇದನ್ನೂ ನೋಡಿಕೊಳ್ಳುವುದು ಉತ್ತಮ.

**ಶೂದ್ರ ಮತ್ತು ಇತರರ ಅನ್ನ :** ಬ್ರಾಹ್ಮಣರಿಗೆ ಕೆಳಜಾತಿಯವರ ಅನ್ನ ನಿಷಿದ್ಧ, ಶೂದ್ರರ ಅನ್ನ ದ್ವಿಜರಿಗೆಲ್ಲರಿಗೂ ನಿಷಿದ್ಧ. ಶೂದ್ರರ ಅನ್ನ ಬ್ರಾಹ್ಮಣ ತೇಜಸ್ಸನ್ನು ನಾಶಮಾಡುತ್ತದೆ. ಹೊಟ್ಟೆಯಲ್ಲಿದ್ದಾಗ ಸತ್ತರೆ ಶೂದ್ರ ಜನ್ಮ ಬರುತ್ತದೆ, ಎನ್ನುತ್ತದೆ ಶಾಸ್ತ್ರ. ಇದಲ್ಲದೆ ದುಷ್ಟರ, ಅಲ್ಪರ, ಕೆಟ್ಟರೀತಿಯಲ್ಲಿ ಹಣ ಸಂಪಾದಿಸಿದವರ ಹಣ ಅನ್ನವೂ ಹಾನಿಕರ. ಇದು ಹೇಳಿದ್ದು ದುಷ್ಟರ ಮೇಲಿನ ದ್ವೇಷದಿಂದಲ್ಲ, ಧರ್ಮದ ಅಭ್ಯಾಸಕ್ಕೆ ಹಾನಿ ತರುತ್ತದೆ ಎಂಬುದರಿಂದ ಮಾತ್ರ. ಪತ್ನಿಯ ಮೇಲೆ, ಮಗಳ ಮೇಲೆ ದ್ವೇಷವೇ ? ಆದರೆ ಅವರು ಋತುಕಾಲದಲ್ಲಿದ್ದಾಗ ಅವರಿಂದ ೮ ಗೇಣು, ಸ್ತ್ರೀಯು ಹೆತ್ತ ಹತ್ತು ದಿನಗಳವರೆಗೆ ಅವಳಿಂದ ೧೨ ಗೇಣು. ನಮ್ಮ ಕುಲದವನೇ ಆದರೂ ಪತಿತನಾದ ಮೇಲೆ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ ಅವನಿಂದ ೪ ಗೇಣು, ಚಂಡಾಲ ವರ್ಗದವರಿಂದ ೧೬ ಗೇಣು ದೂರ ಇರಬೇಕು ಎಂದು ಶಾಸ್ತ್ರ ಹೇಳಿದೆ. ಬೈಬಲ್ಲಿನಲ್ಲಿಯೂ ಮುಟ್ಟಾದವಳಿಂದ ಮುಟ್ಟಲ್ಪಟ್ಟವನು ಆ ದಿನ ಇಡೀ ಅಶುದ್ಧ ಎಂದು ಶಾಸ್ತ್ರ ಹೇಳಿದೆ. ಸೆಕ್ಯುಲರ್ ಸರ್ಕಾರವು ಹೀಗೆಲ್ಲ ಏನು ಇಲ್ಲವೆಂದೊಡನೆ ಧರ್ಮಕ್ಷೇತ್ರದಲ್ಲಿ ದೋಷ ಇಲ್ಲದಾಗುತ್ತದೆಯೇ ? ಆದರೆ ನಾವು ಸ್ಪರ್ಶದೋಷ ಉಂಟಾದಾಗ ನಾವೇ ಸ್ನಾನಮಾಡುವ ತೊಂದರೆ ತಕ್ಕೊಳ್ಳುತ್ತೇವೆ ಮಾತ್ರ. ಆದರೆ ಅಮೇರಿಕದಲ್ಲಿ ಕಳೆದ ಶತಮಾನದಲ್ಲಿ ಬಿಳಿ ಜನರು ಕೋವಿಯ ಬಲದಿಂದ ನೀಗ್ರೋಗಳನ್ನು ಹಿಡಿದು ಗುಲಾಮರಾಗಿ ಮಾಡಿ ಅವರನ್ನು ಪಶುಗಳಂತೆ ಕೊಂಡುಕೊಂಡು ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಬಸ್ಸಿನ ನಿಗ್ಗಲ್ಲಿ ಮುಂತಾಗಿ ಬಿಳಿಜನರ ಹೆಂಗಸಿನ ಮೈ ನೀಗ್ರೋವಿನಿಂದ ಸವರಲ್ಪಟ್ಟರೆ, ಅವರು ಅವನನ್ನು ಕೊಂದೇ ಬಿಡುತ್ತಿದ್ದರು !

ಬ್ರಿಟಿಷರ ಕಾಲದಲ್ಲಿ ದಕ್ಷಿಣ ಹಿಂದೂಸ್ಥಾನದಲ್ಲಿ ಸರ್ಕಾರೀ ಹಾಸ್ಟೆಲ್ಲುಗಳಲ್ಲಿ ಬ್ರಾಹ್ಮಣ ವಿಭಾಗ, ಸಸ್ಯಾಹಾರಿಗಳ ವಿಭಾಗ ಬೇರೆಬೇರೆಯಾಗಿ

ಸರ್ವತ್ರ ಇದ್ದವು. ಪ್ರಯಾಣಿಕರ ಸೌಕರ್ಯಕ್ಕೆ ರೈಲ್ವೇ ಸ್ಟೇಶನ್ನುಗಳಲ್ಲೂ ಬ್ರಾಹ್ಮಣ ಆಹಾರದ ಅನುಕೂಲತೆ ಇತ್ತು.

ನಮ್ಮ ಧರ್ಮವು ತನ್ನ ದಿವ್ಯಜ್ಞಾನದಿಂದ ಸೂಕ್ಷ್ಮವಾದ ಸಾತ್ವಿಕತೆ ಬೀರುವ ತುಳಸಿದರ್ಭೆ, ಗಂಧಲೇಪನ, ರುದ್ರಾಕ್ಷಿ, ದನದಸಗಣಿ, ಗಂಗಾಜಲ, ಶಂಖ, ತುಪ್ಪದ, ಎಳ್ಳೆಣ್ಣೆಯ ದೀಪ, ಮಂತ್ರಶಕ್ತಿ, ಹೋಮ ದ್ರವ್ಯಗಳು ಮುಂತಾದವುಗಳಿಂದ ಸಾತ್ವಿಕ ಭಾವನೆ ಬೆಳೆಸಲು ನಮಗೆ ಪ್ರೇರಿಸಿದೆ. ರಶ್ಯಾದಲ್ಲಿ ನಡೆಸಿದ ಒಂದು ಶೋಧನೆಯಂತೆ ದನದ ಸಗಣಿಗೆ, ತುಪ್ಪದ ಹೋಮಕ್ಕೆ, ವಾತಾವರಣದ ಅಣುಕಿರಣಗಳ ಕೆಡುಕನ್ನು ನಾಶಮಾಡುವ ಶಕ್ತಿಯಿದೆ ಎಂದು ಕಂಡು ಬಂದಿದೆ. ತುಪ್ಪದ ಹೋಮ ಈಗ ಪರದೇಶಗಳಲ್ಲಿ ಕೆಲವು ಕಡೆಗಳಲ್ಲಿ ವಾತಾವರಣದ ಪರಿಶುದ್ಧತೆಗೆ ನಡೆಸಲ್ಪಡುತ್ತಿದೆ. ಗಂಗಾಜಲ ಹಡಗುಗಳಲ್ಲಿ ಬಹಳ ಕಾಲ ಕೆಡದಿರುವುದು. ಅದರ ನೀರಲ್ಲಿ ಕಾಲರಾ ರೋಗ ಹಬ್ಬಲಾರದಿರುವುದು, ಅದರ ಕಾರಣವನ್ನು ಬ್ರಿಟಿಷರು ಪರಿಶೋಧನೆ ನಡೆಸಿ ಅದರಲ್ಲಿ ರೋಗಾಣುಗಳು ಬಹು ಬೇಗ ಸಂಪೂರ್ಣ ನಾಶವಾಗುವುದನ್ನು ಕಂಡು ಆಶ್ಚರ್ಯಪಟ್ಟಿದ್ದರು. ಅದರ ಹೊರತು ನಮ್ಮ ಕೆಲವು ತೀರ್ಥಗಳ ಪಾಪ ಪರಿಹಾರದ ಶಕ್ತಿ, ಸಾತ್ವಿಕತೆ, ಅಂತೆಯೇ ವೇದ ಮಂತ್ರದ, ಸಹಸ್ರ ನಾಮಗಳ, ಪುಣ್ಯತರುವ ಶಕ್ತಿಗಳಿಗೆ ಶೋಧನೆ ನಡೆದದ್ದಿಲ್ಲ. ದಿವ್ಯಜ್ಞಾನದ ಹೇಳಿಕೆ ಮಾತ್ರ ಇದೆ.

**ಮೈತ್ರಿ ಪ್ರದರ್ಶನಕ್ಕೆ ಸಹಪಂಕ್ತಿ ಊಟದ ಅಪಾಯಗಳು :** ಬ್ರಾಹ್ಮಣರಿಗೆ ಇತರರೊಡನೆ ಸಹಪಂಕ್ತಿ ಭೋಜನದ ಅಭ್ಯಾಸ ಬಹಳ ಅಪಾಯಕರ. ಆದರೆ ಈಗ ಅದು ಫ್ಯಾಶನ್ ಆಗಿಬಿಟ್ಟಿದೆ! ತಮ್ಮ ಉದಾರ ಭಾವನೆಯ ಪ್ರದರ್ಶನಕ್ಕೆ ಹರಿಜನರೊಡನೆ ಊಟ ಮಾಡಬೇಕು! ದೇವಸ್ಥಾನಗಳಲ್ಲೂ ಅವರೊಡನೆ ಸಹಭೋಜನ ನಡೆಸಬೇಕು! ಪಾಶ್ಚಾತ್ಯರಲ್ಲಿ ಒಟ್ಟು ಕುಳಿತು ಉಂಡು ಆಮೇಲೆ ಒಬ್ಬರು ಇನ್ನೊಬ್ಬರ ಆರೋಗ್ಯಕ್ಕೆಂದು ಧಾರಾಳವಾಗಿ ಮದ್ಯ ಕುಡಿಯುವುದು ಮೈತ್ರಿ ಪ್ರದರ್ಶನದ ಹೆಗ್ಗುರುತು! ಯುರೋಪಿನ ಹಲವು ದೇಶಗಳ ಜನರೂ ಧಾರಾಳವಾಗಿ ಒಟ್ಟು ಉಂಡು, ಕುಡಿದು, ಆನಂತರ ಗಂಡಸರು ಹೆಂಗಸರು ತೊಟ್ಟಿಕೊಂಡು ಕುಣಿಯುವರೇ. ಆದರೆ ಆ ಮೈತ್ರಿ ಅವರಲ್ಲಿ ಭೂಲೋಕದಲ್ಲಿಯೇ ಅತಿಹೆಚ್ಚು ಪರಸ್ಪರ ಯುದ್ಧಗಳು ಆಗಲಿಕ್ಕೆ ತಡೆಹಾಕದಾಯಿತು! ಒಟ್ಟು ಉಣ್ಣುವ ಅರಬ್ ಜನರೊಳಗೆ ಮೈತ್ರಿ ಬಹಳವಿಲ್ಲ! ಮತ್ತು ಅದು ಅವರ ಹೆಂಗಸರಿಗೆ ಸರಿಸಮಾನತೆ

ತಂದದ್ದಿಲ್ಲ! ನಮ್ಮ ಧರ್ಮದ ನಿಲುವೇ ಬೇರೆ. ಜೀವಾತ್ಮನಿಗೆ ಧಾರಾಳ ಪುನರ್ಜನ್ಮಗಳನ್ನು, ತನ್ಮೂಲಕ ಧಾರ್ಮಿಕ ಮಟ್ಟಗಳನ್ನು, ಒಪ್ಪುವ ನಮ್ಮ ಧರ್ಮ ಜನರನ್ನು ಮುಖ್ಯವಾಗಿ ತಾಮಸಿಕ, ರಾಜಸಿಕ ಮತ್ತು ಸಾತ್ವಿಕವರ್ಗದವ ರೆಂದು ವಿಭಾಗ ಮಾಡಿದೆ (ಭಗವದ್ಗೀತೆ ಅ. ೧೭). ಅವರಿಗೆ ತಕ್ಕಂತೆ ಬೇರೆ ಬೇರೆ ತಾಮಸಿಕ, ರಾಜಸಿಕ ಮತ್ತು ಸಾತ್ವಿಕ ಆಹಾರಗಳನ್ನು ಮಾತ್ರ ವಿಧಿಸಿದೆ. ಅದು ಮಾತ್ರ ಅವರವರ ಮಟ್ಟದ ಧಾರ್ಮಿಕ ಸಾಧನೆಗಳಿಗೆ ಸಹಾಯಕ. ಸಾತ್ವಿಕತೆ ಬೆಳೆಸಬೇಕಾದ ಬೆಳೆಸಲಾಪ, ಬ್ರಾಹ್ಮಣ ಯುವಕ ಮಿತ್ರರ ಒತ್ತಾಯ ಕ್ಕೆಂದು ಅವರೊಡನೆ ಕುಳಿತು ತಾಮಸಿಕ ಮಾಂಸ ತಿಂದರೆ ಮದ್ಯ ಕುಡಿದರೆ ತನ್ನ ಸಾಧನೆ, ಸದಾಚಾರ ಪಾಲಿಸಲಾರ. ಕೋಳಿಮೊಟ್ಟೆ ತುಂಬಾ ಕಾಮುಕತೆ ಬೆಳೆಸುತ್ತದೆ. ಬ್ರಾಹ್ಮಣ ಪ್ರಾಣಿಹಿಂಸೆಯ ಪಾಪವನ್ನು ಮಾಂಸತಿಂದೂ ತಂದು ಕೊಳ್ಳುವುದಕ್ಕಿಂತ, ಅತಿ ಸಂಭದಲ್ಲಿ ಅದರ ತ್ಯಾಜ್ಯ ಮಾಡುವುದರ ಮೂಲಕ ಯಾಗ ಮಾಡಿದಷ್ಟು ಪುಣ್ಯ ಪಡೆದಾನು (ಮನು ೫,೫೩). ಅಂಥವ ಈ ಅನಾವಶ್ಯಕವಾದ ಘೋರವಾದ ಪಾಪಕ್ಕೆ ಬಲಿ ಬೀಳುವುದೆ ? ಅವನ ಪಾಲಿಗೆ ಮದ್ಯದಸೇವನೆ ಭಯಂಕರ ಪಾಪಕಾರ್ಯ. ಅದರ ಅಭ್ಯಾಸ ಮಾಡಿ ಕುಡುಕ ನಾಗಿ ಧಾರ್ಮಿಕ ಸಾಧನೆ ಎಲ್ಲ ಬಿಟ್ಟು, ಹೆಂಡತಿ ಮಕ್ಕಳಿಗೆ ಅಸಹ್ಯ ಬರುವಂತೆ, ಅನ್ಯಾಯವಾಗುವಂತೆ, ಐಶ್ವರ್ಯವ್ಯರ್ಥವಾಗುವಂತೆ, ಜನ್ಮ ಕೆಡಿಸಿಕೊಳ್ಳುವುದೇ? ಬಹಳ ವರ್ಷಗಳ ಶಿಸ್ತು ಬೆಳೆಸಿದವರು, ವಯಸ್ಸಾದವರು, ಅನಿವಾರ್ಯವಾಗಿ ಇತರರೊಡನೆ ಕುಳಿತು ಸ್ವಲ್ಪ ಉಂಡರೂ, ಅಲ್ಲಿನ ತಾಮಸಿಕ ಆಹಾರಕ್ಕೆ ಬಲಿಬೀಳದೆ ತಪ್ಪಿಸಿಕೊಳ್ಳುತ್ತಾರೆ, ಆದರೆ ಬೇಕಾದ ದೀರ್ಘಕಾಲದ ಶಿಸ್ತು, ಸ್ವಧರ್ಮದ ವಿಶೇಷ ಹಿರಿಮೆಯ ಜ್ಞಾನ ಇನ್ನೂ ಬೆಳೆಸಿರದ ಯುವಕರು ಈ ಕಾಲದ ಸಾರ್ವಜನಿಕ ಮೈತ್ರಿಕೂಟಕ್ಕೆ ಸಿಕ್ಕಿದವರು, ಅಲ್ಲಿ ಸಂಭದಲ್ಲಿ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಮಾಂಸ ತಿನ್ನಲು ಕುಡಿಯಲು ಅಭ್ಯಸಿಸಿ ಮತ್ತೆ ಬಿಡಲಾರದೆ ಜೀವನ ಇಡೀ ವ್ಯರ್ಥಮಾಡಿಕೊಳ್ಳುವುದೇ ಹೆಚ್ಚು! ನಮ್ಮ ಧರ್ಮದ ಹೇಳಿಕೆ ಯಂತೆ ಪಾಪಿಷ್ಠರಲ್ಲಿ ಪಾತಕಿ, ಉಪಪಾತಕಿ, ಮಹಾಪಾತಕಿಗಳೆಂಬ ಮೂರು ಹೆಚ್ಚು ಹೆಚ್ಚು ಹಾಳು ವರ್ಗಗಳುಂಟು. ಮಹಾಪಾತಕಿಯ ಪಾಪಗಳು ಏಳು ಜನ್ಮಗಳವರೆಗೂ ಬಾಧಿಸುತ್ತವೆ. ಮಹಾಪಾತಕಿಯೊಡನೆ ಒಂದು ವರ್ಷ ಸಂಪರ್ಕದಿಂದ ಇದ್ದರೆ ಅವನೂ ಆ ಮಟ್ಟಕ್ಕೆ ಇಳಿಯುತ್ತಾನೆ!

**ಎಂಜಲು:** ಒಬ್ಬನನ್ನು ಮುಟ್ಟಿಕೊಂಡು ಕುಳಿತದ್ದಕ್ಕಿಂತ ಅವನ ಎಂಜಲು ನಮ್ಮದೇಹ ಸೇರುವುದು ವಿಪರೀತ ದೋಷಕರ. ಇತ್ತೀಚಿನವರೆಗೂ ನಮ್ಮಲ್ಲಿ

ಪ್ರಚಾರದಲ್ಲಿದ್ದ ಸದಾಚಾರ ಕ್ರಮಗಳಿಂದ ಹೇಳುವುದಾದರೆ ಮಲಮೂತ್ರಗಳ ಸ್ಪರ್ಶತೆಯಿಂದಾದ ಹಾನಿಗಿಂತ ಎಂಜಲ ಸ್ಪರ್ಶದಿಂದಾದ ಹಾನಿ ಬಹಳ ಕಡಿಮೆ ಯಲ್ಲ. ಆದ್ದರಿಂದ ಸರಿಸಮಾನತೆಯುವರಾದ ಬಂಧುಗಳೊಳಗೆ ಕೂಡ ಎಂಜಲಾದ ಆಹಾರದ ನಿಷೇಧವಿದೆ. ಅಣ್ಣನು ತಮ್ಮನ ಎಂಜಲನ್ನು ತಿನ್ನುವು ದಿಲ್ಲ. ಅಂತೆಯೇ ತೊಳೆದ ಬಟ್ಟಲಾದರೂ, ಅದರಲ್ಲಿ ದೇವರಿಗೆ ನೈವೇದ್ಯದ ಅರ್ಪಣೆ ಮಾಡುವುದು ತಪ್ಪು. ಒಬ್ಬನ ಊಟದ ಎಲೆಗೆ ಮತ್ತೊಬ್ಬನ ಎಲೆಯ ನೀರು ಬಂದು ತಾಗಿದರೂ, ಎಂಜಲ ಅನ್ನ ಸ್ವಲ್ಪ ಬಿದ್ದರೂ, ಅದನ್ನು ಬಿಟ್ಟು ಏಳುವುದೇ ಸರ್ವತ್ರ ಕ್ರಮವಾಗಿತ್ತು. ಪತ್ನಿಗೆ ಮಾತ್ರ ಪತಿಯ ಎಂಜಲ ಶೇಷದ ಅನ್ನ ಉತ್ತಮ.

ಎಂಜಲ ಹಾನಿ ಅತ್ಯಂತ ವಿಶೇಷತರದ್ದಾದರೂ, ಮಲಮೂತ್ರಗಳ ಸ್ಪರ್ಶದ ಹಾನಿಗಿಂತ ಬಹಳ ಕಡಿಮೆಯಲ್ಲದ್ದಾದರೂ, ಪ್ರತ್ಯಕ್ಷವಾಗಿ ತೋರುವ ಮಲದ ಅಸಹ್ಯತೆ ಇಲ್ಲದ್ದರಿಂದ, ಈ ಕಾಲದಲ್ಲಿ ಬಿಸಿ ಕಾಫಿ ಕಚ್ಚಿ ಕುಡಿಯುವ ಕ್ರಮದ ಪ್ರಚಾರದಿಂದ, ಹೋಟೆಲುಗಳ ಅನ್ನ ಮಾರುವ ಕ್ರಮ ಪ್ರಚಾರಕ್ಕೆ ಬಂದ ಅನಂತರ ಎಂಜಲ ಭಾವನೆಯೇ ನಾಶವಾಗುತ್ತಿದೆ. ಅದರೊಡನೆ ಜಾತಿ ಕ್ರಮ ತಪ್ಪು, ಎಲ್ಲರೂ ಸರಿಸಮಾನರು ಎಂಬ ಸರ್ಕಾರದ ಅಧರ್ಮದ ಪ್ರಚಾರದೊಡನೆ, ನಮ್ಮವರ ಧಾರ್ಮಿಕ ಅವನತಿ ಅತಿ ಧಾರಾಳವಾಗಿ ಹೆಚ್ಚಿದ್ದು ಕಾಣಬಹುದು. ಹೋಟೆಲುಗಳಲ್ಲಿ ನೂರು ಎಂಜಲು ಲೋಟ ಗಳನ್ನು ಒಂದು ಬಾಲ್ದಿ ನೀರಲ್ಲಿ ಅದ್ದಿ "ಶುದ್ಧ" ಮಾಡುವುದೇ ಕ್ರಮ. ಮೇಜಿನ ಮೇಲೆ ಊಟವಾದ ಅನಂತರ ಹಿಂದೆ ನೂರು ತರತರದವರ ಎಂಜಲನ್ನು ಒರೆಸಿದ ವಸ್ತ್ರದಿಂದಲೇ ಒರಸಿ "ಶುದ್ಧ" ಮಾಡುವುದೇ ಕ್ರಮ. ಅಲ್ಲಿಂದ ಈ ಅಸಹ್ಯ ಕ್ರಮ ಕಲ್ಯಾಣಮಂಟಪಗಳಿಗೂ ಹಬ್ಬಿತು. ಅಲ್ಲಿ ಊಟದ ನೆಲದಲ್ಲಿ ಹಿಂದೆ ಬೇರೆ ಬೇರೆ ಜಾತಿಯವರ ಊಟಗಳು ನಡೆದಿದ್ದು, ಕೇವಲ ಗರಗಸದ ಪುಡಿ ಚೆಲ್ಲಿ (ನೀರಿನ ಪಸೆ ಹೀರಲಿಕ್ಕೆ) ಗುಡಿಸಿ ಶುದ್ಧ ಮಾಡುವುದು ಮಾತ್ರ ನಡೆಯುವುದುಂಟು, ಅಲ್ಲಿ ನಮ್ಮ ಪುರೋಹಿತರು ಕುಳಿತು ವೇದಮಂತ್ರ ಹೇಗೆ ಹೇಳುತ್ತಾರೆಯೋ, ಅನಂತರ ಹೋಮ ಮಾಡು ತ್ತಾರೆಯೋ, ಅವರೂ ಅಲ್ಲಿ ಕುಳಿತು ಹೇಗೆ ಊಟ ಮಾಡುತ್ತಾರೆಯೋ, ನನಗೆ ಅರ್ಥವಾಗುವುದಿಲ್ಲ!

**ಕಲ್ಯಾಣ ಮಂಟಪಗಳು:** ವಿವಾಹವು ಒಂದು ಅತಿಮುಖ್ಯ ಸಂಸ್ಕಾರ. ಎಂದರೆ ನಮ್ಮನ್ನು ಪವಿತ್ರಮಾಡಲಿಕ್ಕಿರುವ ಶಾಸ್ತ್ರೋಕ್ತ ಕರ್ಮ.

ಆದರೆ ಅದನ್ನು ಸಾಧ್ಯವಾದಷ್ಟು ಶುದ್ಧತೆ ಕೆಡಿಸುವ ರೀತಿಯಲ್ಲಿ ನಡೆಸುವುದೇ ಈಗ ಅಭ್ಯಾಸವಾಗುತ್ತ ಬಂದಿದೆ. ಹೆಚ್ಚಿನ ಕಲ್ಯಾಣ ಮಂಟಪಗಳು ಮೇಲೆ ಹೇಳಿದಂತೆ ಕೇವಲ ಎಂಜಲಮಯ! ಬ್ರಾಹ್ಮಣರಾದರೂ ಗೋಮಯ ಉಪಯೋಗಿಸಿ ಶುದ್ಧಮಾಡಿಯೇ ಉಪಯೋಗಿಸುವುದು ಅಗತ್ಯ.

**ಸಂಪರ್ಕ ದೋಷಕ್ಕೆ ಪರಿಹಾರಗಳು :** ಸಾಮಾನ್ಯವಾಗಿ ಮನುಷ್ಯ ಒಕ್ಕುಂಟಿಯಾಗಿ ಬಾಳಲಾರ. ಅವ ಜನರ ಸಹಾಯ, ಅವರ ಸ್ನೇಹ, ವಿವಾಹ ಸಂಪರ್ಕ ಬೇಕಾದವ. ಸಂಪರ್ಕ ದೋಷದ ಹಾನಿ ಆದಷ್ಟು ಕಡಿಮೆಮಾಡಲಿಕ್ಕೆ ಸಾಧಾರಣ ಒಂದೇ ತರದ ಆಚಾರವಿರುವ ಸರಿಸಮಾನ ಮಟ್ಟದ ಧರ್ಮಾಚಾರ ವಿರುವವರು ತಮ್ಮೊಳಗೆಮಾತ್ರವೇ ಆದಷ್ಟು ತಮ್ಮ ಸಂಪರ್ಕಬೆಳೆಸುವುದಕ್ಕಾಗಿ ಜಾತಿಕ್ರಮ ನಿರ್ಮಿತವಾಯಿತು. ಜಾತಿಗಳೂ ಬಹಳದೊಡ್ಡವಿದ್ದರೆ ಬೇಧಗಳು ಹೆಚ್ಚಾಗಬಹುದೆಂದು ಅವಲ್ಲಿ ಒಳವಿಭಾಗ ಪ್ರೇರಿಸಿತು. ಹೀಗೆ ಜಾತಿಗಳು ತೀರಾ ಕಾರಣಯುಕ್ತವಾದ ರಚನೆ ; ವ್ಯರ್ಥ ಹಾನಿಯುವಲ್ಲ. ಈ ಕಾಲದ ನಮ್ಮಲ್ಲಿ ಧಾರ್ಮಿಕ ಮಟ್ಟದವರಲ್ಲದವರಿಗೆ ತಾಗಿಕೊಂಡೇ ಕುಳಿತುಕೊಂಡು ಗಂಟೆಗಟ್ಟಲೆ ಪ್ರಯಾಣ ಮಾಡುವ ಸಂಭವಗಳು ಬರುವುದುಂಟು. ಆಗ ಅವರಿಂದ ನಮಗೆ ಸಂಪರ್ಕದ ಹಾನಿ ಬರುವುದನ್ನು ಆದಷ್ಟು ಕಡಿಮೆ ಮಾಡಲಿಕ್ಕೆ ಅವರೊಡನೆ ಲೌಕಿಕ ಮಾತುಕತೆ, ಚರ್ಚೆ ತೀರಾ ಕಡಿಮೆ ಮಾಡಬೇಕು. ಮನಸ್ಸನ್ನು ದೇವರ ನಾಮ ಜಪದಿಂದ ತುಂಬಿಸಿಕೊಳ್ಳಬೇಕು. ಆಗ ಸಾತ್ವಿಕತೆಯಿಂದ ತುಂಬಿದ ನಮ್ಮಲ್ಲಿ ಪಾಪವು ನುಸುಳಲಾರದು. ಆಗ ದೇವರ ಸಹಸ್ರ ನಾಮ ಮುಂತಾದವನ್ನು ಹೇಳುತ್ತಿರಬೇಕು ಎಂದೂ ಶಾಸ್ತ್ರ ಹೇಳಿದೆ. ಅಶುದ್ಧ ವಾದಾಗ ಆಚಮನ, ಅಪವಿತ್ರ ಪವಿತ್ರೋವಾ ಮಂತ್ರ, ಸೂರ್ಯನನ್ನು ನೋಡುವುದು, ಬಲಕಿವಿ ಮುಟ್ಟುವುದು, ಶುದ್ಧತೆಗೆ ಬೇರೆ ಬೇರೆ ಕ್ರಮ ಗಳು, ಸ್ನಾನ ಅತ್ಯುತ್ತಮ, ಮನೆಯಲ್ಲಿ ಹೊರಗಿನ ಬಟ್ಟೆ ತೆಗೆದಿಟ್ಟು ಬೇರೆ ಬಟ್ಟೆ ಧರಿಸಬೇಕು. ಮೇಜಿನ ಊಟ ಮನೆಯನ್ನು ಎಂಜಲಮಯ ಮಾಡುತ್ತದೆ.

ಸಾರ್ವಜನಿಕ ಸರ್ಕಾರೀ ಹಾಸ್ಟೆಲ್ಲುಗಳಲ್ಲಿ ಮಕ್ಕಳನ್ನು ಹಾಕುವುದು ಅವನ್ನು ಅಲ್ಲಿನ ಸಾಮಾನ್ಯ ಮಕ್ಕಳ ಮಟ್ಟಕ್ಕೆ ಸೆಳೆಯದಿರದು. ಅಲ್ಲಿನ ಆಹಾರದಲ್ಲಿ ಬೇಕಾದ ಶುಚಿತ್ವವಿಲ್ಲ. ಅಲ್ಲಿ ಸ್ನೇಹಿತರ ಒತ್ತಾಯದಿಂದ ತೀರಾ ಅಶುದ್ಧ ತರದ ಆಹಾರದ ಸೇವನೆ, ಮದ್ಯದ ಸೇವನೆ, ಇತರ ದುಷ್ಟ ಮಾದಕಗಳ ಸೇವನೆಗಳ ಅಭ್ಯಾಸ ಆಗದಿರದು. ಒಂದು ಹಾಸ್ಟೆಲ್ಲಲ್ಲಿ ಅಲ್ಲಿನ

ವಿದ್ಯಾರ್ಥಿ ಸಂಘದ ವಾರ್ಷಿಕ ದಿನದ ಆಚರಣೆಗೆ ರೂ. ೭,೦೦೦ ಮದ್ಯಕ್ಕೆ ಖರ್ಚಾಗಿತ್ತು. ಅಂದು ಮಕ್ಕಳು ಪಶುಗಳಿಗಿಂತ ಅಲ್ಪತೆಯಿಂದ ವರ್ತಿಸುತ್ತಿದ್ದವಂತೆ. ಆ ಹಾಸ್ಟೆಲ್ಲಿಗೆ ಹೊಸಬರು ಬಂದಾಗ ಒಂದು ವಾರದಲ್ಲಿ ಅವರಿಗೆ ಮದ್ಯದ ಸೇವನೆ, ಕಾಮಕೇಳಿಯಿಂದ ತುಂಬಿದ ಸಿನೆಮಾ ಚಿತ್ರದ ದರ್ಶನ, ಆಮೇಲೆ ಬಲಾತ್ಕಾರದಿಂದ ಹುಡುಗನಿಂದ ಅದಕ್ಕಾಗಿ ಕರೆಸಿದ್ದ ವೇಶ್ಯೆಯ ಸಂಗ, ಅಲ್ಲಿನ ಕಾರ್ಯಕ್ರಮವಂತೆ! ಹಳೆ ಪಂಗಡದವರ ದುಷ್ಟಚಾಳಿಗಳೆಲ್ಲ ಪ್ರವೇಶಕರಿಗೆ ಅಭ್ಯಾಸ ಮಾಡಿ ತಮ್ಮ ಮಟ್ಟಕ್ಕೆ ಸೆಳೆಯುತ್ತಾರೆ. ಇದು ವಿದ್ಯೆಯಲ್ಲ; ನಮ್ಮವರಾಗಿರಬೇಕಾದ ಮಕ್ಕಳನ್ನು ನಾವು ತಿಳಿದೇ ಹಣ ಖರ್ಚುಮಾಡಿ, ಸಂಪೂರ್ಣ ಬೇರೆಯವರನ್ನಾಗಿ ಮಾಡುವ ರಾತ್ರಿ ಕಂಡ ಬಾವಿಗೆ ಹಗಲು ಬೀಳುವ ಕ್ರಮ ಮಾತ್ರ, ಮಕ್ಕಳು ನಾಲಿಗೆ ರುಚಿ ಬೆಳೆಸದಂತೆ ಮತ್ತು ಅಗತ್ಯವಿದ್ದಾಗ ಸ್ವಪಾಕ ಮಾಡಿ ಬಾಳುವ ಶಕ್ತಿಯಿದ್ದವರನ್ನಾಗಿ ಮಾಡಬೇಕು. ಅಂತೂ ಇಂಥ ಹಾಸ್ಟೆಲ್ಲುಗಳ ಮೂಲಕ ಮಾತ್ರ ಪಡೆಯಲಾಪ ವಿದ್ಯೆ ಲಭಿಸದಿದ್ದರೂ ಅಡ್ಡಿಯಿಲ್ಲ. ಹೆಚ್ಚು ಸಂಪಾದನೆ ತರುವ ಈ ತರದ ವಿದ್ಯೆ ಕಲಿತವನಿಗೆ ಮುಂದೆ ಹಣ ಎಷ್ಟಿದ್ದರೂ ದುರಭ್ಯಾಸಗಳಿಗೇ ಸಾಲದು. ಬ್ರಾಹ್ಮಣ್ಯವಂತೂ ಅಲ್ಲಿ ಸಂಪೂರ್ಣ ನಾಶವಾದೀತು. ಅದು ಬೇಡವೇ ಬೇಡ!

ಈಗಲೀಗ ಸರ್ಕಾರದ ಆಡಳಿತದ ದೇವಸ್ಥಾನಗಳಲ್ಲಿ ಸೇವೆ ಮಾಡಿಸಿದವರಿಗೆ ಊಟದ ಚೀಟಿ ಕೊಡುವುದುಂಟು. ಬಂದವರಲ್ಲಿ ಬ್ರಾಹ್ಮಣರು ಊಟಕ್ಕೆ ಕುಳಿತಾಗ ಬಡಿಸಲು ಬರುವ ಹುಡುಗರು ಶೂದ್ರರೋ ಮತ್ತೂ ಕೆಳಗಿನವರೋ ಎಂದು ಸಂಶಯ ಬಾರದಿರದು. ಕೆಲವರು ಎದ್ದು ಬ್ರಾಹ್ಮಣ ಊಟ ಹುಡುಕಿ ಹೋಗುತ್ತಾರೆ. ಮತ್ತೆ ತಿಳಿಯುತ್ತದೆ, ಆ ಬಡಿಸುವವರು ಜಾತಿಯಲ್ಲಿ ಅಲ್ಪರು ಮಾತ್ರವಲ್ಲ, ಅಲ್ಲಿ ಉಂಡು ಇಷ್ಟಬಂದಂತೆ ಬಾಳುವ ತೀರಾ ಅಲ್ಪ ತರದವರೂ ಎಂದು. ಎಂದರೆ ಅವರ ಸಂಪರ್ಕದೋಷ ದ್ವಿಗುಣತರದ್ದು. ಇದಕ್ಕೆ ಬ್ರಾಹ್ಮಣ ಸಂಘಗಳು ಪರಿಹಾರ ಹುಡುಕಬೇಕು.

## ೯. ಬ್ರಾಹ್ಮಣರಿಗೆ ಕೆಲವು ಧರ್ಮಗಳು

### ಎಲ್ಲ ಮಾನವರಿಗೂ ಧರ್ಮಗಳು (ಯಾಜ್ಞವಲ್ಕ್ಯ ೧,೨)

ಅಹಿಂಸಾ ಸತ್ಯ ಮಸ್ತೇಯಂ ಶೌಚಮಿಂದ್ರಿಯ ನಿಗ್ರಹಃ ।
ದಾನಂ ದಯಾ ದಮಃ ಶಾಂತಿಃ ಸರ್ವೇಷಾಃ ಧರ್ಮಸಾಧನಂ ॥

ಅಸ್ತೇಯ–ಪರರ ವಸ್ತು ಅಪಹರಿಸದಿರುವುದು. ಶೌಚ–ದೇಹದ ಮತ್ತು ಮನಸ್ಸಿನ ಶುದ್ಧಿ. ಇಂದ್ರಿಯ ನಿಗ್ರಹ–ಕಿವಿ ಕಣ್ಣುನಾಲಿಗೆ ಮೂಗು ಕಾಮೇಂದ್ರಿಯಂದ ಮನಸ್ಸಿನಶುದ್ಧಿ. ಅಡ್ಡ ಚಪಲತೆಗಳಿಗೆ ಎಡೆಕೊಡದಿರುವುದು. ಧಮಃ–ಮನಸ್ಸನ್ನು ಕೆಟ್ಟದ್ದಕ್ಕೆ, ಸಿಟ್ಟಿಗೆ ಎಳೆಯಲು ಆಸ್ಪದ ಉಂಟಾದಾಗ ಬಿಗಿ ಹಿಡಿಯುವುದು. ಇವನ್ನು ಮೇಲು ಮೇಲಿನ ವರ್ಣದವರು ಹೆಚ್ಚು ಹೆಚ್ಚು ಬಿಗಿಯಾಗಿ ಆಚರಿಸಬೇಕು.

ಬ್ರಾಹ್ಮಣರಿಗೆ ಸಾಮಾನ್ಯ ಧರ್ಮ :

> ಸ್ನಾನಂ ಸಂಧ್ಯಾ ಜಪಃ ಪೂಜಾ ಸ್ವಾಧ್ಯಾಯೋ ಅತಿಥಿಸತ್ಕೃತಿಃ ।
> ಪರೋಪಕರಣಂ ಧರ್ಮ ಸರ್ವೇಷಾಃ ಸರ್ವಸಿದ್ಧಿದಾ ॥

ಸ್ವಾಧ್ಯಾಯ–ವೇದಗಳ ಅಧ್ಯಯನ ಮಾಡುವುದು, ಇತರರಿಗೆ ಕಲಿಸುವುದು. ಅತಿಥಿ ಸತ್ಕೃತಿಃ–ಮನೆಗೆ ಬಂದ ಅತಿಥಿಗಳ ಸತ್ಕಾರ. ಈ ಸಾಧನೆಗಳಿಂದ ಎಲ್ಲ ಸಿದ್ಧಿಗಳೂ ಲಭಿಸುವವು. ಮತ್ತೂ ವಿಸ್ತಾರದ ಧರ್ಮಲಕ್ಷಣಗಳು (ಮನು ೪–೬೨).

## ಧರ್ಮದ ಹತ್ತು ಲಕ್ಷಣಗಳು (ಮನು ೬.೯೨)

> ಧೃತಿಃ ಕ್ಷಮಾದಮೋಽಸ್ತೇಯಂ ಶೌಚಮಿಂದ್ರಿಯ ನಿಗ್ರಹಃ ।
> ಧೀರ್ವಿದ್ಯಾ ಸತ್ಯ ಮಕ್ರೋಧೋ ದಶಕಂ ಧರ್ಮಲಕ್ಷಣಂ ॥

ಧೃತಿ–ಬಯಸಿದ್ದು ಸಿಕ್ಕದಿದ್ದಾಗ, ಕಷ್ಟ ಒದಗಿದಾಗ, ಚಿತ್ತಸ್ಥೈರ್ಯ ಬಿಡಕೂಡದು. ಕ್ಷಮೆ–ಅಪಕಾರಿಗಳಿಗೆ ಪ್ರತಿ ಅಪಕಾರ ಮಾಡದಿರುವುದು, ಧೀ–ಶಾಸ್ತ್ರದಿಂದ, ಅನುಭವದಿಂದ, ಯಾವುದು ಹಿತವಾದುದು, ಯಾವುದು ಅಹಿತವಾದುದು ಎಂದು ಅರಿಯುವ ಬುದ್ಧಿ. ವಿದ್ಯೆ–ಆತ್ಮಜ್ಞಾನ ಅಕ್ರೋಧ–ಕ್ರೋಧ ಬರುವ ಪ್ರಸಂಗವಿದ್ದರೂ ಕೋಪಿಸದಿರುವುದು.

**ವೇದೋಽಖಿಲೋ ಧರ್ಮಮೂಲಂ** ॥ ವೇದ ಮತ್ತು ಸ್ಮೃತಿಗಳು : ಕೆಲವು ಅಪೂರ್ಣ ಧರ್ಮದವರು ಕೇವಲ ಈಗಿನ ಒಂದು ಸೃಷ್ಟಿಯನ್ನು ಮಾತ್ರ ಹೇಳುತ್ತಾರೆ. ಆದರೆ ವಿಜ್ಞಾನಿಯು ಈಗಿನ ಭಾವನೆ ವಿಶ್ವವು ಉಂಟಾಗುತ್ತದೆ, ಕ್ಷಯಿಸುತ್ತದೆ, ಪುನಃ ವಿಸ್ತಾರವಾಗುತ್ತದೆ ; ಹೀಗೆ ಪುನಃ ಪುನಃ ಆಗುತ್ತದೆ ಎಂದು. ನಮ್ಮ ಧರ್ಮದ ಹೇಳಿಕೆಯಂತೆ ಸೃಷ್ಟಿ ಸ್ಥಿತಿಲಯಗಳು ಪ್ರತಿ ಕಲ್ಪದಲ್ಲಿ ಆಗುತ್ತಲೇ ಇದ್ದವು ; ಮುಂದೆಯೂ ಆಗುತ್ತವೆ. ಕಲ್ಪದ ಆದಿಯಲ್ಲಿ ಈಶ್ವರನು ಬ್ರಹ್ಮನನ್ನು ಸೃಷ್ಟಿಸಿ, ಪ್ರಳಯಕಾಲದಲ್ಲಿ ತನ್ನಲ್ಲಿ ಅಡಗಿದ್ದ

ವೇದವನ್ನು ಬ್ರಹ್ಮನಿಗೆ ಸೃಷ್ಟಿಯ ಕಾರ್ಯ ನಡೆಸಲಿಕ್ಕೆ ಕೊಡುತ್ತಾನೆ. ಪ್ರವಚನ ಮೂಲಕವಲ್ಲ. ಏಕೆಂದರೆ ಪರಬ್ರಹ್ಮನು ನಿರಾಕಾರನು. ವೇದವು ಬ್ರಹ್ಮನಲ್ಲಿ ತಾನಾಗಿ ಶ್ರುತವಾಗುತ್ತದೆ. ಆದ್ದರಿಂದ ಶ್ರುತಿ ಎಂದು ಹೆಸರು. ಪುನಃ ಕಲ್ಪಾಂತ್ಯದ ಪ್ರಳಯವಾದಾಗ ವೇದವು ಈಶ್ವರನನ್ನೇ ಸೇರಿ ಅವನಲ್ಲಿ ರುತ್ತದೆ. ಎಂದರೆ ವೇದವು ಮೂಲ ಶಾಶ್ವತ ಜ್ಞಾನ ಯಾರೂ ರಚಿಸಿದ್ದಲ್ಲ. ಅದು ಅಪೌರುಷೇಯ. ಆದಿ ಇಲ್ಲದ್ದರಿಂದ ಬೇರೆ ಆಧಾರ ವಿಲ್ಲದ್ದು (ಅನಂತರ ಒಂದೊಂದು ಭಾಗವೂ ಪರಿಶುದ್ಧ ಋಷಿಗಳಿಗೆ ಸ್ಫುರಿತ ವಾದವು, ಎಂದರೆ ಆ ಋಷಿಗಳೂ ಅವನ್ನು ರಚಿಸಿದ್ದಲ್ಲ. ಪ್ರತಿ ಕಲ್ಪದಲ್ಲೂ ೧೪ ಮನ್ವಂತರಗಳೆಂಬ ವಿಭಾಗಗಳಿವೆ (ನಮ್ಮದು ಏಳನೆಯವನಾದ ವೈವಸ್ವತ ಮನುವಿನ ಕಾಲ ಇದು). ಆ ಮನುಗಳೂ ವೇದವನ್ನು ಹೊಂದಿದ್ದರು. ಧರ್ಮ ವಿಸ್ತರಿಸಿ ತಿಳಿಸುವ ಸ್ಮೃತಿಯೂ ಅವರ ಸ್ಮೃತಿಗೆ ಬರುವುದು. ಅದನ್ನೇ ಪ್ರತಿ ಮನುವು ತನ್ನ ಧರ್ಮಶಾಸ್ತ್ರದಲ್ಲಿ ಹೇಳುವುದು. ಸ್ಮೃತಿಕಾರರು ವೇದಜ್ಞರು. ಅವರ ವಚನವೂ ಧರ್ಮವೇ. ಹೀಗೆ ಶ್ರುತಿ ಸ್ಮೃತಿಗಳು ನಮ್ಮ ಧರ್ಮಕ್ಕೆ ಮೂಲ ಆಧಾರ. ಯಾರೂ ಶ್ರುತಿ ಸ್ಮೃತಿಗಳೆ ರಡನ್ನೂ ಚರ್ಚಿಸತಕ್ಕದ್ದಲ್ಲ ; ಒಪ್ಪಬೇಕಾದುದು. ಅವನ್ನು ನಿಂದಿಸುವವನು ನಾಸ್ತಿಕನು; ಸಜ್ಜನರಿಂದ ಬಹಿಷ್ಕರಿಸಲ್ಪಡಬೇಕಾದವನು (ಮನು ೨,೧೦,೧೧).

> ಶ್ರುತಿಸ್ಮೃತಿಸ್ಸದಾಚಾರ ಸ್ಸ್ವಸ್ಯ ಚ ಪ್ರಿಯಮಾತ್ಮನಃ ।
> ಸಮ್ಯಕ್ಸಂಕಲ್ಪಜಃ ಕಾಮೋಧರ್ಮ ಮೂಲಮಿದಂ ಸ್ಮೃತಂ ॥ (ಯಾ. ೧–೭)

ವೇದವೂ ಸ್ಮೃತಿಯೂ ಶಿಷ್ಟರ ಆಚರಣೆಗಳೂ ತನ್ನ ಅಂತಃಕರಣ ಒಪ್ಪುವುದೂ, ಯುಕ್ತಾಯುಕ್ತ ವಿವೇಕಜನ್ಯವಾದ ಸಂಕಲ್ಪದಿಂದುಂಟಾಗುವ ಕಾಮವೂ ಧರ್ಮಕ್ಕೆ ಪ್ರಮಾಣವು. ವೇದ ಹೇಳಿದ್ದೇ ಅತ್ಯಂತ ಮೇಲ್ಮಟ್ಟದ ಪ್ರಮಾಣ (ಮನು ೨, ೧೩). ಎರಡನೆಯ ಮಟ್ಟದ ಪ್ರಮಾಣ ಸ್ಮೃತಿಗಳು ಹೇಳಿದ್ದು, ಮೂರನೇ ಮಟ್ಟದ್ದು. ಧರ್ಮ ಆಚರಿಸುವವರ ಆಚರಣೆ ಯಾವ ವಿಚಾರದಲ್ಲಾದರೂ ಮೇಲೆ ಹೇಳಿದವುಗಳಲ್ಲಿ ಎರಡು ರೀತಿಗಳಿದ್ದರೆ, ಅಥವಾ ಆಧಾರಸಿಕ್ಕದಿದ್ದರೆ, ನಮ್ಮ ಮನಸ್ಸೊಪ್ಪುವುದೇ ಆಧಾರ (ಶಾಸ್ತ್ರಅರಿಯದವನ ಮನಸ್ಸಲ್ಲ. ಶಾಸ್ತ್ರದಿಂದ ತಿದ್ದಿಕೊಂಡವನ ಮನಸ್ಸು ಮಾತ್ರ). ಸಾಮಾನ್ಯರು ಕಾಮನೆಗಳನ್ನೆಲ್ಲ ಬಿಟ್ಟಿರಲಾರರು, ಬಿಡಬೇಕೆಂದೂ ಇಲ್ಲ. ಆದರೆ ಅದು ಧರ್ಮಕ್ಕೆ ವಿರುದ್ಧ ತರದ್ದಾಗಿರಕೂಡದು. ಶ್ರುತಿ ಸ್ಮೃತಿಗಳು ಹೇಳಿದ ಧಾರ್ಮಿಕ ಜೀವನಕ್ಕೆ ಇತಿಹಾಸ ಪುರಾಣಗಳು ಶ್ರೀರಾಮ, ಸೀತೆ, ಭರತ,

ಯುಧಿಷ್ಠಿರ ಮುಂತಾದವರ ಜೀವನದ ವಿಸ್ತಾರವಾದ ದೃಷ್ಟಾಂತಗಳನ್ನು ಕೊಟ್ಟು, ಧರ್ಮ ಅರಿಯಲು, ನೆನಪಿಟ್ಟುಕೊಳ್ಳಲು, ಸುಲಭವಾಗುತ್ತವೆ. **ಅವು** ಮೂರನೇ ಮಟ್ಟದ ಆಧಾರಗಳು ಮಾತ್ರ. ಮತ್ತು ಅವಲ್ಲಿ ಬಹಳ ತರದ ಪ್ರಕ್ಷಿಪ್ತ ಭಾಗಗಳಿದ್ದು ಎಲ್ಲಾ ಭಾಗಗಳನ್ನೂ ನಂಬುವಂತಿಲ್ಲ.

**ಧರ್ಮಏವ ಹತೋಹಂತಿ ಧರ್ಮೋ ರಕ್ಷತಿ ರಕ್ಷಿತಃ :** (ಮನು ೮.೧೫) ನಾವು ನಮ್ಮ ಧರ್ಮವನ್ನು ಕಲಿಯದೆ ಬಿಟ್ಟರೆ, ಉಲ್ಲಂಘಿಸಿದರೆ, ತ್ಯಜಿಸಿದರೆ ಅದು ನಮ್ಮನ್ನು ದುಃಖಕ್ಕೋ ನಾಶಕ್ಕೋ ನೂಕುತ್ತದೆ. ಆದರೆ ನಮ್ಮ ಧರ್ಮ (ತಿಳಕೊಂಡು) ಪಾಲಿಸಿದರೆ ಅದು ನಮ್ಮನ್ನು ಕಾಪಾಡುತ್ತದೆ, ಮುಂದಿನ ಶ್ರೇಯಸ್ಸಿನ ದಾರಿಗೆ ಅನುಕೂಲ ಮಾಡುತ್ತದೆ, ಹೆಚ್ಚಿನ ಸಾಧನೆ ಸಾಧ್ಯವೂ ಸುಲಭವೂ ಮಾಡುತ್ತದೆ. ಗಾಯತ್ರೀ ಜಪ ಮಾಡಲೇಬೇಕೆಂದಿರು ವಾಗ ಚೆನ್ನಾಗಿಮಾಡುತ್ತ ಸದ್ಬುದ್ಧಿ ಪ್ರೇರಿಸಲ್ಪಡಲಿ ಎಂದು ಬೇಡುತ್ತ ಇದ್ದರೆ ಆ ದೇವಿ ಸದ್ಬುದ್ಧಿ ಕೊಡುತ್ತಾಳೆ; ದಾರಿ ಓಡಿಸುತ್ತಾಳೆ. ದೇವರು ನಮ್ಮ ಹಿತಕ್ಕಾಗಿ ನಾವು ಅವನನ್ನು ಪುನಃ ಸೇರುವವರೆಗೂ ಬೇಕಾಗುವ ಧರ್ಮಶಾಸ್ತ್ರ ಗಳನ್ನುಂಟುಮಾಡಿದ. ಅವನ್ನು ನಾವು ಅನುಸರಿಸದಿದ್ದರೆ ತಂದೆಯ ಮಾತು ಕೇಳದ ಕೆಟ್ಟ ಮಗನನ್ನು ತಿದ್ದಲು ತಂದೆ ಶಿಕ್ಷಿಸಿದಂತೆ ಕಷ್ಟ ಕೊಡುತ್ತಾನೆ. ನಮ್ಮ ಧರ್ಮ ಪಾಲಿಸಿದರೆ ನಮ್ಮನ್ನು ಮೆಚ್ಚಿದ ತಂದೆ ಆಲಂಗಿಸಲು ಬಂದಂತೆ ದೇವರು ಧಾರಾಳ ಸಹಾಯ ಕೊಡುತ್ತಾನೆ.

**ನಾಸ್ತಿಕ್ಯ :** ನಾಸ್ತಿಕ್ಯ, ದೇವ ನಿಂದನೆ, ವೇದ ನಿಂದನೆ, ಧರ್ಮದ್ವೇಷ, ದಂಭ, ಅಭಿಮಾನ, ಕೋಪ, ಕ್ರೌರ್ಯಗಳನ್ನು ತ್ಯಜಿಸಬೇಕು (ಮನು ೪,೧೬೩).

**ಗುರುಕುಲ ವಾಸ ಮುಗಿಸಿ ಹಿಂದೆ ಹೋಗುವ ಶಿಷ್ಯನಿಗೆ ಉಪ ದೇಶ :** (ತೈ.ಉ. ೧,೧೧,೧) (ಎಂದರೆ ನಮಗೂ ಅನ್ವಯಿಸುವುದು). ಯಾವಾ ಗಲೂ ಸತ್ಯವನ್ನು ಹೇಳು. ಧರ್ಮವನ್ನು ತಪ್ಪದೆ ಆಚರಿಸುತ್ತಿರು. ಗೃಹಸ್ಥಾ ಶ್ರಮದಲ್ಲಿರುವಾಗಲೂ ಧಾರ್ಮಿಕ ಓದನ್ನು ಬಿಡದೆ ನೆರವೇರಿಸುತ್ತಿರು. ಆಚಾರ್ಯನಿಗೆ ಗುರುದಕ್ಷಿಣೆಯನ್ನು ಸಂಪಾದಿಸಿ ತಂದುಕೊಟ್ಟು ವಿವಾಹವಾಗಿ ಪೀಳಿಗೆ ಮುಂದರಿಸಲು ಮಕ್ಕಳನ್ನು ಪಡೆ. ಸತ್ಯ (ಮರೆತುಕೂಡ ಸುಳ್ಳುಬೇಡ, ಧರ್ಮ ಮರೆತು ಕೂಡ ಬಿಡದೆ) ಸ್ವಂತ ಏಳಿಗೆಗೆ ಬೇಕಾದ ಮಂಗಲಕಾರ್ಯ ಮರೆಯದೆ, ನಡೆಸಬೇಕು. ಧರ್ಮ ಕಲಿಯುವುದು, ಕಲಿಸುವುದು ಮರೆಯದೆ ನಡೆಸು. ತಾಯಿ ತಂದೆ, ಆಚಾರ್ಯರನ್ನು ದೇವರಂತೆ ಕಾಣು. ಅತಿಥಿಯನ್ನು

ದೇವರಂತೆ ಮರ್ಯಾದೆಯಿಂದ ಸತ್ಕರಿಸು, ನಿಂದಿತವಲ್ಲದ ಕಾರ್ಯಗಳನ್ನು ಮಾತ್ರ ಮಾಡು, ಉಳಿದವನ್ನಲ್ಲ. ನಮ್ಮ ಒಳ್ಳೆಯ ನಡವಳಿಕೆಗಳನ್ನು ಅನುಸರಿಸು, ಉಳಿದವನ್ನಲ್ಲ. ನಮಗಿಂತ ಉತ್ತಮ ಬ್ರಾಹ್ಮಣರಿಗೆ ಆಸನ ಕೊಟ್ಟು ಆದರಿಸು. ದಾನವನ್ನು ಶ್ರದ್ಧೆಯಿಂದ ಕೊಡಬೇಕು. ಅಶ್ರದ್ಧೆಯಿಂದ, ಅನಾದರದಿಂದ, ತಿರಸ್ಕಾರ ಭಾವದಿಂದ ಅಲ್ಲ. ತನ್ನ ಸಂಪತ್ತಿಗೆ ತಕ್ಕಂತೆ ಕೊಡಬೇಕು (ಲೋಭದಿಂದ ಕಡಿಮೆ ಮಾಡಿ ಅಲ್ಲ). ಇನ್ನೂ ಹೆಚ್ಚಿನದಾಗಿ ದಾನ ಮಾಡಲಿಕ್ಕಾಗಲಿಲ್ಲವಲ್ಲ ಎಂಬ ನಾಚಿಕೆಯಿಂದ ಕೊಡಬೇಕು. ಚೆನ್ನಾಗಿ ದಾನ ಮಾಡದಿದ್ದರೆ ಸದ್ಗತಿಯಾಗದಲ್ಲ ! ಎಂಬ ಭೀತಿಯಿಂದ ಕೊಡಬೇಕು. ದೇಶ ಕಾಲ ಪಾತ್ರಗಳ ಸಂದರ್ಭಕ್ಕೆ ತಕ್ಕುದಾದ ದಾನ ಕೊಡಬೇಕು. ಎಂಬ ಭಾವನೆಯಿಂದ ದಾನ ಮಾಡಬೇಕು. ಮತ್ತು ಧರ್ಮಕಾರ್ಯದ ವಿಚಾರ ಸಂಶಯ ಬಂದರೆ ನಿನಗಿಂತ ಅದರಲ್ಲಿ ಹೆಚ್ಚು ಬಲ್ಲವರು, ವಿಚಾರವಂತರು, ಸ್ವಂತ ನಿಪುಣರು, ಕಾಮ ಬಿಟ್ಟು ಶ್ರೇಯಸ್ಸನ್ನೇ ಬಯಸುವ ಬ್ರಾಹ್ಮಣರ ನಡತೆ ಅನುಸರಿಸು. ಇದು ವೇದದ ಆದೇಶ.

## ಸತ್ತವನ ಜೊತೆಯಲ್ಲಿ ಹೋಗುವುದು ಅವ ಮಾಡಿದ ಧರ್ಮ ಅಧರ್ಮಗಳು ಮಾತ್ರ

ದುಷ್ಟ ಪದ್ಮವರ್ಣನಿಗೆ ವರ್ತಕವೇಷದಲ್ಲಿದ್ದ ಬ್ರಹ್ಮರು ಬೋಧಿಸಿದ್ದು : ಮರಣ ಉಂಟಾದಾಗ ಧನ ಸಂಪತ್ತೆಲ್ಲವೂ ಭೂಮಿಯಲ್ಲೇ, ದನಕರುಗಳು ಕೊಟ್ಟಿಗೆಯಲ್ಲಿ, ಹೆಂಡತಿ ಮನೆ ಬಾಗಿಲಲ್ಲೇ, ಬಂಧು ಬಳಗ ಸ್ಮಶಾನದಲ್ಲೇ, ನಿಲ್ಲುತ್ತಾರೆ. ಅವನ ದೇಹ ಕೂಡ ಬೂದಿಯಾಗಿ ಹಿಂದುಳಿಯುತ್ತದೆ. ಅವನೊಡನೆ ಬರುವುದು ಗಳಿಸಿದ ಸಂಪತ್ತಲ್ಲ ; ಅದರ ವಿನಿಯೋಗ ಮಾಡಿ ಸಂಪಾದಿಸಿದ ಧರ್ಮ ಮಾತ್ರ, ಪದ್ಮವರ್ಣನು ಇದನ್ನು ಚಿಂತಿಸಿ ಜೀವನ ಸಂಪೂರ್ಣ ಬದಲಾಯಿಸಿ ಗೌತಮ ಋಷಿಯಾದನು. ಇದು ಯಾವಾಗಲೂ ನೆನಪಲ್ಲಿರಲಿ. ಆಗ ಧರ್ಮದ ಸಾಧನೆಗೆ ಉತ್ಸಾಹ ಬರುತ್ತದೆ.

**ನಿತ್ಯಂ ಶಾಸ್ತ್ರಾಣ್ಯವೇಕ್ಷೇಸ್ಯಾತ್ :** (ವಿಷ್ಣುಸ್ಮೃತಿ ೭೧,೮) ಧರ್ಮ ಸ್ವರೂಪವನ್ನು ಯಥಾರ್ಥವಾಗಿ ತಿಳಿಯಲಿಕ್ಕೆ ಶಾಸ್ತ್ರಗಳನ್ನು ನಿತ್ಯವೂ ಓದುತ್ತಿರಬೇಕು. ಏಕೆಂದರೆ ಅಭ್ಯಾಸ ಮಾಡುತ್ತ ಮನಸ್ಸು ಶುದ್ಧವಾದಂತೆ ಧರ್ಮ ಶಾಸ್ತ್ರದ ಅರ್ಥ ಹೆಚ್ಚು ಆಳವಾಗಿ ತಿಳಿಯುತ್ತದೆ ; ಮನಸ್ಸಿಗೆ ನಾಟುತ್ತದೆ. ಪ್ರೇರಿಸುತ್ತದೆ.

**ಬ್ರಾಹ್ಮೀ ಮುಹೂರ್ತೇ ಉತ್ಥಾಯ ಧ್ಯಾಯೀತ ಮನಸೇಶ್ವರಂ ॥** ಕೂರ್ಮ ಪುರಾಣ ॥ ಧರ್ಮಾರ್ಥಾವನು ಚಿಂತಯೇನ್ ॥ (ಮನು ೪,೯೨) ಚಿಂತಯೇ ದಾತ್ಮನೋಹಿತಮ್ ॥ (ಯಾಜ್ಞ ೧,೧೧೫) ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಪರಮೇಶ್ವರನ ಚಿಂತನೆ ಮಾಡಬೇಕು. ಆಮೇಲೆ ತನ್ನ ಹಿತಾಹಿತಗಳನ್ನು ಚಿಂತಿಸಬೇಕು. ಮಾಡಿದ ಕಾರ್ಯಗಳು ಧರ್ಮವೇ ಅಧರ್ಮವೇ, ಪಾಪವೇ ಪುಣ್ಯವೇ, ಮುಂದೆ ಏನು ಮಾಡುವುದು ಮಾತ್ರ ಉತ್ತಮ ಎಂದು ಆಲೋಚಿಸಬೇಕು. ಬ್ರಾಹ್ಮೀ ಮುಹೂರ್ತವೆಂದರೆ ಸೂರ್ಯೋದಯಕ್ಕೆ ೪ ಗಳಿಗೆಗಳ ಮುಂಚೆ ಆರಂಭ; ಎರಡು ಗಳಿಗೆಯ ಕಾಲ. ಗಳಿಗೆ–೪೮ ನಿಮಿಷಗಳ ಈ ಮುಹೂರ್ತವು ದೇವರ ಚಿಂತನೆಗೆ ಅತ್ಯುತ್ತಮ. ಕಷ್ಟದ ಸಮಸ್ಯೆಗಳ ಪರಿಹಾರಕ್ಕೆ ಚಿಂತನೆಗೆ, ಉತ್ತಮ ಯೋಚನೆಗಳು ಬರಲಿಕ್ಕೆ ಕೂಡ ಅತ್ಯುತ್ತಮ. ಲೌಕಿಕರು ತಮ್ಮ ಕಷ್ಟಗಳಿಗೆ ಸಮಸ್ಯೆಗಳಿಗೆ, ಪರಿಹಾರಕ್ಕೆ ಅತ್ಯುತ್ತಮ, ಆಗ ಚಿಂತೆ ಮಾಡುವುದು ಒಳ್ಳೆಯದು. ಆದರೆ ಸಾಧಕರು ಬ್ರಾಹ್ಮೀ ಮುಹೂರ್ತಕ್ಕೂ ಸ್ವಲ್ಪ ಮುಂಚೆಯೇ ಎದ್ದು ಆ ಇಡೀ ಕಾಲವನ್ನೂ ಅನಂತರ ಬರುವ ಪ್ರಾತಃ ಸಂಧ್ಯಾಕಾಲವನ್ನೂ ಅತ್ಯಂತ ಧಾರಾಳವಾಗಿ ದೇವರ ಸ್ಮರಣೆ ಗಾಯತ್ರೀ ಜಪ ಮಾಡಲು ಉಪಯೋಗಿಸಬೇಕು. ಇತ್ತೀಚೆಗೆ ಲೌಕಿಕ ಸಮಸ್ಯೆಗಳು ಹೆಚ್ಚುತ್ತಿದ್ದು ಸರಿಯಾಗಿ ಜಪ, ದೇವರ ಚಿಂತನೆ ಮಾಡಲು ಸಮಯವೇ ಸಾಲದು ಎನ್ನುವವರು ಬಹಳ. ಆದರೆ ಅವರು ಬೇಗ ಏಳುವ ಅಭ್ಯಾಸ ಮಾಡಿಕೊಂಡರೆ ಸಾಧನೆಗೆ ಖಂಡಿತ ಸಮಯ ಪಡೆಕೊಂಡಾರು. ಮತ್ತು ಪತ್ರಿಕೆ ಓದಿ, ಲೌಕಿಕ ವಿಚಾರ ತಲೆತುಂಬಿಸಿಕೊಂಡು ಅನಂತರ ಮಾಡುವ ಜಪದಲ್ಲಿ ಏಕಾಗ್ರತೆ ಚೆನ್ನಾಗಿ ಬಾರದು. ಆದ್ದರಿಂದ ಅದು ಅವಸರದ್ದೂ, ಲೋಪ ತುಂಬಿದ್ದೂ ಕ್ರಮೇಣ ಆಗದಿರದು. ಮಕ್ಕಳು ಬೇಗ ಏಳಬೇಕಾದರೆ ತಂದೆ ಅವಕ್ಕಿಂತ ಬೇಗ ಏಳಲೇ ಬೇಕು. ಬೆಳಗ್ಗೆ ಬಹುಬೇಗ ಏಳುವ ಲೌಕಿಕರಿಗೆ ನಿತ್ಯದ ದೇವರ ಪೂಜೆಯೂ ಸಾಧ್ಯವಾದೀತು ಅದು ಬಹಳ ಪ್ರಯೋಜನಕಾರಿ, ತನಗೂ ಪತ್ನಿಗೂ, ಮಕ್ಕಳಿಗೂ.

**ನಮ್ಮನ್ನು ಪಾಪಕ್ಕೆ ನೂಕುವ ಶತ್ರುಗಳು:** ಕಾಮ ಕ್ರೋಧಗಳು (ಗೀತೆ ೩,೩೭) ಭೋಗದ ಬಯಕೆ ಉಪಯೋಗದಿಂದ ತಣಿಯುವುದಿಲ್ಲ, ಬೆಂಕಿಗೆ ತುಪ್ಪ ಹಾಕಿ ಅದನ್ನು ನಂದಿಸುವಂತಿಲ್ಲ; ಬೆಂಕಿ ಮತ್ತಷ್ಟು ವೃದ್ಧಿಯಾಗುತ್ತದೆ ಮಾತ್ರ. ಅಂತೆಯೇ ಕಾಮದ ದಾಹ ಹೆಚ್ಚುತ್ತಲೇ ಹೋಗು

ತ್ತದೆ, ಚಕ್ರವರ್ತಿ ನಹುಷ ಹೇಳಿದ್ದುಂಟು ಲೋಕದ ಎಲ್ಲ ಧಾನ್ಯ, ಗೋವು ಗಳು ಸುವರ್ಣ ಸ್ತ್ರೀಯರು ಒಬ್ಬ ವ್ಯಕ್ತಿಯ ಆಸೆಗೇ ಸಾಕಾಗುವುದಿಲ್ಲ, ಎಂದು. ಆಸೆಗೆ ತೊಡುಕುಂಟಾದರೆ ಕ್ರೋಧ, ಮೋಹ, ಮಾತ್ಸರ್ಯ, ಹೆಚ್ಚು ಲಭಿಸಿ ದರೆ ಮದ ಎಲ್ಲವೂ ಉಂಟಾಗಿ ಅಧೋಗತಿಗೆ ಇಳಿಸಿ ನಾಶ ತರುತ್ತದೆ. ಆದ್ದ ರಿಂದ ಅತ್ಯಾಸೆ ಬಿಡಲೇಬೇಕು (ಯಯಾತಿ, ವಿಷ್ಣು ಪುರಾಣ). ಶಾಸ್ತ್ರ ಓದುತ್ತ ಅದು ನಿಷೇಧಿಸುವ ಕರ್ಮಗಳನ್ನು ಬಿಡಬೇಕು. ಮಾಡುವ ಕರ್ಮ ಗಳನ್ನು ಅನಾಸಕ್ತಿಯಿಂದ ಈಶ್ವರ ಪ್ರೀತ್ಯರ್ಥವಾಗಿ ಎಂದು ಹೊರತು ಫಲದ ಆಸೆಯಿಂದ ಮಾಡಬಾರದು. ದೇಹ ಬಿಡುವ ಮುಂಚೆಯೇ ಕಾಮಕ್ರೋಧ ಗೆದ್ದವ ಸುಖಿ ; ಅವನೇ ಯೋಗಿ (ಗೀತೆ ೫,೨೩).

**ಸ್ವದಾರ ನಿರತಶ್ಚೈವ (ಭವೇತ್):** (ಯಾಜ್ಞ. ೧,೮೧) ಸ್ವಪತ್ನಿಯಲ್ಲಿ ನಿರತನಾಗಿರಬೇಕು. ಪರ ಪತ್ನಿಯರಲ್ಲಿ ಆಸಕ್ತನಾಗಬಾರದು.

**ಜೀವನದ ಮೂರು ಮುಖ್ಯ ಸಾಲಗಳ ಪರಿಹಾರ ಅಗತ್ಯ :** ಪ್ರತಿ ಬ್ರಾಹ್ಮಣನನ್ನು ಮೂರು ಋಣಗಳು ಅಗತ್ಯವಾಗಿ ಸೇರುತ್ತವೆ. ಋಷಿಋಣ, ದೇವಋಣ, ಪಿತೃಋಣ (ತೈತ್ತಿರೀಯ ಸಂ. ೬,೩,೧೦). ಪಿತೃಗಳಿಂದ ನಾವು ನಮ್ಮ ಬ್ರಾಹ್ಮಣ ದೇಹ ಪಡೆದೆವು, ಅವರು ನಮ್ಮನ್ನು ಪೋಷಿಸಿ ಬೆಳೆಸಿದರು. ಆಮೂಲಕ ಉಂಟಾದ ಪಿತೃಋಣ ತೀರಿಸಲಿಕ್ಕೆ ನಾವು ಅವರಲ್ಲಿ ವಿಧೇಯಂತೆ, ಅವರ ಮುದಿಪ್ರಾಯದಲ್ಲಿ ಆರೈಕೆ, ಮಾಡಲೇಬೇಕು. ಮರಣದ ಅನಂತರ ಅವರಿಗೆ ಹಿತವಾಗುವ ಪಿತೃ ತರ್ಪಣಗಳು, ಶ್ರಾದ್ಧ ನಡೆಸಬೇಕು. ಅವರಿಂದ ನಮ್ಮವರೆಗೆ ಮುಂದರಿಸಿಕೊಂಡು ಬಂದ ಪೀಳಿಗೆ ಮತ್ತೂ ಮುಂದರಿಸಲಿಕ್ಕೆ ನಾವೂ ವಿವಾಹವಾಗಿ ಸತ್ಪುತ್ರ ಸಂತಾನ ಪಡೆಯಬೇಕು. ಬ್ರಾಹ್ಮಣ ಜೀವನಕ್ಕೆ ಅತ್ಯಂತ ಮುಖ್ಯ ಧರ್ಮದ ಭಾಗವಾದ ವೇದಗಳ ದ್ರಷ್ಟಾರರು ನಮ್ಮ ಋಷಿ ಗಳು. ಅವರ ಪರಂಪರೆಯಮೂಲಕ ನಮಗೆ ಧಾರ್ಮಿಕಜೀವನಕ್ಕೆ ಅಗತ್ಯವಾದ ಇತರ ಶಾಸ್ತ್ರ ಗ್ರಂಥಗಳೂ ಮುಂದರಿದು ಬಂದವು. ಋಷಿಗಳಿಗೆ ಆ ಭಾಗದ ನಮ್ಮ ಋಣಕ್ಕೆ ಅವನ್ನು ಕಲಿಯುವುದು, ಕಲಿಸಿ ಮುಂದರಿಸುವುದು ಮಾಡಿ ಅವರಿಗೆ ತೃಪ್ತಿತಂದು ಆ ಸಾಲ ತೀರಿಸಿಕೊಳ್ಳಬೇಕು.

ಲೌಕಿಕ ಬ್ರಾಹ್ಮಣರು ಈಗ ವೇದ ಕಲಿಯುವುದು ಬಹಳಮಟ್ಟಿಗೆ ಅಸಾಧ್ಯವೇ. ಆದರೆ ವೇದಮಾತೆಯಾದ ಗಾಯತ್ರೀ ಜಪ ಆದಷ್ಟು ಧಾರಾಳ ವಾಗಿ ಮಾಡುವುದು, ರುದ್ರ ಪುರುಷ ಸೂಕ್ತಗಳನ್ನಾದರೂ ಕಲಿಯುವುದು, ಉತ್ತಮವಾದೀತು. ಮತ್ತು ವೇದದ ಪರಿಪಾಲನೆಗೆ ವೇದ ಕಲಿಯುವ

ಹುಡುಗರಿಗೆ ಧನ ಸಹಾಯ ಕೊಡುವುದು (ನಮ್ಮ ಪರಾರದಲ್ಲಿ ಮುಂದೆ ಅತ್ಯಗತ್ಯವಾಗಿ ಪುರೋಹಿತರ ಅಭಾವವಾಗದಂತೆ ಮಾಡುವುದು), ಧರ್ಮ ಶಾಸ್ತ್ರದ ಪುಸ್ತಕಗಳ ಪ್ರಚಾರಕ್ಕೆ ಸಹಾಯ ಮಾಡುವುದು, ಸಾಮಾನ್ಯರಿಗೂ ಸಾಧ್ಯವಾದ ಕೆಲಸ (ಹೊರತು, ಧರ್ಮ ಪ್ರಚಾರಕ್ಕಾಗಿ ಇಟ್ಟ ಪುಸ್ತಕ ಅಪಹರಿಸಿ ಅಡಗಿಸಿಡುವುದು ಅತ್ಯಂತ ಅಧಮ ಅತಿಪಾಪಿಷ್ಠ ಕೆಲಸವಾದೀತು). ದೇವಋಣದ ಪರಿಹಾರ ಬೇಕು. ಏಕೆಂದರೆ ನಾವು ದವಸ ಧಾನ್ಯ ತಿಂದು ಬೆಳೆದವು, ಅವು ದೇವತೆಗಳು ಕೊಡುವ ಮಳೆಯಿಂದ ಬೆಳೆದವು, ಆದ್ದರಿಂದ ಕೇವಲ ನಮಗಾಗಿ ನಿತ್ಯ ಅನ್ನ ಮಾಡದೆ, ದೇವತೆಗಳಿಗೆ ವೈಶ್ವದೇವದ ಮೂಲಕ ಅರ್ಪಿಸಲಿಕ್ಕೂ ಅದರ ಒಂದು ಅಂಶ ವಿನಿಯೋಗಿಸಬೇಕು. ಇಲ್ಲ ವಾದರೆ ಭಗವದ್ಗೀತೆ ಹೇಳಿದಂತೆ ನಾವು ಕೇವಲ ಕಳ್ಳರೇ ಆಗುತ್ತೇವೆ (ಗೀತೆ ೩,೧೨). ವೈಶ್ವದೇವದ ವಿಚಾರ ಮುಂದೆ ಬರುತ್ತದೆ. ಈ ರೀತಿಯಲ್ಲಿ ಈ ಋಣತ್ರಯ ತೀರಿಸಿದ ಮೇಲೆ ಮಾತ್ರವೇ ಮೋಕ್ಷದ ಅರ್ಹತೆಗೆ ಅಭಿಲಾಷೆ ಉಂಟಾಗುತ್ತದೆ. ಇಲ್ಲವಾದರೆ ಈ ಅತಿದುಃಖ ತುಂಬಿದ ಸ್ವಲ್ಪ ಮಾತ್ರ ಸುಖದ ಸಂಸಾರದ ಘೋರ ಸಾಗರದಲ್ಲಿ ಕಂತಿ ಏಳುವುದು ಮುಗಿಯದು; (ಮನು ೬,೩೫).

ಋಣಾನಿ ತ್ರೀಣ್ಯಪಾಕೃತ್ಯ ಮನೋಮೋಕ್ಷೇ ನಿವೇಶಯೇತ್ ॥

ಬ್ರಾಹ್ಮಣರು ಮಾಡಬೇಕಾದ ಬ್ರಹ್ಮಯಜ್ಞದಲ್ಲಿ ದೇವ ಋಷಿ ಪಿತೃ ತರ್ಪಣಗಳು ಮುಖ್ಯ. ನಿವೃತ್ತರಾದ ಬ್ರಾಹ್ಮಣರು ಕಲಿತು ಮಾಡುವುದು ಉತ್ತಮ.

**ಪಂಚಮಹಾಯಜ್ಞಗಳು :** ಇವು ಬ್ರಹ್ಮಯಜ್ಞ, ಪಿತೃಯಜ್ಞ, ವೈಶ್ವ ದೇವ (ದೈವಯಜ್ಞ) ಬಲಿಹರಣ (ಭೂತಯಜ್ಞ) ಅತಿಥಿ ಸತ್ಕಾರ (ಮನುಷ್ಯ ಯಜ್ಞ). ಗೃಹಸ್ಥರ ಜೀವನದಲ್ಲಿ ಅನಿವಾರ್ಯವಾಗಿ ಕೆಲವು ಪಾಪಗಳು ಸೇರಿ ಕೊಳ್ಳುತ್ತಿರುತ್ತವೆ. ಚುಲ್ಲಿ–ಸೌದೆ ಉರಿಸುವಾಗ ಅದರಲ್ಲಿ ಸೇರಿದ್ದ ಕ್ರಿಮಿ, ಮೊಟ್ಟೆಗಳ ನಾಶ. ಸಜೀವಧಾನ್ಯಗಳ ಜೀವನಾಶ. ಪೇಷಣಿ–ಅರೆಯುವ ಕಲ್ಲು, ಬೀಸುವ ಕಲ್ಲುಗಳಲ್ಲಿ ಧಾನ್ಯಗಳ ಜೀವನಾಶ. ಕಂಡನಿ–ಒರಳು ಒನಿಕೆಗಳಿಂದ ಬೀಜಗಳ ಜೀವನಾಶ, ಉಪಸ್ಕರ–ಗುಡಿಸುವಾಗ ಚಿಕ್ಕ ಪುಟ್ಟ ಜಂತುಗಳ ನಾಶ. ಉದಕುಂಭ–ಜಲಸ್ರೋತದಿಂದ ನೀರು ತಂದು ಸಂಗ್ರಹಿಸುವುದರ ಮೂಲ ಜಲದಲ್ಲಿರುವ ಜಲಜಂತುಗಳ ನಾಶ ಈ ಪಾಪಗಳು ಮುಖ್ಯ ವೈಶ್ವ ದೇವದಿಂದ ಮತ್ತು ಪಂಚಮಹಾಯಜ್ಞಗಳ ಉಳಿದ ಭಾಗಗಳಿಂದ ನಾಶವಾಗಿ

ಗೃಹಸ್ಥನಿಗೆ ಬಾಧಿಸವು (ಮನು ೩,೭೧), ವೈಶ್ವದೇವದಲ್ಲಿ ಅಟ್ಟ ಅನ್ನದ ಒಂದಂಶವನ್ನು ಅಡಿಗೆ ಮನೆಯ ಒಲೆಯ ಅಗ್ನಿಯಲ್ಲಿ ವೈಶ್ವದೇವದ ದೇವತೆಗಳನ್ನುದ್ದೇಶಿಸಿ ಹವನ ಮಾಡುವುದು.

ಭೂತಯಜ್ಞ. ವೈಶ್ವದೇವಕ್ಕೆ ತೆಗೆದಿಟ್ಟದ್ದರ ಉಳಿದ ಅನ್ನವನ್ನು ಕೆಲವು ದೇವತೆಗಳಿಗೆ ನೆಲದ ಮೇಲೆ ಬೇರೆ ಬೇರೆ ಇಡುವುದು. ಮತ್ತು ಹೊರಗೆ ಚಂಡಾಲರು, ಕಾಗೆ ಮುಂತಾದವಕ್ಕೆ ಭೂತದಯೆಯಿಂದ ಇಡುವುದು (ಮನು ೩,೯೪). ಮನುಷ್ಯಯಜ್ಞವೆಂದರೆ ಅತಿಥಿಸತ್ಕಾರ. ಇಲ್ಲಿ ಅತಿಥಿ ಎಂದರೆ ನಮ್ಮ ಪರಿಚಿತನೇ ಅಲ್ಲದ, ಹಸಿದು ಊಟ ಬಯಸಿ ವೈಶ್ವದೇವದ ಕಾಲದಲ್ಲಿ ಅಥವಾ ಅದರ ಕಾಲುಗಳಿಗೆಯೊಳಗೆ ಬಂದವ; ಉಂಡು ಅಥವಾ ಉಂಡು ಮಲಗಿ ಮುಂದೆ ಹೋಗುವವ. ಅಂಥವನನ್ನು ಕುಲಗೋತ್ರ ಕೇಳದೆ ಆದರದಿಂದ ಸತ್ಕರಿಸಬೇಕು. ಆಮೇಲೆ ಬಂದವರನ್ನೂ ಸತ್ಕರಿಸಬೇಕು. ಆದರೆ ಯಜ್ಞಭಾಗವೆಂದಲ್ಲ, ಸತ್ಕಾರ್ಯವೆಂದು ಮಾತ್ರ. ಇದನ್ನು ಗೃಹಸ್ಥ ಚೆನ್ನಾಗಿ ಮಾಡಬೇಕಾದುದೇ. ಅತಿಥಿಸತ್ಕಾರ್ಯಕ್ಕೆ ನಮ್ಮ ಇಡೀ ದೇಶ ಬಹಳ ಖ್ಯಾತವಾಗಿತ್ತು. ಅನ್ನಮಾರುವ ಹೋಟೆಲು ಕ್ರಮ ತಪ್ಪೆಂದು, ಅವು ರೂಢಿಯಲ್ಲಿಲ್ಲದಿದ್ದಾಗ, ಯಾತ್ರಿಕರು, ಸನ್ಯಾಸಿಗಳು ಇಡೀ ದೇಶಸುತ್ತುವುದು ಚೆನ್ನಾಗಿ ಸಾಧ್ಯವಾಗಿತ್ತು. ಅದು ಇಡೀದೇಶ ಒಂದೇ ಎಂಬ ಭಾವನೆ ಬೆಳೆಸಿತು. ಈಗ ಮಾತ್ರ ಅತಿಥಿಸತ್ಕಾರದ ಭಾವನೆ ಬಹುಬೇಗ ಕ್ಷೀಣಿಸುತ್ತಿದೆ. ಹೆಂಗಸರಿಗೆ ಆ ಬಗ್ಗೆ ಉತ್ಸಾಹವಿಲ್ಲ. ಸ್ವಾರ್ಥತೆ ವಿಪರೀತ ಬೆಳೆಯುತ್ತಿದೆ. ಗೀತೆ ೩,೧೩ ಹೇಳಿದಂತೆ :

> ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।
> ಭುಂಜತೇ ತೇತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ॥

ದೇವತೆಗಳು ನಮಗೆ ಮಳೆ ಕೊಡುತ್ತಾರೆ. ಅದರಿಂದ ಬೆಳೆ ಬೆಳೆಯುತ್ತದೆ. ಅದೇ ನಮಗೆ ಆಹಾರ. ಆದ್ದರಿಂದ ಅನ್ನದ ಒಂದಂಶ ಅವರಿಗೆ ವೈಶ್ವದೇವದ ಮೂಲಕ ಅರ್ಪಿಸಿ ಶೇಷವನ್ನು ಉಂಡರೆ ಮಾತ್ರ ದೋಷವಿಲ್ಲದಾಗುತ್ತದೆ. ತಮಗೋಸ್ಕರ ಮಾತ್ರ ಅನ್ನಮಾಡಿ ಉಣ್ಣುವವ ಕಳ್ಳನೇ ಆಗುತ್ತಾನೆ!

**ಸಮಾಜದಲ್ಲಿ ವರ್ತನೆ** : ಪರರಿಗೆ ದ್ರೋಹವನ್ನು ಮಾಡಬಾರದು, ಎಣಿಸಲೂಬಾರದು (ಮನು ೪,೧೭೭). ಯಾರಿಗೂ ಅಪಮಾನ ಮಾಡಬಾರದು (ವಿಷ್ಣು ಸ್ಮೃತಿ ೭೧,೧). ತನಗೆ ಕೆಟ್ಟದ್ದು ಎಂದು ಬಲ್ಲುದನ್ನು

ಇತರರಿಗೆ ಮಾಡಬಾರದು (ವ್ಯಾಸಸ್ಮೃತಿ) ನಮಗಿಂತ ಅಲ್ಪರು, ಅಂಗ ಹೀನರು, ಮೂಢರು ಮುಂತಾದವರನ್ನು ಹೀಯಾಳಿಸಬಾರದು. ಬಹಳ ಕೋಪಿಸಿಕೊಂಡು ಹೊಡೆಯಲೇಬಾರದು (ಅದು ಅಪಾಯಕರ). ಸಹಪಂಕ್ತಿ ಯಲ್ಲಿ ಕುಳಿತವರು ಒಬ್ಬರೇ ಅವಸರವಾಗಿ ಬೇಗ ಏಳಬಾರದು, ಎಲ್ಲರೊಡನೆ ಏಳಬೇಕು. ಮುಂದುಕ, ಭಾರಹೊತ್ತವ, ರಾಜಾಧಿಕಾರಿ, ಸ್ತ್ರೀ, ರೋಗಿ, ಅಬಲ, ಉನ್ಮತ್ತ ಮತ್ತು ಗಂಡಸರು, ಹೆಂಗಸರಿಗೂ, ಪೂಜ್ಯರಿಗೂ, ದಾರಿ ಬಿಡಬೇಕು. ಮಾತು ಬಿಗುವಾಗಿಯೂ, ಕಠಿಣವಾಗಿಯೂ, ಅಶ್ಲೀಲ ವಾಗಿಯೂ, ಉದ್ರೇಕಿಸುವುದಾಗಿಯೂ, ಮರ್ಮ ಬೇಧಕವಾಗಿಯೂ ಇರ ಬಾರದು. ಮೃದುವಾಗಿ ಮಧುರವಾಗಿರಬೇಕು. ಪರಸ್ತ್ರೀಯರನ್ನು ಹಿಂಬಾಲಿಸ ಬಾರದು ಮತ್ತು ಅವರೊಡನೆ ಬಹಳ ಸಂಯಮನದಿಂದ ನಡಕೊಳ್ಳಬೇಕು. ಕೈಕಾಲು ಮುಂತಾದ ಅಂಗಗಳ ಚಾಪಲ್ಯ ಬಿಡಬೇಕು, ಅಹಿಂಸೆಯು ಶುದ್ಧ ಸಾತ್ವಿಕ ಗುಣ, ಮೋಕ್ಷ ಸಾಧಕ. ತಾನು ಕೊಲ್ಲದಿದ್ದರಾಯಿತು, ಇತರರಿಂದ ಮಾಡಿಸಿದರೆ ಪಾಪವಿಲ್ಲ ಎಂದಿಲ್ಲ. ಮನುಸ್ಮೃತಿ ಹೇಳುತ್ತದೆ (೫,೫೧) ಕೊಲ್ಲಲಿಕ್ಕೆ ಒಪ್ಪಿಗೆ ಕೊಟ್ಟವ, ಕತ್ತರಿಸಿದವ, ಮಾಂಸ ಮಾರುವವ, ಬೇಯಿಸುವವ, ಬಡಿಸುವವ ಮತ್ತು ತಿನ್ನುವವ ಎಲ್ಲರೂ ಆ ಪಾಪದಲ್ಲಿ ಭಾಗಿ ಗಳು ಎಂದು. ಜ್ಞಾನದಿಂದ ಬುದ್ಧಿಯನ್ನು ತಿದ್ದಿಕೊಳ್ಳುತ್ತಿರಬೇಕು (ಬುದ್ಧಿ ಜ್ಞಾನೇನ ಶುದ್ಧ್ಯತಿ, ಮನು ೫,೧೦೯).

**ಸಂಘಟನೆಗೆ ಋಗ್ವೇದದ ಆದೇಶ :** ನಿತ್ಯದೇವರ ಪೂಜೆಯು ಅಭಿಷೇಕದ ತುದಿಯಲ್ಲಿ ಹೇಳಬೇಕಾದ ಮಂತ್ರಗಳು :

> ಸಂಗಚ್ಛಧ್ವಂ ಸಂವದಧ್ವಂಸಂ ವೋಮನಾಂಸಿ ಜಾನತಾಂ ।
> ದೇವಾಭಾಗಂ ಯಥಾ ಪೂರ್ವೇ ಸಂಜಾನಾ ನಾ ಉಪಾಸತೆ ॥

ನೀವೆಲ್ಲ ಸೇರಿಯೇ ನಿಮ್ಮ ಏಳಿಗೆಗೆ ಹಿರಿಮೆ ಸಾಧಿಸಿರಿ. ಪ್ರೇಮ, ಮೃದು ನುಡಿ, ಸೌಹಾರ್ದತೆ, ಸಹಕಾರ ಬೆಳೆಸಿರಿ. ನಿಮ್ಮ ವಿಶೇಷತರದ ಪೂರ್ವಜರೆಲ್ಲ ಸೇರಿಯೇ ವಿಚಾರ ಮಾಡುತ್ತಿದ್ದರು, ಉತ್ತಮ ಆಚರಣೆ ಯಿಂದ ಪರಮಾತ್ಮನನ್ನು ಸಂತೋಷ ಪಡಿಸುತ್ತಿದ್ದರು. ಅಂತೆಯೇ ಮತ್ತೆರಡು ಋಕ್ಕುಗಳೂ ಎಲ್ಲರ ಸಂಘಟನೆ, ಪರಸ್ಪರ ಸಹಾಯಗಳಿಗಾಗಿ ಏಕಾಭಾವ ಬೋಧಿಸುತ್ತವೆ. ನಿತ್ಯ ಇವನ್ನು ಹೇಳುವುದರ ಅರ್ಥ ಬ್ರಾಹ್ಮಣನು ಇವನ್ನು ಅಭ್ಯಸಿಸಲೇಬೇಕೆಂಬುದಲ್ಲವೇ ? ನಮ್ಮಲ್ಲಿ ಕೆಲವರು ಕೇವಲ ಅಹಂಭಾವ ಬೆಳೆಸಿ ಸಮಾಜದ ಒಗ್ಗಟ್ಟಿಗೆ ಸ್ವಲ್ಪವೂ ಲಕ್ಷ್ಯ ಕೊಡದೆ

ವರ್ತಿಸುವುದುಂಟು. ಸಮಾಜದ ಬಹು ಜನರಲ್ಲಿ ಬೇಸರ ಉಂಟುಮಾಡುವ ಕಾರ್ಯಗಳು ಧರ್ಮದವೇ ಆದರೂ ಬಿಡಬೇಕಾದವು. ವಿರುದ್ಧಂ ವರ್ಜಯೇತ್ ಕರ್ಮ (ಯಾಜ್ಞವಲ್ಕ್ಯ ೧,೧೩೯) ಜನಪದ ಗ್ರಾಮ ಕುಲಾಚಾರ ವಿರುದ್ಧಂ ಕರ್ಮವರ್ಜಯೇತ್ (ಮಿತಾಕ್ಷರ) ವೇಷ ಭಾಷೆ ಅಲಂಕಾರ ಕೇವಲ ತನ್ನದೇ ಆಗಿರಕೂಡದು (ವಾಗ್ಭಟರು). ಹೀಗೆ ವೇದವು ನಮ್ಮ ಹಿತಕ್ಕಾಗಿ ಬೋಧಿಸುವ ಒಗ್ಗಟ್ಟಿಗಾಗಿ ನಮ್ಮಲ್ಲಿ ಸಮಾಜಭಾವನೆ ಇರಬೇಕಾದುದು ಅಗತ್ಯ. ಬ್ರಾಹ್ಮಣರಿಗೆ ಮುಂದೆ ಬಹಳ ಕಷ್ಟಕಾಲ ಬರಲಿರುವಾಗ ಕೇವಲ ವೈಯಕ್ತಿಕ ಭಾವನೆ ಬಿಟ್ಟು ಎಲ್ಲರೂ ಸಮಾಜದೊಡನೆ ಸಹಕರಿಸಲೇಬೇಕು.

**ವಿವಾಹ ಸಂಸ್ಕಾರ :** ಸಂಸ್ಕಾರ ಎಂದರೆ ಚಿನ್ನ ಪುಟಕ್ಕಿಟ್ಟು ಶುದ್ಧ ಮಾಡುವಂತೆ. ಸಂಸ್ಕಾರಗಳಿಂದ ನಮ್ಮನ್ನು ವಿಶೇಷ ಹೆಚ್ಚಿನ ಧಾರ್ಮಿಕ ಪರಿಶುದ್ಧತೆಗೆ ಏರಿಸುವ ಕ್ರಮ. ಪತಿ ಪತ್ನಿಯರಲ್ಲಿರುವ ಕಾಮವೆಂಬ ದೇಹದ ದುರ್ಬಲತೆಯನ್ನು ಧಾರ್ಮಿಕ ಸಾಧನೆಯ ಜೀವನಕ್ಕೆ ಪರಿವರ್ತಿಸುವುದು ವಿವಾಹದ ಉದ್ದೇಶ. ವಧುವಿನ ತಂದೆ ಕನ್ಯಾದಾನದ ಪರಿಕಲ್ಪದಲ್ಲಿ ಹೇಳುತ್ತಾನೆ, ವರನೇ ನೀನು ಬ್ರಹ್ಮಲೋಕ ಜೈಸುವುದಕ್ಕೂ ನಿನ್ನ ಪಿತೃಗಳ ಉದ್ಧಾರಕ್ಕೂ, ವಧುವನ್ನು ನಿನಗೆ ಕೊಡುತ್ತೇನೆ. ಧರ್ಮ ಅರ್ಥ ಕಾಮದಲ್ಲಿ ಅವಳನ್ನು ಅತಿಕ್ರಮಿಸಿ ನಡೆಯೆನು, ಅವಳೊಡನೆಯೇ ಧರ್ಮ ಆಚರಿಸುವೆನು, ಎಂದು ಮಾತು ಕೊಡು ಎಂದು ಅದನ್ನು ಪಡೆಯುತ್ತಾನೆ. ವರನು ವಧುವಿಗೆ ತಮ್ಮ ಧಾರ್ಮಿಕ ದಾಂಪತ್ಯಜೀವನಕ್ಕೆ ಏಳು ಸೂಚನೆಗಳನ್ನು ಕೊಟ್ಟು, ವಧುವು ಅವು ಒಂದೊಂದನ್ನು ಒಪ್ಪಿದಂತೆ ಅವನೊಡನೆ ಒಂದೊಂದು ಹೆಜ್ಜೆ ಇಟ್ಟು ಸಖ್ಯ ಸ್ಥಾಪಿಸುತ್ತಾಳೆ. ಮನೆಯಲ್ಲಿನ ಧನ ಧಾನ್ಯ, ಬೇಗ ಹಾಳಾಗುವ ವಸ್ತುಗಳ ವಿಶೇಷ ಜೋಪಾನ, ಖರ್ಚು ಆದಾಯಗಳನ್ನು ಜಾಣಳಾಗಿ ನಡೆಸುವುದಾಗಿ ಒಪ್ಪಿ ಪ್ರಥಮ ಹೆಜ್ಜೆ; ಮೃದುವಾಗಿ ಮಾತು, ಸೇರಿದ ಕುಟುಂಬದ ರಕ್ಷಣೆ, ದುಃಖದಲ್ಲಿ ಧೈರ್ಯ, ಸುಖದಲ್ಲಿ ಸಂತೋಷದಲ್ಲಿರುವುದಾಗಿ ಒಪ್ಪಿ ಎರಡನೆ ಹೆಜ್ಜೆ; ಪತಿಯಲ್ಲಿ ಸತತ ಭಕ್ತಿ, ಅವನೊಡನೆ ಮಾತ್ರಭೋಗ, ಪರಪುರುಷರನ್ನು ಎಷ್ಟಕ್ಕೂ ಭಾವಿಸದಿರುವುದಾಗಿ ಒಪ್ಪಿ ಮೂರನೆ ಹೆಜ್ಜೆ ; ಪತಿಗೆ ಆನಂದ ತರುವಂತೆ ಅಲಂಕೃತಳಾಗಿರುವುದು, ಪತಿಯ ಆರೈಕೆ ಚೆನ್ನಾಗಿ ಮಾಡುವೆನೆಂದು ನಾಲ್ಕನೆ ಹೆಜ್ಜೆ ; ಪತಿಯ ಕಷ್ಟದಲ್ಲಿ, ಸುಖದಲ್ಲಿ, ಸಹಭಾಗಿನಿಯಾಗಿದ್ದು ಪತಿಯ ಆಜ್ಞೆಗಳನ್ನು ಪಾಲಿಸುವೆನೆಂದು ಐದನೆ ಹೆಜ್ಜೆ ; ಯಜ್ಞ ಹೋಮ ದಾನ ಧರ್ಮ ಕಾಮಗಳಲ್ಲಿ ಸಹಧರ್ಮಿಣಿಯಾಗಿರುವುದಾಗಿ ಆರನೆ ಹೆಜ್ಜೆ ; ಈ ಭಾಷೆಗಳಿಗೆ

ತನ್ನ ಮನವನ್ನು ಪ್ರೇರಿಸಿರುವ ದೇವತೆಗಳು ಸಾಕ್ಷಿ, ತಾನು ಸರ್ವಥ ವಂಚಿಸೆನು, ಎಂದು ಏಳನೆ ಹೆಜ್ಜೆ ಇಟ್ಟಾಗ ವಿವಾಹ ಬಾಂಧವ್ಯ ಪೂರ್ಣವಾಗುತ್ತದೆ. (ಕೇವಲ ಹೂಮಾಲೆ ಹಾಕಿದಾಗ ಅಲ್ಲ!) ಸ್ತ್ರೀಗೆ ವಿವಾಹವೆಂಬ ಒಂದು ಸಂಸ್ಕಾರ ಮಾತ್ರ ಇದೆ. ಆಮೇಲೆ ಧರ್ಮ ಚೆನ್ನಾಗಿ ಕಲಿತ ಪತಿ ಮಾವಂದಿರ ಪೂರ್ಣ ವಿಧೇಯತೆ ಅವಳನ್ನು ತಿದ್ದುತ್ತ ಹೋಗುತ್ತದೆ. ಬಾಲಕನಿಗಾದರೋ ಉಪನಯನ ಸಂಸ್ಕಾರದ ಅನಂತರ ಅತಿ ಕಠಿಣವಾದ ದೀರ್ಘವಾದ ಗುರುಕುಲವಾಸ ಅವನನ್ನು ಚೆನ್ನಾಗಿ ರೂಪಿಸುತ್ತಿತ್ತು. ಅದಿಲ್ಲದ ಈ ಕಾಲದಲ್ಲಿ ತಂದೆ ತಾಯಿ ಹುಡುಗನನ್ನು ಹೇಗೆ ತಿದ್ದಬೇಕೆಂದು ಮುಂದೆ ಸೂಚಿಸಲ್ಪಡುತ್ತದೆ. ಅಂತೆಯೇ ನವ ವಧುವನ್ನೂ ಬಹಳ ಕಾಲ ಶಿಸ್ತಿನಿಂದ ಪತಿಯು ತಿದ್ದುತ್ತ ಹೋಗಬೇಕಾದುದನ್ನು ಮಾಡುವುದೂ ಅಗತ್ಯವೇ.

**ವಿಧವಾ ಯತಿ ಮಾರ್ಗೇಣ :** ಪಾಶ್ಚಾತ್ಯ ದೇಶಗಳಲ್ಲಿ ವಿಧವಾ ವಿವಾಹ, ವಿವಾಹ ವಿಚ್ಛೇದ ಮತ್ತು ಪುನರ್ವಿವಾಹಗಳು ಆ ದೇಶಗಳನ್ನು, ವಿಪರೀತ ಕಾಮದ ನರಕ ಮಾಡುತ್ತಿವೆ ; ಕುಟುಂಬ ನಾಶ ಉಂಟು ಮಾಡುತ್ತಿವೆ. ವೈಧವ್ಯದ ವಿಪರೀತ ಘಾತವನ್ನು ಕೇವಲ ತನ್ನ ಹಿತ ಸಾಧನೆಗೆ ತಿರುಗಿಸಲಿಕ್ಕೆ ನಮ್ಮ ಧರ್ಮವು ಅನೇಕ ಸಾಧನೆಗಳನ್ನು ಹೇಳಿದೆ. ಅತಿ ಶುದ್ಧ ಆಹಾರ ; ಒಪ್ಪತ್ತೂಟ, ತಪಶ್ಚರ್ಯ ನಿಯಮಗಳ ಪಾಲನೆ, ಕಠಿಣ ಬ್ರಹ್ಮಚರ್ಯಗಳಿಂದ ಪುತ್ರಹೀನಳಾದರೂ ಅವಳು ಶುಕಸನಕರಂತೆ ಮೋಕ್ಷ ಹೊಂದಳಾಪಳು (ಮನು ೫.೧೫೮,೬೦). ತಪಸ್ಸಿಂದ ಶರೀರ ಕೃಶವಾಡುತ್ತಾ ವಿರಕ್ತಿ ಭಕ್ತಿ ಜ್ಞಾನ ವಿಜ್ಞಾನ ಸಾಧನೆಗಳನ್ನು ನಡೆಸಬೇಕು. ಸನ್ಯಾಸಿಯಂತೆ ಕೇಶವಪನಮಾಡಬೇಕು (ವ್ಯಾಸಸ್ಮೃತಿ). ಆಭರಣ, ಆಡಂಬರದ ಸೀರೆ, ಕಾಡಿಕೆ, ಕ್ರೋಧ, ಡಂಭ, ಪಾಪವೃತ್ತಿ, ಮಾತ್ಸರ್ಯ, ಮೋಸ, ಅತಿನಿದ್ರೆ, ಸೋಮಾರಿತನ ಬಿಟ್ಟಿರಬೇಕು. ಅಂತರ ಬಾಹ್ಯ ನಿರ್ಮಲತೆ, ಪವಿತ್ರಾಚರಣೆ, ಪರಮಾತ್ಮ ಧ್ಯಾನ, ಶುದ್ಧ ಸ್ಥಳದಲ್ಲಿ ದರ್ಭೆಚಾಪೆಯ ಮೇಲೆ ಶಯನ, ಸತ್ಸಂಗ, ಮುಟ್ಟಾದಾಗ ಉಪವಾಸ ಮಾಡಬೇಕು (ವೃದ್ಧಹಾರೀತ). ಕುಶತಿಲೋದಕಗಳಿಂದ ಮಾವನ ತಂದೆ, ಮಾವ, ಪತಿಯರಿಗೆ ನಿತ್ಯ ತರ್ಪಣ ಕೊಡುವುದೂ ಹೇಳಲ್ಪಟ್ಟಿದೆ. ಸಣ್ಣ ಪ್ರಾಯದಲ್ಲಿಯೇ ವಿಧವೆಯರಾದವರಿಗೆ ಧರ್ಮಸಾಧನೆ ಸುಲಭ ಮಾಡಲಿಕ್ಕೆ, ಅದರಲ್ಲಿ ಉತ್ಸಾಹ ಪಡೆಯುತ್ತಹೋಗಲಿಕ್ಕೆ, ಉತ್ತಮಧಾರ್ಮಿಕ ಪುಸ್ತಕಗಳ ಸಹಾಯ ಕೊಡಲೇಬೇಕು. ರೂಢಿಯಲ್ಲಿ ಹಾಗಿಲ್ಲದಿರುವುದು ದೊಡ್ಡ ತಪ್ಪು. **"ದೇವರನ್ನು ನಂಬುವ"** ಪುಸ್ತಕ ನೋಡಿರಿ.

# ೧೦. ಬ್ರಾಹ್ಮಣ ಜೀವನಕ್ಕೆ ಬಾಲಕನ ಉತ್ತಮ ತರಬೇತಿ ಅತ್ಯಗತ್ಯ

**ಬ್ರಹ್ಮಚಾರಿಯ ಜೀವನ :** (ಮನು ಸ್ಮೃತಿ ೨,೧೭೬-೧೮೯) ಮುಂಚೆ ಉಪನಯನವಾದ ಬ್ರಾಹ್ಮಣಹುಡುಗ ಗುರುಕುಲದಲ್ಲಿ ವಾಸಿಸುತ್ತಿದ್ದ. ಅವನಿಗೆ ಶಾಸ್ತ್ರ ಹೇಳಿದ ದಿನಚರಿ ಆದಷ್ಟು ಈಗಲೂ ಅನುಸರಿಸಬೇಕು. ಬ್ರಹ್ಮಚಾರಿ ನಿತ್ಯವೂ ಸ್ನಾನಮಾಡಿ ಶುಚಿಯಾಗಿ ನಿತ್ಯಕರ್ಮ (ಸಂಧ್ಯಾವಂದನೆ ಜಪ) ದೇವತಾರ್ಚನೆಮಾಡಬೇಕು. ಕ್ಷತ್ರಿಯ ಬ್ರಹ್ಮಚಾರಿ ಕೂಡ ಮದ್ಯಮಾಂಸ ಎಷ್ಟಕ್ಕೂ ಭುಂಜಿಸಕೂಡದು. ಅಂತೆಯೇ ಗಂಧ ಪುಷ್ಪ, (ಬೆಲ್ಲ ಮುಂತಾದ) ರಸ ಪದಾರ್ಥ ಉಪಯೋಗಿಸಕೂಡದು. ಎಷ್ಟಕ್ಕೂ ಸ್ತ್ರೀಸಂಸರ್ಗ ಮಾಡಬಾರದು. ಸಿಹಿ ಇದ್ದು ಅನಂತರ ಹುಳಿರಸವಾಗುವುದನ್ನು (ಶುಕ್ತ) ಸೇವಿಸಕೂಡದು. ಪ್ರಾಣಿಹಿಂಸೆ ಮಾಡಬಾರದು. ಅಭ್ಯಂಜನ, ಪಾದರಕ್ಷೆ, ಛತ್ರಿ, ವರ್ಜ್ಯ. ಕಾಮ ಎಂದರೆ ಕಣ್ಣು ಕಿವಿ ನಾಲಿಗೆ ಮೂಗು ಕಾಮೇಂದ್ರಿಯಗಳ ಚಪಲತೆ ಬಿಡಬೇಕು. ಕುಣಿಯುವುದು, ಹಾಡುವುದು, ವಾದ್ಯಬಾರಿಸುವುದು ಬ್ರಹ್ಮಚಾರಿ ಮಾಡಬಾರದು. ಅಂತೆಯೇ ಪಗಡೆ ಆಟ, ಜಗಳ, ಪರನಿಂದೆ ಹೇಳುವುದು, ಸುಳ್ಳು ಹೇಳುವುದು, ಕಾಮುಕ ದೃಷ್ಟಿಯಿಂದ ಸ್ತ್ರೀಯರನ್ನು ನೋಡುವುದು, ಮುಂತಾದ ಚಪಲತೆ, ಪರರಿಗೆ ಅಪಕಾರ, ಬ್ರಹ್ಮಚಾರಿ ಬಿಡಬೇಕು. ಬ್ರಹ್ಮಚಾರಿಯು ಯಾವಾಗಲೂಒಬ್ಬನೇ ಮಲಗಬೇಕು—ಮಂಚದ ಮೇಲಲ್ಲ, ಕೆಳಗೆ; ರೇತಸ್ಸು ಸ್ರವಿಸದಂತೆ ಜಾಗರೂಕನಾಗಿರಬೇಕು, ಅದಕ್ಕೆ ಕಾರಣವಾಗುವ ಏನನ್ನೂ ಮಾಡಬಾರದು. ಅವನಿಗೆ ಗುರುಕುಲದಲ್ಲಿ ಭಿಕ್ಷಾನ್ನದ ಜೀವನವೇ ಕ್ರಮವಾಗಿತ್ತು. ಅವ ಅಲ್ಲಿ ಗುರುಗಳ ಸೇವೆ ಮಾಡಬೇಕಿತ್ತು.

ಈಗ ಹುಡುಗರು ತಾಯಿಯ ಸಲಿಗೆಯಿಂದಾಗಿ ಬಹಳ ಶಿಸ್ತಿಂದ ಬೆಳೆಯುವುದಿಲ್ಲ. ಆದರೆ ಉಪನಯನವಾಗಿ ಗುರುಕುಲ ಸೇರಿದವರು ಅಲ್ಲಿ ಬಹಳ ಶಿಸ್ತಿಂತೆ ಬಾಳಲೇಬೇಕಾಗಿತ್ತಾದ್ದರಿಂದ ದೇಹದ ಮೇಲಿನ ಹತೋಟಿ ಬೆಳೆಸಲು ಧಾರಾಳವಾಗಿ ಕಲಿಯುತ್ತಿದ್ದರು. ಶ್ರೀಕೃಷ್ಣನು ಕೂಡ ಗುರುಕುಲದಲ್ಲಿ ಗುರು ಸೇವೆಗಾಗಿ ಕಾಡಿಂದ ಕಟ್ಟಿಗೆ ತರುತ್ತಿದ್ದ ಕತೆಯಿದೆ (ಅಷ್ಟರಲ್ಲೇ ಅವ ಕಂಸನನ್ನು ಕೊಂದು ತಾನು ರಾಜನೇ ಆಗಬಹುದಾಗಿತ್ತಾದರೂ !). ಎಂದರೆ ಎಲ್ಲ ತರದ ಗುರುಕುಲ ವಾಸಿಗಳೂ ಅತ್ಯಂತ ಸುಲಭ ತರದ ಜೀವನ, ಸರಳಜೀವನ,

ಕೇವಲ ವಿಧೇಯಂತೆಯು ಜೀವನ, ಇಂದ್ರಿಯು ಚಪಲತೆಗಳಿಗೆ ಆಸ್ಪದ ಕೊಡದ ಜೀವನ, ನಿರಾಡಂಬರದ ಜೀವನ ನಡೆಸಲು ಕಲಿಯಲೇಬೇಕಿತ್ತು. ಹೀಗೆ ದೇಹದ ಹತೋಟಿ ಚೆನ್ನಾಗಿ ಕಲಿತವರು ಮುಂದೆ ಧರ್ಮದ ಮೇಲು ಮಟ್ಟದ ಅತಿಕಷ್ಟದ ಶಿಸ್ತುಗಳನ್ನೂ ಕಷ್ಟವಿಲ್ಲದೆ ಒಪ್ಪಿ ಸಾಧಿಸಿ ಅತ್ಯಂತ ಶೀಲವಂತರೂ, ಸಂಯಮಿಗಳೂ ಧರ್ಮ ಪಾಲಿಸುವವರೂ ಆಗುತ್ತಿದ್ದರು. ಈ ಕಾಲದಲ್ಲಿ ಯುವಕರು, ಧರ್ಮದ ದಾರಿ ತಪ್ಪಿ ಅನೈತಿಕ ದಾರಿ, ಶಿಸ್ತಿಲ್ಲದ ದಾರಿ, ಹಿಡಿಯುವುದು ಬಹಳ ಬೆಳೆಯುತ್ತಿದೆ. ಬ್ರಾಹ್ಮಣರಾದರೂ ಅವರ ಮಕ್ಕಳನ್ನು ಮೇಲೆ ಹೇಳಿದ ಭಗವಾನ್ ಮನುವಿನ ಬೋಧನೆಗೆ ಆದಷ್ಟು ಹೊಂದಿಕೊಂಡು ಬೆಳೆಸಿದಷ್ಟೂ ಬ್ರಾಹ್ಮಣ್ಯ ಉಳಿದೀತು.

**ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗದು :** ಮುದ್ದು ಮಕ್ಕಳನ್ನು ತಂದೆ ತಾಯಿಂದಿರು ಮನಸ್ಸಿನ ಮೋಹ ಬದಿಗೊತ್ತಿ ಗುರುಕುಲವಾಸಕ್ಕೆ ಕಳುಹಿಸುತ್ತಿದ್ದರು. ಏಕೆಂದರೆ ಅಲ್ಲಿ ಚಿಕ್ಕಂದಿನಲ್ಲಿಯೇ ಧರ್ಮದಂತೆ ಬಾಳಲು ಹುಡುಗ ದೇಹವನ್ನು ಬಗ್ಗಿಸದಿದ್ದರೆ, ಮುಂದೆ ಆ ಶಿಸ್ತು ಸಾಧ್ಯವಾದ ಜೀವನ ನಡೆಸಲಾರ; ಕೆಡಲೂಬಹುದು ಎಂಬುದರಿಂದ. ಅಲ್ಲಿ ಕಲಿತ ಗುರುವಿನ ವಿಧೇಯಂತೆಯೆಂಬ ಶಿಸ್ತಿಂದ ಮುಂದೆ ತಾನು ಸ್ವತಂತ್ರನಾಗಿ ಬಾಳುವಾಗಲೂ, ಮಹತ್ತಿನದಾದ ಧರ್ಮದ ಹೆಚ್ಚಿನ ಮುಂದಿನ ಸಾಧನೆಗಳಿಗೆಲ್ಲ ದೇಹ ತನ್ನ ಅಡಿಯಾಳಾಗಿ ಬಗ್ಗುವಂತಾಗುತ್ತಿತ್ತು. ಈ ಕಾಲದಲ್ಲಿ ಮನೆಯಲ್ಲೇ ಬೆಳೆಯುವ ಹುಡುಗನು ಈ ಶಿಸ್ತು ಕಲಿಯದೆ ಹಾಳಾಗದಿರಬೇಕಾದರೆ ತಂದೆ, ಅದಕ್ಕಿಂತ ಹೆಚ್ಚು ತಾಯಿ, ಆಗಾಗ ಅಗತ್ಯವಾದ ಕಠಿಣತೆ ತೋರಿಸಲೇಬೇಕು. ತಾವೂ ಧರ್ಮ ಆಚರಿಸುತ್ತ ಮಕ್ಕಳಿಗೆ ಆದರ್ಶರಾಗಬೇಕೇ ಹೊರತು ತಾವೇ ದುರ್ಬಲತೆಗಳ, ದೋಷಗಳ ಮೇಲ್ಪಂಗ್ತಿಯಾಗುವುದಲ್ಲ.

ಬ್ರಾಹ್ಮಣ ಹುಡುಗ ನಾಲಿಗೆಗೆ ದಾಸನಾಗಲೇಕೂಡದು. ಈ ಕಾಲ ದಲ್ಲಂತೂ ಅದು ತೀರಾ ಅಪಾಯಂಕ್ಕೆ ಭ್ರಷ್ಟತೆಗೆ ನೂಕೀತು. ಗುರುಕುಲದಲ್ಲಿ ಭಿಕ್ಷೆಯಿಂದ ಬಂದ ಅನ್ನ (ಹಲವು ತರದವುಗಳ ಮಿಶ್ರಣ), ರುಚಿಗಲ್ಲ, ಕೇವಲ ದೇಹದ ಪೋಷಣೆಗಾಗಿ ಸಾಕಿತ್ತು. ನಡುನಡುವೆ ಮನೆಯ ತಿಂಡಿತಿನಿಸು ಇರಲೇ ಇಲ್ಲ. ಆದ್ದರಿಂದ ಮನೆಯಲ್ಲೂ ಕಟ್ಟುನಿಟ್ಟಾಗಿ ಒಮ್ಮೆ ಅಥವಾ ಎರಡು ಸಾರಿ ತಕ್ಕ ಕಾಲದಲ್ಲಿ ತಿಂಡಿತಿನಿಸಲ್ಲದೆ ಬೇರೆ ಕಾಲಗಳಲ್ಲಿ ಆಗಾಗ ಅವನ್ನು ಕೊಡಲೇ ಕೂಡದು. ಮಕ್ಕಳೇ ಕೈಹಾಕಿ ತಕ್ಕೊಳ್ಳುವ ಅಭ್ಯಾಸಕ್ಕೆ ಎಷ್ಟಕ್ಕೂ ಬಿಡಲೇ ಕೂಡದು. ಮಕ್ಕಳ ನಾಲಿಗೆ ಚಪಲತೆಯಿಂದ ತಾಯಿಗೆ ವಿಶೇಷವಾಗಿ ಅದು

ಮಾಡು, ಇದು ಮಾಡು, ಎನ್ನುವುದಕ್ಕೂ ಒಪ್ಪದೆ ಮುಂದಿನ ಹಬ್ಬದ ದಿನ ಮಾಡುವ, ಅಕ್ಕಬಂದಾಗ ಮಾಡುವ, ಎಂದು ಆ ಚಪಲತೆಯು ಅಭ್ಯಾಸಕುಂದಿಸ ಬೇಕು. ಅಂಗಡಿ ತಿಂಡಿಗಳ, ಪಾನೀಯಂಗಳ ಮೋಹ, ಬೀದಿಗಳಲ್ಲಿ ಮಾರುವ ತಿಂಡಿಗಳ ಆಸೆ, ಬ್ರಾಹ್ಮಣ ಮಕ್ಕಳಲ್ಲಿರಕೂಡದು. ಅಂಗಡಿಯು ವಿಪರೀತ ಎಂಜಲಮಯ ದೋಷ, ಡಬ್ಬಿ ತಿಂಡಿಗಳನ್ನು ಪಾನೀಯುಗಳನ್ನು ಅನೇಕ ಕಾರ್ಖಾನೆಗಳಲ್ಲಿ ಅತ್ಯಂತ ಕೆಳತರದ ಜನರಿಂದ (ಬಹಳ ಕಡಿಮೆ ಸಂಬಳಕ್ಕೆ ಬರು ತ್ತಾರೆಂದು) ಮಾಡಿಸುವ ದೋಷ, ರಸ್ತೆಯ ಧೂಳಾದ ತಿಂಡಿಗಳನ್ನು ಹಣ ವಿದ್ದವರು ಬಡ ಮಕ್ಕಳ ಬಾಯಿ ನೀರು ಬರುವಂತೆ ಅವರೆದುರೇ ತಿನ್ನುವ ನಮ್ಮ ಧರ್ಮ ಏನೂ ಮೆಚ್ಚದ ದೋಷ ಇರುವುದು, ಎಂದು ಎಲ್ಲ ವಿವರಿಸಿ ಆ ತರದ ಅಭಿರುಚಿಯಲ್ಲಿ ಅಸಹ್ಯ ಭಾವನೆ ಬೆಳೆಸಬೇಕು. ಮಕ್ಕಳು ಹಣ ಬೇಕಾದಂತೆ ಕೈಹಾಕಿ ತಕ್ಕೊಂಡು ಹೋಗುವ ಅಭ್ಯಾಸ ಬಹಳ ಕೆಡುಕಿಗೆ ಮೂಲ; ಅದಕ್ಕೆ ಆಸ್ಪದ ಕೊಡಲೇಕೂಡದು.

ನಾನು ಚಿಕ್ಕವನಿದ್ದಾಗ ಹಳ್ಳಿಗಳಲ್ಲಿ ಕಾಫಿ, ಟೀಗಳ ಅಭ್ಯಾಸವಿರಲಿಲ್ಲ. ಎಲ್ಲರೂ ೮ ಗಂಟೆ ತಮ್ಮ ಕೆಲಸ ಚೆನ್ನಾಗಿ ಮಾಡುತ್ತಿದ್ದರು. ಕಾಫಿಯು ಶಕ್ತಿ ಉಂಟುಮಾಡುವುದಿಲ್ಲ (ಅದನ್ನು ಪಾನಕವಾಡಲಾಪುದು; ಅಂತೆಯೇ ಆಹಾರ. ಅದು ಇದ್ದ ಶಕ್ತಿ ಬಡಿದೆಬ್ಬಿಸಿ ಉತ್ಸಾಹಕೊಡುವುದು ಮಾತ್ರ. ಅದರಿಂದಾಗಿ ಅನಂತರ ಶಕ್ತಿಕುಂದುವುದೂ ಹೆಚ್ಚು. ಅದರ ಅಭ್ಯಾಸ ಬಿಡಲಿಕ್ಕೂ ಕಷ್ಟ ಎಂಬುದು ಅದರ ಕೇವಲ ರಾಜಸಿಕತೆ ತೋರಿಸುತ್ತದೆ. ಅದರ ಅಭ್ಯಾಸ ಈಗ ಎಂಜಲಮಯ ಹೋಟೆಲ್ ಸಂಪರ್ಕ ತೀರಾಸಾಮಾನ್ಯ ಮಾಡಿದೆ; ಉಪವಾಸದ ಅಭ್ಯಾಸ ಬಹಳಮಟ್ಟಿಗೆ ನಾಶಮಾಡಿದೆ. ಅದು ಬ್ರಾಹ್ಮಣರಿಗೆ ಯೋಗ್ಯವಾದ ಸಾತ್ವಿಕ ಆಹಾರವೇ ಅಲ್ಲ. ಆರೋಗ್ಯಕ್ಕೂ ಹಾಳು. ಮಕ್ಕಳಿಗೆ ಅದನ್ನು ಕೊಡದಿರುವುದುತ್ತಮ.

ಬಂಧುಗಳನ್ನು ನೋಡಲು ಹೋಗುವಾಗ ಅಲ್ಲಿ ಮಕ್ಕಳಿಗೆ ಸ್ವಲ್ಪ ತಿಂಡಿ ಎಂದು ಮೇಲೆ ಹೇಳಿದ ಹೊಲಸು ವಾತಾವರಣದ, ಅಶುದ್ಧರ ನಿರ್ಮಾಣದ, ಚಾಕೊಲೇಟ್ ಬಿಸ್ಕೇಟು ಕೊಂಡು ಹೋಗುವ ಕ್ರಮ ಬ್ರಾಹ್ಮಣರಿಗೆ ಏನೂ ಸರಿಯಲ್ಲ. ಮಕ್ಕಳು ಈ ಕಾಲದ ಅಲ್ಪಮಟ್ಟದವರ ಅಪಾರ ಸಂಪರ್ಕದಿಂದ ಎಲ್ಲಿ ಬೇಕಾದರೂ ಏನು ಬೇಕಾದರೂ ತಿನ್ನಲುಕಲಿತರೆ ಮುಂದೆ ಮದ್ಯಮಾಂಸ ಗಳಿಗೆ ಬಲಿಬಿದ್ದು, ಧರ್ಮಭ್ರಷ್ಟತೆ, ವಿಪರೀತ ಖರ್ಚು, ಅಸಹ್ಯತೆ, ಆರೋಗ್ಯದ ಹಾನಿ, ಎಲ್ಲಾ ಹೊಂದುವ ಸಂಭವವಿದೆ!

ರಾಜ್ಯ ಕೇಂದ್ರ ಗ್ರಂಥಾಲಯ,
ಬೆಂಗಳೂರು.



**ಸಂಧ್ಯಾಕಾಲಗಳಲ್ಲೇ ಸಂಧ್ಯಾವಂದನೆಗಳ ಅವಶ್ಯಕತೆ :** ತುಂಬಾ ಬ್ರಾಹ್ಮಣರಿಂದ ತುಂಬಿದ್ದ ನನ್ನ ಊರಲ್ಲಿ ಅದೇಕೋ ತಿಳಿಯದು, ಸಕಾಲದಲ್ಲಿ ಬೆಳಗ್ಗಿನ ಸಂಧ್ಯೋಪಾಸನೆಕ್ರಮ ತಪ್ಪಿಹೋಗಿತ್ತು. ಇದಕ್ಕಾಗಿ ಸಾಮಾನ್ಯರಲ್ಲಿ ಬಹಳಬೇಗ ಏಳುವ ಅಭ್ಯಾಸವಿರಲಿಲ್ಲ. ಈಗ ಪೇಟೆಗಳಲ್ಲಿ ಬ್ರಾಹ್ಮಣಮಕ್ಕಳು ತಡಮಾಡಿ ಏಳುವ ಅಭ್ಯಾಸ ಹೆಚ್ಚುತ್ತಿದೆ. ಜನರಿಗೆ ಬೆಳಗ್ಗಿನ ತಿಂಡಿ, ಪತ್ರಿಕೆಯ ಓದು, ಮುಖಕ್ಷೌರ, ಕೆಲಸಕ್ಕೆ ಶಾಲೆಗೆ, ಹೋಗಲು ತಯಾರಿ, ಎಂದು ಸಂಧ್ಯಾವಂದನೆ ಚುಟುಕಾಗುತ್ತ ಬಂದು ಈಗ ಅದರ ಪೂರ್ಣ ಲೋಪ ಬಹಳ ಹೆಚ್ಚಿದೆ. ಆದರೆ ಗುರುಕುಲದಲ್ಲಿ ಗುರುವು ಬ್ರಾಹ್ಮೀ ಮುಹೂರ್ತಕ್ಕೆ ಏಳದಿರುತ್ತಿರಲಿಲ್ಲ. ಶಿಷ್ಯರು ಅವರಿಗಿಂತ ಮುಂಚೆ ಎದ್ದು ಅವರು ಮಲಗಿದ ನಂತರ ಮಲಗಬೇಕೆಂಬುದು ಶಾಸ್ತ್ರವಿಧಿಸಿದ ಶಿಸ್ತು. ಗುರುಕುಲದಲ್ಲಿ ಬ್ರಹ್ಮಚಾರಿಗಳು ತಪ್ಪದೆ ಬೇಗ ಏಳುತ್ತಿದ್ದರು. ತಡವಾಗಿ ಎದ್ದರೆ ಅವ ಮಹತ್ತಾದ ಪಾಪ ಹೊಂದುತ್ತಾನೆ ಎನ್ನುತ್ತದೆ ಮನುಸ್ಮೃತಿ ೨-೨೨೧. ಸೂರ್ಯೋದಯ ಕಾಲದಲ್ಲಾಗಲಿ ಸೂರ್ಯಾಸ್ತಮಾನಕಾಲದಲ್ಲಾಗಲಿ ಮಲಗಿಯೇ ಇದ್ದ ಬ್ರಹ್ಮಚಾರಿ ಬೆಳಗ್ಗೆ ಆದರೆ ಆ ಹಗಲೆಲ್ಲ ಉಪವಾಸಮಾಡಿ ಗಾಯತ್ರೀ ಜಪಿಸುತ್ತಿರಬೇಕು ; ಸಂಜೆ ಮಲಗಿದ್ದರೆ ಮರುದಿನ ಹಗಲೆಲ್ಲ ಹಾಗೆ ಉಪವಾಸ ಜಪ ಮಾಡಬೇಕು ಎಂದು ಪ್ರಾಯಶ್ಚಿತ್ತವಿದೆ ! (ಮನು ೨,೨೨೧)

ನಿತ್ಯದ ಪ್ರಾತಃ ಸಾಯಂ ಸಂಧ್ಯಾವಂದನೆಗಳನ್ನು ಬಿಟ್ಟವ ಶೂದ್ರ ಸಮಾನ. ಬ್ರಾಹ್ಮಣೋಚಿತ ಕರ್ಮಗಳಿಂದ ಅವನನ್ನು ಬಹಿಷ್ಕರಿಸಬೇಕು ಎಂದು ಶಾಸ್ತ್ರ ಹೇಳುತ್ತದೆ (ಮನು ೨,೧೦೩). ಇವನ್ನು ಯಾವಾಗಲಾದರೂ ಮಾಡಿದರಾಯಿತು ಎಂಬ ಈಗಿನ ಅನೇಕರ ಭಾವನೆಯು ತೀರಾ ತಪ್ಪು. ಮಕ್ಕಳಿಗೆ ಸಕಾಲದಲ್ಲಿ ಕಟ್ಟುನಿಟ್ಟಾಗಿ ಜಪ ಮಾಡುವ ಅಭ್ಯಾಸ ಹಿಡಿಸಿದರೆ ಮಾತ್ರ ಅವು ಜಪ ಮುಂದರಿಸುವ ಸಂಭವ ಹೆಚ್ಚು. ಆರೋಗ್ಯವಂತ ಬ್ರಹ್ಮಚಾರಿ ಬೆಳಿಗ್ಗೆ ಎದ್ದೊಡನೆ ಶೌಚಮುಗಿಸಿ ಮುಖತೊಳೆದು ತಣ್ಣೀರ ಸ್ನಾನ ಮಾಡಬೇಕು ; ಈ ಪ್ರಾಥಃಸ್ನಾನದಿಂದ ರೂಪವೂ ತೇಜಸ್ಸೂ ಮೇಧಾಶಕ್ತಿಯೂ ವೃದ್ಧಿಯಾಗುವವು. ಮನಸ್ಸು ಪ್ರಸನ್ನವಾಗುವುದು. ಜ್ಞಾನೋದಯವಾಗುವುದು (ವ್ಯಾಸಸ್ಮೃತಿ). ಸ್ನಾನವಿಲ್ಲದೆ ಜಪ ಹೋಮ ದೇವರ ಪೂಜೆ, ಅಗ್ನಿಕಾರ್ಯ ಮುಂತಾದ ಕರ್ಮಗಳನ್ನು ಮಾಡಲಿಕ್ಕೆ ಅಧಿಕಾರವೇ ಇಲ್ಲ. (ಮನು ೨,೧೭೬, ವ್ಯಾಸಸ್ಮೃತಿ). ಬೆಳಗಿನ ಜಪಕ್ಕೆ ಉತ್ತಮ ಕಾಲ. ನಕ್ಷತ್ರಗಳು ಕಾಣುವ ಮುಂಚೆ ಆರಂಭಿಸಿ ಸೂರ್ಯ ಉದಯಿಸುವವರೆಗೆ (ಇದರಿಂದ

ಪೂರ್ಣ ಪ್ರಯೋಜನ). ದೇವೀಭಾಗವತ ಸ್ಕಾ. ೧೧ ಅ. ೧೬ರಲ್ಲಿ ಹೇಳಿದೆ :

ಉತ್ತಮಾ ತಾರಕೋಪೇತಾ ಮಧ್ಯಮಾ ಲುಪ್ತತಾರಕಾ ।
ಅಧಮಾ ಸೂರ್ಯ ಸಹಿತಾ ಪ್ರಾತಸ್ಸಂಧ್ಯಾತ್ರಿಧಾಮತಾ ॥

ನಕ್ಷತ್ರಗಳು ಕಂತಿದ ನಂತರ, ಆದರೆ ಸೂರ್ಯೋದಯಕ್ಕೆ ಮುಂಚೆ ಆದರೆ ಅದು ಮಧ್ಯಮ ಪ್ರಯೋಜನ ಕೊಡುವ ಕಾಲ. ಸೂರ್ಯೋದಯ ಆದ ಮೇಲೆ ಆದರೆ ಅದು ಅಧಮ ಕಾಲ. ಆದಕ್ಕೆ ಗೌಣ ಕಾಲವೆಂದೂ ಹೆಸರಿದೆ. ಆಗ ಪ್ರಾಯಶ್ಚಿತ್ತ ಅರ್ಘ್ಯಕೊಟ್ಟು ಸೂರ್ಯನಿಗೆ ನಿತ್ಯದ ಅರ್ಘ್ಯ ಕೊಡಬೇಕು. ಈ ಗೌಣಕಾಲವೂ ಸೂರ್ಯೋದಯಂದ ೬ ಗಳಿಗೆವರೆಗೆ ಮಾತ್ರ ಉತ್ತಮ ಕಾಲದಲ್ಲಿ ಅಸಾಧ್ಯವಾದಾಗ ಜಪ ಗೌಣಕಾಲದಲ್ಲಿ ಮಾಡುವುದು.

ಮುಖ್ಯಕಾಲೇ ಯದಾವಶ್ಯಂ ಕರ್ಮ ಕರ್ತುನ ಶಕ್ಯತೆ ।
ಗೌಣ ಕಾಲೇಪಿ ಕರ್ತವ್ಯಂ ಗೌಣೋ ಪ್ಯೇತಾದೃಶೋಮತಃ ॥ (ಗೋಭಿಲ)

ಸಾಯಂಕಾಲದ ಸಂಧ್ಯಾವಂದನೆಗೆ (ಆಚಾರಮಯೂಖೇ ಧರ್ಮಸಾರಃ)

ಉತ್ತಮಾ ಸೂರ್ಯಸಹಿತಾ ಮಧ್ಯಾsನುದಿತ ತಾರಕಾ ।
ಅಧಮಾ ತಾರಕೋಪೇತಾ ಸಾಯಂ ಸಂಧ್ಯಾತ್ರಿಧಾಮತಾ ॥

ಸೂರ್ಯ ಮುಳುಗುವ ಮುಂಚೆ ಆರಂಭಿಸುವುದು ಉತ್ತಮ ಕಾಲ ; ಆಮೇಲೆ ನಕ್ಷತ್ರಗಳು ಉದಯವಾಗುವವರೆಗಿನ ಕಾಲದಲ್ಲಿ ಆರಂಭಿಸುವುದು ಮಧ್ಯಮ ಕಾಲ. ಮತ್ತು ನಕ್ಷತ್ರಗಳು ಉದಯಿಸಿದ ಅನಂತರವಾದರೆ ಅಧಮಕಾಲ (ಗೌಣಕಾಲ).

ಜಪವನ್ನು ಬೇರೊಂದರಲ್ಲಿ ಮನಸ್ಸಿಡದೆ ಜಪಿಸಬೇಕು (ಮನು ೨,೨೨೨), ಇದು ಸುಲಭವಾಗಲಿಕ್ಕೆ ಗಾಯತ್ರೀ ಮಂತ್ರದ ಶಬ್ದಗಳ ಅರ್ಥ ತಿಳಿದಿರುವುದೂ ಗಾಯಿತ್ರೀ ಚಿತ್ರ ಇರುವುದೂ ಸಹಾಯವಾಗುತ್ತದೆ. ಹೀಗೆ ಉತ್ತಮ ಕಾಲದಲ್ಲಿ ಸಂಧ್ಯೋಪಾಸನೆ ಮತ್ತು ಧಾರಾಳ ಜಪ ನಡೆಸುತ್ತ ಬಂದರೆ ಅದು ಧಾರ್ಮಿಕ ಶಕ್ತಿ ಬೆಳೆಸಲು ಧಾರಾಳವಾಗಿ ಪ್ರಯೋಜನವಾಗುತ್ತದೆಂದು ಸ್ವಂತ ಅನುಭವದಿಂದ ಭರವಸೆ ಕೊಡಲಾಪೆ. ಹೀಗೆ ಬೆಳಗ್ಗೆ ಬೇಗ ಏಳುವವನಿಗೆ ಜಪಕ್ಕೆ ಸಮಯವಿಲ್ಲ ಎಂಬ ನೆಪಕ್ಕೆ ಆಸ್ಪದವೇ ಬಾರದು. ಬ್ರಾಹ್ಮಣ್ಯದಲ್ಲಿ ಸ್ವಲ್ಪವಾದರೂ ಶ್ರದ್ಧೆಯಿದ್ದವ ಶ್ರೀ ಗಾಯತ್ರೀ ದೇವಿಯ ಸಹಾಯ ಪಡೆಯುವ ಅತ್ಯಂತ ಭಾಗ್ಯವಂತನಾಗಲು ಯತ್ನಿಸಲೇ ಬೇಕು. ಒಬ್ಬರು ೧೦೦೮ ಜಪದ ಕ್ರಮದಿಂದ ಎಂ.ಎ. ಪ್ರಥಮ ಸ್ಥಾನ ಪಡೆದೆ ಎಂದಿದ್ದರು !

ಗುರುಕುಲದಲ್ಲಿ ಜಪ ಪೂಜೆಗಳಿಗಲ್ಲದ ಇತರ ಸಮಯಗಳಲ್ಲಿ ಗುರುಸೇವೆಯಲ್ಲಿ ಅಥವಾ ವಿದ್ಯೆ ಬಲಪಡಿಸಿಕೊಳ್ಳುವುದರಲ್ಲಿ ಹೋಗುತ್ತಿತ್ತು. ಹೊರತು ಚಪಲ ಮನಸ್ಸಿನ ಸೆಳೆತ ಬೆಳೆಸುವ ವಿನೋದಗಳಲ್ಲಿ, ಆಟ ಕುಣಿತ ಪಟ್ಟಾಂಗ ಗಾಯನ ಅಲ್ಪರ ಹೊಲಸುಮಾತು ಕೇಳುವುದರಲ್ಲಲ್ಲ. ದೇಹದ ಮೇಲಿನ ಹತೋಟಿ ಬೆಳೆಸುತ್ತಿರುವುದಕ್ಕಾಗಿ ಕಾಡುದಾರಿಯಲ್ಲಿ ಕೂಡ ಪಾದರಕ್ಷೆ ಬೇಡ, ಕೊಡೆ ಬೇಡ, ಚಳಿಯಲ್ಲಿ ಸ್ನಾನಕ್ಕೆ ಬಿಸಿನೀರು ಬೇಡ, ರುಚಿಕರ ಊಟ ಬೇಡ ಎಂಬ ಕ್ರಮವೇ ರೂಢಿಯಾಗಿತ್ತು. ಭಾಗವತ ಹೇಳಿದಂತೆ :

ಏವಂ ವೃತ್ತೋ ಗುರುಕುಲೇ ವಸೇದ್ಭೋಗವಿವರ್ಜಿತ ॥

ಚಿಕ್ಕವನಾಗಿರುವಾಗ ಸಾಮಾನ್ಯ ಜೀವನದ ತೊಡಕುಗಳನ್ನು ನಿರ್ಲಕ್ಷಿಸಿ ಗೆಲ್ಲುವವ ಮಾತ್ರ ಮುಂದೆ ಬಹಳ ಕಷ್ಟದ ಧಾರ್ಮಿಕ ತೊಡಕುಗಳನ್ನೂ ಎದುರಿಸಿ ಮುಂದರಿಯುವ ಶಕ್ತಿ ಪಡೆದಾನು. ಈ ಕಾಲದ ಮಕ್ಕಳ ಅಭ್ಯಾಸ ಇದಕ್ಕೆ ತೀರಾ ವಿರುದ್ಧ. ಅವು ಆಟಕ್ಕೆ ಹಾಕುವ ಕಾಲಕ್ಕೆ ಮಿತಿಯೇ ಇಲ್ಲ. ಸಿನೆಮಾ, ಕತೆಕಾದಂಬರಿ, ಪಟ್ಟಾಂಗ, ಧೈರ್ಯವಿಲ್ಲದ ಸಂಗಾತಿಗಳ ಅಲ್ಪ ವಿನೋದಗಳಲ್ಲಿ ಸೇರುವುದು, ಇವು ಆಕರ್ಷಿಸುತ್ತಿರುತ್ತವೆ. ಬ್ರಾಹ್ಮಣ ಹುಡುಗರಿಗೆ ಅವು ವರ್ಜ್ಯವಾಗಬೇಕು. ಆಟ ಕೇವಲ ಸಂಜೆ ಮಾತ್ರ ಇರಲಿ, ಶಾಲೆಯಲ್ಲಿ ತುಂಬಿರುವ ಅಲ್ಪರ ಸಂಗಕ್ಕೆ ಸೇರದಿರಲಿಕ್ಕೆ ಶಾಲೆಗೆ ಬೇಕಾದ್ದಕ್ಕಿಂತ ಬೇಗ ಹೋಗುವುದು ಹಾನಿಕರ. ಮನೆಯಲ್ಲಿ ತಂದೆ ತಾಯಿ ಹೇಳಿದ ಕೆಲಸ ಸಂತೋಷದಿಂದ ಮಾಡಬೇಕು.

ಈ ಕಾಲದ ಅಪಾರ ಸಂಖ್ಯೆಯ ಕತೆಗಳು, ಕಾದಂಬರಿಗಳು, ಸಿನೆಮಾಗಳು ಕೇವಲ ಜನಸಾಮಾನ್ಯರ ವಿನೋದಕ್ಕಾಗಿ ತಯಾರಿಸಲ್ಪಟ್ಟವೇ ಹೊರತು, ಧರ್ಮ ಬೆಳೆಸಬೇಕೆಂಬ ಧ್ಯೇಯದಿಂದಲ್ಲ. ಉತ್ತಮರ ಸಂಗದಿಂದ ಉತ್ತಮರಾಗುತ್ತೇವೆ. ದುಷ್ಟರ ಸಂಗದಿಂದ ಕೆಟ್ಟವರಾಗುತ್ತೇವೆ. ಅಂತೆಯೇ ಕೇವಲ ವಿನೋದಕ್ಕೆಂದೇ ಅವನ್ನು ಓದಿದರೂ, ಕಂಡರೂ, ಅಲ್ಪರ ಅಭಿರುಚಿಗೆ ತಕ್ಕುದಾಗಿ ಅವಲ್ಲಿ ತುಂಬಿರುವ ಅಲ್ಪತೆ, ಮಸಿ ತುಂಬಿದ ಕೋಣೆಯಲ್ಲಿ ತಿರುಗಿದವನಿಗೆ ಮಸಿ ತಪ್ಪದೆ ಹಿಡಿಯುವಂತೆ, ಉತ್ತಮ ಬುದ್ಧಿಯನ್ನೂ ಕ್ರಮೇಣ ಕೆಡಿಸುತ್ತವೆ. ಆದ್ದರಿಂದ ಹಿರಿಯರು ನೋಡಿ ಮೆಚ್ಚಿ ಓದಲು ನೋಡಲು, ಹೇಳಿದ ಪುಸ್ತಕ, ಅಪರೂಪದ ಸಿನೆಮಾ, ಮಾತ್ರ ಬ್ರಾಹ್ಮಣ ಮಕ್ಕಳು ನೋಡಬೇಕು, ಇತರವನ್ನಲ್ಲ. ಬ್ರಾಹ್ಮಣ ದೇಹಕ್ಕೆ ಮಾಂಸ ಮದ್ಯ ತ್ಯಜಿಸುವಂತೆ ಮನಸ್ಸಿಗೆ ಹೊಲಸನ್ನು ತ್ಯಜಿಸಬೇಕು. ಸಿನೆಮಾಗಳ ಮತ್ತೊಂದು ಹಾನಿ

ಯೆಂದರೆ ಪ್ರೇಕ್ಷಕರನ್ನು ಪ್ರಯಾಸವಿಲ್ಲದೆ ವಿನೋದದಲ್ಲಿ ಮುಳುಗಿಸುತ್ತ ಹೋಗುವ ಅವು ವಿದ್ಯಾರ್ಥಿಯಲ್ಲಿ ಪಾಠಕ್ಕೆ ಹಾಕಬೇಕಾದ ಮನಸ್ಸಿನ ಪ್ರಯಾಸ ಗೆಲ್ಲುವುದು ಅಸಾಧ್ಯ ಮಾಡುತ್ತವೆ. ಪಾಠ ಏನೂ ಒಗ್ಗದು, ರುಚಿ ಇಲ್ಲದ್ದು. ಆಗುತ್ತದೆ. ವಿದ್ಯಾರ್ಥಿಗಳು ಈ ಕಾಲದಲ್ಲಿ ನಕಲು ತೆಗೆದು ಪಾಸಾಗಲು ಬಿಡಬೇಕು ಎಂದು ನಾಚಿಕೆ ಬಿಟ್ಟು ಹಠ ಸಾಧನೆ ಮಾಡುವ ವಿಚಿತ್ರ ವರ್ತನೆಗೆ ವಿಪರೀತ ಸಿನೆಮಾಗಳನ್ನು ಕಾಣುತ್ತಿರುವುದೇ ಕಾರಣ. ಇದೂ ಅಲ್ಲದೆ ಸಿನೆಮಾದಲ್ಲಿ ಆಕರ್ಷಣೆ ತುಂಬಲಿಕ್ಕೆ ಬಹಳ ಕೃತಕತೆಯಿರುವ ಕತೆ ಹೆಣೆದಿರು ವುದರಿಂದ, ಜೀವನದ ವಿಚಾರ ವಕ್ರತರದ ಭಾವನೆ ಮಾತ್ರ ಉಂಟುಮಾಡು ತ್ತವೆ, ಸತ್ಯ ಸ್ವರೂಪದ್ದಲ್ಲ. ಪರಿಣಾಮ ತಪ್ಪು ಭಾವನೆಗಳು.

ಮಕ್ಕಳಲ್ಲಿ ಕಾಮುಕ ಭಾವನೆ ಎಷ್ಟಕ್ಕೂ ಬೆಳೆಯಲು ಬಿಡಕೂಡದು. ಗುರುಕುಲದ ಶುದ್ಧ ವಾತಾವರಣದಲ್ಲಿ ಕಾಮುಕತೆಗೆ ಹೆಚ್ಚು ಆಸ್ಪದವಿರಲಿಲ್ಲ. ಆದರೆ ಈಗ ಶಾಲೆಗಳಲ್ಲಿ ಹುಡುಗಿಯರೂ ತುಂಬಿದ್ದು ಬೀದಿ ಕಾಮಣ್ಣನವರ ಮೇಲ್ಪಂಕ್ತಿಗಳೂ ಧಾರಾಳ ಇವೆ. ಅನೇಕ ಹುಡುಗಿಯರಿಗೆ ವ್ಯಭಿಚಾರ ಒಂದು ದೋಷವೆಂಬ ಭಾವನೆಯೇ ಇಲ್ಲ. ಈ ಭಾಗದ ಅಪಾಯ ಅರಿತಿರ ಬೇಕು. ಮಕ್ಕಳು ವೇಷಭೂಷಣ ತೀರಾ ತೀರಾ ಸಾಮಾನ್ಯತರದ್ದಾಗಿ ಮಾಡಿಕೊಳ್ಳಬೇಕು (ಕ್ರಾಪು ಬೇಡ). ಹುಡುಗಿಯರ ಹತ್ತಿರದ ಸಂಪರ್ಕ ಉಂಟುಮಾಡುವ ಕಮಿಟಿಗಳು, ನಾಟಕಗಳು, ನಾಟಕಗಳಲ್ಲಿ ವೇಷ, ಮುಂತಾದುವನ್ನು ತಪ್ಪಿಸಿಕೊಳ್ಳಬೇಕು. ಹೊಲಸು ಮಾತು, ಚಿತ್ರಗಳು, ಕತೆಗಳು ವರ್ಜ್ಯವಾಗಬೇಕು. ಬ್ರಹ್ಮಚರ್ಯದ ಹಿರಿಮೆ ಹೊಗಳುವ ಉತ್ತಮ ಪುಸ್ತಕ ಓದಬೇಕು. ಉಪಾಧ್ಯಾಯರ ಧಿಕ್ಕಾರ, ಅಪಮಾನ, ಮಾಡುವುದರಲ್ಲಿ ಸೇರಲೇಕೂಡದು. ಬ್ರಾಹ್ಮಣ ವಿದ್ಯಾರ್ಥಿಗಳು ಆದಷ್ಟು ಅತಿಸುಲಭ ಬಟ್ಟೆಬರೆ (ಹಿಜಾರಕ್ಕಿಂತ ಧೋತ್ರ ಉತ್ತಮ) ಫ್ಯಾಶನಿನ ತಿರಸ್ಕಾರ ಭಸ್ಮ ಮುಂತಾದ ಧರ್ಮದ ಚಿಹ್ನೆ ಧಾರಣೆ, ಬ್ರಹ್ಮಚಾರಿ ಜೀವನ ಬೇಕಾದ ವರು, ಇತರ ವರ್ತನೆಗಳಲ್ಲಿ ಸೇರುವವರಲ್ಲ, ಎಂಬ ಸರ್ವತ್ರ ಅಭಿಪ್ರಾಯ ಬೆಳೆಸುವುದು ಉತ್ತಮವಾದೀತು. ಮಕ್ಕಳಿಗೆ ಸಾತ್ವಿಕ ಆಹಾರ ಮಾತ್ರವಲ್ಲ ಮಡಿಯಲ್ಲಿ ಮಾಡಿ ದೇವರಿಗೆ ಅರ್ಪಿಸಿದ ಅನ್ನ ಪ್ರಸಾದ, ಸಹಾಯಕ. ಮನೆ ಯಲ್ಲಿ ಹೊರಗಿನ ಬಟ್ಟೆ ಉಪಯೋಗಿಸದಿರುವುದು, ತಾಯಿ ತಂದೆ ಇಬ್ಬರೂ (ಅದು ಸಾಧ್ಯವಿಲ್ಲದಲ್ಲಿ ತಾಯಿಯಾದಗೂ) ಧಾರ್ಮಿಕ ಗ್ರಂಥಗಳನ್ನು ಓದುತ್ತ ಮಕ್ಕಳ ಹಿತಕ್ಕೆ ಬೇಕಾದ ಬೋಧನೆ ಕೊಡುತ್ತಿರುವುದು, ಧಾರ್ಮಿಕ ಗ್ರಂಥಗಳ

ಅಧ್ಯಯನ ಮಾಡಿಸುವುದು ಅಗತ್ಯ. ಸೆಕ್ಯುಲರ್ ಸರ್ಕಾರಕ್ಕೆ ಮಕ್ಕಳ ಶೀಲದ ಯೋಚನೆಯೇ ಇಲ್ಲದಿದ್ದುದು ದೇಶದ ದುರಾದೃಷ್ಟ. ಕಡೇ ಅಧ್ಯಾಯ ನೋಡಿರಿ.

**ಪರೋಪಕಾರಾಯ ಪುಣ್ಯಾಯ ಪಾಪಾಯ ಪರಪೀಡನಂ :** ಮೇಲಿನ ವಾಕ್ಯಧರ್ಮದ ಸಾರದ ಅತಿ ಸುಲಭ ರೂಪ ಮಕ್ಕಳು ತಿಳಿದಿರ ಬೇಕು. ಮುಂಚೆ ತಾಯಿ ಮಕ್ಕಳನ್ನು ಧರ್ಮದ ದಾರಿಯಲ್ಲಿ ತರಬೇತು ಮಾಡಲಿಕ್ಕೆ ಆ ಪ್ರಾಣಿ ಕೊಲ್ಲಬೇಡ. ಏಕೆ? ಅದು ಪಾಪ ಕಾರ್ಯ; ಆ ಭಿಕ್ಷುಕನಿಗೆ ಈ ತಿಂಡಿಕೊಡು. ಏಕೆ? ಪುಣ್ಯ ಬರುತ್ತದೆ—ಎಂಬ ಅತಿ ಚುಟುಕು ವಿವರಣೆ ಮಕ್ಕಳನ್ನು ತಿದ್ದಲಿಕ್ಕೆ ಧಾರಾಳ ಸಾಕಾಗುತ್ತಿತ್ತು. ಕ್ರಿಶ್ಚನ್ ಮುಂತಾದ ಸುಲಭ ಧರ್ಮಗಳು, ನಾವೆಲ್ಲರೂ ದೇವರ ಮಕ್ಕಳು ; ಆದ್ದರಿಂದ ದೇವರು ಪರೋಪಕಾರದ ಪುಣ್ಯಕಾರ್ಯ ಮೆಚ್ಚಿ ನಮ್ಮ ಏಳಿಗೆ ನಡೆಸುತ್ತಾನೆ; ಪರಪೀಡನೆಯ ಪಾಪಕಾರ್ಯ ಅವ ಒಪ್ಪದೆ, ಶಿಕ್ಷಿಸುತ್ತಾನೆ, ಎಂಬ ವಿವರಣೆ ಕೊಡುತ್ತವೆ. ನಮ್ಮ ಧರ್ಮ ಮತ್ತೂ ಆಳದ್ದು. ನಾವು ಗಾಢನಿದ್ರೆಯಲ್ಲಿದ್ದು ನಮ್ಮ ದೇಹ, ಮನಸ್ಸು ಬುದ್ಧಿ ಜಡವಾಗಿ ಬಿದ್ದಿರುವಾಗಲೂ ನಮ್ಮನ್ನು ಬಾಳಿಸುವ ಭಾಗ ಅತ್ಯಂತ ಸೂಕ್ಷ್ಮವಾದ ನಮ್ಮ ಆತ್ಮ, ಮನುಷ್ಯರ, ಪ್ರಾಣಿ ಗಳ ಎಲ್ಲರ ಆತ್ಮಗಳೂ ಪರಮಾತ್ಮನಿಂದ ಬಂದವು ; ಅವನ ಅಂಶ ; ಅವನ ಬೃಹದ್ ದೇಹದ ಭಾಗಗಳಂತೆ. ಕಾಲಿಗೆ ಬಹಳ ಪೆಟ್ಟಾದಾಗ ಕೈಯ್ಯು ಅದರ ಶುಶ್ರೂಷೆಗೆ ಹೋದಂತೆ, ಪರರು ನಮ್ಮವರೇ ಎಂದು ಅವರ ಕಷ್ಟ ದಲ್ಲಿ ಸಹಾಯಕ್ಕೆ ಹೋಗಬೇಕೇ, ಹೊರತು ಅವರಿಗೆ ಕೇಡು ಮಾಡಬಾರದು. ನಮ್ಮ ಕಷ್ಟದಲ್ಲಿ ಇತರರು ಸಹಾಯಕ್ಕೆ ಬಂದರಾದೀತು, ಬಂದಾಗ ಸಂತೋಷ ವಾಗುತ್ತದೆ, ಎಂಬ ಭಾವನೆ ನಮಗೆ ಇತರರ ವಿಷಯದಲ್ಲೂ ಬೇಕು. ಇತರ ಸುಲಭ ಧರ್ಮದವರು ಪ್ರಾಣಿಗಳಲ್ಲೂ ಆತ್ಮ ಇದ್ದಾನೆಂದು ತಿಳಿಯರು (ಆದರೆ ಮನುಷ್ಯ ಪ್ರಾಣಿಯಾಗಿ ಪುನರ್ಜನ್ಮ ಪಡೆದ ಕತೆಗಳಿಗೆ ಧಾರಾಳ ಆಧಾರಗಳಿರುವುದನ್ನು ನನ್ನ **'ಪುನರ್ಜನ್ಮ'** ಪುಸ್ತಕದಲ್ಲಿ ನೋಡಬಹುದು). ಆ ಧರ್ಮಗಳ ಮಕ್ಕಳು ದಾರಿಯಲ್ಲಿ ಕಂಡ ಕೆಲವು ಪ್ರಾಣಿಗಳಿಗೆ ಕಲ್ಲೆಸೆಯು ವುದು, ಕೊಲ್ಲುವುದು ಸಾಮಾನ್ಯ ಕ್ರಮ. ಬ್ರಾಹ್ಮಣ ಬ್ರಹ್ಮಚಾರಿ ಹಾಗೆಂದೂ ಮಾಡಕೂಡದು ಎಂದು ಶಾಸ್ತ್ರ ಹೇಳುತ್ತದೆ. ಇತರರಿಗೆ, ಇತರ ಪ್ರಾಣಿಗಳಿಗೆ, ಏನೂ ಕಷ್ಟ ಕೊಡದೆ ಬಾಳುವುದು ಕಷ್ಟ. ಆದರೆ ಧರ್ಮದ ದಾರಿಯಲ್ಲಿ ಮುಂದುವರಿದಂತೆ ಆ ಸಾಧನೆ ಹೆಚ್ಚು ಹೆಚ್ಚು ನಡೆಸಲು

ಯತ್ನಿಸಬೇಕು. ಕಳದಿರುವುದು, ವಂಚನೆ ಮಾಡದಿರುವುದು, ಅಹಿಂಸೆ, ಸತ್ಯ, ಕ್ಷಮೆ, ದಾನ, ಪರೋಪಕಾರ ಎಲ್ಲ ಉತ್ತಮ ಗುಣಗಳೂ ಇತರರೂ ನಮ್ಮಂತೆ ಆತ್ಮವತ್ ಎಂದು ಕಾಣಲು ಕಲಿಯುವುದೇ ಧರ್ಮದ ಅಭ್ಯಾಸ.

ಆತ್ಮವತ್ಸರ್ವ ಭೂತಾನಿ ಯಃ ಸಪಶ್ಯತಿ ॥

# ೧೧. ಪಿತೃಭಕ್ತಿ ಮತ್ತು ಶ್ರಾದ್ಧಗಳ ಅವಶ್ಯಕತೆ

ನಾವು ಒಬ್ಬನನ್ನು ವಂಚಿಸಿ ಪ್ರಯೋಜನ ಪಡೆದರೆ ಗೆದ್ದೆವು ಎಂದು ಭಾವಿಸುವುದು ಮೂರ್ಖತನ. ದೇವರರಾಜ್ಯದಲ್ಲಿ, ಮುಂದೆ ಹಾಗೆ ಅನ್ಯಾಯ ದಿಂದ ತಿಂದದ್ದನ್ನು ಅವ ಕಕ್ಕಿಸಿಯೇ ಬಿಡುತ್ತಾನೆ. ಅಷ್ಟರವರೆಗೆ ಅದರಿಂದ ಕಷ್ಟವೂ ತಪ್ಪದು (ಕಲ್ಕತ್ತಾದ ಟ್ರೂತ್‌ಪತ್ರಿಕೆಯಲ್ಲಿ ನಿಜವಾಗಿ ನಡೆದದ್ದೆಂದು ಒಂದು ಘಟನೆಯ ವರದಿ ಬಂದಿತ್ತು). ಒಬ್ಬನಿಗೆ ಥಕ್ಕನೆ ಒಂದು ನಾಯಿ ಮಾನವ ಭಾಷೆಯಲ್ಲಿ—ನಾನು ಈ ಹಿಂದೆ ನಿನ್ನ ತಂದೆ ಆಗಿದ್ದೆ. ಒಬ್ಬರ ಹೆಸರು ಹೇಳಿ, ಇಂಥವರಿಂದ ಸಾಲಮಾಡಿ ಹಣ ಹಿಂದಕ್ಕೆ ಕೊಡದೆ ಮರಣ ಹೊಂದಿ ಈಗ ಅವರ ಮನೆ ಕಾಯುವ ಈ ನಾಯಿ ಜನ್ಮ ಬಂದಿದೆ. ಈ ಋಣದ ಬಾಧೆ ನನ್ನನ್ನು ಬಹಳ ಪೀಡಿಸುತ್ತಿದೆ. ನೀನು ಹೇಗಾದರೂ ಮಾಡಿ ಆ ಸಾಲ ಬೇಗ ತೀರಿಸಬೇಕು–ಎಂದು ಬೇಡಿಕೊಂಡಿತು. ಇದನ್ನು ಕೇಳಿ ಬಹಳ ಆಶ್ಚರ್ಯವೂ ವ್ಯಸನವೂ ಉಂಟಾದ ಮಗ ಅನಂತರ ಆ ಸಾಲ ತೀರಿಸಿದೊಡನೆ ಆ ನಾಯಿ ಸತ್ತಿತು. ನಮ್ಮ ಹಿಂದಿನ ಎಷ್ಟೋ ವ್ಯರ್ಥ ಜನ್ಮಗಳಲ್ಲಿ ಹೀಗೆ ಹಿಂದಿನ ಋಣ ತೀರಿಸುವುದೇ ಒಂದು ಮುಖ್ಯ ಅಂಶ ಆಗಿದ್ದಿರಬೇಕು (ಒಮ್ಮೆ ಡೋಲ್ಫಿನ್ ಹಕ್ಕಿ ಮಾನವರ ಭಾಷೆಯಲ್ಲಿ ಮಾತಾಡಿದ ವಾರ್ತೆ ಲಂಡನ್ನಿನ ಟೈಮ್ಸ್ ಪತ್ರಿಕೆಯಲ್ಲಿ ಬಂದಿತ್ತು).

ಜೀವನದ ಇತರ ವಿಭಾಗಗಳಲ್ಲಿ ನಾವು ಆದಷ್ಟು ಮಟ್ಟಿಗೆ ಇತರರ ಋಣಕ್ಕೆ ಬೀಳದೆ ಬಾಳಬೇಕು ; ಆದರೆ ಪಿತೃ, ದೇವ, ಋಷಿಋಣಗಳಿಂದ ತಪ್ಪಿಸಿಕೊಳ್ಳಲಾರೆವು. ಆದ್ದರಿಂದ ಅವಕ್ಕೆ ಶಾಸ್ತ್ರ ಪರಿಹಾರಕ್ಕೆ ಹೇಳಿದ ದಾರಿ ಅನುಸರಿಸಲೇಬೇಕು. ತಾಯಿ ಮಗುವಿಗಾಗಿ ಎಷ್ಟೆಲ್ಲ ಕಷ್ಟ ಪಡು ತ್ತಾಳೆ! ತನ್ನ ರಕ್ತಕೊಟ್ಟು ಬೆಳೆಸುತ್ತ ಬಹಳಕಾಲ ಗರ್ಭದಲ್ಲಿ ಹೊತ್ತು ಕೊಂಡಿರುತ್ತಾಳೆ. ಅನಂತರ ತನ್ನ ಹಾಲು ಕೊಟ್ಟು, ತೋಟಿಯಂತೆ ಮಲ

ತೆಗೆದು, ರಟ್ಟೆ ನೋಯುವಂತೆ ಹೊತ್ತು ತಿರುಗಿ ಅಥವಾ ತೊಟ್ಟಿಲು ತೂಗುತ್ತ, ಅದರ ಅರ್ಥವಿಲ್ಲದ ಹಠ ಸಹಿಸುತ್ತ, ರಾತ್ರಿ ಎಷ್ಟೋ ಸಾರಿ ನಿದ್ದೆಗೆಟ್ಟು ಕಾಲಲ್ಲಿ ಆಡಿಸುತ್ತ, ಕಾಯಿಲೆಯಲ್ಲಿ ಬಹಳ ನಿದ್ರೆ ಬಿಡುತ್ತ, ಪೋಷಿಸುತ್ತಾಳೆ. ತನಗೆ ರುಚಿ ತಿಂಡಿ ಸಿಕ್ಕಿದರೂ ಮಗುವಿಗೆ ಒಂದು ಭಾಗ ಕೊಡದೆ ಇರುವುದಿಲ್ಲ. ತಂದೆಯೂ ಮಕ್ಕಳಿಗಾಗಿ ಕೇವಲ ತನ್ನ ಆರೈಕೆಗೆ ಬೇಕಾದುದರ ನಾಲ್ಕು ಪಾಲು ಹೆಚ್ಚು ಶ್ರಮ ವಹಿಸಿ ಕೆಲಸ ಮಾಡುತ್ತಿರುತ್ತಾನೆ. ತನ್ನ ಭೋಗವನ್ನು ತ್ಯಾಗ ಮಾಡುತ್ತಾನೆ. ಮತ್ತು ಮಕ್ಕಳಿಗಾಗಿ ಅವರಿಬ್ಬರೂ ಹೀಗೆ ಎಷ್ಟೆಲ್ಲ ವರ್ಷ ತಮ್ಮ ಜೀವ ಸವೆಯುತ್ತಾರೆ! ಆದ್ದರಿಂದ ಮಗ ದೊಡ್ಡದಾಗಿ ಶಕ್ತಿ ಬಂದಾಗ, ತಂದೆ ತಾಯಿ ಮುದುಕರಾಗಿ ಅಬಲರಾದಾಗ, ಅವರ ಸೇವೆ ಮಾಡಿ ಈ ಋಣ ತೀರಿಸುವುದು ಅತ್ಯಗತ್ಯವೆಂದು ನಮ್ಮ ಶಾಸ್ತ್ರ ಸಾರುತ್ತ ಬಂದಿದೆ. ಅದು ನಮ್ಮ ಧಾರ್ಮಿಕ ನಾಗರಿಕತೆಯ ಅಗತ್ಯ ಭಾಗವಾಗಿತ್ತು. ಮುದಿ ತಂದೆತಾಯಿಗಳ ಆರೈಕೆಯ ಭಾರ ವಹಿಸುವುದು ಸರ್ವತ್ರ ಕ್ರಮವಾಗಿತ್ತು. ಆದರೆ ಈಗಿನ ನಾಸ್ತಿಕ ಸರ್ಕಾರ ಪ್ರೇರಿಸುವ ಧರ್ಮದ ತಳಹದಿಯಿಲ್ಲದ ಪಾಶ್ಚಾತ್ಯರ ಜೀವನಕ್ರಮದ ಅನುಕರಣೆ ದಿನದಿನಕ್ಕೆ ಹೆಚ್ಚುತ್ತ ಬಂದು ದೇಶದಲ್ಲಿ ಪಿತೃ ಋಣದ ಕಲ್ಪನೆ ನಾಶಮಾಡುತ್ತಿದೆ. ಪಾಶ್ಚಾತ್ಯರಲ್ಲಿ ಯಾರೂ ಮುದಿ ತಂದೆತಾಯಿಗಳನ್ನು ಸಾಕುವ ಕ್ರಮವಿಲ್ಲ, ಅಲ್ಲಿ ಯುವಕರ ಸರ್ವತ್ರ ಭಾವನೆ ಮಕ್ಕಳನ್ನು ಸಾಕುವುದು ತಂದೆತಾಯಿಗಳ ಕರ್ತವ್ಯ. ಮೃಗಗಳಲ್ಲಿದ್ದಂತೆ ಅದು ಕೇವಲ ಸ್ವಾಭಾವಿಕ ಹೊರತು ಮಕ್ಕಳು ತಂದೆತಾಯಿಗಳನ್ನು ಸಾಕುವುದಲ್ಲ ಎಂಬುದಾಗಿದೆ. ಆದ್ದರಿಂದ ಹದ್ದು, ತೋಳ ಮುಂತಾದವು ತಮ್ಮ ರೆಕ್ಕೆಕಾಲು ಬಲಿತೊಡನೆ ದೂರ ಹೋಗಿ ಬಿಡುವಂತೆ, ಬೆಳೆದ ಮಕ್ಕಳು ಬೇರೆಯಾಗುತ್ತಾರೆ; ಆದರೆ ದೇವರು ಪ್ರಾಣಿಗಳಿಗೆ ಆ ಸ್ವಭಾವ ಕೊಡಲಿಕ್ಕೆ ಕಾರಣವಿದೆ. ಪ್ರಾಣಿಗಳು ತಮ್ಮ ಆಹಾರ ಬೆಳೆಸಲಾರವು, ಮರಿಗಳೆಲ್ಲ ಹುಟ್ಟಿದಲ್ಲೇ ಉಳಿದರೆ ಅಲ್ಲಿ ಯಾರಿಗೂ ಆಹಾರ ಸಾಕಾಗದೆ ಸಾಯದಿರವು. ಮತ್ತು ಪ್ರಾಣಿಗಳಿಗೆ ಮುದಿ ತಂದೆತಾಯಿಗಳ ಬಲಹೀನ ಸ್ಥಿತಿಯ ಕಷ್ಟ ಅರ್ಥವಾಗದು. ಕನಿಕರಬಾರದು. ನೈತಿಕತೆಯ ಕಲ್ಪನೆಯಿಲ್ಲದ ಅವು ಕೃತಜ್ಞತೆಯ ಭಾವನೆ ಇಲ್ಲದವು, ಆದರೆ ಬುದ್ಧಿಯಿರುವ, ನೈತಿಕತೆ ಬೆಳೆಸಬೇಕಾದ ಮಾನವನಿಗೆ ಪ್ರಾಣಿಗಳು ಮೇಲ್ಪಂಕ್ತಿಯಾಗಲಾರವು. ಅವುಗಳ ದೃಷ್ಟಾಂತ ಎತ್ತಿ ಹಿಡಿಯುವವ ಮೂರ್ಖನೇ ಸರಿ.

ಪಾಶ್ಚಾತ್ಯರಲ್ಲಿ ಈಗ ಮುದುಕರ ಗತಿ ತೀರಾ ಶೋಚನೀಯ. ಮನುಷ್ಯ ಆಶಿಸುವ ಪ್ರೀತಿ ಆದರಗಳ ತುಣುಕೂ ಕಾಣದೆ ನಿರಾಶರಾಗಿ, ಯೌವನ ಕಾಲದ ವಿಪರೀತ ಭೋಗದ ತೀರಾ ವಿರುದ್ಧದ ಸ್ಥಿತಿಯಲ್ಲಿ ಕಂಗಾಲಾಗಿ, ಅನಾಥಾಲಯಗಳ ನೌಕರರು ಕೊಳ್ಳೆಹೊಡೆದು ಉಳಿದುದರಲ್ಲಿ ಲಭಿಸುವ ಏನೂ ಒಗ್ಗದ ತಿನಿಸು ನುಂಗುತ್ತ, ಅಥವಾ ಸುಳ್ಳು ರೋಗ ನಟಿಸಿ, ಆಸ್ಪತ್ರೆಗಳ ಎಷ್ಟೋ ಉತ್ತಮ ಆಹಾರಕ್ಕಾಗಿ ಅಲ್ಲಿ ಸೇರಿಕೊಳ್ಳುತ್ತ, ಅಥವಾ ಸ್ವಂತ ಹಣದಿಂದ ತಿಂಡಿ ಕೊಂಡುಕೊಂಡು ಬಾಳುತ್ತಾರೆ. ಹೀಗೆ ತೀರಾ ಒಕ್ಕಂಟೀ ಜೀವನ ನಡೆಸಿ ಸತ್ತರೂ ಗೊತ್ತಾಗದ ಸ್ಥಿತಿಯಲ್ಲಿ ಬಹಳ ಜನರು ದಿನ ದೂಡುತ್ತಾರೆ, ಅಲ್ಲಿನ ಈ ಕಾಲದ ಮಕ್ಕಳಿಗೆ ಈ ಮುದುಕರೆಂದರೆ ಅಸಹ್ಯ! ಎಷ್ಟಕ್ಕೂ ಮಾತಾಡಿಸರು! ಆದ್ದರಿಂದ ಅನೇಕ ಮುದುಕರು, ತಾವು ಏಕೆ ಬಾಳಬೇಕು ಎಂದು ಆತ್ಮಹತ್ಯೆ ಮಾಡಿಕೊಳ್ಳುವುದೂ ಉಂಟು! ಇಂಗ್ಲೆಂಡಲ್ಲಿ ಲಾರ್ಡ್ ಬೆವರಿಜ್ಜರು ಅನಾಥ ಮುದುಕರಿಗೆ ಸರ್ಕಾರದ ಅನಾಥಾಲಯಗಳ ವ್ಯವಸ್ಥೆ ಮಾಡಿದರು (ಸುಮಾರು ೭೦ ವರ್ಷಗಳ ಹಿಂದೆ ಇರಬೇಕು). ಆದರೆ ಅದಕ್ಕೆ ಸರಿಯಾಗಿ ಸ್ತ್ರೀ ಸ್ವಾತಂತ್ರ್ಯದ ಭಾವನೆಯೂ ಹಕ್ಕಿನ ಸರಿಸಮಾನತೆಗಳ ಭಾವನೆಗಳೂ ಉಂಟಾದವು. ಆಗ ಒಂದೇ ಸವನೆ ಗೃಹಿಣಿಯರು ಇನ್ನು ಅತ್ತೆ ಮಾವಂದಿರು ತಮ್ಮ ಜೀವನಕ್ಕೆ ಏಕೆ ಹೊರೆಯಾಗಿರಬೇಕು? ಎಂದು ಅವರನ್ನು ಅನಾಥಾಲಯಗಳಿಗೆ ಓಡಿಸಿದರು. ಇದನ್ನು ಕಂಡು ಬೆವರಿಜ್ಜರು ತಾನು ಇಂಥ ಭಯಂಕರ ನಿಷ್ಕರುಣೆಗೆ ಕಾರಣನಾದೆನಲ್ಲ ಎಂದು ತನ್ನ ವ್ಯಸನ ಸಾರಿದ್ದುಂಟು! ಕುಡುಕನಿಗೆ ಮುಂದೆ ತನ್ನ ಗತಿ ಏನು ಎಂಬ ಭಾವನೆಯೇ ಬಾರದು. ಅಂತೆಯೇ ಈ ತರದ ಗಂಡಹೆಂಡಿರಿಗೆ ತಾವೂ ಮುದುಕರಾಗಿ ಮುಂದೆ ಗತಿಹೀನರಾಗುತ್ತೇವಲ್ಲ ಎಂಬ ಕಲ್ಪನೆಯೇ ಇರುವುದಿಲ್ಲ. ದೇವರು ಬುದ್ಧಿಕೊಟ್ಟದ್ದು ವ್ಯರ್ಥಕ್ಕೆ!

ಕೃತಘ್ನನಷ್ಟು (ಮಾಡಿದ ಉಪಕಾರ ಎಣಿಸದವ) ಪಾಪಿಷ್ಠ ಮತ್ತಾರಿಲ್ಲ. ಅವನಿಗೆ ದೇವರ ಶಿಕ್ಷೆ ಅತಿ ಹೆಚ್ಚು ಎನ್ನುತ್ತಿದೆ ಶಾಸ್ತ್ರ. ಆದ್ದರಿಂದ ಪಿತೃಋಣಕ್ಕೆ ಧರ್ಮಿಷ್ಠರು ಬೀಳದಂತೆ ನಮ್ಮ ಧರ್ಮವು ತಕ್ಕ ಕ್ರಮಗಳನ್ನು ನಿರ್ಮಿಸಿತ್ತು. ಸಾಮಾನ್ಯವಾಗಿ ಬಲಿಷ್ಠರು, ಸಂಪಾದನೆ ಮಾಡುವ ಸ್ವತಂತ್ರರು, ಬಲಹೀನರ ಬಗ್ಗೆ, ಸಂಪಾದನೆ ಇಲ್ಲದವರ ಬಗ್ಗೆ, ತಾತ್ಸಾರ ಭಾವನೆ ಹೊಂದುವುದು ಕ್ರಮ. ಆದರೆ ಮಕ್ಕಳು ಮುಂದಿ ಪಿತೃಗಳ ಬಗ್ಗೆ ಹಾಗೆ ಎಷ್ಟಕ್ಕೂ ಮಾಡಲೇ ಕೂಡದೆಂದು ಶಾಸ್ತ್ರವು ತಂದೆತಾಯಿಗಳನ್ನು

ದೇವರೆಂದೇ ಕಾಣಬೇಕು ಎಂದು ವಿಧಿಸಿದೆ. ಅವರ ಆಶೀರ್ವಾದದಿಂದ ತುಂಬಾ ಪುಣ್ಯ, ವಿರುದ್ಧ ಕ್ರಮದಿಂದ ಶಾಪದಿಂದ, ತುಂಬಾ ಪಾಪ ಬರುವಂತೆ ದೇವರೇ ಮಾಡಿದ್ದಾನೆ, ತೈತ್ತಿರೀಯ ಉಪನಿಷತ್ತಲ್ಲಿ ಹೇಳಿದೆ, ಮಾತೃದೇವೋ ಭವ । ಪಿತೃದೇವೋ ಭವ । ಆಚಾರ್ಯದೇವೋ ಭವ ॥ ಎಂದರೆ ತಾಯಿಯನ್ನು ದೇವರೆಂದೇ ಕಾಣು, ತಂದೆಯನ್ನು ದೇವರೆಂದು ಕಾಣು, ಆಚಾರ್ಯನನ್ನು ದೇವರೆಂದೇ ಕಾಣು ಎಂದು. ನಮ್ಮ ಸ್ಮೃತಿಗಳಲ್ಲಿ ಅತಿ ಹಿರಿಮೆಯ ಸ್ಥಾನ ಪಡೆದ ಮನುಸ್ಮೃತಿಯಲ್ಲಿ (ಅಧ್ಯಾಯ ೨) ನಮ್ಮ ಈ ಭಾಗದ ಧರ್ಮವನ್ನು ಧಾರಾಳವಾಗಿ ವಿವರಿಸಿದೆ. ಮಕ್ಕಳ ಜನನದಿಂದ ತಂದೆತಾಯಿಗಳು ಸಹಿಸುವ ಕಷ್ಟವು ನೂರು ವರ್ಷಗಳಲ್ಲಿಯೂ ಪರಿಹರಿಸಲು ಸಾಧ್ಯವಲ್ಲ (೨೨೭). ಇವರಿಬ್ಬರಿಗೂ ಮತ್ತು ಆಚಾರ್ಯನಿಗೂ ನಿತ್ಯದಲ್ಲಿ ಪ್ರಿಯವಾದುದನ್ನೇ ಮಾಡಬೇಕು (೨೨೮). ಈ ಮೂವರ ಸೇವೆಯೇ ಅತಿಶ್ರೇಷ್ಠ ತಪಸ್ಸು; ಅವರ ಅನುಮತಿ ಪಡೆಯದೆ ಯಾವ ಧರ್ಮಕಾರ್ಯವನ್ನೂ ಮಾಡಕೂಡದು (೨೨೯). **ಅವರನ್ನು ಆದರಿಸದವನ ಶಾಸ್ತ್ರೋಕ್ತ ಕರ್ಮಗಳೆಲ್ಲ ವ್ಯರ್ಥ** (೨೩೪). ಅವರನ್ನು ಆದರಿಸುವುದೇ ಮುಖ್ಯ ಕರ್ಮ, ಉಳಿದವು ಉಪಧರ್ಮಗಳು (೨೩೭). ಈ ಮೂವರಲ್ಲಿ ಧರ್ಮದಂತೆ ನಡೆಯುವವರು ದೇಹಕಾಂತಿಯಿಂದ ಪ್ರಕಾಶಿಸುತ್ತ ದೇವತೆಗಳಂತೆ ಸ್ವರ್ಗದಲ್ಲಿ ಸುಖಪಡುವರು (೨೩೨). ಅವರಿಂದ ಪೀಡಿಸಲ್ಪಟ್ಟರೂ ಅವರನ್ನು ಎಷ್ಟಕ್ಕೂ ಅವಮಾನಿಸಕೂಡದು (೨೨೬). ಯಾವ ಶಾಪವನ್ನಾದರೂ ದಾನ ತಪಸ್ಸು ಪ್ರಾಯಶ್ಚಿತ್ತಗಳಿಂದ ನಿವಾರಣೆ ಮಾಡಿಕೊಳ್ಳಬಹುದು, ತಾಯಿಯ ಶಾಪವನ್ನಲ್ಲ (ಮಹಾಭಾರತ, ಆದಿ ೩೭) ಎಂದೆಲ್ಲ ಇದೆ. ಮಾತಾಪಿತೃಗಳ ಪರಿತ್ಯಾಗವು ಒಂದು ಮಹಾಪಾತಕ, ಎಂದರೆ ಏಳು ಜನ್ಮಗಳವರೆಗೂ ಬಾಧಿಸುವ ಘೋರ ಪಾಪ (ಭವಿಷ್ಯ ಉ.ಅ. ೫).

ಈಗಿನ ಸೆಕ್ಯುಲರ್ ವಾತಾವರಣದಲ್ಲಿ, ನಮ್ಮ ಧರ್ಮ ಕಲಿಯದ, ತನ್ನ ಅತ್ತೆಗಿಂತ ಹೆಚ್ಚು ಲೌಕಿಕವಿದ್ಯೆ ಕಲಿತು ಗರ್ವಪಡುವ, ಬಲಿತು ಬಂದ ಪತ್ನಿಯ ನಿರಂತರ ಅರೆಸುಳ್ಳುಗಳಿಗೆ ಅವಳ ಪತಿ ಕಾಮಪಾಶದ ಶಕ್ತಿಯಿಂದ ಬಲಿಬಿದ್ದು ಬಹುಬೇಗ ಪತ್ನಿಯಲ್ಲಿ ಎಲ್ಲಿಲ್ಲದ ಗುಣ, ಪಿತೃಗಳಲ್ಲಿ ಎಲ್ಲಿಲ್ಲದ ದೋಷ ಕಾಣಲಾರಂಭಿಸುತ್ತಾನೆ. ಪ್ರತಿ ಪತಿಯರಿಗೆ ಅವರ ವಿದ್ಯಾಭ್ಯಾಸದ ಕಾಲದಲ್ಲಿ ೫೦–೬೦ ಸಹಪಾಠಿಗಳಲ್ಲಿ ಅತ್ಯಂತ ಒಳ್ಳೆಯವರಾದವರು ಕೇವಲ ಒಬ್ಬಿಬ್ಬರು ಮಾತ್ರ ಎಂಬುದೇ ಅನುಭವವಾಗಿದ್ದರೂ, ತನಗೆ ಕೇವಲ ಅಕಸ್ಮಾತ್ತಾಗಿ

ದೊರಕಿದ ಪತ್ನಿ, ತಾನು ಅವಳ ಮುಖದ ಚಂದ ಹೊರತು ಮತ್ತಾವ ಪರೀಕ್ಷೆ ಯನ್ನೂ ಮಾಡದೆ ಆರಿಸಿದ ಪತ್ನಿ, ಪ್ರತಿಪತಿಗೂ ಅತ್ಯುತ್ತಮಳಾಗಿ ದೋಷರಹಿತ ಳಾಗಿ ತೋರುವುದು ಕೇವಲ ಕಾಮದ ಅಂಧತೆಯಿಂದ ಮಾತ್ರ ಸಾಧ್ಯ ಮತ್ತು ತನ್ನ ೨೫–೩೦ ವರ್ಷದ ಪ್ರತ್ಯಕ್ಷ ಅನುಭವದಲ್ಲಿ ತನ್ನನ್ನು, ತಂದೆತಾಯಿಗಳು ಸಾಕಿಸಲಹಿದ ನಿಸ್ವಾರ್ಥೀ ಪ್ರಿಯರೂ ಹಿತಚಿಂತಕರೂ ಮಾತ್ರ ಆಗಿ ತೋರುತ್ತ ಬಂದವರು, ಅವಳ ಮಾತಿಂದ ಥಕ್ಕನೆ ಆ ತರದವರೇ ಅಲ್ಲವೆಂದು ತೋರು ವುದೂ ಆ ಅಂಧತೆಯ ಪ್ರಭಾವದಿಂದ ಮಾತ್ರ ಸಾಧ್ಯವಾಗಿರಬೇಕಲ್ಲವೇ ?

ಮುಂಚಿನ ಕಾಲದಂತೆ ಪತಿಯ ಮನೆಯನ್ನು ಚಿಕ್ಕವಳಾಗಿದ್ದಾಗಲೇ ಸೇರಿದ ವಧುವು ಅಲ್ಲಿನ ಹಿರಿಯರ ಬಗೆಗೆ ಭಯ ಭಕ್ತಿ ಬೆಳೆಸಿ ಅನಂತರ ಕಾಮದ ಶಕ್ತಿ ಪಡೆದರೂ ಮಾವ ಅತ್ತೆಯರಲ್ಲಿ ಗೌರವ ಪಡೆದಾಗಿದ್ದು, ಮತ್ತು ತಾನು ಆ ಕುಟುಂಬದ ಒಂದು ಅಂಶ ಎಂಬ ಭಾವನೆ ಬೆಳೆಸಿಯಾಗಿದ್ದು ದರಿಂದ, ಎಲ್ಲರಿಗೂ ಅನುಕೂಲಳಾಗಿಯೇ ಬಾಳುತ್ತಿದ್ದಳು. ಈಗಿನ ಅನೇಕರಿಗೆ ತಾನು ಪತಿಗೆ "ಕನ್ಯಾದಾನ"ವಾಗಿ ಬಂದವಳು, ಕೇವಲ ಅವನ ವಶವರ್ತಿಯಾಗಿ ಬಾಳಬೇಕಾದವಳು, ಗೋತ್ರ ಕಡಿದು ಬಂದು ಪತಿಯ ಕುಲಕ್ಕೆ ಸೇರಿಸಲ್ಪಟ್ಟು ಅದರ ಭಾಗವಾಗಿರಬೇಕಾದವಳು, ಪತಿಗೆ ಅವನ ಪಿತೃಋಣದ ಪರಿಹಾರಕ್ಕೆ ತನ್ನಿಂದ ಅತ್ತೆಮಾವನ ಸೇವೆ ಅಗತ್ಯ ಆಗಬೇಕಾ ಗಿದೆ ಎಂಬ ಭಾವನೆಯೇ ಇಲ್ಲದವಳು. ಆದ್ದರಿಂದ ಪತಿಯೊಡನೆ ಪ್ರತ್ಯೇಕ ವಾಗಿ ಬಿಡಾರ ಹೂಡುವ ಕಾತುರತೆ ಅವಳಿಗೆ ಬಹಳ. ಅಥವಾ ಅನಿವಾರ್ಯ ವಾಗಿ ಅತ್ತೆ ತನ್ನೊಡನಿದ್ದರೂ ಅವಳನ್ನು ದಾಸಿಯ ಮಟ್ಟಕ್ಕೆ ಇಳಿಸುವ ಸೊಸೆಯರು ಬಹಳ. ಪತಿಯು, ತನ್ನ ಮಾತಾಪಿತೃಗಳು ಬೇರೆ ಇರಲಿ, ಆದರೆ ತನ್ನ ಕರ್ತವ್ಯವಾಗಿ ಅವರಿಗೆ ಸ್ವಲ್ಪ ಹಣ ಕಳುಹಿಸುತ್ತಿರುವೆ ಎಂದು ನಿರ್ಧರಿಸಿದರೂ ಪತ್ನಿಯು ಅವಳ ವಿಪರೀತ ಆಡಂಬರದ ಖರ್ಚಿನಿಂದ ಅದನ್ನು ಕ್ರಮೇಣ ಅಸಾಧ್ಯ ಮಾಡುವಳು. ನಮಗೀಗ ಪ್ರತಿ ಧಾರ್ಮಿಕ ವಿಭಾಗ ದಲ್ಲಿಯೂ ಪಾಶ್ಚಾತ್ಯರ ಸೆಕ್ಯುಲರ್ ಕ್ರಮವು ಬಹಳ ಪಾಪತರುವ ಭಾವನೆ ಗಳನ್ನೇ ಪ್ರೇರಿಸುತ್ತಿದೆ. ಮೇಲ್ತರದ ಕಲ್ಪನೆಯೇ ಅದು ಅರಿಯದು.

**ಪಿತೃಶ್ರಾದ್ಧದ ಅವಶ್ಯಕತೆ :** ಪಿತೃಋಣದ ಪರಿಹಾರಕ್ಕೆ ಅವರ ಸೇವೆ, ಮರಣದ ಅನಂತರ ಚೆನ್ನಾಗಿ ಅಂತಿಮಕ್ರಿಯೆ ನಡೆಸಿ ಧಾರಾಳವಾಗಿ ದಾನಕೊಡುವುದು, ನಿತ್ಯ ಪಿತೃ ತರ್ಪಣ, ವಾರ್ಷಿಕ ಶ್ರಾದ್ಧ ಮುಖ್ಯ. ಪಿತೃ ಋಣದ ಭಾವನೆ ನಾಶವಾಗುತ್ತ ಬಂದಂತೆ ಅವರಿಗಾಗಿ ಅತಿ ಮುಖ್ಯವಾಗಿ

ಮಾಡಬೇಕಾದ ವಾರ್ಷಿಕ ಶ್ರಾದ್ಧದ ಕರ್ಮವೂ ಲೋಪವಾಗುತ್ತ ಬರುತ್ತಿದೆ. ಸತ್ತವರು ಎಲ್ಲೋ ಏನೋ. ಇಲ್ಲಿ ಪುರೋಹಿತರು ಪಿಂಡ ಹಾಕಿಸಿದರೆ ಅದು ಅವರಿಗೆ ತಲುಪುವುದು ಅಸಾಧ್ಯ ಎಂಬ ತರ್ಕವೂ ಸಮಾಧಾನ ತರಲಿಕ್ಕೆ ಅವರಲ್ಲಿ ಇದೆ. ಆದರೆ ಪಾಶ್ಚಾತ್ಯ ಪ್ರಖ್ಯಾತ ಮೇಧಾವಿಗಳು ಪ್ರೇತ ಸಂಪರ್ಕ ಕೂಟಗಳಲ್ಲಿ ಪ್ರೇತ ಪಾತ್ರಿಗಳ ಮೂಲಕ ಮೃತರಾದ ತಮ್ಮವರ ಪ್ರೇತಗಳನ್ನು ಆವಾಹಿಸಿ ಸಂಪರ್ಕ ನಡೆಸುವುದು ಸಾಧ್ಯ ಎಂದು ಧಾರಾಳವಾಗಿ ರುಜು ಪಡಿಸಿದ್ದಾರೆ. ಈ ರುಜುವಾತಿನ ಅವರ ಖ್ಯಾತ ಪಿ.ಆರ್.ಎಸ್. ಸಂಘದ ಪ್ರಕಟಣೆಗಳು ಬಹಳ ಇವೆ. ಅತ್ಯಂತ ವಿಶಾಲವಾದ ಪ್ರೇತ ಲೋಕದಲ್ಲಿ, ನಮಗೆ ಎಲ್ಲೆಂದೇ ವಿಳಾಸ ತಿಳಿಯದಲ್ಲಿ ವಾಸಿಸುವ ಪ್ರೇತವನ್ನು ಪ್ರೇತ ಲೋಕದಲ್ಲಿರುವ ಅನ್ವೇಷಕನು ಪಾತ್ರಿಗೆ ಕರೆಸಿ ಕೊಡುವುದು ಅತಿ ಧಾರಾಳವಾಗಿ ಸುಲಭವಾಗಿ ನಡೆಯುತ್ತಿರುವಾಗ, ಶಾದ್ಧಕಾರ್ಯದಲ್ಲಿ ಪಿತೃಗಳಿಗೆ ಹಾಕಿದ ಪಿಂಡ ನಮ್ಮ ಅದ್ವಿತೀಯ ಧರ್ಮದ ಕ್ರಮದಿಂದ ಪಿತೃಗಳಿಗೆ ತಲುಪುತ್ತದೆ ಎಂಬ ಬಗ್ಗೆ ವಾದ ಇನ್ನು ಏನೇನೂ ಸಲ್ಲದು. ಪುತ್ರ ಎಂದರೆ ಶ್ರಾದ್ಧ ಕರ್ಮ ಮಾಡುತ್ತ ಪುತ್ ಎಂಬ ನರಕಯಾತನೆ ಪಿತೃಗಳಿಗೆ ತಪ್ಪಿಸುವವ ಎಂದೂ ಶಾಸ್ತ್ರ ಹೇಳುತ್ತದೆ. ಮಕ್ಕಳು ಪಿಂಡ ಹಾಕಲು ಅಯೋಗ್ಯರಾದರೆ

ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕ ಕ್ರಿಯಾಃ ॥

ಪಿತೃಗಳು ನರಕ ಸೇರಬೇಕಾಗುತ್ತದೆ ಎಂದು ನಮ್ಮ ಪವಿತ್ರ ಗೀತೆಯಲ್ಲೂ ಇದೆ (೧.೪೨). ಈ ಅಗತ್ಯವಾದ ಧಾರ್ಮಿಕ ಕ್ರಮ ನಾವು ಕಡಿದರೆ ನಾಳೆ ಮರಣದ ಅನಂತರ ನಮ್ಮ ಗತಿಯೇನು ಎಂಬ ವಿವೇಚನೆಯೂ ಅನಗತ್ಯವೇ ? ಒಬ್ಬರು ಡಾಕ್ಟರರನ್ನು ನೋಡಲು ಬಂದವ, ಅವರು ಕುಳಿತಲ್ಲಿ ಮೇಲಿದ್ದ ಫೋಟೋ ಕಂಡು, ಅದು ಯಾರದ್ದು ? ಅವರು ಆಗಾಗ ನಮ್ಮ ಮನೆಯಲ್ಲಿ ಪ್ರೇತವಾಗಿ ತೋರಿಸಿಕೊಳ್ಳುತ್ತಿದ್ದಾರೆ ಎಂದ. ಅವ ಈಗ ಇದ್ದ ಮನೆಯಲ್ಲಿ ಮುಂಚೆ ಡಾಕ್ಟರರಿದ್ದು, ಅಲ್ಲಿ ಅವರ ತಂದೆ ಸತ್ತದ್ದು ಎಂದು ತಿಳಿಯಿತು. ಪಿಂಡಪ್ರದಾನದಲ್ಲಿ ಶ್ರದ್ಧೆ ಇದ್ದಿರದ ಅವರನ್ನು ಅವರ ಮಿತ್ರರು ಒತ್ತಾಯಿಸಿ ಅವರಿಗೆ ಗಯಾದಲ್ಲಿ ಪಿಂಡ ಹಾಕುವಂತೆ ಮಾಡಿದರು. ಪ್ರೇತತ್ವ ತಪ್ಪಿತು ; ಶ್ರಾದ್ಧದ ಅವಶ್ಯಕತೆ ಕಲಿತರು (ಟ್ರೂತ್ ಕಲ್ಕತ್ತಾ). ಪುನರ್ಜನ್ಮದ ಪುಸ್ತಕದಲ್ಲಿ ಬೇರೆ ಈ ತರದ ಕತೆಗಳೂ ಇವೆ. ತಾವು ಬಹಳ ಆಶಿಸುವ ಪಿಂಡ ಪಡೆಯುತ್ತ ಬರುವ ಪಿತೃಗಳ ಆಶೀರ್ವಾದ ಬಹಳ ಪ್ರಯೋಜನಕಾರಿಯಾಗಲಿ ಎಂದೂ ದೇವರೇ ವ್ಯವಸ್ಥೆ ಮಾಡಿದ್ದಾನೆ! ಅದನ್ನೂ ತಿಳಿದಿರಲೇಬೇಕು.

ದೇವತೆಗಳ ಪ್ರೀತಿಗಾಗಿ ಮಾಡುವ ಕಾರ್ಯಕ್ಕಿಂತ ಪಿತೃಗಳ ಋಣ ಪರಿಹಾರದ ಕರ್ತವ್ಯವಾದ, ಅವರಿಗೆ ಪ್ರೀತಿಕರವಾದ, ಶ್ರಾದ್ಧವು ಶ್ರೇಷ್ಠ (ಮನು ೩,೨೦೩) ದೇವತೆಗಳು ಕೂಡ ಪಿತೃಗಳನ್ನು ಮೊದಲು ಅರ್ಚಿಸುತ್ತಾರೆ. ಯಾರು ಪಿತೃ ಶ್ರಾದ್ಧ ಮಾಡುವುದಿಲ್ಲವೋ ಅವನು ಮಾಡುವ ದೇವತಾ ಪೂಜೆಯನ್ನು ಶ್ರೀಹರಿ ಮುಂತಾದ ದೇವರು ಒಪ್ಪರು (ಬ್ರಹ್ಮಾಂಡ ಅ. ೧೮೩). ಪಿತೃಗಳನ್ನು ಅರ್ಚಿಸದೆ ಯಾವ ಸತ್ಕರ್ಮ ಮಾಡಿದರೂ ಅದರ ಫಲ ದಾನವರ ಪಾಲಾಗುತ್ತದೆ (ಬ್ರಹ್ಮಾಂಡ ಉತ್ತರ ಅ. ೯) ಶ್ರಾದ್ಧ ಮಾಡದಿರುವವನು ನರಕ ಸೇರುವನು (ಸ್ಕಾಂದ, ಪ್ರಭಾಸ ಅ. ೨೧೮) ಮತ್ತು ಅನಂತರ ಹಲವು ಚಂಡಾಲ ಜನ್ಮಗಳನ್ನೂ ಹೊಂದುವನು (ಶತಪಥ ಸಂ). ಹೇಮಾದ್ರಿಯಲ್ಲಿ ಹೇಳಿದಂತೆ ಯಾರಲ್ಲಿ ಶ್ರಾದ್ಧ ನಡೆಯುವುದಿಲ್ಲವೊ ಅಲ್ಲಿ ಸುಪುತ್ರರು ಜನಿಸರು. ಕುಟುಂಬದ ವಿರೋಧೀ ಮಕ್ಕಳು ಜನಿಸಿಯಾರು; ಕುಲ ವೃದ್ಧಿಯಾಗದು. ಒಬ್ಬನು ಅಧಮನೋ ಎಂಬುದಕ್ಕೆ ದೇವರ ಪ್ರಥಮ ಪರೀಕ್ಷೆ ಅವ ಶಾದ್ಧಮಾಡದ ಕೃತಘ್ನನೋ ಎಂಬುದಾಗಿದೆ!

ಪಿತೃಗಳ ಬೆಂಬಲಕ್ಕೆ ಪಿತೃ ದೇವತೆಗಳಿದ್ದಾರೆ. ಅವರು ಸಾವಿರಾರು ಯುಗಗಳ ಯೋಗಾಭ್ಯಾಸ ನಿರತರು, ದಯಾಪರರು. ಬ್ರಹ್ಮವನ್ನು ಹೊಂದಲಿಕ್ಕಿರುವವರು. ಅವರು ಪಿತೃಕಾರ್ಯ ಮಾಡುವವರಿಗೆ ಶ್ರೇಯಸ್ಸನ್ನು ಕೊಡುತ್ತಾರೆ (ಮನು ೩,೧೯೨; ಬ್ರಹ್ಮಾಂಡ ಅ. ೯-೫೨). ಆದ್ದರಿಂದ ಶ್ರಾದ್ಧದಲ್ಲಿ ತೃಪ್ತಿಹೊಂದಿದ ಪಿತೃಗಳು ನಮ್ಮ ಬಗೆಗೆ ವಸುಗಳು ರುದ್ರರು ಆದಿತ್ಯರು ನಕ್ಷತ್ರಗಳು ಗ್ರಹಗಳು ಪ್ರೀತಿ ತೋರುವಂತೆ ಮಾಡುತ್ತಾರೆ. (ಬ್ರಹ್ಮ ಅ. ೨೨೦,೧೧೮); ಆಯುಸ್ಸು, ಪ್ರಜೆ (ಮಕ್ಕಳು), ಧನ, ವಿದ್ಯೆ ಸ್ವರ್ಗ ಮೋಕ್ಷಸುಖ ಕರುಣಿಸುತ್ತಾರೆ (ಬ್ರಹ್ಮ ಅ. ೧೧೯) ಶ್ರಾದ್ಧದ ಆಚರಣೆಯುಳ್ಳವನು ಬಹಳ ಪಾಪ ಕಳಕೊಳ್ಳುತ್ತಾನೆ. ಶುದ್ಧಮನಸ್ಸಿಂದ ಚೆನ್ನಾಗಿ ಶ್ರಾದ್ಧ ಮಾಡುವವನು ಶುದ್ಧನಾಗುವನು (ಬ್ರಹ್ಮಾಂಡ ಉತ್ತರ ಅ. ೧೪,೪; ಅ. ೧೩, ೧೩೪). ಪಿತೃಋಣ ಅರ್ಥಮಾಡಿಕೊಂಡು ಶ್ರಾದ್ಧ ಚೆನ್ನಾಗಿ ಮಾಡುತ್ತಿರುವವನಲ್ಲಿ ವಿಶೇಷ ಶ್ರದ್ಧೆ ಕಂಡ ಪಿತೃದೇವತೆಗಳು ಇವ ಇನ್ನೂ ಮೇಲೆ ಹೋಗಲು ಯೋಗ್ಯನೆಂದು ಅವನಲ್ಲಿ ಮೋಕ್ಷದ ಬಯಕೆ ದೇವರು ದಯೆಪಾಲಿಸುವಂತೆ ಮಾಡುತ್ತಾರೆ. ಶ್ರಾದ್ಧಕ್ಕೆಉತ್ತಮ ಪುರೋಹಿತರು ಅತ್ಯಗತ್ಯ (ದೇವರಪೂಜೆಗೆ ಅಷ್ಟು ಅಗತ್ಯವಲ್ಲ). ಬಹಳ ಪರಿಶುದ್ಧತೆ ಅಗತ್ಯ (ಮನು ೩,೧೪೯). ಶ್ರಾದ್ಧವನ್ನು ಮಿತ್ರ ಭೋಜನಕ್ಕುಪಯೋಗಿಸಬಾರದು (೧೩೮-೧೪೦). ಈ ಅಧ್ಯಾ

ಯಿಂದ ಹೆಚ್ಚಿನ ಜ್ಞಾನಕ್ಕೆ ನಾನು ಬರೆದಿರುವ '**ಪುನರ್ಜನ್ಮ**' ಮತ್ತು '**ದಾನ ಮಾಡಬೇಕು**' ಓದುವುದುತ್ತಮ.

ಪಿತೃಭಕ್ತಿ ಹೆಚ್ಚು ಇರುವವರು ಆದರೆ ಪಿತೃತರ್ಪಣ ಕೊಡದಿರುವವರು ನಿತ್ಯವೂ ಜಪಮಾಗಿಸಿ ಭಕ್ತಿಯಿಂದ :

ಈಶಾನ ವಿಷ್ಣು ಕಮಲಾಸನ ಕಾರ್ತಿಕೇಯೋ
ವಹ್ನಿತ್ರಯಾರ್ಕರಜನೀಶ ಗಣೇಶ್ವರಾಣಾಂ ।
ಕ್ರೌಂಚಾಮರೇಂದ್ರ ಕಲಶೋದ್ಭವಕಶ್ಯಪಾನಾಂ
ಪಾದಾನ್ನಮಾಮಿ ಶಿರಸಾ ಪಿತೃಮುಕ್ತಿ ಹೇತೂನ್ ॥

ಎಂದು ಹೇಳುತ್ತ ಈ ದೇವರುಗಳಿಗೆ ಋಷಿಗಳಿಗೆ ಪಾದಕ್ಕೆ ಬಿದ್ದು ಪಿತೃಮುಕ್ತಿ ಕೊಡಲು ಬೇಡಿದಂತೆ ಭಾವಿಸುವುದು ಉತ್ತಮ.

# ೧೨. ಮನೆಯಲ್ಲಿ ದೇವರ ಪೂಜೆ

ಮನುಷ್ಯನು ಹಲವು ತರದ ಅನಿರೀಕ್ಷಿತ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಕೆಲವನ್ನು ಇತರರ ಸಹಾಯದಿಂದ ಗೆಲ್ಲಬಹುದು. ಆದರೆ ದೇವರೊಬ್ಬನೇ ಸರ್ವತರದ ಕಷ್ಟಗಳಲ್ಲಿ ಸಹಾಯಕೊಡಲು ಸಮರ್ಥ. ಮನೆಯಲ್ಲಿ ದೇವರ ಪೂಜೆ ನಡೆಸುತ್ತ **ಮಕ್ಕಳಿಗೆ ದೇವರಲ್ಲಿ ಶ್ರದ್ಧೆ ಬರುವಂತೆ ಮಾಡುವ ಪಿತ್ರಾರ್ಜಿತ, ಮಕ್ಕಳಿಗಾಗಿ ಬಹಳ ದುಡಿದು ಬಿಟ್ಟು ಹೋಗುವ ದೊಡ್ಡ ಐಶ್ವರ್ಯಕ್ಕಿಂತ ಉತ್ತಮ.**

ಗೃಹಸ್ಥ ಬ್ರಾಹ್ಮಣನಿಗೆ ನಿತ್ಯ ಮನೆಯಲ್ಲಿ ದೇವರ ಪೂಜೆ ವಿಧಿಸಲ್ಪಟ್ಟಿದೆ. ಅದಕ್ಕಿರುವ ದೇವರು ಆದಿತ್ಯ ಅಂಬಿಕಾ ವಿಷ್ಣು ಗಣನಾಥ ಮಹೇಶ್ವರ. ಈ ಪಂಚಾಯತನ ಪೂಜೆಯಲ್ಲದೆ ಆರನೆಯ ದೇವರಾಗಿ ಅಗ್ನಿಯ ಪೂಜೆಯೂ ನಡೆಯಬೇಕು. ಕಡಿಮೆ ಮಟ್ಟದಲ್ಲಿ ಶಿವಲಿಂಗ ಮತ್ತು ಸಾಲಿಗ್ರಾಮದ ಪೂಜೆಗಳು ಅಥವಾ ಅವಲ್ಲಿ ಒಂದರ ಪೂಜೆಯಾದರೂ ಬಹು ಮಟ್ಟಿನವರಲ್ಲಿ ತಪ್ಪದೆ ನಡೆಯುತ್ತಿತ್ತು ಮುಂಚೆ. ದೇವರ ತೀರ್ಥ ಕುಡಿದೇ ಏನಾದರೂ ತಿಂಡಿ ತಿನಿಸು ತಕ್ಕೊಳ್ಳುವುದು, ಅನ್ನ ಮಡಿಯಲ್ಲಿ ಮಾಡಿ ನೈವೇದ್ಯ ಮಾಡಿ ಪ್ರಸಾದ ರೂಪದಲ್ಲಿ ಉಣ್ಣುವುದು ಕ್ರಮವಾಗಿತ್ತು.

ಈಗ ಉದ್ಯೋಗದಲ್ಲಿ ಬೇರೆ ಬೇರೆ ಕಡೆಗಳಲ್ಲಿ ಬಾಳುವ ಅನೇಕರಲ್ಲಿ ಪೂಜೆಯು ಕ್ರಮವಿಲ್ಲ. ಆದರೆ ಗಂಡಸಿಗೆ ಪೂಜೆ ಮಾಡಲು ಮನಸ್ಸಿಲ್ಲದಿದ್ದಲ್ಲಿ

ಪತ್ನಿಯಾದರೂ ಪೂಜೆಯನ್ನು ಮಾಡುವುದು ಉತ್ತಮ. ಅದು ಅವಳಿಗೂ ಹಿತಕರ; ಮಕ್ಕಳಿಗೂ ದೇವರಲ್ಲಿ ಭಕ್ತಿ ಬೆಳೆಯಲಿಕ್ಕೆ ಅಗತ್ಯ. ಹೇಗೆಂದರೆ ಆಗ ಮನೆಯಲ್ಲಿ ಒಂದು ಕಡೆ ಸ್ಪಷ್ಟವಾಗಿ, ದೇವರ ಸ್ಥಾನ ಉಂಟಾಗುತ್ತದೆ. ಅಲ್ಲಿ ನಿತ್ಯ ದೇವರಿಗೆ ದೀಪ ಹಚ್ಚುವುದು, ಪೂಜೆ ಮಾಡುವುದು, ಎಲ್ಲರೂ ಆರತಿ ನೋಡುವುದು, ಆರತಿ ತಕ್ಕೊಂಡು ನಮಸ್ಕರಿಸುವುದು, ಅಲ್ಲಿ ಪತಿ, ಉಪನಯನವಾದ ಮಕ್ಕಳು, ಸಂಧ್ಯೋಪಾಸನೆ ನಡೆಸುವುದು, ಸಂಜೆ ದೀಪ ಹಚ್ಚಿ ಭಜನೆ ಮಾಡುವುದು: ಗೃಹಿಣಿ ಅಷ್ಟೋತ್ತರ ಮುಂತಾದ್ದರ ಪಠನ ಮಾಡುವುದು, ಎಲ್ಲಾದರೂ ಉತ್ತಮ ಕೆಲಸಕ್ಕೆ ಹೋಗುವಾಗ, ಮಕ್ಕಳು ಶಾಲೆಗೆ ಅಥವಾ ಪರೀಕ್ಷೆಗೆ ಹೋಗುವಾಗ, ಅಲ್ಲಿ ದೇವರಿಗೆ ಹಿರಿಯರಿಗೆ ನಮಸ್ಕರಿಸಿ ಹೋಗುವುದು, ಕಷ್ಟ ಬಂದಾಗ ದೇವರ ವಿಶೇಷ ಪ್ರಾರ್ಥನೆ, ಎಲ್ಲ ಅಲ್ಲಿ ನಡೆಯುವಂತಾಗುತ್ತದೆ. ಆ ಸ್ಥಾನವು ದೇವರ ನೆನಪನ್ನು ಆಗಾಗ ತರುವಂತಾಗುತ್ತದೆ.

ಗಂಡಸರು ವೇದಮಂತ್ರಗಳನ್ನೊಳಗೊಂಡ ವೇದೋಕ್ತಪೂಜೆ ಮಾಡಲಾರರಾದರೆ, ಸ್ತ್ರೀಯಾದರೂ ಸಾಮಾನ್ಯ ಉಪಚಾರ ಮಂತ್ರಗಳಿಂದ ಮತ್ತು ದೇವರ ದ್ವಾದಶ ನಾಮ ಅಥವಾ ಅಷ್ಟೋತ್ತರ ಶತನಾಮಾವಳಿ ಹೇಳುವುದು, ನೈವೇದ್ಯದ ಅರ್ಪಣೆ, ಆರತಿ, ಎಲ್ಲ ಮಾಡಬಹುದು. ದೇವರ ಪ್ರತಿಮೆ, ಶಿವಲಿಂಗ ಅಥವಾ ಸಾಲಿಗ್ರಾಮವಿದ್ದಲ್ಲಿ ನಿತ್ಯ ಪೂಜೆ, ನೈವೇದ್ಯ, ತಪ್ಪಕೂಡದು. ಹೆಂಗಸಾದರೆ ಅಶುದ್ಧಳಾದ ನಾಲ್ಕು ದಿನಗಳಲ್ಲಿ ಅಂಥ ಪೂಜೆ ಮಾಡಲಾರಳು. ನಿತ್ಯ ಸಾಲಿಗ್ರಾಮದ ಪೂಜೆಯು ಹೆಂಗಸರಿಂದ ಕೂಡದು ಎಂದೂ ಇದೆ. ಆದರೆ ಶಿವಲಿಂಗದ ಪೂಜೆಗೆ ಹೆಂಗಸರಿಗೆ ನಿಷೇಧ ಇಲ್ಲ. ಮುಟ್ಟಿನ ದಿನಗಳಲ್ಲಿ ಮಗನೋ ಪತಿಯೋ ಚುಟುಕಾಗಿ ಅಭಿಷೇಕ, ನೈವೇದ್ಯ, ಪೂಜೆ ಮಾಡಿದರಾಯಿತು. ಶಿವಲಿಂಗಕ್ಕೆ ಶಿವಾಷ್ಟೋತ್ತರ ಶತನಾಮ ಹೇಳಿ ಅಭಿಷೇಕ ಮಾಡಿದರೆ ಆ ತೀರ್ಥವು ರುದ್ರಾಭಿಷೇಕದ ತೀರ್ಥದಂತೆ ಎಂದೂ ಸ್ಕಾಂದ ಪುರಾಣದಲ್ಲಿದೆ. ಸ್ತ್ರೀಯೂ ಮಾಡಬಹುದು (ಸ್ಫಟಿಕಲಿಂಗ ಕಾಶಿಯಲ್ಲಿ ಸಿಕ್ಕುತ್ತದೆ).

ಅಥವಾ ದೇವರ ಪಟವನ್ನಿಟ್ಟಾದರೂ ಅದಕ್ಕೆ ದೀಪ ಹಚ್ಚುವುದು, ಸಾಮಾನ್ಯ ಉಪಚಾರ ಮಂತ್ರಗಳಿಂದ ಪೂಜೆ, ಹೆಂಗಸಿಗೆ ಸಾಧ್ಯ. ಅಶುದ್ಧಳಾದಾಗ ಮಕ್ಕಳಿಂದ ಅಥವಾ ಪತಿಯಿಂದ ಚುಟುಕಾಗಿ ಪೂಜೆ ಮಾಡಿಸಬಹುದು; ಅಥವಾ ಮಕ್ಕಳು ದೀಪ ಹಚ್ಚಿ ನಮಸ್ಕರಿಸಿದರೂ ಸಾಕು. ಅದೂ ಆಗದಿದ್ದರೆ

ಪೂಜೆ ನಾಲ್ಕು ದಿನ ತಪ್ಪಿದರೂ ಅಡ್ಡಿಯಿಲ್ಲ. ಶಿವಲಿಂಗ ಅಥವಾ ವಿಗ್ರಹದ ಪೂಜೆಯನ್ನು ಸೂತಕ ಬಂದಾಗ ಇತರರಿಂದ ಮಾಡಿಸಲಾಗದಿದ್ದರೆ ಇತರರಿಂದ ಶುದ್ಧ ನೀರಲ್ಲಿಡಿಸಿ, ಶುದ್ಧರಾದ ಅನಂತರ ನಿತ್ಯಪೂಜೆ ಮಾಡಬಹುದು. ಸ್ತ್ರೀಯೂ ಪೂಜೆಯಾದರೂ ಅವಳು ಮನಃಪೂರ್ವಕ ಮಾಡಿದಷ್ಟೂ ದೈವೀ ಕಳೆ ಅಲ್ಲಿ ನಿಲ್ಲದಿರದು.

ನಿತ್ಯ ಪೂಜೆಯಲ್ಲದೆ ಪ್ರತಿ ಮನೆಯಲ್ಲಿ ಹಬ್ಬದ ದಿನಗಳಲ್ಲಿ ಪೂಜೆ ನಡೆಯಬೇಕು. ರಾಮನವಮಿ, ಕೃಷ್ಣಾಷ್ಟಮಿ, ನರಸಿಂಹ ಜಯಂತೀ, ನವರಾತ್ರಿಯ ಸರಸ್ವತೀ-ದುರ್ಗಾಪೂಜೆ, ಶಿವರಾತ್ರಿ ಪೂಜೆ, ಸ್ತ್ರೀಯರು ಗೌರೀ ತೃತಿಯಾ ಪೂಜೆ (ವಿನಾಯಕ ಚೌತಿ ಮುಂಚಿನ ದಿನದ್ದು) ತಪ್ಪದೆ ನಡೆಸಬೇಕು ; ಅವು ನಿತ್ಯ **ಎಂದರೆ ಮಾಡಲೇ ಬೇಕಾದವು; ಮಾಡ ದಿದ್ದರೆ ಬಹಳ ಪಾಪ,** ಮಾಡಿದರೆ ಬಹಳ ಪುಣ್ಯ ತರುತ್ತವೆ ಎಂದಿದೆ. ನರಸಿಂಹ ಜಯಂತೀ ಈಗ ಸಾಮಾನ್ಯವಲ್ಲ. ಆದರೆ ಚೌತೀ ಗಣಪತೀಪೂಜೆ ತುಂಬಾ ರೂಢಿಯಲ್ಲಿದೆ. ಆ ದಿನಗಳು ಬಹಳ ಪುಣ್ಯತರವ ಮುಹೂರ್ತ ದಲ್ಲಿದ್ದು ಹಬ್ಬ ಎಂದು ಕರೆಯಲ್ಪಡುತ್ತವೆ. ಬ್ರಿಟಿಷರ ಕಾಲದಲ್ಲಿ ಅವಕ್ಕೆಲ್ಲ ರಜೆ ಇತ್ತು. ಆ ದಿನಗಳಲ್ಲಿ ವ್ರತ ರೂಪವಾಗಿ ಪುರೋಹಿತರಿಂದ ಕಲ್ಪೋಕ್ತ ಪೂಜೆ ಈಗಲೀಗ ಬಹುಮಟ್ಟಿಗೆ ಅಸಾಧ್ಯ. ಆದರೆ ಚಿತ್ರಪಟ ಇಟ್ಟು (ಅಥವಾ ಶ್ರೀರಾಮ, ಕೃಷ್ಣ, ನರಸಿಂಹ ಪೂಜೆಗೆ ಸಾಲಿಗ್ರಾಮ ಇದ್ದರೆ ಇಟ್ಟು) ಪೂಜಿಸಿದರೆ ಈ ಯಥಾನುಶಕ್ತಿಯ ಯತ್ನದಿಂದ ಲೋಪದ ಪಾಪ ಕೆಲವು ಮಟ್ಟಿಗೆ ತಪ್ಪಿಸಿಕೊಳ್ಳಬಹುದು. ಈ ಹಬ್ಬದ ದಿನಗಳಲ್ಲಿ ವಿಶೇಷ ತಿಂಡಿಗಳ ಕ್ರಮ ಈಗಲೂ ರೂಢಿಯಲ್ಲಿದೆ. ಆದರೆ ಅಂದು ದೇವರಿಗೆ ಅರ್ಪಿಸದೆ, ಅವನನ್ನು ಪೂಜಿಸದೆ, ಕೇವಲ ತಿಂಡಿ ಮಾಡಿ ತಿಂದು ಹಬ್ಬ ಎನ್ನುವುದು ಬಹಳ ತಪ್ಪಾದೀತು. ವಿಶೇಷ ಪೂಜೆಗಳಿಗಾಗಿಯೇ ಮನೆಯ ದೇವರ ಸ್ಥಾನದಲ್ಲಿ ಗಣಪತಿ ಶ್ರೀರಾಮ, ಕೃಷ್ಣ, ನರಸಿಂಹ, ದುರ್ಗಾದೇವಿ, ಶಿವ ಮೊದಲಾದ ದೇವರ ಚಿತ್ರ ಪಟಗಳನ್ನೂ ಇಟ್ಟು ನಿತ್ಯ ಪೂಜೆಯ ವೇಳೆ ಆರತಿ ಎತ್ತಬಹುದು. ಶಿವಲಿಂಗ ಸಾಲಿಗ್ರಾಮಗಳುಹೂವಿಂದ ಮುಳುಗಿರುವುದ ರಿಂದ ಮಕ್ಕಳ ಅನುಕೂಲಕ್ಕಾಗಿ ಈ ಚಿತ್ರಗಳೂ ಇರಲಿ. ಕೃಷ್ಣಾಷ್ಟಮಿಗೆ ಕೃಷ್ಣನ ಚಿತ್ರಕ್ಕೆ ವಿಶೇಷ ಅಲಂಕಾರ, ದುರ್ಗಾಪೂಜೆಗೆ ದೇವೀ ಚಿತ್ರಕ್ಕೆ ವಿಶೇಷ ಅಲಂಕಾರ ಮುಂತಾದ್ದು ಮಾಡಲು ಆಸ್ಪದವಿರುತ್ತದೆ. ಹೆಂಗಸರ ಪೂಜೆಗೂ, ಅಥವಾ ವೇದಮಂತ್ರಗಳು ಬಾರದ ಗಂಡಸರ ಪೂಜೆಗೂ, ನಿತ್ಯ ಅತಿ ಚುಟು

ಕಾದ ಕ್ರಮ, ಹಬ್ಬದ ದಿನಗಳ ಪೂಜೆಗೆ ೧೦೮ ನಾಮಗಳೊಡನೆ ಪೂಜಾಕ್ರಮ ನನ್ನ **'ಮನೆಯಲ್ಲಿ ದೇವರು'** ಪುಸ್ತಕದಲ್ಲಿದೆ. ಅದು ಪೂಜಾಕ್ರಮ ತಿಳಿಯದ ಹೆಂಗಸರಿಗಾಗಿಯೇ ಬರೆದದ್ದು.

**ಅಗ್ನಿಯ ಪೂಜೆ :** ಬ್ರಾಹ್ಮಣ ಬ್ರಹ್ಮಚಾರಿಯು ನಿತ್ಯವೂ ಅಗ್ನಿಕಾರ್ಯವನ್ನೂ ಗೃಹಸ್ಥರು ಔಪಾಸನೆ, ವೈಶ್ವದೇವವನ್ನೂ ಮಾಡಬೇಕೆಂದು ಇದೆ. ಇವು ಬಹುಮಟ್ಟಿಗೆ ಲೋಪವಾಗಿದೆಯಾದರೂ, ಇವಲ್ಲಿ ಬರುವ ಒಂದು ಅಗ್ನಿಯ ಪ್ರಾರ್ಥನೆ ಎಷ್ಟು ಅದ್ಭುತವಾಗಿದೆ ನೋಡಿರಿ :

ಶ್ರದ್ಧಾಂ ಮೇಧಾಂ ಯಶಃ ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರಿಯಂ ಬಲಂ ।
ಆಯುಷ್ಯಂ ತೇಜಮಾರೋಗ್ಯಂ ದೇಹಿಮೇ ಹವ್ಯವಾಹನ ॥ (ಅಭಿವಾದಯೇ)

ಹಲವು ಸಾವಿರವರ್ಷಗಳಲ್ಲೆಲ್ಲ ನಮ್ಮ ಹಿರಿಯರು ಪಠಿಸಿ ಪ್ರಯೋಜನ ಪಡೆಯುತ್ತ ಬಂದಿದ್ದ ಈ ಒಂದು ಪ್ರಾರ್ಥನೆಯನ್ನಾದರೂ ಬ್ರಾಹ್ಮಣನು ದಿನಕ್ಕೊಮ್ಮೆ ಅಗ್ನಿಯ ಮುಂದೆ ಹೇಳುವುದುತ್ತಮವಾಗದೇ ?

## ೧೩. ನಮ್ಮ ದೇವಸ್ಥಾನಗಳು

ನಮ್ಮ ದೇವಸ್ಥಾನಗಳು ಸನಾತನಿಗಳ ಒಂದು ಅದ್ಭುತ ಸಂಸ್ಥೆ. ಮಗು, ಪುಸ್ತಕ, ಹಾಲು, ಎಂದೊಡನೆ ಅವುಗಳ ಕಲ್ಪನೆ ಮನಸ್ಸಿಗೆ ಬರುತ್ತವೆ, ಏಕೆಂದರೆ ಆ ಶಬ್ದಗಳೊಡನೆ ನಾವು ಅವನ್ನು ಕಂಡವರು. ಆದರೆ ದೇವರನ್ನು ನಾವು ಕಂಡವರಲ್ಲ, ಆದರೂ ಅವನ ಚಿಂತನೆ ಪ್ರಾರ್ಥನೆಗಳನ್ನು ಎಲ್ಲ ಧರ್ಮದವರೂ ಮಾಡುತ್ತಾರೆ. ಆದರೆ ದೇವಸ್ಥಾನಗಳ ಸಹಾಯವಿಲ್ಲದ ಕ್ರಿಶ್ಚನರು, ಮುಸಲ್ಮಾನರು ಅದಕ್ಕಾಗಿ ಮೇಲೆ ಎಲ್ಲೋ ನೋಡುತ್ತ ದೇವರ ಕಲ್ಪನೆಗೆ ಸಹಾಯ ಅಲ್ಲಿರದೆ ಚಿಂತನೆಯ ಯತ್ನ ಮಾಡುತ್ತಾರಾದರೆ, ನಮ್ಮ ದೇವಸ್ಥಾನಗಳಲ್ಲಿ ದೇವರಮೂರ್ತಿಯ ಮುಂದೆ ನಿಂತು ತನ್ನ ಸಂಕಷ್ಟಕ್ಕೆ ಸಹಾಯ ಕೊಡಲು ಪ್ರಾರ್ಥಿಸುವವನಿಗೆ ಆ ದೇವರ ಭಾವನೆ ಅತ್ಯಂತ ಸುಲಭವಾಗಿದ್ದು ತಾನು ಪ್ರತ್ಯಕ್ಷ ಅವನೊಡನೆಯೇ ಸಹಾಯ ಬೇಡುತ್ತಿದ್ದೇನೆ ಎಂಬ ಭಾವನೆ ಬಹು ಬೇಗ ಮತ್ತು ಚೆನ್ನಾಗಿ ಆಳವಾಗಿ ಬರುತ್ತದೆ. ದೇವರ ಪ್ರತ್ಯಕ್ಷ ಸಾನ್ನಿಧ್ಯವು ಬಹಳ ಪ್ರಾರ್ಥನೆ ನಡೆಯುವ ಯಾವ ತರದ ದೇವಮಂದಿರದಲ್ಲಾದರೂ ಸ್ವಲ್ಪ ಇರುತ್ತದೆ. ಆದರೆ ಅದು ಅತ್ಯಂತ ಧಾರಾಳವಾಗಿ ಇರುವಂತೆ ಮಾಡುವ ದಿವ್ಯ

ಜ್ಞಾನದ ಕ್ರಮಗಳಿಂದ ಆಗಮ ಶಾಸ್ತ್ರದ ಸಹಾಯ ಪಡೆದವರು ಸನಾತನಿಗಳು ಮಾತ್ರ. ದೇವಸ್ಥಾನದ ರಚನೆ, ವಿಗ್ರಹದ ರಚನೆ ಅದರ ಪ್ರತಿಷ್ಠೆಯ ಕ್ರಮ, ಧಾರಾಳ ಕುಂಭಾಭಿಷೇಕಗಳು, ಆಮೇಲೆ ನಿತ್ಯ ವೇದ ಮಂತ್ರಗಳೊಡನೆ ಅಭಿಷೇಕಗಳು, ಅಲಂಕಾರ, ಧಾರಾಳ ನಾಮಸ್ತೋತ್ರ, ಅರ್ಚನೆ, ನೈವೇದ್ಯ, ವೇದ ಮಂತ್ರದೊಡನೆ ಆರತಿ, ಗಂಟಾನಾದ ಮುಂತಾದವುಗಳ ಮೂಲಕ, ದೇವಸ್ಥಾನದ ವಾತಾವರಣವೆಲ್ಲ, ಅದೂ ಅತಿ ಮುಖ್ಯವಾಗಿ ಗರ್ಭಗುಡಿ, ಒಳಪ್ರಾಕಾರ ಸಂಪೂರ್ಣ ಸಾತ್ವಿಕತೆಯಿಂದ ತುಂಬಿರುತ್ತದೆ. ಅದು ಬಂದ ಭಕ್ತರ ಧ್ಯಾನ, ದೇವರಲ್ಲಿ ಭಕ್ತಿ, ಹೆಚ್ಚಿಸಿ ಅವರ ಪ್ರಾರ್ಥನೆಯೂ ವಾತಾವರಣದ ಸಾತ್ವಿಕತೆ ಹೆಚ್ಚಿಸುತ್ತದೆ. ಅಲ್ಲಿ ಧ್ಯಾನಕ್ಕೆ ಕುಳಿತವರಿಗೆ ಬೇರೆ ಕಡೆಗಳಿಗಿಂತ ಸುಲಭವಾಗಿ ಆಳವಾಗಿ ದೇವರ ಚಿಂತನೆಯ ಅಭ್ಯಾಸ ಸಾಧ್ಯ. ನಮ್ಮ ನಾಲ್ಕೂ ವರ್ಣಗಳವರಿಗಾಗಿ ಇರುವ ವರ್ಣಗಳಲ್ಲಿ ಹಿರಿಯರಾದ ಬ್ರಾಹ್ಮಣ ಅರ್ಚಕರ ವೇದೋಕ್ತ, ಆಗಮೋಕ್ತ, ಕ್ರಮದ ಪೂಜೆಯಿಂದಾಗಿ ನಾಲ್ಕೂ ವರ್ಣದವರ ದೇವರ ಭಕ್ತಿ ಬೆಳೆಸಲಿಕ್ಕೆ, ಅವರಲ್ಲಿ ಧಾರ್ಮಿಕ ಒಗ್ಗಟ್ಟು ಬೆಳೆಸಲಿಕ್ಕೆ ಇರುವ ಏಕಮಾತ್ರ ಸಂಸ್ಥೆ. ಇಲ್ಲಿ ಭಕ್ತರು ದೇವಸ್ಥಾನಗಳು ಕೆಡದಂತೆ ವರ್ತಿಸಬೇಕು, ಅದರ ಪ್ರಯೋಜನ ಪಡೆಯಲು ಏನು ಮಾಡಬೇಕು ಎಂದು ತಿಳಿದಿರಬೇಕು. ಇಗರ್ಜಿಗಳಲ್ಲಿ ಮಸೀದಿಗಳಲ್ಲಿ ಗುರುವೂ ಮುಲ್ಲಾರೂ ಬರುವವರಿಗೆ ತಕ್ಕ ಶಿಸ್ತು, ತಿಳಿಸಿ, ಅವನ್ನು ಹೊರಿಸುತ್ತಾರೆ. ಆದರೆ ನಮ್ಮ ಯುವಕರಿಗೆ ಈಗ ಧರ್ಮ ತಿಳಿಯದು. ಅದೂ ನಾಲ್ಕು ಬೇರೆ ಬೇರೆ ವರ್ಣದವರ ಗುಂಪು. ಅಲ್ಲಿನ ಅರ್ಚಕರಿಗೆ ಶಿಸ್ತು ಹೊರಿಸಲು ಅಧಿಕಾರ ಸಾಲದು, ಅಧಿಕಾರವಿರುವ ಸರ್ಕಾರಿ ಮ್ಯಾನೇಜರನಿಗೆ ಅದು ತಿಳಿಯದು, ಅದು ಏನೇನೂ ತಿಳಿಯದ,ಬೇಡ ವಾದ, ಹರಿಜನರೂ ಅಧಿಕಾರಿಗಳಾಗಿ ಬರುತ್ತಿದ್ದಾರೆ! ನಮ್ಮ ದೇವಸ್ಥಾನಗಳ ದೈವೀಕಳೆ ಕ್ಷೀಣಿಸುವ ವರ್ತನೆಗಳಿಗೆ ದೈವಾಪರಾಧಗಳು ಎಂದು ಹೆಸರು. ಅವು ಬಹಳ ಇವೆ. ಅವನ್ನು ತಿಳಿಯದೆ ನಡೆಸಿದರೂ ದೈವಾಪರಾಧವಾಗುತ್ತದೆ, ಬಂದ ಭಕ್ತರಿಗೆ ಪುಣ್ಯಬರುವ ಬದಲಿಗೆ ಪಾಪ ಬರುತ್ತದೆ. ದೈವಾಪರಾಧಗಳ ವಿವರಣೆಗಳನ್ನು ನನ್ನ **'ದೇವಸ್ಥಾನಗಳ ಸದುಪಯೋಗ'** ಪುಸ್ತಕದಲ್ಲಿ ನೋಡಬಹುದು. ಸಾರಾಂಶರೂಪದಲ್ಲಿ ಇಲ್ಲಿ ಕೊಡುತ್ತೇನೆ.

ದೈವೀಕಳೆಯನ್ನು ಅಶುದ್ಧ ಬಟ್ಟೆ, ಪಾದದ ಅಶುದ್ಧತೆ, ಎಂಜಲು, ಕಾಮುಕತೆ ಮುಂತಾದ ಅಶುದ್ಧ ಭಾವನೆಗಳು, ಮಲ ಮುಂತಾದ ತಾಮಸಿಕ ವಸ್ತುಗಳು, ಸಿಟ್ಟು, ವಾದ, ಜಗಳ ಮುಂತಾದವು ಲೌಕಿಕ ಪಟ್ಟಾಂಗ ಎಲ್ಲವೂ

ಕೆಡಿಸುತ್ತವೆ ಅದು ದೈವಾಪರಾಧವಾಗುತ್ತದೆ. ಈಗಳಿನ ಯುವಕರಿಗೆ ಪಾಯಿಖಾನೆಗೆ ಹೋಗುವಾಗ ಧರಿಸಿದ ಹಿಜಾರವೇ ತೊಳೆಯದೆ ದೇವಸ್ಥಾನಕ್ಕೆ, ವಿವಾಹ ಸಂಸ್ಕಾರಕ್ಕೆ, ಶ್ರಾದ್ಧದ ಊಟಕ್ಕೆ, ಹೊಲಸು ಜನರ ಸಂಗಕ್ಕೆ, ಎಲ್ಲ ಸಾಕಾಗುತ್ತದೆ. ಅದು ತೀರಾ ತಪ್ಪು. ದೇವರು ಅತ್ಯಂತ ದೊಡ್ಡ ಸರ್ಕಾರೀ ಅಧಿಕಾರಿಗಿಂತ ಹೆಚ್ಚಿನವ. ಅವನ ಸ್ಥಾನಕ್ಕೆ ಬಂದು ಅವಸರದಲ್ಲಿ ನಮಸ್ಕಾರ ಮಾಡಿ, ಮತ್ತೆಲ್ಲ ಲೌಕಿಕ ಪಟ್ಟಾಂಗದಲ್ಲಿ ಕಾಲ ಕಳೆಯುವುದು, ದೇವರೆದುರು ಕಾಲು ಕೆಳಗೆ ಬಿಟ್ಟು ಅಥವಾ ಅವನ ದಿಕ್ಕಿಗೆ ಕಾಲು ಚಾಚಿ ಕುಳಿತಿರುವುದು, ಆ ದಿಕ್ಕಿಗೆ ಕಾಲು ಹಾಕಿ ಮಲಗುವುದು, ಮುಖ್ಯವಾಗಿ ದೇವರ ಸ್ಥಾನವೆಂಬ ಮರ್ಯಾದಾಕ್ರಮವಿಲ್ಲದೆ ವರ್ತಿಸುವುದು ಪಾಪತರುತ್ತದೆ. ದೇವರು ಎಲ್ಲಕಡೆಗೂ ಕಾಣಬಲ್ಲ, ಅವನೆದುರಲ್ಲಿ ನಿಂತು ನಮಸ್ಕರಿಸಿದ ಮೇಲೆ ಬದಿಗೆ ಸೇರಿ ಅಪಾರ ಮಟ್ಟದಲ್ಲಿ ಮಾತಲ್ಲಿ ಮುಳುಗುವುದು ಮುಖ್ಯವಾಗಿ ಹೆಂಗಸರ ಕ್ರಮ. ಅವನಿಗೆ ಅದು ತೋರದೆ ? ಜಪ, ಸ್ತೋತ್ರಪಠಣ, ನಮಸ್ಕಾರ, ಧ್ಯಾನ ಪ್ರದಕ್ಷಿಣೆ ಮುಂತಾದವು ಮಾತ್ರ ಒಳಸುತ್ತಲ್ಲಿ ಮಾಡಬೇಕು. ಉತ್ಸವಮೂರ್ತಿ ಹೊರಟಾಗ ದೇವರ ಹಿಂದೆ ಹೋಗಬೇಕು, ಒಬ್ಬ ಚಿಕ್ಕ ಅಧಿಕಾರಿಯ ಹಿಂದೆ ಹತ್ತು ಜನ ಹೋಗುವುದು ಕಾಣುತ್ತೇವಾದರೂ ಅನೇಕ ವೇಳೆ ದೇವರ ಜೊತೆಯಲ್ಲಿ ಹೋಗುವವರೆಂದರೆ ಅರ್ಚಕರು, ಓಲಗದವರು ಮಾತ್ರ ! ಆದರೆ ಗರ್ಭಗುಡಿಯಲ್ಲಿದ್ದ ಉತ್ಸವಮೂರ್ತಿಯು ಹೊರಗೆ ಧಾರಾಳವಾಗಿ ಸಾತ್ವಿಕ ವಾತಾವರಣ ಹರಡುತ್ತ ಹೋಗುವಾಗ ಅದರ ಸಾವಿಶಾಪ್ಯದ ಪ್ರಯೋಜನ ಪಡೆಯಿರಿ.

ದೇವಸ್ಥಾನವು ಎಲ್ಲರಿಗೂ, ಮಕ್ಕಳಿಗೆ ಶಾಲೆ ಇದ್ದಂತೆ, ಧ್ಯಾನ ಏಕಾಗ್ರತೆಗಳ ಅಭ್ಯಾಸಕ್ಕೆ ಜಾಗ. ಅಲ್ಲಿಗೆ ಆದಷ್ಟು ಶುದ್ಧವಾಗಿ ಶುದ್ಧಮನಸ್ಸಿನಿಂದ ಹೋದರೆ ದೇವರಿಂದ ಬರುವ ಸಾತ್ವಿಕ ಕಳೆ ಏಕಾಗ್ರತೆಗೆ ಬಹಳ ಸಹಾಯವಾಗುತ್ತದೆ. ಮನೆಯಲ್ಲಿ ಮಕ್ಕಳ ಮನಸ್ಸೆಲ್ಲ ಆಗಾಗ ಆಟ ವಿನೋದಗಳ ಕಡೆಗೆ ಹೋಗಿ ಏಕಾಗ್ರತೆಯೇ ಬಾರದು. ಆದರೆ ಶಾಲೆಯಲ್ಲಿ ಶಿಸ್ತಿನ ವಾತಾವರಣದಿಂದಾಗಿ ಆದಷ್ಟು ಏಕಾಗ್ರತೆ ಅಭ್ಯಾಸವಾಗುತ್ತದೆ. ಮನೆಯಲ್ಲಿ ದೇವರ ಧ್ಯಾನ, ಚೆನ್ನಾಗಿ ಜಪ, ಮಾಡಲಾರದ ಮಟ್ಟದವರು ದೇವಸ್ಥಾನದಲ್ಲಿ ಸ್ವಲ್ಪ ಯತ್ನಿಸಿದಾಗ ಆ ಅಭ್ಯಾಸ ಬೆಳಸಲು ಬರುತ್ತದೆ. ಒಂದು ಪ್ರದಕ್ಷಿಣೆ ಬರುವಾಗ, ನಿಧಾನವಾಗಿ ಕೇವಲ ದೇವರ ಚಿಂತನೆ, ಇಡೀ ಸುತ್ತು ಬರುವವರೆಗೂ ತಪ್ಪದೆ ಏಕಾಗ್ರತೆ ಬರುವಂತೆ ಯತ್ನಮಾಡಿರಿ. ಆಮೇಲೆ ಅಂತೆಯೇ ೩, ೫, ೨೮ ಸುತ್ತು ತೆಗೆಯಿರಿ. ಅಲ್ಲಿ ಕುಳಿತುಕೊಂಡು ಧ್ಯಾನ ಮಾಡಲು

ಕಲಿಯಿರಿ. ನಿಮ್ಮ ಸ್ತೋತ್ರ ಪಠನ ಇತರರ ಧ್ಯಾನಕ್ಕೆ ತೊಂದರೆಯಾಗದಂತಿರಲಿ, ಕೇವಲ ಪ್ರದರ್ಶನದಿಂದ ಅಲ್ಲಿ ಏನೂ ಆಗಬೇಕಾಗಿಲ್ಲ. ದೇವಸ್ಥಾನದ ಪ್ರಯೋಜನ ಪಡೆದು ಪ್ರತಿಯಾಗಿ ಕಾಣಿಕೆ ಹಾಕಬೇಕು.

ಮಕ್ಕಳಿಗೆ ಧರ್ಮ ಕಲಿಸದೆ ಇನ್ನು ಬಾರದು. ಮುಂಚಿನ ಕಾಲದಲ್ಲಿ ಅವರಲ್ಲಿ ತುಂಬಾ ವಿಧೇಯತೆ ಇತ್ತು. ತಂದೆ ತಾಯಿ ಹಿರಿಯರ ಬುದ್ಧಿವಾದ, ಅನುಕರಣೆಗಳು ರೂಢಿಯಾಗಿದ್ದವು. ಅಲ್ಪ ಸಂಗಾತಿಗಳಿಂದ ಕಲಿತ ಕೆಟ್ಟದ್ದು ಅವರ ತಲೆಯಲ್ಲಿ ತುಂಬುವುದು ಉಂಟಾಗುತ್ತಿರಲಿಲ್ಲ. ಈಗ ತದ್ವಿರುದ್ಧವಾಗಿದೆ. ಆದ್ದರಿಂದ ಕ್ರಮಬದ್ಧವಾಗಿ ಧಾರ್ಮಿಕ ಪಠ್ಯಪುಸ್ತಕಗಳ ಮೂಲಕ ಊರಿನ ಹಿರಿಯ (ನಿವೃತ್ತರಾದ) ಕನ್ನಡ, ಹಿಂದಿ ಅಥವಾ ಸಂಸ್ಕೃತ ಪಂಡಿತರಿಂದ ದೇವಸ್ಥಾನದಲ್ಲಿ ಮಕ್ಕಳಿಗೆ ವಾರಕ್ಕೊಮ್ಮೆ ಪಾಠ ಕಲಿಸುವ ಏರ್ಪಾಡು ಮಾಡಿರಿ. ಪಂಡಿತರಿಗೆ ಗೌರವಾರ್ಥ ಸ್ವಲ್ಪ ಹಣವನ್ನು ಕೂಡಿಸಿ ಕೊಡುತ್ತಿರಿ.

ಈಗ ದೇವಸ್ಥಾನಗಳ ಕಟ್ಟಡದ ಸದುಪಯೋಗ ನಡೆಯುವುದು ತೀರಾ ಸಾಲದು. ಧಾರಾಳ ನಡೆಯಬೇಕು. ನಮ್ಮ ಪ್ರಾಂತ್ಯದ ಉತ್ತಮ ದೇವಸ್ಥಾನಗಳೆಲ್ಲ ಕೂಡಿ ಅತಿಕಡಿಮೆ ಬೆಲೆಗೆ ಉತ್ತಮ ಧಾರ್ಮಿಕ ಕತೆಪುಸ್ತಕಗಳನ್ನು ಪ್ರಕಟಿಸಲಿ, ಉತ್ತಮ ಭಜನೆಗಳ, ಹರಿಕತೆಗಳ ಕ್ಯಾಸೆಟ್ಸ್ ಮಾಡಿಸಲಿ. ಧಾರ್ಮಿಕ ಕತೆಗಳ ಸಿನೆಮಾ ಫಿಲ್ಮ್ಸ ಮಾಡಿಸಲಿ. ತಮ್ಮೊಳಗೆ ಚಲಾವಣೆ ಮಾಡುತ್ತಿರಲಿ ; ಪ್ರಸಾರ ನಡೆಯಲಿ, ದೇವಸ್ಥಾನಕ್ಕೆ ಹೆಚ್ಚು ಜನರು ಬರುವ ವಾರದ ದಿನದಲ್ಲಿ ಧಾರ್ಮಿಕ ಪುಸ್ತಕಗಳ ಭಂಡಾರದಿಂದ ಮನೆಗೆ ಕೊಂಡು ಹೋಗಿ ಓದಿ ತರಲು ಪುಸ್ತಕ ಕೊಡಿರಿ. ಚುನಾವಣೆ ಕಾಲದಲ್ಲಿ ಧರ್ಮ ಕೆಡಿಸುವುದಲ್ಲ, ಧರ್ಮಕ್ಕೆ ಬೆಂಬಲ ಕೊಡುತ್ತೇನೆ ಎಂಬ ಉಮೇದುವಾರನಿಗೆ ಮಾತ್ರ ಮತದಾನ ಮಾಡಲು ಅಲ್ಲಿ ಪ್ರಚಾರ ಮಾಡಿರಿ. ಧಾರ್ಮಿಕ ಭಾಷಣಗಳನ್ನು ಆಗಾಗ ಏರ್ಪಡಿಸಿರಿ. ಕೆಲವು ದೇವಸ್ಥಾನಗಳ ಒಳಪ್ರಾಕಾರದಲ್ಲಿ ವಿವಾಹದ ಭೋಜನ, ಆಮೇಲೆ ಎಲ್ಲಾ ಬೇರೆ ತರದವರ ತಿಂಡಿಯ ಎಂಜಲು ದೇವಸ್ಥಾನ ಕೆಡಿಸದಿರದು. ವಿವಾಹದ ಶುಭಕಾರ್ಯಕ್ಕೆ ಪಾಪ ತಾರದಿರದು. ಅದು ಏನೇನೂ ಸರಿಯಲ್ಲ.

ದೂರದ ಖ್ಯಾತ ದೇವಸ್ಥಾನಕ್ಕೆ ಎಂಟುಗಂಟೆ ಪ್ರಯಾಣ ಮಾಡಿಹೋಗಿ ಸಮಯವಿರುವವರೂ ಅಲ್ಲಿ ಕೇವಲ ಹತ್ತು ನಿಮಿಷ ನಿಂತು ಆರತಿ ಕಂಡು ತೃಪ್ತರಾಗುವ ವರ್ತನೆ ೨೫ ರೂ. ಕೊಟ್ಟು ೧ ರೂ. ಸಾಮಾನು ತಮಗೆ ಸಾಕು ಎಂದಂತೆ. ದಕ್ಷಿಣ ಕನ್ನಡ ಜಿಲ್ಲೆಯ ಕೊಲ್ಲೂರಿನ ಶ್ರೀ ಮೂಕಾಂಬಿಕಾ

ದೇವಸ್ಥಾನದಲ್ಲಿ ದೂರದಿಂದ ಬರುವ ಕೇರಳದ ಭಕ್ತರು ದೇವಸ್ಥಾನದ ಸದುಪಯೋಗಮಾಡುವುದಕ್ಕೆ ಹೆಚ್ಚು ಕಾಲ ಪ್ರದಕ್ಷಿಣೆ, ನಾಮಜಪ, ಧ್ಯಾನ, ಸ್ತೋತ್ರ ಪಠನ, ಕೆಲವು ದಿನಗಳವರೆಗೆ ನಡೆಸುವುದು, ಇತರರಿಗೆ ಮಾದರಿಯಾಗಲು ಯೋಗ್ಯವಾಗಿದೆ.

ಚೋಳರಾಜರ ಕಾಲದಲ್ಲಿ ದೇವಸ್ಥಾನಗಳಿಗೆ ಆಡಳಿತ ಮುಂಕ್ತೇಸರರನ್ನು ಆರಿಸಲಿಕ್ಕೆ ಒಂದು ಉತ್ತಮ ಕ್ರಮವಿತ್ತು. ೩೦ ವರ್ಷ ಮೀರಿದ ಉಮೇದು ವಾರರ ಹೆಸರು ಸಂಗ್ರಹಿಸಿ ಊರಿನ ಅತಿಶ್ರೇಷ್ಠ **ಹಿರಿಯರ ಸಮಿತಿಗೆ** ಕೊಡುತ್ತಿದ್ದರು. ಸಮಿತಿಯವರು ಅವರಲ್ಲಿ ಯಾರು ಅವರೇ ಆಗಲಿ ಅಥವಾ ಅವರ ತಂದೆ ತಾಯಿ ಪತ್ನಿಯರೆ ಮನೆಯವರಾಗಲಿ ಆರೋಗ್ಯರಾಗಿದ್ದಾರೋ ಅವರ ಹೆಸರನ್ನು ಗುಟ್ಟಿನಲ್ಲಿ ತೆಗೆದುಹಾಕಿ, ಉಳಿದವರ ಹೆಸರ ಚೀಟಿಗಳನ್ನು ಮಾಡಿ ಹೊಸ ಮಡಿಕೆಯಲ್ಲಿ ಹಾಕಿ, ದೇವರ ಮುಂದಿಟ್ಟು ಪ್ರಾರ್ಥನೆನಡೆಸಿ ಚಿಕ್ಕಬಾಲಕನಿಂದ ಬೇಕಾದ ಸಂಖ್ಯೆಯ ಹೆಸರುಗಳನ್ನು ಎತ್ತಿಸಿ, ಅವರಿಗೆ ಮೊಕ್ತೇಸರಿಕೆ ಕೊಡುತ್ತಿದ್ದರು. ಸರ್ಕಾರದ ಈಗಿನ ಆಡಳಿತದ ಕ್ರಮತಪ್ಪಿಸಿ ಸನಾತನೀ ಭಕ್ತರೇ ಯೋಗ್ಯರನ್ನು ಆರಿಸಿ ಮುಂಕ್ತೇಸರರನ್ನಾಗಿ ಮಾಡಿ ಕಲಿಯುತ್ತಿರುವ ಯುವಕರಶ್ರದ್ಧೆ, ನಾಲ್ಕೂ ವರ್ಣಗಳೊಳಗೆ ಒಗ್ಗಟ್ಟು, ಎಲ್ಲರಲ್ಲಿ ಧರ್ಮಾಭಿಮಾನ, ಧರ್ಮಕ್ಕಾಗಿ ತ್ಯಾಗದ ಬುದ್ಧಿ, ಧಾರ್ಮಿಕಶಕ್ತಿ, ಬೆಳೆಸಲಿಕ್ಕೆ ದೇವಸ್ಥಾನಗಳ ಉಪಯೋಗ ನಡೆಯಲಿ.

## ೧೪. ನಮ್ಮ ಪುರೋಹಿತರು

ಬ್ರಾಹ್ಮಣರಿಗೆ ಉಪನಯನ, ವಿವಾಹ, ಅಂತಿಮ ಕ್ರಿಯೆ ಶ್ರಾದ್ಧ ಮುಂತಾದವುಗಳನ್ನು ನಡೆಸಲಿಕ್ಕೆ, ಬ್ರಾಹ್ಮಣರಾಗಿ ಬಾಳಲಿಕ್ಕೆ, ಪುರೋಹಿತರು ಅತ್ಯಗತ್ಯ. ಈ ವರ್ಗವು ಈಗ ಬಹಳ ಕ್ಷೀಣವಾಗುತ್ತ ಬರುತ್ತಿದೆ. ಹೀಗೆ ಮುಂದುವರಿದರೆ ಇನ್ನೆರಡು ದಶಕಗಳಲ್ಲಿ ಸಮಾಜಕ್ಕೆ ಬಹಳ ಕಷ್ಟಬಾರದಿರದು. ಈ ಸಮಸ್ಯೆಗೆ ಬ್ರಾಹ್ಮಣ ಸಮಾಜವು ಈಗಲೇ ಲಕ್ಷ್ಯಕೊಡುತ್ತ ಬಂದು ಪುರೋಹಿತರ ಅಭಾವದ ಸಮಸ್ಯೆಉಂಟಾಗದಂತೆ ಮಾಡಬೇಕು. ನಮ್ಮಲ್ಲೀಗ ಇರುವ ವೈದಿಕ ಲೌಕಿಕ ಎಂಬ ವಿಭಾಗ ಶಾಸ್ತ್ರ ಒಪ್ಪುವುದಿಲ್ಲ. ಮನುಸ್ಮೃತಿ ಯಲ್ಲಿ (೧,೮೮) ಹೇಳಿದೆ :

ಅಧ್ಯಾಪನಮಧ್ಯಯನಂ ಯಜನಂ ಯಾಜನಂ ತಥಾ।
ದಾನಂ ಪ್ರತಿಗ್ರಹಂ ಚೈವ ಬ್ರಾಹ್ಮಣಾನಾಮ ಕಲ್ಪಯತ್ ॥

ವೇದ (ಶಾಸ್ತ್ರ) ಕಲಿಯುವುದು, ಕಲಿಸುವುದು (ಇತರ ದ್ವಿಜರಿಗೆ); ಹೋಮ ಮಾಡುವುದು, ಮಾಡಿಸುವುದು, ದಾನ ಕೊಡುವುದು, ತೆಕ್ಕೊಳ್ಳುವುದು (ಇತರ ವರ್ಣದವರಿಗೆ ದಾನತಕ್ಕೊಳ್ಳುವ ಹಕ್ಕಿಲ್ಲ), ಬ್ರಾಹ್ಮಣಧರ್ಮ. ಬ್ರಿಟಿಷರಕಾಲದಲ್ಲಿ ದೇಶದ ಹಣ ಅತಿ ಧಾರಾಳವಾಗಿ ಬ್ರಿಟನ್ನಿಗೆ ಸಾಗಿಸಲ್ಪಡುತ್ತಿದ್ದುದರಿಂದ ಇಲ್ಲಿ ಬಡಸ್ತಿಕೆ ಬಹಳ ಹೆಚ್ಚಿತು. ಆಪದ್ ಧರ್ಮವಾಗಿ ಬ್ರಾಹ್ಮಣರು ಆಂಗ್ಲಕ್ರಮದ ವಿದ್ಯೆ, ಸರ್ಕಾರಿ ಹುದ್ದೆ, ವ್ಯಾಪಾರ, ಹೋಟೆಲ್ ಕೆಲಸ ಮುಂತಾದವನ್ನು ಅನುಸರಿಸಲಾರಂಭಿಸಿದರು. ಶ್ರೀ ಗಾಯಂತ್ರಿದೇವಿಯ ಕೃಪೆಯಿಂದ ಬುದ್ಧಿಶಕ್ತಿ ಹೆಚ್ಚು ಬೆಳೆಸಿದ ಇವರು ಅವಲ್ಲಿ ಬೇಗ ಮೇಲೆ ಬಂದರು. ಆದರೆ ಹಳ್ಳಿಯಲ್ಲಿದ್ದ ಪುರೋಹಿತ ವರ್ಗ ಬಡವಾಗಿಯೇ ಉಳಿಯಿತು. ಅವರ ಸಂಖ್ಯೆ ಇತರರ ಸಂಖ್ಯೆಯಂತೆ ಹೆಚ್ಚಿದರೂ, ಹುದ್ದೆಗೆಂದು ಪೇಟೆ ಹತ್ತಿದ ಲೌಕಿಕ ವರ್ಗದವರ ಧರ್ಮದ ಜ್ಞಾನ, ಅದರಲ್ಲಿ ಅಭಿಮಾನ ಕಡಿಮೆಯಾಗುತ್ತಾ ಬಂದು, ಅವರು ವೈದಿಕಕರ್ಮಗಳನ್ನು, ಪುರೋಹಿತರನ್ನು ಕರೆಯುವುದನ್ನು ಕಡಿಮೆ ಮಾಡಿದ್ದು ಇವರ ಆರ್ಥಿಕ ಕಷ್ಟ ಮತ್ತೂ ಹೆಚ್ಚಿಸಿತು. ಪಟ್ಟಣಗಳಲ್ಲಿ ಸರ್ಕಾರಿ ಮತ್ತು ಇತರ ಹುದ್ದೆಯಲ್ಲಿದ್ದವರ ಭಾವನೆ, ತಾವು ಕೇವಲವಾಗಿ ಸ್ವಪ್ರಯತ್ನದಿಂದ ಕಲಿತು ಪಾಸಾಗಿ ಹುದ್ದೆ ಪಡೆದ ಸಮರ್ಥರು ಮತ್ತು ಹಣಕೊಡುವ ವರ್ಗ, ಪುರೋಹಿತರು ಬಡವರಾಗಿಯೇ ಇದ್ದು ಹಣ ಯಾಚಿಸುವ ವರ್ಗ ಎಂಬುದರಿಂದ (ಅನೇಕ ಕಡೆಗಳಲ್ಲಿ) ವೈದಿಕರ ಬಗ್ಗೆ ಇರಬೇಕಾದ ಗೌರವ ಕಡಿಮೆಯಾಯಿತು. ಅವರನ್ನು ಉಪನಯನಕ್ಕೂ, ವಿವಾಹಕ್ಕೂ ಅನಿವಾರ್ಯವಾಗಿ ಕರೆಸಿದಾಗ ಕೇವಲ ೧–೨ ದಿನಗಳ ಕೆಲಸಕ್ಕೆ ಅವರಿಗೆ ಕೊಡಬೇಕಾದ ಅಕ್ಕಿರಾಶಿ, ತೆಂಗಿನಕಾಯಿಗಳು, ಆಗಾಗ ಅಲ್ಲಲ್ಲಿಡ ಬೇಕಾದ ಹಣ, ಆಮೇಲೆ ಮುಖ್ಯ ದಕ್ಷಿಣೆ ಎಂಬುದೆಲ್ಲ ಅವರ ಶ್ರಮಕ್ಕೆ ಬಹಳ ಮೀರಿದ ಸುಲಿಗೆ ಎಂಬ ಭಾವನೆ ಬೆಳೆಯಿತು. ಪುರೋಹಿತರು ದಕ್ಷಿಣೆ ಕಟ್ಟುನಿಟ್ಟಾಗಿ ಕೇಳದಿರುವ ಕ್ರಮ ಅನುಸರಿಸಬೇಕಾದ್ದರಿಂದ ಅದರಲ್ಲಿರಬೇಕಾದ ಧಾರಾಳತೆ ಹೋಗಿ ಆದಷ್ಟು ಕಡಿಮೆ ಕೊಡುವ ಕ್ರಮ ಉಂಟಾಯಿತು. ಇದರಿಂದಾಗಿ ಪುರೋಹಿತರಿಗೂ ಅವರ ಮಕ್ಕಳಿಗೂ ಈಗಿನ ಪೌರೋಹಿತ್ಯದಲ್ಲಿ ಗೌರವವೂ ಇಲ್ಲ, ಆರ್ಥಿಕ ಸಂಪತ್ತೂ ಇಲ್ಲ, ಈ ದಾರಿ ಬೇಡವೇ ಬೇಡ ಎಂಬ ಭಾವನೆ ಬಹಳ ಹೆಚ್ಚಿದೆ. ಅವರು ಬೇರೆ ದಾರಿ ಹಿಡಿಯುವುದನ್ನು ತಡೆಗಟ್ಟ

ದಿದ್ದರೆ ಬಹಳ ಕೇಡಾಗದಿರದು. ಇದು ಬ್ರಾಹ್ಮಣ್ಯ ಉಳಿಸಲಿಕ್ಕೆ ಬ್ರಾಹ್ಮಣ ಸಂಘಗಳು ಮಾಡಬೇಕಾದ ಒಂದು ಮುಖ್ಯ ಕರ್ತವ್ಯ.

ಲೌಕಿಕರಿಗೆ ಈಗ ಪುರೋಹಿತರಲ್ಲಿ ಕೆಲವು ತಪ್ಪು ತೋರುತ್ತದೆ. ಅದು ಏನೂ ಇಲ್ಲವೇ ಇಲ್ಲವೆಂದಲ್ಲ. ಆದರೆ ಹಾಗೆ ಕಾಣಲಿಕ್ಕೆ ಒಂದು ಮುಖ್ಯ ಕಾರಣ ಲೌಕಿಕರಿಗೆ ಬ್ರಾಹ್ಮಣ ಧರ್ಮದ ಜ್ಞಾನ ತೀರಾ ಕಡಿಮೆಯಾಗುತ್ತಿರು ವುದು; ಆದ್ದರಿಂದ ಪುರೋಹಿತರ ತುಲನೆಗೆ ಬೇಕಾದ ದೃಷ್ಟಿಯೇ ಮಂದ ವಾಗಿರುವುದು ಮತ್ತು ಪುರೋಹಿತರು ನಮಗೆ ಅವರು ಬೇಕು, ಅವರಿಗೆ ನಾವು ಬೇಕು ಎಂದಿರುವಾಗ ಅವರ ಪಾಲಿಗೆ ಈಗ ವೃತ್ತಿಯೇ ಬೇಡವೆನ್ನುವಷ್ಟು ಜುಗುಪ್ಸೆ ಉಂಟಾಗಿರುವುದಕ್ಕೆ ಲೌಕಿಕರ ತಪ್ಪೇ ಮೂಲಕಾರಣ. ಲೌಕಿಕರ ತಪ್ಪೇ ಹೇಗೆ ಅತ್ಯಧಿಕ ನೋಡಿರಿ.

ವೇದವು ನಮ್ಮ ಅತ್ಯಂತ ಶ್ರೇಷ್ಠ ಗ್ರಂಥ. ಕಲಿತವರನ್ನು ಪವಿತ್ರ ಮಾಡುವ ಶಕ್ತಿಯುಳ್ಳದ್ದು. ಪುರೋಹಿತರು ಅದನ್ನು ಕಲಿತವರು; ನಾವೂ ಕಲಿಯಬೇಕಾದವರಾದರೂ ಕಲಿಯದ ಅಧರ್ಮಜೀವನ ನಡೆಸುತ್ತಿರುವವರು. ನಮ್ಮದು ಬ್ರಾಹ್ಮಣನಿಗೆ ಹೆಚ್ಚು ಹೇಳಿಸಿರದ ತಪ್ಪು ಜೀವನದ ಅಲ್ಪತರದ್ದಾದ ಹೆಚ್ಚಿನ ಹಣದಿಂದ ಬಂದ ಅಹಂಕಾರ. ಅವರ ಶ್ರೇಷ್ಠತೆ ಒಪ್ಪಲೇಬೇಕು, ತಕ್ಕರೀತಿಯಲ್ಲಿ ಗೌರವಿಸಲೇಬೇಕು. ಶಾಸ್ತ್ರವೇ ಹೇಳುತ್ತದೆ, ಆಚಾರ್ಯ ದೇವೋ ಭವ ಎಂದು. ಆ ವರ್ಗದವರು ಅವರು. ಅವರ ಪಾದಮುಟ್ಟಿ ನಮಸ್ಕರಿಸಿ. ಆಶೀರ್ವಾದ ಪಡೆಯಬೇಕಾದ ಲೌಕಿಕರಿಗೆ ಅವರ ಬಗ್ಗೆ ಪೂಜ್ಯ ಭಾವನೆ ಇರಬೇಡವೆ? ದೇವರು ಬ್ರಾಹ್ಮಣ ಪ್ರಿಯ ಎಂದಿದೆ. ಅವನು ಪ್ರೀತಿಸುವುದು, ಅವನು ಶಾಸ್ತ್ರದಲ್ಲಿ ನಿರ್ದೇಶಿಸಿದ ಕ್ರಮದಲ್ಲಿ ಬಾಳುವ ಬ್ರಾಹ್ಮಣರನ್ನು. ಅದು ಬಿಟ್ಟು ಕೇವಲ ಹಣಕ್ಕಾಗಿ ಶಾಸ್ತ್ರವು ನಿಂದಿಸುವ ಮ್ಲೇಂಛ ಭಾಷೆ, ಅಪವಿತ್ರ ಉದ್ಯೋಗಗಳ ದಾರಿ ಹಿಡಿದ ಅಲ್ಪರಾದ ಲೌಕಿಕ ರನ್ನಲ್ಲ. ದೇವರಿಗೆ ಪ್ರಿಯರಾದವರನ್ನು ಗೌರವಿಸುವುದು ಲೌಕಿಕ ಉದ್ಧಾರಕ್ಕೆ ಆಗದೇ? ಪುರೋಹಿತರು ಮಡಿ ಮೈಲಿಗೆ ಕಟ್ಟುಗಳನ್ನು ಆಹಾರ ನಿಯಮ ಗಳನ್ನು ಜಪ, ತರ್ಪಣ, ಉಪವಾಸ ಮುಂತಾದವುಗಳನ್ನು ಆಚರಿಸುತ್ತ ಪಾಪ ಬೆಳೆಸದೆ, ಪವಿತ್ರತೆ ಮಾತ್ರ ಬೆಳೆಸುತ್ತಾರೆ. ಲೌಕಿಕರಾದರೋ ಬಹಳ ರೀತಿಯ ಅಶುದ್ಧತೆಯಲ್ಲಿ ಮುಳುಗಿದ್ದಾರೆ. ಶೂದ್ರ ಮುಟ್ಟಿದ ಆಹಾರ, ಎಂಜಲ ಮೇಜಿನ ಮೇಲಿನ ಕಾಫಿ ತಿಂಡಿ, ಜಪ ಪೂಜೆ ಬಿಟ್ಟು ಶೂದ್ರತ್ವ, ಅಪಾರ ಸಂಪರ್ಕ ದೋಷ, ಅವರಲ್ಲಿ ಬಹಳವಿಲ್ಲವೇ? ಅಪವಿತ್ರರು ಪವಿತ್ರರನ್ನು ಗೌರವಿಸ

ಬೇಡವೇ? ಅವರನ್ನು ಬೇಕಾದಂತೆ ಗೌರವಿಸದಿರುವುದು ಅಧಮಂತನ. ಬ್ರಾಹ್ಮಣರಲ್ಲಿ ಹಣಕ್ಕೆ ಮಾತ್ರ ಗೌರವ ತೀರಾ ತಪ್ಪು.

ಪುರೋಹಿತರಿಗೆ ನಾವು ಹಲವು ಸಂದರ್ಭಗಳಲ್ಲಿ ಕೊಡುವ ದಾನ ದಕ್ಷಿಣೆಗೂ, ಲೌಕಿಕರಿಗೆ ಅವರ ಕೆಲಸಕ್ಕಾಗಿ ಅವರು ಕೇಳುವ ನಿರ್ದಿಷ್ಟ ಕೂಲಿಗೂ, ಫೀಸಿಗೂ, ಬಹಳ ವ್ಯತ್ಯಾಸವಿದೆ. ವೇದದ ಹಿರಿಮೆ ಅಪಾರವಾದುದು. ವೇದ ಮಂತ್ರಗಳ ಉಪಯೋಗದಿಂದ ನಡೆಸುವ ಸಂಸ್ಕಾರಗಳಿಗೆ ಅಂಗಡಿ ಸಾಮಾನಂತೆ ನಿರ್ದಿಷ್ಟ ಬೆಲೆ ಕೊಟ್ಟರೆ ವೇದವನ್ನು ಅಲ್ಪ ಮಾಡಿದಂತೆ. ವೇದವೇ ಈ ಭಾಗದಲ್ಲಿ ತಿಳಿಸಿದಂತೆ ದಾನ ದಕ್ಷಿಣೆ ಶ್ರದ್ಧೆಯಿಂದ ಕೊಡಬೇಕು, ಅಶ್ರದ್ಧೆಯಿಂದ ಅನಾದರದಿಂದ, ತಿರಸ್ಕಾರಭಾವದಿಂದ ಅಲ್ಲ. ತನ್ನ ಸಂಪತ್ತಿಗೆ ತಕ್ಕಂತೆ ಕೊಡಬೇಕು (ಲೋಭದಿಂದ ಕಡಿಮೆ ಮಾಡಿ ಅಲ್ಲ). ಇನ್ನೂ ಹೆಚ್ಚಾಗಿ ಕೊಡಲಿಕ್ಕಾಗಲಿಲ್ಲವಲ್ಲ ಎಂಬ ನಾಚಿಕೆಯಿಂದ ಕೊಡಬೇಕು. ಚೆನ್ನಾಗಿ ಕೊಡದಿದ್ದರೆ ಸದ್ಗತಿಯಾಗದಲ್ಲ ಎಂಬ ಭೀತಿಯಿಂದ ಕೊಡಬೇಕು. ದೇಶಕಾಲ ಪಾತ್ರಗಳ ಸಂದರ್ಭಕ್ಕೆ ತಕ್ಕುದಾಗಿ ಕೊಡಬೇಕು. ಆದ್ದರಿಂದ ಪುರೋಹಿತರ ಕೆಲಸಕ್ಕೆ ನಿರ್ದಿಷ್ಟ ದರ ಅಸಾಧ್ಯ. ಬಡವನ ಮಂಗಳಿಗೂ ಮದುವೆ ಸಂಸ್ಕಾರ ಧಾರ್ಮಿಕವಾಗಿ ಆಗಬೇಕು, ಐಶ್ವರ್ಯವಂತನ ಮಂಗಳಿಗೂ ಆಗಬೇಕು. ಪುರೋಹಿತರ ಒಂದೇ ದರ ಏನೂ ನ್ಯಾಯವಾಗದು.

ಪುರೋಹಿತರಿಗೆ ಕೊಡುವ ದಾನ ದಕ್ಷಿಣೆಗಳೊಡನೆ ದಾತನ ಕೆಲವು ಪಾಪವೂ ಪುರೋಹಿತರಿಗೆ ಬರುತ್ತದೆ. ಅವನದ್ದು ಧಾರ್ಮಿಕ ಜೀವನದ ಸಂಪಾದನೆಯಾದರೆ (ಶುಕ್ಲದ್ರವ್ಯ, ಆಗ ಸಂಪಾದನೆ ಹೆಚ್ಚು ಇರುವುದು ಅಸಾಧ್ಯ). ಪುರೋಹಿತರಿಗೆ ಹಣದೊಡನೆ ಜೀರ್ಣಿಸಲು ಬರುವಪಾಪ ಸ್ವಲ್ಪ ಮಾತ್ರ. ಶುಕ್ಲದ್ರವ್ಯವಲ್ಲದ ಸಂಪಾದನೆಯುವ ಕೊಡುವ ಪಾಪ ಬಹಳ ಹೆಚ್ಚಿರದಿರದು. ಆದ್ದರಿಂದ ಈ ದಾನಗಳ ಬೆಲೆಯು ಲೌಕಿಕರು ಅವರವರು ಕೇಳುವಂತೆ ಶ್ರಮಕ್ಕೆಹೊಂದಿ ಕೂಲಿಯವನಿಗೆ ಕೊಡುವ ರೂ. ೧೫, ಡಾಕ್ಟರರ ೧ ಗಂಟೆ ಆಪರೇಶನ್ನಿಗೆ ರೂ. ೩೦೦ ಹೈಕೋರ್ಟಿನ ಒಂದುದಿನದ ವ್ಯವಹರಣೆಗೆ ನ್ಯಾಯವಾದಿಗೆ ೧೦೦೦ಗಳ ತರದ ನಿರ್ದಿಷ್ಟ ಬೆಲೆಗಳಿಗೆ ಹೋಲಿಸುವಂತೆಯೇ ಇಲ್ಲ. ಮುಂಚಿನ ಕಾಲದ ಬ್ರಾಹ್ಮಣ ಸಮಾಜದ ಪ್ರತಿ ಮನೆಯಲ್ಲಿ ಜಪತಪ, ಪೂಜೆ ಇದ್ದ ಕಾಲದ ದಾನಗಳೊಡನೆ ಬರುವ ಪಾಪಕ್ಕಿಂತ ಈ ಕಾಲದ ಲೌಕಿಕರ ದಾನದ ಪಾಪದ ಮೊತ್ತ ೫೦೦ ಪಾಲು, ೧೦೦೦ ಪಾಲು ಇರಬಹುದು ; (ಈಗ ಜಪಮಾಡದ ಶೂದ್ರಮಟ್ಟದವರೂ, ಕುಡುಕರೂ ಕೂಡ ಬ್ರಾಹ್ಮಣರೇ

ಅಲ್ಲವೇ ?) ಅವರು ತಮ್ಮ ಹಣದ ವಿಚಾರದಲ್ಲಿ ಗರ್ವಪಡುವುದು ಕೇವಲ ಧರ್ಮದ ಅಜ್ಞಾನದ ಅಂಧತೆಯಿಂದ ಮಾತ್ರ. ಅವರು ಧಾರಾಳವಾಗಿ ದಕ್ಷಿಣೆ ಕೊಟ್ಟು ಪುರೋಹಿತರನ್ನು ಮೆಚ್ಚಿಸುವುದು ಮಾತ್ರ ನ್ಯಾಯವಾದೀತು.

ಪುರೋಹಿತ ವರ್ಗದವರು, ತಾವು ಮೇಲುತರದವರೆಂದು ಗರ್ವಪಡುವ ಲೌಕಿಕರಿಗಿಂತ ಬುದ್ಧಿಶಕ್ತಿಯಲ್ಲಿ ಏನೂ ಕಡಿಮೆಯವರಲ್ಲ. ಅವರ ಮಕ್ಕಳು ಲೌಕಿಕರ ದಾರಿಹಿಡಿದವರು ಅವರಮಟ್ಟಕ್ಕೆ ಬೇಗ ಬರುತ್ತಾರೆ. ವೇದ ಕಲಿಯು ವುದು ಹಲವು ವರ್ಷಗಳ ಸಾಧನೆ. ವೇದದಲ್ಲಿಯೇ ದಾನ ಧರ್ಮ ದೇಶಕಾಲ ಗಳಿಗೆ ತಕ್ಕುದಾಗಿ ಕೊಡಬೇಕೆಂದಿದೆ. ಸಾಮಾನ್ಯ ಕೂಲಿಯವನ ದಿನದ ಸಂಬಳ ಕಾಲಕಾಲಕ್ಕೆ ತಕ್ಕುದಾಗಿ ಅವನ ಸಂಗದವರಿಂದ ಏರಿಸಲ್ಪಡುತ್ತ ಬಂದಿದೆ. ಕಡಿಮೆಕೊಟ್ಟರೆ ಹಿಂದೆ ಬಿಸಾಡುತ್ತಾನೆ. ಪುರೋಹಿತರು ಆ ಸಂಗ ಬಲವೇ ನ್ಯಾಯ ಎಂಬ ಅಲ್ಪಕ್ರಮಕ್ಕೆ ಹೋದವರಲ್ಲ. ಕೂಲಿಯವನಿಗೆ ವರ್ಷದ ೩೦೦ ದಿನ ಸಂಪಾದನೆ ಸಾಧ್ಯ. ಪುರೋಹಿತರಿಗೆ ಶಿಷ್ಯವರ್ಗದಿಂದ ವರ್ಷಕ್ಕೆ ೫೦–೬೦ ದಿನ ಕರೆಬರುವ ಮಟ್ಟಕ್ಕೂ ಇಳಿದಿದೆ. ನಮಗೆ ದೇಹಕೊಟ್ಟ ತಂದೆ ತಾಯಿ ಅದನ್ನು ರಕ್ಷಿಸುವಂತೆಯೇ ಉಪನಯನದ ಮೂಲಕ ಬಂದ ಹೊಸ ಬ್ರಾಹ್ಮಣದೇಹವನ್ನು ಪಾಲಿಸಲು ಬೇಕಾದ ಪುರೋಹಿತವರ್ಗ ನಮ್ಮ ಪೋಷಕ ವರ್ಗವಾಗಬೇಕು ಎನ್ನುತ್ತದೆ ಶಾಸ್ತ್ರ (ಮಿತಾಕ್ಷರೀ, ಯಾಜ್ಞವಲ್ಕ್ಯ ಸ್ಮೃತಿ ೧, ೨೧೬). ವಿವಾಹ ಮುಂತಾದ ಸಂದರ್ಭದಲ್ಲಿ ಬಂಧುಗಳಿಗೆ ಸೀರೆ ಹಂಚಲಿಕ್ಕೆ ಭಾರೀ ಖರ್ಚು. ಆದರೆ ಪೋಷಕವರ್ಗದ ಪುರೋಹಿತರಿಗೆ ಕೊಟ್ಟ ಧೋತ್ರ ಎಲ್ಲ ಎಷ್ಟೆಲ್ಲ ? ಎಂಬ ಪಟ್ಟಿಗೆ ಸೇರಿ ದಿಗಿಲು ಬೀಳಿಸುತ್ತದೆ !

ಮನುಸ್ಮೃತಿಯಲ್ಲಿ ಹೇಳಿದೆ (೭, ೮೫) : ಬ್ರಾಹ್ಮಣೇತರನಿಗೆ ಕೊಟ್ಟ ಒಂದು ದಾನದ ಎರಡು ಪಾಲು ಪುಣ್ಯ ಬ್ರಾಹ್ಮಣ, ಆದರೆ ಬ್ರಾಹ್ಮಣೋಚಿತ ಕರ್ಮಮಾಡದವನಿಗೆ ಕೊಟ್ಟರೆ ಬರುತ್ತದೆ. ಅದೇ ದಾನ ಒಂದು ವೇದಕಲಿತ ವನಿಗೆ ಕೊಟ್ಟರೆ ಫಲ ಲಕ್ಷಪಾಲು ; ನಾಲ್ಕು ವೇದ ಕಲಿತವನಿಗೆ ಕೊಟ್ಟರೆ ಫಲ ಅನಂತ ಎಂದು ! ಆದ್ದರಿಂದ ಶಾಸ್ತ್ರೋಕ್ತ ದಾನಗಳು ಅಪಾರಮಟ್ಟದ ಪುಣ್ಯ ತರುತ್ತವೆ ; ತಮ್ಮ ಜೀವನ ಪಾಪತರದ್ದು, ಆದ್ದರಿಂದ ಪರಿಹಾರಕ್ಕೆ ಈ ದಾನದ ದಾರಿ ಧಾರಾಳವಾಗಿ ಅನುಸರಿಸುವ ಎಂಬ ನಿರ್ಧಾರ ಲೌಕಿಕರು ಮಾಡಲೇ ಬೇಕಾದುದು ಅತ್ಯಗತ್ಯ.

ಪುರೋಹಿತರನ್ನು ಪಕ್ಷಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಕರೆದು ಮನೆ ಯನ್ನು ಅವರ ವೇದಘೋಷದಿಂದ ತುಂಬಿಸದ ಗೃಹಸ್ಥನು ದುರಾತ್ಮ, ಕಠಿಣ

ಪ್ರಾಯಶ್ಚಿತ್ತಮಾಡಿಕೊಳ್ಳಬೇಕಾದವ ಎನ್ನುತ್ತದೆ ಸ್ಕಾಂದ, ಕಾಶಿ (೪೦-೨೭). ಯಜ್ಞ, ಹೋಮ, ತೀರ್ಥಸ್ನಾನಗಳನ್ನು ಮಾಡಿದರೆ ಬರುವ ಫಲವೆಲ್ಲ ಜಪ ಜೀವಿ ವಿಪ್ರನಿಗೆ ಅನ್ನದಾನ ಮಾಡದ್ದರಿಂದಲೇ ಬರುತ್ತದೆ ಎನ್ನುತ್ತದೆ ಭವಿಷ್ಯ ಪುರಾಣ. ಅನ್ನದಾನ ಮಾಡದವರು ಸ್ವರ್ಗ ಸೇರಿದಾಗಲೂ ಹಸಿವಿನ ಬಾಧೆಗೆ ಒಳಗಾಗುತ್ತಾರೆ (ಭವಿಷ್ಯ, ಉತ್ತರ ಅ. ೧೬೯). ಶ್ರೀವಿಷ್ಣುವನ್ನು ಚೆನ್ನಾಗಿ ಪೂಜಿಸಿ ವಿಷ್ಣುಲೋಕ ಪಡೆದವನಿಗೂ, ಅವ ಮುಂಚೆ ಅನ್ನದಾನ ಮಾಡಿರದ್ದರಿಂದ ವಿಷ್ಣುವು ಗೋಚರನಾಗಲಿಲ್ಲ ಎನ್ನುತ್ತದೆ ಪದ್ಮಪುರಾಣ.

ಕುಲ ಪುರೋಹಿತರನ್ನು ಅವರ ಬಹಳ ತಪ್ಪಿಲ್ಲದೆ ಬಿಡಕೂಡದು. ಅವ ರಿಂದ ಬಹಳ ದೂರವಾದವರು ತಮ್ಮ ವೇದ ಭಾಗದ ಮಂತ್ರಾರನ್ನಾದರೂ ಖಾಯಂ ಪುರೋಹಿತರಾಗಿ ಚಿಕ್ಕ ಚಿಕ್ಕ ಕಾರ್ಯಗಳಿಗೆ ಹಿಡಿಯಬಹುದು. ಆದರೆ ಉಪನಯನ ವಿವಾಹ ಮುಂತಾದವುಗಳಿಗೆ ಕುಲಪುರೋಹಿತರನ್ನು (ವಿಪರೀತ ದೂರವಿಲ್ಲದಿದ್ದರೆ) ಕರೆಸಬೇಕು. ಆಗ ಅಲ್ಲಿಯ ಪುರೋಹಿತರನ್ನೂ ಕರೆದು ಗೌರವಿಸಬೇಕು. ವರ್ಷಕ್ಕೆ ೪ ಅಥವಾ ಹೆಚ್ಚು ಸಾರಿ ಶ್ರಾದ್ಧ ಮುಂತಾದ ಪ್ರತಿವರ್ಷ ಬರುವ ಕಾರ್ಯಗಳಿಗೆ ಕರೆಸುತ್ತಿದ್ದರೆ ಉತ್ತಮವಾದೀತೆಂದು ನನ್ನ ಭಾವನೆ. ಶ್ರಾದ್ಧಕ್ಕೆ ಪುರೋಹಿತರ ಮನೆಗೆ ಹೋಗಿ ಅಲ್ಲಿ ಮಾಡಿಸುವ ಕೆಲವರ ಕ್ರಮದಲ್ಲಿ ತಾವು ವಾಸಿಸುವ ಮನೆಯಲ್ಲಿ ವೇದಘೋಷ, ಮಕ್ಕಳು ವೈದಿಕ ಕಾರ್ಯ ನಡೆಸುವುದು ನೋಡುವುದು, ಅವರಿಗೆ ನಮಸ್ಕರಿಸುವುದು, ತಪ್ಪುತ್ತದೆ. ಸಾಧ್ಯವಿದ್ದರೆ ಮನೆಗೆ ಕರೆಸುವುದೇ ಅಗತ್ಯ. ಆದರೆ ಮೇಜಿನ ಮೇಲಿನ ಊಟದಮನೆ ಇಡೀ ಎಂಜಲಮಯ! ಹಾಳು! ಶ್ರಾದ್ಧಮುಂತಾದ ಕರೆ ಸಲೇಬೇಕಾದ ಕರ್ಮಗಳಿಲ್ಲದಿದ್ದರೆ ಒಂದು ಗಣಹೋಮಕ್ಕೆಮತ್ತೊಮ್ಮೆ ವೇದ ಪಠನಕ್ಕೆ (ಪವಮಾನ, ರುದ್ರ, ಪುರುಷಸೂಕ್ತ ಪಠನಗಳಿಗೆ) ಮತ್ತು ಮನೆಯಲ್ಲಿ ಶಿವಲಿಂಗ, ಸಾಲಿಗ್ರಾಮವಿದ್ದರೆ ಅವಕ್ಕೆ ಪುರೋಹಿತರ ಅತಿಚೆನ್ನಾಗಿ ಮಾಡುವ ಪೂಜೆಗೆ, ಕಾರ್ತಿಕಮಾಸದಲ್ಲಿ ದೀಪ ದಾನ ಬಹಳ ಪುಣ್ಯಕರವಾದ್ದರಿಂದ ಬೇಕಾ ದರೆ ಆಗ, ಸತ್ಯನಾರಾಯಣ ವ್ರತದ ಆಚರಣೆ ಇದ್ದರೆ ಅದಕ್ಕೆ, (ಅದು ತೀರಾ ಇತ್ತೀಚಿನ ವ್ರತ ಮುಂಚಿನ ದಾಖಲೆಗಳಿಲ್ಲ. ಪುರಾಣದಲ್ಲಿ ತೋರಿಸಿದ್ದು ಪ್ರಕ್ಷಿಪ್ತವಾಗಿ ಮಾತ್ರ, ಅದು ಮಾಡಲೇಬೇಕಾದ ವ್ರತಗಳಂತಲ್ಲ !) ಮುಂತಾಗಿ ಅವರಿಗೆ ಮುಖ್ಯವಾಗಿ ಪ್ರತಿವರ್ಷ ತಪ್ಪದೆ—ತಮ್ಮ ಖಾಯಂ ಪುರೋಹಿತರು ಎಂಬ ಸಂಪರ್ಕ ಬಾಳಿಸಲಿಕ್ಕೆ (retaining fees) ಕರೆಸಿ ದಾನದಕ್ಷಿಣೆ ಭೋಜನ ಸಲ್ಲಿಸಬೇಕು. ಹಾಗೆ ಸಂಪರ್ಕ ಉಂಟಾಗಿ ಖಾಯಂ ಬಾಳಿಸಿಕೊಂಡು ಬಂದ

ಪುರೋಹಿತರು, ಶಿಷ್ಯ ಬಡವನಾದರೂ ಅವನ ಮುಖ್ಯ ಕರ್ಮಗಳಿಗೆ ಬರಲಿಕ್ಕೆ ತೊಂದರೆತರುವ ಖಾಯಂ ಅಲ್ಲದ ಐಶ್ವರ್ಯವಂತರ ಕರೆಬಂದಾಗಲೂ ಅದನ್ನು ತ್ಯಜಿಸಬೇಕು. ಎಂಬುದು ರೂಢಿಗೆ ಬಂದರಾದೀತೆಂದು ತೋರುತ್ತದೆ. ಡಿಲ್ಲಿ ಯಲ್ಲಿ ತಮಿಳು ಬ್ರಾಹ್ಮಣ್ಯ ಸಂಘಗಳ ಪುರೋಹಿತರಿಗೆಂದು ತಮ್ಮದೇ ಮನೆ ಕೊಟ್ಟು, ನಿರ್ದಿಷ್ಟ ಮಾಸ ಸಂಬಳಕೊಟ್ಟು, ಸಂಘದ ಸದಸ್ಯರಿಗೆಲ್ಲ ಅವರ ಸೇವೆ ತಪ್ಪದೆ ಸಿಕ್ಕುವಂತೆ ಮಾಡುತ್ತಿವೆ. ಗ್ರಹಣ ಕಾಲದ ದಾನ (ದಕ್ಷಿಣೆ), ಮಕರ ಸಂಕ್ರಾಂತಿ ದಿನದ ದಾನ ಮುಂತಾದವು ಬಹಳ ಹೆಚ್ಚು ಫಲ ಕೊಡುವುದರಿಂದ ಅಂದು ತಮ್ಮ ಪುರೋಹಿತರ ಹೆಸರಲ್ಲಿ ಎಲ್ಲರೂ ದಾನ ಸಂಕಲ್ಪಿಸಿ ತೆಗೆದಿಟ್ಟು ಅನಂತರ ಅನುಕೂಲವಾದಾಗ ಅವರಿಗೆ ಸಲ್ಲಿಸಬಹುದು. ನಮ್ಮ ಹಬ್ಬಗಳ ಕೃಷ್ಣಾಷ್ಟಮಿ, ನವರಾತ್ರಿ, ಶಿವರಾತ್ರಿ, ಗೌರೀತೃತೀಯದ ಪೂಜೆ ಮುಂತಾದ ಮಾಡಲೇಬೇಕಾದ ವ್ರತಗಳಲ್ಲಿ ನಾವೇ ಚಿಕ್ಕಪೂಜೆ ಮಾಡಿದರೂ ಆ ಸಂದರ್ಭದ ಫಲಕ್ಕಾಗಿ ಪುರೋಹಿತರಿಗೆ ದಕ್ಷಿಣೆ ತೆಗೆದಿಡಬಹುದು. ಇಂಥ ದಕ್ಷಿಣೆಗಳಿಗೆಲ್ಲ ಪ್ರತ್ಯೇಕ ಒಂದು ಅಗಲ ಬಾಯಿಯ ಬಾಟಲಿ ಮಾಡಿ, ದೇವರ ಕೋಣೆಯಲ್ಲೇ ಇಡಬಹುದು. ಇದೂ ಅವರಿಗೆ ಪ್ರೋತ್ಸಾಹದಾಯಕವಾಗುತ್ತದೆ.

ಲೌಕಿಕರ ಮನೆಯಲ್ಲೀಗ ವೈದಿಕಕರ್ಮಗಳಿಗೆ ಬೇಕಾದ ದ್ರವ್ಯಗಳ ವಿಚಾರ ಮುಂತಾಗಿ ಜ್ಞಾನ, ಮಾಹಿತಿ ಇದ್ದವರಿಲ್ಲ. ಅವಕ್ಕೆ ಬೇಕಾದ ದ್ರವ್ಯಗಳ ಸರಿ ಯಾದ ಪಟ್ಟಿಗಳಿರುವ ಕೈಪಿಡಿ ಒಮ್ಮೆ ಅರ್ಧ ತಯಾರಿಸಿ ಕೈಬಿಟ್ಟೆ. ಅದು ಪ್ರಯೋಜನಕಾರಿಯಾದೀತು. ದಕ್ಷಿಣೆಯ ವಿಚಾರದಲ್ಲಿ, ಹಲವು ಚಿಕ್ಕ ದಕ್ಷಿಣೆ ಗಳಿಡಬೇಕಾದಲ್ಲಿ, ಅವು ಎಲ್ಲವಕ್ಕೂ ಒಂದೇ ತರದ ಒಟ್ಟು ಎಷ್ಟು ನಾಣ್ಯಗಳು ಬೆಲೆ (೫-೧೦-೨೫ ಪೈಸೆ ಅವರವರಿಗೆ ಬಿಟ್ಟು) ಬೇಕು ಎಂದು ತಿಳಿಸುವುದು ಈ ಕಾಲದ ಲೌಕಿಕರ ಮನೋಭಾವನೆಗೆ ಅನುಕೂಲ; ಕೈಪಿಡಿಯಲ್ಲಿ ಈ ಸಂಖ್ಯೆ ಇದ್ದರೆ ಉತ್ತಮ. ಪ್ರತಿವರ್ಗದ ಬ್ರಾಹ್ಮಣರಿಗೆ ಅವರದ್ದೇ ಕೈಪಿಡಿ ಬೇಕಾಗುತ್ತದೆ.

## ೧೫. ದಾನ

ಕಲಿಯುಗದಲ್ಲಿ ಜನಿಸಿರುವವರಲ್ಲಿ ಪಾಪದ ಸಂಗ್ರಹ ಬಹಳ. ಅದು ಬಂದದ್ದು ದೇಹಸುಖದ ತೃಷೆಯಿಂದ, ಆತ್ಮಹಿತದ ಮರವೆಯಿಂದ. ಜನರ

ಲಕ್ಷ್ಯವೆಲ್ಲ ದೇಹಕ್ಕೆ ಭೋಗತರುವ ಧನದ ಸಂಗ್ರಹದಲ್ಲಿದೆ; ಅವರು ದೇವರ ನಾಮ ಜಪಮಾಡುತ್ತ ಕುಳಿತಿರಲಾರರು. ಆದರೆ ಪಾಪಕ್ಕೆ ಶಿಕ್ಷೆಯಾಗಿ ಕಷ್ಟಗಳು ಬಹಳ ಬಂದಾಗಲೂ ಪಾಪದ ಪರಿಹಾರಕ್ಕೆ ಧರ್ಮಕಾರ್ಯಗಳ ಬಯಕೆ ಬರುತ್ತದೆ. ದೇವರನಾಮ ಜಪದಿಂದಲೂ ಪಾಪ ಪರಿಹಾರ, ದಾನದಿಂದಲೂ ಅದರ ಪರಿಹಾರ ಸಾಧ್ಯ. ಆದರೆ ಧಾರಾಳ ಜಪಕ್ಕೆ ಮನಸ್ಸಿನ ಉತ್ತಮ ತರಬೇತಿಬೇಕು. ದಾನವನ್ನಾದರೋ ಥಕ್ಕನೆನಿರ್ಧರಿಸಿ, ಮಾಡಿಮುಗಿಸಬಹುದು. ಆದ್ದರಿಂದಲೇ **ದಾನಮೇಕಂ ಕಲೌಯುಗೇ** ಎಂದು ಮನುಸ್ಮೃತಿ ಸಾರಿದೆ (೧,೮೬).

ದಾನೇನ ನಶ್ಯತೇ ಪಾಪಂ ದಾನಾತ್ಪುಣ್ಯಂ ಪ್ರವರ್ತತೆ ॥

ಎಂದು ಶ್ರೀವಿಷ್ಣುವು ಪದ್ಮಪುರಾಣದಲ್ಲಿ ಹೇಳಿದ್ದಾನೆ (ಭೂಮಿ ಅ ೩೮). ಭಗವದ್ಗೀತೆಯಲ್ಲಿ ಶ್ರೀಕೃಷ್ಣನು (೧೮–೧೫):

ಯಜ್ಞದಾನ ತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ॥

ಎಂದರೆ ಯಜ್ಞ, (ಪೂಜೆ, ಹೋಮ) ದಾನ, ತಪಃ (ಸ್ವಧರ್ಮದ ಆಚರಣೆಗಳನ್ನು ದೇಹದ ಕಷ್ಟ ಲಕ್ಷಿಸದೆ ಚೆನ್ನಾಗಿ ಮಾಡುವುದು) ಬಿಡಕೂಡದು ಎಂದಿದ್ದಾನೆ. ಮಹಾನಾರಾಯಣೋಪನಿಷತ್ತಲ್ಲಿ ದಾನವು ಅತ್ಯುತ್ತಮ ಮೋಕ್ಷದಾಯಕ ಕರ್ಮ ಎಂದೂ ಇದೆ (೭೯,೬). ತಸ್ಮಾದ್ದಾನಂ ಪರಮಂ ವದಂತಿ. ಆಪಸ್ತಂಬರ ಹೇಳಿಕೆಯಂತೆ:

ಅದಾನ ದೋಷೇಣ ಭವೇದ್ದರಿದ್ರಃ ದರಿದ್ರ ದೋಷೇಣ ಕರೋತಿ ಪಾಪಂ ।
ಪಾಪಾದವಶ್ಯಂ ನರಕಂ ಪ್ರಯಾತಿ ಪುನರ್ ದರಿದ್ರಃ ಪುನರೇವ ಪಾಪೀ ॥

ಮನುಷ್ಯನು ದಾನ ಮಾಡದ ದೋಷದಿಂದ ಮುಂದೆ ದರಿದ್ರ ಜನ್ಮ ಪಡೆಯುತ್ತಾನೆ. ದಾರಿದ್ರ್ಯದ ಪೀಡೆಯಿಂದ ಅವಶ್ಯಕವಾಗಿ ಪಾಪಕಾರ್ಯ ಮಾಡುತ್ತಾನೆ; ಆದ್ದರಿಂದ ನರಕಕ್ಕೆ ಹೋಗುತ್ತಾನೆ. ಪುನಃ ದರಿದ್ರನಾಗಿ ಹುಟ್ಟುತ್ತಾನೆ, ಪುನಃ ಪಾಪಿಯಾಗುತ್ತಾನೆ. ದಾನಮಾಡದ ಐಶ್ವರ್ಯವಂತನಿಗೆ ಭೋಗಗಳ ಆಸೆ ಬೆಳೆಯುತ್ತ ಹೋಗಿ ದುರಭ್ಯಾಸಗಳೇ ಹೆಚ್ಚುತ್ತವೆ. ಹೀಗೆಲ್ಲ ಇರುವುದರಿಂದ ಧನವನ್ನು ದಾನಮಾಡುವುದೇ ಕ್ಷೇಮಂಕರ. ದೋಣಿ ನಡೆಸಲಿಕ್ಕೆ ನೀರು ಬೇಕಾದಂತೆ ಜೀವನದ ವ್ಯವಹಾರಕ್ಕೆ ಹಣ ಬೇಕು. ಆದರೆ ನೀರು ದೋಣಿಯನ್ನು ಹೊಗ್ಗಲಾರಂಭಿಸಿದರೆ ಅದನ್ನು ಎಲ್ಲರೂ ಬೇಗ ಚೆಲ್ಲುವಂತೆ ಮನೆಯಲ್ಲಿ ಧನ ತುಂಬಿದರೆ ಅದನ್ನು ದಾನದ ಮೂಲಕ ಹೊರಗೆ ಹಾಕಬೇಕು. ಮನುಸ್ಮೃತಿಯಲ್ಲಿ ಎಚ್ಚರಿಸಿದಂತೆ (೪,೨೩೯,೪೧); ನಾವು ಒಬ್ಬರೇ ಜನಿಸಿ

ದೆವು, ಒಬ್ಬರೇ ಸಾಯುತ್ತೇವೆ. ಆಗ ನಾವು ಮಾಡಿದ ಅಧರ್ಮ ಧರ್ಮ ಮಾತ್ರ ನಮ್ಮೊಡನೆ ಬರುತ್ತವೆ. ದಾನದಿಂದ ಐಶ್ವರ್ಯ ಕುಂದುತ್ತದೆ ಎಂಬ ಭಯಬೇಡ, ಅದು ಹಾಗಾಗದು ಎಂದು ಋಗ್ವೇದವೇ ಹೇಳುತ್ತದೆ ಮತ್ತು ತನ್ನ ಅನ್ನವನ್ನು ಇತರರೊಡನೆ ಹಂಚಿಕೊಳ್ಳದವನ ಅನ್ನವೇ ಅವನಿಗೆ ಮೃತ್ಯು ವಾಗುತ್ತದೆ ಎಂದೂ ಅದು ಹೇಳಿದೆ (೧೦,೧೧೭,೧,೬). ದರಿದ್ರನಾದ ವನು ನಮ್ಮಿಂದ ಕೇಳಿದ ವಸ್ತುವನ್ನೆಲ್ಲ ನಮ್ಮ ಶಕ್ತಿಗೆ ಅನುಸಾರವಾಗಿ ಕೊಡ ಬೇಕು ; ಹಾಗೆ ಕೊಡದಿದ್ದರೆ ಜನ್ಮಾಂತರದಲ್ಲಿ ನಾವು ಅವನ ಸಾಲಗಾರರಾಗು ವೆವು ಎನ್ನುತ್ತದೆ ಶಿವಪುರಾಣ (ವಿಶ್ವೇಶ್ವರ ಅ. ೧೩,೭೮). ಅತ್ರಿ ಸಂಹಿತೆಯು ಹೇಳಿಕೆಯಂತೆ (೪೦) ಸಂಪಾದನೆ ಹೆಚ್ಚಿಲ್ಲದವನೂ, ಇರುವ ಸ್ವಲ್ಪದರಲ್ಲಿಯೇ ನಿತ್ಯವೂ ಸ್ವಲ್ಪವನ್ನು ಉದಾರ ಭಾವನೆಯಿಂದ ದಾನಮಾಡಬೇಕು. ಆದ್ದರಿಂದ "ನಾಸ್ತಿದಾನಾತ್ ಪರಂ ಮಿತ್ರ" (ಅತ್ರಿಸಂಹಿತೆ) ಎಂದು ನಿರ್ಧರಿಸಬೇಕು. ಸ್ಕಾಂದಪುರಾಣದಲ್ಲಿ ಹೇಳಿದೆ (ಮಹೇಶ್ವರ, ಕೌಮಾರಿಕ ಅ. ೬೯) :

ಧನವಂತಮದಾತಾರಂ ದರಿದ್ರಂ ಚಾತಪಸ್ವಿನಂ ।
ಉಭಾವಂಭಸಿ ಮೋಕ್ತವ್ಯೌ ಕಂಠೇ ಬದ್ಧ್ವಾಮಹಾಶಿಲಾಂ ॥

ಎಂದರೆ ಧನವಂತನಾಗಿದ್ದು ದಾನಮಾಡದವನನ್ನೂ ದರಿದ್ರನಾಗಿದ್ದು ತಪಸ್ಸು ಮಾಡದವನನ್ನೂ ಇಬ್ಬರನ್ನೂ ಕೊರಳಿಗೆ ಕಲ್ಲು ಕಟ್ಟಿ ನೀರಲ್ಲಿ ಮುಳುಗಿಸಬೇಕೆಂದಿದೆ !

ಬಡವನಿಗೂ ಐಶ್ವರ್ಯವಂತನಂತೆಯೇ ಪ್ರತಿದಿನಕ್ಕೆ ೨೪ ಗಂಟೆಯು ಕಾಲ ದೇವರು ಕೊಟ್ಟಿದ್ದಾನೆ, ಬಡವನಿಗೆ ಐಶ್ವಯವಂತನಿಗಿಂತ ಕಷ್ಟಸಂಹಿಷ್ಣುತೆ ಹೆಚ್ಚಾಗಿ ಸಾಧ್ಯ. ಅವ ಪ್ರಾತಃಸ್ನಾನ, ಜಪ, ಪೂಜೆ. ಸಹಸ್ರನಾಮ ಪಠಣ, ಉಪವಾಸ ದೇವಸ್ಥಾನಗಳಲ್ಲಿ ಧ್ಯಾನ ಮುಂತಾದವನ್ನು ಐಶ್ವರ್ಯವಂತನಿಗಿಂತ ಎಷ್ಟೋ ಹೆಚ್ಚು ಮಾಡಿ ಮುಂದಿನ ಜನ್ಮದಲ್ಲಿ ದಾನ ಧರ್ಮದ ಕಾರ್ಯಗಳಿಗೆ ಬೇಕಾದ ಐಶ್ವರ್ಯ ಪಡೆಯಬೇಕು. ದಕ್ಷ ಸಂಹಿತೆಯಲ್ಲಿ ವಿಪ್ರರು ಸ್ವಲ್ಪವೂ ಸಮಯ ಹಾಳು ಮಾಡಕೂಡದು ಎಂದಿದೆ. ಆದರೆ ಅನೇಕಾನೇಕ ಹಳ್ಳಿಯ ಬ್ರಾಹ್ಮಣರಿಗೆ ಇತ್ತೀಚಿನವರೆಗೂ ಅತ್ತ ಧಾರ್ಮಿಕ ಸಾಧನೆಗಳೂ ಹೆಚ್ಚಿರಲಿಲ್ಲ; ಇತರ ಲೌಕಿಕ ಕ್ಷೇತ್ರದಲ್ಲಿ ಧಾರಾಳ ಶ್ರಮ ಪಡುವುದೂ ಇರಲಿಲ್ಲ. ಅವರು ಬೇಸಾಯ ಶೂದ್ರರಿಂದ ಮಾಡಿಸಿ ಅಪಾರ ಮಟ್ಟದಲ್ಲಿ ಸಮಯ ಹಾಳು ಮಾಡುತ್ತಿದ್ದರು. ಅವರದ್ದು ಸಾತ್ವಿಕ ಜೀವನವಲ್ಲ ; ಕೇವಲ ತಾಮಸಿಕ ಜೀವನ. ಉತ್ತರ ಹಿಂದೂಸ್ಥಾನದಲ್ಲಿ ಬ್ರಾಹ್ಮಣರು ಕೆಲವು ಕಡೆಗಳಲ್ಲಿ ಬಹಳ

ಕೆಳ ಆರ್ಥಿಕ ಮಟ್ಟಕ್ಕಿಳಿದಾಗಿದೆ. ಮೇಲೆ ಬರಲಾರರು. ಕೆಟ್ಟಮೇಲೆ ಬುದ್ಧಿ ಬಂದಂತಾಗಿದೆ ಅವರ ಸ್ಥಿತಿ. ಲೌಕಿಕ ಕ್ಷೇತ್ರದ ಹಲವು ಭಾಗಗಳಲ್ಲೆಲ್ಲ ತುಂಬಾ ಚಟುವಟಿಕೆ, ಶ್ರಮವಹಿಸುವ ಗೌಡಸಾರಸ್ವತರು ಅವಲ್ಲಿ ಪ್ರತಿ ಕ್ಷೇತ್ರದಲ್ಲೂ ಬಹಳ ಮುಂದೆ ಬಂದಿದ್ದಾರೆ; ಆರ್ಥಿಕ ಸ್ಥಿತಿ ಉತ್ತಮ ಮಾಡಿ ಕೊಂಡಿದ್ದಾರೆ. ಬೇಸಾಯ, ನೌಕರಿ, ಹುದ್ದೆ ಮಾತ್ರ ನಂಬಿದ್ದ ಬ್ರಾಹ್ಮಣ ವರ್ಗಕ್ಕೆ ಇನ್ನು ಬಹಳ ಕಷ್ಟ ಬರಲಿಕ್ಕಿದೆ. ಆದರೆ ಶ್ರಮವಹಿಸುವವ, ಸಮಯ ಹಾಳು ಮಾಡದವ, ಶೀಲವಂತ, ಖಂಡಿತ ಕ್ರಮೇಣ ಮುಂದೆ ಬಾರದಿರನು. ಆಗ ದಾನವನ್ನೂ ಸೇರಿಸಿಕೊಂಡು ಪುಣ್ಯವನ್ನೂ ಗಳಿಸುವುದು ತಪ್ಪಕೂಡದು.

ಬ್ರಾಹ್ಮಣನು ಬಡವನಾದರೂ ಕೂಡ ಸ್ವಲ್ಪ ದಾನಮಾಡಬೇಕೆಂದು ಇದೆ. ದಾನದಫಲ ಅದರ ಮೊತ್ತದ ಮೇಲಿಲ್ಲ; ಅವನವನ ಸ್ಥಿತಿಯ ಅಂಶ ಹೊಂದಿದೆ. ಬಡವನ ಸ್ವಲ್ಪ ದಾನವೂ ಬಹಳ ಫಲ ಕೊಡಲಾಪುದು. ಮತ್ತು ದಾನದ ಫಲ ಇನ್ನೊಂದು ರೀತಿಯಲ್ಲೂ ಕೇವಲ ಅದರ ಮೊತ್ತ ಹೊಂದಿಲ್ಲ. ಅತ್ಯುತ್ತಮ ಪಾತ್ರ, ಅತ್ಯುತ್ತಮ ಮುಹೂರ್ತ, ಕ್ಷೇತ್ರಗಳು, ದಾನದ ಫಲವನ್ನು ನೂರು ಪಾಲು ಹೆಚ್ಚು ಮಾಡಲಾಪವು. ಇಂಥ ಸಂದರ್ಭಗಳನ್ನು ತಿಳಿದು ಆಗ ತಪ್ಪದೆ ದಾನಮಾಡಬೇಕು. ಸಾಮಾನ್ಯ ದಿನಕ್ಕಿಂತ ಅಮಾವಾಸ್ಯೆ ದಿನ, ಅದಕ್ಕಿಂತ ಸಾಮಾನ್ಯ ಸಂಕ್ರಾಂತಿ ದಿನ, ಅದಕ್ಕಿಂತ ವಿಷ್ಣುವಿನ ದಿನ, ಅದಕ್ಕಿಂತ ಯುಗಾದಿ ದಿನ, ಅದಕ್ಕಿಂತ ಕರ್ಕಾಟಕ ಮತ್ತು ಮಕರಸಂಕ್ರಾಂತಿ ದಿನಗಳಲ್ಲಿ ದಾನಕ್ಕೆ ಫಲ ಬಹಳ ಹೆಚ್ಚು. ಅಕ್ಷಯ ತದಿಗೆಯ ದಾನಕ್ಕೆ ಆ ಹೆಸರಂತೆ ದಾನದಫಲ ತುಂಬಾ ಹೆಚ್ಚು. ದೀಪವು ಅತಿ ಸ್ವಲ್ಪ ಬೆಲೆಯ ವಸ್ತುವಾದರೂ ಕಾರ್ತಿಕ ಮಾಸದ ದೀಪ ದಾನಕ್ಕೆ ಬಹಳ ಹೆಚ್ಚು ಪುಣ್ಯ ಹೇಳಿದೆ.

ಗ್ರಹಣಕಾಲವು ಸ್ನಾನಕ್ಕೆ, ದೇವರ ಧ್ಯಾನಕ್ಕೆ, ಪೂಜೆಗೆ, ದಾನಕ್ಕೆ, ತರ್ಪಣಕ್ಕೆ ಅತ್ಯಂತ ಪುಣ್ಯಕಾಲ. ಆಗ ಮಲಗಿರುವುದು, ಮಲಮೂತ್ರ ವಿಸರ್ಜನೆ, ಮೈಥುನ ಪ್ರಾಣಿಜನ್ಮ ತರುತ್ತವೆ. ಆಗಿನ ಊಟದಿಂದ ನರಕಪ್ರಾಪ್ತಿ. ಆಗ ಪಿತೃಗಳಿಗೆ ಪಿಂಡೋದಕ ಕೊಟ್ಟರೆ ಅವರಿಗೆ ಅತಿ ಧಾರಾಳ ಫಲಸಿಕ್ಕುತ್ತದೆ. ಆಗ ಸ್ನಾನ ಮಾಡದವ ಪಿಂಡೋದಕ ಕೊಡದವ ಚಂಡಾಲ ಜನ್ಮಪಡೆದಾನು. ಆಗ ಎಲ್ಲ ದಾನ ಗೋದಾನಕ್ಕೆ ಸಮಾನ; ಸ್ನಾನಕ್ಕೆ ಎಲ್ಲ ನೀರು ಗಂಗಾಜಲಕ್ಕೆ ಸಮಾನ; ಎಂಥ ಬ್ರಾಹ್ಮಣನಾದರೂ ಅವನಿಗೆ ದಾನಕೊಡುವುದು ವ್ಯಾಸರಿಗೆ ದಾನ ಕೊಟ್ಟಂತೆ. ಸಾಮಾನ್ಯ ಕಾಲದ ದಾನಕ್ಕಿಂತ ಲಕ್ಷಪಾಲು ಪುಣ್ಯ ಚಂದ್ರ ಗ್ರಹಣದ ಆಚರಣೆ, ಅದರ ಲಕ್ಷಪಾಲು ಪುಣ್ಯ ಸೂರ್ಯಗ್ರಹಣದ ಆಚರಣೆ

ತರುತ್ತವೆ (ಪದ್ಮ, ಸೃಷ್ಟಿ ಅ. ೪೭,೨೩೫,೩೮). ಗ್ರಹಣದ ಆಚರಣೆಯು ಸದಾಚಾರ ನಾನು ಚಿಕ್ಕವನಿದ್ದಾಗ ಸರ್ವತ್ರವಿತ್ತು. ಬ್ರಾಹ್ಮಣರ ಕಷ್ಟ ಹೆಚ್ಚುತ್ತ, ದಾನಶಕ್ತಿ ಕಡಿಮೆಯಾಗುತ್ತ ಬರುವಾಗ, ಗ್ರಹಣಕಾಲದ ಆಚರಣೆ ಅಗತ್ಯವಾಗಿ ನಡೆಸಿ ಪುಣ್ಯ ಸಂಗ್ರಹಿಸಬೇಕು.

ಇನ್ನೊಂದು ಅತಿ ಹೆಚ್ಚು ಫಲತರುವ ಕಾಲವು ಮರಣದ ಸಮಯ. ನಾನು ಚಿಕ್ಕವನಾಗಿದ್ದಾಗ ಹೃದಯರೋಗದಿಂದ ಹಳ್ಳಿಗಳಲ್ಲಿ ಥಕ್ಕನೆ ಸಾಯುತ್ತಿರಲಿಲ್ಲ. ಮರಣದ ಚಿಹ್ನೆ ಕಂಡೊಡನೆ ಬ್ರಾಹ್ಮಣರಿಗೆ ದಶದಾನ, ಸಾಧ್ಯವಾದರೆ ಗೋದಾನ, ಕೊಡಿಸುತ್ತಿದ್ದರು. ಆದರೆ ಈಗ ಮರಣವು ಸೂಚನೆ ಕೊಡದೆ ಬರಬಹುದು. ಮೃತನಿಗೆ ದಾನಗಳು ಬಹಳ ಸಹಾಯಕ. ಆದ್ದರಿಂದ ಈ ಕಾಲದ ಮಕ್ಕಳನ್ನು ನಂಬದೆ ಮುಂಚೆಯೇ ತನಗೇ ಸಾಧ್ಯವಾದಂತೆ ಗೋದಾನ, ಪವಮಾನ ಹೋಮ, ಮುಂತಾದ್ದು ಮಾಡಿಸುವುದುತ್ತಮ. (ಇದಕ್ಕೆ ಗರುಡಪುರಾಣ ಸಾರೋದ್ಧಾರ ಅಗತ್ಯ ಓದಬೇಕು. ನನ್ನ ಪುನರ್ಜನ್ಮವನ್ನೂ ನೋಡಿರಿ).

೧೯೮೩ ರಿಂದ ೧೯೮೮ರ ವರೆಗೆ ಲೋಕದಲ್ಲಿ ಭಯಂಕರ ಅನಾಹುತಗಳನ್ನು, ಜನರ ಸಾವುಗಳನ್ನು, ಲೋಕದ ಬೇರೆ ಬೇರೆ ೬–೭ ಭವಿಷ್ಯಗಳು ಹೇಳಿವೆ (ನನ್ನ 'ದಾನ ಮಾಡಬೇಕು' ನೋಡಿರಿ). ಆ ಅನಾಹುತದಲ್ಲಿ ಮೃತನಾದರೆ ಅಷ್ಟರಲ್ಲಿ ಮಾಡಿದ ಧಾನದ ಫಲ ಅವನೊಡನೆ ಬರುತ್ತದೆ. ಆದರೆ ಬಿಟ್ಟಿದ್ದ ಐಶ್ವರ್ಯ ಎಲ್ಲೋ, ಯಾರಿಗೋ ಹೋಗಬಹುದು.

ನಮ್ಮಲ್ಲಿ ದಾನವು ಜೀವನದ ಒಂದು ಅವಶ್ಯಕಭಾಗ, ಕರ್ತವ್ಯ, ಎಂದಾಗಿತ್ತೇ ಹೊರತು ಹೊಗಳಿಕೊಳ್ಳುವ ಅಪರೂಪದ ವಿಷಯವಾಗಿರಲಿಲ್ಲ. ಬ್ರಾಹ್ಮಣನು ಕೇವಲವಾಗಿ ತನಗಾಗಿ ಮಾತ್ರ ಅನ್ನಮಾಡಕೂಡದು, ಹಾಗೆ ಮಾಡಿದರೆ ಪಾಪವನ್ನೇ ಉಂಡಂತೆ ಎನ್ನುತ್ತದೆ ಮನುಸ್ಮೃತಿ (೩,೧೧೮) ಗೃಹಸ್ಥಜೀವನದಲ್ಲಿ ಅತಿಥಿ ಸತ್ಕಾರ ಅವಶ್ಯಕ. ಈಗಲೀಗ ಅತಿಥಿ ಸತ್ಕಾರ ನಿಂತೇ ಹೋಗುತ್ತಿರುವುದು ಸರಿಯಲ್ಲ; ಈ ಕಾಲಕ್ಕೆ ಅದರ ಬದಲಿಗೆ ಅನ್ನಕ್ಕೆ ಅಕ್ಕಿ ಹಾಕುವಾಗ ಒಂದು ಮುಷ್ಟಿ ಪ್ರತ್ಯೇಕ ತೆಗೆದಿಟ್ಟು, ಸಂಗ್ರಹಿಸಿ, ಕಾಲಕಾಲಕ್ಕೆ ಅನ್ನಮಾಡಿ ಬಡವರಿಗೆ ಹಂಚಲು ಶ್ರೀ ಕಾಮಕೋಟೀ ಪೀಠದ ಹಿರಿಯ ಗುರುಗಳು ಸೂಚನೆ ಕೊಟ್ಟದ್ದು ಅವರ ಶಿಷ್ಯರನೇಕರು ನಡೆಸುತ್ತಿದ್ದಾರೆ. ಗುಜರಾತಿ ವ್ಯಾಪಾರಸ್ಥರು, ಮುಸಲ್ಮಾನರಲ್ಲಿ ಕೆಲವು ವರ್ಗದವರು, ಗೌಡಸಾರಸ್ವತ ವ್ಯಾಪಾರಸ್ಥರು ಅನೇಕರು, ಲಾಭದ ಒಂದು ನಿರ್ದಿಷ್ಟ ಅಂಶ

ದಾನಮಾಡಲು ತೆಗೆದಿಡುವ ಕ್ರಮ ಇಟ್ಟುಕೊಂಡಿದ್ದಾರೆ. ಆಮೇಲೆ ಅದನ್ನು ಹಂಚಲು ಅವರಿಗೆ ಏನೂ ಕೈ ಹಿಂದೆಳೆಯದು. ಹಳ್ಳಿಯ ಬ್ರಾಹ್ಮಣರಲ್ಲಿ ಸ್ವಲ್ಪ ಐಶ್ವರ್ಯ ಬಂದೊಡನೆ ಅನಂತನ ವ್ರತ, ನವರಾತ್ರಿ ಪೂಜೆ ಮುಂತಾದವನ್ನು ಆರಂಭಿಸಿ ಬಂಧುಗಳ, ಸ್ನೇಹಿತರ. ಆತಿಥ್ಯವನ್ನು ವರ್ಷಂಪ್ರತಿ ನಡೆಸುತ್ತಿದ್ದರು. ಆದರೆ ಈಗಿನ ಆಂಗ್ಲ ವಿದ್ಯಾಕ್ರಮದಿಂದ ಅತಿ ಧಾರಾಳ ಸಂಪಾದನೆ ಮಾಡುವ ವರಿಗೆ ಈ ದಾನದ ಬುದ್ಧಿ ಏನೇನೂ ಇಲ್ಲ! ಸಂಬಳದ ೫ ಶತಾಂಶವಾದರೂ ದಾನಕ್ಕೆ ಹಾಕುವುದು ಉತ್ತಮ.

ಸ್ವಾಮಿ ವಿವೇಕಾನಂದರು ಒಂದು ಸೂಚನೆ ಕೊಟ್ಟಿದ್ದರು. ಹಸಿದ ಬಡವನಿಗೆ ಅನ್ನ ಹಾಕುವುದು ಪುಣ್ಯದಕೆಲಸ. ಆದರೆ ಪುನಃ ಹಸಿವಾಗುತ್ತಿರುತ್ತದೆ. ಉದ್ಯೋಗ ಉಂಟುಮಾಡುವುದು ಮತ್ತೂ ಹೆಚ್ಚಿನ ಸಹಾಯ; ಆದರೆ ಜೀವನದ ಕಷ್ಟ ತಪ್ಪದು; ಸಂಸಾರದ ಸಾಗರ ದಾಟುವ ಜ್ಞಾನದ ಪ್ರಸಾರ ಮಾತ್ರವೇ ಅತ್ಯುತ್ತಮ ಎಂದು ಹೇಳಿದ್ದರು. ವೇದದ ಪರಿಪಾಲನೆಗೆ, ಧರ್ಮ ಪ್ರಚಾರ ಕಾರ್ಯಕ್ಕೆ, ಧಾರಾಳವಾಗಿ ಸಹಾಯ ಮಾಡುವುದು ಬ್ರಾಹ್ಮಣರ ಕರ್ತವ್ಯ; ಅವರು ಸಮಾಜದ ಗುರುಸ್ಥಾನದ ಜನ್ಮಪಡೆದು ಬಂದವರಲ್ಲವೇ?

ದಾನಕ್ಕೆ ಶುಕ್ಲದ್ರವ್ಯ, ಎಂದರೆ ಶಾಸ್ತ್ರೋಕ್ತ ಜೀವನ ನಡೆಸಿ ಬಂದ ಹಣ ಮಾತ್ರ ಪರಲೋಕದಲ್ಲಿ ಸಹಾಯಕ್ಕೆ ಬರುತ್ತದೆ. ಆದರೆ ಜನಸಂಖ್ಯೆ ಹೆಚ್ಚಿ ಜೀವನದ ಸಮಸ್ಯೆಗಳು ಹೆಚ್ಚಿ ತಮ್ಮ ವರ್ಣದ ಧಾರ್ಮಿಕ ಜೀವನ ಅಸಾಧ್ಯ ವಾದವರು ತಮ್ಮ ಕೆಳ ದ್ವಿಜ ವರ್ಣದವರ–ಬ್ರಾಹ್ಮಣನು ಕ್ಷತ್ರಿಯನ ಅಥವಾ ವೈಶ್ಯನ–ವೃತ್ತಿ ತತ್ಕಾಲಕ್ಕೆ, ಕಷ್ಟದಕಾಲ ದಾಟುವವರೆಗೆ ಆಪದ್ಧರ್ಮವಾಗಿ ಜೀವಿಸಿ ಗಳಿಸಿದ ಹಣವೂ ಶುಕ್ಲದ್ರವ್ಯವೇ. ಆದರೆ ಅದನ್ನು ಆಗತ್ಯಕ್ಕಿಂತ ಹೆಚ್ಚು ವಿಸ್ತರಿಸಕೂಡದು. ತೀರಾ ಮಿತಿಯ ಮಟ್ಟದ ಜೀವನ ನಡೆಸುತ್ತಿರ ಬೇಕು. ಧಾರಾಳ ಲಾಭ ಬಂದರೆ ಅದನ್ನು ದಾನಮಾಡುತ್ತಲೇ ಇರಬೇಕು. ವ್ಯಾಪಾರ, ಕಾರ್ಖಾನೆ, ತೋಟದೊಡ್ಡದು ಮಾಡುತ್ತಿರುವುದಲ್ಲ, ತೃಪ್ತಿತಂದು ಕೊಂಡು ಬೇಗ ಮಕ್ಕಳಿಗೆ ಬಿಟ್ಟುಕೊಟ್ಟು ಪೂರ್ಣ ಧರ್ಮದ ಸಾಧನೆ ಹಿಡಿಯ ಬೇಕು. ಆಪತ್‌ಧರ್ಮದಲ್ಲಿಯೂ ಅಬ್ರಾಹ್ಮಣ ವೃತ್ತಿಯಲ್ಲಿರುವಾಗ ಮನೆಯಲ್ಲಿ ಬ್ರಾಹ್ಮಣ ಸದಾಚಾರ, ವ್ಯಾಪಾರದಲ್ಲಿ ಆದಷ್ಟು ಮೇಲ್ಮಟ್ಟ ಬಿಡಕೂಡದು. ಕೆಲವು ವಸ್ತುಗಳ ಮಾರಾಟ ಬ್ರಾಹ್ಮಣನಿಗೆ ವಿಧಿಸಲಿಲ್ಲ. ತನ್ನ ಆಪದ್ಧರ್ಮದ ವೃತ್ತಿಯಲ್ಲೂ ತನ್ನ ವ್ಯಾಪಾರಕ್ಕೆ ಬ್ರಾಹ್ಮಣನು ತನ್ನ ಮೇಲ್ಮಟ್ಟದ ಮುದ್ರೆ ಒತ್ತಬೇಕು. ಹೆಚ್ಚು ವಿವರಗಳಿಗೆ 'ದಾನ ಮಾಡಬೇಕು' ನೋಡುವುದುತ್ತಮ.

# ೧೬. ಬ್ರಾಹ್ಮಣ ವೃತ್ತಿಗಳು

ಸನಾತನಿಯು ಸೆಕ್ಯುಲರ್ ಸರ್ಕಾರದಹಾನಿ, ವಿಜ್ಞಾನದ ವಾತಾವರಣದ ಹಾನಿ, ಅರಿತು ಅವುಗಳ ಹಾವಳಿಯಿಂದ ಕೆಡದಂತೆ ಆದಷ್ಟು ಜಾಗ್ರತೆವಹಿಸ ಬೇಕು. ಶೂದ್ರರಿಗೆ ಅವರ ತಮೋಗುಣ, ಆಲಸ್ಯ, ಗೆಲ್ಲಲಿಕ್ಕೆ ಮೇಲು ಜಾತಿಯುವರೊಡನೆ ಕೆಲಸ, ಅವರು ತುಂಬಾಉದ್ಯೋಗ ನಡೆಸಿ ಹಣಸಂಪಾದಿಸಿ ಮೇಲ್ಮಟ್ಟದ ಜೀವನ ನಡೆಸುವುದನ್ನು ಕಂಡು ತಾವೂ ಉದ್ಯೋಗಶೀಲರಾಗುವ ದಾರಿಯನ್ನು ಅವರಿಗೆ ಶಾಸ್ತ್ರ ವಿಧಿಸಿದೆ. ವೈಶ್ಯರಲ್ಲಿ ರಜೋಗುಣ ಅಥವಾ ಚಟುವಟಿಕೆ ಇದೆ. ಅವರಿಗೆ ಬೇಸಾಯ, ವ್ಯಾಪಾರ, ಗೋವುಗಳ ಸಾಕಣೆ ವಿಧಿಸಿದೆ. ಅದರಿಂದ ತುಂಬಾ ಐಶ್ವರ್ಯ ಬೆಳೆಸಿ ಲೋಕ ಸಂಗ್ರಹ ಮಾಡ ಬೇಕು. ಆದರೆ ಧಾರಾಳವಾಗಿ ದಾನ ಮಾಡುವ ಸಾತ್ವಿಕ ಗುಣಕ್ಕೂ ಯತ್ನಿಸ ಬೇಕು ಎನ್ನುತ್ತದೆ ಶಾಸ್ತ್ರ. ಕ್ಷತ್ರಿಯರಿಗೆ ಸರಕಾರೀ ಹುದ್ದೆ, ದೇಶದ ರಕ್ಷಣೆ, ಪ್ರಜಾರಕ್ಷಣೆ ಹುದ್ದೆ ವಿಧಿಸಿದೆ. ಅದರಲ್ಲಿ ಅಧಿಕಾರದ ಹಲವು ರೀತಿಗಳ ದುರುಪಯೋಗ ಮಾಡದೆ ತಮ್ಮ ಮೇಲೆ ಹತೋಟಿ ತುದುಕೊಳ್ಳುವ ಸಾತ್ವಿಕ ಗುಣ ಬೆಳೆಸಬೇಕು. ಬ್ರಾಹ್ಮಣರಿಗೆ ಸ್ವಲ್ಪ ಸುಳ್ಳು ಅನಿವಾರ್ಯವಾದ ವ್ಯಾಪಾರ ವೃತ್ತಿ, ಬೇಸಾಯದಲ್ಲಿ ಕ್ರಿಮಿಗಳ ಧಾರಾಳ ಹಿಂಸೆ, ಉಳುವಾಗ ಎತ್ತಿನ ಪೀಡೆ, ಮುಂತಾದುವು ವಿಧಿಸಿಲ್ಲ. ಕ್ಷತ್ರಿಯರಾಗಿ ಭೋಗಕ್ಕೆಆಸ್ಪದವಿರುವ ವೃತ್ತಿಯೂ ಉತ್ತಮವಲ್ಲ. ಬ್ರಾಹ್ಮಣರು ವೇದಶಾಸ್ತ್ರ ಕಲಿಯುವುದು, ವಿದ್ಯೆ ಕಲಿಸುವುದು, ಪೌರೋಹಿತ್ಯ. ದಾನ ಪಡೆಯುವುದು (ಆದರೆ ವಿದ್ಯಾದಾನ ಪೌರೋಹಿತ್ಯಗಳಲ್ಲಿ ನಿರ್ದಿಷ್ಟ ಹಣ ಕೇಳದೆ ಕೊಟ್ಟದ್ದರಲ್ಲಿ ತೃಪ್ತಿ), ಮುಖ್ಯವಾಗಿ ಬಡತನದ ಜೀವನ ವಿಧಿಸಲ್ಪಟ್ಟಿದೆ. ಏಕೆಂದರೆ ಅವರಗುರಿ ಆದಷ್ಟು ಪಾಪತಾರದ ಸಾತ್ವಿಕ ಜೀವನ ಮತ್ತು ಪುಣ್ಯಸಂಗ್ರಹ ಇತ್ತೀಚಿನವರೆಗೂ ಈ ಕ್ರಮವಿದ್ದು, ಈಗಲೂ ಬೇಸಾಯವನ್ನು ಶೂದ್ರರಿಂದ ಮಾಡಿಸುತ್ತ, ವ್ಯಾಪಾರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡದ ಈ ವರ್ಗದ ಸರಾಸರಿ ವರಮಾನ ಬಹಳ ಕಡಿಮೆ. (೧೯೭೦ರಲ್ಲಿ ಕರ್ನಾಟಕದಲ್ಲಿ ಅವರಿಗೂ ತೀರಾ ಬಡ ಹಿಂದೂ ವರ್ಗಗಳಂತೆ ಕೇವಲ ರೂ. ೫೭೦ ವಾರ್ಷಿಕ ವರಮಾನವಿತ್ತು ಮಾತ್ರ. ಆಗ ಹಿಂದೂ ಸಮಾಜದ ಸರಾಸರಿ ವರಮಾನ ರೂ. ೯೩೩. ಆದರೆ ಅವರ ನಿರ್ಮಲ ಬಟ್ಟೆಬರೆ, ಮದ್ಯಕ್ಕೆ ಹಣ ಹಾಳು ಮಾಡದಿರುವುದು, ಅವರಲ್ಲಿ ಐಶ್ವರ್ಯವಿದೆ ಎಂಬ ಭಾವನೆ

ತಂದು, ಶೂದ್ರರಿಗೆ ಅವರ ಆದಷ್ಟು ಸುಲಿಗೆಯ ಭಾವನೆ ತಂದಿದೆ. ಅನ್ಯಾಯಕ್ಕೆ ಕಾರಣವಾಗಿದೆ !

ಪರಧರ್ಮದವರ ಆಳ್ವಿಕೆಯಲ್ಲಿ ರಾಜಾಶ್ರಯ ತಪ್ಪಿದ ಆದರೆ ವಿದ್ಯೆಯೇ ಮುಖ್ಯವಾಗಿದ್ದ ಈ ವರ್ಗ ಜೀವನಕ್ಕೆ ಪಾಶ್ಚಾತ್ಯ ಕ್ರಮದ ವಿದ್ಯೆಯನ್ನು ಕಲಿತು ಅದನ್ನು ಒಂದು ಜೀವನದ ದಾರಿಯಾಗಿ ಮಾಡಿಕೊಂಡಿತು. ಅದಕ್ಕೆ ಈ ದಾರಿಯಲ್ಲಿ ಈಗ ವಿಜ್ಞಾನದ ಕಾಲದ ಹಲವು ಹೊಸ ವೃತ್ತಿಗಳೂ ಉಂಟಾಗಿವೆ. ಅವನ್ನು ಶಾಸ್ತ್ರವು ತಾಮಸ-ರಾಜಸ ಸಾತ್ವಿಕ ಎಂತ ವರ್ಗೀಕರಿಸಿದ್ದಿಲ್ಲ. ನಮ್ಮ ಧಾರ್ಮಿಕ ಸಂಸ್ಥೆಗಳಾದರೂ ತಜ್ಞರ ಕಮಿಟಿ ಮಾಡಿ ಶಾಸ್ತ್ರದ ದೃಷ್ಟಿಯಿಂದ ವರ್ಗೀಕರಿಸಿ, ಬ್ರಾಹ್ಮಣರಿಗೆ ತಾಮಸ, ರಾಜಸವನ್ನು ಆದಷ್ಟು ಬಿಟ್ಟಿರಲು ಎಚ್ಚರಿಸಿದ್ದೂ ಇಲ್ಲ. ಕೇವಲ ಬ್ರಾಹ್ಮಣ ಯುವಕರೇ ವೃತ್ತಿ ಆರಿಸುವಾಗ, ಶಾಸ್ತ್ರದ ಅಜ್ಞಾನದಿಂದ, ಸಂಪಾದನೆಯ ಆಕರ್ಷಣೆಯಿಂದ, ಬ್ರಾಹ್ಮಣ್ಯಕ್ಕೆ ಬಹಳ ಹಾನಿತರುವ, ಅದನ್ನು ಕೆಡಿಸುವ, ಉದ್ಯೋಗಗಳನ್ನು ಆರಿಸುವುದೂ ನಡೆಯುತ್ತಿದೆ.

ಕೆಲವು ದೃಷ್ಟಾಂತಗಳನ್ನು ಕೊಡುತ್ತೇನೆ. ಬ್ರಾಹ್ಮಣನು ಚರ್ಮಶಾಸ್ತ್ರದಲ್ಲಿ ಪ್ರವೀಣತೆ ಪಡೆದು ಯಂತ್ರಗಳಿರುವ ಚರ್ಮ ಹದಮಾಡುವ ಕಾರ್ಖಾನೆಯಲ್ಲಿ ತಜ್ಞನಾಗಿದ್ದುದು ಕಂಡಿದ್ದೆ. ಕೃಷಿ ಶಾಸ್ತ್ರದಲ್ಲಿ ಪ್ರವೀಣತೆ ಪಡೆದು, ದೊಡ್ಡ ಪಟ್ಟಣದ ಚರಂಡಿ ನೀರಿಂದ ಬೆಳೆಯುವ ಹುಲ್ಲುಗಾವಲಲ್ಲಿ ಮುಖ್ಯಸ್ಥನಾಗಿ ಕೆಲಸ ಮಾಡುವುದು ಕಂಡಿದ್ದೆ. ಒಬ್ಬ ಮುಸಲ್ಮಾನ ಜಡ್ಜನ ತೀರ್ಪುಗಳನ್ನು ಶೀಘ್ರ ಲಿಪಿಯಲ್ಲಿ ಬರಕೊಳ್ಳುತ್ತಿದ್ದ ಅವನ ಸ್ಟೆನೋ ಟೈಪಿಸ್ಟ್, ಬ್ರಾಹ್ಮಣಅರ್ಚಕನ ಮಗಳು, ಅವನನ್ನೇ ಮದುವೆಯಾದಳು. ಒಬ್ಬಳು ನರ್ಸ್ ಆಗಲಿಕ್ಕೆ ಜಾತಿಭೇದವಿಲ್ಲದ ಅವರ ಹಾಸ್ಟೆಲಲ್ಲಿದ್ದು ಕಲಿತು ಈಗ ಅಪರೂಪಕ್ಕಾದರೂ ಎಲ್ಲಾ ಜಾತಿಯ ರೋಗಿಗಳ ನಿಕೃಷ್ಟಸೇವೆ ಕೂಡಾ ಮಾಡುತ್ತಾಳೆ. ಯುದ್ಧದ ವಿಭಾಗಕ್ಕೆ ಕೆಳಮಟ್ಟದ ಸೇವೆಗೆಸೇರಿದವ ಲಡಾಕದಲ್ಲಿದ್ದವ—ವಾರಕ್ಕೊಂದಕ್ಕಿಂತ ಹೆಚ್ಚು ಸ್ನಾನವಿಲ್ಲ, ಜಾತಿ ಅಭ್ಯಾಸ ಅಸಾಧ್ಯ, ಸಸ್ಯಾಹಾರ ಮಾಂಸಾಹಾರವೆಂಬ ಭೇದವಿಲ್ಲದ ಪಾಕಶಾಲೆಯಿಂದ ಬರುವ ಆಹಾರ ಮಾತ್ರ ಗತಿ, ಎಂದಿದ್ದ. ಪಾಶ್ಚಾತ್ಯ ದೇಶಗಳು ಸ್ವರ್ಗ ಎಂದು ಅಲ್ಲಿಗೆ ಹೋದವರಿಗೆ ಹೋಟೆಲಲ್ಲಿ, ಮತ್ತೊಬ್ಬ ತಿಂದುಳಿದ ಆಹಾರ ಹಿಂದೆ ಕೊಂಡು ಹೋಗಿ ಬೇರೆ ಪ್ಲೇಟಿಗೆ ಹಾಕಿಕೊಡುವುದುಂಟಂತೆ. ಪಾಯಿಖಾನೆಗೆ ಹೋಗಿ ನೀರು ಖರ್ಚು ಮಾಡಲು ಕೆಲವು ಕಡೆಗಳಲ್ಲಿ ಆಕ್ಷೇಪವಿದೆ. ಒಬ್ಬರು ಪರಿಚಿತ ಬ್ರಾಹ್ಮಣ

ಇಂಜಿನೀಯರು ಕೊಳ್ಳೇಗಾಲದಲ್ಲಿ ರೇಷ್ಮೆ ಕಾರ್ಖಾನೆಯಲ್ಲಿ ಮುಖ್ಯಸ್ಥರಾಗಿದ್ದಾಗ ನಿತ್ಯ ಕೋಟಿಗಟ್ಟಲೆ ರೇಷ್ಮೆ ಹುಳಗಳ ಯಜ್ಞ ನಡೆಸುತ್ತಿದ್ದರು. ಮೀನುಗಾರಿಕೆ ವಿಭಾಗದಲ್ಲೂ ಅಧಿಕಾರಿಗಳಾದವರಿದ್ದಾರೆ.

ಮಾಂಸದಿಂದ ಮದ್ದು ಮಾಡುವ ಕೆಲಸ, ಹೊಸಮದ್ದುಗಳ ಶೋಧನೆಗೆ ಪ್ರಾಣಿಗಳ ಮೇಲಿನ ಪ್ರಯೋಗದಿಂದ ಭಯಂಕರ ಹಿಂಸೆ, ಮರಣದವರೆಗೆ ಪೀಡೆಕೊಡುವ ಕೆಲಸ, ವೈದ್ಯರಾಗಿ ಭ್ರೂಣಹತ್ಯೆ, ಗೋವುಗಳ ರಕ್ತ ಪರೀಕ್ಷಿಸಿ ಕಸಾಯಿಖಾನೆಯಲ್ಲಿ ಕಡಿಯಲು ಒಪ್ಪಿಸುವ ಕೆಲಸ, ಚರ್ಮದಿಂದ ಸಾಮಾನು ತಯಾರಿಸುವಲ್ಲಿ ಕೆಲಸ, ಯುದ್ಧಕ್ಕೆ ಮಾರಕಶಸ್ತ್ರ, ವಿಷ ಸಾಮಾನು ತಯಾರಿಸುವ ಕೆಲಸ, ಕಪ್ಪೆಕಾಲು, ಮೀನು, ಪರದೇಶಕ್ಕೆ ಡಬ್ಬಿಗಳಲ್ಲಿ ಕಳುಹಿಸುವ ಕಾರ್ಖಾನೆಯಲ್ಲಿ ಗುಮಾಸ್ತ ಕೆಲಸ ಕೂಡ ಹೊಲಸು ಜನರ ಹೊಲಸು ಬಟ್ಟೆಯ ನಿಕಟ ಸಂಪರ್ಕ ಬರುವ, ಆದರೆ ನಾಗರಿಕ ರೂಪದ್ದಾದ ರಾಸಾಯನಿಕ ಮಡಿವಾಳಕೆಲಸ (dry cleaning) ಮುಂತಾದವು ಬ್ರಾಹ್ಮಣನಿಗೆ ಅಯೋಗ್ಯ ಕೆಲಸಗಳು.

ಶೂದ್ರರ ಅನ್ಯಧರ್ಮದವರ ಅಡಿಗೆ ಊಟ ಮಾತ್ರ ಲಭಿಸುವಲ್ಲಿ ಜೀವನ ಅಲ್ಪರ ತೀರಾ ನಿಕಟ ಸಂಪರ್ಕದಿಂದ ಅವರ ಪಾಪ ನಮಗೆ ಬರುತ್ತದಾದ್ದರಿಂದ ಇಕ್ಕಟ್ಟಿರುವ ಸ್ಟೀಮರ್ ಮುಂತಾದವಲ್ಲಿ ಕೆಲಸ, ಹೆಂಗಸರ ಪಾತಿವ್ರತ್ಯಕ್ಕೆ ಕೇಡು ತರುವ ಎಲ್ಲಾ ತರದ ಹೆಂಗಸರ ಕೆಲಸ, ನಾಸ್ತಿಕರ ಕೆಳಗೆ, ಅಲ್ಪರ ಕೆಳಗೆ, ವಂಚಕರ ಕೆಳಗೆ ಕೆಲಸ, ಪುರೋಹಿತರೂ ದೇವಸ್ಥಾನಗಳೂ ಇಲ್ಲದ ಪ್ರದೇಶಗಳಲ್ಲಿ ಕೆಲಸ, ಬ್ರಾಹ್ಮಣ್ಯಕ್ಕೆ ಬಹಳ ಹಾನಿತಾರದಿರದು. ಕಂಪನಿಯ ಷೇರು ಕೊಂಡುಕೊಂಡವ, ಅದರ ಲಾಭ ಪಡೆಯುವವ, ಅದರ ಮಾಲಿಕ ನಾಗುತ್ತಾನೆ. ಅವು ಪಾಶ್ಚಾತ್ಯ ಮದ್ದು ತಯಾರಿಸುವುದು, ಅದರ ಶೋಧನೆ ನಡೆಸುವುದು, ಚರ್ಮದ ಕಾರ್ಖಾನೆ, ಮದ್ಯದ ಕಾರ್ಖಾನೆ, ಮಾಂಸ ಬಡಿಸುವ ಹೋಟೆಲುಗಳು, ಮದ್ಯ ಮಾರುವ ಹೋಟೆಲುಗಳು, ಮೀನಿನ ದೋಣಿಮಾಡಿ ಬಾಡಿಗೆಗೆ ಕೊಡುವುದು, ಮುಂತಾದ ರೀತಿಯ ಲಾಭ ಪಡೆಯುವ ದಾರಿಗಳು ಬ್ರಾಹ್ಮಣರಿಗೆ ಸರಿಯಲ್ಲ.

ಪಾಶ್ಚಾತ್ಯ ಕ್ರಮಗಳು ನಮ್ಮ ಧರ್ಮ ಕೆಡಿಸುತ್ತ ಬಂದಿವೆ ಎಂಬುದರ ದೃಷ್ಟಾಂತವಾಗಿ ಅವರ ವೈದ್ಯ ಮತ್ತು ಮದ್ದಿನ ಕ್ರಮ ಸ್ವಲ್ಪ ವಿಮರ್ಶಿಸುವ. ಅದಕ್ಕೆ ಯಾವ ಧಾರ್ಮಿಕ ತಳಹದಿಯೂ ಇಲ್ಲ. ಆಗಾಗ ಹೆಚ್ಚು ಶಕ್ತಿಯ ಹೊಸ ಮದ್ದುಗಳನ್ನು ತಯಾರಿಸುತ್ತಾರೆ. ಅವುಗಳ ಸಂಶೋಧನೆಗೆ ಸುಮಾರು

೫೦ ಮಿಲಿಯನ್ ಇಲಿ ಬೆಕ್ಕು ಮಂಗ ಮುಂತಾದ ಪ್ರಾಣಿಗಳನ್ನು ಪ್ರಯೋಗ ಶಾಲೆಗಳಲ್ಲಿ **ಪ್ರತಿವರ್ಷ ಭಯಂಕರ ಹಿಂಸೆಗೀಡು ಮಾಡುತ್ತಾರೆ** (Vivisection). ಕಟುಕ ಪ್ರಾಣಿಗಳನ್ನು ಒಂದೆರಡು ಪೆಟ್ಟಲ್ಲಿ ಕೊಲ್ಲುತ್ತಾನೆ. ಇವರಾದರೋ ಅವಕ್ಕೆ ರೋಗ ಬರಿಸಿ ಬಾಯಿಕಟ್ಟಿ ಕೈಕಾಲು ಕಟ್ಟಿ ಆ ಹೊಸ ಮದ್ದು ಈ ಹೊಸ ಮದ್ದು ಕೊಡುವುದು, ಚುಚ್ಚು ಮದ್ದು ಕೊಡುವುದು, ಕತ್ತರಿಸಿ ನೋಡಿ ಮುಚ್ಚುವುದು. ಅಂಗ ಕತ್ತರಿಸಿ ಪರೀಕ್ಷಿಸುವುದು, ಮುಂತಾದ ಹಿಂಸೆ ನಿರಂತರವಾಗಿ ಸಾಯುವವರೆಗೂ ಮಾಡುವ ಕಟುಕರಿಗಿಂತ ಸಾವಿರಪಾಲು ಕಠಿಣ ಹೃದಯರು ಈ ವೈದ್ಯ ಭಾಗದ ವೃತ್ತಿಯವರು. ನಮ್ಮ ಶಾಸ್ತ್ರ ನಮಗೆ ಇಂಥ ಭಯಂಕರ ದಾರಿ ಹೇಳಲಿಲ್ಲ. ತಪಸ್ಸಿಂದ ರೋಗ ಪರಿಹಾರಕ ಔಷಧಗಳನ್ನು ಕಂಡುಕೊಳ್ಳಬೇಕೆಂದಿದೆ (ಮನು ೧೧,೨೩೭). ಒಂದು ಪ್ರಾಣಿಯನ್ನು ಕೊಂದವ, ಕೊಲ್ಲಿಸುವವ, ಅದರ ಮಾಂಸ ಮಾರುವವ, ಬೇಯಿಸುವವ ಬಡಿಸುವವ ತಿನ್ನುವವ ಎಲ್ಲರೂ ಆ ಕೊಲೆಯ ಪಾಪದ ಭಾಗಿಗಳು ಎಂದಿದ್ದಾನೆ (ಮನು ೫, ೫೧). ಆದ್ದರಿಂದ ಪಾಶ್ಚಾತ್ಯ ಕ್ರಮದ ಅತ್ಯಂತ ದೊಡ್ಡ ಭಯಂಕರ ಪ್ರಾಣಿ ಹಿಂಸೆಯ ಮತ್ತು ಕೊಲೆಯ ಪಾಪವು ಅವರ ಪ್ರತಿ ಮಾತ್ರೆಯಲ್ಲಿ ಸ್ವಲ್ಪವಾದರೂ ಅಂಟಿಕೊಂಡಿದೆ. ಅದು ನಮ್ಮ ಉಪಯೋಗಕ್ಕಿರುವುದಾದ್ದರಿಂದ ಅದನ್ನು ನುಂಗುವ ನಮಗೂ ಆ ಪಾಪ ಸ್ವಲ್ಪ ಬಾರದಿರದು. ರೋಗವು ಪಾಪ ಮಾಡಿದ್ದಕ್ಕೆ ದೇವರ ಶಿಕ್ಷೆಯಾದ್ದರಿಂದ, ತತ್ಕಾಲಕ್ಕೆ ಗುಣವಾದರೂ ದೇವರು ಮತ್ತೂ ಹೆಚ್ಚಿನ ಶಿಕ್ಷೆ ಕೊಡದಿರನು. ಪಾಶ್ಚಾತ್ಯ ಕ್ರಮದ ವೈದ್ಯ ಭಾಗದಲ್ಲಿ ರೋಗಿಗಳಲ್ಲಿ ೨೦ ಶತಾಂಶದವರು ಹಿಂದೆ ನುಂಗಿದ ಮದ್ದಿಂದಲೇ ಹೊಸರೋಗ ಉಂಟಾದವರಂತೆ ! ಈ ಮದ್ದು ಜನರ ಉಪಕಾರಕ್ಕಲ್ಲವೆ ? ಎಂದರೆ ಈಗಿನ ಹೆಚ್ಚಿನವರ ರೋಗಕ್ಕೆ ಅವರ ಏನೂ ಶಿಸ್ತಿಲ್ಲದ, ಪಥ್ಯ ಬೇಡವಾದ, ಭೋಗವೇ ಕಾರಣ. ಅದಕ್ಕೆ ೫೦ ಮಿಲಿಯನ್ ಪ್ರಾಣಿಗಳು ಏಕೆ ಹಿಂಸೆ ನಾಶ, ಹೊಂದಬೇಕು ? ಈ ಮದ್ದಿನ ಶೋಧನೆ ಪರೋಪಕಾರಕ್ಕೆಂದೇ ನಡೆಯುವುದೂ ಅಲ್ಲ. ಅದರ ಮೇಧಾವೀ ಶೋಧಕರು ವಿಪರೀತ ಸಂಬಳ ತಿನ್ನುವವರು ; ಮದ್ದಿನ ಕಂಪನಿಗಳು ಹೊಸ ಮದ್ದಿಂದ ವಿಪರೀತ ಲಾಭಮಾಡುವ ಉದ್ದೇಶದವು. ಭಯಂಕರ ಪಗಡಿಕೊಟ್ಟು ಕಲಿತ ಡಾಕ್ಟರರಾಗುವವರ ಒಂದು ಗುರಿ ಆ ಖರ್ಚಿಗೆ ಸಮನಾಗಿ ಆದಷ್ಟು ಹೆಚ್ಚು ಸಂಪಾದನೆ ಮಾಡಬೇಕೆಂಬುದು. ಅವರಲ್ಲಿ ಅತ್ಯಧಿಕ ಸಂಖ್ಯಾತರಿಗೆ ಬಡವರ ಸುಖ ದುಃಖದ ವಿಚಾರವೇ ಇಲ್ಲ. ಬಡವರಿಗೆ ಹೆಚ್ಚು ಒಗ್ಗುತ್ತಿದ್ದ

ಆಯುರ್ವೇದ ಕ್ರಮವನ್ನು ಇವರು ಸರ್ವಪ್ರಯತ್ನದಿಂದ ಮೇಲಕ್ಕೆ ಬಾರದಂತೆ ಮಾಡುತ್ತ ಬಂದಿದ್ದಾರೆ. ಆಯುರ್ವೇದದಲ್ಲಿ ಇಷ್ಟು ಪಾಪ ತುಂಬಿಲ್ಲ. ಗಿಡ ಮೂಲಿಕೆ ಮದ್ದು ದೇಹಕ್ಕೆ ಹೆಚ್ಚು ಹೊಂದಿಕೆಯಾಗುತ್ತದೆ. ವೈದ್ಯ ವೃತ್ತಿಗೆ ಶೀಲವಂತರೇ ಹೋಗಬೇಕೆಂಬ ಶರ್ತಕೂಡ ಇದೆ. ಅವರಿಗೆ ಸಾಮಾನ್ಯವಾಗಿ ದೇವರ ಭೀತಿ ಇದೆ. ಪಾಪದ ಕಲ್ಪನೆಯಿದೆ.

ಪಾಶ್ಚಾತ್ಯ ಮದ್ದಿನಕ್ರಮದಲ್ಲಿ ಬ್ರಾಹ್ಮಣನ ಶುಚಿತ್ವಕ್ಕೆ ಯಾವ ಸ್ಥಾನವೂ ಇಲ್ಲ. ವಿದ್ಯಾರ್ಥಿ ಒಂದು ಗಂಟೆ ಹೆಣಸಿಗಿಯುತ್ತ ಗಂಟೆಯಾದೊಡನೆ ಕೇವಲ ಕೈತೊಳೆದು ಊಟಮಾಡುತ್ತಾನೆ. ಸೂತಿಕಾಗೃಹದ ಅಶುದ್ಧತೆ ಅವ ಅರಿಯ. ದನದ ಮಾಂಸದ ಸತ್ವ (liver extract) ಬ್ರಾಹ್ಮಣನಿಗೆ ಕುಡಿಸುತ್ತಾನೆ. ಅವನ ಬಾಯಿಗೆ ತೀರಾ ತೀರಾ ಎಂಜಲಾದ ಉಷ್ಣಮಾಪಕವನ್ನು ಬ್ರಾಹ್ಮಣ ಡಾಕ್ಟರನೂ ತುರುಕುತ್ತಾನೆ! ಹೆತ್ತಾಗ ಬರುವ ಕಸದಿಂದ ಕೂಡಾ ಅವರಲ್ಲಿ ಮದ್ದು ಮಾಡುತ್ತಾರೆ. ಬ್ರಾಹ್ಮಣನಿಗೆ-ಕೋಳಿಮೊಟ್ಟೆ ತಿನ್ನಿರಿ, ಅದು ಅಗತ್ಯ ಎನ್ನುತ್ತಾನೆ, ಕೊಲೆಗಾರನ, ಕುಡುಕನ, ರಕ್ತ ಕೂಡ ನಮ್ಮ ದೇಹಕ್ಕೆ ಸೇರಿಸುತ್ತಾನೆ. ನಮ್ಮ ಧರ್ಮವು ಗರ್ಭನಾಶವನ್ನು ವಿಪರೀತ ಖಂಡಿಸಿದೆ. ಪಿತೃಭಕ್ತಿಯನ್ನು ಬಹಳ ಹೊಗಳುವ ನಮ್ಮ ಶಾಸ್ತ್ರವೇ ತಂದೆ ಗರ್ಭನಾಶ ಮಾಡಿದ್ದರೆ ಮಗ ಅವನ ಸಂಪರ್ಕ ಬಿಡಬೇಕು ಎಂದಿದೆ (ಗೌತಮ ಸಂಹಿತೆ ಅ. ೨೧). ಈ ವೃತ್ತಿಯಲ್ಲಿ ತುಂಬಾ ಹಣ ಮಾಡಲು ಸಾಧ್ಯ ಎಂದೇ ಅನೇಕ ಬ್ರಾಹ್ಮಣರು ಈ ವೃತ್ತಿ ಹಿಡಿಯುತ್ತಿದ್ದಾರೆ ಹೊರತು ಪಾಪದ ಜನರ ಸೇವೆಯ ಕಲ್ಪನೆ ಸ್ವಲ್ಪವೂ ಇದ್ದಲ್ಲ. ನಮ್ಮ ಶಾಸ್ತ್ರವು ನಮ್ಮ ಕ್ರಮದ ವೈದ್ಯನಿಗೆ ಕೂಡ ಬಹಳ ಕೆಳಮಟ್ಟ ಕೊಟ್ಟಿದೆ (ದೃಷ್ಟಾಂತಕ್ಕೆ ಮನು ೩.೧೫೨) ಶ್ರೀ ರಾಮಕೃಷ್ಣ ಪರಮಹಂಸರೂ ಇದನ್ನೇ ಹೇಳಿದ್ದರು. ಹಾಗಿರುವಾಗ ಪಾಶ್ಚಾತ್ಯ ಕ್ರಮದ ವೈದ್ಯರಲ್ಲಿ (ತುಂಬಾ ಕರುಣೆ ದಯೆ, ಪರೋಪಕಾರದ ಬುದ್ಧಿ ಇರುವವರನ್ನು ಬಿಟ್ಟು ಉಳಿದವರಲ್ಲಿ) ಅತ್ಯಂತ ಹೆಚ್ಚಿನ ಪಾಪ ತುಂಬುವ ಸಂಭವವಿದೆ. ಆ ದಾರಿ ಹಿಡಿಯದಿರುವುದು ಉತ್ತಮ. ಹಿಡಿದವರು ಹಣದ ಗಿರ ತ್ಯಜಿಸಿ, ಆದಷ್ಟು ಪರೋಪಕಾರದ ಕ್ರಮದಿಂದ ರೋಗಿಗಳ ಕೃತಜ್ಞತೆಯ ಪುಣ್ಯ ಪಡೆಯುವಂತಾಗಲಿ.

# ೧೭. ಬ್ರಾಹ್ಮಣರ ಓದು

ನಾವು ಉತ್ತಮರ ಸಂಗದಿಂದ ಉತ್ತಮರಾಗುತ್ತೇವೆ, ಅಲ್ಪರ ಸಂಗದಿಂದ ಅಲ್ಪರಾಗುತ್ತೇವೆ ಎಂಬುದು ಸರ್ವತ್ರ ಅನುಭವದ ತೀರ್ಮಾನ. ಮುಂಚೆ ಯೋಗ್ಯರು ಯೋಗ್ಯರನ್ನೇ ಅರಿಸಿ ಅವರಲ್ಲಿ ಬೇಕಾದಾಗ ಹೋಗಿ ಅವರಿಂದ ಪ್ರೇರಿತರಾಗುವುದೇ ಕ್ರಮವಾಗಿತ್ತು. ಅಥವಾ ರಾಮಾಯಣ ಭಾರತ ಓದಿ ಅವುಗಳ ಕತೆಗಳಿರುವ ಬಯಲಾಟ ನೋಡಿ, ಪ್ರಭಾವಿತರಾಗುವುದಿತ್ತು. ಅಚ್ಚುಯಂತ್ರದಿಂದಾಗಿ ಪುಸ್ತಕಗಳ ಅಪಾರ ಪ್ರಚಾರ, ಸೆಕ್ಯುಲರ್ ಸರ್ಕಾರದ ವಾತಾವರಣ ಸೇರಿ, ಜನ ಸಾಮಾನ್ಯರಲ್ಲೀಗ ಕತೆ ಕಾದಂಬರಿಗಳನ್ನು ಓದುವ ಅಭ್ಯಾಸ ಅತಿ ಹೆಚ್ಚಾಗಿದೆ. ಈ ಅಪಾರ ಸಂಖ್ಯೆಯ ಕತೆ ಕಾದಂಬರಿಗಳಿಗೆ ಸಾಮಾನ್ಯ ತರದವರ ಜೀವನದ ಅನುಭವಗಳೇ ವಿಷಯವಾಗದೆ ಉಪಾಯವಿಲ್ಲ. ಅವನ್ನು ಎತ್ತಿ ಅಲ್ಲಿ ಇಲ್ಲಿ ಸ್ವಲ್ಪ ತಿರುವು, ಮತ್ತಷ್ಟು ಘಟನೆಗಳು, ಬುದ್ಧಿ ಚುರುಕಿನ ಸಂವಾದ, ಸೇರಿಸಿ ಈ ಕತೆಗಳು ಬರುತ್ತವೆ. ಓದುವವರ ಮುಖ್ಯ ಗುರಿ ಕಾಲ ಕಳೆಯುವುದು, ಮನೋರಂಜನೆ, ಮಾತ್ರ. ಇಂಥ ಎಷ್ಟು ಸಾವಿರ ಕತೆಗಳನ್ನು ಓದಿದರೂ ಯಾರ ಶೀಲವೂ ಧ್ಯೇಯಗಳೂ ಸ್ವಲ್ಪವೂ ಒಳ್ಳೆಯದಾಗವು. ಮಾತ್ರವಲ್ಲ ಅವಲ್ಲಿರುವ ಕಾಮದ ಹೊಲಸು ಮನಸ್ಸಿಗೆ ಡಾಮರಂತೆ ಅಂಟುವುದರಿಂದ ಕತೆಗಳಲ್ಲಿ ೪–೫ ಪುಟಗಳೊಳಗೇ ಬಂದು ಬಿಡುವ ವ್ಯಭಿಚಾರದ ವಿಚಾರ, ಅಲ್ಪತರದ ವರ್ತನೆಯ ಕಾರ್ಯಗಳ ವಿವರಣೆಯನ್ನೇ ಓದಿಓದಿ, ಥಕ್ಕನೆ ತಕ್ಕ ಸಂದರ್ಭ ಉಂಟಾದಾಗ ಮನಸ್ಸಿನ ಪ್ರಥಮ ಪ್ರತಿಕ್ರಿಯೆ ತಾವೂ ಅಂತೆಯೇ ವರ್ತಿಸುವುದಾಗುತ್ತದೆ! ಕತೆಗಿಂತ ಸಿನಿಮಾಗಳ ಪ್ರಭಾವ ಅತಿ ಹೆಚ್ಚು. ಅವೂ ಸೆಳೆಯುವುದು ಅತ್ತಲಾಗಿಯೇ.

ಆದರೆ ಮಾನವಜನ್ಮ ಅಪರೂಪವಿದ್ದು, ಅದರ ಉತ್ತಮ ಗುರಿ ಸಾಧಿಸಬೇಕಾದರೆ ನಮ್ಮ ಸ್ವಲ್ಪ ಆಯುಷ್ಯವನ್ನೆಲ್ಲ ಇಂಥ ಮನೋರಂಜನೆಯಿಂದ ತುಂಬಿಸಿದರೆ ನಾವು ಹಾಳಾದೇವೇ ಹೊರತು ಉತ್ತಮರಾಗೆವು. ಶ್ರೀರಾಮ, ಸೀತೆ, ಭರತ, ಯುಧಿಷ್ಠಿರ ಮುಂತಾದವರ ಆದರ್ಶಕತೆಗಳು ಮಾತ್ರ ನಮ್ಮನ್ನು ಜನ್ಮದ ಸಾರ್ಥಕತೆಗೆ ಪ್ರೇರಿಸಿಯಾವು ಹೊರತು ಲೋಕದ ಕೋಟ್ಯಾಂತರ ಅಲ್ಪರ ಜೀವನದ ಕತೆಗಳಲ್ಲ. ಬ್ರಾಹ್ಮಣನು ಜೀವನದ ಉದ್ಧಾರಕ್ಕಾಗಿ ಮಾಂಸ ಮದ್ಯ ಸೇವಿಸಕೂಡದು. ಬಹುಮಟ್ಟಿನವರು ಸುಲಭವಾಗಿ ಆ

ಅಭ್ಯಾಸ ನಡೆಸುತ್ತಾರೆ. ಆದರೆ ಮನಸ್ಸಿಗೂ ಶುದ್ಧ ವಿಚಾರಗಳ ಓದು ಮಾತ್ರ ಕೊಡಬೇಕು. ಬರೆಯುವವರೇ ಕಾಮುಕತೆ, ದುರಾಚಾರ, ಗೆಲ್ಲಲಾರದ ಅಲ್ಪರಿದ್ದು ಬರೆಯುತ್ತ ಹೋಗುವ ಕತೆ ಕಾದಂಬರಿಗಳನ್ನು ಓದುವುದಲ್ಲ. ಅದು ಮಕ್ಕಳಿಗೂ ಬೇಡವಾಗುವಂತೆ ಹಿರಿಯರು ತಡೆಯಬೇಕು.

ನಾನು ಸಿನೆಮಾ ನೋಡುವುದನ್ನು ಬಿಡಲು ಕಾರಣ ನಮ್ಮವರ ಒಂದು ಸಿನೆಮಾದಲ್ಲಿ ಕಥಾನಾಯಕ ದುಷ್ಟಕಾರ್ಯ ಮಾಡುತ್ತ, ಕಡೆಯುವರೆಗೂ ಜಯಶೀಲನಾಗುತ್ತಾನೆ ಎಂಬುದನ್ನು ಕಂಡು ಬೇಸರ ಹೊಂದಿದ್ದು. ಬಹಳ ವರ್ಷಗಳ ಮೇಲೆ ಶಾಸ್ತ್ರದಲ್ಲಿ ಓದಿದೆ, ಯಾವ ಕತೆ ಕಾದಂಬರಿಯಲ್ಲೂ ಧರ್ಮ ಗೆಲ್ಲುವುದು ಮಾತ್ರ ಚಿತ್ರಿಸಬೇಕು, ಅದರ ವಿರುದ್ಧವಲ್ಲ ಎಂದು. ಈ ಕಾಲದ ಲೋಕದ ಸ್ಪಷ್ಟ ನಡೆಯುವ ವಿಚಾರಗಳ ಕತೆ ಬರೆಯುವವನಿಗೆ ಅವನ "ನಗ್ನ ಸತ್ಯ"ದ ಕತೆಗಳಲ್ಲಿ ಆ ಧ್ಯೇಯ ಇಲ್ಲ. ಏಕೆಂದರೆ ಜೀವನದಲ್ಲಿ ಅನೇಕರು ನಿಜವಾಗಿಯೂ ಅನ್ಯಾಯ ಮಾಡಿ ಗೆಲ್ಲುತ್ತ ಹೋಗುವುದುಂಟು. ಅದಕ್ಕೆ ಶಾಸ್ತ್ರ ಹೇಳುವ ಸಮಾಧಾನ, ಜೀವನ ಅಷ್ಟಕ್ಕೇ ಮುಗಿಯುವುದಿಲ್ಲ. ಅವರ ಮರಣದಾಚೆಯ ಭಾಗದಲ್ಲಿ ಶಿಕ್ಷೆ ಖಂಡಿತ ಕಾದಿದೆ. ಅದನ್ನು ಸೇರಿಸಿದರೆ ಮಾತ್ರ ಧರ್ಮಕ್ಕೆ ಮಾತ್ರ ಜಯ ಎಂಬುದೇ ದೇವರನಿಯಮ ಎಂಬುದು ಸ್ಪಷ್ಟವಾಗುತ್ತದೆ ಎಂಬುದಾಗಿದೆ. ಆದರೆ ಕತೆ ಕಾದಂಬರಿಗಳಲ್ಲಿ ಮರಣದ ಆಚೆಯ ಭಾಗ ಕೊಡುವ ಕ್ರಮವಿಲ್ಲ. ಆದ್ದರಿಂದ ಚಿತ್ರಿಸುವ ಭಾಗದಲ್ಲೇ ಧರ್ಮಕ್ಕೆ ಜಯವಾದದ್ದು ಮಾತ್ರ ತೋರಿಸಲೇಬೇಕೆಂಬುದು ತೀರಾ ಸರಿಯೇ. ಇದನ್ನು ಗ್ರಹಿಸದೆ, ಕೇವಲ ಬುದ್ಧಿ ಚುರುಕುತನದ ದುರುಪಯೋಗದಿಂದ ಎಷ್ಟೆಲ್ಲ ಓದುಗರನ್ನು ಮಾನಸಿಕ ದುಷ್ಟಸಂಗಕ್ಕೆ ಹಾಕಿ ಗ್ರಂಥಕರ್ತರು ಜನರನ್ನು ಕೆಡಿಸುತ್ತಿದ್ದಾರಲ್ಲ!

ನಾವು ಹೊರಗೆಹೋಗಿ ಬಂದಷ್ಟಕ್ಕೂ ಬಟ್ಟೆ ಹೊಲಸಾಗಿ ಅದಕ್ಕೆ ಮತ್ತೆ ಸಾಬೂನು ಹಾಕಿ ತೊಳೆಯಬೇಕಾಗುತ್ತದೆ, ನಮ್ಮ ಮನಸ್ಸಿಗೂ ಈ ತರದ ಪರಿಶುದ್ಧತೆ ತರುವ ನಿತ್ಯ ಶುದ್ಧ ಓದು ಅತ್ಯಗತ್ಯ; ಸಾಧನೆಯ ಜೀವನಕ್ಕೆ ಉತ್ತೇಜನ ಕೊಡಲು ಅದು ಬೇಕೇ ಬೇಕು. ಬ್ರಾಹ್ಮಣರಿಗಂತೂ—ಗಂಡಸು ಹೆಂಗಸರಿಬ್ಬರಿಗೂ—ಅದು ಅಗತ್ಯ. ಮಕ್ಕಳಿಗೆ ಉತ್ತಮ ಕತೆಗಳನ್ನು ಮಾತ್ರ ಹೇಳುತ್ತ, ಹೊರಗಿನ ಹೊಲಸು ವಾತಾವರಣ ಅವರನ್ನು ಕೆಡಿಸದಂತೆ ತಾಯಿ ಮಾಡಲೇಬೇಕು. ನಮ್ಮ ಹತ್ತಾರು ಮನೆಗಳಿರುವಲ್ಲಿ ಧಾರ್ಮಿಕ ಪುಸ್ತಕಗಳ ಭಂಡಾರ ಇರುವುದು ಭಾರವಾಗದು; ಪ್ರಯೋಜನ ಬಹಳ. ತಂದೆಗೆ ಮಗನ

ಆಚಾರ ಕಂಡು ಸಿಟ್ಟು ಬಂದಾಗ, ಚುಟುಕಾಗಿ ಅವನನ್ನು ಖಂಡಿಸಲಿಕ್ಕೆ ಮಾತ್ರ ಬರುತ್ತದೆಯೇ ಹೊರತು, ಅವ ಏಕೆ ತಪ್ಪುಗಾರ ಎಂಬುದನ್ನು ಅವ ಅರಿಯುವಂತೆ ವಿಸ್ತಾರವಾಗಿ ವಿವರಿಸಲಿಕ್ಕೆ ಬರುವುದಿಲ್ಲ. ಆದರೆ ಉತ್ತಮ ಓದಿಗೆ ಆಸ್ಪದ ಮಾಡಿಕೊಟ್ಟು ಅವ ತಿದ್ದಲ್ಪಡುತ್ತ ಬಂದರೆ ಮಾತ್ರ ಉತ್ತಮನಾಗುವ ಸಾಧ್ಯತೆ ಇದೆ.

ಪುಸ್ತಕಗಳನ್ನು ೪ ವರ್ಗಗಳಾಗಿ ಮಾಡಬಹುದು; ಅಮೃತ, ಅನ್ನ, ಅಮಲು, ಅಮೇಧ್ಯ (ಅಥವಾ ವಿಷ) ಎಂದು. ಅಮೃತ ಪುಸ್ತಕಗಳು ಹೆಚ್ಚು ಹೆಚ್ಚು ಸಾರಿ ಓದಿದಷ್ಟೂ ನಮ್ಮನ್ನು ಉತ್ತಮ ಮಾಡುತ್ತಲೇ ಹೋಗುತ್ತವೆ. ಅನ್ನ ಪುಸ್ತಕಗಳು ಲೌಕಿಕ ಜ್ಞಾನಕೊಟ್ಟು ಬಾಳಲು ಸಹಾಯಕ. ಆದರೆ ಅವಲ್ಲೆ ಮುಳುಗಿದ್ದರೆ ಅನ್ನದ ರಾಶಿಯಲ್ಲಿ ಕಂತಿ ಸತ್ತಂತೆ. ಅಮಲು ಪುಸ್ತಕಗಳೆಂದರೆ ಕೇವಲ ವಿನೋದಕ್ಕಾಗಿ ನಮ್ಮನ್ನು ಸೆಳೆದು, ಸಮಯ ಹಾಳುಮಾಡಿ ನಮ್ಮ ಓದುವ ಅಭಿರುಚಿಯನ್ನೇ ಮದ್ಯದಂತೆ ಕೆಡಿಸುವವು. ಅಮೇಧ್ಯ ಪುಸ್ತಕಗಳು ಮನಸ್ಸನ್ನು ತುಂಬಾ ಹೊಲಸಿಂದ ತುಂಬಿ ಅಥವಾ ದ್ವೇಷ, ದುಷ್ಟ ಭಾವನೆಗಳನ್ನು ಪ್ರೇರಿಸುವವು. ಉತ್ತಮರ ಸತ್ಸಂಗ ಸುಲಭವಲ್ಲ. ಆದರೆ ಅವರೇ ತುಂಬಾ ಯೋಚಿಸಿ ಬರೆದ ಪುಸ್ತಕಗಳು ಮತ್ತೂ ಹೆಚ್ಚಿನ ಸತ್ಸಂಗವಾಗದಿರವು. ಪ್ರತಿ ಬ್ರಾಹ್ಮಣನ ಮನೆಯಲ್ಲಿ ಸ್ವಲ್ಪವಾದರೂ ಅವನೇ ಸಂಗ್ರಹಿಸಿದ ಅಮೃತ ಗ್ರಂಥಗಳಿದ್ದು ಆಗಾಗ ಧಾರ್ಮಿಕ ಪ್ರೇರಣೆ ಕೊಡುವಂತಾಗಲಿ. ನನ್ನ **'ಬ್ರಾಹ್ಮಣರು ಏನು ಓದಬೇಕು'** ಪುಸ್ತಕ ನೋಡಿರಿ. ಒಮ್ಮೆ ಓದಿ (ಅದು ಪೂರ್ಣವಾಗಿ ಅಲ್ಲ) ಬಿಸಾಡಲು ಕೊಂಡುಕೊಳ್ಳುತ್ತಲೇ ಇರುವ ಮಾಸ ಪತ್ರಿಕೆಗಳಿಗಿಂತ ಬ್ರಾಹ್ಮಣರು ನೂರಾರು ಸಾರಿ ಓದಿ ಪ್ರಯೋಜನ ಪಡೆಯುವ ಅಮೃತ ಗ್ರಂಥಗಳನ್ನು ಕೊಂಡುಕೊಳ್ಳಲಿ.

## ೧೮. ಬ್ರಾಹ್ಮಣರಿಗೆ ಧರ್ಮದ ಅತಿ ಹೆಚ್ಚಿನ ಶಿಕ್ಷೆ

ಮಕ್ಕಳಿಗೆ ತಪ್ಪಿಗೆ ಬಹಳ ಸ್ವಲ್ಪ ಶಿಕ್ಷೆ, ಆದರೆ ಬಲ್ಲವರಾಗಿರಬೇಕಾದ ನೆರೆದವರಿಗೆ ಶಿಕ್ಷೆ ಎಷ್ಟೋ ಹೆಚ್ಚು ಎಂಬ ನ್ಯಾಯದಂತೆಯೇ ಧರ್ಮದ ತರಬೇತಿಯಲ್ಲಿ ಮೇಲು ಮೇಲು ಮಟ್ಟದ ಜನ್ಮಗಳನ್ನು ದೇವರು ದಯೆಪಾಲಿಸಿದ ಜೀವಾತ್ಮರಿಗೆ ಅವರ ಧರ್ಮದ ಲೋಪಗಳಿಗೆ ಶಿಕ್ಷೆ ಅತಿ ಕಠಿಣವಾಗುತ್ತ

ಹೋಗುತ್ತದೆ. ಮನುಸ್ಮೃತಿಯಲ್ಲಿ (೮,೩೩೮) ಹೇಳಿದೆ : ಒಬ್ಬ ಮೂಢ ಶೂದ್ರನಿಗೆ ಒಂದು ತರದ ಕಳವಿಗೆ ೧ ನಾಣ್ಯದ ಜುರುಮಾನೆ ರಾಜ ಮಾಡುವುದಾದರೆ, ವಿದ್ಯಾವಂತ ಶೂದ್ರನಿಗೆ ೮ ನಾಣ್ಯ, ವೈಶ್ಯನಿಗೆ ೧೬ ನಾಣ್ಯ, ಕ್ಷತ್ರಿಯನಿಗೆ ೩೨ ನಾಣ್ಯ, ಬ್ರಾಹ್ಮಣನಿಗೆ ೬೪ ರಿಂದ ೧೨೮ ರವರೆಗೆ ನಾಣ್ಯಗಳು ಜುರುಮಾನೆ ಎಂದಿದೆ. ಇದು ಅವರಲ್ಲಿರಬೇಕಾದ ಧರ್ಮದ ಆಚರಣಾ ಭಾಗದ, ನೈತಿಕತೆಯು, ಮಟ್ಟಗಳೂ ಆಗಿರಬೇಕೆಂದೂ ನಿರ್ಧರಿಸುವ. ಅದೇ ತಪ್ಪಿಗೆ ರಾಜನಿಗೆ ೧,೦೦೦ ನಾಣ್ಯಗಳ ಜುರುಮಾನೆ ಹೇಳಿದೆ. ಆದರೆ ಈಗಿನ ನಮ್ಮ ದೇಶದ ತಮ್ಮಷ್ಟು ಬುದ್ಧಿವಂತರಿಲ್ಲವೆಂದು ಭಾವಿಸುವ ಪ್ರಜಾರಾಜ್ಯದ ಮಂತ್ರಿಗಳ ಅತಿಘೋರ ಅಪರಾಧಗಳಿಗೆಲ್ಲ ಶಿಕ್ಷೆಯೇ ಇಲ್ಲದಿರುವುದೇ ಕ್ರಮವಾಗಿಬಿಟ್ಟದೆ ! ನಮ್ಮದು ಎಷ್ಟು ಅಧರ್ಮದ ರಾಜ್ಯವಾಗಿದೆ ಎಂದು ಇದರಿಂದ ಊಹಿಸಬಹುದು.

ಈ ಕಾಲದ ಬ್ರಾಹ್ಮಣ ಯುವಕರು ಧರ್ಮ ಕಲಿಯುವುದಿಲ್ಲ. ತಮ್ಮ ಅಧರ್ಮದ ಕಾರ್ಯಗಳಿಗೆ ಮುಂದೆ ದೇವರ ಅತ್ಯಂತ ಕಠಿಣ ಶಿಕ್ಷೆಯಿದೆ ಎಂಬುದನ್ನೂ ನಂಬುವುದಿಲ್ಲ ; ಇಷ್ಟಬಂದಂತೆ ವರ್ತಿಸುತ್ತಾರೆ. ಸಾಮಾನ್ಯವಾಗಿ ಸಭ್ಯತರದ ಮನುಷ್ಯ, ಜೈಲು ಶಿಕ್ಷೆ ಇರುವುದು ಪ್ರತ್ಯಕ್ಷ ಕಂಡು ತನಗೆ ಅದು ಎಷ್ಟಕ್ಕೂ ಬಾರದಂತೆ ಜಾಗ್ರತೆ ವಹಿಸುತ್ತಾನೆ. ಆದರೆ ಅಧಾರ್ಮಿಕ ವರ್ತನೆಗಳಿಗೆ ದೇವರ ಶಿಕ್ಷೆ ಅದಕ್ಕಿಂತ ಬಹಳ ಕಠಿಣದ್ದು ; ದೀರ್ಘಕಾಲದ್ದು ; ಲಂಚ ಕೊಟ್ಟು ತಪ್ಪಿಸಿಕೊಳ್ಳುವಂತೆಯೇ ಇಲ್ಲದ್ದು ; ಖಂಡಿತ ತುಬ್ಬಾಗುವುದು. ಪ್ರತಿಕಾರ್ಯ ದೇವರು ನೋಡುತ್ತಾನೆ.

ಕಾಶಿಯ ಒಬ್ಬ ಸುಶಿಕ್ಷಿತ ಮನೆಯ ಹುಡುಗ ಏಳನೆ ವರ್ಷದಲ್ಲಿ ಸತ್ತು ದಕ್ಷಿಣ ಅಮೇರಿಕ ಕಾಡುಜನರಲ್ಲಿ ಹುಟ್ಟಿ, ಹಿಂದಿನ ಜನ್ಮದ ನೆನಪು ಬಂದು ಅದನ್ನು ಹೇಳುತ್ತ ತನ್ನ ಈ ಕಾಲದ ಪರಿಸ್ಥಿತಿಗೆ ವಿಪರೀತ ಅಳುತ್ತಿದ್ದ. ಪುಟ್ಟಪರ್ತಿಗೆ ಶ್ರೀಸತ್ಯಸಾಯಿ ಬಾಬರ ಕೃಪೆಪಡೆಯಲಿಕ್ಕೆ ಬಂದ ರೋಗಿಷ್ಠ ಮಕ್ಕಳಲ್ಲಿ ಅತ್ಯಂತ ಕೆಟ್ಟಪಾಪ ಮಾಡಿದವರ ವಿಚಾರದಲ್ಲಿ ಶ್ರೀಬಾಬರು, ಅವರು ಈ ಜನ್ಮದಲ್ಲಿ ಅನುಭವಿಸಿಯೇ ತೀರಬೇಕು, ತಾನು ಸಹಾಯ ಕೊಡುವಂತಿಲ್ಲ ಎಂದಿದ್ದರು. ಶ್ರೀರಾಮಕೃಷ್ಣ ಪರಮಹಂಸರ ಕಾಲದಲ್ಲಿ ದಕ್ಷಿಣೇಶ್ವರ ದೇವಾಲಯದ ಹಿತ್ತಲ ಕಸ ಗುಡಿಸುತ್ತಿದ್ದ ಝಾಡಮಾಲಿ ರಸಿಕ ಮುಂಬಿನ ಜನ್ಮದಲ್ಲಿ ದೇವತೆಯಾಗಿದ್ದು ಶಾಪಹೊಂದಿದವ ಎಂದಿದ್ದರು ಅವರು. ನಾರದರು ಹಿಂದಿನ ಜನ್ಮದಲ್ಲಿ ತನ್ನ ಉದ್ಧಟತನಕ್ಕಾಗಿ ಶಾಪಹೊಂದಿದ ಗಂಧರ್ವನಾಗಿದ್ದರು ಎಂದು

ಪುರಾಣದಲ್ಲಿ ಬರುತ್ತದೆ. ರಾಣಿ ರಾಸಮಣಿ ದಕ್ಷಿಣೇಶ್ವರ ದೇವಾಲಯ ಕಟ್ಟಿಸಿದ ವಳು. ದೇವಿಯ ಪರಿಚಾರಿಕೆಯಾಗಿದ್ದು ಯಾವುದೋ ತಪ್ಪಿಗೆ ಶೂದ್ರ ಜನ್ಮ ಪಡೆದಿದ್ದಳು. ಸ್ವಾಮಿ ಅದ್ಭುತಾನಂದರ ಸೇವೆಮಾಡಲು ಬರುತ್ತಿದ್ದ ಬಿಮಲ್ ಎಂಬ ಹುಡುಗ, ತಾನು ಶ್ರೀರಾಮನ ಸಹಾಯಕ್ಕಾಗಿ ಲಂಕೆಗೆ ಹೋಗಿದ್ದ ಕಪಿ ಸೇನೆಯಲ್ಲಿದ್ದೆ ಎಂಬುದನ್ನು ಸ್ಮರಿಸಿ ಅವರಿಗೆ ಹೇಳಿದ್ದ, ಆದರೆ ಅವ ಇನ್ನೂ ಮೋಕ್ಷದ ಗತಿ ಕಂಡವನಲ್ಲ! ಸುರೇಖಾ ಎಂಬುವಳು ತಿಳಿಯದೆ ಧರ್ಮ ಧಿಕ್ಕಾರ ಮಾಡಿ ೭೦ ವರ್ಷ ಮೊಸಳೆ ಜನ್ಮದಲ್ಲಿದ್ದಳು. ರಾಮನಾಥಪುರದಲ್ಲಿ ಒಂದು ಕಾಡಾನೆ, ಮತ್ತೊಂದು ಕಡೆ ಒಂದು ನಾಯಿ, ದೇವಸ್ಥಾನಗಳ ಪೂಜೆಯ ಕಾಲ ದಲ್ಲಿ ಬಂದು ಕಣ್ಣೀರು ಸುರಿಸುತ್ತಿರುವ ಕತಾವಾರ್ತೆಗಳ ಅರ್ಥ, ಹಿಂದೆ ಮಾನವರಾಗಿದ್ದ ಸ್ಮರಣೆ ಬಂದು ವ್ಯಥೆಪಡುತ್ತಿದ್ದವು ಎಂಬುದಾಗಿದೆ.

ಬ್ರಾಹ್ಮಣರಾಗಿ ಗಂಡಸಿನ ಜನ್ಮ ಪಡೆದೂ ಧರ್ಮ ಸರೀ ಆಚರಿಸದೆ, ಆ ಮಟ್ಟದಿಂದ ಶೂದ್ರ, ಸ್ತ್ರೀ ಜನ್ಮಕ್ಕೆ ತಳ್ಳಲ್ಪಟ್ಟವರ ಸಂಖ್ಯೆ ವಿಜ್ಞಾನಕಾಲದ ಸೆಕ್ಯುಲರ್ ವಾತಾವರಣದ ದೇಹದ ಪೂಜೆಗಳ ಕ್ರಮದಿಂದ ಕಲಿಕಾಲದ ಆರಂಭದ ಸಂಧ್ಯಾಕಾಲ ದಾಟುತ್ತ ಬಂದಂತೆ ಬಹಳ ಹೆಚ್ಚಾಗುತ್ತ ಬಂದಿದೆ. ಅವರು ಧರ್ಮದಲ್ಲಿ ಈಗ ಅಲ್ಪರಾದರೂ ಬುದ್ಧಿಶಕ್ತಿಯ ಮಟ್ಟ ಮುಂಚಿನ ಜನ್ಮದ್ದಿದ್ದು, ಶೂದ್ರ, ಸ್ತ್ರೀಜನ್ಮಗಳ ಧರ್ಮವಾದ ನಮ್ರತೆಯ ಶಿಕ್ಷೆ ಪಾಲಿಸದೆ ಧಿಕ್ಕಾರ, ಸರಿಸಮಾನತೆಗಳ ಯತ್ನಗಳ ಪಾಪವನ್ನೂ ತಂದುಕೊಳ್ಳುತ್ತಿದ್ದಾರೆ. ಹಿಂದೆ ಹೇಳಿದ ರಾಣಿ ರಾಸಮಣಿ, ಶೂದ್ರ ಬಾಲಕ ನಾರದ, ಝಾಡಮಾಲಿ ರಸಿಕ ಶಿಕ್ಷೆಯ ಜನ್ಮಗಳಲ್ಲಿ ನಮ್ರತೆ ಬಹಳ ಬೆಳೆಸಿದ್ದರಿಂದ ಪಾಪ ಕಳೆಕೊಂಡು ಪುನಃ ಅತ್ಯುತ್ತಮ ಗತಿ ಪಡೆದರು. ಈ ಎಲ್ಲ ದೃಷ್ಟಾಂತಗಳೂ ಸವಿವರವಾಗಿ ನನ್ನ 'ಪುನರ್ಜನ್ಮ' ಪುಸ್ತಕದಲ್ಲಿವೆ. ಮಕ್ಕಳಿಗೆ ಅದರ ಪರಿಚಯವಿರುವುದು ಉತ್ತಮ.

ಜೈಲುಶಿಕ್ಷೆ ಬೇಡವೆಂದು ಹೆದರಿ ಅದಕ್ಕೆ ಬಲಿಬೀಳದಂತೆ ಸರ್ವಪ್ರಯತ್ನ ಮಾಡಿ ಬಾಳುವ ಸಭ್ಯಮಾನವ, ಧರ್ಮ ಧಿಕ್ಕರಿಸಿ ಮೂಕ ಮೂಢ ನಾಯಿ, ಮೊಸಳೆ ಆಗಿ ಜನ್ಮ ಪಡೆದಾಗ. ಜೈಲಿಗಿಂತ ಅತ್ಯಂತ ಅಧಿಕ ಕಷ್ಟಪಡದಿರನೇ? ಆದರೆ ತನ್ನ ಜಾತಿಧರ್ಮ ಪಾಲಿಸದವರಿಗೆಲ್ಲ ಅತ್ಯಂತ ಕಠಿಣತರದಲ್ಲಿ ನರಕಶಿಕ್ಷೆ ಮತ್ತು ಪ್ರಾಣಿಜನ್ಮ ಮಾತ್ರವಲ್ಲ ಪಕ್ಷಿ, ಮರ ಮುಂತಾದ ಜನ್ಮಗಳ ಶಿಕ್ಷೆಗಳೂ ಇವೆ ಎಂದು ಮನುಸ್ಮೃತಿ ಹೇಳಿದೆ (೧೨,೯). ಕ್ರಿಮಿಕೀಟಗಳಾಗಿ ಜನಿಸುವುದು ಕೂಡ ಸಾಧ್ಯ ಎಂದು ಹೇಳಿದೆ.

ಆದರೆ ದೇಹದ ಪೂಜೆ ಬೆಳೆಸಿ ಪಾಪಕಾರ್ಯ ಅಪಾರಮಟ್ಟದಲ್ಲಿ ಪ್ರೇರಿಸಿದ ವಿಜ್ಞಾನವು ಮರಣದ ಆಚೆಯ ಜೀವನದಲ್ಲಿ ಏನೇನೂ ಸಹಾಯ ಮಾಡಲಾರದು. ದೇವರ ಭಯ ಪಾಪದ ಭೀತಿ ಅಡಗಿಸುವ ಸೆಕ್ಯುಲರ್ ಸರ್ಕಾರ ನಡೆಸುವವರಂತೂ ಕೋಟಿ ಕೋಟಿ ಸಾಮಾನ್ಯ ಜನರನ್ನು ಪಾಪೀ ಜೀವನಕ್ಕೆ ದಾರಿ ಹಿಡಿಸಿದ ಅತ್ಯಂತ ಘೋರ ಪಾಪಕ್ಕಾಗಿ ಅತ್ಯಂತ ಅಪಾರಮಟ್ಟದ ಶಿಕ್ಷೆ ಅನುಭವಿಸಬೇಕಾಗದೆ ಇದ್ದೀತೇ ?

ಪಾಶ್ಚಾತ್ಯ ದೇಶಗಳಲ್ಲೀಗ ತಮ್ಮವರು ಮರಣ ಹೊಂದಿ ಪ್ರೇತಗಳಾಗಿ ಇರುವವರನ್ನು ತಕ್ಕ ಪ್ರೇತಪಾತ್ರಿಗಳ ಮೂಲಕ ಸಂಧಿಸಿ ಮಾತನಾಡಿಸುವ ಕ್ರಮ ಧಾರಾಳವಾಗಿ ಬೆಳೆದಿದೆ. ಖ್ಯಾತ ವೈಜ್ಞಾನಿಕ ತಜ್ಞರು ಕೆಲವರ ಶೋಧನೆಯಿಂದ ಇದು ಸಾಧ್ಯ ಎಂಬುದು ರುಜುವಾಗಿದೆ. ಹಾಗೆ ಸಂಪರ್ಕಿಸಲ್ಪಟ್ಟ ಪ್ರೇತಗಳು ತಮಗೆ ಬಹಳ ಕಷ್ಟಗಳಿದ್ದುದು, ಶಿಕ್ಷೆ ಸಿಕ್ಕಿದ್ದು ಹೇಳಿದ್ದಿಲ್ಲ. ಇದು ಏಕೆಂದರೆ ಅವರು ನಮ್ಮ ಧರ್ಮದ ದೃಷ್ಟಿಯಲ್ಲಿ ಅತಿ ಕೆಳಮಟ್ಟದವರು, ಮಕ್ಕಳಂತೆ ಮಾತ್ರ. ಮಕ್ಕಳಿಗೆ ತಂದೆ ತಾಯಿ ಸರ್ಕಾರ ಕಠಿಣ ಶಿಕ್ಷೆ ಕೊಡುವುದಿಲ್ಲವಷ್ಟೆ. ಆದರೆ ರಷ್ಯಾದ ಖ್ಯಾತ ಮುಖಂಡ ಲೆನಿನ್ನನು ಅವನ ಗೋರಿಯಲ್ಲಿ ಪ್ರೇತವಾಗಿ ತನ್ನದೇ ಕಷ್ಟದಿಂದ ಚಡಪಡಿಸುತ್ತಿದ್ದುದಕ್ಕೆ ದಾಖಲೆ ಇದೆ. ಮತ್ತೊಬ್ಬ ಅಮೇರಿಕದವನ ಪ್ರೇತ ಸ್ವಾಮಿ ಅಭೇದಾನಂದರನ್ನು ಕಂಡು ತೋರಿಕೊಂಡು ತನ್ನ ಕಷ್ಟದ ಪರಿಹಾರಕ್ಕೆ ಪ್ರಾರ್ಥನೆ ಮಾಡಲು ಬೇಡಿಕೊಂಡು, ತನ್ಮೂಲಕ ಮುಕ್ತನಾದ ಕತೆಯಿದೆ.

ನಮ್ಮ ಶೂದ್ರರು ಪರದೇಶದವರಿಗಿಂತ ಮೇಲಿನಮಟ್ಟದವರು. ಅವರು ಕೆಲವರು ಪ್ರೇತರಾಗಿ, ಕಷ್ಟದಿಂದ ಬಿಡುಗಡೆಗೆ ಬಂಧುಗಳನ್ನು ಹಿಡಿದು ಅವರ ಮೈಮೇಲೆ ಬಂದು ತನ್ಮೂಲಕ ತಮ್ಮ ಬಯಕೆ (ವರ್ಷಕ್ಕೊಮ್ಮೆ ಆಹಾರ ಬಟ್ಟೆ ಪಡೆದದ್ದು) ಅಥವಾ ಬಿಡುಗಡೆ ಪಡೆದದ್ದುಂಟು. ಬ್ರಾಹ್ಮಣರಿಗೆ ಅಂತಿಮ ಕ್ರಿಯೆ ಚೆನ್ನಾಗಿ ನಡೆದಿರದಿದ್ದರೆ ಅಥವಾ ದುರ್ಮರಣದಿಂದ ಪ್ರೇತತ್ವ ಬಂದು ಬಹಳ ಕಷ್ಟ ಪಡಬಹುದು. ಸೌಮ್ಯ ತರದವು ಶಾಂತವಾಗಿ ಕಷ್ಟ ಅನುಭವಿಸುತ್ತಿರುತ್ತವೆ. ಆದರೆ ಕಠಿಣ ತರದವು ಬಂಧುಗಳನ್ನು ಹಿಡಿದು ಅಥವಾ ಬ್ರಹ್ಮರಾಕ್ಷಸರಾಗಿ ಬಹಳವಾಗಿ ಕಾಡುವುದುಂಟು. ಅವುಗಳ ಬಿಡುಗಡೆ ಶೂದ್ರರಲ್ಲಿದ್ದಂತೆ ಸುಲಭವೇ ಅಲ್ಲ. ಅವಕ್ಕೆ ಕೆಲವಕ್ಕೆ ಗೋಕರ್ಣದಲ್ಲಿ ವಿಶೇಷ ಶ್ರಾದ್ಧ ಬಿಡುಗಡೆ ಕೊಡುತ್ತದೆ. ಕೆಲವಕ್ಕೆ ಗಯಾದಲ್ಲಿ ಪಿಂಡ ಹಾಕಿದಾಗ ಮೋಕ್ಷ. ಭಾಗವತ ಪಾರಾಯಣದ ಸಪ್ತಾಹ ಕೆಲವಕ್ಕೆ ಸಹಾಯಕ. ಕೆಲವಕ್ಕೆ ಮಂತ್ರ

ವಾದ ತಾಗುವುದಿಲ್ಲ. ಈ ಕಾಲದಲ್ಲಿ ಅಂತಿಮಕ್ರಿಯೆ ಚೆನ್ನಾಗಿ ನಡೆಯುವುದು ಕಡಿಮೆಯಾಗುತ್ತಿದೆ. ಶ್ರಾದ್ಧ ನಿಲ್ಲಿಸುವವರಿದ್ದಾರೆ. ಒಬ್ಬ ತಂದೆ ಇದರಿಂದ ಬಹಳ ಕಷ್ಟಪಟ್ಟು ಸೋದರಳಿಯನ ಮೂಲಕ ಮಕ್ಕಳಿಗೆ "ಚೆನ್ನಾಗಿ ಶ್ರಾದ್ಧ ನಡೆಸಲೇಬೇಕು. ಇಲ್ಲವಾದರೆ ಅವರ ನಾಶ ಮಾಡುತ್ತೇನೆ" ಎಂದು ಸ್ವಪ್ನದಲ್ಲಿ ತಿಳಿಸಿದ. ಆದರೂ ಮಕ್ಕಳು ಬೇಕಾದ್ದು ಮಾಡದಿದ್ದಾಗ ಇಬ್ಬರನ್ನೂ ಬೇಗ ಕೊಂದ. ಅದರ ಫಲ ಮೂರು ಪಿಶಾಚಗಳು! ಮಕ್ಕಳನ್ನು ಇನ್ನು ನಂಬು ವಂತಿಲ್ಲವಾದ್ದರಿಂದ ಜೀವಂತರಾಗಿರುವಾಗ ಧಾರಾಳವಾಗಿ ದಾನ ಮಾಡಿ ಪಾಪ ಕಳಕೊಳ್ಳುವುದು ಮಾತ್ರ ಭದ್ರವಾದ ದಾರಿ (ಗರುಡಪುರಾಣ ಸಾರೋದ್ಧಾರ ನೋಡಿರಿ). ನನ್ನ **'ಪುನರ್ಜನ್ಮ'** ಪುಸ್ತಕದಲ್ಲಿ ಮರಣ ಹೊಂದಿ ಪುನರ್ಜನ್ಮ ಪಡೆದು ಹಿಂದೆ ಮಾಡಿದ ತಪ್ಪಿಗೆ ಕಷ್ಟಪಟ್ಟ ಖಚಿತ ಕತೆಗಳು, ಪ್ರಾಣಿಜನ್ಮ ಪಡೆದ ಕತೆಗಳು, ಪ್ರೇತಜನ್ಮಗಳವು, ಶಾಸ್ತ್ರ ಈ ಭಾಗದಲ್ಲಿ ಹೇಳುವ ಬುದ್ಧಿ ವಾದಗಳು ಎಲ್ಲ ಇವೆ. ತಿಳಿದಿದ್ದರೆ ದೊಡ್ಡವರೂ ಮಕ್ಕಳೂ ಪಾಪದ ದಾರಿ ಬಿಟ್ಟು ಧರ್ಮದ ದಾರಿ ಹಿಡಿಯಲು ಅನುಕೂಲವಾಗಬಹುದು.

## ೧೯. ಬ್ರಾಹ್ಮಣರೂ ಮುಷ್ಕರಗಳೂ

ಸಮಾಜದಲ್ಲಿ ಎರಡು ತರದ ದೃಷ್ಟಿಯವರಿದ್ದಾರೆ; ಒಂದು ವರ್ಗ ತಮಗೆ ಇತರರಿಂದ ಸಿಕ್ಕಬೇಕಾದುದಕ್ಕೆ ಅತಿ ಹೆಚ್ಚಿನ ಪ್ರಾಮುಖ್ಯತೆ ಕೊಡುವ ವರು; ಮತ್ತೊಂದು ತಂಡ ತನ್ನ ಕರ್ತವ್ಯ ತಾನು ಮಾಡಬೇಕಾದುದನ್ನು ತಪ್ಪದೆ ಮಾಡುವುದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡುವಂತದ್ದು. ಪಾಶ್ಚಾತ್ಯ ರದ್ದು ಪ್ರಥಮ ವರ್ಗ. ಹಕ್ಕಿಗಾಗಿ ಹೋರಾಡುವುದು, ಮುಷ್ಕರ ಹೂಡು ವುದು ಅವರು ಬೆಳೆಸಿದ ಕ್ರಮ. ಸನಾತನ ಧರ್ಮವು ಅದು ವಿಧಿಸಿರುವ ಅವರವರ ಧಾರ್ಮಿಕ ಕರ್ತವ್ಯಕ್ಕೇ ಬಹಳ ಮಹತ್ವ ಕೊಡುತ್ತದೆ, ತನ್ಮೂಲಕ ಬರಬೇಕಾದ ಪ್ರತಿಫಲಕ್ಕಲ್ಲ. ಮಗ ತಂದೆಯ ಬಗ್ಗೆ ಕೆಲಸದವ ದಣಿಯ ಬಗ್ಗೆ ತನ್ನ ಕರ್ತವ್ಯ ಪಾಲಿಸಲೇಬೇಕು; ಆದರೆ ತಂದೆ, ಪತಿ, ದಣಿ ತಮ್ಮ ಭಾಗದ ಕರ್ತವ್ಯ ಮಾಡದಿದ್ದರೆ? ಆಗಲೂ ಶಾಸ್ತ್ರವು ಅವರು ತನಗೆ ಪೂಜ್ಯರಾಗ ಬೇಕಾದವರು - ಎಂಬುದರಿಂದ ಅವರನ್ನು ವಿರೋಧಿಸದೆ, ತಮ್ಮ ಕರ್ತವ್ಯ ಪಾಲಿಸುತ್ತ ಬಂದವರನ್ನೇ ನಮ್ಮ ಶಾಸ್ತ್ರವು ಆದರ್ಶರಾಗಿ ಮಾಡಿದೆ. ಶ್ರೀರಾಮ

ನಿಗೆ ಲಭಿಸಬೇಕಾಗಿದ್ದ ಯುವರಾಜ ಪಟ್ಟವನ್ನು ಕೈಕೆಯು ಮಾತಂತೆ ದಶರಥ ಕೊಡಲಾರದಾದಾಗ, ಹಿರಿಯನೂ ಪ್ರಜೆಗಳಿಗೆ ಬಹಳ ಪ್ರಿಯನೂ ಆದ ತನಗೆ ಅದು ಹಕ್ಕಿನದ್ದು, ಅದನ್ನು ಗೆಲ್ಲಬಲ್ಲೆ ಎಂದು ಶ್ರೀರಾಮ ಕ್ಷಣಮಾತ್ರವೂ ಯೋಚಿಸಲಿಲ್ಲ. ತಂದೆಯು ಕೈಕೆಗೆ ಕೊಟ್ಟಮಾತನ್ನು ಪಾಲಿಸಲಿಕ್ಕೆ ಅನುಕೂಲ ಮಾಡುವ ಯೋಚನೆ ಒಂದೇ ಹಿಡಿದ. ಸೀತೆಯೂ ಈ ಕಾಲದ ಭಾವನೆಯ ಸ್ತ್ರೀಯಂತೆ ಪತಿಗೆ ವಿರುದ್ಧ ಬೋಧನೆ ಕೊಡದೆ, ಕೇವಲವಾಗಿ ಪತಿಯ ಕಷ್ಟ ದಲ್ಲಿ ಭಾಗಿನಿಯಾಗಲು ಕಾಡಿಗೆ ತಾನೂ ಹೊರಟಳು. ಭರತ ತನಗೆ ಲಭಿಸುವ ರಾಜ್ಯ ಒಪ್ಪದೆ ಆದರ್ಶ ಬಂಧುಪ್ರೇಮ ತೋರಿಸಿದ. ಭೀಷ್ಮನೂ ಪಿತನ ಸುಖ ಕ್ಕಾಗಿ ತನ್ನ ರಾಜ್ಯದ ಹಕ್ಕನ್ನು ಮರುಯೋಚನೆ ಮಾಡದೆ ತ್ಯಜಿಸಿದ್ದಲ್ಲದೆ, ವಿವಾಹದ ಹಕ್ಕನ್ನೂ ಬಿಟ್ಟುಬಿಟ್ಟ. ಹೀಗೆ ಕೊಟ್ಟ ಭಾಷೆಯ ಪರಿಣಾಮ ವಾಗಿಯೇ ಭೀಷ್ಮ ಅನಂತರ ದುರ್ಯೋಧನನ ವರ್ತನೆಯನ್ನು ಏನೇನೂ ಒಪ್ಪದಿದ್ದರೂ ಅವನ ಪಕ್ಷದಲ್ಲಿಯೇ ನಿಂತು ಹೋರಾಡಿದ. ದ್ರೋಣರೂ ಕೃಪನೂ ಅಂತೆಯೇ ತಾವು ದುರ್ಯೋಧನನ "ಉಪ್ಪನ್ನ" ತಿಂದುದಕ್ಕಾಗಿ ಅವನ ಕಷ್ಟದಲ್ಲಿ ಅವನನ್ನು ತ್ಯಜಿಸುವ ಯೋಚನೆ ಮಾಡದಾದರು.

ನಮ್ಮ ಧರ್ಮದ ದೃಷ್ಟಿ ಏನೆಂದರೆ ಕರ್ತವ್ಯ ಮಾಡದಿದ್ದರೆ ಪಾಪ ಬರುವುದು ಖಂಡಿತ. ಅದು ಬಾರದಂತೆ ಧರ್ಮ ಕಲಿತು ವರ್ತಿಸಲೇಬೇಕು. ಆದರೆ ಇನ್ನೊಬ್ಬನಿಗಾಗಿ ಮಾಡಿದ ಕಾರ್ಯಕ್ಕೆ ಏನು ಪ್ರತಿಫಲ ಸಿಗಲೇಬೇಕು ಎಂದು ಅಷ್ಟೇ ಖಂಡಿತವಾಗಿ ತೀರ್ಮಾನಿಸಲಾರೆವು. ಸ್ವಾರ್ಥದೃಷ್ಟಿಯಿಂದ ಹೊರತು ಕೇವಲ ನಿಷ್ಪಕ್ಷಪಾತಿಯಾಗಿ ತೀರ್ಮಾನಿಸಲಾಪವರು ಅಪರೂಪ. ನಮ್ಮ ಕಳ್ಳಮನಸ್ಸಿನ ಸ್ವಾರ್ಥೀಭಾವನೆ, ಧರ್ಮದ ಪೂರ್ಣರೂಪದ ಅಜ್ಞಾನ, ಹಿಂದಿನ ಋಣ ಬಾಕಿಯ ವಿಚಾರ, ಎಲ್ಲ ಇರುವುದರಿಂದ ಫಲವು ಎಷ್ಟು ಮತ್ತು ಯಾವಾಗ ಲಭಿಸಬೇಕು ಎಂಬುದನ್ನು ದೇವರಿಗೆ ಬಿಡುವುದುತ್ತಮ ಎನ್ನುತ್ತದೆ ಶಾಸ್ತ್ರ. ಸ್ವಾರ್ಥೀಭಾವನೆಯ ದೃಷ್ಟಾಂತವಾಗಿ ಒಬ್ಬ ವಿಶೇಷ ಆಲಸ್ಯ ಸ್ವಭಾವದವ ನಿರ್ದಿಷ್ಟ ಕಾಲ ಪೂರ್ಣ ಕೆಲಸ ಮಾಡದ್ದಕ್ಕೆ, ಕೆಲಸ ಅಜಾಗ್ರತೆಯಿಂದ ಸರಿಮಾಡದೆ ದಣಿಗೆ ನಷ್ಟ ಮಾಡಿದ್ದಕ್ಕೆ ಮುಂತಾಗಿ ಎಂದೂ ಅವನೊಡನೆ ತನ್ನ ಲೋಪದೋಷ ಹೇಳಿ ಆ ದಾಮಾಶೆಯಲ್ಲಿ ಸಂಬಳ ಕಡಿಮೆ ಕೇಳಿದ್ದು ಎಲ್ಲಾದರೂ ಉಂಟೇ? ಆದರೆ ದೇವರಿಗೆ ಬಿಟ್ಟಾಗ ಅವ ಸರಿ ತುಲನೆ ಮಾಡಿ ತಕ್ಕ ಕಾಲದಲ್ಲಿ ಸಿಕ್ಕಬೇಕಾದುದು ಲಭಿಸುವಂತೆ ಮಾಡದಿರನು. ಆದ್ದ ರಿಂದ ನಿನ್ನ ಕರ್ತವ್ಯ ಮಾಡು, ಫಲ ದೇವರಿಗೆ ಬಿಡು ಎಂಬುದು ನಮ್ಮ

ಅತ್ಯಂತ ಮಹತ್ವದ್ದಾದ ಭಗವದ್ಗೀತೆಯ ಮುಖ್ಯ ಬೋಧನೆ. ಆ ದಾರಿ ಹಿಡಿದರೆ ನಾವು ತಪ್ಪಿ ಬೀಳುವ ಸಂಭವವೇ ಇಲ್ಲ. ಸಮಾಜದ ಶಾಂತಿಗೆ ಉದ್ಧಾರಕ್ಕೆ ಇದು ಉತ್ತಮ ದಾರಿ.

ಪಾಶ್ಚಾತ್ಯ ದೇಶಗಳಲ್ಲಿ ಪ್ರಜಾರಾಜ್ಯಗಳಲ್ಲಿ ಜನರು ವೈಯಕ್ತಿಕ ಹಕ್ಕುಗಳನ್ನೇ ಬೆಳೆಸುತ್ತ ಬಂದಿದ್ದಾರೆ. ಮತ್ತು ಅವುಗಳ ಬೆಂಬಲಕ್ಕಾಗಿ ಹೋರಾಟ, ಮುಷ್ಕರ, ಘೆರಾವೋ ಬಹಳ ಬೆಳೆದಿವೆ. ಪಶ್ಚಿಮ ಜರ್ಮನಿಯಲ್ಲಿ ಮದ್ಯದ ಅಮಲಲ್ಲಿ ಕಾರುನಡೆಸಿ ಅಪಘಾತಗಳು ವಿಪರೀತ ಆಗುತ್ತವೆ. ಆದರೆ ಪ್ರಜೆಗಳ ಮದ್ಯಕುಡಿಯುವ ಹಕ್ಕನ್ನು ಕುಂಠಿಸಲು ಅಲ್ಲಿ ಯಾರೂ ತಯಾರಿಲ್ಲ. ಸಂಯುಕ್ತ ಅಮೇರಿಕದಲ್ಲಿ ಪಿಸ್ತೂಲು ಕೋವಿಗಳ ತಯಾರಿಕೆಗೆ ಸಂಗ್ರಹಕ್ಕೆ ಯಾರ ತಡೆಯೂ ಇಲ್ಲ. ಆದ್ದರಿಂದ ಕೊಲೆಗಳು ವಿಪರೀತ. ಕಳೆದ ೮೦ ವರ್ಷ ಗಳಲ್ಲಿ ೭ ದೇಶದ ಅಧ್ಯಕ್ಷರು ಇಬ್ಬರು ಆ ಸ್ಥಾನಕ್ಕೆ ಉಮೇದುವಾರರಾದವರು ಪಿಸ್ತೂಲಿನ ಏಟಿಗೆ ಬಲಿಯಾಗಿದ್ದರು! ಆದರೆ ಜನರಿಗೆ ಹೀಗೆ ಪಿಸ್ತೂಲು ಇಟ್ಟುಕೊಳ್ಳುವ ಹಕ್ಕಿಗೆ ತಡೆಹಾಕಲು ಯಾರೂ ತಯಾರಿಲ್ಲ. ಹಾಗಾದರೆ ಕಾರಿನಡಿ ಸತ್ತವರಿಗೆ, ಕೊಲೆಮಾಡಲ್ಪಟ್ಟವರಿಗೆ, ಬಾಳಲು ಹಕ್ಕಿಲ್ಲವಾಯಿತಲ್ಲ! ಕೆಲಸಕ್ಕೆ ಸೇರುವಾಗ ಒಪ್ಪಿಕೊಂಡ ಸೇವೆಯ ಶರ್ತಗಳಲ್ಲ; ಮುಷ್ಕರಗಳ ಮೂಲಕ ಕಾರ್ಮಿಕರು ಬೇರೆ ಬೇರೆ ಕಡೆಗಳಲ್ಲಿ ಏನೇನೆಲ್ಲ ಸಾಧಿಸಿಕೊಂಡ ಹಕ್ಕು ಗಳೆಲ್ಲವೂ ಇತರರೆಲ್ಲರಿಗೂ ಬೇಕು! ಅವಕ್ಕಾಗಿ ಮುಷ್ಕರ ನ್ಯಾಯವೇ! ಪಾಶ್ಚಾತ್ಯರು, ತಮ್ಮ ದುಡಿಮೆಯಿಂದ, ವಿಜ್ಞಾನದ ಶೋಧನೆಗಳಿಂದ, ಆಶ್ರಿತ ದೇಶಗಳ ಹಣದ ಸುಲಿಗೆಯಿಂದ, ತಮ್ಮ ದೇಶ ಬಹಳ ಐಶ್ವರ್ಯವಂತವೂ ಪ್ರಬಲವೂ ಆದದ್ದಾಗಿ ಮಾಡಿ ಆಮೇಲೆ ಮಾತ್ರವೇ ಕಾರ್ಮಿಕರ ಹಕ್ಕು ಬಹಳ ಬೆಳೆಸಿದರಾದರೆ, ನಾವು ಇಲ್ಲಿ ದೇಶದ ಅರ್ಧಪಾಲು ಜನರು ಇನ್ನೂ ಎರಡು ಊಟಕ್ಕಿಲ್ಲದವರಾಗಿರುವಾಗ ಪಾಶ್ಚಾತ್ಯರನ್ನು ಮೀರುವ ಮುಷ್ಕರಗಳ ಪ್ರಯೋಗ ನಡೆಸುತ್ತಿದ್ದೇವೆ! ಅವರ ಹಕ್ಕಿನ ದಾರಿಯನ್ನು ಆರಿಸಿದ್ದೇವೆ. ದೇಶದ ಬಡವರ ಉದ್ಧಾರಕ್ಕೆ ಬಹಳ ಹೆಚ್ಚು ಅಗತ್ಯವಾದ, ಪ್ರಯೋಜನಕಾರಿ ಯಾದ ಕರ್ತವ್ಯ ಮುಖ್ಯ ಎಂಬ ದಾರಿಯನ್ನಲ್ಲ.

ಇಲ್ಲಿ ಮುಖ್ಯವಾಗಿ ಹೇಳಬೇಕೆಂದಿರುವುದು ಈ ಕಾಲದ ನಮ್ಮಲ್ಲಿನ ಮಜೂರರ ಮುಷ್ಕರಗಳ ಹಕ್ಕಿನ ವಿಚಾರ. ಮುಷ್ಕರಗಳಲ್ಲಿ, ಘೆರಾವೋಗಳಲ್ಲಿ ಮುಖ್ಯ ಶಕ್ತಿ ಬರುವುದು ಹಕ್ಕಿಗೆ ಹೋರಾಡುವವರ ಅಧಿಕ ಸಂಖ್ಯೆಯ ಸಂಘಟನಾ ಪಶುಬಲದಿಂದ. "ಕೆಲಸನಿಲ್ಲಿಸಿ ಮುಷ್ಕರಹೂಡಿ ಲಾಭ ಬಯಸುವ

ದಣಿಗೆ ತುಂಬಾ ನಷ್ಟಮಾಡಿ ಬುದ್ಧಿ ಕಲಿಸಬೇಕು; ನಮ್ಮ ಕೇಳಿಕೆ ಪೂರೈಸದೆ ಉಪಾಯವಿಲ್ಲ ಎಂದು ಮಾಡಬೇಕು" ಎಂಬ ಛಲ ಅವರದ್ದು. ಆದರೆ ಕೇವಲ ಶಾಂತ ಮುಷ್ಕರದಿಂದ ಕಾರ್ಯಸಾಧನೆ ಆಗದಿರುವುದೇ ಹೆಚ್ಚಾಗಿಂತ್ತ ಬಂದಾಗ ಅದಕ್ಕೆ ಬೆಂಬಲವಾಗಿ ಕಾರ್ಖಾನೆ ಯಂತ್ರ ಕೆಡಿಸಿ ನಷ್ಟಮಾಡುವುದು, ಮುಷ್ಕರಕ್ಕೆ ಸೇರದವರಿಗೆ ಹಾಗೆ ಸೇರದುದಕ್ಕೆ ಹಿಂಸಿಸುವುದು, ಮುಷ್ಕರಗಳ ಅಂಗಗಳಾದವು. ಹಾಗಾದರೆ ಮುಷ್ಕರ ಸೇರದವರಿಗೆ ಹಾಗೆ ಸೇರದಿರುವ ಹಕ್ಕಿಲ್ಲವೇ? ಕಾರ್ಖಾನೆ ಸಾಮಗ್ರಿ ಹಾಳುಮಾಡುವ ಹಕ್ಕು ಎಲ್ಲಿಂದ ಹೇಗೆ ಬಂತು? ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ, ಕಾರ್ಖಾನೆಯ ಮಾಲಿಕರು ಹಾಕಿದ ಶಿಸ್ತನ್ನು ಉಲ್ಲಂಘಿಸಿದವರು, ತಮ್ಮ ವಿಶೇಷ ಅಜಾಗ್ರತೆಯಿಂದ ಸಾಮಾನು ಹಾಳು ಮಾಡುತ್ತ ಬಂದವರು, ಅಲಕ್ಷ್ಯಮಾಡುತ್ತಿರುವವರು ಅಧಿಕಾರಿಗಳಿಂದ ಶಿಕ್ಷೆಪಡೆದರೆ, ಕೆಲಸದಿಂದ ಕ್ರಮೇಣ ತೆಗೆದು ಹಾಕಲ್ಪಟ್ಟರೆ, ಎಲ್ಲರ ಮುಷ್ಕರ; ಏಕೆಂದರೆ ಅಧಿಕಾರಿಗಳಿಗೆ ಒಮ್ಮೆ ಹಾಗೆ ಮಾಡಲು ಬಿಟ್ಟರೆ ಮುಂದೆ ಅವರು ತಮಗೂ ಹಾಗೆ ಮಾಡ್ಯಾರು, ಆದ್ದರಿಂದ ಬಿಡಲೇಕೂಡದು ಎಂದು ಶಿಕ್ಷೆ ಪಡೆದವರ ಪಕ್ಷ ಹಿಡಿದು ಶಿಕ್ಷೆ ಹಿಂತೆಗೆಯಲು ಒತ್ತಾಯಿಸಲು ಸಂಘಬಲದಿಂದ ಮುಷ್ಕರ! ಹಾಗಾದರೆ ಕೆಲಸದವರಿಗೆ ಈ ದೋಷಗಳು ನ್ಯಾಯವೇ? ಅವಕ್ಕೆ ಶಿಕ್ಷೆ ಬೇಡವೇ? ನಷ್ಟ ಮಾಡಿದ್ದಕ್ಕೆ ಪರಿಹಾರವೇನು?

ಇಷ್ಟರವರೆಗೆ ಕೇವಲ ಕೆಲಸದವರು_ದಣಿ ಇವರ ವಿಚಾರ ಹೇಳಿದ್ದಾಯಿತು. ಆದರೆ ಮೂರನೆ ಪಕ್ಷವಾಗಿರುವ ಸಾರ್ವಜನಿಕರಿಗೆ ಮುಷ್ಕರದಿಂದ ಹಾನಿಯುಂಟಾದರೆ ಹಾಗೆ ಹಾನಿಮಾಡಲು ಮುಷ್ಕರ ಹೂಡುವವರಿಗೆ ಎಲ್ಲಿಂದ ಹಕ್ಕು ಬಂತು? ಡಿಲ್ಲಿಯ ಮುನ್ಸಿಪಾಲಿಟಿಯ ನೀರಾವರಿಯವರ ಮುಷ್ಕರ ಸಫಲವಾಗಲೇಬೇಕೆಂದು ಕೆಲವು ನೀರಾವರಿ ಸಲಕರಣೆ ಕೆಡಿಸಿಹೋದುದನ್ನು ಮಿಲಿಟರಿಯವರನ್ನು ಕರೆದು ಸರಿಪಡಿಸಿ ಡಿಲ್ಲಿ ಜನರಿಗೆ ನೀರು ಕೊಡುವಂತಾಗಲಿಕ್ಕೆ ೩೬ ಗಂಟೆ ಬೇಕಾಯಿತು. ಅಷ್ಟರವರೆಗೆ ಏನೂ ಅನ್ಯಾಯ ಮಾಡಿರದ ಸಾರ್ವಜನಿಕರಿಗೆ ಒಂದು ಹುಂಡೂ ನೀರೂ ಇಲ್ಲ! ಬಂಗಾಳದಲ್ಲಿ ಕಾರ್ಮಿಕರ ಬಲ ಬೆಳೆದು ಶಿಸ್ತು ತೀರಾ ಕೆಡುತ್ತಬಂದು, ವಿದ್ಯುತ್ ಉತ್ಪಾದನೆಯ ಕೇಂದ್ರಗಳಲ್ಲಿ ದುರಸ್ತಿಕೆಲಸ ಬಹಳ ಹಿಂದೆ ಬಿದ್ದು ಉತ್ಪನ್ನ ಅರ್ಧಕ್ಕಿಂತ ಕಡಿಮೆಯಾಗಿ ಈ ವಿದ್ಯುತ್ತನ್ನು ನಂಬಿದ ಕಾರ್ಖಾನೆಗಳ ಉತ್ಪನ್ನದಲ್ಲಿ ವರ್ಷಕ್ಕೆ ೧,೦೦೦ ಕೋಟಿ ರೂಪಾಯಿ ನಷ್ಟವಾಯಿತು! ಅವರಿಗೆ ಹೀಗೆ ನಷ್ಟ ಹೊಂದದಿರಲು ಹಕ್ಕಿಲ್ಲವೇ?

ಕಾರ್ಖಾನೆಗಳಲ್ಲಿ ಶಿಸ್ತು, ಕರ್ತವ್ಯನಿಷ್ಠೆ ಕಡಿಮೆಯಾದಷ್ಟೂ ಮುಷ್ಕರಗಳು ಹೆಚ್ಚಿದಷ್ಟೂ ದೇಶದ ಸಾಮಾನುಗಳ ಉತ್ಪನ್ನ, ಆದ್ದರಿಂದ ದೇಶದ ಐಶ್ವರ್ಯ ಕಡಿಮೆಯಾಗುತ್ತದೆ. ಸಾಮಾನುಗಳ ಬೆಲೆ ಏರುತ್ತದೆ. ಸಾರ್ವಜನಿಕರ ಕಷ್ಟ ಹೆಚ್ಚುತ್ತದೆ, ದೇಶದ ಅಪಾರ ಬಡವರ ಉದ್ಧಾರ ಮತ್ತೂ ಮತ್ತೂ ಹಿಂದೆ ಬೀಳುತ್ತದೆ, ಇವರೆಲ್ಲರ ಭಾಗದ ಹಕ್ಕಿನ ವಿಚಾರ ಬೇಡವೇ ?

ಸಾರ್ವಜನಿಕರ ಸೇವೆಗಳ ಮೂಲಕ ತಮ್ಮ ಜೀವನ ಬೆಳೆಸುವ ಸಂಸ್ಥೆಗಳ ಮುಷ್ಕರಗಳ ಒಂದು ಅತ್ಯಂತ ಅನ್ಯಾಯದ ಭಾಗವೆಂದರೆ, ಕಾರ್ಮಿಕರ ಸಿಟ್ಟನ್ನು ಅವರು ತೋರಿಸುವುದೆಲ್ಲ ಅವರ ಅಧಿಕಾರಿಗಳ ಮೇಲಲ್ಲ ! ಅವರಿಗೆ ಏನೂ ಅನ್ಯಾಯ ಮಾಡಿರದ ಸಾರ್ವಜನಿಕರ ಕಷ್ಟನಷ್ಟ ಹೆಚ್ಚಿಸುವುದರ ಮೂಲಕ. ಧರ್ಮ ಏನಿದೆ ಎಂದರೆ ನಾವು ಸಾಧ್ಯವಿದ್ದರೆ ಪರರಿಗೆ ಉಪಕಾರ ಮಾಡಬೇಕು. ಅದು ಸಾಧ್ಯವಿಲ್ಲದಿದ್ದರೆ ಸುಮ್ಮನಿರಬೇಕು. ಅಂತೂ ನಮಗೆ ಏನೂ ಕೇಡು ಮಾಡದವರಿಗೆ ಅನ್ಯಾಯ ಮಾಡಲೇಬಾರದು ಮತ್ತು ನಮಗೆ ಉಪಕಾರ ಮಾಡುವವರಿಗಂತೂ ಎಂದೂ ಕೇಡು ಮಾಡಕೂಡದು ಎಂದು. ಆದರೆ ಬ್ಯಾಂಕಿನವರು ಮುಷ್ಕರ ಹೂಡಿ ಉಪದ್ರವ ಕೊಡುವುದು ಬ್ಯಾಂಕಿನಲ್ಲಿ ಹಣಇಟ್ಟು ಆ ಸಂಸ್ಥೆಯ ನೌಕರರ ಜೀವನವೃತ್ತಿ ಸಾಧ್ಯಮಾಡಿದ ಸಾರ್ವಜನಿಕರಿಗೆ ; ಬಸ್ಸಿನವರು, ಆಟೋರಿಕ್ಷಾದವರು ಮುಷ್ಕರ ಹೂಡಿ ಪೇಚಾಟಕ್ಕೆ ಹಾಕುವುದು ಕೇವಲವಾಗಿ ಅವರ ಜೀವನವೃತ್ತಿ ಸಾಧ್ಯಮಾಡುತ್ತ ಬಂದ ಸಾರ್ವಜನಿಕರಿಗೆ ! ವಿದ್ಯಾರ್ಥಿಗಳು ಪರೀಕ್ಷೆ ಮುಂದೆ ಹಾಕಬೇಕು, ಸುಲಭ ಮಾಡಬೇಕು ಎಂದು ಹೂಡಿದ ಮುಷ್ಕರದ ಸಾಮಾನ್ಯರೂಪ ಬಸ್ ಚಲಾವಣೆ ನಿಲ್ಲಿಸುವುದು, ಬಸ್ ಸುಟ್ಟು ಹಾಕುವುದು, ಸಾರ್ವಜನಿಕರಿಗೆ ಮಾಡುವ ಅನ್ಯಾಯ ಮಾತ್ರ. ರೈಲು ಉರುಳಿಸುವ ಆ ಭಾಗದ ಕೆಲಸಗಾರರು ಪ್ರಯಾಣಿಕರ ಜೀವವನ್ನೇ ತೆಗೆಯುತ್ತಾರೆ ! ಕಾರ್ಮಿಕರ ಸಂಘಟನಾ ಬಲವೇ ನ್ಯಾಯಕ್ಕೆ ದಾರಿ ಎಂದಾದರೆ ಪಶುಬಲದಿಂದ ಮಾಡಿದ್ದೆಲ್ಲ ನ್ಯಾಯವೆಂದಾಗುತ್ತದೆ ! ಮುಷ್ಕರದ ವೇಳೆಯಲ್ಲಿ ದಿನಹೋದಂತೆ ಕಾರ್ಮಿಕರಿಗೆ ಸಂಬಳದ ಅಭಾವದಿಂದ ದಣಿಯ ಮೇಲೆ ರೋಷ ಹೆಚ್ಚುತ್ತ ಹೋಗುತ್ತದೆ. ಪ್ರತಿ ಮುಷ್ಕರದಿಂದ ಈ ದ್ವೇಷ ಹೆಚ್ಚುತ್ತದೆ ಹೊರತು ಒಟ್ಟಾಗಿ ಜೊತೆಯಾಗಿ ಕೆಲಸ ಮಾಡಬೇಕಾದವರಲ್ಲಿರಬೇಕಾದ ಮೈತ್ರಿ ಬೆಳೆಯುವುದಿಲ್ಲ. ಇದು ಹಾನಿಕರ. ಕೆಲಸಗಾರರ ಮಟ್ಟದವರು ಅಪಾರ ಸಂಖ್ಯೆಯಲ್ಲಿದ್ದಾರೆ. ಆದರೆ ಕಾರ್ಖಾನೆ ನಿರ್ಮಿಸಿ ಅದರ ಕಷ್ಟನಷ್ಟ ಅರ್ಥಮಾಡಿಕೊಂಡು ಚೆನ್ನಾಗಿ ಸಂಸ್ಥೆ ನಡೆಸುವ ಶಕ್ತಿಯಿರುವವರು

ಹಲವು ಸಾವಿರಕ್ಕೊಬ್ಬರು ಮಾತ್ರ. ಎಂದರೆ ಅವರು ಕೆಲಸಗಾರರಿಗಿಂತ ಮೇಲ್ಮಟ್ಟದವರು ; ಅವರು ಅನ್ನದಾತರು. ತಂದೆಯಂತೆ, ರಾಜನಂತೆ (ತಪ್ಪು ಮಾಡುವುದೇ ಇಲ್ಲವೆಂತಲ್ಲ) ಗೌರವಕ್ಕೆ ಕೃತಜ್ಞತೆಗೆ ಅರ್ಹರು. ಅವರಂತೆ "ಉಪ್ಪನ್ನ" ಕೊಟ್ಟವನಿಗೆ ದ್ರೋಹಿಯಾಗಕೂಡದು ಎನ್ನುತ್ತದೆ ನಮ್ಮ ಧರ್ಮ. ಅದೇ ಲೋಕ ಹಿತಕ್ಕೆ ಕ್ರಮ.

ಯಾರೂ ರೋಷದಿಂದ, ಕೇವಲ ಸಂಕೋಚ ತರದ ಸ್ವಾರ್ಥ ದೃಷ್ಟಿಯಿಂದ ಕಾಣುವಾಗ, ಎದುರು ಪಕ್ಷದ ಮನೋಭಾವನೆ ಗ್ರಹಿಸಲಾರದೆ ಅದು ಅನ್ಯಾಯವಾಗಿ ತೋರುತ್ತದೆ. ಆದ್ದರಿಂದ ಭಿನ್ನಾಭಿಪ್ರಾಯ ಬೆಳೆದು ತಾವೇ ಸರಿಪಡಿಸಿಕೊಳ್ಳಲಾರದ ಮಟ್ಟ ಮುಟ್ಟುತ್ತದೆ. ಇಬ್ಬರು ನೆರೆಹೊರೆಯವರು ಲಡಾಯಿ ಮಾಡಿಕೊಂಡಾಗ ಅವರು ಸಿಟ್ಟಿಂದ ತಮ್ಮ ಬೀದಿಯ ಮನೆಗಳಿಗೆಲ್ಲ ಕಲ್ಲು ಎಸೆಯುವುದಿಲ್ಲ. ಮೂರನೆ ನಿಷ್ಪಕ್ಷಪಾತಿ ಸಮರ್ಥನಿಗೆ ತೀರ್ಮಾನಕ್ಕೆ ಎಂದು ಕೋರ್ಟಿನಲ್ಲಿ ವ್ಯವಹರಣೆಕೊಡುವುದೇ ಸರ್ವತ್ರಕ್ರಮ. ಸ್ವಿಟ್ಜರ್‌ಲೆಂಡ್ (೧೯೧೮ ರಿಂದ), ಜಪಾನ್ ಈ ಮುಷ್ಕರಗಳ ಕ್ರಮ ತೀರಾ ತಪ್ಪು, ಹಾಳು ಎಂದು ನಿರ್ಧರಿಸಿ ಭಿನ್ನಾಭಿಪ್ರಾಯಗಳಲ್ಲಿ ಪಂಚಾಯತಿಕೆ ತೀರ್ಮಾನದ ಕ್ರಮ ಅನುಸರಿಸುತ್ತ ಬಂದು ಒಗ್ಗಟ್ಟಿನ ಗುರಿ ಸಾಧಿಸಿ ದೇಶದ ಕೈಗಾರಿಕೆಯ ಸಮರ್ಥತೆ ಬೆಳೆಸಿ ಇಡೀ ದೇಶಗಳೇ ತುಂಬಾ ಶ್ರೀಮಂತವಾಗಿವೆ. ನಮ್ಮ ಧರ್ಮವು ಈ ದಾರಿ ಮಾತ್ರ ವಿಧಿಸಿದೆ. ದ್ವೇಷ ಬೆಳೆಸುವ, ಶಿಸ್ತು ಕಡಿಮೆ ಮಾಡುವ, ದೇಶದ ಐಶ್ವರ್ಯ ಬೆಳೆಯಲು ಬಿಡದ ಪಶುಬಲವೇ ನ್ಯಾಯವೆಂಬ ದಾರಿಯನ್ನಲ್ಲ.

ಬ್ರಾಹ್ಮಣರಾದರೂ ಧರ್ಮವನ್ನು ಅತಿಚೆನ್ನಾಗಿ ಕಲಿತು ಅಭ್ಯಸಿಸಬೇಕು. ಆದ್ದರಿಂದ ಈ ವರ್ಗದವರು ಇತರರಿಗೆ ಧರ್ಮದ ದಾರಿ ತಿಳಿಸುವವರಾಗಬೇಕೇ ಹೊರತು ಇತರ ಧರ್ಮ ಬೇಡವಾದ, ಅರಿಯದ, ಆದರೆ ದ್ವೇಷ ಕಾರುವ ಭಾಷಣಗಳಿಂದ ಕಾರ್ಮಿಕರನ್ನು ಹುರಿದುಂಬಿಸುವ ಮುಖಂಡರ ಹಿರಿತನ ಒಪ್ಪುವುದಲ್ಲ! ತಮ್ಮ ಧಾರ್ಮಿಕ ಮಟ್ಟ ಸಂಪೂರ್ಣ ಕೆಡಿಸಿಕೊಳ್ಳುವುದು ತಮ್ಮ ಬ್ರಾಹ್ಮಣ್ಯವನ್ನೇ ಕೆಡಿಸಿಕೊಂಡಂತೆ. ಬ್ರಾಹ್ಮಣರು ತಮ್ಮ ಧಾರ್ಮಿಕ ಹಿರಿತನ ಉಳಿಸಿಕೊಳ್ಳಲೇಬೇಕು. ಅದು ಹಿಂದಿನ ಅಪಾರಸಂಖ್ಯೆಯ ಜನ್ಮಗಳ ಸಾಧನೆಯ ಫಲ. ಹಾಗೆ ಉಳಿಸಿಕೊಳ್ಳಲಿಕ್ಕೆ ಅವರು ಈ ತೀರಾ ತಪ್ಪಿ ಬೀಳುತ್ತಿರುವ ಹಕ್ಕಿನ ದೃಷ್ಟಿಯ ಮುಖಂಡತ್ವ ತ್ಯಜಿಸಲೇಬೇಕು. ಅದು ತಮ್ಮ ಧರ್ಮಕ್ಕೆ ತೀರಾ ವಿರುದ್ಧ ; ತಮ್ಮ ನೂರಕ್ಕೆ ನೂರಂಶ ಧರ್ಮ ಪಾಲಿಸ

ಬೇಕಾದ ಹುಟ್ಟಿಗೆ ವಿರುದ್ಧ ; ತಮ್ಮ ಧೋರಣೆ ತಾವೇ ನಿರ್ಧರಿಸಬೇಕೇ ಹೊರತು ಇತರ ಜಾತಿ ಧರ್ಮದವರ ತೀರ್ಮಾನದಂತಲ್ಲ ಎಂದು ಅವರಿಂದ ಪ್ರತ್ಯೇಕ ಸರಿದು ನಿಂತಿರಬೇಕು. ತಾವು ಒಪ್ಪಿದ ಕರ್ತವ್ಯ ಮಾಡುವುದು, ದಣಿಯ ಅಹಿತ ಸಾಧಿಸದಿರುವುದು, ಕೆಲಸದಲ್ಲಿ ನಿರ್ವಂಚನೆ, ಶ್ರಮ, ಶಕ್ತಿ ಇದ್ದ ಕೆಲಸ ಮಾಡುತ್ತ ಆಡಳಿತದಲ್ಲಿ ದೋಷ ತೋರಿದಾಗ ತಮಗೆ ನ್ಯಾಯ ವೆಂದು ತೋರುವ ಕೇಳಿಕೆಗಳನ್ನು ನ್ಯಾಯ ಒಪ್ಪುವ ರೀತಿಯಲ್ಲಿ ಅವರ ಮುಂದಿಟ್ಟು ನ್ಯಾಯಸ್ಥರ ಪಂಚಾಯತಿಕೆ ಮೂಲಕ ತೀರ್ಮಾನಿಸಲು ಕೇಳಿ ಕೊಳ್ಳುವುದು, ಆಡಳಿತದವರಲ್ಲಿ ನ್ಯಾಯ ಕಾಣದಿದ್ದರೆ, ಅಲ್ಪರ ಸೇವೆ ಕೂಡದು ಎಂದು ಧರ್ಮ ಹೇಳಿರುವುದರಿಂದ, ಬಿಟ್ಟು ಬೇರೆ ಆಗುವುದು ಮಾತ್ರ ದಾರಿ. ಇದಕ್ಕೆಲ್ಲ ಧೈರ್ಯಕೊಡಲಿಕ್ಕಾಗಿ ಬ್ರಾಹ್ಮಣರು ಶಾಸ್ತ್ರ ತಮಗೆ ವಿಧಿಸಿದ ತೀರಾತೀರಾ ನಿರಾಡಂಬರದ ಸುಲಭ ಸರಳಜೀವನ ಅನುಸರಿಸುವುದು ಮಾತ್ರ ದಾರಿ ; ಅದು ಅಗತ್ಯ. ಪಾಶ್ಚಾತ್ಯರ ನಾಗರಿಕತೆಗೆ ಯಾವ ಧಾರ್ಮಿಕ ತಳಹದಿಯೂ ಇಲ್ಲ. ಅದರ ಗುಲಾಮ ಅನುಕರಣೆ ಬೇಡ.

## ೨೦. ಗಂಡಸರೂ ಹೆಂಗಸರೂ ಸಮಾನರಲ್ಲ

ಸ್ತ್ರೀ ಪುರುಷರ ಸರಿಸಮಾನತೆಯು ಈ ವಿಜ್ಞಾನ ಕಾಲದಲ್ಲಿ ಪಾಶ್ಚಾತ್ಯ ರಿಂದ ಒಪ್ಪಲ್ಪಟ್ಟು ಅವರ ನಾಗರಿಕತೆಯಲ್ಲಿ ಬಹಳ ಸ್ಥಾಪನೆಯಾಗಿದೆ. ನಮ್ಮ ಲ್ಲಿಯೂ ಅದರ ಅನುಕರಣೆ ಬಲವಾಗುತ್ತಿದೆ. ನಮ್ಮ ಧರ್ಮವು ಅದನ್ನು ಒಪ್ಪುವುದಿಲ್ಲ. ಮಾತ್ರವಲ್ಲ, ಇತರ ಧರ್ಮಗಳ ಸ್ಥಾಪಕರಾದ ಮಹಾ ಪುರುಷರೂ ಅದನ್ನು ಒಪ್ಪಿದ್ದಿಲ್ಲ. ಬುದ್ಧ ತನ್ನ ಸನ್ಯಾಸೀ ವರ್ಗಕ್ಕೆ ಸ್ತ್ರೀಯ ರನ್ನು ಸೇರಿಸಿಕೊಳ್ಳಲು ಒಪ್ಪಿರಲಿಲ್ಲ. ಅತ್ಯಂತ ಪ್ರಿಯ ಶಿಷ್ಯ ಆನಂದನ ಒತ್ತಾಯಕ್ಕೆ ಈ ತಡೆ ಹಿಂತೆಗೆಯುತ್ತ "ನನ್ನ ಧರ್ಮ ಸಾವಿರ ವರ್ಷ ಬಾಳು ವುದರ ಬದಲಾಗಿ, ಇನ್ನು ೫೦೦ ವರ್ಷಮಾತ್ರ ಚೆನ್ನಾಗಿ ಬಾಳೀತು" ಎಂದಿದ್ದ. ಅದು ಕ್ಷೀಣಿಸಲಿಕ್ಕೆ ಸ್ತ್ರೀ ಸನ್ಯಾಸೀ ಭಿಕ್ಷುಗಳೂ ಒಂದು ಮುಖ್ಯ ಕಾರಣ ವಾಗಿತ್ತು. ಮುಸಲ್ಮಾನರಲ್ಲಿ ಸ್ತ್ರೀಗೆ ಧರ್ಮದ ಭಾಗದಲ್ಲಿ ಅತಿ ಕೆಳಮಟ್ಟ ; ಅವರು ಮಸೀದಿಗೆ ಹೋಗುವುದಿಲ್ಲ, ಕೆಥೋಲಿಕ್ಕರಲ್ಲಿ ಸ್ತ್ರೀ ವಿವಾಹದ ವೇಳೆ ಪತಿಗೆ ವಿಧೇಯಳಾಗಿರುವ ಪ್ರತಿಜ್ಞೆ ಮಾಡಬೇಕು. ಗೀತೆಯಲ್ಲಿ ಶ್ರೀಕೃಷ್ಣನು

ಸ್ತ್ರೀಯರ ಮತ್ತು ಶೂದ್ರರ ಜನ್ಮ ಕೆಳಮಟ್ಟದ್ದು ಎಂದಿದ್ದಾನೆ (೯,೩೨). ಸನಾತನ ಧರ್ಮದಲ್ಲಿ ಸ್ತ್ರೀಗೆ ಪತಿಯೇ ದೇವರು ಎಂಬಷ್ಟು ಸಾಧನಾಮಟ್ಟ ಹೇಳಿದೆ. ಆದರೆ ಬ್ರಾಹ್ಮಣರೂ ಈಗ ಪಾಶ್ಚಾತ್ಯರ ಕ್ರಮಗಳ ಅನುಕರಣೆಯಿಂದ, ಧರ್ಮದ ಅಜ್ಞಾನದಿಂದ, ಆಳದ ವಿವೇಚನೆ ಮಾಡದೆ, ಸಮಾನತೆಯ ದಾರಿಯಲ್ಲಿ ಹೆಜ್ಜೆ ಹೆಜ್ಜೆ ಮುಂದಿಡುತ್ತ ಹೋಗುತ್ತಿದ್ದಾರೆ. ಸ್ವಲ್ಪ ವಿವೇಚನೆ ನಡೆಸುವುದು ಉತ್ತಮವಾಗದಿರದು ; ಏಕೆಂದರೆ ಸ್ತ್ರೀಪುರುಷರ ನಿರ್ಮಾಣ ಈಗಲೂ ದೇವರ ವಶದಲ್ಲೇ ಇದೆ. ಪಾಶ್ಚಾತ್ಯರ ವಿಜ್ಞಾನದ ಇಷ್ಟಬಂದಂತೆ ನಡೆಯುವುದಿಲ್ಲ.

ಮಾನವನ ಆದಿಕಾಲದಿಂದ ವಿಜ್ಞಾನ ಕಾಲದವರೆಗೂ ಸ್ತ್ರೀಯು ಗಂಡಸಿಗೆ ಸಮಾನಳಲ್ಲ, ಅವನ ವಶವರ್ತಿಯಾಗಿರಬೇಕಾದವಳು ಎಂಬುದು ಇಡೀ ಲೋಕದಲ್ಲಿ, ಎಲ್ಲೆಲ್ಲೂ, ಸ್ತ್ರೀಯರಿಂದ ಕೂಡ ಒಪ್ಪಲ್ಪಟ್ಟಿತ್ತು. ಇದಕ್ಕೆ ಅತಿಬಲವಾದ ಸರಳವಾದ ಅನೇಕ ಕಾರಣಗಳಿವೆ. ಜೀವಾತ್ಮರು ಹಿಂದೆ ಪ್ರಾಣಿಗಳಾಗಿದ್ದಾಗ, ಗಂಡು ಹೆಣ್ಣಿಗಿಂತ ಗಾತ್ರದಲ್ಲಿ ದೊಡ್ಡ ಮತ್ತು ಬಲಿಷ್ಠ ದೇಹ ಪಡೆಯುತ್ತ ಬಂದಿದ್ದವು. ಮಾನವರಲ್ಲಿಯೂ ಗಂಡಸಿಗೆ ಹೋಲಿಸಿದಾಗ ಸ್ತ್ರೀಯು ಅಬಲೆ. ಅವಳಿಗೆ ಮಾತ್ರವೇ ಗರ್ಭ ಧರಿಸುವ, ಮಕ್ಕಳನ್ನು ಹೆರುವ, ಅವುಗಳ ಬಾಲ್ಯದಲ್ಲಿ ಹಾಲು ಕೊಟ್ಟು ಪೋಷಿಸುವ, ಶಕ್ತಿಯಿದೆ. ಗರ್ಭಿಣಿಯಾದಾಗ ಮಗುವಿನ ಭಾರದಿಂದ ಅವಳು ಮತ್ತಷ್ಟು ಅಬಲೆ. ಅನಂತರವೂ ಮಗುವು ಅವಳಿಗೇ ಹೆಚ್ಚಾಗಿ ಅಂಟಿಕೊಂಡಿರಬೇಕಾಗುತ್ತದೆ. ಪ್ರಾಣಿಗಳಂತಲ್ಲ, ಮಾನವರಿಗೆ ಅವರಿಗೆ ಆಹಾರ, ಜೀವನ ಕ್ರಮ, ಒಟ್ಟು ಇದ್ದಲ್ಲೇ ಬೆಳೆಸಲು ಸಾಧ್ಯವಾದ್ದರಿಂದ ಅವರು ಕರುಣೆ ಹೊಂದಿದವರಾದ್ದರಿಂದ, ಮುದಿ ಅಬಲ ತಂದೆ ತಾಯಿ, ಮಗ, ಅವನ ಪತ್ನಿ, ಮಕ್ಕಳು ಒಟ್ಟಿಗೆ ಇರುವುದೇ ಸರ್ವತ್ರ ಕ್ರಮವಾಗಿತ್ತು. ಅಬಲ ಮಕ್ಕಳ ಪೋಷಣೆಗೆ ಮನೆಯಲ್ಲಿ ಹೇಗೂ ಇರಬೇಕಾದ ಸ್ತ್ರೀ ಮುದಿ ಅತ್ತೆಮಾವರ ಆರೈಕೆಯನ್ನೂ ಮಾಡಲಿಕ್ಕೆ ಬೇಕಿತ್ತು. ಹೀಗೆ ಪತಿಯಿಂದ ಪೋಷಿಸಲ್ಪಟ್ಟ ಸ್ತ್ರೀಯು ಈ ಅಬಲರ ಪೋಷಣೆಗೆ ತಕ್ಕುದಾಗಿ ಮೃದುಸ್ವಭಾವ ಹೊಂದಿದ್ದಳು. ಮಗುವನ್ನು ಅರ್ಥ ಮಾಡಿಕೊಳ್ಳಲಿಕ್ಕೆ ತುಂಬಾ ತಾಳ್ಮೆ ಬೇಕು. ಅದರ ಹಠ ಅರ್ಥವಾಗದಿದ್ದಾಗಲೂ ಕೋಪಿಸದೆ ಇರಲಿಕ್ಕೆ ಬಹಳ ಸಹನೆ, ಕರುಣೆ ಬೇಕು. ಅದು ಹೊಲಸು ಮಾಡಿದಾಗ, ಅನಾರೋಗ್ಯದಲ್ಲಿದ್ದಾಗ, ಹಠಮಾಡುವಾಗ ತಾಯಿ ಮಾತ್ರವೇ ಅದಕ್ಕೆ ಉತ್ತಮ ಬಂಧು ; ತಂದೆಯಲ್ಲ. ಬುದ್ಧಿಬಾರದ ಆದರೊಡನೆ ಆಡಂತ್ತೆ

ಬಹಳಕಾಲ ಸುಖ ಕಾಣಲಿಕ್ಕೆ, ತನ್ಮೂಲಕ ಪ್ರೀತಿಮಾಡಲಿಕ್ಕೆ, ಅವಳಿಗೆ ಮಾತ್ರ ಸಾಧ್ಯ. ಇದಕ್ಕೆಲ್ಲ ತಕ್ಕುದಾಗಿ ಮನೆಯ ಚಿಕ್ಕ ವಾತಾವರಣದಲ್ಲೇ ಅವಳು ತೃಪ್ತಳಾಗಬಲ್ಲಳು. ಅಲ್ಲಿ ಧಾರಾಳವಾಗಿ ತ್ಯಾಗ, ಉದಾರತೆ ತೋರಿಸಬಲ್ಲಳು.

ಗಂಡಸಾದರೋ ವಾಹನಗಳು ಯಂತ್ರಗಳು ಇದ್ದಿರದ ಹಿಂದಿನ ದೀರ್ಘ ಕಾಲದಲ್ಲೆಲ್ಲ ಕುಟುಂಬದ ಜೀವನಕ್ಕೆ ಸಂಪಾದನೆಗಾಗಿ ಹೊರಗೆ ದೂರ ದೂರ ನಡೆಯಬೇಕಿತ್ತು, ಕಾಯಕಷ್ಟದ ಶ್ರಮವಹಿಸಿ ಕೆಲಸಮಾಡಬೇಕಿತ್ತು ಎಂಬುದರಿಂದ ಅವನಿಗೆ ದೇಹದ ಹೆಚ್ಚಿನ ಶಕ್ತಿಯಿತ್ತು. ಅವ ಅನೇಕವೇಳೆ ಅಪರಿಚಿತರು ಮಿತ್ರರಲ್ಲದವರು, ತನಗೆ ಒಗ್ಗದವರ ನಡುವೆ ಕೆಲಸ ಮಾಡಬೇಕಾಗುತ್ತಿತ್ತು. ಅವರು ಎಲ್ಲರೂ ನ್ಯಾಯವಂತರಲ್ಲದ್ದರಿಂದ ಅವನು ಮೃದು ಸ್ವಭಾವದವನಾದರೆ ವಂಚಿಸಲ್ಪಡುವ ಸಂಭವವಿತ್ತು. ಆದ್ದರಿಂದ ಸ್ತ್ರೀಯಂತಲ್ಲ, ಅವನಲ್ಲಿ ಕೆಲವು ಮಟ್ಟದ ಕಠೋರತೆ ಇರಲೇಬೇಕಾಯಿತು. ಸ್ತ್ರೀಯು ಗಂಡಸರ ಭಾವನೆಯಂತೆ ಭೋಗವಸ್ತು. ಆದ್ದರಿಂದ ಸ್ತ್ರೀಯೂ ಹೀಗೆ ದೂರದೂರ ಸಂಪಾದನೆಗೆ ಹೋಗುವುದು ಅಪಾಯಕರವಾಗಿತ್ತು. ಅವಳಿಗೆ ಪತಿಯು ಬಲಿಷ್ಠನಾಗಿದ್ದು ಕಠೋರತರದವನಾಗಿದ್ದು ರಕ್ಷಣೆ ಕೊಡಬೇಕಾದ ಅಗತ್ಯವಿತ್ತು. ಸ್ತ್ರೀಯು ಕೆಲವು ಮಟ್ಟಿಗೆ ಸುಂದರಳಾದರೆ ಅವಳಿಗೆ ಪರಪುರುಷರ ಕೆಳಗೆ ಉದ್ಯೋಗವು ಧರ್ಮದದೃಷ್ಟಿಯಿಂದ ಅಪಾಯಕರ. ಅವಳಿಗೆ ಪೋಷಣೆ ವರ್ಷವಿಡೀ ಬೇಕಾದರೂ ಗರ್ಭಧರಿಸಿದಾಗ ಸಂಪಾದನೆ ನಿಲ್ಲಿಸುವುದೂ ಅಗತ್ಯ. ಇಂಥ ಅನೇಕ ಕಾರಣಗಳಿಂದ ತನಗಿಂತ ಹೆಚ್ಚು ಬಲಿಷ್ಠನೂ ಕಠಿಣ ಸ್ವಭಾವದವನೂ ಹೆಚ್ಚು ಸಂಪಾದನೆ ಮಾಡುವ ಶಕ್ತಿಯಿರುವವನೂ ಆದ ಗಂಡಸು ಸ್ವಾಭಾವಿಕವಾಗಿ ಎಲ್ಲೆಲ್ಲೂ ಕುಟುಂಬದ ಯಜಮಾನನ ಸ್ಥಾನದಲ್ಲಿದ್ದನು. ಪತ್ನಿ ಅವನಿಗೆ ವಿಧೇಯಳಾಗಿದ್ದು, ಅವನ ಪ್ರೀತಿಯ ಸೇವೆಯಿಂದ, ಅವನ ತಂದೆತಾಯಿಗಳ, ಅವನ ಮಕ್ಕಳ ಪೋಷಣೆಯಿಂದ, ಅವನನ್ನು ಮೆಚ್ಚಿಸಿ, ಅವನಿಂದ ತನಗೆ ಬೇಕಾದುದನ್ನೆಲ್ಲ ಪಡೆಯುತ್ತಿದ್ದಳು. ಇಬ್ಬರಿಗೂ ಆತ್ಮಸಾಧನೆಯ ಗುರಿ ಬೇಕು. ಆದರೆ ಗಂಡಸಿಗೆ ಮಾತ್ರವೇ ದೂರದೂರ ಹೋಗಿ ಗುರುವಿಂದ, ಇತರ ಹಿರಿಯರಿಂದ, ಧರ್ಮ ಕಲಿತು ಬರುವುದು ಅಭ್ಯಸಿಸುವುದು ಸಾಧ್ಯವಿತ್ತು. ಪತ್ನಿ ಅವನಿಂದ ಧರ್ಮ ಕಲಿಯಬೇಕು; ಆದ್ದರಿಂದ ಅವಳು ಅವನಿಗೆ ಶಿಷ್ಯಳಂತೆ ಮಾತ್ರ. ಮತ್ತು ಅವಳು ಧರ್ಮದ ಭಾಗದಲ್ಲಿ ತನ್ನದೇ ದಾರಿ ಬೇರೆ ಕಲಿತರೆ ಅವರಲ್ಲಿ ಐಕ್ಯಮತ್ಯದ ಬದಲಿಗೆ ಭಿನ್ನತೆ, ಘರ್ಷಣೆಗೆ ಎಡೆಯಾಗುತ್ತದೆ. ಪತಿಗೆ ತನ್ನ ಆತ್ಮವಿಕಾಸತೆಗೆ ಹೆಚ್ಚಿನ ಅಭ್ಯಾಸ

ಗಳು ಸಾಧ್ಯವಾಗಿದ್ದು ಜಪ ಹೋಮ, ಪೂಜೆ, ವ್ರತೋಪವಾಸಗಳು ಧ್ಯಾನ, ನಡೆಸುವಾಗ ಅವನಿಗೆ ನಡುವೆ ಆಗಾಗ ಸ್ವಲ್ಪ ಪರಿಚಾರಕರಿಗೆ, ಆ ಕಾಲದಲ್ಲಿಯೂ ಮಕ್ಕಳನ್ನು ನೋಡಿಕೊಳ್ಳಲಿಕ್ಕೆ, ಅಡಿಗೆ ಮಾಡಲಿಕ್ಕೆ, ಬಂದವರ ಸ್ವಲ್ಪ ಉಪ ಚಾರಕ್ಕೆ, ಪತ್ನಿಯು ಬಿಡುವಾಗಿರಬೇಕಾಗುತ್ತದೆ. ಆದರೆ ಈ ಎಲ್ಲ ಪರಿಚಾರಿ ಕೆಲಸಗಳು ಅಲ್ಪದವು, ಪುಣ್ಯವಿಲ್ಲದ್ದು ಏನಲ್ಲ, ಪತಿಯು ಈ ತರದ ಸೇವೆಯಿಂದ ಆವನ ಪುಣ್ಯದ ಆರ್ಧಪಾಲು ಅವಳಿಗೆ ಬರುವಂತೆ ದೇವರೇ ಮಾಡಿದ್ದಾನೆ. ಪತಿಯು ತನ್ನ ಸಂಪಾದನೆಯಿಂದ ಬ್ರಾಹ್ಮಣರಿಗೆ ಕೊಡುವ ದಾನಗಳು ಅವಳು ಹಸ್ತೋದಕ ಹಾಕದೆ ಪೂರ್ಣವಲ್ಲ ಎಂದು ಶಾಸ್ತ್ರದ ನಿಯಮವಿದೆ. ಅಂತೂ ಅವರು ಒಬ್ಬರ ಕೊರತೆ ಇನ್ನೊಬ್ಬರು ತುಂಬುತ್ತ ಕೂಡಿಕೊಂಡು ಪೂರ್ಣತೆ ಹೊಂದುವಂತೆ ದೇವರಿಂದ ನಿರ್ಮಿಸಲ್ಪಟ್ಟವರೇ ಹೊರತು ಸರಿಸಮಾನರೆಂದು ಸ್ಪರ್ಧೆಗೆ ಎಡೆಕೊಡಬೇಕಾದವರಲ್ಲ.

ವಿಜ್ಞಾನ ಬಂದು ಜನರು ಹೀಗೆ ಸ್ವಾಭಾವಿಕತೆಯಿಂದ ಅನುಸರಿಸುತ್ತಿದ್ದ ಕ್ರಮವನ್ನು ಕಿತ್ತು ಹಾಕಿದೆ. ಮುಂಚೆ ಸಂಪಾದನೆಗೆ ಹೆಚ್ಚಿನ ಕಾಯಶಕ್ತಿ ಬೇಕಿದ್ದ ಗಂಡಸಿನ ರಟ್ಟೆಯ ಶ್ರಮವನ್ನೆಲ್ಲ ಈಗ ಯಂತ್ರಶಕ್ತಿ ವಹಿಸಿಕೊಂಡು, ಕಾರ್ಖಾನೆಗಳಲ್ಲಿ ಹೆಂಗಸರೂ ಗಂಡಸರಂತೆ ಕೆಲಸ ಮಾಡಲಾಪರು. ಹೆಂಗಸರು ಕೆಲಸಕ್ಕೆ ದೂರ ಹೋಗಲಿಕ್ಕೆ ಬಸ್ಸಲ್ಲಿ ಶ್ರಮ, ಅಪಾಯ ಇಲ್ಲದಾಗಿದೆ. ಹೆಂಗ ಸಿಗೆ ಮಕ್ಕಳನ್ನು ಹೆರುವ ತಂಟೆ ಬೇಡವಾದರೆ ಗರ್ಭನಿರೋಧ ಮಾತ್ರೆ, ಶಸ್ತ್ರ ಚಿಕಿತ್ಸೆ ತಯಾರಿದೆ. ಅವಳ ಸಂಪಾದನೆಯ ಹಣದ ಭದ್ರತೆಗೆ ಬ್ಯಾಂಕು ಇದೆ. ಗಂಡಸಿನ ಹಂಗು ಬೇಡದೆ ಬಾಳಬೇಕಾದರೆ ಹೋಟೆಲುಗಳಿವೆ. ಅಪ್ಪಿತಪ್ಪಿ ಗರ್ಭ ನಿಂತರೆ ಗರ್ಭಹತ್ಯೆಗೆ ಡಾಕ್ಟರರು ತಯಾರಿದ್ದಾರೆ. ತನ್ನ ಸ್ವಾತಂತ್ರ್ಯಕ್ಕೆ ತೊಡಕಾದ ಮಕ್ಕಳನ್ನು ದೂರ ಹಾಕಲಿಕ್ಕೆ ಸರ್ಕಾರಿ ಅಥವಾ ಇತರ ಅನಾಥಾ ಲಯಗಳಿವೆ. ಅಮೇರಿಕದಲ್ಲಿ ಇಂಥವಲ್ಲಿ ೧೨೦,೦೦,೦೦೦ ಮಕ್ಕಳಿದ್ದಾರೆಂದು ಹಲವು ವರ್ಷಗಳ ಹಿಂದೆಯೇ ಕೇಳಿದ್ದೆ !

ಅಂತೆಯೇ ವಿಜ್ಞಾನವು ಸ್ತ್ರೀಯ ಮನೆ ಕೆಲಸವನ್ನು ಬಹಳ ಚುಟು ಕಾದುದೂ ಸುಲಭವಾದುದೂ ಮಾಡಿದೆ. ವಿದ್ಯುದ್ದೀಪ, ಅಡಿಗೆಗೆ ಕುಕ್ಕರ್ ಒಲೆ, ನಲ್ಲಿನೀರು, ಬಿಸಿನೀರಿಗೆ ಹೀಟರ್, ಬಟ್ಟೆ ತೊಳೆಯುವ ಯಂತ್ರ, ಹೊಲಿಯಲಿಕ್ಕೆ ಅರೆಯಲಿಕ್ಕೆ ಬೀಸಲಿಕ್ಕೆ ಯಂತ್ರ, ಮಿಂತ ಸಂತತಿಯ ಕ್ರಮ ದಿಂದಾಗಿ ಚಿಕ್ಕ ಕುಟುಂಬ, ಮಕ್ಕಳು ಶಾಲೆಗೆ ಹೋಗಿದ್ದ ಖಾಲಿ ಸಮಯ ಧಾರಾಳವಿರುವದು ಸಾಧ್ಯ ಮಾಡಿದೆ. ಲೌಕಿಕ ವಿದ್ಯೆ ಕಲಿಯಲಿಕ್ಕೆ ಗಂಡಸರಿಗಿ

ರುವ ಸೌಲಭ್ಯ ಈಗ ಹೆಂಗಸರಿಗೂ ಇದ್ದು ಅವರು ಧಾರಾಳವಾಗಿ ವಿದ್ಯಾವಂತರಾಗಿ, ಗಂಡಸಿನ ಸಮಾನರು ಮಾತ್ರವಲ್ಲ ಅವನ ಬಲವಾದ ಸ್ಪರ್ಧಿ ಆಗಿ ನಿಂತಿದ್ದಾರೆ.

ಆದರೆ ಸ್ತ್ರೀಯ ಈ ತರದ ಸರಿಸಮಾನತೆ ಕೃತಕ ತರದ್ದು. ದೇವರು ಈಗಲೂ ಸ್ತ್ರೀಯರನ್ನು ಮುಂಚಿನ ಸ್ವಭಾವ ಗುಣಗಳೊಡನೆಯೇ ನಿರ್ಮಾಣ ಮಾಡುತ್ತಿದ್ದಾನೆಯೇ ಹೊರತು ಸರಿಸಮಾನತೆಯವರ ಬಯಕೆಯಂತಲ್ಲ. ಆದ್ದರಿಂದ ಸ್ವಭಾವ ಗುಣಕ್ಕೆ ವಿರುದ್ಧವಾಗಿ ಬಾಳುವುದು ಕ್ರಮೇಣ ಅನಿರೀಕ್ಷಿತ ಕೆಡುಕುಗಳನ್ನು ತಾರದಿರದು. ವೈದ್ಯ ಶಾಸ್ತ್ರದಲ್ಲಿ ನೋಬೆಲ್ ಪಾರಿತೋಷಕ ಪಡೆದವರು, Man the Unknown ಎಂಬ ಪ್ರಖ್ಯಾತ ಪುಸ್ತಕ ಬರೆದ ಎಲಕ್ಸಿಸ್ ಕೆರೆಲ್ಲರು, ಇದೆಲ್ಲ ತೀರಾ ತಪ್ಪು ಎಂದು ಎಚ್ಚರಿಸಿದ್ದಾರೆ. ಅವರ ಹೇಳಿಕೆಯಂತೆ ಗಂಡಸಿನ ವೃಷಣ ಸ್ತ್ರೀಯ ಅಂಡಾಶಯಗಳು ಸಂಪೂರ್ಣ ಬೇರೆಬೇರೆ ತರದ ದ್ರವಗಳನ್ನು ಉಂಟುಮಾಡುತ್ತ ಗಂಡಸರ ಹೆಂಗಸರ ದೇಹತುಂಬಿಸಿ ಅವರ ದೇಹಗಳ ಪ್ರತಿಕಣದಲ್ಲೂ ವ್ಯತ್ಯಾಸ ಉಂಟುಮಾಡುತ್ತಿವೆ; ಅವರ ನಾಡಿಗಳಮೇಲೆ ತುಂಬಾ ಬೇರೆಬೇರೆ ತರದ ಪರಿಣಾಮ ಉಂಟುಮಾಡುತ್ತಿವೆ ; ಇದು ಅವರಲ್ಲಿ ಧಾರಾಳ ಸ್ವಭಾವ ಭಿನ್ನತೆಗೆ ಕಾರಣವಾಗಿದೆ ; ಈ ಸತ್ಯವನ್ನು ನಿರ್ಲಕ್ಷಿಸಿ ಸಮಾನತೆ ಸಾರುವುದು ಬಹಳ ಹಾನಿಕರ ; ಸ್ತ್ರೀಗೆ ಹೆಚ್ಚಿನ ವಿದ್ಯೆ ಲಭಿಸಿದರೆ ಅದು ಮಕ್ಕಳನ್ನು ಉತ್ತಮರಾಗಿ ಬೆಳೆಸಲು ವಿನಿಯೋಗಿಸಬೇಕು ; ಲೌಕಿಕ ಸಂಪಾದನೆಯಿಂದ ಉತ್ತಮ ಮಾನವ ಜನಾಂಗ ಆಗಲಾರದು ಎಂದು ಎಚ್ಚರಿಸಿದ್ದಾರೆ. ರುಕ್ಮಿಣೀ ದೇವಿಯವರು ಹೇಳಿದ್ದು (ದೇಶದ ಅಧ್ಯಕ್ಷ ಸ್ಥಾನಕ್ಕೆ ಮುಖ್ಯಮಂತ್ರಿ ಶ್ರೀ ದೇಸಾಯಿಯವರು ಅವರ ಹೆಸರನ್ನೂ ಸೂಚಿಸಿದ್ದರು) ಮುಂಚಿನ ಕಾಲದ ಮಗಳಂದಿರು ತಾಯಂದಿರಲ್ಲಿ ಬಹಳ ಉತ್ತಮ ಗುಣಗಳನ್ನು ಕಾಣುತ್ತಿದ್ದರು, ಬಾಯ್ತುಂಬ ಹೊಗಳುತ್ತಿದ್ದರು, ಈ ಕಾಲದವರು ಹಾಗೆ ಮಾಡುವುದು ಕಾಣದಿರುವುದು, ಸ್ತ್ರೀಯರ ಅವನತಿಯ ಸ್ಪಷ್ಟ ಚಿಹ್ನೆಯಾಗಿದೆ ಎಂದಿರುವರು.

ಕೃತಕತೆಯ ಅಸ್ವಾಭಾವಿಕತೆಯ ಹಾನಿಯ ಒಂದು ದೃಷ್ಟಾಂತ ನೋಡಿರಿ. ಈ ಕಾಲದ ಹೆಚ್ಚು ಹಾಲು ಕೊಡುವ ದನಗಳಿಗೆ ಸ್ವಾಭಾವಿಕ ರೀತಿಯ ಗರ್ಭಧಾರಣ ಸುಖ ಸಂಪೂರ್ಣ ತಪ್ಪಿಸಿ, ಕೃತಕ ರೀತಿಯ ರತಿಯ ಸುಖ ಸ್ವಲ್ಪವೂ ದನಕ್ಕೆ ಬಾರದಂತೆ ಮಾಡಿ ಗರ್ಭಧಾರಣೆ ನಡೆಸುತ್ತಾರೆ. ಈಗ ಹಾಗೆ ಉಂಟಾದ ಅನೇಕ ದನಗಳು ತಮ್ಮ ಕರು ಜನಿಸಿದಾಗ ಪ್ರೀತಿ

ಯಿಂದ ಅದನ್ನು ನೆಕ್ಕುವುದು, ಮೊಲೆ ಕೊಡುವುದು, ಮಾಡದೆ ಭಯಂಕರ ಅಸಡ್ಡೆ, ಕೋಪಗಳ ಅಸ್ವಾಭಾವಿಕತೆ, ತೋರಿಸುತ್ತವೆ ! ಕಡೆಯವರೆಗೂ ಅವಕ್ಕೆ ಕರುವಿನ ಮೇಲೆ ಸ್ವಲ್ಪವೂ ಪ್ರೀತಿಯಿರುವುದಿಲ್ಲ. ಆದ್ದರಿಂದ ಅವು ಗಳು ನಮ್ಮ ಶಾಸ್ತ್ರ ಹೇಳುವ ಸಾತ್ವಿಕ ತರದ ಹಾಲು ಕೊಡುವುದೂ ತೀರಾ ಸಂಶಯ ! ಅವು "ಗೋಮಾತೆ"ಯಾಗಿರುವುದೂ ಸಂಶಯ ! ಪಾಶ್ಚಾತ್ಯರ ಕ್ರಮಗಳೆಲ್ಲ ಈ ತರದ ಪಾಪದ ಭೀತಿಯಿರದ, ಪಾಪ ಹೆಚ್ಚಿಸುವ ತರದವೇ. ಎಲ್ಲವೂ ಅಪಾಯಕರದವೇ. ಸ್ತ್ರೀಯರು ಮಕ್ಕಳಿಗೆ ಮೊಲೆ ಹಾಲು ಕೊಡು ವುದು ಅನಗತ್ಯ, ಕೃತಕ ಹಾಲು ಕೊಡಲಿ ಎಂದು ಬಹಳ ಕಾಲ ಪ್ರೇರಿಸಿದ ಪಾಶ್ಚಾತ್ಯರು, ಹಾಗೆ ಈಗ ಹೆಂಗಸರು ಹಾಲು ಕೊಡುವುದು ಬಿಟ್ಟಮೇಲೆ, ಮಗುವಿಗೆ ಮೊಲೆಹಾಲೇ ಅತ್ಯುತ್ತಮ, ಕೃತಕ ಹಾಲಲ್ಲ ಎಂದು ಕಂಡು ಕೊಂಡಿದ್ದಾರೆ. ಸರಿಸಮಾನತೆಯ ಸುಖಕ್ಕಾಗಿ ಗರ್ಭನಿರೋಧಕತೆ ವಿಪರೀತ ಬೆಳೆಸಿದ ಕೆಲವು ಪಾಶ್ಚಾತ್ಯ ದೇಶಗಳು ಈಗ ಜನಸಂಖ್ಯೆ ಕಡಿಮೆಯಾಗುವ ಭಯದಲ್ಲಿವೆ ! ರಷ್ಯಾವು ಸ್ತ್ರೀಯು ಹೇಗಾದರೂ ಮಕ್ಕಳನ್ನು ಪಡೆಯಬೇಕು. ಮಕ್ಕಳಿಂದ ಸುಖವಿದೆ ಎಂದು ಈಗ ಸಾರುತ್ತಿದೆ ! ಇವೆಲ್ಲ ಆಳವಾದ ವಿಚಾರ ಗಳಲ್ಲಿ ವಿಜ್ಞಾನದ ಅಲ್ಪ ಜ್ಞಾನದ ಹಾನಿಯ ದೃಷ್ಟಾಂತಗಳು.

ಕಬ್ಬಿಣ, ಅಲ್ಯುಮಿನಿಯಂ ಪ್ರತ್ಯೇಕ ಸ್ವಭಾವದವು. ಒಂದಕ್ಕೆ ಶಕ್ತಿ ಬಹಳ, ಮತ್ತೊಂದು ಮೃದು, ಚೇದ. ಸಿಮೆಂಟಿಗೆ ಉಕ್ಕಿನ ವಿಶೇಷ ಶಕ್ತಿ ಸೇರಿಸಿ ೨೦೦, ೩೦೦ ಅಡಿ ಎತ್ತರದ ಕಟ್ಟಡ ನಿರ್ಮಿಸುತ್ತಿದ್ದಾರೆ. ಆದರೆ ಈ ಕೆಲಸಕ್ಕೆ ಅಲ್ಯುಮಿನಿಯಂ ಸರಳುಗಳಿಗೆ ಕಬ್ಬಿಣದ ಬಣ್ಣ ಹಚ್ಚಿ ಕಬ್ಬಿಣದ ಸರಿಸಮಾನತೆ ಕೊಟ್ಟು ಉಪಯೋಗಿಸಿದರೆ ಕಟ್ಟಡ ಕಟ್ಟುತ್ತ ಹೋದಂತೆ ಕುಸಿದು ಬಿದ್ದು ಸರ್ವನಾಶ ಉಂಟಾಗದಿರದು.

ನಮ್ಮ ಶಾಸ್ತ್ರವು ಸ್ತ್ರೀಗೆ ಸ್ವತಂತ್ರ, ಬಹಳ ಹಾನಿಕರ, ಆದ್ದರಿಂದ ಅವಳು ತಂದೆಯ ಅಥವಾ ಪತಿಯ ಅಥವಾ ಮಕ್ಕಳ ಅಧೀನದಲ್ಲಿ ಬಾಳ ಬೇಕು, ಸ್ವತಂತ್ರಳಾಗಿ ಅಲ್ಲ ಎಂದಿದೆ (ಮನು ೫,೧೪೮). ಪರಕೀಯರ ನಡುವೆ ಸ್ತ್ರೀಯು ಕೆಲಸ ಮಾಡುವುದು ಅಪಾಯಕರ ; ಸ್ತ್ರೀಯು ತುಪ್ಪ ದಂತೆ, ಗಂಡಸು ಅಗ್ನಿಯಂತೆ, ಅವರ ಸಾಮೀಪ್ಯಕ್ಕೆ ಎಡೆ ಕೊಡಕೂಡದು ಎಂದು ಮನು ಎಚ್ಚರಿಸಿದ್ದಾನೆ. ಇನ್ನು ಸ್ವಂತ ಸಂಪಾದನೆ ಮಾಡುವವಳು ತನಗೆ ಬೇಕಾದಂತೆ ಖರ್ಚು ಮಾಡಲಿಕ್ಕೆ, ಬೇಕಾದಲ್ಲಿ ಹೋಗಲಿಕ್ಕೆ ಶಕ್ತಳಾಗು ತ್ತಾಳೆ, ತಾನು ಗಂಡನಿಗಿಂತ ಏನೂ ಕಡಿಮೆಯಲ್ಲ ಎಂಬ ಭಾವನೆಯು ಗಂಡ

ನಲ್ಲಿ ವಿಧೇಯಂತೆ ಕ್ರಮೇಣವಾಗಿ ಅಸಾಧ್ಯ ಮಾಡುತ್ತದೆ. ಘರ್ಷಣೆ, ಭಿನ್ನಾಭಿಪ್ರಾಯಗಳು, ಬೆಳೆಯುತ್ತವೆ. ಅಮೇರಿಕದಲ್ಲಿ ನಡೆಯುವ ಕೊಲೆಗಳಲ್ಲಿ ಮನೆಯೊಳಗೆ ಹೀಗೆ ಉಂಟಾಗುವ ಘರ್ಷಣೆಯಿಂದಾಗಿ ಪತಿ ಪತ್ನಿಯನ್ನು ಅಥವಾ ಪತ್ನಿ ಪತಿಯನ್ನು ಕೊಲ್ಲುವುದು ಸರಾಸರಿ ೧೦೦ರಲ್ಲಿ ೨೭ಕ್ಕೆ ಏರಿಕೆಯಾಗಿದೆ!

ಎಲೆಕ್ಸಿಸ್ ಕೆರೆಲ್ಲರು ಹೇಳಿದ್ದುಂಟು, ಶ್ರೇಷ್ಠರು ಉತ್ತಮ ಮಕ್ಕಳನ್ನು ಮನೆಯಲ್ಲಿ ಎಷ್ಟು ಜಾಗ್ರತೆಯಲ್ಲಿ ತಮ್ಮ ಮಟ್ಟದವರಾಗಲಿಕ್ಕೆಂದು ತರಬೇತು ಮಾಡಿದರೂ ಶಾಲೆಯ ಅತ್ಯಧಿಕ ಸಂಖ್ಯೆಯ "ಕುರಿಹಿಂಡಿ"ನೊಡನೆ ಅವು ಬೆರೆತಂತೆ ಅವರು ಹಾಳಾಗುತ್ತಾರೆ ಎಂದು. ಆದ್ದರಿಂದ ಮಕ್ಕಳನ್ನು ಅತಿ ಬೇಗ ಶಾಲೆಗೆ ಹಾಕಕೂಡದು ಎಂದು ಅವರು ಎಚ್ಚರಕೊಟ್ಟಿದ್ದಾರೆ. ಬ್ರಾಹ್ಮಣರಿಗಂತೂ ಅವರದ್ದೇ ಆದ ಮೇಲ್ಮಟ್ಟದ ಧರ್ಮದ ಧ್ಯೇಯಗಳು, ಸದಾಚಾರಗಳ ಪಾಲನೆ, ಧರ್ಮವಾಗಿರುವಾಗ ಅತಿ ಬೇಗ ಶಾಲೆಗೆ ಹಾಕುವುದು (ಬಾಲಾಡಿಗೆ) ತೀರಾ ಹಾನಿಕರವಾಗದಿರದು. ಆರನೇ ವರ್ಷದಲ್ಲಿ ಶಾಲೆಗೆ ಹಾಕಿದರೆ ತಾಯಿ ಅಪ್ಪರವರೆಗೆ ಕೆಲವುವುಂಟ್ಟಿಗಾದರೂ ಮಕ್ಕಳಲ್ಲಿ ಬ್ರಾಹ್ಮಣ್ಯದ ವಿಶೇಷತೆ, ಪ್ರತ್ಯೇಕತೆಯ ಭಾವನೆಗೆ ತಲಗಟ್ಟುಹಾಕಲು ಸಾಧ್ಯವಾಗಬಹುದು. ಆಮೇಲೂ ತಾಯಿ ಮನೆಯಲ್ಲಿ ಮಕ್ಕಳ ಹೊರ ವಾತಾವರಣದ ದೋಷಗಳನ್ನು ತಿದ್ದುತ್ತಿರಲು ಯತ್ನಿಸುತ್ತಲೇ ಇರಬೇಕು. ಪೂಜೆಯಿಂದ, ಧಾರ್ಮಿಕ ಕತೆ ಹೇಳುವುದರಿಂದ, ಮುಂತಾಗಿ ಶುದ್ಧಾಚಾರದ ಭಾವನೆ ಬೆಳೆಸುತ್ತಲೇ ಇರಬೇಕು. ಮಕ್ಕಳಿಗಾಗಿ ವಿಪರೀತ ಶ್ರಮವಹಿಸುವ ತಂದೆತಾಯಿ ಮಕ್ಕಳ ಹಿತ ಸಾಧಿಸಲಿಕ್ಕೆ ಹೆಚ್ಚಿನ ಸಂಪಾದನೆಯಿಂದ ಮಾತ್ರ ಸಾಧ್ಯ ಎಂದು ಇಬ್ಬರೂ ಸಂಪಾದನೆಗೆ ಕೆಲಸಕ್ಕೆ ಹೋಗಿ, ಮಕ್ಕಳ ಮೇಲೆ ಹೊರಗಿನ ಅಪಾರ ಅಲ್ಪ ಮಟ್ಟದವರ ಪ್ರಭಾವ ಬೀಳಲು ಪೂರ್ಣ ಆಸ್ಪದ ಕೊಡುವುದು, ಹೆಚ್ಚಿನ ಕಾಲದ ತಮ್ಮ ಪ್ರೀತಿಯ ಅಭಾವದಿಂದ ಆದರೆ ಸ್ವಲ್ಪಕಾಲದ ವಿಪರೀತ ಕೊಂಡಾಟದಿಂದ ಹದವಾದ ಸಶಕ್ತ ವರ್ಚಸ್ಸು ಬೀರಲಾರದಿರುವುದು, ಕೆಡುಕುಮಾಡದಿರದು. ಇಬ್ಬರೂ ಸಂಪಾದಿಸಿ ಬಹಳ ಐಶ್ವರ್ಯ ಮಕ್ಕಳಿಗೆ ಕೂಡಿಹಾಕುವುದಕ್ಕಿಂತ ಅವರಲ್ಲಿ ದೈವ ಭಕ್ತಿ, ಬ್ರಾಹ್ಮಣ್ಯದ ಹಿರಿಮೆಯ ಜ್ಞಾನ, ಧಾರ್ಮಿಕಶಿಸ್ತು, ಪಾಪದ ಭೀತಿ, ಬೆಳೆಸುವುದು ಸಾವಿರಪಾಲು ಹೆಚ್ಚು ಪ್ರಯೋಜನದ ಪಿತ್ರಾರ್ಜಿತವಾದೀತು. ಮತ್ತು ಹಾಗೆ ಬೆಳೆಸಿದ ಮಕ್ಕಳು ದೊಡ್ಡವರಾದ ಮೇಲೆ ಕೇವಲ ತಮ್ಮ ಪತ್ನಿಯರ ದಾಸರಾಗದೆ ತಂದೆ ತಾಯಿ ಬೇಕಾದವರೂ ಆಗಿ ಉಳಿದಾರು. ಹಾಳು ಮಕ್ಕಳನ್ನು ಬೆಳೆಸಿ ತಮಗೂ, ಆ ಮಕ್ಕಳಿಗೂ, ದೇಶಕ್ಕೂ ಹಾನಿ ಮಾತ್ರ.

ಇಬ್ಬರ ಸಂಪಾದನೆ ಬೇಡ. ಹೆಂಗಸರು ಹುದ್ದೆಗೆ ಹೋಗದೆ ಲೋಕ ಎಷ್ಟೆಲ್ಲ ಕಾಲ ನಡೆದು ಬಂತು. ಬಹಳವೇನೂ ಕೆಡುಕಾಗಲಿಲ್ಲ, ಆದರೆ ಅವರು ಮಕ್ಕಳ ಆರೈಕೆ ತ್ಯಜಿಸಿದರೆ ವಿಪರೀತ ಕೇಡು ಖಂಡಿತ.

ನಮ್ಮಲ್ಲಿ ಪತ್ನಿಯು ಪಾಶ್ಚಾತ್ಯರಂತೆ ಕಾಮದ ದೃಷ್ಟಿಯಿಂದ ಪತಿಯಲ್ಲಿ ಪ್ರೀತಿಬಿದ್ದು ವಿವಾಹವಾಗಿ ಬಂದವಳಲ್ಲ ; ಕುಲಗೋತ್ರಕ್ಕೆ ಹೊಂದಿಕೆಯಾಗಿ ಪತಿಯ ಸೇವೆಯೇ ತನ್ನ ಧರ್ಮವೆಂದು ಗೃಹಿಣಿಯಾಗಿ ಬಂದವಳು. ಬಂದ ಪತ್ನಿಗೆ ಮುಖ್ಯವಾಗಿ ತನ್ನ ಜೀವನವು ಧರ್ಮ ವಿಧಿಸುವ ಪತಿಸೇವೆಯ ದಾರಿ ಹಿಡಿಯಬೇಕೆಂಬುದೇ ಪ್ರಬಲ ಧ್ಯೇಯವಾಗಿದ್ದು, ಸ್ವಂತ ಕಾಮದ ತೃಪ್ತಿಯು ಜೀವನದ ಅತಿ ಮುಖ್ಯ ಗುರಿ ಆಗಿರಲಿಲ್ಲ. ಪತಿಯಸೇವೆ, ಮಕ್ಕಳಸೇವೆ, ಅತ್ತೆ ಮಾವನ ಸೇವೆ ಆಗಾಗ ಅತಿಥಿಗಳಿಂದಾಗಿ ಹೆಚ್ಚುವ ಕೆಲಸ, ಇವೆಲ್ಲ ಸೇರಿ ಅವಳ ಸ್ವಂತ ಕಾಮದ ವಿಪರೀತ ಚಿಂತನೆಗೆ ಬಹಳ ಎಡೆಕೊಡುತ್ತಿರಲಿಲ್ಲ. ನಮ್ಮ ಸ್ತ್ರೀವರ್ಗದವರು ವಿಧವೆಯಾದರೆ ಒಡನೆ ದೇಹದ ಶೃಂಗಾರ, ಕಾಮದ ಭೋಗದ ಸಂಪೂರ್ಣ ಭಾವನೆ. ತ್ಯಜಿಸಿ "ವಿಧವಾ ಯತಿ ರೂಪೇಣ" ಎಂಬಂತೆ ಪರಪುರುಷರ ಚಿಂತನೆಯೇ ಮಾಡದೆ ದೇಹ ಗೆಲ್ಲುವ ಸಾಧನೆ ನಡೆಸುವುದು ಸರ್ವತ್ರ ಸಾಮಾನ್ಯ ಕ್ರಮವಾಗಿತ್ತು; ಎಂದರೆ ಅದು ಅವರಿಗೆ ಸುಲಭವಾಗಿತ್ತು. ಹೀಗೆಲ್ಲ ನಮ್ಮ ಸ್ತ್ರೀಯರಲ್ಲಿ ಕಾಮದ ಪೂರ್ಣ ತೃಪ್ತಿಯೆಂಬ ಸಮಸ್ಯೆ ಇರಲಿಲ್ಲ.

ಆದರೆ ಪಾಶ್ಚಾತ್ಯರಲ್ಲಿ ವಿಜ್ಞಾನವು ಸ್ತ್ರೀಗೆ ಕೃತಕ ಸಹಾಯಗಳನ್ನು ಕೊಟ್ಟು ಸ್ವಂತ ಸಂಪಾದನೆ, ಆದ್ದರಿಂದ ಸ್ವಇಚ್ಛೆಯಂತೆ ಜೀವನ ಸಾಧ್ಯ ಮಾಡಿತು. ಆ ಕಾಲದಲ್ಲಿಯೇ ಡಾ|| ಕ್ವಿನ್ಸ್ಲೀ ಎಂಬವರು ಶೋಧನೆ ನಡೆಸಿ, ಅಲ್ಲಿ ಸ್ತ್ರೀಯರಲ್ಲಿ ಕೆಲವರಿಗೆ ದಾಂಪತ್ಯದಲ್ಲಿ ಪೂರ್ಣ ತೃಪ್ತಿ ದೊರೆಯುತ್ತಿಲ್ಲ ಎಂಬುದಕ್ಕೆ ಅತ್ಯಂತ ಮಹತ್ವದ ಪ್ರಚಾರ ಕೊಟ್ಟರು. ಎಂಥ ಅನ್ಯಾಯ! ಪುರುಷನ ಸರಿಸಮಾನಳಾದ ಅವಳಿಗೆ ಪೂರ್ಣ ಕಾಮಕ್ಕೆ ಹಕ್ಕು ಬೇಕೇಬೇಕು ; ಈ ಪತಿ ಅದನ್ನು ಕೊಡಲಾರನಾದರೆ ವಿವಾಹ ವಿಚ್ಛೇದ ಮಾಡಿ ಮತ್ತೊಬ್ಬ ನನ್ನು ಆರಿಸಲಿ, ಎಂಬ ಕ್ರಮ ಬೇಗ ಬೆಳೆಯಿತು. ಅದು ಆ ಮತ್ತೊಬ್ಬ ನಿಗೂ ಕ್ರಮೇಣ ಆಗದಿದ್ದರೆ ಮೂರನೆಯವ, ನಾಲ್ಕನೆಯವ ಎಂದು ಅಮೇರಿಕದಲ್ಲೀಗ ಸರಾಸರಿ ನಾಲ್ಕು ಸಾರಿ ಪತಿಯನ್ನು ಬದಲಾಯಿಸುವ ಕ್ರಮ ಬಂದಾಗಿದೆ! ತನ್ಮೂಲಕ ಅತ್ತೆಮಾವಂದಿರ ಸೇವೆಯೆಂಬ ಪ್ರಶ್ನೆಯೇ ನಾಶ ವಾಗಿದೆ.

ಮಾತ್ರವಲ್ಲ ಈ ತರದ ಜೀವನಕ್ಕೆ ಮಕ್ಕಳೂ ಬಹಳ ತೊಡಕು. ತಾನೂ ಸ್ವಂತ ಉದ್ಯೋಗದಲ್ಲಿರುವ ತಾಯಿ ಅವನ್ನು ಧಾರ್ಮಿಕ ರೀತಿಯಲ್ಲಿ ಬೆಳೆಸಲಾಗದೆ ಬೀದಿಯ ಪೋಲಿಗಳ ಸಂಗದಿಂದ ಅವು ಬಹಳ ಕೆಟ್ಟು ಹೋಗುವುದುಂಟು. ಮನೆಯಲ್ಲಿ ನಾಲ್ಕನೇ ಮಲತಂದೆಗೆ ಬೇಡವಾದ ಅವು ತಪ್ಪು ಮಾಡಿದಾಗ, ಅವ ಉದ್ರೇಕಗೊಂಡು ಅವುಗಳ ಕೈ ತಪ್ಪಿ ಮುರಿಯುವುದು, ಉಪ್ಪರಿಗೆಯಿಂದ ಮೆಟ್ಟಲುಗಳಲ್ಲಿ ಕೆಳಕ್ಕೆ ತುಳಿಯುವುದು, ತಲೆ ಗೋಡೆಗೆ ಜಜ್ಜಿ ಮೆದುಳು ಹಾಳುಮಾಡುವುದು, ವರ್ಷಕ್ಕೆ ಹಲವು ಸಾವಿರಕ್ಕೆ ಏರಿವೆ (Baby battering), ಅಥವಾ ಮಗನನ್ನು ಅತಿದೂರದ ಅನಾಥಾಲಯಕ್ಕೆ ಹಾಕುವುದು ಕ್ರಮ. ಅವ ಅಲ್ಲಿ ತಾಯಂದಿರು ಕೆಲವರು ಮಕ್ಕಳನ್ನು ಚೆನ್ನಾಗಿ ಪ್ರೀತಿಸುವುದು ಕಂಡು, ತನಗೆ ತಾಯಿ ಇದ್ದರೂ ದೂರ ಹಾಕಿದಳಲ್ಲ ಎಂಬ ದ್ವೇಷ ಬೆಳೆಸುತ್ತ, ತಾನು ಹಾತೊರೆಯುವ ಪ್ರೀತಿ ಪಡೆಯದೆ, ಸಮಾಜದ ಮೇಲೆ ದ್ವೇಷಬೆಳೆಸಿ ಭಯಂಕರ ಕ್ರೂರಿ, ಕೊಲೆಗಾರ ಆಗುವುದು ಹೆಚ್ಚುತ್ತಿದೆ.

ಇನ್ನೂ ಕೆಲವರು ಸ್ತ್ರೀಯರು ಅನೇಕ ಕಡೆಗಳಲ್ಲಿ, ಅತಿ ಐಶ್ವರ್ಯವಂತ ಸ್ವೀಡನ್ ಮುಂತಾದವಲ್ಲಿ ವಿವಾಹದ ಗೊಂದಲವೇ ಬೇಡವೆಂದು ಬೇಕಾದವರ ಜೊತೆಯಲ್ಲಿ ಹಾಗೆಯೇ ಬಾಳುತ್ತಾರೆ. ಆ ಜೀವನಕ್ಕೆ, ತನ್ಮೂಲಕ ಉಂಟಾದ ಸಂತಾನಕ್ಕೆ, ಅಧರ್ಮದ್ದೆಂಬ ಕುಂದು ಈಗ ಇಲ್ಲವಾಗಿದೆ ಮತ್ತು ಇನ್ನೊಂದು ವರ್ಗವಾಗಿ ಅರೆಸೂಳೆಯರ (Call girls) ವರ್ಗ ಬಹಳ ಬೆಳೆದಿದೆ. ಇವರು ಸ್ವಲ್ಪ ಹೆಚ್ಚು ಚಂದವಿದ್ದು ಉಪಾಧ್ಯಾಯಿನಿ, ನರ್ಸ್, ಅಂಗಡಿ ಕೆಲಸದವಳು, ಮದ್ಯದಂಗಡಿ ಚಾಕರಿಯವಳು, ಹೋಟೆಲ್ ಕೆಲಸದವಳು ಮುಂತಾದ ವೃತ್ತಿಯಲ್ಲಿ ಸಂಪಾದನೆ ಮಾಡುತ್ತ ಅದು ಸಾಲದೆ ಬಿಡುಕಾಲದಲ್ಲಿ ಸೂಳೆಯರಾಗಿ ಇಮ್ಮಡಿ ಸಂಪಾದನೆ ಮಾಡುತ್ತಾರೆ. ಅವರ ರೂಪದ ವಿವರಣೆಗಳು, ದರ, ಲಭಿಸುವ ಸಮಯ, ಟೆಲಿಫೋನು ಸಂಖ್ಯೆ ಮುಂತಾದವುಗಳಿರುವ ಭಾರೀ ದಪ್ಪದ ಡೈರೆಕ್ಟರಿಗಳಿವೆ. ನಮ್ಮಲ್ಲಿ ಉದ್ಯೋಗಿ ಸ್ತ್ರೀಯರು ಇದ್ದರೂ ಹೆಚ್ಚಿನವರು ರಕ್ತಗತವಾಗಿ ಬಂದ ಶಕ್ತಿಯಿಂದಾಗಿ ಇನ್ನೂ ಈ ವಿಪರೀತಕ್ಕೆ ಹೋಗಲಿಲ್ಲ. ಕೆಲವರು ಅಲ್ಲಲ್ಲಿ ಸ್ವಲ್ಪ ಇದ್ದಾರೆ. ನಾಸ್ತಿಕ ಸ್ತ್ರೀಸ್ವಾತಂತ್ರ್ಯದ ಎಲ್ಲಾ ಹಾನಿಗಳ ಮಟ್ಟಕ್ಕೂ ಸಮಾಜವು ನಿಧಾನವಾಗಿ ಖಚಿತವಾಗಿ ಮುಂದರಿಯುತ್ತಿರುವುದನ್ನು ಕಾಣಬಹುದು.

ಆದ್ದರಿಂದ ಬ್ರಾಹ್ಮಣರಿಗೆ ಈ ದಾರಿ ಎಷ್ಟಕ್ಕೂ ಬೇಡ. ಗಂಡಸರಿಗೂ ಹೆಂಗಸರಿಗೂ ಬೇಧಮಾಡದ ಲೌಕಿಕ ವಿದ್ಯೆಯನ್ನು ಹುಡುಗಿಯರಿಗೆ ಹೆಚ್ಚು

ಕೊಡುವುದೇ ಅಪಾಯಕರ. ಅವರಿಗೆ ಹಿಂದ್ದೆಯ ದೃಷ್ಟಿ–ತತ್ಕಾಲಕ್ಕಾದರೂ–ಅಪಾಯಂಕರ. ಧರ್ಮ ಬೇಡವಾದ ಈ ಕಾಲದ ಯುವಕರ ನಡುವೆ ಹುದ್ದೆ ಅಪಾಯಂಕರ. ಅವರ ದಿನಕ್ಕೊಂದು ತರದ ಸೀರೆ ಶೃಂಗಾರದಿಂದ ಇತರರ ಕಣ್ಣು ಸೆಳೆಯುವ ಬಯಕೆ ಅಪಾಯಕರ. ವ್ಯಭಿಚಾರದಿಂದ ಕೇವಲ ಪಾಪೀ ಜೀವಾತ್ಮರು ಮಾತ್ರ ಮಕ್ಕಳಾಗಿ ಆಕರ್ಷಿಸಲ್ಪಟ್ಟು, ದೇಶದ ಅವನತಿ ವಿಪರೀತ ಕೆಡುತ್ತ ಹೋಗದಿರದು.

ಸುಂದರಸ್ತ್ರೀಯರು ಹೆಚ್ಚು ಹೆಚ್ಚು ಕಾಮುಕ ಜೀವನದ ಮನೋಭಾವನೆಯಿಂದ ಅಂಗ ಚಂದದ ವಿಶೇಷ ಪ್ರದರ್ಶನ, ಅರೆಬತ್ತಲೆಯಾಗಿ ಸ್ನಾನ ಕುಣಿತಗಳಿಂದ ಗಂಡಸರಲ್ಲಿ ಕಾಮುಕ ಭಾವನೆ ತುಂಬುತ್ತಿದ್ದು, ಕುಟುಂಬ ನಾಶ ಹೆಚ್ಚುತ್ತ ಬಂದಿದೆ. ಅಮೇರಿಕದಲ್ಲಿ ೧೮ ವರ್ಷ ಪ್ರಾಯಕ್ಕೆ ಬರುವುದರೊಳಗೆ ಹುಡುಗಿಯರಲ್ಲಿ ನಾಲ್ಕರಲ್ಲೊಬ್ಬಳ ಮೇಲೆ ಒಮ್ಮೆಯಾದರೂ ಬಲಾತ್ಕಾರದ ಅತ್ಯಾಚಾರ ನಡೆದಿರುತ್ತದೆ! ಅಮೇರಿಕದಲ್ಲಿದ್ದ ನಮ್ಮ ಸ್ವಾಮೀಜಿಯವರು ಬರೆದ ಒಂದು ಲೇಖನದಂತೆ ಹುಡುಗಿಯಾಗಲಿ, ವಿವಾಹಿತೆಯಾಗಲಿ ಯಾರಾದರೂ ಪರಕೀಯನಲ್ಲಿ ಸ್ವಲ್ಪ ಕಾಮದ ಭಾವನೆ ಮೂಡಿದಾಗ ಅವನ ಸಂಗಕ್ಕೆ ನಿರ್ದಾಕ್ಷಿಣ್ಯವಾಗಿ ತಯಾರಿರುವಳು ಎಂದಿದ್ದಾರೆ!

ಹೀಗೆಲ್ಲ ವಿಜ್ಞಾನವು "ಸರಿಸಮಾನತೆ" ಬೆಳೆಸಿ ಲೋಕವನ್ನು ಕೇವಲ ಕಾಮುಕತೆಯ ನರಕದಕೂಪಕ್ಕೆ ನೂಕುತ್ತಿದೆ. ಇದು ಲೋಕದ ನಾಶಕ್ಕೆ ಕಾರಣವಾಗುತ್ತದೆ ಎಂದು ಶಾಸ್ತ್ರ ಹೇಳಿದೆ (ಮನು ೯, ೩೫೩). ಈ ಹಿಂದೆ ಲೋಕದಲ್ಲಿ ಅನೇಕ ನಾಗರಿಕತೆಗಳು ಜನಿಸಿದವು, ಬೆಳೆದವು, ನಾಶವಾದವು. ಹಾಗೆ ಅವನತಿಯದಾರಿ ಹಿಡಿದುದರ ಸ್ಪಷ್ಟ ಒಂದು ಚಿಹ್ನೆ, ಕೇವಲ ಪಶುಮಟ್ಟದ್ದಾದ ಕೇವಲ ದೇಹಸುಖದ ಹದವಿಲ್ಲದ ಕಾಮುಕತೆ. ನಮ್ಮ ನಾಗರಿಕತೆಯಾದರೂ ಆ ದಾರಿ ಹಿಡಿಯದೆ ಬಾಳಲಿ.

ಜನಸಂಖ್ಯೆ ಹೆಚ್ಚಾಗುತ್ತಬಂದು ಜೀವನ ಕಷ್ಟವಾಗುತ್ತ ಬರುತ್ತಿದೆ ನಿಜ. ಬ್ರಾಹ್ಮಣಿಗೆ ಮಿತ ಸಂತತಿಯಿಂದ ಮಕ್ಕಳು ಸ್ವಲ್ಪಬೆಳೆದ ಮೇಲೆ ಮತ್ತು ಪೇಟೆಗಳ ಅನುಕೂಲತೆಗಳಿಂದ ೨–೩ ಗಂಟೆ ಮನೆಯಲ್ಲಿ ಕೆಲವು ಕೈಗಾರಿಕೆ ಕೆಲಸಗಳೂ ಸಾಧ್ಯ ಇವೆ. ಅಖಿಲ ಕರ್ಣಾಟಕ ಮಹಾ ಬ್ರಾಹ್ಮಣರ ಸಮಾಜದ ಮೂರನೆ ಸಮ್ಮೇಳನದಲ್ಲಿ ಹೀಗೆ ಉಪಕೈಗಾರಿಕೆಗಳ ವಿಚಾರ ಚೆನ್ನಾಗಿ ಚರ್ಚೆ ನಡೆದಿತ್ತು. ಹಲವು ಸೂಚನೆಗಳು (ಮಾಹಿತ್ಯ ಪಡೆದವರಿಂದ) ಬಂದಿದ್ದವು. ಆ ಸಂಘವು ಇಂಥ ಕೈಗಾರಿಕೆಗಳ ಆದಷ್ಟು ಪೂರ್ಣಜ್ಞಾನ

ಕೊಡುವ ಪುಸ್ತಕ ಸಂಗ್ರಹಿಸಿ ಪ್ರಕಟಿಸಿ ಬ್ರಾಹ್ಮಣ್ಯ ಬಾಳಲಿಕ್ಕೆ ಸಹಾಯ ಮಾಡಿದರಾದೀತು.

ಸ್ತ್ರೀಯರ ಬುದ್ಧಿಶಕ್ತಿಯು ದೇಶದ ಏಳಿಗೆಗೆ ಪ್ರಯೋಜನವಾಗಬೇಡವೇ ಎಂಬ ಪ್ರಶ್ನೆ ಬರುತ್ತದೆ. ಸ್ತ್ರೀಯರು ನೇರವಾಗಿ ತಮ್ಮ ವಿದ್ಯೆ ಬುದ್ಧಿಗಳನ್ನು "ದೇಶದ ಸೇವೆ"ಗೆಂದು ವಿನಿಯೋಗಿಸುವ ಬದಲಿಗೆ ದೇವರೇ ತಮಗೆ ಕೊಟ್ಟ ಹೊಣೆಯಾದ ಮಕ್ಕಳ ಅತ್ಯುತ್ತಮ ತರಬೇತಿಗೆ (ಇದಕ್ಕೆ ಇನ್ನು ಶಾಲೆ ನಂಬಿ ಪ್ರಯೋಜನ ಇಲ್ಲ) ಹಾಕುವುದು ಮಾತ್ರ ದೇವರು ಮೆಚ್ಚುವ ದಾರಿ. ದೇಶದಲ್ಲಿ ಅರ್ಧ ಪಾಲು ಜನರಿಗೆ ಇನ್ನೂ ಎರಡು ಊಟ ತರುವ ಉದ್ದಿಮೆ ಇಲ್ಲದಾಗ ಸರ್ಕಾರದ ಯಾವುದೇ ಸಂಸ್ಥೆಯಲ್ಲಿಯೂ ಗಂಡಹೆಂಡಿರಲ್ಲಿ ಕೇವಲ ಒಬ್ಬರಿಗೆ ಮಾತ್ರ ಹುದ್ದೆ ಎಂಬ ಕ್ರಮ ತಂದರೆ ಅಲ್ಲಿ ಕುಟುಂಬಕ್ಕೆ ಜೀವನದ ದಾರಿ ಹೆಚ್ಚದೆ? ಹೆಂಗಸಿಗಲ್ಲ, ಒಬ್ಬ ಜಾಸ್ತಿ ನಿರುದ್ಯೋಗಿ ಗಂಡಸಿಗೆ ಕೆಲಸವಾದರೆ ಅವ ವಿವಾಹವಾಗಿ ಒಬ್ಬಳು ಸ್ತ್ರೀಗೆ ದಾಂಪತ್ಯಸುಖ ತನ್ನದೇ ಮಕ್ಕಳಿರುವ ಭಾಗ್ಯ ಉಂಟಾಗುತ್ತದೆ. ನಿರುದ್ಯೋಗ ತುಂಬಿರುವ ಬಡದೇಶಕ್ಕೆ ಜೊಳ್ಳು ಸರಿಸಮಾನತೆ ತತ್ವದಿಂದಾಗಿ ಒಂದು ಕುಟುಂಬಕ್ಕೆ ಇಮ್ಮಡಿ ಸಂಪಾದನೆ, ಮತ್ತೊಂದಕ್ಕೆ ಗತಿ ಇಲ್ಲದ ಸ್ಥಿತಿ ಉಂಟಾಗುತ್ತಿದೆ.

ಪಾಶ್ಚಾತ್ಯ ದೇಶಗಳು ಈಗ ಕೇವಲ ಕಾಮುಕತೆಯ ನರಕಗಳಾಗಿವೆ. ವಿಜ್ಞಾನದ ಕಾಲದ ಕೇವಲ ದೇಹದ ಭೋಗವೇ ಜೀವನದ ಗುರಿಯಾಗಿರುವಲ್ಲಿ ಕೇವಲ ಕಾಮುಕ ದೃಷ್ಟಿಯಿಂದ ವಿಶೇಷ ಆಕರ್ಷಿತರಾದವರು ವಿವಾಹವಾಗುತ್ತಾರೆ. ಆ ಆಕರ್ಷಣೆ ಕ್ಷೀಣಿಸುತ್ತ ಬರುವುದರಿಂದ ಮತ್ತೊಬ್ಬನ ಆಕರ್ಷಣೆ, ಮಗುದೊಬ್ಬುದು, ಎಂದು ಕೇವಲ ತಮಗೆ ಪೂರ್ಣಕಾಮದ ತೃಪ್ತಿ ಅರಿಸುವ ಸ್ತ್ರೀಯರು ಸರಾಸರಿ ಏಳು ವರ್ಷಕ್ಕೊಮ್ಮೆ ಈಗ ಗಂಡನನ್ನು ಬದಲಾಯಿಸುತ್ತಿದ್ದಾರೆ. ಮಕ್ಕಳಿಗೆ ಮನೆಯಲ್ಲಿ ಉತ್ತಮತರಬೇತಿಗೆ ಅಲ್ಲಿ ಬಹಳ ಕೆಡುಕುಂಟಾಗಿದೆ, ಮುದುಕರಿಗಂತೂ ಮನೆಯಲ್ಲಿ ಸ್ಥಾನವೇ ಇಲ್ಲವಾಗಿದೆ. ವಿವಾಹವಿಚ್ಛೇದವಾಗುತ್ತಿರುವಲ್ಲಿ ಮನೆಯಲ್ಲಿ ಶಾಂತತೆಗೆ ತೀರಾ ಹಾನಿಯಿದೆ. ಈ ಹೊಸ ರೋಗಕ್ಕೆ ವೈಜ್ಞಾನಿಕ ಶೋಧನೆಯು ತೋರಿಸಿದ ಒಂದು ಉಪಾಯ ಗಂಡಹೆಂಡಿರ ಹಿನ್ನೆಲೆಯು ಒಂದೇ ತರದ್ದಾದಷ್ಟೂ ಉತ್ತಮ ಎಂಬುದು. ನಮ್ಮ ಜಾತಿಯೊಳಗಿನ ವಿವಾಹಗಳು ಆಯುಷ್ಯದ ತುದಿಯವರೆಗೂ ಬಾಳುವುದೇ ಕ್ರಮ. ಗೃಹಸ್ಥ ಜೀವನಕ್ಕೆ ಕಾಮದ ಗುರಿ ಇದ್ದರೂ ಅದು ಆ ಜೀವನದ ಕೇವಲ ಒಂದು ಅಂಶ ಮಾತ್ರ. ಮನೆಯಲ್ಲಿ ಧರ್ಮಾಚರಣೆ ಬೇಕು;

ಅದಕ್ಕೆ ಪತ್ನಿಯ ಸಹಾಯಬೇಕು; ಮಕ್ಕಳನ್ನು ಪಡೆಯುವುದೂ ಅವನ್ನು ಧರ್ಮದಲ್ಲಿ ಬೆಳೆಸುವುದೂ ಅಗತ್ಯ; ಧಾರ್ಮಿಕ ವಿವಾಹವೇ ಆಗಬೇಕು; ಆದ್ದರಿಂದ ವಿವಾಹಕ್ಕೆ ಜಾತಿ, ಕುಲ, ಗೋತ್ರ ಹೊಂದಿಕೆ ಆಗಲೇಬೇಕು. ಮಗನಿಗೋ ಕೇವಲ ಕಾಮದ ಆಕರ್ಷಣೆ ಅಲ್ಲ, ಅದಕ್ಕೆ ತನ್ನ ಆಫೀಸಿನ ಅಥವಾ ನೆರೆಹೊರೆಯ ಬೇರೆ ಹೆಚ್ಚು ಚಂದದ ಹುಡುಗಿ ಸಿಕ್ಕುವುದು ಸಾಧ್ಯವಾದರೂ ಅವ ಅದರ ಯೋಚನೆಯೇ ಮಾಡನು. ಈ ತರದ ವಿವಾಹದಲ್ಲಿ ಒಂದೇ ಧಾರ್ಮಿಕ ಮಟ್ಟ, ಧಾರ್ಮಿಕ ಆಚಾರಗಳು, ಧಾರ್ಮಿಕ ಧ್ಯೇಯಗಳು, ಭಾವನೆಗಳು, ನಂಬಿಕೆಗಳು ಇರುವುದರಿಂದ, ಪತ್ನಿಯು ಪತಿಯ ಧಾರ್ಮಿಕ ವಶವರ್ತಿಯಾಗಿರುವುದರಿಂದ ಅವರು ಸುಲಭವಾಗಿ ಕಡೆಯವರೆಗೂ ಹೊಂದಿಕೊಂಡಿರುತ್ತಾರೆ. ಪತಿ ಪತ್ನಿಯ ಸರಿಸಮಾನತೆ ಹುಟ್ಟಿದ ಚಿಕ್ಕ ಮನೆಗೆ ಇಬ್ಬರು ಯಜಮಾನರಾಗದೆ, ಪತ್ನಿಯು ಪತಿಯ ವಶವರ್ತಿಯಾಗಿರುವುದರಿಂದ, ಪತ್ನಿಗೆ ಪುನರ್ವಿವಾಹ ಸಾಧ್ಯವೇ ಇಲ್ಲವಾಗಿದ್ದು ಅದರ ಯೋಚನೆ ಎಂದೂ ಬಾರದೆ ಹೊಂದಿಕೊಳ್ಳುವ ಪ್ರಯತ್ನ ಮಾತ್ರ ಇರುವುದರಿಂದ, ಇಬ್ಬರಿಗೂಬೇಕಾದ ಮಕ್ಕಳು ಇಬ್ಬರನ್ನು ಮತ್ತಷ್ಟು ಕೂಡಿಸುವುದರಿಂದ, ಅವರು ಕಡೆಯವರೆಗೂ ಹೊಂದಿಕೊಂಡಿರುತ್ತಾರೆ. ಅವರದ್ದು ಕಾಮವು ವಿಪರೀತ ಏರುತರದ ಮಟ್ಟದಿಂದ ಆರಂಭವಾದದ್ದಲ್ಲವಾದ್ದರಿಂದ, ಸೌಮ್ಯಮಟ್ಟದ್ದಾಗಿರುವುದರಿಂದ, ಪತಿ, ಮಕ್ಕಳು, ಹಿರಿಯರ ಆರೈಕೆಯ ಹೊಣೆಯಲ್ಲಿ ಪತ್ನಿಯ ಆ ಕಾಮದ ಬಯಕೆಯೂ ಎಂದೂ ಹದ ಮೀರುವುದಿಲ್ಲ.

ಪಾಶ್ಚಾತ್ಯ ಸ್ತ್ರೀಯು ಈ ಕಾಲದಲ್ಲಿ ಪೂರ್ಣಕಾಮದ ತೃಪ್ತಿಯ ಹಂಬಲ್ಲಿ ಮುಳುಗಿದ್ದು ವಿವಾಹ ವಿಚ್ಛೇದದ ಸುಲಭ ಸಾಧ್ಯತೆ ಅದನ್ನು ಮತ್ತಷ್ಟು ಪ್ರೇರಿಸುತ್ತಿರುತ್ತದೆ. ನಮ್ಮ ಸ್ತ್ರೀಗೆ ಧಾರ್ಮಿಕ ಪುನರ್ವಿವಾಹಕ್ಕೆ ಸ್ಥಾನವಿಲ್ಲದಿದ್ದು ಪರಸ್ಪರಹೊಂದಿಕೆ ಮಾತ್ರ ಪ್ರೇರಿಸುತ್ತದೆ. ಹೊರಗೆ ಕೆಲಸ ಮಾಡಿ ದಣಿದು ಬಂದ ಪತ್ನಿಗೆ ತನ್ನ ಮನೆಯಲ್ಲಿರುವ ಶಾಂತ ವಾತಾವರಣ ಬಹಳ ಪ್ರಿಯವಾಗುತ್ತದೆ.

ಆದರೆ ಜಾತಿಕ್ರಮ ನಾಶವಾದರೆ ದೇಶಪೂರ್ಣ ವಿಸ್ತಾರದ ಸಮಾಜದಲ್ಲಿ, ಧರ್ಮದ ಹಲವು ಮಟ್ಟದವರ ಮಿಶ್ರಣದಲ್ಲಿ, ಸಮಾನ ಹಿನ್ನೆಲೆ ಬಹಳ ಅಲ್ಪವಾದೀತು. ಹಿರಿಯರು ಜಾತಿ ಕುಲ ಗೋತ್ರ ಶೋಧಿಸಿ ವಿವಾಹ ಮಾಡಿಸುವ ಕ್ರಮ ಹೋಗಿ—ಯುವಕ ಕೇವಲ ಮುಖದ ಚಂದಕ್ಕೆ ಪತ್ನಿಯನ್ನು ಆರಿಸಿ, ಸಮಾನ ಹಿನ್ನೆಲೆ ಮನೆಯಲ್ಲಿ ಕಾಣದಾಗಿ, ಪಾಶ್ಚಾತ್ಯರಲ್ಲಾದಂತೆ ಆಚಾರ.

ಅಭಿರುಚಿ, ಅಭಿಪ್ರಾಯ, ಮಟ್ಟಗಳ ಭಿನ್ನತೆಗಳು ಪರಸ್ಪರ ಹೀಯಾಳಿಸುವಿಕೆಗೆ ಕಾರಣವಾಗಿ, ಕ್ರಮೇಣ ಇಲ್ಲೂ ವಿವಾಹವಿಚ್ಛೇದ, ಪುನರ್ವಿವಾಹಗಳ ಹಾವಳಿ ಬಹಳ ಬೆಳೆಯದಿರದು. ವಿಜ್ಞಾನಯುಗದ ಕೇವಲ ದೇಹದ ಭೋಗದ ಪ್ರಭಾವ ಇಲ್ಲೂ ಸುಲಭವಾಗಿ ಸಮಾಜ ಕೆಡಿಸದಿರದು.

ಪಾಶ್ಚಾತ್ಯ ದೇಶಗಳಲ್ಲಿ ಕೇವಲ ಒಂದು ಶತಮಾನದಲ್ಲಿ ಉಂಟಾದ ಹಿಂದಿನ ತರದ ವಿವಾಹ ಜೀವನ ಹೋಗಿ ಕಾಮುಕತೆಯ ಧ್ಯೇಯವಿರುವ ಪುನಃ ಪುನಃ ಗಂಡನನ್ನು ಬದಲಾಯಿಸುವ ಕ್ರಮದಲ್ಲಿ ಅಪಾರ ದೋಷಗಳಿವೆ. ಪತಿ ಮನೆಗೆ ಬಂದಾಗ ಮನಸ್ಸಿಗೆ ಶಾಂತತೆ ಕೊಡುವ ಪರಸ್ಪರ ಆದರ ಮತ್ತು ಪ್ರೀತಿಗಳ ವಾತಾವರಣವಿಲ್ಲದಾಗಿ ಅವನ ಹಗಲ ತೀವ್ರ ಕೆಲಸದ ಶ್ರಮ ಮುಂದರಿದು ಗಂಡಸಿಗೆ ಮನೋರೋಗ ತರುವಂತಾಗುತ್ತದೆ. ಮಕ್ಕಳು ಸ್ವಾಭಾವಿಕವಾಗಿ ತಂದೆ ತಾಯಿಯರಿಬ್ಬರಿಂದಲೂ ಸಿಗಬೇಕಾದ ಮಮತೆ, ಪ್ರೇರಣೆ, ಬೋಧನೆಗಳಿಂದ ವಂಚಿತರಾಗಿ ಅವಲ್ಲಿ ವಕ್ರಗಳು ಬೆಳೆಯುತ್ತವೆ. ಅವೂ ಮುಂದೆ ತೃಪ್ತಿಕರವಾದ ದಾಂಪತ್ಯ ಜೀವನ ಬೆಳೆಸಲಾರವು. ಕೇವಲ ಕಾಮುಕತೆಯ ಧ್ಯೇಯ ಗಂಡ ಹೆಂಡಿರಿಬ್ಬರನ್ನೂ ದೇಹದ ತೀರಾ ಅಲ್ಪ ಸ್ವಾರ್ಥತೆಯ ದಾಸರನ್ನಾಗಿ ಮಾನವ ಜನ್ಮದ ಧಾರ್ಮಿಕ ಗುರಿಯಿಂದಲೇ ತಪ್ಪಿಸುತ್ತವೆ.

ಆದ್ದರಿಂದ ವಿವಾಹಕ್ಕೆ ಕೇವಲ ಕಾಮುಕತೆಯ ಧ್ಯೇಯ ಏನೇನೂ ಸರಿಯಲ್ಲ. ಪುರುಷರಲ್ಲಿ ಕಾಮುಕತೆ ಸಮಾನ ಮಟ್ಟದಲ್ಲಿಲ್ಲ. ಹೆಂಗಸರಲ್ಲಿ ವಿಪರೀತ ಕಾಮದ ಬಯಕೆ ಉಂಟಾಗಿ ಬಿಟ್ಟರೆ ಹೆಂಗಸರಿಗೆ ತೃಪ್ತಿ ಬಾರ ದಿರುವುದೇ ಕ್ರಮವಾದ್ದರಿಂದಲ್ಲವೇ ಅವರು ಮತ್ತೊಬ್ಬನ ಮಗುದೊಬ್ಬನ ಆಕರ್ಷಣೆಗೆ ಬಯಸಲಾರಂಭಿಸುವುದು ? ಆದ್ದರೀದಲೇ ನಮ್ಮಲ್ಲಿ ಗೃಹಸ್ಥ ಜೀವನಕ್ಕೆ ಕಾಮದ ಗುರಿ ಇದ್ದರೂ ಅದು ಆ ಜೀವನದ ಕೇವಲ ಒಂದು ಅಂಶ ಮಾತ್ರ.

ಆದರೆ ಸೆಕ್ಯುಲರ್ ಸರ್ಕಾರದಿಂದ ಮಕ್ಕಳಿಗೆ ತಮ್ಮ ಧರ್ಮದಲ್ಲಿ ಆಸಕ್ತಿ (ಈಗ ಆಗುತ್ತಿರುವಂತೆ) ಕ್ಷೀಣಿಸುತ್ತ ಬಂದರೆ, ವಿಜ್ಞಾನದ ದೇಹದ ಭೋಗದ ಆಸೆ ಹೆಚ್ಚುತ್ತ ಹೋಗಿ ದೇಹ ಗೆಲ್ಲುವುದು ಕಷ್ಟವಾಗುತ್ತ ಹೋದರೆ, ಜಾತಿ ನಾಶವಾಗಿ, ಕೆಳ ಅತ್ಯಧಿಕ ಸಂಖ್ಯೆಯವರ ದೊಡ್ಡ ಸಾಗರದಲ್ಲಿ ಅಲ್ಪ ಸಂಖ್ಯೆಯ ಬ್ರಾಹ್ಮಣರ ಸುಗುಣಗಳು ಕರಗಿ ತೆಳುವಾಗಿ ಕೆಲಸಮಾಡದವಾದಾಗ, ಜಾತಿಯ ಸಮಾನ ಧಾರ್ಮಿಕ ಹಿನ್ನೆಲೆ ಇಲ್ಲದಾಗಿ ಯುವಕ ಕೇವಲ ದೇಹದ ಆಕರ್ಷಣೆಗೆ

ಹುಡುಗಿ ಅರಿಸಿ ಆಮೇಲೆ ಪರಸ್ಪರ ಅತೃಪ್ತಿ, ಅಭಿರುಚಿ ಭಿನ್ನತೆಗಳಿಂದ ಸೆಕ್ಯುಲರ್ ಸರ್ಕಾರ ತಂದ ವಿವಾಹ ವಿಚ್ಛೇದದ ಕಾನೂನಿನ ಹಾವಳಿ ಬಹಳ ಕೆಲಸ ಮಾಡದಿರದು. ನಮ್ಮ ದೇಶವೂ ಕಾಮುಂಕತೆಯ ಕೂಪವಾಗದಿರದು. ಈ ಕೇಡು ತಪ್ಪಿಸಲಿಕ್ಕೆ ಬ್ರಾಹ್ಮಣರ ಹೊಣೆ ಬಹಳವಿದೆ.

## ೨೧. ವಿಜ್ಞಾನದಿಂದ ಅಧರ್ಮದ ಪ್ರೇರಣೆ

ನಮ್ಮ ಸೆಕ್ಯುಲರ್ ಸರ್ಕಾರವು ನಮ್ಮ ಧರ್ಮದ ಹಾನಿಯನ್ನು ಬಹಳ ಸಾಧಿಸುತ್ತಿದೆಯಷ್ಟೆ! ಈ ತರದಲ್ಲಿ ದೇವರನ್ನು ದೂರ ಇಡುವ ಸರ್ಕಾರಗಳು ಪ್ರಚಾರಕ್ಕೆ ಬಂದುದೇ ವಿಜ್ಞಾನವು ಬೆಳೆಯುತ್ತ ಬಂದಮೇಲೆ; ತಮ್ಮ ಕಾರ್ಯ ಸಾಧನೆಗೆ ವಿಜ್ಞಾನದ ಬೆಂಬಲ ಸಾಕು, ದೇವರ ಸಹಾಯ ಅನಗತ್ಯ ಎಂಬ ಧೈರ್ಯ ಬಂದಮೇಲೆ. ಆದ್ದರಿಂದ ಪ್ರತಿಸನಾತನಿಯೂ ಈ ವಿಜ್ಞಾನದ ನಿಜ ಸ್ವರೂಪ ಅರಿತಿರಬೇಕು. ಸೃಷ್ಟಿಯಲ್ಲಿ ಯಾವುದೂ ದೋಷರಹಿತವಾದುದಿಲ್ಲ. ಈಗ ವಿಜ್ಞಾನವನ್ನು ಎಲ್ಲೆಲ್ಲೂ ಹೊಗಳುವವರೇ ಹೊರತು ಅದರ ಅಪಾಯ ಹೇಳುವವರೇ ಇಲ್ಲ, ಅದು ಪ್ರಕೃತಿಯ ಸತ್ಯಗಳ ಅನ್ವೇಷಣೆ ಮಾಡುತ್ತದೆ, ಸತ್ಯವು ಅರಿಯಬೇಕಾದುದೇ, ಎಂಬುದು ಅವರ ತೀರ್ಮಾನ. ಆದರೆ ವಿಜ್ಞಾನ ದಲ್ಲಿಯೂ ದೋಷವಿದೆ; ಭಯಂಕರ ದೋಷವಿದೆ. ಈ ಕಾಲದ ಸಾಮಾನ್ಯ ಮಾನವ ಅದನ್ನು ಉಪಯೋಗಿಸದೆ ಇರಲಾರ. ಬೆಂಕಿ, ಪೆಟ್ರೋಲು, ಖಡ್ಗ ಉಪಯೋಗಿಸುವವರು ಅವು ತಮಗೆ ಮಾಡಲಾಪ ಹಾನಿಯನ್ನೂ ಅರಿತೇ ಜಾಗ್ರತೆಮಾಡಿಯೇ ಉಪಯೋಗಿಸುತ್ತಾರೆ. ಆ ಹಾನಿಗಳನ್ನರಿಯದ ಬಾಲಕ ಮಾತ್ರ ಉಪಯೋಗಿಸಿದರೆ ವಿಪರೀತ ಕೇಡು ಹೊಂದುವುದು ಸಾಧ್ಯ. ಅಂತೆಯೇ ವಿಜ್ಞಾನದ ಉಪಯೋಗದಲ್ಲಿ ಬಹಳ ಜಾಗ್ರತೆ ಬೇಕು.

ಲೋಕದಲ್ಲಿ ಬಹುಮಟ್ಟಿನ ಜನರು ಧರ್ಮವನ್ನು ಆಚರಿಸುತ್ತ ಬಂದದ್ದು ಮೋಕ್ಷ ಬೇಗ ಸಿಗಲಿ ತಮಗೆ, ಎಂದಲ್ಲ. ಜೀವನದಲ್ಲಿ ತಮ್ಮ ಕೈಮೀರಿದ ಕಷ್ಟಗಳು ಬಂದೇಬರುತ್ತವೆ. ಆಗ ಕೂಡ ಸಹಾಯ ಕೊಡಲಾಪನು. ಕೇವಲ ದೇವರು ಮಾತ್ರ ಎಂಬುದು ಹಲವು ಸಾವಿರ ವರ್ಷಕಾಲದ ಜನರ ಅನುಭವ. ಅದನ್ನು ನಂಬಿ ಅವರು ಧರ್ಮದ ಅಭ್ಯಾಸ ಮಾಡುತ್ತಾರೆ. ಕಷ್ಟ ಯಾವಾಗ ಬರುತ್ತದೆಂದಿಲ್ಲ; ಆಗ ಮಾತ್ರ ದೇವರ ಚಿಂತನೆ ನ್ಯಾಯವಲ್ಲ ಎಂದು ಧರ್ಮ

ಅನುಸರಿಸುತ್ತಿರುತ್ತಾರೆ. ಸಾಧಾರಣ ಎಲ್ಲ ನಾಗರಿಕರೂ ಮುಂಚೆ ಅನುಸರಿಸು ತ್ತಿದ್ದ ಕ್ರಮವಿದು. ಆದರೆ ಸುಮಾರು ಇನ್ನೂರು ವರ್ಷಗಳಿಂದ ವಿಜ್ಞಾನ ವೆಂಬ ಹೊಸ ದೇವರೊಂದು ತೋರಿಕೊಂಡು ಬೇಗ ಬೇಗ ಪ್ರಬಲವಾಗುತ್ತ ಬಂದಿದೆ; ತನ್ನ ಉಪಾಸಕರಿಗೆ ಅದ್ಭುತವಷ್ಟದಲ್ಲಿ, ಅವರ ನಿರೀಕ್ಷೆ ಮೀರಿದ ಮಟ್ಟದಲ್ಲಿ, ಸಹಾಯಕೊಡುತ್ತ ಜನರನ್ನು ಹಳೇ ದೇವರಿಂದ ತನ್ನ ಕಡೆಗೆ ಆಕರ್ಷಿಸುತ್ತಿದೆ. ಭೂಲೋಕದಲ್ಲಿಯೇ ನಮ್ಮ ದೇಶದ ಜನರು ಧರ್ಮವನ್ನು (ಅದೂ ಅತ್ಯಂತ ಪೂರ್ಣರೂಪದ್ದನ್ನು) ಅಭ್ಯಸಿಸಿದಷ್ಟು ಮತ್ತೆಲ್ಲೂ ಅಭ್ಯಸಿ ಸಿರಲಿಲ್ಲ. ಆದರೆ ವಿಜ್ಞಾನ ದೇವನು ತನ್ನ ಉಪಾಸನೆ ಧಾರಾಳ ನಡೆಸಿದ ಪಾಶ್ಚಾತ್ಯರಿಗೆ ನಮ್ಮ ಸರಾಸರಿ ವರಮಾನದ ೩೦-೪೦-೫೦ ಪಾಲುಗಳಷ್ಟು ಹೆಚ್ಚಿನ ಐಶ್ವರ್ಯ, ಸುಖೋಪಭೋಗಗಳನ್ನು ಈಗಾಗಲೇ ಕೊಟ್ಟಿದೆ. ಈ ಹೊಸ ದೇವನು ಕೊಟ್ಟ ರೈಲು ಕಾರು ವಿಮಾನಗಳೆಂಬ ವಾಹನಗಳು, ವಿದ್ಯುತ್ ದೀಪ, ಬೀಸಣಿಗೆ, ಪಂಪು ಮುಂತಾದ ಸೌಕರ್ಯಗಳು, ರೇಡಿಯೋ ಟಿ.ವಿ., ಸಿನೆಮಾ ಮುಂತಾದ ವಿನೋದಗಳು, ಐಶ್ವರ್ಯ ರಾಶಿ ಹಾಕುವ ಕಾರ್ಖಾನೆ ಯಂತ್ರಗಳು, ಚಂದದ ಕೃತಕಸಿಲ್ಕು ನೈಲಾನ್ ಬಟ್ಟೆಬರೆಗಳು, ಬಹಳ ಅನುಕೂಲವಾದ ಸಿಮೆಂಟು, ಅಲ್ಯೂಮಿನಿಯಂ, ಪ್ಲಾಸ್ಟಿಕ್ ಮುಂತಾದವು ಅತಿ ಪ್ರಬಲ ಶಕ್ತಿಯ ಮದ್ದುಗಳು, ಶತ್ರುನಾಶಕ್ಕೆ ಅತ್ಯಂತ ಭಯಂಕರ ಬಾಂಬುಗಳು ಮುಂತಾದ ಪ್ರತಿಭಾಗದಲ್ಲಿಯೂ ಅತಿಮೇಲ್ತರದವನ್ನು ಹೊಸ ದೇವನು ತನ್ನ ಎಲ್ಲ ಉಪಾಸಕರಿಗೆ ಕೊಟ್ಟಂತೆ ಹಳೆ ದೇವರು ಎಂದೂ ಕೊಟ್ಟಿರಲಿಲ್ಲ. ಆದ್ದ ರಿಂದಲೇ ಕೇವಲ ಈ ಹೊಸ ದೇವನಿಂದ ಪ್ರಭಾವಿತರಾದ ಶ್ರೀ ನೆಹರು ಅವರು ಹಿಂದೆ ಎಂದೆಂದೂ ಅತ್ಯಂತ ಧರ್ಮಿಷ್ಠ ರಾಜ್ಯಕ್ರಮಗಳಿದ್ದ ನಮ್ಮ ದೇಶಕ್ಕೆ ದೇವರನ್ನು ಅತಿದೂರ ಇಡುವ ಸೆಕ್ಯುಲರ್ ರಾಜ್ಯಕ್ರಮ ತಂದರು. ಚೈನಾದ ವರು, ರಷ್ಯಾದವರು ಮುಂತಾದ ಲೋಕದ ಮೂರನೆ ಒಂದಂಶ ಜನರು ಪೂರ್ಣ ನಾಸ್ತಿಕರಾಗಿ ಕೇವಲ ವಿಜ್ಞಾನದ ಬೆಂಬಲ ಮಾತ್ರ ಸಾಕೆಂದು ನಿರ್ಧರಿಸಿ ದ್ದಾರೆ. ಆ ಹಳೇ ದೇವರು ಎಲ್ಲೋ ಏನೋ ತಮ್ಮಲ್ಲಿ ಯಾರೂ ಕಂಡವರಿಲ್ಲ; ಬೇಡಿಕೊಂಡವರಿಲ್ಲ. ಎಲ್ಲೋ ಅಲ್ಲಿ ಇಲ್ಲಿ ಒಬ್ಬನಿಗೆ ಸಹಾಯಕೊಟ್ಟಿರಬಹುದು, ಎಲ್ಲರಿಗಲ್ಲ; ಆದರೆ ವಿಜ್ಞಾನ ತಾವು ಬೆಳೆಸಿದಂತೆ ಬೆಳೆದು ತಮಗೆ ಖಂಡಿತ ಸಹಾಯ ಕೊಡುತ್ತದೆ; ಎಂದರೆ ಅದರದ್ದು ಪ್ರತ್ಯಕ್ಷ ಭರವಸೆ. ಕಾರು ಬೇಕು ಎಂದವರು ಕಾರು ನಿರ್ಮಾಣಮಾಡಿಯೇ ಬಿಟ್ಟರು; ರೇಡಿಯೋ ಬೇಕೆಂದವರು ಅದನ್ನು ನಿರ್ಮಿಸಿದರು. ಅಣುಬಾಂಬು ಬೇಕೆಂದವರು ಅದನ್ನೂ ನಿರ್ಮಿಸಿ

ಶತ್ರುವಿಗೆ ಕಾಯುತ್ತಿದ್ದಾರೆ. ಜನಸಂಖ್ಯೆ ಇಮ್ಮಡಿ, ನಾಲ್ಕುಮಡಿ, ಎಂಟು ಮಡಿ ಹೆಚ್ಚುತ್ತಿರುವ ಮಾನವ ಜನಾಂಗಕ್ಕೆ ಈ ಅದ್ಭುತ ಶಕ್ತಿಯ ವಿಜ್ಞಾನ ಮಾತ್ರ ಬೇಕಾದ ಆಹಾರ ಸಂಗ್ರಹ ಮಾಡೀತು ಎಂಬುದು ಜನರ ಭರವಸೆ. ವಿಜ್ಞಾನವು ಹೀಗೆಲ್ಲ ಅದ್ಭುತಶಕ್ತಿಯ ದೇವನಂತೆ ಇದ್ದರೂ ಅದನ್ನು ಬೆಳೆಸಿದವ ಮಾನವನೇ ಅಲ್ಲವೇ ? ಆದ್ದರಿಂದ ವಿಜ್ಞಾನವು ಹೇಳಿದ್ದೆಲ್ಲ ಮಾಡುವ ಅತ್ಯುತ್ತಮ ಸೇವಕನೂ ಆಗಿದ್ದಾನೆ. ಹೀಗಿರುವಾಗ ಯಾರು ವಿಜ್ಞಾನಕ್ಕೆ ಆಕರ್ಷಿತರಾಗದಿರರು ?

ವಿಜ್ಞಾನದ ಸಾವಿರ ಅಶ್ವಶಕ್ತಿಯ ರೈಲು ಇಂಜಿನ್ನಿನ ಡ್ರೈವರನು, ಲಕ್ಷ ಮಾನವ ಶಕ್ತಿಯ ಸ್ಟೀಮರಿನ ಡ್ರೈವರನು, ಅವನ್ನು ನಿಧಾನವಾಗಿ ನಡೆಸಬಲ್ಲ, ಜೋರಾಗಿ ಓಡಿಸಬಲ್ಲ ; ಬೇಕಾದಂತೆ ನಿಲ್ಲಿಸಬಲ್ಲ. ವಿಜ್ಞಾನದ ಇಂಗ್ಲೆಂಡಿನ ಬಿ.ಬಿ.ಸಿ. ರೇಡಿಯೋ ಸ್ಟೇಶನ್ನು ಸಾರುವ ವಾರ್ತೆ ಇಲ್ಲಿ ಕುಳಿತು ನಮಗೂ ಕೇಳಲಾವುದು. ಎರಡು ಲಕ್ಷ ಜನರಿದ್ದ ಹಿರೋಶಿಮಾ ಪಟ್ಟಣದ ಮೇಲೆ ಅಮೇರಿಕದ ಶತ್ರು ಪಡೆಯುವನೊಬ್ಬ ಮಾತ್ರವೇ ಎಸೆದ ಅಣುಬಾಂಬು ಅದನ್ನು ಕ್ಷಣ ಮಾತ್ರದಲ್ಲಿ ಧ್ವಂಸಕ್ಕೆ ನೂಕಿತು. ಮನುಷ್ಯನಿಗೆ ಇಷ್ಟೆಲ್ಲ ಅಪಾರ ಅಮಾನುಷ ಶಕ್ತಿಯನ್ನು ಕೇವಲ ಮಾನವ ವಿಜ್ಞಾನಿಯು ಹೇಗೆಲ್ಲ ಕೊಡಲು ಸಾಧ್ಯನಾದ ?

ನಮ್ಮ ಶಾಸ್ತ್ರವು ಹೇಳುತ್ತದೆ, (ಮನು ೧೧, ೨೩೮) ತಪಸ್ಸಿಗೆ ಯಾವುದೂ ಅಸಾಧ್ಯವಲ್ಲ ಎಂದು. ದೇವರು ಅದಕ್ಕೆ ಅಷ್ಟು ಶಕ್ತಿಕೊಟ್ಟಿದ್ದಾನೆ ಏಕೆಂದರೆ ಮಾನವನೆಂದಾದರೊಮ್ಮೆ ಮುಂದಕ್ಕೆ ಸಾಧಿಸಲೇಬೇಕಾದ ಸಾಯುಜ್ಯ ಮುಕ್ತಿಗೆ ಈ ಅಪಾರಶಕ್ತಿಯ ತಪಸ್ಸು ಬೇಕಾಗುತ್ತದೆ ಎಂಬುದರಿಂದ. ಶುಕರು ಹಾಗೆ ಮಾಡಿ ಪರಬ್ರಹ್ಮನಲ್ಲಿ ಐಕ್ಯವಾದಕತೆ ಮಹಾಭಾರತದಲ್ಲಿ ಬರುತ್ತದೆ. ಆದರೆ ಮಾನವನಿಗೆ ದೇವರು ಕೆಲವುಮಟ್ಟಿನ ಸ್ವತಂತ್ರವನ್ನೂ ಕೊಟ್ಟಿದ್ದಾನೆ. ಆದ್ದರಿಂದ ಅವ ಮುಂದೆ ತಪಸ್ಸನ್ನು ಕ್ರಮೇಣ ಮುಕ್ತಿ ಪಡೆಯಲಿಕ್ಕೆ ಉಪಯೋಗಿಸಲೂಬಹುದು ಅಥವಾ ತತ್ಕಾಲಕ್ಕೆ ಕೇವಲ ದೇಹದ ಭೋಗದಲ್ಲಿ ಮುಳುಗಲಿಕ್ಕಾಗಿ ತನ್ನ ಕಾಯಿಕ ಬಲವನ್ನು ವಿಪರೀತ ಬೆಳೆಸಲಿಕ್ಕಾಗಿ ಉಪಯೋಗಿಸಲೂಬಹುದು. ತಪಸ್ಸಿನ ಮುಖ್ಯ ಲಕ್ಷಣ ಅತ್ಯಂತ ಏಕಾಗ್ರತೆಯಿಂದ, ದೇಹದ ಕಷ್ಟ ನಿರ್ಲಕ್ಷಿಸುತ್ತ, ನಿರ್ದಿಷ್ಟ ರೀತಿಯಲ್ಲಿ ತನ್ನ ಗುರಿಯ ಸಾಧನೆಗೆ ಸಂಪೂರ್ಣ ಶಕ್ತಿ ಹಾಕುವುದು. ಹಿರಣ್ಯಕಶಿಪು, ರಾವಣರು ಕೇವಲ ತಮ್ಮ ಲೌಕಿಕಶಕ್ತಿ ವಿಪರೀತ ಬೆಳೆಸಲಿಕ್ಕೆ ಅತ್ಯಂತ ಕಠಿಣ ತಪಸ್ಸು ಮಾಡಿ ಪ್ರತಿಫಲವಾಗಿ ಬ್ರಹ್ಮನಿಂದ

ಅತ್ಯಧಿಕ ಶಕ್ತಿಪಡೆದರು ; ದೇವತೆಗಳನ್ನೂ ಸೋಲಿಸಿದರು. ಆಗ ಅವರ ಈ ತರದ ತಮ್ಮ ತಪಸ್ಸಿಂದ ಬಂದ ಶಕ್ತಿಯ ದುರುಪಯೋಗಕ್ಕೆ ಪರಬ್ರಹ್ಮನ ಮತ್ತೊಂದು ಅಂಶವೇ ಆದ ವಿಷ್ಣುವು ಅವತರಿಸಿ ಅವರ ನಾಶ ಸಾಧಿಸಬೇಕಾಯಿತು. ಆದರೆ ವಸಿಷ್ಠರು ವಿಶ್ವಾಮಿತ್ರರು ಅತ್ರಿ ಮುಂತಾದ ಋಷಿಗಳು ಸದ್ಗತಿಗಾಗಿ ಅತಿ ಚೆನ್ನಾಗಿ ತಪಸ್ಸು ಮಾಡಿ ಜೀವನ್ಮುಕ್ತರಾದರು. ವಸಿಷ್ಠರ ಕೇವಲ ಬ್ರಹ್ಮದಂಡವು ಅವರಿಗೆ ಅನ್ಯಾಯವಾಗಿ ಹಿಂಸೆ ಕೊಡಲು ಬಂದ ವಿಶ್ವಾಮಿತ್ರ ರಾಜನ ಸೈನ್ಯವನ್ನೆಲ್ಲ ನಾಶಮಾಡಿ ಬಿಟ್ಟಿತು ! ನಮ್ಮ ಪುರಾಣದ ಕತೆಗಳಲ್ಲಿ ತಪಸ್ಸಿಂದ ಸಾಧಕರು ಬ್ರಹ್ಮಾಸ್ತ್ರ, ಅಗ್ನ್ಯಾಸ್ತ್ರ, ವರುಣಾಸ್ತ್ರ, ವಾಯುವಾಸ್ತ್ರ ಮುಂತಾದವನ್ನು ಪಡೆದ ಕತೆಗಳಿವೆ; ಅವನ್ನು ಇತರರಿಗೆ ಉಪದೇಶಿಸಿದ ಕತೆಗಳೂ ಇವೆ. ಇವೆಲ್ಲ ಅತ್ಯಂತ ಅಮಾನುಷ ಅದ್ಭುತ ಶಕ್ತಿಯವು. ಅಂತೆಯೇ, ತಪಸ್ಸಿಂದ ಬಹಳ ಅಮಾನುಷ ಶಕ್ತಿಯ ಸಿದ್ಧಿಗಳು, ಗಾಯತ್ರಿ ತರದ ಅದ್ಭುತ ಮಂತ್ರಗಳು ಲಭಿಸಿದ್ದವು. ಆದರೆ ಈ ವರ್ಗದವರೆಲ್ಲ ಅವನ್ನು ಅವುಗಳ ಸದುಪಯೋಗಕ್ಕಾಗಿ ಮಾತ್ರ ಪಡೆದರು; ಮತ್ತು ಉತ್ತಮಯೋಗ್ಯತೆ ಇರುವವರಿಗೆ ಮಾತ್ರ ಅವುಗಳ ಉಪದೇಶ ಕೊಟ್ಟರು. ತಪಸ್ಸಿನ ಫಲವನ್ನು ಕೆಟ್ಟದ್ದಕ್ಕಾಗಿ ಉಪಯೋಗಿಸಿದ ಹಿರಣ್ಯಕಶಿಪು ರಾವಣರು ದೇವರಿಂದಲೇ ನಾಶ ಮಾಡಲ್ಪಟ್ಟರು. ಅವರ ತಪೋಬಲ ಅಲ್ಲಿಗೆ ಮುಗಿಯಿತು.

ವಿಜ್ಞಾನಿಗಳೂ ಅಪಾರ ಶ್ರಮದ, ಏಕಾಗ್ರತೆಯ, ಸಾಧನೆಯ, ತಪಸ್ಸಿಂದ ಪ್ರಕೃತಿಯಲ್ಲಿ ಹುದುಗಿರುವ, ಅಗ್ನಿ ವರುಣ ವಾಯು ಮುಂತಾದ ದಿಕ್ಪಾಲಕರು ಲೋಕದ ಪಾಲನೆಗಾಗಿ ಉಪಯೋಗಿಸಲಿಕ್ಕೆಂದು ದೇವರಿಂದ ಪಡೆದ ಶಕ್ತಿಗಳ ಸ್ವಲ್ಪ ಕ್ರಮಗಳನ್ನು ತಾವೂ ಕಂಡುಕೊಂಡಿದ್ದಾರೆ . ಆದರೆ ಅವರಿಗೆ ಈ ದಿಕ್ಪಾಲಕ ದೇವತೆಗಳ ಸದ್ಬುದ್ಧಿ, ಶೀಲದ ಹಿರಿಮೆ, ಆಳವಾದ ಜ್ಞಾನದ ಯೋಗ್ಯತೆ ಒಂದೂ ಇಲ್ಲ.

ಅಲೆಕ್ಸಾಂಡರನು ಹಿಂದೂಸ್ಥಾನಕ್ಕೆ ಬಂದಾಗ ಪಶ್ಚಿಮಭಾಗದಲ್ಲಿ ಜಯ ಪಡೆದ. ಆದರೆ ಮುಂದರಿದಂತೆ ಅಲ್ಲಿ ಉಪಯೋಗಿಸಿದ ಅಗ್ನ್ಯಾಸ್ತ್ರ ಎದುರಿಸಲಾರದೆ ಹಿಂತಿರುಗಿದ ಎಂದು ದಾಖಲೆ ಇದೆ. ಆದರೆ ಆಮೇಲೆ ನಮ್ಮಲ್ಲಿ ಅಗ್ನ್ಯಾಸ್ತ್ರದಜ್ಞಾನವನ್ನೇ ಅಯೋಗ್ಯರ ಕೈಗೆ ಸಿಕ್ಕುವ ಸಂಭವಕ್ಕೆದರಿ ಹಿಂತೆಗೆದಿರಬೇಕು. ಅದೇ ರೀತಿಯಲ್ಲಿ ಬೃಹಸ್ಪತಿ ಸಂಹಿತದಲ್ಲಿರುವ ವಿಮಾನ ಶಾಸ್ತ್ರವನ್ನೂ ಶಿಷ್ಯರು ದುರುಪಯೋಗಿಸುವ ಸಂಭವ ಕಂಡು ಗುರುವು ಹಿಂತೆಗೆದ ಕತೆಯಿದೆ. ನಮ್ಮ ಸಂಪ್ರದಾಯವು ಈ ಭಾಗದಲ್ಲಿ ಬಹಳ ಜಾಗ್ರತೆವಹಿಸಿತ್ತು. ಮಾನವ

ನಿಗೆ ಸ್ವಲ್ಪವೇ ಅಮಾನುಷ ಹಿರಿಮೆ ಕೊಡುವ ಜ್ಞಾನವನ್ನಾದರೂ ದೇವರ ಭಯದೊಡನೆ ನಮ್ರತೆಯೊಡನೆ ಮಾತ್ರ ಉಪಯೋಗಿಸಲಿ, ದುರುಪಯೋಗ ವಾಗದಿರಲಿ ಎಂಬುದಾಗಿತ್ತು. ಆದ್ದರಿಂದಲೇ ಈ ಕಾಲದವರೆಗೂ ಬಂದ ಪರಂಪರೆ ನೋಡಿರಿ. ಅಮಾನುಷ ಶಕ್ತಿಕೊಡುವ ಅಕ್ಷರಾಭ್ಯಾಸ, ಗ್ರಂಥಗಳ ಸಂಗ್ರಹ ಖಡ್ಗ ಮೊದಲಾದ ಆಯುಧಗಳು, ವಾಹನ, ಕಾರ್ಮಿಕರ ಉಳಿಗರಗಸ ಮುಂತಾದ ಸಾಧನಗಳು, ಐಶ್ವರ್ಯ ಮುಂತಾದವಕ್ಕೆ ವರ್ಷಕ್ಕೊಮ್ಮೆ ದೇವ ರೆಂದೇ ಭಾವಿಸಿ, ಸರಸ್ವತೀ ಪೂಜೆ, ಆಯುಧ ಪೂಜೆ, ಲಕ್ಷ್ಮೀಪೂಜೆ ಮಾಡುವ ಕ್ರಮವಿವೆ; ಅವು ತಮ್ಮ ಸದುಪಯೋಗ ಮಾತ್ರ ಪ್ರೇರಿಸಲಿ, ದುರುಪಯೋಗ ವಾಗಿ ಪಾಪದ ಕಾರ್ಯಗಳಿಗೆ ಪ್ರೇರಿಸದಿರಲಿ ಎಂಬುದಕ್ಕಾಗಿ.

ಆದರೆ ವಿಜ್ಞಾನಿಯು ತಾನೇ ಸಂಗ್ರಹಿಸುತ್ತ ಬಂದ ದೈವೀಶಕ್ತಿಗಳ ಉಪ ಯೋಗದ ಕ್ರಮದ ಜ್ಞಾನವು ಅಪಾರವಾದದ್ದು. ಅವನಿಗೆ ಲಭಿಸುತ್ತ ಬಂದ ಅದ್ಭುತ ಪ್ರತಿಫಲದಿಂದ ಪ್ರೇರಣೆಗೊಂಡು ಆ ದಾರಿಯಲ್ಲಿ ಶೋಧನೆಗಳು— ಅದಕ್ಕೆ ಹಾಕುವ ಹಣ, ಕೆಲಸಮಾಡುವ ತಜ್ಞರ ಸಂಖ್ಯೆ—ಅತಿತೀವ್ರತೆಯಿಂದ ಹೆಚ್ಚುತ್ತಾ ಬರುತ್ತಿವೆ. ಹೀಗೆ ದೊರೆಯುತ್ತಿರುವ ವಿಜ್ಞಾನದ ಸಂಗ್ರಹವು ಪ್ರತಿ ೧೦ ವರ್ಷಕ್ಕೆ ಎರಡುಪಾಲು ಆಮೇಲೆ ನಾಲ್ಕು ಪಾಲು, ಎಂಟು ಪಾಲು ಎಂಬ ಶೀಘ್ರತೆಯಿಂದ ಬೆಳೆಯುತ್ತ ಬಂದಿದೆ ಮತ್ತು ಅದೆಲ್ಲ ಧಾರಾಳವಾಗಿ ಪ್ರಸಾರವಾಗುತ್ತಿದೆ. ಈ ವಿಜ್ಞಾನದ ಜ್ಞಾನದ ಉಪದೇಶಕ್ಕೆ, ಲೋಕದ ಭದ್ರತೆಗಾಗಿ ಶಿಷ್ಯನಲ್ಲಿ ಉತ್ತಮಶೀಲ, ಯೋಗ್ಯತೆ, ಪಾಪದಭೀತಿ, ದೈವಭಕ್ತಿ, ಸ್ವಲ್ಪವೂ ಬೇಕೆಂಬ ಶರ್ತವಿಲ್ಲ. ಬೇಕಾದುದು ಕೇವಲ ಬುದ್ಧಿ ಚುರುಕುತನ (ವಿಜ್ಞಾನದ ಕಾಲದ ಸೆಕ್ಯುಲರ್ ಸರ್ಕಾರದ ವಿದ್ಯಾಸಂಸ್ಥೆಗಳಲ್ಲಿ ವರ್ಷಾವಧೀ ಕೊಡುವ ಇನಾಮುಗಳೆಲ್ಲ ಕೇವಲ ವಿಷಯ ಜ್ಞಾನಕ್ಕೆಹೊರತು ಶೀಲಕ್ಕೆ ಏನೂ ಇಲ್ಲ!). ವಿಜ್ಞಾನವು ತನ್ನ ಪೂರ್ಣ ಸಹಾಯವನ್ನು ಎಂಥ ಕೊಲೆಗಾರ, ದರೋಡೆಕಾರ, ಹಿಟ್ಲರನಂಥ ಕ್ರೂರನಿಗೂ ನಿಷ್ಪಕ್ಷಪಾತದಿಂದ ಕೊಡುತ್ತ ಬಂದಿದೆ! ದೇವರವಿಚಾರ, ಆತ್ಮದವಿಚಾರ, ಅರಿಯದ ವಿಜ್ಞಾನಕ್ಕೆ ಆತ್ಮಗುಣ ಗಳಾದ ಸತ್ಯತೆ, ದಯೆ, ಕರುಣೆ, ಪ್ರೀತಿ, ಉದಾರತೆ, ಅಹಿಂಸೆ, ಬ್ರಹ್ಮಚರ್ಯ ಏಕೆ ಶ್ರೇಷ್ಠತರದವು. ಅವುಗಳ ಅವಶ್ಯಕತೆ ಏನು, ಅವನ್ನು ಹೇಗೆ ಬೆಳೆಸಲು ಸಾಧ್ಯ ಎಂಬುದು ಏನೇನೂ ತಿಳಿಯದು. ನಮಗೆ ಪುನರ್ಜನ್ಮವಿದೆ ಎಂಬುದು ಈಗ ಧಾರಾಳವಾಗಿ ರುಜುವಾಗಿದೆಯಾದರೂ, ಆದ್ದರಿಂದ ನರಕ, ಹಾಳು ಪುನರ್ಜನ್ಮ ತಪ್ಪಿಸಿಕೊಳ್ಳಲಿಕ್ಕೆ, ಉತ್ತಮ ಜನ್ಮಹೊಂದಲಿಕ್ಕೆ, ಹೇಗೆ ವರ್ತಿಸ

ಬೇಕು ಎಂಬ ವಿಚಾರವೇ ವಿಜ್ಞಾನಕ್ಕೆ ಬೇಡವಾಗಿದೆ. ಧರ್ಮದ ಭಾಗಗಳ ಆವಶ್ಯಕತೆ ಏನೆಂಬುದರ ಜ್ಞಾನದ ಬಗ್ಗೆ ಅದಕ್ಕೆ ಕುತೂಹಲವೇ ಉಂಟಾದುದಿಲ್ಲ.

ವಿಜ್ಞಾನದ ಶಕ್ತಿ ಅತ್ಯಂತ ತೀವ್ರತೆಯಿಂದ ಹೆಚ್ಚಿಸಲ್ಪಡುತ್ತ ಬರುವಾಗ, ಅದನ್ನುಪಯೋಗಿಸುವ ಜನರ ಶೀಲವನ್ನೂ ಧಾರಾಳವಾಗಿ ಉತ್ತಮ ಮಾಡುತ್ತ ಬಾರದಿದ್ದರೆ ವಿಜ್ಞಾನದ ದುರುಪಯೋಗ, ಅದರಿಂದ ಹೆಚ್ಚುತ್ತ ಬರುವ ಅಪಾಯ, ಉಂಟಾಗದಿರದು ಎಂಬುದು ಯಾರಿಗೂ ಅರ್ಥವಾಗಬೇಕಾದುದೇ. ಆದರೆ ವಿಜ್ಞಾನಕಾಲದಲ್ಲಿ ಮಾನವ ಸಮಾಜದ ನೈತಿಕ ಮಟ್ಟವನ್ನು ತೀವ್ರವಾಗಿ ಸುಧಾರಿಸಲಿಕ್ಕೆ ಯಾವ ಪ್ರಯತ್ನವೂ ನಡೆದದ್ದಿಲ್ಲ. ತಂದೆ ಚಿಕ್ಕ ಮಗನಿಗೆ ಅವ ಬೆಳೆಯುವ ಮುಂಚೆಯೇ ಹೆಚ್ಚು ಹೆಚ್ಚು ಅಪಾಯ ತರುವ ಆಟದ ಸಾಮಾನು ಎಂದೂ ಕೊಡನು. ಆದರೆ ವಿಜ್ಞಾನಿಗಳು ಶ್ರಮಿಸಿ ಅಲ್ಪರಿಗೂ ಕೊಡುತ್ತ ಬರುತ್ತಿರುವ ಪ್ರಬಲ ದೈವೀ ಶಕ್ತಿಗಳ ಜ್ಞಾನದ ರೀತಿ, ಚಿಕ್ಕ ಮಗನಿಗೆ ತಂದೆ ಒಂದರ ನಂತರ ಒಂದಾಗಿ ಚೂರಿ, ಕತ್ತಿ, ಖಡ್ಗ, ಬೆಂಕಿ, ವಿಷ, ಬಾಂಬು ಮುಂತಾದವುಗಳನ್ನು ಕೊಡುತ್ತ ಬಂದಂತೆ! ವಿಜ್ಞಾನದ ಜ್ಞಾನ ವಿಸ್ತಾರದ ಪತ್ರಿಕೆಗಳು ಇಡೀಲೋಕದ ಎಲ್ಲಭಾಗಗಳಿಗೂ ಪ್ರಸಾರವಾಗುತ್ತವೆ. ಆದರೆ ಅದರ ತಪ್ಪು ಉಪಯೋಗದಿಂದ ಹೆಚ್ಚುತ್ತಿರುವ ನೈತಿಕಹಾನಿ ತಡೆಗಟ್ಟಲಿಕ್ಕೆ ವಿಜ್ಞಾನಿಗಳು ತೀರಾಅಸಮರ್ಥರು ಮಾತ್ರವಲ್ಲ ಆ ತರದ ಹಾನಿಗಾಗಿಯೇ ವಿಜ್ಞಾನ ಉಪಯೋಗಿಸುವಲ್ಲೂ ಅವರು ಕೇವಲ ಹಣದ ಸಂಪಾದನೆಯ ಆಸೆಗಾಗಿ ಗುಲಾಮರಂತೆ ಕೆಲಸಮಾಡಲು ಹಿಂತೆಗೆಯುತ್ತಿಲ್ಲ. ಸರ್ವನಾಶದ ಅಣುಬಾಂಬಿನ ರಾಶಿ ಬೆಳೆಸಲಿಕ್ಕೂ ಮುಂದೆಬರುತ್ತಲೇ ಇದ್ದಾರೆ. ಆದ್ದರಿಂದ ದೈವೀಶಕ್ತಿಗಳನ್ನು ವಿಜ್ಞಾನಿ ಕದ್ದು ದುರುಪಯೋಗಿಸುವುದು ಭಗವಂತನ, ಪ್ರಕೃತಿದೇವಿಯ ಮತ್ತು ದಿಕ್ಪಾಲಕ ದೇವತೆಗಳ ಕ್ರೋಧವನ್ನು ಬೆಳೆಸುತ್ತಲೇ ಬಂದಿರಬೇಕು. ಆದ್ದರಿಂದ ಅವರ ಈ ಕ್ರೋಧ ವಿಜ್ಞಾನಿಯ ಬುದ್ಧಿಯನ್ನು ವಿಜ್ಞಾನ ಕಾಲದವರ ನಾಶದ ಕಡೆಗೇ ಖಂಡಿತ ನೂಕುತ್ತಿದೆ ಎಂದು ತೋರುತ್ತದೆ.

ಈ ಮುಂಚೆ ಲೋಕದ ಚರಿತ್ರೆಯಲ್ಲಿ ಲೋಕದ ಬೇರೆ ಬೇರೆ ನಾಗರಿಕತೆಗಳು ಜನಿಸಿ ಬೆಳೆದು ಕ್ರಮೇಣ ಅನೈತಿಕತೆ ಹೆಚ್ಚಿ ಪಾಪ ತುಂಬಿ ನಾಶವಾದವು ಎಂಬ ವಿಚಾರ ತೋರುತ್ತದೆ. ಅತ್ಯಂತ ಹಿಂದಿನದ್ದಾದರೂ ನಮ್ಮ ನಾಗರಿಕತೆ ಮಾತ್ರ ಈಗಲೂ ಬಾಳಿಕೊಂಡಿದೆ. ಹಾಗೆ ನಾಶವಾದ ನಾಗರಿಕತೆಗಳು ಕೇವಲ ಪ್ರಾಂತೀಯ ತರದವಾದ ಐಗುಪ್ತ, ಬೆಬಿಲೋನ್, ಗ್ರೀಸ್, ರೋಂ ಮುಂತಾ

ದವು. ಆದರೆ ವಿಜ್ಞಾನದ ನಾಸ್ತಿಕತೆಯು ಉಂಟುಮಾಡುವ ನಾಶವು ಪ್ರಾಂತೀಯವಲ್ಲ. ವಿಪರೀತ ಲೋಕ ವಿಸ್ತಾರದ್ದಾಗದಿರದು. ಈ ವಿಚಾರವು ಎಷ್ಟೆಲ್ಲ ಮಹತ್ವದ್ದೆಂದರೆ, ಬ್ರಾಹ್ಮಣರು ಸ್ವಲ್ಪ ಚೆನ್ನಾಗಿ ತಿಳಿದು ಆ ಹಾನಿಯಿಂದ ತಪ್ಪಿಸಿಕೊಳ್ಳುವಂತೆ ಬಾಳುವುದು ಅತ್ಯಗತ್ಯ.

ಈ ಕಾಲದ ವಿಜ್ಞಾನದ ಗುರಿಯನ್ನು ಮೂರು ವಿಭಾಗಮಾಡಬಹುದು. ೧) ವಿಶ್ವದ ಅದ್ಭುತ ರಚನೆಯ ರಹಸ್ಯಗಳ ನಿಜತ್ವಗಳನ್ನು ಶೋಧನೆ ಮಾಡುವುದು ; ವಿಜ್ಞಾನದ ಈ ಸತ್ಯಶೋಧನೆ ಮೆಚ್ಚಬೇಕಾದುದೇ. ಆದರೆ ಅದನ್ನು ಮಾಡುವ ವಿಜ್ಞಾನಿಗಳಲ್ಲಿ ನಿಸ್ವಾರ್ಥಿ ಅಂಶ ತೀರಾ ತೀರಾ ಚಿಕ್ಕದು (ಮಾತ್ರವಲ್ಲ ಈ ಅಂಶದವರಲ್ಲಿಯೂ, ಪ್ರತಿ ಇಂಥ ಶೋಧನೆ ಕ್ರಮೇಣ ಅನೇಕ ಹೊಸ ಕೇವಲ ಲೌಕಿಕ ಪ್ರಯೋಜನಗಳಿಗೆ ಲಾಭದಾಯಕವಾಗುತ್ತ ಬಂದದ್ದುಂಟು ಎಂಬುದರಿಂದಲೂ ಅವರಲ್ಲಿ ಅದನ್ನು ಮಾಡುವ ವರ್ಗವೂ ಇದೆ). ೨) ಜನಸಂಖ್ಯೆ ಹೆಚ್ಚುತ್ತಲೇ ಇರುವಾಗ ಮಾನವರ ಕೇವಲ ಬಾಳುವಿಕೆಗಾಗಿ ಬೇಕಾದ ಅನುಕೂಲತೆಗಳನ್ನು ಧಾರಾಳವಾಗಿ ತಯಾರಿಸುವ ವಿಜ್ಞಾನಿ ವರ್ಗ. ಇವರು ಎಲ್ಲರೂ ಕೇವಲತಮ್ಮ ಜೀವನಕ್ಕೆಂದು ಈ ವೃತ್ತಿ ಹಿಡಿದವರು. ೩) ಶೋಧನೆಗಳನ್ನು, ಶ್ರಮವನ್ನು, ಮಾನವನ ದೇಹದ ಹೆಚ್ಚು ಹೆಚ್ಚು ಭೋಗದ ಸಾಮಗ್ರಿಗಳ ತಯಾರಿಕೆಯಲ್ಲಿ, ಈ ಭಾಗದ ಹೊಸ ನಿರ್ಮಾಣಗಳಲ್ಲಿ, ಹಾಕುತ್ತಿರುವ ವಿಭಾಗ. ಇವರ ಗುರಿ ತನ್ಮೂಲಕ ಬರುವ ಅಪಾರ ಲಾಭದ ಆಸೆ ಮಾತ್ರ. ಮತ್ತು ಇವರು ತಮ್ಮ ಹೊಸ ನಿರ್ಮಾಣಗಳಿಂದ ಸಮಾಜಕ್ಕೆ ದೇಹದ ಭೋಗ ಹೆಚ್ಚಾದರೆ ಪರಿಣಾಮ ಕೆಟ್ಟದ್ದಾಗದೇ ಎಂಬ ಭಾಗಕ್ಕೆ ಸ್ವಲ್ಪವೂ ಲಕ್ಷ್ಯಕೊಟ್ಟವರಲ್ಲ. ಇವರಿಗೆ ತಮ್ಮ ಕೇವಲ ಲಾಭ ಮಾತ್ರಬೇಕು (ಈ ಭೋಗ ಹೆಚ್ಚಿಸುವ ವರ್ಗದವರಲ್ಲಿ ಶತ್ರುನಾಶ ಭಾಗವೂ ಅಗತ್ಯವೆಂದು ಮಾರಕ ಶಸ್ತ್ರಗಳ ತಯಾರಿಕೆ ಮಾಡುವವರೂ ಸೇರಿದ್ದಾರೆ).

ನಾನು ಇಲ್ಲಿ ಹೇಳಬೇಕೆಂದಿರುವುದು ಈ ಮೂರನೆ ವರ್ಗದವರ ವಿಚಾರ ಮಾತ್ರ. ಇದೊಂದು ಅತಿ ದೊಡ್ಡ ವರ್ಗ. ಶಾಸ್ತ್ರವು ಮಾನವಜನ್ಮದ ಗುರಿ ಆತ್ಮವನ್ನು ಕುಂಠಿಸುವ ದೇಹದ ಬಂಧನಗಳನ್ನು ಗೆಲ್ಲುವುದಾಗಬೇಕೆಂದು ಸಾರುತ್ತಿದೆ. ಸಾಮಾನ್ಯವಾಗಿ ವಿಜ್ಞಾನಕಾಲಕ್ಕೂ ಮುಂಚೆ ಕೂಡ ದೇಹದ ಚಪಲತೆಯ ವಿಪರೀತ ಸುಖದ ಆಸೆ ಗೆಲ್ಲುವುದು ಮಾನವನಿಗೆ ಸುಲಭವಾಗಿರಲಿಲ್ಲ. ಆದರೆ ನಮ್ಮ ದೇಶದಲ್ಲಿ ಜನರು ಮುಖ್ಯವಾಗಿ ದೇವರು ಬೇಕೆಂಬ ಗುರಿಮರೆಯದೆ ಅವರವರ ಧರ್ಮದಲ್ಲಿ ಬಾಳಲಿಕ್ಕೆ ಸಾಧ್ಯವಾಯಿತು. ದೇವರು

ಈ ತನ್ನ ಭಕ್ತರಿಗೆ, ಈಗ ವಿಜ್ಞಾನ ದೇವನು ಕೊಡುವ, ವಿಪರೀತ ದೇಹ ಭೋಗದ ಸಲಕರಣೆಗಳನ್ನು ಐಶ್ವರ್ಯವನ್ನು ಬೇಕೆಂದೇ ಕೊಡಲಿಲ್ಲ. ಏಕೆಂದರೆ ಅದು ಅವರನ್ನು ಕೆಡಿಸೀತು ಎಂಬುದರಿಂದ ; ಹೊರತು ಅದು ತನಗೆ ಅಸಾಧ್ಯ ವೆಂದೇನಲ್ಲ. ವಿಜ್ಞಾನವು ಈಗ ದೇಹದ ಭೋಗಗಳನ್ನು ಹೊಸ ಹೊಸ ಶಕ್ತಿಯ ಅನುಕೂಲತೆಗಳಿಂದ ಹೆಚ್ಚಿಸಿ ಆತ್ಮದಬಂಧನ ವಂತ್ತಷ್ಟು ಹೆಚ್ಚಿಸಿ ಮಾನವನನ್ನು ಪಶುವಂಟ್ಟಕ್ಕಿಳಿಸುತ್ತಿದೆ. ಆದ್ದರಿಂದ ವಿಜ್ಞಾನವು ಧರ್ಮದ ಪ್ರಬಲ ಶತ್ರುವೇ ಆಗಿ ನಿಂತಿದೆ. ರೇಡಿಯೋ ಹುಚ್ಚಿನವ, ಸಿನೆಮಾ ಹುಚ್ಚಿನವ, ಹೊಲಸು ಕತೆ ಕಾದಂಬರಿಗಳ ಹುಚ್ಚಿನವ, ಬೆಳಿಗ್ಗೆ ಎದ್ದು ಸ್ನಾನ ಜಪ ಪೂಜೆಮಾಡದೆ ಪತ್ರಿಕೆಗೆ ಕಾದು ಅದರಲ್ಲಿ ಮಗ್ನರಾಗಿ ಜಪಕ್ಕೆ ಸಮಯವಿಲ್ಲ ಎಂಬ ಮೂರ್ಖ, ಬಟ್ಟೆ ಬರೆಗಳ ಶೃಂಗಾರ ಹೆಚ್ಚಿಸಿಕೊಂಡು ಜನರ ಕಾಮುಕ ದೃಷ್ಟಿಸೆಳೆದು ಕ್ರಮೇಣ ಕಾಮುಕ ಭಾವನೆ ಹೆಚ್ಚಿಸಿಕೊಳ್ಳುವವಳು (ಮಂಗಳೂರಿನಲ್ಲಿ ಈ ವರ್ಷ ಬೆನ್ನಿನ ಶೃಂಗಾರದ ಪ್ರದರ್ಶನ ಹೆಚ್ಚಿಸಲಿಕ್ಕಾಗಿ ರವಿಕೆ ಮತ್ತೂ ಎರಡು ಇಂಚು ಕೆಳ ಗಿಳಿಸಿದ್ದಾನೆ ದರ್ಜಿ !).

ಹುಡುಗ ಕಾಲೇಜುಸೇರಿ ದುಷ್ಟಸಂಗದಿಂದ ದೇಹದಮೇಲಿನ ಹತೋಟಿ ಪೂರ್ಣ ಕಳಕೊಂಡು ಎಲ್ಲಾ ದುರಾಭ್ಯಾಸಗಳನ್ನು ಮಾತ್ರ ಕಲಿತು ಪಾಠದ ಅಭಿ ರುಚಿ ಏನೂ ಇಲ್ಲದವನಾಗಿ, ಪರೀಕ್ಷೆಯಲ್ಲಿ ನಕಲು ತೆಗೆದು ಅಥವಾ ಹಣದ ಬಲದಿಂದ ಡಿಗ್ರಿಪಡೆಯುವುದು, ಸರ್ಕಾರದಲ್ಲಿ ಹುದ್ದೆಗೆ ಸೇರಿ ಸಾಯುವವರೆಗೆ ಸಂಬಳ ಲಂಚಪೆನ್ಶನ್‌ಗಳನ್ನು ತೀರಾ ಅನ್ಯಾಯವಾಗಿಭೋಗಿಸುವ ಧ್ಯೇಯಂದವ ಅಥವಾ ದುರಾಭ್ಯಾಸಗಳ ಸೆಳೆತದಿಂದ ಬಸ್ಸು ದರೋಡೆ, ರೈಲಲ್ಲಿ ದರೋಡೆ ಮಾಡುವ ಯುವಕ, ಕರ್ತವ್ಯ ಭ್ರಷ್ಟರಾಜಕೀಯ ಪ್ರತಿನಿಧಿ, ಗ್ರಹಸ್ಥಾಶ್ರಮದ ಧರ್ಮವನ್ನೇ ಅರಿಯದೆ ಕೇವಲ ಸ್ವಾರ್ಥಿ ಭೋಗದಲ್ಲಿರುವವರು, ಎಲ್ಲರೂ ಈ ಕಾಲದ ವಿಜ್ಞಾನದ ದೇಹದ ಪೂಜೆ ಮಾತ್ರ ಸಾಕೆಂಬ ಭಕ್ತರು. ಒಬ್ಬ ಸಾಮಾನ್ಯ ಮನುಷ್ಯ ಇನ್ನೊಬ್ಬನನ್ನು ಸುಲಭದಲ್ಲಿ ತನ್ನದಾರಿಗೆ ಪ್ರೇರಿಸಲಾರ. ಆದರೆ ಮಹಾಪುರುಷರು ತೋರಿಕೊಂಡಾಗ ಅತಿ ಧಾರಾಳವಾಗಿ ಜನರನ್ನು ಆಕರ್ಷಿಸುವರು ಏಕೆಂದರೆ ಅವರಲ್ಲಿ ದೈವೀಭಕ್ತಿಯಿದೆ. ನಮ್ಮಲ್ಲಿ ಮುಂಚೆ ಜನರು ಧರ್ಮ ಒಪ್ಪುವ ಮಿತಭೋಗದಲ್ಲಿ ತೃಪ್ತರಾಗಿದ್ದರು. ಆದರೆ ದೈವೀ ಶಕ್ತಿಯ ದುರುಪಯೋಗದೊಡನೆ ವಿಜ್ಞಾನಿ ಮುಂದೆ ಬಂದ. ಜನರು ಅದನ್ನು ತಿಳಿಯದೆ, ಅವನ ಅಪರಿಮಿತ ಭೋಗದ ಸಾಧನೆಗಳಿಗೆ ಬಲಿಬಿದ್ದು ಪಾಶ್ಚಾತ್ಯ ವೈಜ್ಞಾನಿಕ ನಾಗರಿಕತೆಯ ಸಂಪೂರ್ಣ ದಾಸರಾಗಿದ್ದಾರೆ. ದೇಹದ ಭೋಗಕ್ಕೆ,

ಕಾಮಕ್ಕೆ, ಮುಂತಾಗಿ ತೃಪ್ತಿ ಎಂಬುದಿಲ್ಲ. ವಿಜ್ಞಾನದ ಸಾಧನೆ ಬೆಳೆಯುವುದೂ ಈ ಬಯಕೆಗೆ ಮಿತಿಯಿಲ್ಲ ಎಂಬ ದೋಷಹೊಂದಿಕೊಂಡೆ ! ಅದರದ್ದು ಮಿತಿ ಇಲ್ಲದ ಅಪಾಯ. ಜನರು ವಿಜ್ಞಾನಿಯಲ್ಲಿ ಕಾಣಲು ಕಲಿತ ಅಪರಿಮಿತ "ಹಿರಿಮೆ" ಅವನದ್ದಲ್ಲ ; ಅದು ನಾವು ತಿಳಿಯದೆ ನಮ್ಮ ಮೆಚ್ಚಿಗೆ ಪಡೆದ "ಮಿತ್ರನ" ಅಪಾರ ಕಳುವಿನ ಐಶ್ವರ್ಯದಂತೆ. ನಮ್ಮ ರಾಜಕೀಯ ಮುಖಂಡರೂ ಯುವಕರೂ ಪ್ರತಿವಿಚಾರದಲ್ಲಿ ನಮ್ಮ ಸಂಪ್ರದಾಯ ತಾತ್ಸರಿಸಿ ಪಾಶ್ಚಾತ್ಯರ ದಾರಿ ಮೆಚ್ಚಿ ಅನುಕರಣೆ ಮಾಡುವುದೆಂದರೆ ದಾರಿತಪ್ಪಿದ ಕಳ್ಳನ, ದರೋಡೆಕಾರನ, ವಂಚಕನ ಚುರುಕುತನ ತುಂಬಾ ಮೆಚ್ಚಿ ಅನುಕರಣೆ ಮಾಡಿದಂತೆ. ಕಲಿಯುಗದಲ್ಲಿ ಧರ್ಮ ಕೆಡುತ್ತಹೋಗಬೇಕೆಂಬುದು ದೈವೀಸಂಕಲ್ಪವೇ ಎಂದು ಶಾಸ್ತ್ರ ಸಾರಿದೆ. ಅದಕ್ಕಾಗಿ ಕಲಿಪುರುಷ ಉಪಯೋಗಿಸುವುದು ವಿಜ್ಞಾನಿಯ ಶಕ್ತಿಯನ್ನು ಎಂದು ತೋರುತ್ತದೆ. ಕಲಿಯುಗದ ಆರಂಭದ ಸಂಧಿಕಾಲದ ಧಾರ್ಮಿಕ ಬೆಳಕು ನಶಿಸಿದಂತೆ, ಈ ಶತಮಾನದೊಡನೆ ಕೇವಲ ವಿಜ್ಞಾನದ ಅಧರ್ಮದಸೆಳೆತ ಬೆಳೆದಿದೆ, ಪಾಪದ ಅಂಧಕಾರ ಕವಿದಿದೆ. ಕಳ್ಳನ ಶಿಕ್ಷೆಯೊಡನೆ ಕಳ್ಳಮಾಲು ಕೊಂಡುಕೊಂಡವರಿಗೂ ನಷ್ಟವಿದೆ. ವಿಜ್ಞಾನದ ದೈವೀಶಕ್ತಿಯ ದುರುಪಯೋಗದ ಶಿಕ್ಷೆ, ತಾವೇ ಬುದ್ಧಿವಂತರೆಂಬ ವಿಜ್ಞಾನದ ಉಪಾಸಕರೆಲ್ಲ ತಮ್ಮ ಕುತ್ತಿಗೆಗೆ ತಾವೇ ಹಗ್ಗಹಾಕಿಕೊಳ್ಳುವ ಹೆಡ್ಡತನ ಮಾಡಿಕೊಳ್ಳುವಂತಾಗುವುದು.

ಆದರೂ ಬ್ರಾಹ್ಮಣರು ಉಳಿದವರಿಗಿಂತ ಪುಣ್ಯ ಜನ್ಮ ಪಡೆದವರಿದ್ದು ಒಂದು ವಿಚಾರ ಅಗತ್ಯ ತಿಳಕೊಳ್ಳಬೇಕು. ಶಾಸ್ತ್ರವೇ ಹೇಳಿದೆ : ಕಲಿಯುಗವು ಅತ್ಯಂತ ಕೆಟ್ಟದ್ದಾದರೂ ಅದರಲ್ಲೊಂದು ಅದ್ಭುತಗುಣವಿದೆ. ಕೃತಯುಗದ ಇಡೀ ಜನ್ಮದ ಸಾಧನೆಯಿಂದ ಬರುವ ಸತ್ಫಲ, ತ್ರೇತದ ಒಂದು ವರ್ಷದಲ್ಲಿ ಗಳಿಸುವುದು ಸಾಧ್ಯ. ಅಷ್ಟು ಪುಣ್ಯ ದ್ವಾಪರದಲ್ಲಿ ಒಂದು ತಿಂಗಳಲ್ಲಿ, ಕಲಿಯುಗದಲ್ಲಿ ಕೇವಲ ಒಂದೇದಿನದ ಸಾಧನೆಯಿಂದ ಗಳಿಸಬಹುದು. ಆದ್ದರಿಂದ ಅವರಾದರೂ ವಿಜ್ಞಾನದ ಭೋಗದ ವಂಚನೆಯದಾರಿಗೆ ಹೆದರಿ, ಕಲಿಯಸೆಳೆತದಿಂದ ತಪ್ಪಿಸಿಕೊಳ್ಳಲಿ ; ದೇವರ ಪ್ರಕೃತಿ ದೇವಿಯ, ದಿಕ್ಪಾಲಕ ದೇವತೆಗಳ ಶಾಪಕ್ಕೆ ಬೀಳದಂತೆ ದೇವರ ಮರೆಹೋಗಲಿ.

ಗಾಯಂತಂ ತ್ರಾಯತೇ ಯಸ್ಮಾತ್ಪಾತಕಾದುಪಪಾತಕಾತ್ ॥

ಅಲ್ಪನಿಗೆ ಫಕ್ಕನೆ ಬಲಬಂದರೆ, ಐಶ್ವರ್ಯ ಲಭಿಸಿದರೆ, ಅಧಿಕಾರ ಸಿಕ್ಕಿದರೆ, ತಲೆಕೆಡುತ್ತದೆ ; ಮದಾಂಧತೆ ಉಂಟಾಗುತ್ತದೆ. ಬುದ್ಧಿ ಕೆಟ್ಟು,

ಮಾಡಕೂಡದ್ದು ಮಾಡುತ್ತಾನೆ. ಆದರೆ ತಾನು ಮಾಡುವುದು ತೀರಾ ಸರಿ ಎಂದೇ ಭಾವಿಸುತ್ತಾನೆ. ರಾವಣನಿಗೆ, ದುರ್ಯೋಧನನಿಗೆ, ಅವರ ಹಿತ ವಂತರು ಎಷ್ಟೇ ಬೋಧಿಸಿದರೂ ತಮ್ಮ ಅಂಧತೆ ತಿಳಿಯದಾಯಿತು. ವಿಜ್ಞಾನಿ ಯಂತೂ ಅತ್ಯಂತ ಯೋಗ್ಯರಿಗೆ ಮಾತ್ರ ತಕ್ಕುದಾದ ದೈವೀ ಶಕ್ತಿಗಳನ್ನು ತೀರಾ ಅಲ್ಪರಿಗೆ ಕೊಟ್ಟು ಅವರ ತಲೆ ವಿಪರೀತ ಕೆಡುವಂತಾಗಿದೆ. ಆ ತರದ ವಿಜ್ಞಾನದ ಭೋಗಗಳ ಉಪಯೋಗದಿಂದ ತಮ್ಮಲ್ಲಿ ತುಂಬುತ್ತಿರುವ ಅಪಾರ ಪಾಪವು ಅವರ ಅಂಧತೆ ವಿಪರೀತ ಹೆಚ್ಚಿಸಿದೆ. ನಿಷ್ಪಕ್ಷಪಾತಿಗೆ ಅತಿ ಸ್ಪಷ್ಟ ವಾಗಿ ಕೇವಲ ಅವನತಿಯ ದಾರಿ ಎಂದು ತೋರಿದ್ದು, ತಾನು ಬುದ್ಧಿವಂತನೆಂಬ ವಿಜ್ಞಾನಿಗೆ ಸ್ವಲ್ಪವೂ ಹಾಗೆ ತೋರದೆ, ಅವ ಅವನತಿಯ ತೀವ್ರತೆ ಮತ್ತೂ ಹೆಚ್ಚಿಂದ ನಡೆಸುತ್ತಿದ್ದಾನೆ. ಇದಕ್ಕೆ ಇಲ್ಲಿ ಸ್ವಲ್ಪ ದೃಷ್ಟಾಂತಗಳನ್ನು ಕೊಡುತ್ತೇನೆ.

**ಕಾಮುಕತೆ ಬಹಳ ಹೆಚ್ಚಿದೆ:** ದೇಹಗೆಲ್ಲುವುದು ಧರ್ಮದ ಸಾಧನೆಯ ಮುಖ್ಯ ಗುರಿ. ಸಂಪೂರ್ಣ ಬ್ರಹ್ಮಚರ್ಯವು ಬಹಳ ಕಷ್ಟವಾದ್ದರಿಂದ ಧರ್ಮದ ಸಾಧನೆಯಾಗಿ ಗಂಡಸು ಹೆಂಗಸು ವಿವಾಹವಾಗಿ ಕಾಮವನ್ನು ವಿವಾಹದ ಕಟ್ಟೊಳಗೆ ಮಿತಪಡಿಸುವುದು ಸಾಮಾನ್ಯರಿಗೆ ಅಗತ್ಯವಾದ ಸಾಧನೆ ಯೆಂದು ಎಲ್ಲ ಧರ್ಮಗಳೂ ಮಾಡಿವೆ. ಧಾರ್ಮಿಕ ರೀತಿಯಿಂದ ವಿವಾಹ ವಾಗಿ ಪತಿಪತ್ನಿಯರು ಪರಸ್ಪರ ತೃಪ್ತರಾಗಿ ಸಂತೋಷದಲ್ಲಿರುವವರ ವಂಶದಲ್ಲಿ ಮಂಗಲವು ಸ್ಥಾಪಿತವಾಗುತ್ತದೆ (ಮನು ೩,೬೦) ; ಉತ್ತಮ ಜೀವಾತ್ಮರು ಬಂದು ಅಲ್ಲಿ ಜನ್ಮತಾಳುತ್ತಾರೆ. ಆದರೆ ಎಲ್ಲಿ ಕಾಮದ ಸೆಳೆತಕ್ಕೆ ಸೋತು ವರ್ಣಸಂಕರದಿಂದ (ಧರ್ಮಬಾಹಿರ ಕ್ರಮದಿಂದ) ಪ್ರಜೆಗಳು ಜನಿಸುತ್ತಾರೆಯೊ ಆ ರಾಷ್ಟ್ರದ ನಿವಾಸಿಗಳು, ಆದ್ದರಿಂದ ರಾಷ್ಟ್ರವು ಹಾಳಾಗುತ್ತದೆ (ಮನು ೧೦,೬೧). ವ್ಯಭಿಚಾರ ಬೆಳೆಯದಿರಲಿಕ್ಕೆ ಸ್ತ್ರೀಯು ಕೇವಲ ಪತಿಯ ವಶವರ್ತಿ ಯಾಗಿರಬೇಕು ; ಪರಪುರುಷರ ಸಂಪರ್ಕ ತೀರಾ ಮಿತದೊಳಗಿರಬೇಕು ಎಂದು ಶಾಸ್ತ್ರವು ವಿಧಿಸಿದೆ. ಆದರೆ ವಿಜ್ಞಾನವು, ಸ್ತ್ರೀಗೆ ಸ್ವಾತಂತ್ರ್ಯ, ಸಂಪಾದನೆ, ಪರಪುರುಷರ ನಿಕಟ ಸಂಪರ್ಕದ ಜೀವನ, ವ್ಯಭಿಚಾರಕ್ಕೆ ಹೋಟೇಲ್ ಕೋಣೆ ಗಳು, ಗರ್ಭಧಾರಣೆ ಬಾಧೆತಪ್ಪಿಸಲಿಕ್ಕೆ ಮಾತ್ರೆ, ಎಲ್ಲ ಕೊಟ್ಟು ವ್ಯಭಿಚಾರ ವಿಪರೀತ ಬೆಳೆಯುವಂತೆ ಮಾಡಿದೆ. ಪೂರ್ಣಕಾಮಕ್ಕಾಗಿ ನಾಲ್ಕೈದು ಸಾರಿ ಗಂಡನನ್ನು ಬದಲಾಯಿಸುವುದು ಮತ್ತೂ ಮುಂದೆಹೋಗಿ, ಕೇವಲ ಅರೆಸೂಳೆ ಜೀವನ (ಕಾಲ್ ಗರ್ಲ್ಸ್), ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಸ್ಟೆಲ್‌ಗಳಲ್ಲಿ ಜೊತೆಯಾಗಿ ಕೋಣೆಮಾಡಿ ಬಾಳುವುದು, ವಿವಾಹದ ಕಟ್ಟಳೆ ಅನಗತ್ಯವೆಂದು

ಗಂಡಸರು ಹೆಂಗಸರು ಜೊತೆಕೂಡಿ ಜೀವಿಸುವುದು, ಪಡೆದ ಮಕ್ಕಳ ಬಗೆಗೆ ಹೀನತೆಯೇ ನಾಶವಾದುದಲ್ಲ, ಲೋಕವನ್ನು ದುಷ್ಟ ಪಾಪಿಷ್ಠ ಜೀವಾತ್ಮರಿಂದ ತುಂಬಿಸುತ್ತಿದೆ.

ಕಾಮದ ತೃಪ್ತಿಗಾಗಿ ಪತಿಯನ್ನು ಬದಲಾಯಿಸುವ ಅಥವಾ ವಿವಾಹ ಕ್ರಮ ತ್ಯಜಿಸುವ ಅಥವಾ ಅರೆಸೂಳೆ ಜೀವನ ನಡೆಸುವ ಸ್ತ್ರೀಯರಿಗೆ ಅವರ ಮುದಿ ವಯಸ್ಸಲ್ಲಿ ಆಪ್ತರೆಂಬವರೇ ಇಲ್ಲ! ಬಹುಮಟ್ಟಿನವರು ಕೇವಲ ಮದ್ಯ ಲಂಪಟರಾಗಿ ತೀರಾ ಅಲ್ಪತರದ ಜೀವನ ದೂಡುತ್ತಾರೆ. ಮುದಿಪ್ರಾಣಿಗಳು ಎಲ್ಲೋ ಬಿದ್ದು ಸಾಯುವಂತೆ ಸಾಯುತ್ತಾರೆ. ಬ್ರಾಹ್ಮಣ ಯುವಕರಿಗೆ ಪಾಶ್ಚಾತ್ಯರ ಈ ತೀರಾ ಅವನತಿಯ ಪಾಪಿಷ್ಠ ದಾರಿ ಎಷ್ಟಕ್ಕೂ ಬೇಡವಾಗಲಿ. ಅವರು ಧಾರ್ಮಿಕ ಜೀವನದ ಭದ್ರತೆ ಬಿಡದಿರಲಿ.

**ಹೃದಯ ರೋಗ:** ಮನುಷ್ಯ ಕೆಲಸಮಾಡುವ ವೇಗಕ್ಕೆ ಮಿತಿ ಯುಂಟು. ಮತ್ತು ಅವನಿಗೆ ಆಗಾಗ ಕೆಲಸದಿಂದ ವಿಶ್ರಾಂತಿಬೇಕು. ಹಿಂದಿನ ಕಾಲದಲ್ಲಿ ಇದು ಅವನ ದುಡಿಮೆಯ ಆಸೆಗೆ ಒಂದು ಮಿತಿಹಾಕಿತ್ತು. ಆದರೆ ವಿಜ್ಞಾನದ ಕೊಡುಗೆಯಾದ ಯಂತ್ರಗಳು ಅತ್ಯಂತ ವೇಗದಿಂದ ಮತ್ತು ಅವಿಶ್ರಾಂತವಾಗಿ ಚಲಿಸುತ್ತ, ಬೆಲೆಬಾಳುವ ಸಾಮಾನುಗಳನ್ನು ತಯಾರಿಸುತ್ತ, ಬೇಗ ಬೇಗ ಐಶ್ವರ್ಯಬೆಳೆಸುತ್ತಲೇ ಹೋಗುವುದು ಸಾಧ್ಯಮಾಡಿವೆ. ಹಣದ ಆಸೆ ವಿಪರೀತ ಬೆಳೆಸಿವೆ. ಒಬ್ಬ ಒಂದು ಕಾರ್ಖಾನೆ ನಿರ್ಮಿಸಿ ನಿರೀಕ್ಷೆಗಿಂತ ಹೆಚ್ಚು ಹಣಕೂಡಿಸಿದವ, ಹಣದ ಪಿಶಾಚದ ಕೈಗೆ ಸಿಕ್ಕಿದವನಂತೆ ಅನಿವಾರ್ಯ ವಾಗಿ ಅದರ ವಿಸ್ತಾರ, ಆಮೇಲೆ ಎರಡನೆ ಕಾರ್ಖಾನೆ, ಮೂರನೆಯದು, ಎಂದು ಆ ಶ್ರಮದಲ್ಲಿ ಮುಳುಗಿ ಬಿಡುತ್ತಾನೆ. ಕಚ್ಚಾಸಾಮಾನಿಗೆ ತಿರುಗಾಟ, ತಯಾರಿಸಿದ ಸಾಮಾನುಗಳ ಮಾರಾಟಕ್ಕೆ ಅಲೆದಾಟ, ಅನೇಕವೇಳೆ ಬರಬೇಕಾದ ಹಣಕ್ಕೂ ತೆರಬೇಕಾದ ಹಣಕ್ಕೂ ಹೊಂದಿಕೆ ತಪ್ಪಿ ಬ್ಯಾಂಕಿನ ಸಾಲದ ಪೇಚಾಟ, ಸರ್ಕಾರಿ ಅಧಿಕಾರಿಗಳಿಗೆ ಸಲಾಮು ಹಾಕುತ್ತಿರಬೇಕಾದುದು, ಲಂಚ ತೆರುತ್ತಿರ ಬೇಕಾದುದು, ಕೆಲಸದವರ ಮುಗಿಯದ ಅತೃಪ್ತಿ, ಉದ್ಧಟತನ, ಅವನ ತಲೆ ತುಂಬಿಕೊಂಡೇ ಇರುತ್ತವೆ. ಅವ ಬ್ರಾಹ್ಮಣನಾದರೆ ಜಪ ಪೂಜೆಗಳ ಕಾಲ ದಲ್ಲೂ ಚಿಂತನೆ ಅಂದಿನ ಈ ಸಮಸ್ಯೆಗಳು ಮಾತ್ರ. ಜಪಪೂಜೆ ಚುಟುಕಾಗುತ್ತ ಬರುತ್ತವೆ. ಮುಂಚೆ ತಿರುಗಾಟ ಕಾಲದಲ್ಲಿ, ಆಮೇಲೆ ಖಾಯಂ ಆಗಿ, ನಿಂತೇ ಹೋಗುತ್ತವೆ. ಮತ್ತೂ ಮತ್ತೂ ಐಶ್ವರ್ಯಬೆಳೆಸುವ ಸಾಧ್ಯತೆ ಕಣ್ಣಮುಂದೆ ಕುಣಿಯುತ್ತ ಎಂಥ ಶ್ರಮದ ಒತ್ತಡಗಳನ್ನೂ ಎದುರಿಸುವಂತೆ ಮಾಡಿ ಈ

ಅವಿಶ್ರಾಂತ ಯೋಜನೆಗಳು ಮತ್ತೂ ಬೆಳೆಯುತ್ತಿರುವಂತೆಯೇ ಫಕ್ಕನೆ ಹೃದಯರೋಗದಿಂದ ಒಂದುಬಾರಿ ಕೂಡ ರಾಮ ಎಂದು ದೇವರ ಹೆಸರನ್ನು ಹೇಳದೆ, ಮರಣ ಹೊಂದುತ್ತಾನೆ ; ದೇವರು ಕೊಟ್ಟ ಪೂರ್ಣ ಆಯುಷ್ಯದ ಅರ್ಧದಲ್ಲೆ ! ಅವನಿಗೆ ಸ್ವಲ್ಪ ಏನಾದರೂ ಉತ್ತಮ ಧಾರ್ಮಿಕ ಕಾರ್ಯ ಮಾಡುವ ಯೋಚನೆ ಇತ್ತು. ಆದರೆ ಹೊಸಕಾರ್ಖಾನೆಯ ಗರ್ಜಿಂದ ಮುಂದೆ ಹಾಕಲೇಬೇಕಾಯಿತು ! ಮಾತ್ರವಲ್ಲ ಹೀಗೆಲ್ಲ ಕೂಡಿ ಹಾಕಿದ ಹಣ ಏಕೆ ಎಂದು ಯೋಚಿಸಲಿಕ್ಕೂ ಅವನಿಗೆ ಸಮಯವಿರಲಿಲ್ಲ. ತನ್ನಧರ್ಮ ಪಾಲಿಸದ್ದು ದಾನ ಧರ್ಮ ಮಾಡದ್ದು ಬೇರೆ, ಸಾಯುವಾಗಲಾದರೂ ದೇವರ ಸ್ಮರಣೆ ಮಾಡದ್ದು ಬೇರೆ, ಆಗ ದೇವರನಾಮ ಕೇಳದ್ದು ಬೇರೆ. ಮಕ್ಕಳಿಗೆ ತಂದೆಯ ಶ್ರಮದ ವಿಚಾರವೇಬೇಡ, ತಿಳಿಯದು. ಆದರೆ ಅವರಿಗೆ ಹಣ ಧಾರಾಳ ಇದೆ, ಅದೆಲ್ಲ ತಮ್ಮದೇ ಅಲ್ಲವೇ ಎಂಬ ಭಾವನೆ ಮಾತ್ರ ; ದುಂದುಗಾರಿಕೆಯ ಮಿತ್ರರು, ಅವರ ದುರಭ್ಯಾಸಗಳು ಮಾತ್ರ. ಆದ್ದರಿಂದ ಜಪ ಬೇಡದ, ಹೊಲಸು ಅಭ್ಯಾಸಗಳು ಇರುವ ಅವರು ತಂದೆಯ ಅಂತಿಮಕ್ರಿಯೆ ಮಾಡಿದರೂ ಅದು ವ್ಯರ್ಥವೇ. ಎಂದರೆ ಹಣದಮದಕ್ಕೆ ತಂದೆ ತಾನೇ ಕಾರಣ ಕೊಟ್ಟು ಅವರನ್ನು ಹಾಳುಮಾಡಿದಂತಾಯಿತು !

ಹೃದಯರೋಗ ಕೇವಲ ಈ ಕಾಲದ್ದು ; ವಿಪರೀತ ಹೆಚ್ಚುತ್ತಿದೆ. ವಿಜ್ಞಾನವು ಪ್ಲೇಗು, ಸಿಡುಬು ಎಂಬ ಭಯಂಕರ ರೋಗಗಳನ್ನು ನಾಶಮಾಡಿದ ಹೆಗ್ಗಳಿಕೆಯದು, ಆದರೆ ಆ ರೋಗಗಳಿಂದ ಜೀವದಲ್ಲಿದ್ದಾಗ ಕೆಲವು ದಿನದ ಕಷ್ಟಮಾತ್ರವಾದರೆ, ವಿಜ್ಞಾನ ಬೆಳೆಸಿದ ಹಣದ ವಿಪರೀತ ತೃಷೆಯ ರೋಗದಿಂದ ಮರಣದಆಚೆಯಲ್ಲಿ ಜೀವಾತ್ಮನಿಗೆ ಅತಿದೀರ್ಘ ಕಾಲದ ಕಷ್ಟ, ಆಮೇಲೆ ಹಾಳುಜನ್ಮ ಬಾರದಿರದು. ವಿಜ್ಞಾನ ಕೊಡುವ ಪಾಪತುಂಬಿದ ಬಂಧ್ಗೆ ತಾನು ಹಿಡಿದ ದಾರಿಯ ಭಯಂಕರ ಅಪಾಯವೇ ತೋರದು !

**ಮನೋರೋಗಗಳು :** ಪಾಶ್ಚಾತ್ಯರು ದಿನವನ್ನು ಒಂದು ನಿಮಿಷವೂ ಬಿಡದೆ ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಂಡು ಗಡಿಯಾರದ ದಾಸರಂತೆ ಕೆಲಸಮಾಡುತ್ತಾರೆ. ಹೊಸ ಮದ್ದು, ಹೊಸ ಇಂಜಿನ್ನು, ಹೊಸ ತರದ ಬಟ್ಟೆ ಮುಂತಾದವನ್ನು ನಿರ್ಮಿಸುವವರೆಗೆ ಬಿಡುವಿಲ್ಲ. ಆಮೇಲೂ ಅವನ್ನು ಉತ್ತಮ ಮಾಡುವುದರಲ್ಲಿ ಸರ್ವಪ್ರಯತ್ನ. ವೈದ್ಯಭಾಗ ಎಷ್ಟೆಲ್ಲ ಬೆಳೆಸಿದ್ದಾರೆಂದರೆ, ಕಣ್ಣು ಡಾಕ್ಟರರು, ಕಿವಿ ಡಾಕ್ಟರರು, ಹೃದಯದ ಡಾಕ್ಟರರು ಮುಂತಾಗಿ, ಆ ವಿಪರೀತ ಬೆಳೆದ ಜ್ಞಾನಭಾಗ ಹಂಚಿಕೊಂಡಿದ್ದಾರೆ. ಅದರ

ಪ್ರತಿಭಾಗದಲ್ಲೂ ಹೊಸಜ್ಞಾನ ಹೊಸಕ್ರಮಗಳು ಬೆಳೆಯುತ್ತಿವೆ. ಇಂದಿನ ಅಪಾರ ಸಂಖ್ಯೆಯ ಮದ್ದುಗಳ ಹೆಸರುಗಳನ್ನು ನೆನಪಿಡುವುದು, ಅವುಗಳ ಉಪಯೋಗ ತಿಳಿದಿರುವುದು, ಅಗತ್ಯ ಬೇಕಾಗುತ್ತದೆ. ಅಂತೆಯೇ ಇಂಜಿನ್ನುಗಳ ಭಾಗಗಳಿಗೆ, ಅವುಗಳ ಹೆಸರುಗಳಿಗೆ ತುದಿಬುಡ ಇಲ್ಲ. ನ್ಯಾಯವಾದಿಗಳು ಕಲಿಯಬೇಕಾದ ಕಾನೂನುಗಳಿಗೆ, ತಿದ್ದುಪಡಿಗಳಿಗೆ, ಹಲವಾರು ಮೇಲ್ತರದ ಕೋರ್ಟುಗಳ ತೀರ್ಮಾನಗಳ ವರದಿಗಳಿಗೆ ಲಕ್ಷ್ಯಕೊಡಲೇಬೇಕು. ಅಂಗಡಿಯವರು ದಾಸ್ತಾನು ಮಾಡಬೇಕಾದ ಪುಸ್ತಕಗಳ ವಿವಿಧ ಹೆಸರುಗಳಿಗೆ, ಬಟ್ಟೆಗಳ ವೈವಿಧ್ಯಕ್ಕೆ, ಮೊಳೆ ಸ್ಕ್ರೂ ಮುಂತಾದವುಗಳ ವಿವಿಧ ಅಳತೆಯವಕ್ಕೆ, ಮಿತಿಯಿಲ್ಲ. ಅವು ಅಂಗಡಿಯಲ್ಲಿ ಎಲ್ಲಿವೆ, ತತ್ಕಾಲದ ಕ್ರಯ ಏನು, ಎಲ್ಲ ತಿಳಿದಿರಬೇಕು. ಆದ್ದರಿಂದ ಈ ಕಾಲದ ತರತರದ ವೃತ್ತಿಗಳಿಂದ ಜನರ ಮೆದುಳಿಗೆ ಅವರು ತಿಳಿಯದೆಯೇ ಆಗುವ ತ್ರಾಸ ವಿಪರೀತ; ಅದರ ನಾಶದ ಹತ್ತಿರಕ್ಕೆ ನೂಕುತ್ತಿದೆ ಎಂದು UNESCOದ ಒಂದು ಪ್ರಕಟಣೆಯಲ್ಲಿ ತಿಳಿಸಿತ್ತು.

ಒಂದು ಸಂಸ್ಥೆಯ ಮುಖ್ಯಸ್ಥನ ಮೇಜಿನ ಮೇಲೆ ಮೂರು ಟೆಲಿಫೋನುಗಳು; ಒಂದು ಕಾರ್ಖಾನೆಗೆ, ಮತ್ತೊಂದು ಆಫೀಸಿನ ಸಿಬ್ಬಂದಿ ಭಾಗಕ್ಕೆ, ಮೂರನೆಯದು ಹೊರಗಿನವರಿಗೆ. ಅಲ್ಲದೆ ರಾಶಿರಾಶಿ ಟಪಾಲು, ನೇರವಾಗಿ ಮಾತಾಡಲುಬರುವ ಗಿರಾಕಿಗಳು, ಟೆಲಿಫೋನಲ್ಲಿ ಮಾತಾಡುವವರು, ಅಧಿಕಾರಿ ಎಷ್ಟೆಲ್ಲಜನರಿಗೆ ತರತರದ ಪ್ರಶ್ನೆಗಳಿಗೆ ಪರಿಹಾರ ಹೇಳುತ್ತಿರಬೇಕು! ಹೆಚ್ಚಿನವು ಸುಲಭವೇ, ಆದರೆ ಕೆಲವು, ಹಣದ ಅಡಚಣೆ, ಕಾರ್ಮಿಕರ ಅಸಮಾಧಾನ, ಇತರರ ಸ್ಪರ್ಧೆಗಳ ಪರಿಣಾಮ, ಬದಲಾಗುತ್ತಿರುವ ಕಾಲದ ತೊಡಕುಗಳು, ಮುಂತಾದ ಸಮಸ್ಯೆಗಳು ಮೆದುಳಿಗೆ ಅಂಟಿಕೊಂಡು ಕಾಡುತ್ತಲೇ ಇರುತ್ತವೆ. ಆಫೀಸು ಬಿಟ್ಟು ಮನೆಗೆ ವಿಶ್ರಾಂತಿಗೆಂದು ಹೋದರೂ ಮೆದುಳ ಚಕ್ರ ತಿರುಗುತ್ತಿರುತ್ತದೆ. ಸಾಲದಕ್ಕೆ ಮನೆಯಲ್ಲಾದರೂ ಯಾವಾಗಲೂ ಶಾಂತಿ ಅಸಾಧ್ಯ. ೪ನೆ ಸಲ ಬದಲಾಯಿಸಿದ ಪತ್ನಿಗೆ ಕೇವಲತನ್ನ ಸ್ವಾರ್ಥಸುಖ ಮಾತ್ರ ಸ್ವಭಾವ. ಅವಳೂ ಈ ಗಂಡನನ್ನು ಬಿಟ್ಟುಹೊರಡಲಿಕ್ಕಿದ್ದರೆ ಆ ಮುಂಚೆ ವ್ಯಂಗ್ಯಮಾತು, ಒರಟುತನ, ಆರಂಭವಾಗಿರುತ್ತದೆ (ಅಮೇರಿಕದ ಕೊಲೆಗಳಲ್ಲಿ ೧೦೦ ರಲ್ಲಿ ೨೭ ಗಂಡಹೆಂಡಿರಲ್ಲಿ!). ಅಂತೂ ಮಲಗಿದಮೇಲೂ ಮನಸ್ಸಿನ ಅಶಾಂತತೆ ನಿಲ್ಲದೆ, ಹಾಸಿಗೆಯಲ್ಲಿ ಹೊರಳಿಹೊರಳಿ ಆಮೇಲೆ ನಿದ್ರೆಮಾತ್ರೆನುಂಗಿ ಕೃತಕನಿದ್ರೆಮಾಡಿ ಮರುದಿನ ಪುನಃ ಆಫೀಸಿನ ಹೋರಾಟ ಆರಂಭಿಸುತ್ತಾನೆ. ಕ್ರಮೇಣ ಥಕ್ಕನೆ ಮನೋರೋಗ ಉಂಟಾಗುತ್ತದೆ. ಸಂಯುಕ್ತ ಅಮೇರಿಕದಲ್ಲಿ ಸುಮಾರು

೨೦ ವರ್ಷಗಳ ಮುಂಚೆಯೇ ದಿನನಿತ್ಯ ೨೦ ಮಿಲಿಯು ನಿದ್ರೆ ಮಾತ್ರೆ ನುಂಗುತ್ತಿದ್ದರು. ಇತ್ತಲಾಗಿನ ವಾರ್ತೆಯಂತೆ ಇಂಗ್ಲೆಂಡಲ್ಲಿ ಈಗ ಆ ದಾಮಾಶೆಗಿಂತ ಹೆಚ್ಚು ಮಾತ್ರೆ ಖರ್ಚಾಗುತ್ತಿದೆ. ಪರಿಣಾಮ ಈ ದೇಶಗಳ ಅರ್ಧಪಾಲು ಆಸ್ಪತ್ರೆ ಹಾಸಿಗೆಗಳಲ್ಲಿ ಮನೋರೋಗಿಗಳೆಂಬ ಹೊಸರೋಗದವರು ಇದ್ದಾರೆ. ಜೀವನಕಾಲದಲ್ಲಿ ಹತ್ತರಲ್ಲೊಬ್ಬ ಈಗ ಅದಕ್ಕೆ ಬಲಿ ಬೀಳುತ್ತಿದ್ದಾನೆ. ವಿಜ್ಞಾನವು ಬೆಳೆಯುತ್ತಿರುವ ತೀವ್ರತೆಯಲ್ಲಿ ಇನ್ನು ೫೦-೧೦೦ ವರ್ಷಗಳಲ್ಲಿ ಪ್ರಾಯಶಃ ಮನೆಗೊಬ್ಬ ಆ ಮನೋರೋಗದವನಿರಬಹುದು. ವಿಜ್ಞಾನ ಜನರಿಗೆ ಕಾರು, ರೇಡಿಯೋ ಟೆಲಿಫೋನು, ಮನೆ, ಬ್ಯಾಂಕು ಹಣ, ಎಲ್ಲ ಕೊಡಲಾಪುದು. ಆದರೆ ಅದು ಅವನಿಗೆ ಹುಚ್ಚು ಹಿಡಿದಿರದಿದ್ದರೆ ಮಾತ್ರ! ಹುಚ್ಚು ಹಿಡಿದವರಿಗೆ ತನ್ನದೇ ಇವು ಧಾರಾಳ ಇದ್ದರೂ ಅವನ ಭಾವನೆ ಅವನದ್ದಲ್ಲವೆಂದೇ ಅಲ್ಲವೇ? ಹಿಂದೆ ಹೇಳಿದ ಫಕ್ಕನೆ ಸಾಯುವ ರೋಗಕ್ಕಿಂತ ಇದು ಮತ್ತೂ ಪಾಪಿಷ್ಠತರದ್ದು. ಆದರೆ ಇವಕ್ಕೆ ಕಣ್ಣು ತೆರೆಯದೆಯೇ ವಿಜ್ಞಾನದ ತೀವ್ರತೆ ಬೆಳೆಸುತ್ತಿದ್ದಾರೆ! ಏಕೆ ಹೀಗಾಗುತ್ತದೆ, ಇದು ಸಮಾಜಕ್ಕೆ ಸುಖಕ್ಕಿಂತ ಹೆಚ್ಚು ಕಷ್ಟತಾರದೇ, ಎಂಬ ಯೋಚನೆಗೆ ಸಮಯವೇ ಇಲ್ಲ. ನಮ್ಮಲ್ಲಿ ಬ್ರಾಹ್ಮಣರು ಅನೇಕ ವೇಳೆ ಶಾಂತಿಃ ಶಾಂತಿಃ ಶಾಂತಿಃ ಪಠಿಸುತ್ತಾರೆ. ಅವರಾದರೂ ವಿಜ್ಞಾನದ ಭೋಗಗಳ ಈ ವಿಪರೀತ ತರದ ಪಾಪಿಷ್ಠ ಕರೆಗೆ ಲಕ್ಷ್ಯಕೊಡದೆ ತುಷ್ಟಿ ಶಾಂತಿ ಬಿಡದೆ ಅಭ್ಯಸಿಸಿ ಬಾಳಿನ ಸಾರ್ಥಕತೆ ನಡೆಸಲಿ. ಕಣ್ಣು ತೆರೆದೇ ದೇವರು ಪ್ರಕೃತಿದೇವಿ ದಿಕ್ಪಾಲಕರ ಶಾಪಕ್ಕೆ ನುಗ್ಗದಿರಲಿ.

**ಮದ್ಯದ ಅಮಲ ದಾಸರು:** ಆತ್ಮಶಕ್ತಿ ಬೆಳೆಸುವವ ದೇಹದ ಹತೋಟಿ ಬೆಳೆಸುತ್ತ, ಅದನ್ನು ಸಾತ್ವಿಕ ಧಾರ್ಮಿಕ ಸಾಧನೆಗಳಿಗೆ ಹಾಕುತ್ತ ಮೇಲಕ್ಕೆ ದೈವತ್ವಕ್ಕೆ ಏರುತ್ತ ಹೋಗುತ್ತಾನೆ. ತದ್ವಿರುದ್ಧವಾಗಿ ದೇಹವೇ ಮುಖ್ಯವೆಂದು ಅದರ ಸೆಳೆತದಂತೆ ಕುಣಿಯುವವ ಅದರ ಸೆಳೆತಕ್ಕೆ ಬಲಿ ಬೀಳುತ್ತ ಅದರ ತೀರಾ ತಾಮಸಿಕ ಜಡತ್ವಕ್ಕೆ ತನ್ನನ್ನು ಇಳಿಸಿಕೊಳ್ಳುತ್ತಾನೆ; ದೇಹಕ್ಕೇ ಆರಿಸಲುಬಿಟ್ಟರೆ ಅದು ಪ್ರಯೋಜನ ಬೀಳುವ ರಾಜಸಿಕಚಟುವಟಿಕೆ ಕೂಡ ಬಯಸುವುದಿಲ್ಲ, ಅದಕ್ಕೆ ಬೇಕಾದುದು ಕೇವಲ ವಿನೋದತರುವ ಆಟ, ತಿರುಗಾಟ, ಕುಣಿತ, ಗಾಯನ ಮುಂತಾದವು ಮಾತ್ರ. ಅವಕ್ಕೆ ಜನರು ಸಮಯ ಹಾಕುವುದು ಕೆಳಮಟ್ಟದ ರಾಜಸಿಕತೆ, ಜಡದೇಹದ ಮತ್ತೂ ಹೆಚ್ಚಿನ ಸಾಮಾನ್ಯ ಬಯಕೆ, ಕುಳಿತು ಇತರರ ಆಟ ಕುಣಿತ ನೋಡುವುದು ಮಾತ್ರ,

ಆದುದು ಕೇವಲ ತಮೋಗುಣ. ನಮ್ಮ ಶಾಸ್ತ್ರವು ಜೀವನದ ಸದುಪಯೋಗಕ್ಕಾಗಿ ಈ ತರದ ದೇಹದ ಆಕರ್ಷಣೆಯನ್ನು ಸಾತ್ವಿಕ ಮಾಡಲಿಕ್ಕೆ ಆಟ, ಗಾಯನ, ನಾಟಕ, ಕುಣಿತಗಳನ್ನು ವಿನೋದ ಕೊಡುವುದರೊಡನೆ ಧರ್ಮಪ್ರಚಾರ ಕಾರ್ಯಕ್ಕೆ-ಆಟ, ನಾಟಕ, ಸಂಗೀತ, ನೃತ್ಯ ಪ್ರತಿಯೊಂದನ್ನೂ ಉಪಯೋಗಿಸಿ ಜನರನ್ನು ದೇಹದ ಸುಖ ಹೆಚ್ಚಿಸಲಿಕ್ಕಲ್ಲ, ಆತ್ಮದ ಹಿರಿಮೆ ಪ್ರೇರಿಸಲಿಕ್ಕೆ ವಿನಿಯೋಗಿಸಿ ಸಫಲವಾಗಿತ್ತು. ಈ ಶ್ರೇಷ್ಠ ಗುರಿಯ ಕಲ್ಪನೆಯೇ ಇಲ್ಲದ ವಿಜ್ಞಾನವು ಈ ಬಯಕೆಯನ್ನು ಕ್ರಿಕೆಟ್ ಮುಂತಾದ ಕೇವಲ ದೇಹದ ಕುಶಲತೆಯ ಆಟಗಳ ಪ್ರೇಕ್ಷಣೆಗಳಿಗೆ ಮಾತ್ರ ಹಾಕಿದೆ. ಆದರೆ ಆಗಲೂ ಮತ್ತಷ್ಟು ದೇಹದಪೂಜೆಗೆ ಉತ್ತೇಜಕಗಳಾದ ಕಾಫಿ, ಟೀ, ಸಿಗರೇಟು ಎಲ್ಲೆಲ್ಲಿಂದೆಲ್ಲ ಕೊಡುತ್ತಿದೆ. ಕೇವಲ ನೋಡಲಿಕ್ಕೆ ಕೇಳಲಿಕ್ಕೆ ಇರುವ ಸಿನೆಮಾ ಕಾಮುಕತೆ ಕೆರಳಿಸುವ ಧಾರಾಳ ಹೊಲಸೂ ಪ್ರೇರಿಸಲು ಸಹಾಯ ಮಾಡಿದೆ. ಮತ್ತೂ ತಾಮಸಿಕವಾಗಿ ಮದ್ಯದ ಸೇವನೆಯ ಪ್ರಚಾರ ಬಹಳ ನಡೆದಿದೆ. ಮುಂಚಿನ ಕಾಲದಲ್ಲಿ ಇದಕ್ಕೆ ಕಳ್ಳು, ಅಫೀಮು ಸಾಕಿತ್ತು. ವಿಜ್ಞಾನ ಕಾಲದ ದೇಹಕ್ಕೆ ಇನ್ನೂ ಬಲವಾದ ಅಮಲನ್ನುಂಟುಮಾಡುವ ಮದ್ಯಗಳು ಅಫೀಮಿನ ಅತಿ ಶಕ್ತಿವಂತ ಸತ್ವಗಳೂ ಎಲ್ಲೆಲ್ಲಿಂದೆಲ್ಲ ಬರುತ್ತವೆ. ಅವುಗಳು ಉಂಟು ಮಾಡುವ ಒಂದುಮಟ್ಟದ ಉತ್ತೇಜಕ ಸ್ಥಿತಿ ದೇಹಕ್ಕೆ ಬುದ್ಧಿಯ ಕಟ್ಟು ಪೂರ್ಣಬಿಡಿಸಿ ಜೀವನದ ಸಮಸ್ಯೆಗಳ ಚಿಂತನೆ ಮರೆಸಿ, ಸುಖ ಕೊಡುತ್ತದೆ. ಆದರೆ ಆ ಸುಖದ ಸ್ಥಿತಿಯಲ್ಲೇ ಇರುವಂತಿಲ್ಲ. ದೇಹಕ್ಕಿರುವ ಆ ಅಮಲು ಪದಾರ್ಥಗಳ ಸೆಳೆತ ಅದಕ್ಕೆ ಬಿಡದು. ಮದ್ಯವನ್ನು ಮತ್ತುಷ್ಟು ಸೇವಿಸಿದಾಗ ಸ್ಮೃತಿಯೇ ಇಲ್ಲದೆ ಭೋಗದ ಮಟ್ಟ ಅಲ್ಲ, ತೀರಾ ಹೊಲಸು ಜಡಮಟ್ಟದ ಕನಿಷ್ಠ ತಾಮಸಿಕ ಸ್ಥಿತಿ ಮುಟ್ಟುತ್ತಾನೆ ಮನುಷ್ಯ. ಮದ್ಯದ ಸೆಳೆತ ಮನುಷ್ಯನ ಮರ್ಯಾದಾಕ್ರಮ, ಧರ್ಮದ ಭಾವನೆ, ಎಲ್ಲ ನಾಶಮಾಡುತ್ತದೆ. ಬುದ್ಧಿಯ ಕಟ್ಟು ಸಂಪೂರ್ಣಸಡಿಲಾಗಿ ಅವನಲ್ಲಿ ಕ್ರೂರತೆದುಷ್ಟತನ, ಕಾಮದ ಬಯಕೆ, ದುರಾಸೆ ಎದ್ದು ಬರುವಂತೆ ಮಾಡುತ್ತದೆ. ಅವನನ್ನು ಅಲ್ಪತೆಗೆ ಮಾತ್ರ ಅಲ್ಲ ಅತ್ಯಂತ ಕೆಟ್ಟಮಟ್ಟಕ್ಕೆ ನೂಕುತ್ತದೆ.

ವಿಜ್ಞಾನದ ಗುರಿಯೇ ಧರ್ಮಕ್ಕೆ ವಿರುದ್ಧವಾದ ದೇಹದ ಸೆಳೆತ ಬೆಳೆಸುವುದಾದ್ದರಿಂದ ವಿಜ್ಞಾನ ಬೆಳೆದಿದೆ. ಮುಂಚೆ ಎಂದೂ ಇಲ್ಲದಿದ್ದ ಮಟ್ಟದಲ್ಲಿ ಅದರ ಭಯಂಕರ ಹಾವಳಿ ಹೆಚ್ಚುತ್ತಿದೆ. ವಿಜ್ಞಾನದಿಂದಾಗಿ ೧) ಸೆಕ್ಯುಲರ್ ಭಾವನೆ ಬೆಳೆದು ದೇವರ ಭಯ ಪಾಪದ ಭಯಗಳ ನಾಶ

ಬೆಳೆದು ಧಾರ್ಮಿಕ ಶಿಸ್ತು ಸಡಿಲಾಗುತ್ತ ಬಂದಿದೆ. ೨) ವಿಜ್ಞಾನ ಉಂಟು ಮಾಡುವ ವಿಪರೀತ ಐಶ್ವರ್ಯದಿಂದಾಗಿ ನಗದು ಹಣದ ಅನುಕೂಲತೆ ಬಹಳ ಹೆಚ್ಚಿದ್ದು, ಉತ್ತೇಜಕಗಳ ಮಾರಾಟ ವಿಪರೀತ ಬೆಳೆದಿದೆ. ೩) ಆರಂಭಕ್ಕೆ ಕಾಫಿ, ಟೀ ಬೀಡಿ ಸಿಗರೇಟು ಉತ್ತೇಜಕಗಳು ಸರ್ವತ್ರ ಒಪ್ಪಲ್ಪಟ್ಟು ಹೆಚ್ಚು ಹೆಚ್ಚು ಸೇವಿಸುವ ಅಭ್ಯಾಸ ನಡೆಯುತ್ತಿದೆ. ಆದರೆ ಆಮೇಲೆ ಅವು ಬೊಡ್ಡು ಕಟ್ಟಿ ಬೇಕಾದಷ್ಟು ಉತ್ತೇಜನ ಕೊಡದೆ ಜನರು ಮದ್ಯದ ಸೇವನೆ ಸೇರಿಸಿ ಕೊಳ್ಳಬೇಕಾಗುತ್ತದೆ. ಸೆಕ್ಯುಲರ್ ದೇಶದಲ್ಲಿ ಮದ್ಯದ ಸೇವನೆ ಅಧಾರ್ಮಿಕ ಎಂಬ ಭಾವನೆಯೇ ಇಲ್ಲ. ಅದೊಂದು ದುಷ್ಟತನ ಪ್ರೇರಿಸುವ, ಕುಟುಂಬ ನಾಶಮಾಡುವ, ಕ್ರೂರತೆ ಬೆಳೆಸುವ, ವಾಹನಗಳ ಅಪಘಾತಗಳಿಗೆ ಕಾರಣ ವಾಗುವ, ಕಾರ್ಖಾನೆಗಳಲ್ಲಿ ಕೆಲಸದವರು ಸಾಮಾನು ಹಾಳುಮಾಡುವ ಭಯಂಕರ ರಾಕ್ಷಸನಾಗಿ ಬೆಳೆದಿದೆ. ವಿಷ ರೂಪದ ಅದು ದೇಶದ ಹಣ ವ್ಯರ್ಥ ಮಾಡುವುದಲ್ಲದೆ, ಕುಡಿಯುವವರ ಆರೋಗ್ಯ ಕೆಡಿಸಿ ಆಸ್ಪತ್ರೆಗಳ ಮೂಲಕವೂ ಅವರ ಆರೈಕೆಗೆಂದು ಸರಕಾರಕ್ಕೆ ಭಯಂಕರ ಖರ್ಚು ಉಂಟು ಮಾಡಿದೆ. ವಿಜ್ಞಾನದ ದೇಹದ ಪೂಜೆ ಬೆಳೆದ ಮಟ್ಟದಲ್ಲೇ ಈ ಹಾವಳಿ ಗಳು ಹೆಚ್ಚುತ್ತಲೇ ಬಂದಿವೆ.

ಈ ಭಾಗದಲ್ಲಿ ೧೯೮೦ ರಲ್ಲಿ ರೀಡರ್ಸ್ ಡೈಜೆಸ್ಟ್‌ನಲ್ಲಿ ಬಂದ World Health Organization ನ್ನಿನ ವರದಿಯ ಸಾರಾಂಶ ನೋಡಿರಿ. ಇಂಗ್ಲೆಂಡಿ ನಲ್ಲಿ ಮದ್ಯದ ಹಾನಿಯಿಂದ ಆಸ್ಪತ್ರೆ ಸೇರಿದವರ ಸಂಖ್ಯೆ ೨೫ ವರ್ಷಗಳಲ್ಲಿ ೨೦ ಪಾಲು ಹೆಚ್ಚಿದೆ! ಹೊಂಡುರಸ್ಸಲ್ಲಿ ಊರ ಜನರಲ್ಲಿ ೬೫ ಶತಾಂಶದವರು ವಿಪರೀತ ಕುಡಿತ ಅಥವಾ ಮದ್ಯಲಂಪಟತನದಿಂದ ಹಾನಿ ಹೊಂದುತ್ತಿರುವರು. ಸಂಯುಕ್ತ ಅಮೇರಿಕದಲ್ಲಿ ವಿಪರೀತ ಮದ್ಯದ ಸೇವನೆಯಿಂದಾಗಿ ವರ್ಷಕ್ಕೆ ಮದ್ಯದ ಖರ್ಚು, ಅದರಿಂದಾಗುವ ದೇಹದ, ಮಾನಸಿಕ ಅನಾರೋಗ್ಯದ ಚಿಕಿತ್ಸೆಗೆ ಖರ್ಚು ರೂ. ೩೪,೦೦೦ ಕೋಟಿ ಎಂದು ಅಂದಾಜು ಮಾಡಲ್ಪಟ್ಟಿದೆ. ಹೀಗೆಲ್ಲ ಹೆಚ್ಚುತ್ತಿರುವ ಸಮಾಜದ ಮೇಲಿನ ಹಾವಳಿ ತಡೆಗಟ್ಟದಿದ್ದರೆ ಈ ಮದ್ಯಲಂಪಟತನವು ಕೆಲವು ದೇಶಗಳನ್ನು ನಾಶಮಾಡದಿರದು ಎಂದೂ ಈ ಸಂಸ್ಥೆಯು ತನ್ನ ಅಭಿಪ್ರಾಯ ತಿಳಿಸಿದೆ.

ಕರ್ನಾಟಕ ಸರ್ಕಾರದ ವಾರ್ಷಿಕ ಅಬ್ಕಾರೀ ಆದಾಯ ಈಗ ರೂ. ೮೦ ಕೋಟಿಗೂ ಹೆಚ್ಚಿದೆ! ಎಂದರೆ ಅಧಿಕೃತ ಮದ್ಯದ ಅಂಗಡಿಗಳಲ್ಲಿ ಮದ್ಯದ ಮಾರಾಟ ರೂ. ೮೦೦ ಕೋಟಿ ಇರಬೇಕು. ಕಳ್ಳಭಟ್ಟಿಯವರ ಮಾರಾಟ

ಇದರ ಕಾಲು ಪಾಲಾದರೂ ಇರಬಹುದು. ಎಂದರೆ ನಮ್ಮ ದೊಡ್ಡದಲ್ಲದ ಕರ್ನಾಟಕ ರಾಜ್ಯದಲ್ಲೇ ವರ್ಷಕ್ಕೆ ೧,೦೦೦ ಕೋಟಿ ರೂ. ಮದ್ಯವೂ ಸ್ವಲ್ಪವೂ ಪ್ರಯೋಜನಕ್ಕೆ ಬಾರದ ಮತ್ತು ಆರೋಗ್ಯ ಬುದ್ಧಿ ಕೆಡಿಸುವ, ಬಡಸ್ತಿಕೆ ನಾಶ ಅಸಾಧ್ಯ ಮಾಡುವ ದಾರಿಯಲ್ಲಿ ಬೆಳೆಯುತ್ತ ಬರಲಿಕ್ಕೆ ನಮ್ಮ ಮುಖಂಡರು ಬಿಟ್ಟಿದ್ದಾರೆ! ಬ್ರಿಟಿಷರ ಕಾಲಕ್ಕೂ ಮುಂಚೆ ನಮ್ಮ ಧಾರ್ಮಿಕ ದೇಶದಲ್ಲಿ ಮದ್ಯದ ಸೇವನೆ ಭೂಲೋಕದಲ್ಲಿಯೇ ಅತಿ ಕೆಳಮಟ್ಟಕ್ಕೆ ಇಳಿದ್ದಿತ್ತು. ಬ್ರಿಟಿಷರು ಅಬ್ಕಾರಿ ಕಂದಾಯದ ಲಾಭಕ್ಕಾಗಿ ಅದನ್ನು ಪುನಃ ಹೆಚ್ಚು ಪ್ರಚಾರಕ್ಕೆ ತಂದರು. ಆದರೂ ದೇಶವು ಧಾರ್ಮಿಕತರದ್ದಾಗಿದ್ದುದರಿಂದ, ಹಣವು ಧಾರಾಳವಾಗಿ ಬ್ರಿಟನ್ನಿಗೆ ಹೋಗಿ ಬಡಸ್ತಿಕೆ ಬೆಳೆಯುತ್ತಿದ್ದುದರಿಂದ ಮದ್ಯದ ಸೇವನೆ ಬಹಳ ಹೆಚ್ಚಲಿಲ್ಲ. ಆದರೆ ಆಮೇಲೆ ಬಂದ ಧರ್ಮ ಬೇಡವಾದ ಸೆಕ್ಯುಲರ್ ಸರ್ಕಾರ, ಹಣ ದೇಶದಲ್ಲೇ ಚಲಾವಣೆಯಾಗುವುದು, ಈಗಳಿನ ಭಯಂಕರ ಪರಿಸ್ಥಿತಿಗೆ ಕಾರಣವಾಗಿದೆ. ಜನರಲ್ಲಿ ದೇವರ ಭಯ ಪಾಪದ ಭೀತಿ, ಧರ್ಮದ ಆಚರಣೆ ನಾಶಮಾಡಿದ ಸೆಕ್ಯುಲರ್ ಸರ್ಕಾರದಿಂದಾಗಿ ಕೇವಲ ೩೪ ವರ್ಷಗಳಲ್ಲಿ ಉತ್ತರ ಹಿಂದೂಸ್ಥಾನದಲ್ಲಿ ಭಯಂಕರ ದರೋಡೆಕಾರರ ಹಾವಳಿ (ನಮ್ಮಲ್ಲೂ ಶುರು ಆಗಿದೆ), ಇಡೀ ಸರ್ಕಾರ ಲಂಚಕೋರತನದಲ್ಲಿ ಮುಳುಗಿದುದು, ವಿದ್ಯಾರ್ಥಿಗಳಿಗೆ ಶಿಸ್ತು ಬೇಡ, ವಿದ್ಯಾವ್ಯಾಸಂಗ ಅಲ್ಲ ತೇರ್ಗಡೆಗೆ ಅಡ್ಡದಾರಿಗಳು, ಕೆಲಸದವರ ತೀರಾ ಅನಾವಶ್ಯಕವಾದ ವಿಪರೀತ ಮದ್ಯದ ಸೇವನೆ, ಅದಕ್ಕಾಗಿ ಧಣಿಗಳ ಸುಲಿಗೆ, ಸಾಮಾನ್ಯರ ಕಷ್ಟ ಹೆಚ್ಚಿಸುತ್ತ ಬರುವ ಹಣದ ಉಬ್ಬರ, ಭಯಂಕರ ನೈತಿಕ ಅವನತಿ ಎಲ್ಲ ಕಂಡ ಮೇಲಾದರೂ ಇವಕ್ಕೆ ಏಕಮಾತ್ರ ಪ್ರೇರಕವಾಗಿರುವ ಸೆಕ್ಯುಲರ್‌ಸರ್ಕಾರ ತಂದ ಕೇವಲ ವಿಜ್ಞಾನ ದೇವರ ಉಪಾಸನೆಯು ನಮ್ಮ ದೇಶಕ್ಕೆ ತೀರಾ ತಪ್ಪು ಎಂಬ ಭಾವನೆ ಉಂಟಾದರಾದೀತು.

ಬ್ರಾಹ್ಮಣನು ಕಾಫಿ, ಟೀ ಮುಂತಾದ ಉತ್ತೇಜಕಗಳಿಂದ ಆರಂಭಿಸಿ ಅವನ್ನು ಹೆಚ್ಚಿಸುತ್ತಾ ಧರ್ಮ ಬೇಡದವನಾದರೆ ಆಮೇಲೆ ಅಲ್ಪರ ಸಂಗದಿಂದ ಮದ್ಯದ ಸೇವನೆ ಹಿಡಿದು ಬ್ರಾಹ್ಮಣ್ಯ ಪೂರ್ಣ ನಾಶಮಾಡಿಕೊಳ್ಳುತ್ತಾನೆ. ತನ್ನ ಮಕ್ಕಳಲ್ಲೂ ಅದಕ್ಕೆ ಒಲವು ಹುಟ್ಟಿಸಿ ಈ ಅತ್ಯಂತ ಕೆಟ್ಟ ಪಿತ್ರಾರ್ಜಿತ ಅವಕ್ಕೆ ಬಿಟ್ಟು ಹೋಗುತ್ತಾನೆ. ಬ್ರಾಹ್ಮಣನಿಗೆ ದೇಹಗೆಲ್ಲುವ ಶಿಸ್ತು ವಿಧಿಸಿದೆ. ಸಾಮಾನ್ಯ ಕೆಲಸಕ್ಕೆ, ಸಾಧನೆಗೆ ಕೇವಲ ರಾಜಸಿಕವಾದ ಆಹಾರವೇ ಅಲ್ಲದೆ ಟೀ ಕಾಫಿ ಅಭ್ಯಾಸಕೂಡ ಅವ ಬಿಡಬೇಕು; ಅಥವಾ ತೀರಾತೀರಾ ಕಡಿಮೆಗೆ ಇಳಿಸ

ಬೇಕು. ಮದ್ಯ ಎಷ್ಟಕ್ಕೂ ಬೇಡ, ಹೀಗೆಲ್ಲ ವಿಜ್ಞಾನದಿಂದುಂಟಾಗಲಿರುವ ಸರ್ವನಾಶದಿಂದ ಬ್ರಾಹ್ಮಣ ತಪ್ಪಿಸಿಕೊಳ್ಳಬೇಕು. ಈಗ ಲೋಕದಲ್ಲಿ ಬೇಗ ಬೇಗ ಹರಡುತ್ತಿರುವ ಹೆರೋಯಿನ್ ಅಮಲು ಆ ದಾರಿ ಹಿಡಿಯುವ ಯುವಕರ ಸರ್ವನಾಶ ಮಾಡುತ್ತಿದೆ.

**ಅಣುಬಾಂಬು :** ವಿಜ್ಞಾನವು ಈಗ ಬೇಗ ಸಂಖ್ಯೆ ಹೆಚ್ಚುತ್ತಿರುವ ಮಾನವರು ಬಾಳಲಿಕ್ಕೆ ಅನೇಕಾನೇಕ ವಿಧಗಳಲ್ಲಿ ಸಹಾಯ ಮಾಡುತ್ತದೆ; ಅದಕ್ಕಾಗಿ ಅದನ್ನು ಅತ್ಯುತ್ತಮ ಆಪ್ತ ಎಂದು ಭಾವಿಸುವವರೇ ಎಲ್ಲರೂ. ಆದನ್ನು ವಿಜ್ಞಾನಿ ಅಲ್ಲ. ಮಹಾಋಷಿಗಳು ಮಾತ್ರ ಮಾನವನ ಹಿತಕ್ಕಾಗಿ ಕಂಡುಕೊಂಡಿದ್ದರೆ, ಅವರು ದೇವರಲ್ಲಿ ಕೃತಜ್ಞತೆಯಿಂದ, ನಮ್ರತೆಯಿಂದ, ಅದನ್ನು ಬೆಳೆಸಿ ಅದು ಲೋಕದ ಜನರ ಬಡಸ್ತಿಕೆ, ಆಹಾರದ ಸಮಸ್ಯೆ, ರೋಗಗಳ ಕೇಡು, ಪರಿಹಾರ ಮಾಡಲು ಸಫಲವಾಗುತ್ತಿತ್ತೋ ಏನೋ. ಆದರೆ ಈಗ ಶಾಪಗ್ರಸ್ತವಾದ ಅದು ಜನರ ಬಡಸ್ತಿಕೆ ಪರಿಹರಿಸುವ ಎಷ್ಟೋ ಮುಂಚೆಯೇ, ಅವರನ್ನು ಸರ್ವನಾಶಕ್ಕೆ ಅನಿವಾರ್ಯವಾಗಿ ನೂಕುತ್ತಿರುವಂತೆ ಇದೆ! ವಿಜ್ಞಾನಿಯು ಅಣುಬಾಂಬನ್ನು ಉಂಟುಮಾಡಿ ಹಿರೋಷಿಮಾಪಟ್ಟಣದ ಮೇಲೆ ಎಸೆದು ಎರಡು ಲಕ್ಷ ಜನರಿರುವ ಆ ಪಟ್ಟಣ ಧ್ವಂಸವಾದುದು ಪ್ರತ್ಯಕ್ಷ ಕಂಡಂದಿನಿಂದ ಈ ಹೊಸ ಜ್ಞಾನದ ಪರಿಣಾಮಕ್ಕೆ ಅತ್ಯಂತ ಹೆದರಿಕೊಂಡಿದ್ದವನೇ. ಆದರೆ ದೇವರ ಕ್ರಮದಂತೆ ಪಾಪಿಗಳು ತಮ್ಮ ಅಂಧತೆಯಿಂದ ಮತ್ತೂ ಮತ್ತೂ ಪಾಪ ಮಾಡುತ್ತ ತಮ್ಮ ನಾಶ ತಾವೇ ಸಾಧಿಸುವಂತೆ ಅವ ಹೆದರುತ್ತ ಹೆದರುತ್ತ ಆದರೆ ಅನಿವಾರ್ಯವಾಗಿ ಮತ್ತೂ ಮತ್ತೂ ಭಯಂಕರ ಶಕ್ತಿಯ, ಹೆಚ್ಚು ಹೆಚ್ಚು ಸಂಖ್ಯೆಗಳ ಬಾಂಬುಗಳನ್ನು ತಯಾರು ಮಾಡುತ್ತ ಬಂದಿದ್ದಾನೆ. ಈಗಿನ ಅವನ ಅಣುಬಾಂಬುಗಳ ಸಂಗ್ರಹ ೬೦,೦೦೦ ಮಿಕ್ಕಿದೆ. ಮತ್ತು ಅವುಗಳ ಒಟ್ಟು ಶಕ್ತಿ ಹಿರೋಷಿಮಾದ ಮೇಲೆ ಎಸೆದ ಬಾಂಬಿನ ಮಿಲಿಯ ಪಾಲು ಹೆಚ್ಚಿನದ್ದು. ಕೇವಲ ಒಂದೇ ಒಂದು ದೊಡ್ಡ ಬಾಂಬನ್ನು ನ್ಯೂಯಾರ್ಕಿನಲ್ಲಿ ಸ್ಫೋಟಿಸಿದರೆ ಅದು ಏಳು ಮಿಲಿಯನ್ ಜನರ ನಾಶ ಮಾಡೀತು. ಲೋಕದ ಜನರು ಧಾರಾಳತೆ ತುಂಬಿ ತೃಪ್ತಿಯಿಂದ ಮೈತ್ರಿಯಿಂದ ಬಾಳುವ ಬದಲಿಗೆ ಈಗ ವರ್ಷಕ್ಕೆ ೪೦೦,೦೦೦ ಕೋಟಿ ರೂ.ಗಳನ್ನು ಪ್ರತಿವರ್ಷ ಮಾನವನ ನಾಶಮಾಡುವ ಯುದ್ಧಸಾಮಗ್ರಿ ಮುಂತಾದವಕ್ಕೆ ಖರ್ಚು ಮಾಡುತ್ತಿದ್ದಾರೆ! ಈಗಲೀಗ ವಿಪರೀತ ಭಯಂಕರ ಪರಿಸ್ಥಿತಿ, ಸರ್ವನಾಶ ತೀರಾ ಸಮೀಪದ ಸ್ಥಿತಿ ಉಂಟಾಗಿದೆ ಎಂದು ಕೆಲವರು ಪ್ರಾಜ್ಞರು ಎಚ್ಚರಿಕೆ ಕೊಟ್ಟದ್ದುಂಟು, ಆದರೆ

ವಿಜ್ಞಾನಕ್ಕೆ ತನ್ನ ಕೈ ತಡೆಯಲಾರದ ವಿಪತ್ತು ಬಂದಿದೆ. ಅಣುಬಾಂಬುಗಳ ಭಯಂಕರ ಸ್ಫೋಟನೆ ಉಂಟಾದರೆ ಪಾಶ್ಚಾತ್ಯ ದೇಶಗಳಲ್ಲಿ ಎಲ್ಲೋ ಒಂದು ಶತಾಂಶ ಜನರು ಬದುಕಬಹುದೋ ಏನೋ ಅಂತೆ ! ಭೂಲೋಕದ ವಾತಾವರಣವೇ ವಿಪರೀತ ಕೆಟ್ಟು ಏಷ್ಯಾ ಮತ್ತು ಆಫ್ರಿಕಾದಲ್ಲಿ ಎಲ್ಲೋ ಮೂರನೇ ಒಂದಂಶ ಜನರು ಬದುಕಬಹುದೋ ಏನೋ ಎಂದು ಅಂದಾಜು ಮಾಡಲಾಗಿದೆ. ಸಂಪೂರ್ಣ ನಾಶ ಹೇಳುವ ಪಾಶ್ಚಾತ್ಯ ಭವಿಷ್ಯಗಳೂ ಇವೆ. ಪ್ರಾಯಶಃ ಇದು ಅವರ ದೇಶಗಳಿಗೆ ಮುಖ್ಯ ಅನ್ವಯಿಸುತ್ತವೆ ಮತ್ತು ಅವಲ್ಲಿ ೨೦೦೦ ಇಸವಿಯ ಅನಂತರಕ್ಕೆ ಅನ್ವಯಿಸುವ ಭವಿಷ್ಯಗಳೇ ಇಲ್ಲದಿರುವುದೂ ಅರ್ಥಗರ್ಭಿತವಾಗಿದೆ. ಕೆಲವು ಭವಿಷ್ಯಗಳು—ನಮಗೂ ಅನ್ವಯಿಸುವವು—೧೯೮೩ ರಿಂದ ೧೯೮೮ ರವರೆಗೆ ಅತ್ಯಂತ ಕೆಟ್ಟ ಕಾಲ ಎಂದಿವೆ. ನನ್ನ **'ದಾನ ಮಾಡಬೇಕು'** ನೋಡಿರಿ. ಅಲ್ಲಿ ಒಂದು ಎಚ್ಚರವನ್ನು ಕೊಟ್ಟಿರುವೆ. ಈ ವಿಪರೀತ ಅವಘಡಗಳಲ್ಲಿ ಸತ್ತವರು ತಮ್ಮ ಹಣ ಮನೆ ಎಲ್ಲ ಇಲ್ಲಿ ಬಿಟ್ಟು ಪಾಪ ಮಾತ್ರ ತಮ್ಮೊಡನೆ ಕೊಂಡುಹೋಗುವ ಬದಲಿಗೆ ಆದಷ್ಟು ದಾನ ಮಾಡುತ್ತ ಪುಣ್ಯ ಕೊಂಡುಹೋಗುವ ಕ್ರಮ ಅನುಸರಿಸುವುದುತ್ತಮ ಎಂದು. ಈಗಲೂ, ಮುಖ್ಯವಾಗಿ ಬ್ರಾಹ್ಮಣರಿಗೆ ಅದನ್ನೇ ಹೇಳುತ್ತೇನೆ, ಧರ್ಮವು ಅವರಿಗೆ ಅತ್ಯಂತ ಸುಲಭಜೀವನ ವಿಧಿಸಿರುವುದರಿಂದ ಈ ಕೆಟ್ಟಕಾಲದಲ್ಲಿ ದಾನ ಸಾಧಿಸಲಿ.

## ೨೨. ಜಾತಿ ಧರ್ಮದ ನಾಶದಿಂದ ನಮ್ಮ ಸಂಪೂರ್ಣ ಧರ್ಮನಾಶ

ಜನರಿಗೆ ಅವರವರ ಧರ್ಮಶಾಸ್ತ್ರವು ಹೇಳುವಂತೆ ಬಾಳುವ ಮೂಲಭೂತ ಹಕ್ಕು ಇದೆ ಹೊರತು ಧರ್ಮ ಬೇಡವಾದ, ಧರ್ಮದಂತೆ ಬಾಳದ, ಕೇವಲ ರಾಜಕೀಯ ಕ್ಷೇತ್ರದಲ್ಲಿ ತಜ್ಞರೆಂದು ಜನರ ಪ್ರತಿನಿಧಿಗಳಾಗಿ ಆರಿಸಲ್ಪಟ್ಟವರು, ಧರ್ಮದ ಭಾಗದಲ್ಲಿ ತೀರ್ಮಾನಿಸಲು ಯಾವ ಯೋಗ್ಯತೆಯೂ ಇಲ್ಲದವರು, ಜನರಿಂದ ಧರ್ಮ ತಿದ್ದುವ ಭಾಗದಲ್ಲಿ ಹಕ್ಕು ಪಡೆದವರಲ್ಲದವರು, ಶಾಸ್ತ್ರದಲ್ಲಿ ಈ ಭಾಗ ತಪ್ಪು, ಆ ಭಾಗ ತಪ್ಪು ಇದನ್ನು ಲೋಪ ಮಾಡಬೇಕು, ಅದನ್ನು ತಿದ್ದಬೇಕು ಎನ್ನುವುದು ಭೂಲೋಕದಲ್ಲೇ ಮತ್ತೆಲ್ಲೂ ಪ್ರಜಾರಾಜ್ಯದಲ್ಲಿ

ಇಲ್ಲದ ನಮ್ಮ ದುರಾದೃಷ್ಟದಿಂದ ಸ್ವರಾಜ್ಯದೊಡನೆ ಶ್ರೀ ನೆಹರೂ ಸರ್ಕಾರ ಸ್ಥಾಪಿಸಿದ ತೀರಾ ಅನ್ಯಾಯದ ಕ್ರಮ. ಈ ಮೂಲಭೂತ ಹಕ್ಕನ್ನು UNESCO ಮತ್ತು ನಾಗರಿಕ ಲೋಕವೇ ಒಪ್ಪಿದ್ದರಿಂದ ನಮ್ಮವರು ನಮ್ಮ ಶಾಸ್ತ್ರ ವಿಧಿಸಿದ ಜಾತಿಕ್ರಮದ ನಾಶಕ್ಕೆ ಕಾನೂನು ಮಾಡಲಾರದಾದರು. ಆದರೆ ತಮ್ಮ ಹಠಸಾಧನೆ ನಡೆಸಲಿಕ್ಕೆ ಜಾತಿಕ್ರಮಕ್ಕಿದ್ದ ಅನುಕೂಲತೆಗಳನ್ನು ಸರ್ಕಾರಿ ಹಾಸ್ಟೆಲ್, ರೈಲ್ವೇಸ್ಟೇಶನ್ ಮುಂತಾದವಲ್ಲಿ ನಾಶಮಾಡಿರುವರು. ಸ್ವಾಭಾವಿಕ ವಾಗಿ ಧರ್ಮದಶ್ರದ್ಧೆ ಧಾರಾಳವಾಗಿ ಇನ್ನೂ ಬೆಳೆಸದಿರುವ ಯುವಕ ಜನಾಂಗ ವನ್ನು ಜಾತಿ ಕಟ್ಟಳೆಗಳಿಂದ ತಪ್ಪಿಸುತ್ತ ಜಾತಿಭ್ರಷ್ಟರನ್ನಾಗಿ ಮಾಡುತ್ತ ಬಂದಿ ದ್ದಾರೆ. ಸರ್ಕಾರವು ಈ ತರದ ಅಡ್ಡದಾರಿ ಹಿಡಿದದ್ದು, ಸರ್ಕಾರವು ಜನರಿಗೆ ಮೇಲ್ಪಂಕ್ತಿಯಾಗಿ ಆಚರಿಸಬೇಕಾದ ಸರಳತೆಯೂ ಅಲ್ಲ, ನ್ಯಾಯಪರತೆಯೂ ಅಲ್ಲ. ಸನಾತನಿಗಳು ತಾವು ಕೇವಲ ನಿಸ್ಸಹಾಯಕರು ಎಂಬ ಭಾವನೆಯಲ್ಲಿ ಮುಳುಗಿರುವುದರಿಂದ ನಡೆದು ಬಂದಿದೆ!

ಜಾತಿನಾಶಕ್ಕೆ ನಮ್ಮ ರಾಜಕೀಯ ಮುಖಂಡರು ಜನರನ್ನು ಒಲಿಸಲು ಮೂರು ಕಾರಣಗಳನ್ನು ಕೊಟ್ಟಿರುತ್ತಾರೆ. ಮೊದಲನೆಯದು ಅಸ್ಪೃಶ್ಯತೆಯು ತಪ್ಪು ಎಂದು. ಧರ್ಮವನ್ನು ಇತರರಿಗೆ ತೊಂದರೆಯಾಗುವ ರೀತಿಯಲ್ಲಿ ಬಾಳಕೂಡದೆಂಬುದು ಈ ಕಾಲಕ್ಕೆ ಸರಿಯೇ. ಸರ್ಕಾರವು ಅಸ್ಪೃಶ್ಯತೆಯ ನಿಷೇಧಕ್ಕೆ ಕಾನೂನು ಮಾಡಿದಾಗ ಸನಾತನಿಗಳು ಯಾರೂ ಅಡ್ಡಿ ಮಾಡಲಿಲ್ಲ; ಅದರ ಸಹಾಯ ಈಗ ಸರ್ಕಾರಕ್ಕಿದೆ. ಧಾರಾಳವಾಗಿ ಉಪಯೋಗಿಸಿಕೊಳ್ಳಲಿ. ಮತ್ತೊಂದು ಆಕ್ಷೇಪ, ಜಾತಿಕ್ರಮವು ಜನರನ್ನು ವಿಂಗಡಿಸುತ್ತದೆ. ಜಾತಿನಾಶ ದಿಂದ ದೇಶಕ್ಕೆ ಅಗತ್ಯವಾದ ಒಗ್ಗಟ್ಟುಉಂಟಾಗಬೇಕು, ಹಿಂದೂಗಳೆಲ್ಲ ಕೇವಲ ಒಂದೇ ಧರ್ಮದವರಾಗಬೇಕು ಎಂಬುದು. ಆದರೆ ಇದು ಲೋಕದ ಕ್ರಮಕ್ಕೆ ಕಣ್ಣುಮುಚ್ಚಿ ಮಾಡುವ ಅಸಾಧ್ಯ ಹಠಸಾಧನೆ. ಕಲಿಕಾಲ ಮುಂದರಿದಂತೆ ಲೋಕದ ಜನರು ಹೆಚ್ಚಿದಂತೆ, ಕಲಿಯ ಪ್ರಭಾವದಿಂದ ಹಳೇ ಧರ್ಮಗಳ ಪೂರ್ಣರೂಪದ ಅಭ್ಯಾಸ ಅನೇಕರಿಗೆ ಅಸಾಧ್ಯವಾಗಿ ಮತ್ತು ಹೊಸ ಒಲವುಗಳ ಜೀವಾತ್ಮರು ಜನಿಸುತ್ತಲೇ ಇದ್ದು, ಅವರ ಮಟ್ಟಕ್ಕೆ ದಕ್ಕುವ ಹೊಸ ಧರ್ಮ ಗಳನ್ನು ದೇವರು ಹೊಸ ಧರ್ಮಸ್ಥಾಪಕರ ಮೂಲಕ ನಡೆಸುತ್ತಾನೆ. ಆದ್ದ ರಿಂದ ಮೂಲಧರ್ಮಗಳಿಗಿಂತ ಸುಲಭವಾದ ಚುಟುಕಾದ ಶಾಖಾಧರ್ಮಗಳು ಉದ್ಭವವಾಗುತ್ತವೆ. ಅಮೇರಿಕದಲ್ಲೀಗ ಕ್ರಿಶ್ಚನ್ ಧರ್ಮದ ೨೫೨ ಶಾಖಾ ಧರ್ಮಗಳಿವೆ. ಪಾಕಿಸ್ತಾನದಲ್ಲಿ ಮುಸಲ್ಮಾನ ಧರ್ಮದ ೨೭ ಶಾಖಾಧರ್ಮ

ಗಳಿವೆ. ಇತ್ತೀಚಿನ ಸಿಖ್‌ಧರ್ಮ ಈಗಲೇ ಕವಲೊಡೆದಿದೆ. ಆಳವಾಗಿ ವಿಚಾರಿಸಿದರೆ ಈ ಕವಲುಗಳು ಮೂಲಧರ್ಮಕ್ಕಿಂತ ಕೆಳಮಟ್ಟದವು ಎಂದು ತೋರದಿರವು. ಹುಟ್ಟಿಂದ ಬಂದ ಧರ್ಮವೇ ತಮಗೆ ಅತ್ಯುತ್ತಮ ಎಂಬ ಸಹಜವಾದ ಅಭಿಮಾನ ದೇವರೇ ನಿರ್ಮಿಸಿದುದು. ಆದ್ದರಿಂದ ಜನರು ಆಚರಿಸುತ್ತಾರೆ. ಪ್ರತಿ ಶಾಖಾಧರ್ಮದವರೂ ತಮ್ಮದೇ ಹೊಸ ಶಾಸ್ತ್ರಗಳು, ಇಗರ್ಜಿ, ಮಸೀದಿ, ಗುರುದ್ವಾರ, ತಮ್ಮೊಳಗೆ ಮಾತ್ರ ವಿವಾಹ, ತಮ್ಮದೇ ಸ್ಮಶಾನ, ಎಲ್ಲ ಬಂಧುಗಳೂ, ಹೆಚ್ಚಿನ ಮಿತ್ರರೂ, ತಮ್ಮ ಜಾತಿಯವರೇ ಇರುವವರಿದ್ದು ಸ್ಪಷ್ಟವಾಗಿ ಜನರ ಐಕ್ಯಮತ್ಯ ಕಡಿಮೆ ಮಾಡುತ್ತಿರುವವರೇ. ಆದರೆ ಧರ್ಮವು ಲೌಕಿಕ ಅನುಕೂಲತೆಗಿಂತ ಮಹತ್ವದ್ದು, ಬಾಳಬೇಕು ಎಂದು ಅವರವರ ಧಾರ್ಮಿಕ ಹಕ್ಕಿನಪಾಲನೆಗಾಗಿ ಯಾವ ದೇಶದ ಪ್ರಜಾಸರ್ಕಾರವೂ ಈ ಶಾಖಾಧರ್ಮಗಳ ಕ್ರಮ ಖಂಡಿಸಿದ್ದಿಲ್ಲ. ಅದು ಕಾಲಗತಿಯ ಅವಶ್ಯಕರೂಪ ತಪ್ಪು ಎನ್ನುವುದು ಮರಗಳ ಗೆಲ್ಲುಗಳೆಲ್ಲ ಪುನಃ ಒಂದಾಗಿ ಬಲವಾಗಬೇಕು ಎನ್ನುವಷ್ಟು ಅಸ್ವಾಭಾವಿಕ ಎಂದು ಒಪ್ಪಿದ್ದಾರೆ. ಶಾಖಾಧರ್ಮಗಳಲ್ಲಿ ಪರಸ್ಪರ ದ್ವೇಷಗಳಿರುವುದುಂಟು. ಆದರೆ ನಮ್ಮ ವರ್ಣದಲ್ಲಿ ಬೇಧವಿದ್ದರೂ ಎಂದೂ ದ್ವೇಷವಿದ್ದದ್ದಿಲ್ಲ. ಇದು ಮಾತ್ರ ಏಕೆ ಬಾಳಕೂಡದು ?

ಮತ್ತು ದೇಶದಲ್ಲಿ ಜನರ ಒಗ್ಗಟ್ಟು ಅತ್ಯಗತ್ಯ ಎನ್ನುವ ರಾಜಕೀಯ ಮುಖಂಡರೇ ಜನರನ್ನು ಭಿನ್ನಮಾಡುವ, ಲೋಕದಲ್ಲಿ ಮತ್ತೆಲ್ಲೂ ಇಲ್ಲದ ಮಟ್ಟದಲ್ಲಿ ೪೫ ರಾಜಕೀಯ ಪಕ್ಷಗಳನ್ನು ಕೇವಲ ಸ್ವಾರ್ಥೀ ಮುಖಂಡರಿಗೆ ತಮ್ಮದೇ ಮುಖಂಡತ್ವದ ಪಕ್ಷ ಬೇಕೆಂಬುದಕ್ಕಾಗಿ ಉಂಟುಮಾಡಿ ದೇಶದ ಐಕ್ಯಮತ್ಯ ನಾಶಮಾಡಿದ್ದಾರಲ್ಲ! ಅವರ ಪಕ್ಷದವರಿಗೆಲ್ಲ ಪಕ್ಷಾಂತರ ಮಾಡುವುದು ಏನೂ ಕಷ್ಟವಲ್ಲ, ಹೊಸದಲ್ಲ. ಆದರೆ ಧರ್ಮಿಷ್ಠರಿಗೆ ಅವರ ಜಾತಿ ಬಿಡುವುದೆಂದರೆ ಸಾಧ್ಯವಲ್ಲ, ಜಾತಿಯಲ್ಲಿರುವುದೂ ಅವರ ಹಕ್ಕು. ಆದರೂ ಜಾತಿ ನಾಶವಾಗಲಿ ಎನ್ನುವ ಈ ಮುಖಂಡರು ದೇಶದಲ್ಲಿ ಐಕ್ಯಮತ್ಯ ನಿಜಕ್ಕೂ ಬೇಕಿದ್ದರೆ ತಮ್ಮವರಿಗೆಲ್ಲ ಪುನಃ–ಪಕ್ಷಾಂತರವಾಗಿ ಕೇವಲ ಎರಡು ಪಂಗಡ ಮಾತ್ರ ಆಗಲು ಕರೆ ನೀಡಿದ್ದೇ ಇಲ್ಲವಲ್ಲ! ತಮ್ಮ ಪಾಲಿಗೊಂದು ನ್ಯಾಯ, ಪರರ ಪಾಲಿಗೆ ಮತ್ತೊಂದು ಡೊಂಕು ನ್ಯಾಯ! ಇದು ರಾಜಕೀಯ ದರ್ಪದ ದುರುಪಯೋಗ! ಇದು ಸರಿಯಲ್ಲ. ಧರ್ಮವೇ ಹೆಚ್ಚಿನದ್ದು.

ಜಾತಿ ಕ್ರಮಕ್ಕೆ ಮೂರನೆಯ ಆಕ್ಷೇಪ, ಈಗ ಲೋಕದಲ್ಲಿ ರೂಢಿಗೆ ಬಂದ ತತ್ವದಂತೆ ಜನರೆಲ್ಲ ಸರಿಸಮಾನರು ಎಂಬ ಭಾವನೆ. ಕೆಳತರದವರಲ್ಲಿ

ಅತ್ಯಧಿಕ ಭಾಗದವರಿಗೆ ಈ "ಸರಿಸಮಾನತೆ" ತಪ್ಪು ಉತ್ಸಾಹ ತಂದಿದೆ; ಅದರ ಸ್ಪಷ್ಟ ಅರ್ಥ ಸಂಕೋಚ ಮಾಟ್ಟದ್ದು. ರಾಜಕೀಯ ಮುಖಂಡರು ಓಟಿಗಾಗಿ ತುಂಬಿಸಿದ ವಿಪರೀತ ಭಾವನೆಯಲ್ಲ. ಅದರ ನಿಜವಾದ ಭಾಗ, ಜನರೆಲ್ಲರಿಗೂ ಹಸಿವು ತೃಷೆಗೆ ಉದ್ಯೋಗ, ಚಳಿಮಳೆಗಳಿಂದ ರಕ್ಷಣೆಗಾಗಿ ಮನೆ, ಕಾಯಿಲೆ ಬಂದಾಗ ಔಷಧ ಚಿಕಿತ್ಸೆ ದುಷ್ಟರಿಂದ ರಕ್ಷಣೆ, ಬುದ್ಧಿಶಕ್ತಿ ಬೆಳೆಸಲು ತನ್ನ ಮಿದುಳು ಮಟ್ಟದವಿದ್ಯೆಗಳ ಅವಶ್ಯಕತೆ ಇರುವುದು. ಯಾರಿಗೇ ಆಗಲಿ ಈ ಭಾಗದಲ್ಲಿ ಸಹಾಯ ಬೇಕಾಗದು ಎನ್ನುವಂತಿಲ್ಲ. ಕಷ್ಟಬಂದಾಗ ಸರ್ಕಾರದ ಸಹಾಯ ಪಡೆಯುವ ಸಮಾನ ಅನುಕೂಲತೆ ಬೇಕು ಎಂಬುದು ಹೊರತು, ಮಂತ್ರಿ ಪೇದೆ, ಪ್ರಾಧ್ಯಾಪಕ ವಿದ್ಯಾರ್ಥಿ, ಆಫೀಸರ್ ಕ್ಲಾರ್ಕ್, ಸೇನಾನಾಯಕ ಸಿಪಾಯಿ, ತಂದೆ ಮಗ ಎಲ್ಲರೂ ಸರಿಸಮಾನರೆಂದೇನಲ್ಲ. ಈ ಭಾಗಗಳೆಲ್ಲ ಹೆಚ್ಚಿನ ಹಿರಿಮೆಗೆ ಹೆಚ್ಚಿನ ಸಂಬಳ ಗೌರವ, ಅಧಿಕಾರ ಕೊಡುವುದೇ ಎಲ್ಲೆಲ್ಲೂ ಲೋಕದ ಕ್ರಮವಲ್ಲವೇ? ಇಲ್ಲವಾದರೆ ಸರ್ವನಾಶ ಖಂಡಿತ. ಆದರೆ ಈ ಹೆಚ್ಚಿನ ಅಧಿಕಾರ ಅವರವರ ಕ್ಷೇತ್ರದಲ್ಲಿ ಮಾತ್ರ. ಆಫೀಸರ್ ಬಸ್ಸಲ್ಲಿ ತನಗೆ ಉತ್ತಮ ಸೀಟು ಬೇಕೆಂದು ಕೇಳುವುದಿಲ್ಲ; ಅದು ಸಿಕ್ಕದು. ಅಂತೆಯೇ ಸನಾತನ ಧರ್ಮದಲ್ಲಿ ಜೀವಾತ್ಮರ ಧಾರ್ಮಿಕ ಹಿರಿಮೆಯ ಮಟ್ಟಕ್ಕೆ ತಕ್ಕ ಜಾತಿ ದೇವರು ಕೊಟ್ಟಿರುವ ಎಂಬ ದೃಷ್ಟಿಯಿಂದ ಸನಾತನ ಧರ್ಮದ ಸಂಸ್ಥೆಗಳಾದ ಅದರ ದೇವಾಲಯಗಳಲ್ಲಿ, ಯಜ್ಞ ನಡೆಯುವಲ್ಲಿ, ಮುಂತಾಗಿ ನಾಲ್ಕೂ ವರ್ಣದವರೂ ಒಪ್ಪಿಯೇ ಬ್ರಾಹ್ಮಣರಿಗೆ ಹೆಚ್ಚಿನ ಗೌರವ ಕೊಡುತ್ತಾರೆ ಮಾತ್ರ. ಹೊರತು ಈಗ ಸಾರ್ವಜನಿಕ ಲೌಕಿಕಸಂಸ್ಥೆಗಳಾದ ಶಾಲೆಯಲ್ಲಿ ಹರಿಜನ ಮುಖ್ಯೋಪಾಧ್ಯಾಯನಿರುವಲ್ಲಿ, ಬ್ರಾಹ್ಮಣ ಕೆಳಮೇಷ್ಟರನು ತಾನು ಮೇಲು ಎಂದು ಸಾಧಿಸಿದ್ದು ಎಲ್ಲೂ ಇಲ್ಲ. ಆದ್ದರಿಂದ ಸರ್ಕಾರ ಏಕೆ ಈ "ಸರಿಸಮಾನತೆ"ಯ ಸ್ಪಷ್ಟ ಮಿತ ಅರ್ಥ ಸಾರದೆ ಜಾತಿ ನಾಶವಾಗಲಿ ಎನ್ನಬೇಕು?

ಜಾತಿಕ್ರಮದಿಂದ ಜನರ ಐಕ್ಯಮತ್ಯಕ್ಕೆ ಹಾನಿ ಉಂಟಾಯಿತು ಎಂಬುದು ತಪ್ಪು. ಜಾತಿಯಂತೆ ವೃತ್ತಿಗಳು ಹಂಚಲ್ಪಟ್ಟು ಅನ್ಯಾಯ ಬೆಳೆಸುವ ಸ್ಪರ್ಧೆ, ಅಸೂಯೆ ಇರಲಿಲ್ಲ. ಹಳ್ಳಿಯಲ್ಲಿ ಎಲ್ಲರಿಗೂ ಇತರರ ಸಹಾಯ ಬೇಕಿತ್ತು ಮತ್ತು ಎಲ್ಲರೂ ಜಾತಿಕ್ರಮ ಧರ್ಮದಲ್ಲೇ ಹೇಳಿದ್ದು ಎಂದು ಒಪ್ಪಿ ಬಾಳುತ್ತಿದ್ದರು. ಧರ್ಮಬೇಕಾದವರಿಗೆ–ಕೇವಲ ಆತ್ಮರಲ್ಲಿ ವ್ಯತ್ಯಾಸವಿಲ್ಲ ಎಂಬುದೂ ಸಾರಲ್ಪಡುತ್ತಿತ್ತು. ಬ್ರಾಹ್ಮಣರಿಗೂ ಕ್ಷತ್ರಿಯರಿಗೂ, ವೈಶ್ಯರಿಗೂ ಮುಂತಾಗಿ

ಎಲ್ಲೂ ಕಲಹವಾಗುತ್ತಿದ್ದುದಿಲ್ಲ. ಒಂದೇ ಧರ್ಮದವರೆನ್ನುವ ಕೆಥೊಲಿಕ್ಕರು ಪ್ರೊಟೆಸ್ಟೆಂಟರಲ್ಲಿ, ಶೀಯಾರು, ಸುನ್ನಿಯವರಲ್ಲಿ ಕಲಹ ಧಾರಾಳ ನಡೆದದ್ದುಂಟು. ನಮ್ಮಲ್ಲಿ ಜಾತಿ ಐಕ್ಯಮತ್ಯ ಹಾಳಾದದ್ದು ಕೇವಲ ರಾಜಕೀಯ ಮುಖಂಡರ ಓಟಿನ ಕ್ರಮದಿಂದ ಎಂದು ಶ್ರೀ ಕೃಪಾಲಿನಿಯವರು ಒಮ್ಮೆ ಸಾರಿದ್ದರು! ಜಾತಿಕ್ರಮ ಇದ್ದ ದೇಶಕ್ಕೆ ಬೇರೆ ರಾಜ್ಯಕ್ರಮ ಯೋಚಿಸಿ ನಿರ್ಮಿಸುವುದು ಅಸಾಧ್ಯವಲ್ಲ. ಕೇವಲ ಪಾಶ್ಚಾತ್ಯರ ಕುರುಡು ಅನುಕರಣೆ ಮಾಡಕೂಡದಿತ್ತು. ನಮ್ಮ ಯುವಕರಲ್ಲೀಗ ಜಾತಿಕ್ರಮಗಳು ನಾಶವಾಗಿವೆ, ಅದರ ಪರಿಣಾಮ ಜಾತಿಕ್ರಮವಿಲ್ಲದ ಅವರಿಗೆ ತಂದೆ ತಾಯಿಗಳ ಮಾತೂ ಬೇಡ, ಬಡವರ ಬಗ್ಗೆ ದೇಶದ ಬಗ್ಗೆ ಯೋಚನೆ ಸ್ವಲ್ಪವೂ ಇಲ್ಲ! ಅಂತೆಯೇ ಕೇವಲ ದೇವರು ಪಾಪದ ಭೀತಿ ಬೇಡದ ಸ್ವಾರ್ಥಿಗಳಾಗಿದ್ದಾರೆ.

ನಾನು ಇಲ್ಲಿ ಮುಖ್ಯವಾಗಿ ಓದುಗರ ಗಮನ ಸೆಳೆಯಬೇಕೆಂದಿರುವುದು, ಹಿಂದೂ ರಾಜಕೀಯ ಮುಖಂಡರ ನಿರಂತರ ಯತ್ನದಂತೆ ಜಾತಿಕ್ರಮ ನಾಶವಾದರೆ ಸನಾತನ ಧರ್ಮದ ನಾಶವೇ ಖಂಡಿತ ನಡೆಯದಿರದು ಎಂಬುದನ್ನು. ಸರ್ಕಾರವು ಈಗ ಜಾತಿನಾಶವಾಗಲಿ ಎಂದಂತೆಯೇ, ಸನಾತನ ಧರ್ಮದ ಜಾತಿಕ್ರಮಬೇಡ ಎಂದು ಬುದ್ಧಧರ್ಮ, ಜೈನಧರ್ಮ, ವೀರಶೈವಧರ್ಮ, ಬ್ರಹ್ಮೋ ಸಮಾಜ, ಸಿಖ್‌ಧರ್ಮ ಮುಂತಾದವು ನಿರ್ಧರಿಸಿದಾಗ ಅವು ಕವಲೊಡೆದು ಪ್ರತ್ಯೇಕವಾದವು. ಅಂತೆಯೇ ಕೆಥೊಲಿಕ್ ಧರ್ಮದಿಂದ ಹಲವು ಪ್ರೊಟೆಸ್ಟೆಂಟ್ ಶಾಖೆಗಳಾದವು. ಶಾಖಾಮತ ಸ್ಥಾಪಕ ಬುದ್ಧ, ತೀರ್ಥಂಕರರು, ಬಸವಣ್ಣ, ದಯಾನಂದ ಸರಸ್ವತಿ ಮುಂತಾದವರನ್ನು ದೇವರು ಕಳುಹಿಸಿದಾಗ, ಅವರೆಲ್ಲರೂ ದೇವರು ತಮಗೆ ಕೊಟ್ಟ ವಿಶೇಷಶಕ್ತಿಯಿಂದ ದೊಡ್ಡ ತಂಡದವರನ್ನು ತಮ್ಮ ಬೋಧನೆಯಿಂದ ಮೆಚ್ಚಿಸಿ, ಆಕರ್ಷಿಸಿ, ತಮ್ಮದೇ ಆದ ಹೊಸಧರ್ಮ ಸ್ಥಾಪಿಸಿದರೇ ಹೊರತು ಇಲ್ಲಾಗಲ್ಲಿ ಮತ್ತೆ ಎಲ್ಲೇ ಆಗಲಿ, ಹಾಗಲ್ಲ, ತಾವು ಪ್ರತ್ಯೇಕವಾಗುವುದಿಲ್ಲ, ಮೂಲಧರ್ಮವೇ ತಮಗೆ ಬೇಕಾದಂತೆ ಮಾರ್ಪಾಡಾಗಬೇಕು ಎಂಬ ಹಠ ಸಾಧಿಸಿದ್ದಿಲ್ಲ. ತಮ್ಮ ಜನ್ಮದಿಂದ ಬಂದ ಮೂಲಧರ್ಮದಂತೆಯೇ ಬಾಳಲು ಇಚ್ಛಿಸುವವರಿಗೆ ಅದರಲ್ಲೇ ಬಾಳುವ ಹಕ್ಕು ಇದೆ ಎಂಬ ಉದಾರತೆ ಅವರು ಲೋಕದಲ್ಲಿ ಎಲ್ಲೆಲ್ಲೂ ತೋರಿಸುತ್ತ ಬಂದದ್ದೇ ಕಾಣಬಹುದು. ನಮ್ಮ ದೇಶವಂತೂ ಅವರವರಿಗೆ ಅವರು ಮೆಚ್ಚುವ ಧರ್ಮದಂತೆ ಬಾಳಲು ಬಿಡುವ ಉದಾರತೆಯನ್ನು ಭೂಲೋಕದಲ್ಲೇ ಅತ್ಯಂತ ಹೆಚ್ಚಿನ ಮಟ್ಟದಲ್ಲಿ, ಆದರ್ಶಮಟ್ಟದಲ್ಲಿ ತೋರಿಸುತ್ತ ಬಂದಿತ್ತು. ಬುದ್ಧಧರ್ಮದ

ರಾಜರೂ ಕೂಡ ದೇಶದಲ್ಲಿ ಕೇವಲ ಒಂದು ಜಾತಿ ಇರಬೇಕು ಆದರೆ ಅದು ತಮ್ಮ ಹೊಸ ಜಾತಿ ಆಗಬೇಕೆಂದು ರಾಜ್ಯಾಧಿಕಾರ ದುರುಪಯೋಗಿಸಿರಲಿಲ್ಲ.

ನಮ್ಮವರ ವಿಚಿತ್ರ ಧೋರಣೆ ನೋಡಿರಿ! ಅನ್ಯಾಯವಾಗಿ ಹಿಂದೂಗಳನ್ನು ಕ್ರಿಶ್ಚನ್ನರಾಗಿ ಮತಾಂತರ ಮಾಡಕೂಡದು ಎಂಬುದಕ್ಕೆ ತಮ್ಮ ರಾಜಕೀಯ ಶಕ್ತಿ ಸದುಪಯೋಗಿಸಲಿಲ್ಲ. ತ್ಯಾಗೀಬಿಲ್ಲಿಗೆ ಸ್ಥಾನ ಕೊಡಲಿಕ್ಕೆ, ಮುಸಲ್ಮಾನ ಸ್ತ್ರೀಯರ ಅತಿ ಕೆಳಮಟ್ಟ ಸರಿಪಡಿಸಲಿಕ್ಕೆ, ಎದೆಗಾರಿಕೆ ಏನೂ ಸಾಲದಾಯಿತು. ಆದರೆ ಸನಾತನ ಧರ್ಮಕ್ಕೆ ದೇಶದ ಮಟ್ಟದಲ್ಲಿ ಒಗ್ಗಟ್ಟು, ಪ್ರಬಲ ಮುಖಂಡತ್ವ, ಇಲ್ಲದ್ದರಿಂದ ಮಾತ್ರ ಸರ್ಕಾರದ ಅನ್ಯಾಯದ ತುಳಿತ ನಡೆಯುತ್ತಿದೆ. ಆದರೆ ಇವರ ಹಕ್ಕು ಮೀರಿದ ಜಾತಿನಾಶ ಕ್ರಮವು ಸನಾತನ ಧರ್ಮವನ್ನೇ ನಾಶ ಮಾಡೀತು ಎಂಬುದನ್ನು ಅವರು ಸ್ವಲ್ಪ ವಿವೇಚಿಸಿದ್ದಿಲ್ಲ! ನಮ್ಮ ಧರ್ಮದ ರಕ್ಷಣೆಯ ಹೊಣೆಯಿರುವ ಧಾರ್ಮಿಕ ಸಂಸ್ಥೆಗಳೂ ಕೂಡ ವಿವೇಚಿಸಿದ್ದಿಲ್ಲ! ಈಗಲೀಗ ಹೊಸದಾಗಿ ಉಂಟಾಗಿ ತಮ್ಮ ಶಕ್ತಿಬೆಳೆಸುತ್ತಿರುವ ಬ್ರಾಹ್ಮಣ ಸಂಘಗಳಾದರೂ ಅದನ್ನು ತಿಳಿಯುವುದು ಅತ್ಯಗತ್ಯವೆಂದು ಇಲ್ಲಿ ನನಗೆ ತೋರಿದ ವಿವರಣೆ ಕೊಡುತ್ತೇನೆ.

ಜನರು ನಮ್ಮ ಧರ್ಮವನ್ನು ಅಭ್ಯಸಿಸುವುದರಲ್ಲಿ ಮೂರು ಹಂತಗಳಿವೆ. ಬಹುಮಟ್ಟಿಗೆ ಕೆಳಜಾತಿಯ ಸರ್ವರೂ, ಮೇಲು ಮಟ್ಟದ ಬಾಲಕರೂ ಯುವಕರೂ ಅದನ್ನು ಕೇವಲ ಕಾಯಿಕ ಮಟ್ಟದಲ್ಲಿ—ಸ್ನಾನ, ಜಪ, ಪೂಜೆ, ಭಜನೆ, ಆಹಾರ ನಿಯಮ, ಧಾರ್ಮಿಕ ವಿವಾಹ ಕ್ರಮ, ಪತಿ ಸೇವೆ ಮುಂತಾದ ರೂಪದಲ್ಲಿ ತಮ್ಮ ತಮ್ಮ ಜಾತಿಧರ್ಮದಂತೆ ಆಚರಿಸುತ್ತಾರೆ. ಎಂದರೆ ಕಾಯಿಕ ಜಾತಿಕ್ರಮಗಳೇ ಅವರ ನೂರಕ್ಕೆ ನೂರು ಅಂಶ ಧರ್ಮದ ಆಚರಣೆಯ ಕ್ರಮ. ಆ ತರದ ಆಚರಣೆಯು ದೇಹದ ಶಿಸ್ತಿಂದ ಧಾರ್ಮಿಕ ಶಕ್ತಿ ಬೆಳೆಸಿ, ಅದರೊಡನೆ ಧರ್ಮದ ಜ್ಞಾನ ಶ್ರದ್ಧೆ ಕೂಡಾ ಬೆಳೆಸಿದ ಮೇಲು ಜಾತಿಯ ದೊಡ್ಡವರಲ್ಲಿ ಎಲ್ಲೋ ಐದು ಶತಾಂಶದವರಿಗೆ ಆಗ ತಮ್ಮ ಧರ್ಮದ ಸಾಧನೆಯಲ್ಲಿ ದೇವರ ಭಕ್ತಿಯ ಸಾಮಾನ್ಯ ತರದ ಸಾಧನೆಯೂ ಸಾಧ್ಯವಾಗುತ್ತದೆ. ಅದನ್ನೂ ಸೇರಿಸಿಕೊಳ್ಳುತ್ತಾರೆ. ಕ್ರಮೇಣ ಅವರಲ್ಲೂ ಒಂದೆರಡು ಶತಾಂಶ ಜನರು ಧರ್ಮದ ನಿಜವಾದ ರೂಪದ ಅಭ್ಯಾಸವಾಗಿ ಉತ್ತಮ ಭಕ್ತಿಕ್ರಮ ಮತ್ತು ದೇವರಧ್ಯಾನದ ಕ್ರಮಗಳನ್ನೂ ಸೇರಿಸಿಕೊಳ್ಳಲು ಸಮರ್ಥರಾಗುತ್ತಾರೆ.

ಜಾತಿ ಬಿಡಿರಿ ಎಂದರೆ ಅದರ ಅವರವರ ಈ ಕಾಯಕ ಜಾತಿ ಆಚಾರ ಗಳನ್ನು ತ್ಯಜಿಸಿರಿ ಎಂದೇ ಅಲ್ಲವೆ? ಹಾಗೆ ಮಾಡಿದರೆ ಪ್ರಥಮ ವರ್ಗದವರಿಗೆ ಧರ್ಮಾಚರಣೆಗೆ ಮತ್ತೇನೂ ಉಳಿಯದು! ನಿಜವಾದ ಭಕ್ತಿ, ಧ್ಯಾನ, ಶಾಸ್ತ್ರದ ಜ್ಞಾನ, ಅವರ ಮಟ್ಟ ಮೀರಿದ್ದು; ಅವರು ಅಭ್ಯಸಿಸಿದ್ದಲ್ಲ; ಅದರ ಹಿರಿಮೆಯ ರುಚಿ ಕಂಡವರಲ್ಲ, ಕಾಯಕವಾಗಿ ನಡೆಸುವ ಆಚರಣೆಯ ಶಿಸ್ತು ಬಹಳ ವರ್ಷಗಳ ಕಾಲದ ಬಿಡದ ಅಭ್ಯಾಸದಿಂದ ಮಾತ್ರ ಬಹಳ ಒಗ್ಗು ತ್ತದೆ. ಹೊರತು ಮಕ್ಕಳಿಗೆ ಯುವಕರಿಗೆ ದೃಢ ಅಭಿರುಚಿ ಇನ್ನೂ ಬೆಳೆ ಯದ್ದು. ಗಿಡಕ್ಕೆ ಹೇಗೆ ಬೇಲಿ ಬೇಕೊ, ಅವರ ಮೇಲೆ ಹಿರಿಯರು ಗುರು ಗಳು ಶಿಸ್ತು ಹೊರಿಸುತ್ತಿರಬೇಕು. ಅದಕ್ಕೆ ಬದಲಾಗಿ ಘನ ಸರ್ಕಾರವೇ ಆಚಾರ ಬಿಡಿರಿ ಎಂದಾಗ ಅವರು, ತಮ್ಮ ಕಾಯಕ ಸದಾಚಾರ ಬಿಟ್ಟು, ಅದರ ಶಿಸ್ತು ತ್ಯಜಿಸಿ, ಎಲ್ಲಿ ಬೇಕಾದರೂ ಏನು ಬೇಕಾದರೂ ತಿನ್ನುವುದು. ಯಾರೊಡನೆಯೂ ಓಡಾಡಿ ಅವರ ಮಟ್ಟಕ್ಕಿಳಿಯುವುದು, ಧರ್ಮದ ಅಭ್ಯಾಸದಿಂದ ಬರುವ ದೇವರ ಭಯ, ಪಾಪಕ್ಕೆ ಅವನಿಂದ ಬರುವ ಶಿಕ್ಷೆಯ ಭಯ, ಏನೂ ಇಲ್ಲದವರಾಗಿ ತೀರಾ ಅನೈತಿಕ ಜೀವನ ನಡೆಸಲಾರಂಭಿಸಿದ್ದು ಧಾರಾಳ ಕಾಣುತ್ತೇವೆ. ಮನುಷ್ಯನ ತಲೆ ಖಾಲಿ ಆದಾಗ ಅದು ಪಿಶಾಚದ ಕಾರ್ಖಾನೆಯಾಗುತ್ತದೆ ಎಂದು ಆಂಗ್ಲ ಗಾದೆಯಿದೆ. ಇದಾದದ್ದು ಇವರಲ್ಲಿ ಮಾತ್ರವಲ್ಲ ಹಿಂದೂ ರಾಜಕೀಯ ಕ್ಷೇತ್ರದ ಮುಖಂಡರೂ ಹೀಗೆ ಜಾತಿ ಕ್ರಮ ತ್ಯಜಿಸಿ ಧರ್ಮ ಖಾಲಿ ಮಾಡಿಕೊಂಡವರು ದೇವರ ಭಯ ಪಾಪದ ಭೀತಿ ಬಿಟ್ಟ, ನೈತಿಕತೆ ಕೆಡಿಸಿಕೊಂಡ ಅತ್ಯಂತ ಅಪಾಯಕರದ ದೃಶ್ಯ ಕಾಣುತ್ತೇವೆ! ಇದು ಕಂಡೂ, ಜಾತಿನಾಶ ಮಂತ್ರ ಸಾರುತ್ತಿರುವ ರಾಜಕೀಯ ಮುಖಂಡರು ಅಪಾಯ ಮಾತ್ರ ತಂದಾರು!

ಬುದ್ಧ, ಜೈನ ತೀರ್ಥಂಕರರು, ಬಸವಣ್ಣನವರು, ಸಿಖ್ ಗುರುಗಳು, ಸನಾತನ ಧರ್ಮದಲ್ಲಿ ಜನಿಸಿಯೂ ಅದರ ಜಾತಿಕ್ರಮ ಸರಿಯಲ್ಲ ಎಂದು ತ್ಯಜಿಸಿ ತಮ್ಮ ಅನುಯಾಯಿಗಳಿಗೂ ತ್ಯಜಿಸಲು ಹೇಳಿದ್ದರು ನಿಜ. ಆದರೆ ಅವರ್ಯಾರೂ ಧರ್ಮಾಚಾರಗಳ ಶೂನ್ಯತೆಯ ಪಿಶಾಚದ ಕೊಠಡಿಯ ನಿರ್ಮಾಣಕ್ಕೆ ಆಸ್ಪದ ಕೊಟ್ಟವರಲ್ಲ. ಅವರು ಮೂಲಧರ್ಮದ ಕೆಲವು ಭಾಗ ಗಳನ್ನು ಆರಿಸಿ, ಅವಕ್ಕೆ ತಮ್ಮದೇ ನಿರ್ಧಾರದ ಹೊಸ ಭಾಗಗಳನ್ನು ಸೇರಿಸಿ, ಮುಂಚೆಗಿಂತ ಚುಟುಕಾದ, ಕಡಿಮೆ ಶ್ರಮದ, ಆದರೆ ಹೊಸ ಪೂರ್ಣ ರೂಪದ ಧರ್ಮ ಸಾರಿದ್ದರು. ದೇವರು ಅವರಿಗೆ ಜನರನ್ನು ತಮ್ಮ ಧರ್ಮಕ್ಕೆ ಆಕರ್ಷಿ

ಸುವ ಶಕ್ತಿಕೊಟ್ಟಿದ್ದು, ಅವರಿಂದ ಹೊಸಧರ್ಮ ಸ್ಥಾಪಿಸಲ್ಪಟ್ಟವು. ಅವರು ತಮ್ಮ ಧರ್ಮದ್ದೇ ಆದ ಪ್ರತ್ಯೇಕ ಶಾಸ್ತ್ರಮಾಡಿ, ಅವುಗಳನ್ನು ಕಲಿಸಲಿಕ್ಕೆ ಹೊಸವರ್ಗದ ಗುರುಗಳ ಪರಂಪರೆಯನ್ನೂ ತರಬೇತು ಮಾಡಿದರು. ಅವರ ಹೊಸ ಅನುಯಾಯಿಗಳಿಗೆ ಹೊಸ ಹುರುಪು ಬರಲಿಕ್ಕೆ ತಮ್ಮದೇ ವಿಶೇಷ ಹಿರಿಮೆಯ ಕ್ರಮವೆಂದು ಶಿಷ್ಯರಿಗೆ ತೋರುವ—ಬುದ್ಧರ ಧರ್ಮಚಕ್ರದ ಕಲ್ಪನೆ, ಜೈನರ ಅಲ್ಪ ಪ್ರಾಣಿಗಳ ವಿಶೇಷ ಅಹಿಂಸೆಯ ಜಾಗ್ರತೆ, ಬಸವಣ್ಣನವರ ಸತತ ಶಿವದೇವರ ನೆನಪಿಗಾಗಿ ಲಿಂಗಧಾರಣೆ, ಸಿಖ್ಖರ ಕೃಪಾಣ ಮುಂಡಾಸು ಮುಂತಾದವುಗಳೊಡನೆ ಹೊಸಧರ್ಮ ಶೀಲಾ ಹುರುಪಿಂದ ನಡೆಸಲ್ಪಡುವ ಮಟ್ಟಕ್ಕೆ ಏರಿಸಿದರು. ಯಾರಿಗೂ ತಮ್ಮ ಹೊಸ ಧರ್ಮದ ಕಾಯಕ ಆಚರಣೆಯಲ್ಲಿ ಲೋಪದ ಭಾಗಗಳ ಅಪಾಯವಿರಲಿಲ್ಲ.

ಆದರೆ ಈಗ ಕೇವಲವಾಗಿ ಜಾತಿ ಆಚಾರ ಬಿಡಿರೆಂದು ತಮ್ಮ ಹಿರಿಮೆಯ ಅಧಿಕಾರಸ್ಥಾನದಿಂದ, ಮಕ್ಕಳು ತಂದೆಯ ಮಾತಿಗಿಂತ ಹೆಚ್ಚು ಗಮನಿಸುವಂತೆ ಸಾರುತ್ತಬಂದ ರಾಜಕೀಯ ಮುಖಂಡರು ಜಾತಿಸದಾಚಾರಗಳ ನಾಶ ಸಾಧಿಸುತ್ತಿದ್ದಾರೆಯೇ ಹೊರತು, ಆ ಶೂನ್ಯಭಾಗ ಮುಚ್ಚಲಿಕ್ಕೆ ರವಷ್ಟೂ ಹೊಸತರದ ಸದಾಚಾರ ನಿರ್ಮಿಸಿದ್ದಿಲ್ಲ; ಅದನ್ನು ಬೋಧಿಸಬೇಕೆಂಬುದರ ಅವಶ್ಯಕತೆಯ ಕಲ್ಪನೆಬಾರದ ಕೇವಲ ಮನೆಸುಡುವ ಶಕ್ತಿಮಾತ್ರ ತೋರಿಸಿದ್ದಾರೆ. ಜಾತಿನಾಶವಾಗಲಿ ಎಂದ ಗಾಂಧಿಯವರು ಕೂಡ ಹೊಸ ಧರ್ಮಸ್ಥಾಪನೆಗೆ ನಿರ್ದೇಶ ಪಡೆದು ಬಂದವರಲ್ಲ! ಅವರ ಕೇವಲ ಆಪ್ತ ಶಿಷ್ಯರನ್ನೂ ಮಗಳಿಗೆ ಜಾತಿ ಹೊರಗಿನ ಅಳಿಯನನ್ನು ತರುವ ಜಾತಿಬಿಟ್ಟ ವರ್ಗಮಾಡಲಿಲ್ಲ! ಆ ಶಿಷ್ಯರಾದರೋ ಸರ್ಕಾರದ ಅಧಿಕಾರಕ್ಕೆಬಂದೊಡನೆ ಅವರನ್ನು ಸಂಪೂರ್ಣ ತಿರಸ್ಕರಿಸಿದ್ದೂ ನಡೆಯಿತು! ಮಾತ್ರವಲ್ಲ ಜಾತಿ ನಾಶದಿಂದುಂಟಾಗುವ ಧರ್ಮದ ಶೂನ್ಯತೆ ತುಂಬಿಸಲಿಕ್ಕೆ ರಾಜಕೀಯ ಮುಖಂಡರಿಗೆ ಖಂಡಿತವಾಗಿ ಪ್ರಸಾದ ಯೋಗ್ಯತೆಯೂ ಇಲ್ಲ, ಹಕ್ಕೂ ಇಲ್ಲ, ಅವರನ್ನು ಅನುಸರಿಸುವವರೂ ಇಲ್ಲ.

ಇಡೀ ದೇಶದ ಮಟ್ಟಗಲ್ಲಿ ನಡೆಯುತ್ತಿರುವ ಈ ಸನಾತನ ಧರ್ಮದ ಕೆಡುಕಿನ ಪರಿಣಾಮ ಯೋಚಿಸಿರಿ. ಒಂದೂ ಅದನ್ನು ಎದುರಿಸಿ ನಿಲ್ಲಿಸಲಿಕ್ಕೆ ಅಥವಾ ನಾಶಮಾಡಲಿಕ್ಕೆ, ಅದು ಅಸಾಧ್ಯ ತೋರಿದರೆ ದೈವೀ ಸಹಾಯಕ್ಕೆ ಬೇಕಾದ ಪ್ರಾರ್ಥನಾ ವ್ಯವಸ್ಥೆಮಾಡಲಿಕ್ಕೆ ಮತ್ತು ಜಾತಿನಾಶದ ಪ್ರಮಾಣದಲ್ಲಿ ಕುಂದಿದ ಧರ್ಮ ಬಾಳಿಸಲು ಸಾಧ್ಯತೋರುವ ಏನಾದರೂ ವ್ಯವಸ್ಥೆಗಳನ್ನು ಮಾಡಲಿಕ್ಕೆ ಇಡೀದೇಶದ ಮಟ್ಟದ ಧರ್ಮರಕ್ಷಣೆ ಸಂಸ್ಥೆ ಇಲ್ಲದ್ದರಿಂದ ಅದೂ

ನಡೆಯುತ್ತಿಲ್ಲ. ಈ ಆಪತ್ಕಾಲದಲ್ಲಾದರೂ ಎಲ್ಲ ಅದ್ವೈತ ಮಠಗಳ ಐಕ್ಯ ಮತ್ಯದ ರಚನೆ, ಅಂತೆಯೇ ವಿಶಿಷ್ಟಾದ್ವೈತ, ದ್ವೈತದ ಮತ್ತು ನಿಂಬಾರ್ಕ ವಲ್ಲಭ ಪಂತದವರ ಮುಂತಾದ ಸಂಘರಚನೆಗಳು, ಅವೆಲ್ಲವುಗಳ ಪ್ರತಿನಿಧಿಗಳ ದೇಶದ ಏಕಮಾತ್ರ ಪ್ರತಿನಿಧಿ ಸಂಸ್ಥೆ. ಈ ತೀರಾ ಆಪತ್ಕಾಲದಲ್ಲಿಯೂ ಅಸಾಧ್ಯವೇ? ಅಂತೂ ಅದಿಲ್ಲದ್ದರಿಂದ ಜಾತಿನಾಶ ಖಂಡಿತ. ಹೇಗೆಂದರೆ ಜಾತಿ ವಿಭಾಗದ ಮೇಲ್ಕಟ್ಟಿದ ಶಾಸ್ತ್ರಗಳು, ಪುರೋಹಿತ ವರ್ಗ, ತಂತ್ರಭಾಗದ ವರ್ಗ, ಬ್ರಾಹ್ಮಣ ವರ್ಗ, ಉತ್ತಮ ಅರ್ಚಕ ವರ್ಗ, ಯಾಗ, ಹೋಮ ನಡೆಸುವ ಸಮರ್ಥತೆಯುವರು, ಎಲ್ಲ ನಾಶವಾಗದಿರವು. ವೇದವನ್ನು ಗುರು ಮುಖೇನ ಮಾತ್ರವೇ ಕಲಿಯಬೇಕು (ಟೇಪ್‌ರೆಕಾರ್ಡ್ ಮೂಲಕ ಅಲ್ಲ. ಏಕೆಂದರೆ ಅದು ಕಲಿಯುವವನ ಉಚ್ಚಾರದ ದೋಷ ಕಂಡು ತಿದ್ದಲಾರದು) ಎಂದಿರುವುದರಿಂದ ಬ್ರಾಹ್ಮಣ್ಯದ ನಾಶದೊಡದೆ ವೇದವೂ ನಾಶವಾದೀತು. ಕ್ರಿಶ್ಚನ್ನರ ಬೈಬಲ್, ಮುಸಲ್ಮಾನರ ಕುರಾನು ನಾಶವಾದಂತೆ ಅದು! ಎಂದರೆ ನಮ್ಮ "ಹಿಂದೂ" ಮುಖಂಡರ ಈ ಭಾಗದ ಎದೆಗಾರಿಕೆ ಎಷ್ಟು ಭಯಂಕರ!

ದೇಶದ ಅತಿ ಹೆಚ್ಚಿನವರು, ಅತ್ಯಧಿಕ ಸಂಖ್ಯೆಯುವರು ಆದ ಶೂದ್ರರು, ತೀರಾ ಕಡಿಮೆ ಧಾರ್ಮಿಕ ಶಕ್ತಿಯುವರು. ಮೇಲು ವರ್ಣದ ಹೆಚ್ಚು ಶಕ್ತಿಯ ವರಲ್ಲೂ ಶಾಸ್ತ್ರಜ್ಞಾನ ಬಲ್ಲವರ ಸಂಖ್ಯೆ ತೀರಾ ಕಡಿಮೆ. ಎಲ್ಲ ಜಾತಿಯವರ ಮಿಶ್ರಣ ಧಾರಾಳವಾಗಿ ಆದಾಗ ಸನಾತನ ಧರ್ಮದ ಸಂಸ್ಕಾರ, ಶ್ರಾದ್ಧ, ಹೋಮ, ಯಾಗ, ಉತ್ತಮ ಪ್ರಾರ್ಥನಾ ಕ್ರಮದ ಪೂಜೆ, ಬಾಳದು. ತೀರಾ ಅತ್ಯಲ್ಪ ಸಾಧನೆಯಾಗಿ ಭಜನೆ ಪದಗಳಿಷ್ಟು ಬಾಳ್ಯಾವು, ಆದರೆ ಜನರಿಗೆ ಅತ್ಯಂತ ಕಷ್ಟ ಬಂದು ಬೇರೆ ದಾರಿ ಕಾಣದಾದಾಗ ವಿಶೇಷ ಪಾಪ ಪರಿಹಾರದ್ದಾದ, ಗ್ರಹಚಾರ ಪರಿಹಾರದ್ದಾದ, ಕಷ್ಟ ಪರಿಹಾರದ್ದಾದ, ಕರ್ಮಭಾಗದ್ದೇನಾದರೂ ಮಾಡಿಸಲಿಕ್ಕೂ ಯಾರೂ ಇರರು. ಲೋಪ ದೋಷಗಳಿಲ್ಲದೆ ನಡೆದಾಗ ಮಾತ್ರ ಫಲ ಕೊಡುವವಾದ್ದರಿಂದ, ಅದಕ್ಕೆ ಯಾರೂ ಪರಂಪರಾನು ಶಕ್ತಿ, ಉಪದೇಶ, ಮಾಹಿತ್ಯ ಇಲ್ಲದಿದ್ದು ಅವು ನಡೆಯವು. ದೇವಸ್ಥಾನಗಳಲ್ಲಿನ ಅನಾಚಾರದಿಂದ ರುದ್ರಯಾಮಳ ಹೇಳಿ ದಂತೆ ಅಲ್ಲಿ ಪಿಶಾಚಗಳು ಸೇರಿ, ಬಂದವರ ಬುದ್ಧಿ ಮಾತ್ರ ಕೆಡಿಸಿಯಾವು; ಠಕ್ಕುಗುರುಗಳು ಲಕ್ಷಾಂತರ ಉಂಟಾಗಿ, ಆದರೆ ಸಹಾಯ ಕೊಡಲಾರದೆ ಜನ ಕಂಗಾಲಾದಾರು. ಕ್ರಮೇಣ ಅವರೂ ವ್ಯರ್ಥವೆಂದಾದಾಗ, ಧರ್ಮಸ್ಥಾಪಕ ರಿಂದಲೇ ಸ್ಥಾಪಿತವಾಗಿ ಪೂರ್ಣರೂಪ ಹೊಂದಿದ್ದ, ತಮ್ಮ ಮುಟ್ಟಿದ

ಧಾರ್ಮಿಕ ಶಕ್ತಿ ಬಾಳಿಸಿಕೊಂಡು ಬಂದಿದ್ದ, ಅತಿ ಶಕ್ತಿವಂತ ರಚನಾಕ್ರಮ
ವಿದ್ದ, ಕ್ರಿಶ್ಚನ್ ಧರ್ಮದವರು, ಮುಸಲ್ಮಾನ ಧರ್ಮದವರು ತಮ್ಮ
ಮತಾಂತರ ಶಕ್ತಿಯ ಹಲವುರೂಪಗಳ ಉಪಯೋಗ ಮಾಡಿ ಹಿಂದೂಗಳನ್ನೆಲ್ಲ
ತಮ್ಮ ಧರ್ಮಕ್ಕೆ ಸೆಳಕೊಳ್ಳದೆ ಬಿಡರು. ದೇವರು ಬಿಟ್ಟರೆ! ನೆಹರೂ
ಅವರಲ್ಲದೆ ಉಳಿದೆಲ್ಲ ಧರ್ಮಿಷ್ಠ ಕಾಂಗ್ರೆಸ್ ಮುಖಂಡರು ಸ್ವರಾಜ್ಯ ಸ್ಥಾಪನೆ
ಗಾಗಿ ಹೋರಾಡಿದ್ದು ಈ ಪರಿಸ್ಥಿತಿ ಉಂಟುಮಾಡಲಿಕ್ಕಾಗಿಯೇ?

ಆದರೆ ನಮಗೆ ನಮ್ಮ ಧರ್ಮದಂತೆ ಬಾಳುವ ಹಕ್ಕು ಖಂಡಿತ ಇರಲೇ
ಬೇಕು. ಆ ರಕ್ಷಣೆಗೆ ನಮ್ಮ ಧರ್ಮ ಬಾಳಿಸುವ ಜವಾಬ್ದಾರಿ ಇರುವ ಸಂಸ್ಥೆ
ಗಳು ಏನೇನೂ ಶಕ್ತಿಯನ್ನೂ ಹಾಕಿದ್ದಿಲ್ಲ. ಬ್ರಾಹ್ಮಣ ಸಂಘಗಳಾದರೂ
ಅದಕ್ಕಾಗಿ ಹೋರಾಡಲೇ ಬೇಕು. ಜಾತಿಕ್ರಮವಿಲ್ಲದ ದೇಶಗಳ ಪ್ರಜಾ
ರಾಜ್ಯಕ್ರಮ ಅನುಸರಿಸುವ ಬಗ್ಗೆ, ಅತ್ಯಂತ ಅರ್ಥಗರ್ಭಿತವಾದ ಮಹತ್ತಿನ
ಧಾರ್ಮಿಕ ಶಕ್ತಿಯಿಂದಾದ ಜಾತಿಕ್ರಮಕ್ಕೆ ಒಗ್ಗುವ ನಮ್ಮದೇ ಕ್ರಮ ರಚಿಸು
ವುದು ಮಾತ್ರ ದೇಶಕ್ಕೂ ನಮ್ಮ ಧರ್ಮಕ್ಕೂ ನಮ್ಮ ನಾಗರಿಕತೆ ಬಾಳಲಿಕ್ಕೂ
ಅತ್ಯಗತ್ಯ. ಅದಕ್ಕೆ ತಕ್ಕ ದಾರಿ ಕಂಡುಹಿಡಿಯಲೇಬೇಕು. ಪ್ರಾಯಶಃ
ಲೌಕಿಕ ಕ್ಷೇತ್ರದ ಪ್ರತಿನಿಧಿಗಳಲ್ಲ; ದೇಹಕ್ಕಿಂತ ಆತ್ಮದ ಶ್ರೇಷ್ಠತೆ ಅಪಾರ
ವಾದ್ದರಿಂದ ಪ್ರತಿ ಜಾತಿಯವರು ಧಾರ್ಮಿಕ ಕ್ಷೇತ್ರಗಳ ಮೂಲಕ ತಮ್ಮ
ದಾಮಾಶೆಯ ಪ್ರತಿನಿಧಿಗಳನ್ನು ಆರಿಸುವಂತಾದರೆ, ಈಗಿನ ಬಹುಮಟ್ಟಿನ
ತೀರಾ ಅನೈತಿಕ ಪ್ರತಿನಿಧಿಗಳಿಗಿಂತ ಶೀಲವಂತರು ಆರಿಸಲ್ಪಡುವುದು ಸಾಧ್ಯ.
ಪ್ರತಿ ಸನಾತನಿ ಬ್ರಾಹ್ಮಣನೂ ಇನ್ನು ಮುಂದೆ ತನ್ನ ಓಟನ್ನು ನಮ್ಮ ಧರ್ಮ
ನಾಶ, ಜಾತಿನಾಶ ಮಾಡುವ ಧೋರಣೆಯುಳ್ಳವನಿಗೆ ಎಷ್ಟಕ್ಕೂ ಕೊಡುವುದಿಲ್ಲ
ವೆಂದು ನಿರ್ಧರಿಸಬೇಕು. ಏಕೆಂದರೆ ಅದು ನಾವೇ ನಮ್ಮ ಧರ್ಮಮಾತೆಯ
ನಾಶಕ್ಕೆ ಸಹಾಯ ಮಾಡಿದಂತಾಗುತ್ತದೆ. ನಮ್ಮ ಭಾವನೆಯುಳ್ಳವರು ಉಮೇದು
ವಾರರು ಇಲ್ಲದಾದಾಗ ಓಟು ಕೊಡದೆ ಅದು ಹಾಳಾದರೂ ಅಡ್ಡಿಯಿಲ್ಲ.

## ೨೩. ಸರ್ಕಾರದ ಹಿಂದೂ ದೇವಸ್ಥಾನಗಳ ಆಡಳಿತದ ಕೆಡುಕುಗಳು

ನಮ್ಮ ಸರ್ಕಾರವು ಆಡಳಿತ ವಹಿಸಿಕೊಂಡು ನಡೆಸುವ ದೇವಸ್ಥಾನಗಳೆಲ್ಲ
ಸನಾತನ ಧರ್ಮದ ನಾಲ್ಕೂವರ್ಣದವರು ಕೇವಲ ತಮ್ಮ ಉಪಯೋಗಕ್ಕಾಗಿ

ಕಟ್ಟಿಸಿದವು, ಕಾಣಿಕೆ ಹಾಕಿ ಬಾಳಿಸಿಕೊಂಡು ಬಂದವು. ಅವಕ್ಕೆ ಸರ್ಕಾರ ತನ್ನ ಹಣ ಹಾಕದ್ದರಿಂದ ಆಡಳಿತ ವಹಿಸಿಕೊಳ್ಳಬೇಕಾದವೇ ಅಲ್ಲ. ಸ್ವರಾಜ್ಯಕ್ಕೂ ಮುಂಚೆ ಅವಲ್ಲಿ ದೊಡ್ಡವನ್ನು ದೇಶದ ಹಿಂದೂ ರಾಜರು ನಡೆಸುತ್ತಿದ್ದರು ನಿಜ. ಆದರೆ ಅವರು ಅವಕ್ಕೆ ಉಂಬಳಿ ಬಿಟ್ಟವರು, ಅವುಗಳ ಉತ್ತಮ ಭಕ್ತರು, ಅವು ಚೆನ್ನಾಗಿ ನಡೆಯದಿದ್ದರೆ ತಮಗೆ, ದೇಶಕ್ಕೆ, ಹಾನಿಯಿದೆ ಎಂದು ಬಲ್ಲವರೂ ಆಗಿದ್ದು, ನಡೆಸುವ ಕ್ರಮ ಗೊತ್ತಿದ್ದವರಾಗಿದ್ದು, ಅವುಗಳ ಅಭಿವೃದ್ಧಿ ಮಾತ್ರ ಕೋರುವ, ಸಾಧಿಸುವ, ಶಕ್ತಿಯಿರುವ ಸರ್ವಮುಖ ಅರ್ಹತೆಯುವರಾಗಿದ್ದರು.

ಪ್ರಜೆಗಳೆಲ್ಲರ ಸರಿಸಮಾನತೆ ಸಾರುವ ನಮ್ಮ ಈಗಿನ ಸರ್ಕಾರ ಇತರ ಧರ್ಮದ ಪ್ರಜೆಗಳಿಗೆ ಅವರ ಮಸೀದಿ, ಇಗರ್ಜಿ ತಾವೇ ನಡೆಸಲು ಬಿಟ್ಟು ಆದರೆ ನಮ್ಮ ಮುಖ್ಯ ದೇವಸ್ಥಾನಗಳನ್ನೆಲ್ಲ ತನ್ನ ಆಡಳಿತಕ್ಕೆ ವಹಿಸಿಕೊಂಡದ್ದು ಈ ದೇವಸ್ಥಾನಗಳ ಉದ್ಧಾರಕ್ಕಲ್ಲವೇ ಅಲ್ಲ. ಏಕೆಂದರೆ ದೇವರನ್ನು ಅತಿ ದೂರ ಇಟ್ಟು, ಕೇವಲ ನಾಸ್ತಿಕ ಧೋರಣೆಯ, ದೈವ ಭಕ್ತಿ ಅರಿಯದ, ಸರ್ಕಾರಕ್ಕೆ ಧಾರ್ಮಿಕ ಸಂಸ್ಥೆಗಳ ಉದ್ಧಾರ ಸ್ಪಷ್ಟವಾಗಿ ಅಸಾಧ್ಯ. ಅದರ ಏಕಮಾತ್ರ ಗುರಿ ಅವಕ್ಕೆ ಹರಿಜನರ ಪ್ರವೇಶ, ಅನಂತರ ಅವರಿಗೆ ಅಲ್ಲಿ ಅಧಿಕಾರದ ಸ್ಥಾನಗಳಿಗೆ ನಿರಾತಂಕವಾದ ನೇಮಕ, ಅಲ್ಲಿ ಜಾತಿಕ್ರಮದ ನಾಶ, ಮಾಡುವುದು ಮಾತ್ರವಾಗಿದೆ. ಅದಕ್ಕಾಗಿ ಶ್ರೀ ನೆಹರೂ ಸರ್ಕಾರವು ನಾಲ್ಕೂ ವರ್ಣದವರ ದೇವಸ್ಥಾನಗಳನ್ನು "ಸಾರ್ವಜನಿಕ" ಎಂದೂ ಸಂವಿಧಾನದಲ್ಲಿ ಹೆಸರಿಸಿ, ಅಂಥವಕ್ಕೆ ಪ್ರತಿ "ಹಿಂದೂ"ವಿಗೂ ಪ್ರವೇಶವಿದೆ (ಎಂದರೆ ಅವಲ್ಲಿ ಇತರರಿಗೆ ಸರಿ ಸಮಾನತೆಯ ಹಕ್ಕೂ ಇದೆ) ಎಂದು ಸೇರಿಸಿ, ಅದನ್ನು ಕಾರ್ಯದಲ್ಲಿ ಸಾಧಿಸಲು ಆಡಳಿತ ವಹಿಸಿಕೊಂಡಿದೆ. ಆದರೆ ಈ ನಾಲ್ಕೂ ವರ್ಣದವರು ಕೇವಲ ಒಂದೇ ಸನಾತನ ಧರ್ಮದ ನಾಲ್ಕು ಅಂಗಗಳು ಮಾತ್ರ. ನಾಲ್ಕು ಅಣ್ಣತಮ್ಮಂದಿರು ಒಟ್ಟು ಒಂದು ತೋಟದ ಕೃಷಿಮಾಡಿದರೆ, ಭೂಲೋಕದಲ್ಲೇ ಯಾರೂ ಎಲ್ಲೂ, ಆ ತೋಟ ಸಾರ್ವಜನಿಕ, ಅದನ್ನು ಸರ್ಕಾರ ಆಡಳಿತ ವಹಿಸಿಕೊಳ್ಳುವ ಹಕ್ಕು ಪಡೆಯುತ್ತದೆ ಎಂದದ್ದಿಲ್ಲ! ನಮ್ಮಲ್ಲಿ ಮಾತ್ರ ಈ ಅನ್ಯಾಯ!

ನಮ್ಮ ದೇವಸ್ಥಾನಗಳ ಅದ್ಭುತ ದೈವೀಕಳೆಗೆ ಸಮಾನವಾದುದು ಮತ್ಯಾವ ಧರ್ಮದ ದೇವಮಂದಿರಗಳಿಗೂ ಇಲ್ಲ. ಅದಕ್ಕೆ ಕಾರಣ ನಮ್ಮ ದೇವಸ್ಥಾನಗಳು ಆಗಮಶಾಸ್ತ್ರದ ಆಧಾರದ ಮೇಲೆ ನಡಕೊಂಡು ಬಂದುದು.

ದೇವಸ್ಥಾನಗಳಿಗೆ ಹರಿಜನರ ಪ್ರವೇಶ ಆಗಮಶಾಸ್ತ್ರಕ್ಕೆ ಸಂಪೂರ್ಣ ವಿರುದ್ಧ ವಾಗಿದೆ. ಏಕೆಂದರೆ ಶಾಸ್ತ್ರದಲ್ಲಿಯೇ ಹೇಳಿದಂತೆ :

ಅಂತ್ಯಜಾದ್ಯಾ ದೇವಗೃಹಂ ಪ್ರವಿಶೇಯುಸ್ತದಾ ಧ್ರುವಂ ।
ದೇವತಾನಾಂ ಕಲಾನಾಶೋ ದುರ್ಭಿಕ್ಷಾದಿಕ ಮೇವಚ ।
ರೋಗ ಬಾಧಾದಿಕಂ ವಾಪಿ ಭಕ್ತಾನಾಮುಪಜಾಯತೇ ॥ (ರುದ್ರಯಾಮಳ)

"ಅಂತ್ಯಜಾತಿ ಪತಿತರ ಪ್ರವೇಶ ದೇವಮಂದಿರಾದಿಗಳಲ್ಲಿ ಆದಲ್ಲಿ ವೈದಿಕ ಮಂತ್ರಗಳಿಂದ ಉಂಟುಮಾಡುವ ದೇವರ ಕಳೆಯು ನಷ್ಟವಾಗಿ ಆ ಮೂರ್ತಿ ಯಲ್ಲಿದ್ದ ದೇವರ ಸಾನ್ನಿಧ್ಯವು ಹೋಗಿ ಬಿಡುವುದು, ಮತ್ತು ಅದರಲ್ಲಿ ದುಷ್ಟ ಶಕ್ತಿಗಳು ವಾಸವಾಗಿ ದೇವಸ್ಥಾನವನ್ನು ಹೊಕ್ಕ ಜನರ ಬುದ್ಧಿಯು ಕೆಡುವುದು, ದುರ್ಭಿಕ್ಷಾದಿಗಳುಂಟಾಗುವವು, ರೋಗ ಬಾಧಾದಿಗಳ ಪ್ರಮಾಣ ಹೆಚ್ಚುತ್ತಾ ಹೋಗುವುದು. "(ಭಗವಾನ್ ಶ್ರೀಧರ ಸ್ವಾಮಿಯವರ ಆರ್ಯ ಸಂಸ್ಕೃತಿ, ಪುಟ ೨೫೯). ಕ್ರಿಶ್ಚನರು, ಮುಸಲ್ಮಾನರು ಅವರವರ ಇಗರ್ಜಿಗಳನ್ನುಮಸೀದಿ ಗಳನ್ನು ತಮ್ಮಲ್ಲಿ ಒಗ್ಗಟ್ಟು, ಧಾರ್ಮಿಕ ಶಕ್ತಿಬೆಳೆಸಲಿಕ್ಕೆ ಧಾರಾಳವಾಗಿ ಉಪ ಯೋಗಿಸಿಕೊಳ್ಳುತ್ತಿರುವಾಗ, ಇವರೆದುರಲ್ಲಿ ಸನಾತನಿಗಳ ಶಕ್ತಿ ಅಪಾಯಕರ ವಾಗಿ ಬಹಳ ಕುಂದುತ್ತಿರುವಾಗ ನಮ್ಮ ಯುವಕರು ಅಪಾರಮಟ್ಟದಲ್ಲಿ ಧರ್ಮ ಬಿಡುತ್ತಿರುವಾಗ, ಅನಿವಾರ್ಯವಾಗಿ ಮುಂದೆ ಧರ್ಮನಾಶ ಖಂಡಿತ. ಈ ಬೆಳೆಯುತ್ತಿರುವ ಕೇಡುತಪ್ಪಿಸಿಕೊಳ್ಳಲಿಕ್ಕೆ ಬೇಕಾದ ಧಾರ್ಮಿಕಶಕ್ತಿ ಬೆಳೆಸಲಿಕ್ಕೆ ನಮ್ಮ ದೇವಸ್ಥಾನಗಳನ್ನು ನಾವೇ ಅತ್ಯಂತ ಸಮರ್ಥತೆಯಿಂದ, ಅನೇಕ ಹೊಸ ಆಕರ್ಷಣೆ, ಕ್ರಮಗಳಿಂದ ನಡೆಸುವುದು ಅತ್ಯಗತ್ಯವಾಗುತ್ತಿದೆ. ಆದ್ದರಿಂದ ಎಲ್ಲರೂ ಸನಾತನಿಗಳೂ ಸರ್ಕಾರದ ಆಡಳಿತದ ಅಪಾರ ಹಾನಿ, ಅನ್ಯಾಯ, ಸರ್ಕಾರವು ಅವರನ್ನು ಮಾತ್ರ ಅಲ್ಪ ಪ್ರಜೆಗಳಿಂದು ಮಾಡಿದ ಕ್ರಮ, ಅರ್ಥ ಮಾಡಿಕೊಂಡು ನಮ್ಮ ಮುಖ್ಯ ದೇವಸ್ಥಾನಗಳ ಪುನರುದ್ಧಾರ ಶಾಸ್ತ್ರೀಯ ದಾರಿಯಿಂದಲೇ ನಮ್ಮಿಂದಲೇ ನಡೆಯಲು ಬದ್ಧಕಂಕಣರಾಗುವುದು ಅತ್ಯಗತ್ಯ. ಆದ್ದರಿಂದ ಈಗ ಆಗುವ ಅನ್ಯಾಯಗಳ ಹಾನಿ ಮುಂದೆ ಕೊಡುತ್ತೇನೆ.

**ಹರಿಜನರು ಹಿಂದೂ ಧರ್ಮದವರೆಂಬ ಸರ್ಕಾರದ ತೀರ್ಮಾನವೇ ತೀರಾ ತಪ್ಪು :** ಹಿಂದೂಗಳೆಂದು ಸಾಮಾನ್ಯವಾಗಿ ಈಗ ಕರೆಯಲ್ಪಡುವವ ರಲ್ಲಿ ಏಳು ವರ್ಗಗಳಿವೆ—ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ, ಗಿರಿಜನರು, ಏಳನೇ ಅಂತ್ಯವಾಸಿಗಳು (ಎಂದರೆ ಹೊಲೆಯರು, ಶ್ವಪಚರು, ಚಂಡಾಲರು ಮುಂತಾದವರು). ಒಬ್ಬ ಒಂದು ಧರ್ಮಕ್ಕೆ ಸೇರಿದವನೋ

ಎಂದು ನಿರ್ಧರಿಸಲಿಕ್ಕೆ ಆ ಧರ್ಮದ ಶಾಸ್ತ್ರಪುಸ್ತಕಗಳಲ್ಲಿ ಅವನಿಗೆ ಅವನ ಧರ್ಮ ಏನಿರಬೇಕೆಂದೂ ಹೆಸರಿಸಿ ವಿವರಿಸಿರಬೇಕಷ್ಟೆ! ಸನಾತನ ಧರ್ಮದಲ್ಲಿ ನಾಲ್ಕು ವರ್ಣದವರ ಧರ್ಮ ವೃತ್ತಿಗಳಿವೆ. ಅಂತ್ಯಜರ ವೃತ್ತಿಗಳ ವಿವರವೂ ಇದೆ. ಸನಾತನಿಗಳು ತಮ್ಮ ತಮ್ಮ ವರ್ಣದೊಳಗೆ ಮಾತ್ರ ವಿವಾಹವಾಗಬೇಕು. ಆದರೆ ಅಪರೂಪಕ್ಕೆ ವರ್ಣಸಂಕರ ದೋಷದ ಮಿಶ್ರಜಾತಿಗಳೂ ಅಲ್ಪ ಸಂಖ್ಯೆಯಲ್ಲಿ ಉಂಟಾಗಿದ್ದವು. ಅವಕ್ಕೂ ಬೇರೆ ಬೇರೆ ಹೆಸರುಗಳು ವೃತ್ತಿಗಳು ಅತಿ ಚಂಟುಕಾಗಿ ಧರ್ಮಶಾಸ್ತ್ರದಲ್ಲಿದೆ. ಇದಕ್ಕೆ ಒಂದು ಅಪವಾದವೆಂದರೆ, ಎಷ್ಟಕ್ಕೂ ಆಗಕೂಡದಾದ ಬ್ರಾಹ್ಮಣ ಸ್ತ್ರೀಯು ಶೂದ್ರನೊಡನೆ ಸಂಗಮಾಡಿ ಜನಿಸಿದವರು ಸಂಪೂರ್ಣಧರ್ಮಬಾಹಿರರು, ಅಧಮ ಚಂಡಾಲರು, ಎಂದು ಇದೆ. ಸಂಕರ ಜಾತಿಗಳಲ್ಲಿ ಬೇರೆ ಬೇರೆ ಮಟ್ಟಗಳಿವೆ. ಅವಲ್ಲಿ ಅತೀವ ಕೆಳಮಟ್ಟದವರೇ ಐದನೆ ವರ್ಗವಾದ ಅಂತ್ಯಜರು, ಅಥವಾ ಕೀಳು ಶೂದ್ರರು.

ಮೇಲು ಶೂದ್ರರು ಅಥವಾ ಜಾತಿಶೂದ್ರರು ಅಸ್ಪೃಶ್ಯರಲ್ಲ. ದೇವಸ್ಥಾನ ಕೆಳ ಒಳಸುತ್ತಿಗೆ. ಬ್ರಾಹ್ಮಣ ಮನೆಗಳಲ್ಲಿ ದೇವಕೋಣೆ, ಅಡಿಗೆ ಕೋಣೆಗಳಲ್ಲದ ಭಾಗಗಳಿಗೆ ಬರಬಹುದು. ಅವರು ಮಾಂಸ ತಿನ್ನುವವರಾದರೂ ಅವಲ್ಲಿ ಅತಿ ತಾಮಸಿಕವಾದ ಹಲವು ತರದವನ್ನು ಅವರಿಗೂ ಶಾಸ್ತ್ರ ನಿಷೇಧಿಸಿದೆ. ದೃಷ್ಟಾಂತಕ್ಕೆ ಪಂಚನಖಗಳ ಪ್ರಾಣಿಗಳು ಹಲವು ಇವೆಯಾದರೂ ಅವಲ್ಲಿ ಪಂಚಜಾತಿಯನ್ನು ಹೆಸರಿಸಿ ಉಳಿದವನ್ನು (ದೃಷ್ಟಾಂತಕ್ಕೆ ನಾಯಿ, ಮಂಗ, ಕಪ್ಪೆ, ಹೆಗ್ಗಣ) ತಿನ್ನಕೂಡದು, ತಾನೇ ಸತ್ತ ಪ್ರಾಣಿ ತಿನ್ನಕೂಡದು, ಕಾಗೆ ಮುಂತಾದ ಹಲವು ಪಕ್ಷಿಗಳನ್ನೂ ತಿನ್ನಕೂಡದು ಎಂದಿದೆ. ಇದು ಈಗಲೂ ಆಚರಣೆಯಲ್ಲಿದೆ. ಅಡ್ಡ ಜಾತಿಯವರೂ ತಮ್ಮ ಮೂಲದವರ ಮೇಲ್ತರದ ಆಹಾರ ಕ್ರಮ ಅನುಸರಿಸುತ್ತ ಬರುವುದೇ ಕ್ರಮ. ಶಾಸ್ತ್ರವಿರುದ್ಧ ತೀರಾ ತಾಮಸಿಕ ಆಹಾರ ತಿನ್ನುವವರಲ್ಲ. ಆದರೂ ಶೂದ್ರರಿಗಿಂತ ಕೆಳಮಟ್ಟದ ಅವರು ದೇವಸ್ಥಾನಗಳ ಹೊರ ಪ್ರಾಕಾರಕ್ಕೆ ಮಾತ್ರ ಬರಬಹುದು; ಅವರ ಸ್ಪರ್ಶದೋಷವಾದಾಗ ಸ್ಪರ್ಶಿಸಿದ ಭಾಗ ತೊಳೆದು ಆಚಮನ ಮಾಡಬೇಕೆಂದಿದೆ. ಅವರ ಅತಿ ನಿಕಟ ಸಂಪರ್ಕ ಆಗದಂತೆ ಶಾಸ್ತ್ರವು ಅವರಿಗೆ ಮೇಲ್ಜಾತಿಯವರ ಹೊರಕೆಲಸಗಳನ್ನೇ ಹೆಸರಿಸಿದೆ. ಮೇಲುಜಾತಿ ಶೂದ್ರರಲ್ಲಿ ಕನ್ನಡಜಿಲ್ಲೆಗಳ ಶೆಟ್ಟರು, ಮೊಗೇರರು, ಓಲಗದವರು, ಕೇರಳದ ನಾಯರರು, ತಮಿಳುನಾಡಿನ ಚೆಟ್ಟಿಯಾರರು ಮುಂತಾದವರು ಸೇರಿದ್ದಾರೆ. ಅವರಲ್ಲಿ ಅನೇಕರಿಗೆ ತಮ್ಮದೇ ಕುಲ ದೇವಸ್ಥಾನಗಳಿದ್ದು ಅವಲ್ಲಿ ಬ್ರಾಹ್ಮಣ ಅರ್ಚಕರಿ

ದ್ದಾರೆ; ಅಥವಾ ಅವರದ್ದೇ ಅರ್ಚಕರಿದ್ದಾರೆ. ಆದರೆ ಅವರಲ್ಲಿ ಕೆಲವರು ಕೆಲವುಮಟ್ಟಿಗೆ ಭೂತಗಳನ್ನೂ ನಂಬುವವರೇ. ಅಂತ್ಯಜರು ದೇವರನ್ನು ನಂಬುವವರೂ, ದೇವಸ್ಥಾನಗಳಲ್ಲಿ ಹಣ್ಣುಕಾಯಿ ಅರ್ಪಿಸುವವರೂ ಆದರೂ ಅವರು ಭೂತಾರಾಧಕರೂ ಹೌದು. ಅವರ ಅತಿ ನಿಕಟ ಸಂಪರ್ಕವು ಜಾತಿ ಸನಾತನಿಗಳಿಗೆ ಬೇಡವೆಂದು ಅವರು ಸನಾತನಿಗಳ ಊರ ಹೊರಗೆ ಆದರೆ ಸಮೀಪದಲ್ಲಿ ವಾಸಿಸಬೇಕೆಂದಿದೆ. ಮುಂಚೆ ಈ ದೇಶದ ಜನರಿಗೆ ಧರ್ಮ ವೆಂದರೆ ಬಹಳ ಗೌರವ ಪ್ರೀತಿ ಇದ್ದುದರಿಂದ ಅಂತ್ಯಜರಲ್ಲೂ ಕೆಲವರು ತಮ್ಮ ಆರ್ಥಿಕಸ್ಥಿತಿ ಸುಧಾರಿಸಿದಾಗ ಮೇಲುಜಾತಿ ಶೂದ್ರರಂತೆ ತಮ್ಮ ಧರ್ಮಾಚರಣೆ ಬೆಳೆಸಿ ಕಾಲಕ್ರಮೇಣ ಶೂದ್ರರಲ್ಲಿ ಬೆರೆತು ಶೂದ್ರರೆಂದೇ ವರ್ಗೀಕರಿಸಲ್ಪಟ್ಟ ದ್ದುಂಟು. ಕೇರಳದ ತೀಯರು ಇತ್ತೀಚೆಗೆ ಬಹಳ ಸುಧಾರಣೆ ಹೊಂದುತ್ತಿ ರುವ ವರ್ಗ. ಅವರದ್ದೇ ಅನೇಕ ದೇವಸ್ಥಾನಗಳಿವೆ.

ಇನ್ನಿರುವ ೨ ವರ್ಗದವರು, ಗಿರಿಜನರು, ಅಂತ್ಯವಾಸಿಗಳು. ಹಿಂದೂ ದೇಶದಲ್ಲಿರುವವರಾದ್ದರಿಂದ ಹಿಂದೂಗಳು ಸರಿ, ಆದರೆ ಹಿಂದೂ ಧರ್ಮಕ್ಕೆ ಸೇರಿದವರೇ ಅಲ್ಲ. ಅವರು ಯಾವ ಧರ್ಮಸಾಧನೆಯ ಮಟ್ಟ ಮುಟ್ಟಿದವರೂ ಅಲ್ಲ; ಕೇವಲ ಭೂತಾರಾಧಕರು. ಭೂತಾರಾಧನೆ ಒಂದು ಧರ್ಮವೇ ಅಲ್ಲ. ಧರ್ಮಗಳ ಸಾರ ಏನೆಂದರೆ ವಿಶ್ವವನ್ನೂ ನಮ್ಮನ್ನೂ, ಒಬ್ಬನೇ ಆದ ದೇವರು ನಿರ್ಮಿಸಿ ಪಾಲಿಸುತ್ತಾನೆ. ಆದ್ದರಿಂದ ನಾವು ಅವನನ್ನು ನಂಬಬೇಕು. ಪೂಜಿಸ ಬೇಕು. ನಮ್ಮಲ್ಲಿ ಮರಣದ ಆಚೆಕೂಡ ಶಾಶ್ವತವಾಗಿ ಬಾಳುವ ಆತ್ಮವಿದೆ. ದೇವರು ನಮಗೆ ಕೊಟ್ಟ ಶಾಸ್ತ್ರದ ಧರ್ಮದಂತೆ ಬಾಳಿದರೆ ಮರಣದ ಆಚೆ ನಮಗೆ ಸ್ವರ್ಗ ಸುಖ ಶಾಂತಿ ಇದೆ. ಶಾಸ್ತ್ರಕ್ಕೆ ವಿರುದ್ಧವಾಗಿ ಬಾಳಿದರೆ ಕಠಿಣ ನರಕಯಾತನೆ ಇದೆ ಎಂಬುದಾಗಿದೆ. ಆದರೆ ಗಿರಿಜನರೂ ಅಂತ್ಯವಾಸಿಗಳೂ ಅಲ್ಲಲ್ಲಿರುವ ಸಾವಿರಾರು ಭೂತಗಳಲ್ಲೊಂದನ್ನು ನಂಬುತ್ತಾರೆ ಮಾತ್ರ. ಅವರಿಗೆ ಆತ್ಮ ಮತ್ತು ದೇವರ ಕಲ್ಪನೆ ಬಹಳ ಕಷ್ಟಸಾಧ್ಯ; ಆದರೆ ಭೂತ ಗಳು ಪಾತ್ರಿಯ ಮೂಲಕ ಬೆಂಕಿ ಕೆಂಡದ ಮೇಲೆ ನೋವಾಗದೆ ನಡೆಯುತ್ತ ಭಕ್ತರಿಗೆ ಸಹಾಯ ಕೊಡುತ್ತೇವೆಂದಂತೆ ಧಾರಾಳವಾಗಿ ಸಹಾಯ ಮಾಡುತ್ತ ತಮ್ಮ ಅಮಾನುಷ ಶಕ್ತಿಯನ್ನು ಪ್ರತ್ಯಕ್ಷ ಪ್ರದರ್ಶನಮಾಡಿ ಮನವೊಲಿಸುತ್ತವೆ. ಕೆಲವು ಭೂತಗಳು ತೀರಾ ನೀಚತರದವು ತಮ್ಮನ್ನು ನಂಬಿದ ದರೋಡೆಕೋರ ರಿಗೆ, ಕೊಲೆಗಾರರಿಗೆ ಕೂಡ ಸಹಾಯ ಕೊಡುತ್ತವೆ. ಅವಕ್ಕೆ ಮದ್ಯಮಾಂಸ ಬಹಳ ಪ್ರಿಯ.

ಈ ಎರಡು ವರ್ಗದವರೂ ಮಾನವರಲ್ಲಿ ಅತ್ಯಲ್ಪ ಮಟ್ಟದವರು, ಅನಾಗರಿಕರು ಗಿರಿಜನರು, ಅವರ ಜೀವಾತ್ಮರು ೮೪ ಲಕ್ಷ ಪ್ರಾಣಿ ಜನ್ಮಗಳನ್ನು ಆಗ ತಾನೇ ದಾಟಿ ಆ ಜನ್ಮಗಳಲ್ಲಿ ಕೇವಲ ಪ್ರಕೃತಿಯು ಕೊಟ್ಟ ಸ್ವಭಾವದಂತೆ ಬಾಳುತ್ತಿದ್ದುದು ಮುಗಿಸಿ, ಮಾನವ ಜನ್ಮಕ್ಕೆ ಬಂದಾಗ ತಮ್ಮಲ್ಲಿ ಚಿಗುರಲಾರಂಭಿಸಿದ ಸ್ವಂತ ಬುದ್ಧಿಯ ಉಪಯೋಗ, ಸ್ವಲ್ಪ ನೈತಿಕತೆ ಕಲಿಯಲಾರಂಭಿಸಿದ ತೀರಾ ತಾಮಸಿಕ ಗುಣದ ವರ್ಗದವರು ಗಿರಿಜನರು, ಕಾಡುಜನರು, ಮೂಲನಿವಾಸಿಗಳು, ಇತ್ತೀಚಿನವರೆಗೂ ಲೋಕದಲ್ಲಿ ಹಲವು ಕಡೆಗಳಲ್ಲಿದ್ದರು. ಆಫ್ರಿಕದ ನೀಗ್ರೋಗಳು, ಅಮೇರಿಕದ ಕೆಂಪು ಇಂಡಿಯನ್ನರು ಆಸ್ಟ್ರೇಲಿಯದ ಬುಶ್‌ಮೆನ್ ಮುಂತಾದವರಾಗಿ ಧಾರಾಳ ಕಾಲ, ಪ್ರಾಯಶಃ ಕಲಿಯುಗದ ಆದಿಯಿಂದ ಕೇವಲ ೨೦೦ ವರ್ಷಗಳ ಹಿಂದಿನವರೆಗೂ (ಸುಮಾರು ೨೦೦ ತಲೆಮಾರವರೆಗೆ) ಭೂತಾರಾಧಕರಾಗಿದ್ದು, ತಮ್ಮದೇ ಧರ್ಮ ಉಂಟುಮಾಡಿಕೊಳ್ಳಲಾರದವರಾಗಿ ಬಾಳಿದರು. ಆಮೇಲೆ ಮುಖ್ಯವಾಗಿ ಕ್ರಿಶ್ಚನರು ಅವರ ಉತ್ತಮ ಪ್ರದೇಶಗಳನ್ನೆಲ್ಲ ಅಪಹರಿಸಿ ಅವರನ್ನು ಕ್ರಿಶ್ಚನ್ ಧರ್ಮಕ್ಕೆ ಸೇರಿಸಿಕೊಂಡು ಆಮೇಲೆ ಮಾನವರ "ಸರಿಸಮಾನತೆ" ಬೋಧಿಸಲಾರಂಭಿಸಿದ್ದಾರೆ. ಆ ಹೊರ ಪ್ರದೇಶಗಳ ಕಾಡು ಜನರಲ್ಲಿ ನರಭಕ್ಷಕರೂ ಇದ್ದರು. ನಮ್ಮ ಗಿರಿಜನರಾದ ನೀಲಗಿರಿ ತೋಡರು, ರಾಜಪುತಾನದ ಭಿಲ್ಲರು, ಅಸ್ಸಾಮಿನ ನಾಗಾರು, ಸಂತಾಲರು ಯಾರೂ ನರಭಕ್ಷಕರಾಗಿರಲಿಲ್ಲ. ಎಂದರೆ ಅವರದ್ದು ಸ್ವಲ್ಪ ಮೇಲ್ಮಟ್ಟ. ಅವರು ಇಲ್ಲಿನ ಸನಾತನಿಗಳ ಸಂಪರ್ಕದಿಂದ ಕ್ರಮೇಣವಾಗಿ ನಮ್ಮ ದೇವರು ಮತ್ತು ಧರ್ಮ ಕಂಡು ಆಶಿಸಿ, ನಮ್ಮ ಧರ್ಮದಲ್ಲಿ ಅನಂತರ ಪ್ರಾಯಶಃ ಅಂತ್ಯಜರಾಗಿ ಜನ್ಮ ಪಡೆಯುತ್ತಿದ್ದರು. ನಮ್ಮ ಶಾಸ್ತ್ರದ ಹೇಳಿಕೆ ದೇವರೇ ನಮ್ಮ ಮಟ್ಟ ನಿರ್ಧರಿಸಿ ತಕ್ಕ, ಜನ್ಮಕೊಡುತ್ತಾನೆಂದುದಾದ್ದರಿಂದ, ಅವನು ಕೊಟ್ಟ ಜನ್ಮದ ಧರ್ಮ ತಪ್ಪು ಮತಾಂತರ ಮಾಡಿ ತಿದ್ದಬೇಕು ಎಂಬ ಕ್ರಿಶ್ಚನರ, ಮುಸುಲ್ಮಾನರ ಕ್ರಮ ನಮ್ಮ ಶಾಸ್ತ್ರಕ್ಕೆ ವಿರುದ್ಧ. ಆದ್ದರಿಂದ ಈ ಗಿರಿಜನರು ನಮ್ಮ ದೇಶದಲ್ಲೇ ಅತಿ ಸಮೀಪವಾಗಿ ಇದ್ದರೂ ನಾವು ಅವರನ್ನು ಎಂದೂ ಮತಾಂತರ ಮಾಡಿರಲಿಲ್ಲ ; ಆದರೆ ಠಕ್ಕ ಪಾಶ್ಚಾತ್ಯರಂತೆ ಸಮಾನತೆ ಸಾರುತ್ತ ಅವರ ಪ್ರದೇಶಗಳನ್ನೆಲ್ಲ ಅಪಹರಿಸಿದ್ದಿದೂ ಇಲ್ಲ.

ಅಂತ್ಯವಾಸಿಗಳೆಂದರೆ ಹೊಲೆಯರು, ಪಂಚಮರು, ಶ್ವಪಚರು, ಚಂಡಾಲರು ಮುಂತಾದ ಅತಿ ಕೆಳಮಟ್ಟದವರು, ಅವರಿಗೆ ನಮ್ಮ ಶಾಸ್ತ್ರವು

ಇತರ ವರ್ಣಗಳವರಿಗೆ ತಪ್ಪದೆ ತಿಳಿಸಿದಂತೆ ಜಾತಿಯಂವೃತ್ತಿ, ಆಹಾರ ನಿಯಂಮ, ಧರ್ಮ ಹೇಳಿರಂವುದಿಲ್ಲ ಮಾತ್ರವಲ್ಲ ಅದೊಂದು ದುಷ್ಟ ಕರ್ಮಕ್ಕೆ ಶಿಕ್ಷೆಯಾಗಿ ದೇವರೇ ಕೊಡಂವ ನರಾಧಮ ಜನ್ಮವೆಂದೇ ತಿಳಿಸಿದೆ (ಮನಂಸ್ಮೃತಿ ೧೦, ೨೬, ೩೦). ಛಾಂದೋಗ್ಯೋಪನಿಷತ್ತಿನಲ್ಲಿ ಪಾಪಿಗಳಿಗೆ ನಾಯಿ, ಹಂದಿ ಅಥವಾ ಚಂಡಾಲ ಜನ್ಮ ಲಭಿಸುತ್ತದೆ ಎಂದೂ ಇದೆ. ಸರ್ಕಾರವು ಅತಿಕೆಟ್ಟವರಿಗೆ ಕಠಿಣ ಜೈಲಂಶಿಕ್ಷೆ ಕೊಟ್ಟಾಗ ಊರ ಜನರು ಅವರ ಬಿಡುಗಡೆಗೆ ಯತ್ನಿಸರು. ಅವರು ಹಳ್ಳಿಗಳಿಂದ ದೂರವಾಸಿಸುತ್ತ ಸತ್ತದನಗಳ ಮಾಂಸ, ಕಾಗೆ, ನಾಯಿ, ಹಾವುಗಳ ಮಾಂಸ ಮುಂತಾದ ಅತ್ಯಂತ ತಾಮಸಿಕ ಮಾಂಸ ತಿಂದಂ ಬಾಳುತ್ತಾರೆ. ಅವರ ಸಂಸರ್ಗದೋಷ ಅತಿ ಹೆಚ್ಚಿನದಾದ್ದರಿಂದ ಅವರಿಗೆ ಕೆಲಸ ಕೊಡದೆ ಹಳ್ಳಿಗಳಿಂದ ದೂರವಿರಬೇಕೆಂಬ ನಿಯಂಮವಿತ್ತು. ದೇವರಶಾಪವೇ ಅವರದ್ದು ಕಷ್ಟ ಜೀವನವಾಗಬೇಕೆಂದಿರುವುದರಿಂದಲೋ ಏನೋ, ಅವರು ನಮ್ಮ ದೇಶದಲ್ಲಿ ಅವರ ಹತ್ತುಪಾಲು ಹೆಚ್ಚು ಇರುವ ಗಿರಿಜನರಂತೆ ಕಾಡುಪ್ರದೇಶಗಳಲ್ಲಿ, ಹೆಚ್ಚು ಸುಖದಲ್ಲಿ, ಬಾಳಂವ ಬುದ್ಧಿ ಬಾರದಾದರು. ಅವರದ್ದು ಶಿಕ್ಷೆಯ ಜೀವನವಾದ್ದರಿಂದ, ಜಾತಿ ಆಚಾರ ಬಿಟ್ಟವರಿಗೆ ಸನಾತನಿಗಳು ಜಾತಿ ಕಟ್ಟು ಮಾಡಿ ದೂರ ಹಾಕಿ ಅಸ್ಪರ್ಶರಾಗಿ ಮಾಡಿ ಶಿಕ್ಷಿಸಿ, ಮುಂದೆ ಅಂತ್ಯವಾಸಿಗಳ ಗತಿ ಬರಲಿಕ್ಕಿದೆ; ಪ್ರಾಯಶ್ಚಿತ್ತ ಮಾಡಿಕೊಳ್ಳಿರೆಂದಂ ಪಾಠ ಕಲಿಸಲಿಕ್ಕೆ ದೇವರೇ ಅವರಿಗೆ ಈ ನಿಕೃಷ್ಟಜೀವನ ಕೊಟ್ಟು ಊರಜನರಿಗೆ ಕಾಣಂವಂತೆ ಕಷ್ಟಪಡುವ ಬುದ್ಧಿಕೊಟ್ಟಿರಬಹಂದು. ಆದರೆ ಭೂತದಯೆ ಎಲ್ಲ ಮಾನವನಲ್ಲಿರಲೇಬೇಕಾದ್ದರಿಂದ ಈ ಚಂಡಾಲವರ್ಗವು ಬೇಡಲುಬಂದಾಗ ದ್ವಿಜರು ನಿತ್ಯದ ಭೂತಯಜ್ಞದಲ್ಲಿ ಅನ್ನ ಕೊಡಬೇಕಂ (ಮನಂ ೧೦,೫೪,೩,೯೨) ಎಂದೇ ಶಾಸ್ತ್ರವಿಧಿ ಇದೆ.

ಗಾಂಧಿಯವರಂ ವೈಶ್ಯರಾಗಿದ್ದು ನಮ್ಮ ಶಾಸ್ತ್ರಚೆನ್ನಾಗಿ ಕಲಿತವರೇ ಅಲ್ಲ, ಈ ಗಿರಿಜನರೂ ಅಂತ್ಯವಾಸಿಗಳೂ "ಹಿಂದೂ"ಗಳಾದ್ದರಿಂದ ಅವರು ಹಿಂದೂ ಧರ್ಮದವರೂ ಹೌದು, ಅವರಿಗೆ ದೇವಸ್ಥಾನಗಳ ಪ್ರವೇಶಕೊಡದಿರುವುದೂ ತಪ್ಪು ಎಂದಂ ವಾದಿಸಿ ಈ ಕೇವಲ ಭೂತಾರಾಧಕರಿಗೆ "ಹರಿ" ಜನರು (ಶ್ರೀ ಹರಿಗೆ ಬೇಕಾದವರು) ಎಂಬ ತೀರಾ ತಪ್ಪುಭಾವನೆ ಉಂಟುಮಾಡುವ ಹೆಸರು ಕೊಟ್ಟರಂ. ದೇವಸ್ಥಾನಗಳಿಗೆ ಅವರ ಪ್ರವೇಶಕ್ಕೆ ಸತ್ಯಾಗ್ರಹ ಮಾಡಿ ಕೆಲವು ಕಡೆ ಪ್ರವೇಶಸಾಧಿಸಿದರು. ಆಮೇಲೆ ಸ್ವರಾಜ್ಯ ಬಂದಾಗ ಮುಂಖ್ಯಮಂತ್ರಿಯಾಗಿ ಬಂದ, ನಮ್ಮ ಧರ್ಮವೇ ಅರಿಯದ, ಕೇವಲ ನಾಸ್ತಿಕರಾದ ಶ್ರೀ ನೆಹರೂ ಅವರು ಸಂವಿಧಾನದಲ್ಲಿ "ಹಿಂದೂ"ಗಳಿಗೆಲ್ಲ ಹಿಂದೂ ಧರ್ಮದ

ಸಾರ್ವಜನಿಕ ದೇವಸ್ಥಾನಗಳಲ್ಲಿ ಪ್ರವೇಶ ಕೊಡಲೇಬೇಕು ಎಂಬ ನಿಬಂಧನೆ ಸೇರುವಂತೆ ಮಾಡಿದರು. ಅದನ್ನು ಕಾರ್ಯರೂಪಕ್ಕೆ ತರಲು ಹಿಂದೂಧರ್ಮದವರ ತೊಡಕುಬಾರದಂತೆ ಸರ್ಕಾರವೇ ನಾಲ್ಕೂ ವರ್ಣದವರ ದೊಡ್ಡ ದೇವಸ್ಥಾನಗಳ ಆಡಳಿತ ಅಲ್ಲಲ್ಲಿ ವಹಿಸಿಕೊಳ್ಳುವ ಈಗಿನ ಕ್ರಮ ತಂದರು. ಆದರೆ ಈ ಕ್ರಮ ಬಂದು ೪೫ ವರ್ಷ ಕಾಲಗಳಲ್ಲಿ ಸರ್ಕಾರ ದೇವಸ್ಥಾನಗಳ ಬಾಗಿಲು ಹರಿಜನರಿಗೆ ಧಾರಾಳವಾಗಿ ತೆರೆದು ತಮ್ಮ ಅಧಿಕಾರಿಗಳನ್ನಿಟ್ಟು ಸ್ವಾಗತಿಸುತ್ತ ಬಂದಿದೆಯಾದರೂ ಪ್ರವೇಶಕ್ಕೆ ಈ ಹರಿಜನರು ತಂಡತಂಡವಾಗಿ ಬಂದದ್ದೆಲ್ಲೂ ಇಲ್ಲ. ಕೇವಲ ಸರ್ಕಾರದಿಂದ ದೇವಸ್ಥಾನದ ಆಡಳಿತದ ಅಧಿಕಾರ ಪಡೆದು ಬಂದವರು, ಅವರ ಮಿತ್ರರು, ಬಂಧುಗಳು ಮಾತ್ರ ತಮ್ಮ ಹೊಸ ಅಧಿಕಾರ ತೋರಿಸಲಿಕ್ಕೆ ಅವಕ್ಕೆ ಬಂದದ್ದು ಕಾಣುತ್ತೇವೆ. ಈಗ ಮೀನಾಕ್ಷಿಪುರದಲ್ಲಿ ಆರಂಭವಾದ ಮತಾಂತರದ ಹೊಸ ಚಳವಳದಲ್ಲೂ ಹರಿಜನರಿಗೆ ಬೇಕಾದುದು ಧರ್ಮ ಅಲ್ಲ, ಅದರ ಮೂಲಕ ಲೌಕಿಕ ಮೇಲ್ಮಟ್ಟ ಮಾತ್ರ. ಇದು ಧರ್ಮದ ದುರುಪಯೋಗ! ಅವರಲ್ಲಿ ಬಹುಮಟ್ಟಿನವರು ಈಗಲೂ ಕೇವಲ ಭೂತಾರಾಧಕ ಮಟ್ಟದವರು ಮಾತ್ರ.

ಆದರೆ ಕೆಲವರು ಅವರಲ್ಲಿ ಮೇಧಾವಿಗಳಿದ್ದಾರಲ್ಲ! ಎಂದರೆ ಅದು ಧರ್ಮದ ಭಾಗದಲ್ಲಲ್ಲ. ಈ ಶತಮಾನದಲ್ಲಿ ವಿಜ್ಞಾನದ ಹಾವಳಿಯಿಂದ ಸನಾತನಿಗಳಲ್ಲಿ ಮೇಲುಜಾತಿಯ ಅನೇಕರು ಧರ್ಮ ಮತ್ತು ಬುದ್ಧಿಶಕ್ತಿ ಎರಡನ್ನೂ ಸಮಾನವಾಗಿ ಬೆಳೆಸುತ್ತ ಮೇಲೆ ಬಂದವರು ಆಮೇಲೆ ದೇಹದ ಭೋಗ ಬೆಳೆಸಿ ಜಪ ನಿತ್ಯಕರ್ಮ ಬಿಟ್ಟು ಅಧೋಪತನಕ್ಕೆ ತಳ್ಳಲ್ಪಟ್ಟಿರುವರು. ಹೀಗೆ ಧರ್ಮದಲ್ಲಿ ಬಹಳ ಕೆಳಮಟ್ಟಕ್ಕೆ ತಳ್ಳಲ್ಪಟ್ಟವರು ಪ್ರಾಯಶ್ಚಿತ್ತವಾಗಿ ಅತಿ ನಮ್ರತೆಯ ಭಯಭೀತಿಯಿಂದ ಬಾಳಬೇಕು. ಕೆಳಮಟ್ಟಕ್ಕೆ ತಳ್ಳಲ್ಪಟ್ಟ ಗಂಧರ್ವನೊಬ್ಬ ತೀರಾ ನಮ್ರತೆ, ಧರ್ಮದ ಅಭಿಲಾಷೆ, ತೋರಿಸಿಕೊಂಡು ಬಾಳಿದವ ಅನಂತರ ಶ್ರೀ ನಾರದರೇ ಆದರು! ಹೊಲೆಯ ಆದರೆ ಮುಂಚೆ ದೇವತೆಯಾಗಿದ್ದ ರಸಿಕ ಎಂಬವ ಶ್ರೀ ರಾಮಕೃಷ್ಣರ ನಮ್ರ ಭಕ್ತನಾಗಿದ್ದು ಅವರ ಕೃಪೆ ಪಡೆದು ಅತ್ಯುತ್ತಮ ಮರಣ ಹೊಂದಿದ (ದೇವರನ್ನು ನಂಬುವ ನೋಡಿ). ಆದರೆ ಕೇವಲ ಈ ಕಾಲದ ಅಂಥವರು ಪತಿತ ಜನ್ಮವಾಗಿ ಅಂತ್ಯವಾಸೀ ಜನ್ಮ ಪಡೆದ ಕೆಲವರಿಗೆ ಕಾಲಗತಿಯಿಂದ ಬುದ್ಧಿಶಕ್ತಿ ಇದ್ದು ಅದು ಬ್ರಾಹ್ಮಣರ ಅಸೂಯೆ, ಲೌಕಿಕ ಮೇಲ್ಮಟ್ಟದ ಆಸೆ, ಅತೃಪ್ತಿ, ತಂದಿದೆ, ಜಗಜೀವನರಾಮರ ಅಸಮಾಧಾನ, ಮೇಲ್ಜಾತಿಯವರೆಲ್ಲ ಹರಿಜನರ

ನಂಟಸ್ತಿಕೆ ಮಾಡಿ ಸಂಪೂರ್ಣ ಸರಿಸಮಾನತೆ ಕೊಡಲಿಲ್ಲವಲ್ಲ, ಸರ್ಕಾರ ಅದನ್ನು ಕಡ್ಡಾಯ ಮಾಡಲಿಲ್ಲವಲ್ಲ ಎಂಬುದಾಗಿತ್ತು.

ನಮ್ಮ ಸನಾತನ ಧರ್ಮವು "ಹಿಂದೂ" ಧರ್ಮ ಎಂದು ಯಾವ ಮುಖ್ಯ ಶಾಸ್ತ್ರ ಪುಸ್ತಕವೂ ಹೇಳಿದ್ದಿಲ್ಲ. ವೇದ ಧರ್ಮ, ಸನಾತನಧರ್ಮ ಎಂದು ಮಾತ್ರ ಹೇಳಿದೆ. ಅತಿ ಹಿಂದೆ ಭೂಲೋಕದಲ್ಲೇ ಕೇವಲ ಏಕ ಮಾತ್ರ ಧರ್ಮವಾಗಿದ್ದ ಅದನ್ನು ಸಾಮಾನ್ಯವಾಗಿ ಕೇವಲ ಧರ್ಮ ಎಂದು ಮಾತ್ರ ಕರೆಯುವ ವಾಡಿಕೆಯಿತ್ತು. ಸಿಂಧೂನದಿಯ ಪಶ್ಚಿಮದ ನಿವಾಸಿಗಳು ಬಹಳ ಕೀರ್ತಿ ಪಡೆದಿದ್ದ ನಮ್ಮ ದೇಶವನ್ನು ಹಿಂದೂದೇಶ, ಜನರು ಹಿಂದೂಗಳು ಇಲ್ಲಿನವರು ಹಿಂದೂ ಧರ್ಮದವರು ಎಂದು ಮೇಲುಮೇಲಿಂದ ಕರೆದರು. ಹೀಗಾಗಿ ಆ ಹೆಸರಲ್ಲಿ ಗಿರಿಜನರು ಅಂತ್ಯವಾಸಿಗಳೂ ಸೇರಿದರು. ಬುದ್ಧ, ಜೈನ ಮುಂತಾದ ಧರ್ಮಗಳು ಉಂಟಾಗಿ ತಮ್ಮದೇ ವೈಯಕ್ತಿಕ ಹೆಸರು ಹೊಂದಿ ಬೇರೆ ಆದಾಗ ನಮ್ಮ ಧರ್ಮಕ್ಕೆ ಹಿಂದೂ ಧರ್ಮ ಎಂಬ ಹೆಸರು ಚಾಲ್ತಿಯಾಗಿ ಅಂಟಿಕೊಂಡಿತು. ನಮ್ಮ ಜಾತಿಕ್ರಮ ಒಪ್ಪದ ಬುದ್ಧ ಧರ್ಮ, ಜೈನ ಧರ್ಮ, ವೀರಶೈವ ಧರ್ಮ ಮುಂತಾದವು ಇತರರನ್ನು ಮತಾಂತರ ಮಾಡುತ್ತಿದ್ದಾಗಲೂ ಗಿರಿಜನರು ಅಂತ್ಯವಾಸಿಗಳು ಧಾರ್ಮಿಕ ಜೀವನಕ್ಕೆ ಯೋಗ್ಯರಲ್ಲ, ಕೇವಲ ಭೂತಾರಾಧಕರು ಎಂದು ತಿಳಿದೇ ಅವರನ್ನು ತಮ್ಮ ಧರ್ಮಕ್ಕೆ ಬಹಳಕಾಲ ಮತಾಂತರ ಮಾಡಲು ಬಯಸಲಿಲ್ಲ, ಹೀಗಾಗಿ ಅವರ ತಂಡ ಹಾಗೆಯೇ ಉಳಿಯಿತು ಎಂದೂ ಊಹಿಸಬೇಕಾಗುತ್ತದೆ. ಆದರೆ ತಮ್ಮ ಅಂತಃಕರಣವೇ ತಮಗೆ ಆಧಾರ ಎನ್ನುತ್ತಿದ್ದ ಗಾಂಧಿಯವರು, ತಮ್ಮ ಬುದ್ಧಿಶಕ್ತಿಯೇ ತಮಗೆ ಆಧಾರ ಎಂಬ ಶ್ರೀ ನೆಹರೂ ಅವರು, "ಹಿಂದೂ"ಗಳೆಲ್ಲರೂ ಹಿಂದೂ ಧರ್ಮದವರು ಎಂಬ ತಪ್ಪು ತೀರ್ಮಾನ ಮಾಡಿ ಈಗಿನ ವಿಪರೀತ ಅನ್ಯಾಯಕ್ಕೆ ಕಾರಣರಾಗಿದ್ದಾರೆ.

ಸರ್ಕಾರವು ಸನಾತನಿಗಳಿಗೆ ಮಾಡಿದಂತೆ, ಇಗರ್ಜಿಗಳಿಗೆ ಮಸೀದಿಗಳಿಗೆ ಆಯಾಯ ಧರ್ಮದವರಲ್ಲದ ಹೊರವರ್ಗದವರಲ್ಲದ ಸರ್ಕಾರದ ಆಜ್ಞೆ ಎಂದು ಕಡ್ಡಾಯದ ಪ್ರವೇಶದ ಹಕ್ಕು ಕೊಟ್ಟು, ಅಲ್ಲಿ ಪಾದ್ರಿಯಾದಿ ಮುಲ್ಲಾರಾಗಿ, ಮ್ಯಾನೇಜರಾಗಿ ಕೂಡ ನೇಮಕ ಮಾಡಿದ್ದರೆ ಆ ಧರ್ಮದವರ ಭಯಂಕರ ಪ್ರತಿಭಟನೆ, ರಕ್ತಪಾತ, ಅನಾಹುತಗಳಾಗಿ ಸರ್ಕಾರ ಹಿಮ್ಮೆಟ್ಟಿದಿರುತ್ತಿತ್ತೇ? ಆದರೆ ಸನಾತನಿಗಳು ನಿರ್ವೀರ್ಯರೆಂದು ನಮ್ಮವರೇ ತುಂಬಿರುವ ಕಾಂಗ್ರೆಸ್ ಪಕ್ಷ ಚೆನ್ನಾಗಿ ಅರ್ಥ ಮಾಡಿಕೊಂಡು ಬಿಟ್ಟಿದೆ! ಇದಕ್ಕೆ

ಇದರ ಇನ್ನೊಂದು ದೃಷ್ಟಾಂತ ನೋಡಿರಿ. ಸಂವಿಧಾನದಲ್ಲಿ ನಮ್ಮ ನಾಲ್ಕು ವರ್ಣದವರ ಧಾರ್ಮಿಕಸಂಸ್ಥೆಗಳನ್ನೆಲ್ಲ "ಸಾರ್ವಜನಿಕ" ಎಂದು ಕರೆದು, ಅವಕ್ಕೆ ಯಾವ "ಹಿಂದೂ"ವಿಗೂ ಪ್ರವೇಶವಿದೆ ಎಂದು ವಿಧಿಮಾಡಿದೆ (೨೫(೨) ಖ). ಎಂದರೆ ಒಂದೆಡೆಯಲ್ಲಿದ್ದ ಸ್ವಲ್ಪಸಂಖ್ಯೆಯ ನಾಲ್ಕುವರ್ಣದ ಕೇವಲ ಸನಾತನಿಗಳು ಒಂದು ಭಜನಾಮಂದಿರ, ಕಲ್ಯಾಣಮಂಟಪ ಮಾಡಿದರೆ ಕೂಡ ಆಗ ಅದರ ಪ್ರವೇಶ ಎಂದರೆ ಸದಸ್ಯತ್ವ ಮತ್ತು ಆಮೇಲೆ ಅಧಿಕ ಸಂಖ್ಯೆಯ ಬಲದಿಂದ ಆಡಳಿತವಹಿಸುವುದು ಕೂಡ ಸುತ್ತಲಿನ ಇತರ "ಹಿಂದೂ"ಗಳಿಗೆ ಸಾಧ್ಯ! ಹರಿಜನರು, ಗಿರಿಜನರು, ಸಿಖ್ಖರು, ಬುದ್ಧರು ಯಾರೂ ಬೇಕಾದರೂ ಹಾಗೆ ಅಪಹರಣ ಮಾಡಲು ಸಂವಿಧಾನ ಅಧಿಕಾರ ಕೊಟ್ಟಿದೆ! ಏಕೆಂದರೆ ಅವರೆಲ್ಲರೂ ಸಂವಿಧಾನದಂತೆ ಹಿಂದೂಗಳಲ್ಲವೇ ! (ವಿಧಿ ೨೫, ವಿವರಣೆ).

ಸನಾತನಿಗಳು ಇನ್ನಾದರೂ ಸ್ವಲ್ಪ ವೀರ್ಯ, ಒಗ್ಗಟ್ಟು ಬೆಳೆಸಲು ನಿರ್ಧರಿಸಲಿ. ದೇವರು ಆ ಪ್ರೇರಣೆ ಕೊಡಲಿ. ಇಲ್ಲವಾದರೆ ಅವರ ಖಂಡಿತ ನಾಶ ನಮ್ಮ ಕಾಂಗ್ರೆಸ್ ಮುಂತಾದ ಸರ್ಕಾರಗಳು ಸಾಧಿಸದಿರವು.

**೧) ದೇವಸ್ಥಾನಗಳ ಸರ್ಕಾರದ ಆಡಳಿತದ ಕೆಲವು ಇತರ ಅತಿ ಕೆಟ್ಟ ದೋಷಗಳು** : ಸೆಕ್ಯುಲರ್ ಸರ್ಕಾರಕ್ಕೆ ದೇವಸ್ಥಾನ ನಡೆಸುವ ಯೋಗ್ಯತೆಯೇ ಇಲ್ಲ. ಯಾವ ಸಂಸ್ಥೆಯೇ ಆಗಲಿ ಅತಿಚೆನ್ನಾಗಿ ನಡೆಸಲ್ಪಡ ಬೇಕಾದರೆ, ನಡೆಸುವವರಿಗೆ ಅದನ್ನು ಚೆನ್ನಾಗಿ ನಡೆಸಿ ಪ್ರಯೋಜನ ಪಡೆಯುವ ಅಭಿಲಾಷೆ ಬೇಕು. ದೇಶದ ದೊಡ್ಡ ದೇವಸ್ಥಾನಗಳನ್ನು ಹಿಂದೆ ನಡೆಸುತ್ತಿದ್ದ ಹಿಂದೂ ರಾಜರಿಗೆ ಆ ಅಭಿಲಾಷೆ ಇತ್ತು. ಅದರ ಪುಣ್ಯಬೇಕಿತ್ತು. ಚೆನ್ನಾಗಿ ನಡೆಸದಿದ್ದರೆ ಬರುವ ಪಾಪ, ದೇಶಕ್ಕೆ ತಮಗೆ ಬರುವ ಹಾನಿಗೆ ಹೆದರುತ್ತಿದ್ದರು. ರಾಜರನ್ನು ಉರುಳಿಸಿ ಅವರ ಸ್ಥಾನಕ್ಕೆ ಬಂದ ತಾವು ಇನ್ನು ದೇವಸ್ಥಾನಗಳ ಆಡಳಿತನಡೆಸುವುದು ತೀರಾನ್ಯಾಯವೇ ಆದೀತು ಎಂದು ಕಾಂಗ್ರೆಸ್ ಸರ್ಕಾರ ನಿರ್ಧರಿಸಿ, ಆಡಳಿತ ವಹಿಸಿಕೊಂಡಿತು. ಆದರೆ ಅವರೊಳಗಿರುವ ವ್ಯತ್ಯಾಸ ಅಜಗಜಾಂತರದ್ದು. ಸೆಕ್ಯುಲರ್ ಸರ್ಕಾರಕ್ಕೆ ದೇವರು ಬಹಳ ದೂರ ; ಅದಕ್ಕೆ ದೇವಸ್ಥಾನಗಳಿಂದ ಪುಣ್ಯ ಎಳ್ಳಷ್ಟೂ ಬೇಡ. ದೇವಸ್ಥಾನಗಳ ದೈವೀ ಶಕ್ತಿ ಬೆಳೆಸುವ ಕ್ರಮ ಅದು ಏನೇನೂ ಅರಿಯದು. ದೇವಸ್ಥಾನದ ಇಲಾಖೆ ಸರ್ಕಾರದ ಖಜಾನೆ ತುಂಬಿಸಲಿಕ್ಕಿಲ್ಲ. ಆದ್ದರಿಂದ ಆ ಭಾಗಕ್ಕೆ ಆರಿಸಲ್ಪಡುವ ಮಂತ್ರಿ, ಮಂತ್ರಿ ಮಂಡಲದ ಮುಖ್ಯಸ್ಥನೊಬ್ಬನಲ್ಲ. ದೇವಸ್ಥಾನಗಳ ಮ್ಯಾನೇಜರ್‌ಹುದ್ದೆಗೆ ಆರಿಸಲ್ಪಡುವವರು ಸಮರ್ಥತೆ ಪರೀಕ್ಷೆಯಲ್ಲಿ ತೇರ್ಗಡೆ,

ದೈವಭಕ್ತಿ, ಧರ್ಮದಲ್ಲಿ ಹಿರಿತನ ಮತ್ತು ಶ್ರದ್ಧೆ, ಆಗಮಶಾಸ್ತ್ರದ ಸ್ವಲ್ಪಜ್ಞಾನ, ಇದ್ದವರಾಗಬೇಕಿಲ್ಲ. ಹಣಕಾಸಿನ ಜ್ಞಾನ ಸ್ವಲ್ಪ ಇದ್ದರಾಯಿತು. ಹರಿಜನರ ಪ್ರವೇಶದ ಗುರಿ, ಸರ್ಕಾರದ ಜಾತಿನಾಶದ ಧೋರಣೆ ಪಾಲಿಸಿದರಾಯಿತು. ಅವರಿಂದ ದೇವಸ್ಥಾನದ ಸುಧಾರಣೆ ಅಲ್ಪಸ್ವಲ್ಪ. ಆದರೆ ಅದು ಕೇವಲ ಅದರ ಲೌಕಿಕ ಬೆಡಗಿನಭಾಗದಲ್ಲಿ ಮಾತ್ರ; ಮುಖ್ಯವಾದ ದೈವೀಕಳೆ ಹೆಚ್ಚಿಸು ವುದರಲ್ಲಲ್ಲ. ಹೀಗೆ ಅತ್ತ ಸಾಯಂದ ಇತ್ತ ಬದುಕದ ಆಡಳಿತದ ಕ್ರಮದಿಂದ ಅಲ್ಲಿ ದೈವೀಕಳೆ ನಾಶವಾಗುತ್ತ ಬಂದಿದೆ. ಮುಂಚಿನಷ್ಟು ಈಗ ಹರಕೆಗಳಿಗೆ ಫಲ ಲಭಿಸುವುದಿಲ್ಲ. ಆದರೆ ಮತ್ತೂ ಹೆಚ್ಚು ನಾಶವಾಗಲಿಲ್ಲ. ಏಕೆಂದರೆ ದೇವರಕಳೆ ಕೆಡಿಸುವ ಹರಿಜನರ ಪ್ರವೇಶ ಇನ್ನೂ ತೀರಾ ಅಲ್ಪ ಸ್ವಲ್ಪದಲ್ಲಿ ನಿಂತಿದೆ ಮಾತ್ರ. ಮತ್ತು ದೇವಸ್ಥಾನದ ಪರಂಪರಾನುಗತವಾಗಿ ಬಂದ ಬ್ರಾಹ್ಮಣ ಅರ್ಚಕರು ಪಾಪದ ಭಯದಿಂದ ತಮ್ಮ ಕೆಲಸ ಮುಂಚಿನಂತೆ ಮಾಡು ತ್ತಿದ್ದಾರೆ; ಭಕ್ತರು ಇನ್ನೂ ಮುಂಚಿನ ಶ್ರದ್ಧೆಯಿಂದ ತುಂಬಿದ್ದು ಪ್ರಾರ್ಥಿಸು ತ್ತಾರೆ. ಈಗಲೀಗ ಹರಿಜನ ಮ್ಯಾನೇಜರರನ್ನು, ಮುಕ್ತೇಸರರನ್ನು ನೇಮಿಸು ವುದೂ ಆರಂಭವಾಗಿದೆ. ಇನ್ನು ಅಧಿಕ ತೀವ್ರತೆಯ ಹಾನಿ ಅನಿವಾರ್ಯ.

೨) **ಹರಿಜನ ಮುಕ್ತೇಸರರು ಮ್ಯಾನೇಜರರು ದೇವಸ್ಥಾನ ನಾಶ ಮಾಡದಿರರು :** ಅವರು ಸನಾತನ ಧರ್ಮದವರೇ ಅಲ್ಲ ಎಂಬ ಅತ್ಯಂತ ಮಹತ್ವದ ಆಕ್ಷೇಪ ತತ್ಕಾಲಕ್ಕೆ ಬದಿಗಿಟ್ಟು ಇತರ ರೀತಿಗಳಲ್ಲೂ ನೋಡುವ. ಒಂದು ದೊಡ್ಡ ಕಾರ್ಖಾನೆಗೆ, ಆಸ್ಪತ್ರೆಗೆ ಆಡಳಿತಕ್ಕೆ ಆ ಭಾಗದಲ್ಲಿ ತುಂಬಾ ತಜ್ಞರಾದವರನ್ನೂ, ಚೆನ್ನಾಗಿ ಮಾಹಿತ್ಯವಿದ್ದವರನ್ನೂ ಮಾತ್ರ ನೇಮಿಸುವುದು ಎಲ್ಲೆಲ್ಲೂ ಕ್ರಮ. ಹೈಸ್ಕೂಲಿಗೆ ಪ್ರವೇಶದ ಹಕ್ಕಿದೆ ಎಂಬುದರಿಂದ ಒಬ್ಬ ವಿದ್ಯಾರ್ಥಿಯನ್ನೇ ಎಲ್ಲೂ ಮುಖ್ಯೋಪಾಧ್ಯಾಯ ಮಾಡುವುದಿಲ್ಲ. ಕಾಂಗ್ರೆಸ್ ಪಕ್ಷಸೇರುವ ಸದಸ್ಯನನ್ನು ಕಾರ್ಯದರ್ಶಿಮಾಡಲಿಕ್ಕೆ ಅವ ಬಹಳಕಾಲ ಅದರಲ್ಲಿ ಕೆಲಸಮಾಡಿ ಸಮರ್ಥತೆ, ಆ ಭಾಗದ ಜ್ಞಾನ ಬೆಳೆಸಿ, ಅವನ್ನು ಪುನಃ ಪುನಃ ಇತರ ಸದಸ್ಯರಿಗೆ ಪ್ರದರ್ಶಿಸಿ ಆಮೇಲೆ ಮಾತ್ರ ಇತರ ಸದಸ್ಯರು ಮೆಚ್ಚಿ ಅವನನ್ನು ಕಾರ್ಯದರ್ಶಿಯಾಗಿ ಆರಿಸುತ್ತಾರೆ. ಹಾಗೆಮಾಡದೆ ಹೊಸಜನರನ್ನು ಕೂಡಲೇ ಆರಿಸುವ ಮೂರ್ಖತನ ಮಾಡಿದರೆ ಕಾಂಗ್ರೆಸ್ ಸಂಸ್ಥೆ ಒಂದು ವರ್ಷ ದಲ್ಲಿ ನಾಶವಾಗದಿರದು. ಇದನ್ನು ಚೆನ್ನಾಗಿ ಅರಿತಿದ್ದು ಎಂದೆಂದೂ ಹಾಗೆ ಮಾಡದವರು, ಸನಾತನ ಧರ್ಮದ ಶಿಲಾಂಶ ಕೂಡ ಜ್ಞಾನ ಬೇಕಾದ ದೈವ ಭಕ್ತಿ, ಶ್ರದ್ಧೆ, ಪಾಪದ ಭೀತಿ ಇಲ್ಲದವರನ್ನು ದೇವಸ್ಥಾನಗಳ ಮ್ಯಾನೇಜರರಾಗಿ

ಮಾಡುವುದು ಅವುಗಳ ನಾಶ ಸಾಧಿಸಲಿಕ್ಕೆಂದೇ ಆಗದೆ ? ದೇವಸ್ಥಾನಗಳ ಹರಿಜನರ ಪ್ರವೇಶ ಆರಂಭಿಸಿದ ಗಾಂಧಿಯವರು ಅವರಲ್ಲಿ ಬೇಕಾದವರಿಗೆ ಮಾತ್ರ ದೇವಸ್ಥಾನಗಳ ಪ್ರವೇಶ ಲಭಿಸಿ ದೇವರ ದರ್ಶನಮಾಡುವ ಸಾಮಾನ್ಯ ಭಕ್ತನ ಹಕ್ಕು ಸಿಕ್ಕಿದರೆ ಸಾಕೆಂದು ಆಶಿಸಿರಬೇಕೇ ಹೊರತು, ಈ ತರದ ಯೋಗ್ಯತೆ ನಿರ್ಲಕ್ಷಿಸುವ ವಿಪರೀತ ರೂಪದ ಹಕ್ಕು ಇರಲಾರದು. ಹರಿಜನ ಮುಕ್ತೇಸರರು, ಮ್ಯಾನೇಜರರು ನೇಮಕವಾಗುವ ಮುಂಚೆಯೇ ಕೆಲವುಶೂದ್ರ ಮ್ಯಾನೇಜರರು ಈ ಕಾಲದ ಪ್ರಜಾರಾಜ್ಯ ಕ್ರಮದಿಂದ ಪ್ರಭಾವಿತರಾಗಿ ದೇವಸ್ಥಾನಗಳ ಅತ್ಯಧಿಕ ಸಂಖ್ಯಾತರಾದ ಶೂದ್ರ ಭಕ್ತರಿಗೆ ಅವರ ದಾಮಾಶೆಯ ಪ್ರಯೋಜನಕ್ಕಾಗಿ ದೇವಸ್ಥಾನಗಳ ಸಂಪ್ರದಾಯ ಕ್ರಮಗಳ ಬದಲಾವಣೆ ಮಾಡಿದ್ದುಂಟು. ಆದರೆ ಅತ್ಯಂತ ಆಳವಾದ ಮಹತ್ತಿನದಾದ ದೇವಸ್ಥಾನದ ಶಾಸ್ತ್ರದ ವಿಚಾರದಲ್ಲಿ ತೀರ್ಮಾನಗಳು ಆ ಶಾಸ್ತ್ರದಂತೆ ಮಾತ್ರ ಆಗುವುದು ದೇವಸ್ಥಾನದ ಹಿರಿಮೆಗೆ ಅಗತ್ಯ, ಹೊರತು ಸಂಖ್ಯಾಬಲದ ಪ್ರಜಾರಾಜ್ಯಕ್ರಮದಂತಲ್ಲ. ಕಾರ್ಖಾನೆಯ ಅತ್ಯಧಿಕ ಸಂಖ್ಯೆಯವರಾದ ಕಾರ್ಮಿಕರು ಪ್ರಜಾರಾಜ್ಯಕ್ರಮವೆಂದು ತಮ್ಮವನಿಗೆ ಮತಕೊಟ್ಟು ಮುಖ್ಯ ಇಂಜನಿಯರನ್ನಾಗಿ ನೇಮಿಸಿದರೆ ಕಾರ್ಖಾನೆಯ ನಾಶ ಖಂಡಿತ. ಕಾಲೇಜಿನ ಅತ್ಯಧಿಕ ಜನರಾದ ವಿದ್ಯಾರ್ಥಿಗಳು ತಮ್ಮವನಿಗೆ ಅಧಿಕ ಪ್ರಾಧಾನ್ಯತೆ ಕೊಟ್ಟು ಲೆಕ್ಕದ ಪ್ರಾಧ್ಯಾಪಕನಾಗಿ ಮಾಡಿದರೆ ಅಲ್ಲಿ ಯಾರೂ ಲೆಕ್ಕದ ಭಾಗದಲ್ಲಿ ತೇರ್ಗಡೆ ಹೊಂದರು. ದೇವಸ್ಥಾನದ ಶಾಸ್ತ್ರ ನಮ್ಮದು ಅತ್ಯಂತ ಶಕ್ತಿಯುಕ್ತದ್ದಾಗಿದೆ. ಏಕೆಂದರೆ ಅದು ಬಹಳ ಆಳವಾದದ್ದು, ದಿವ್ಯಜ್ಞಾನದ್ದು. ಬಹಳ ವರ್ಷಗಳ ಹಿಂದೆ ಬೊಂಬಾಯಿಯಲ್ಲಿ ಉಂಟಾದ ಒಂದು ಅತಿ ದೊಡ್ಡ ಬೆಂಕಿಯ ಹಾವಳಿಯಲ್ಲಿ ಬಹಳ ಮನೆಗಳು ಮಾತ್ರವಲ್ಲ, ಆ ವಠಾರದ ಇಗರ್ಜಿ ಮಸೀದಿಗಳು ನಾಶವಾದವು, ಆದರೆ ದೇವಸ್ಥಾನ ನಾಶವಾಗಲಿಲ್ಲ. ಕೊಯ್ನಾದ ಭೂಕಂಪದಲ್ಲಿ ಅಲ್ಲಿನ ಎಲ್ಲಾ ಕಟ್ಟಡಗಳೂ ಬಿರುಕುಬಿಟ್ಟವು, ಅನೇಕವು ಕುಸಿದವು. ಸ್ವಲ್ಪವೂ ಹಾಳಾಗದೆ ಉಳಿದದ್ದು ಅಲ್ಲಿನ ಏಕಮಾತ್ರವಾದ ಮಾರುತಿ ದೇವಸ್ಥಾನ. ಕೆಲವುವರ್ಷಗಳ ಹಿಂದಿನ ಎರಡೂ ಕರಾವಳಿಗಳಲ್ಲಿನ ಭಯಂಕರ ಚಂಡಮಾರುತದಲ್ಲಿ ಲಕ್ಷದ್ವೀಪದ ಏಕಮಾತ್ರ ಮಸೀದಿ, ಆಂಧ್ರದ ಒಂದು ಆಶ್ರಿತರಿಂದ ತುಂಬಿದ್ದ ಇಗರ್ಜಿ ನಾಶವಾದವು, ಆದರೆ ಒಂದೇ ಒಂದು ದೇವಸ್ಥಾನವೂ ಹಾಳಾಗಲಿಲ್ಲ. ನಮ್ಮ ದಿವ್ಯವಾದ ಶಾಸ್ತ್ರದ ವಿಚಾರದಲ್ಲಿ ಒಬ್ಬ ಚೆನ್ನಾಗಿ ಶಾಸ್ತ್ರ ಬಲ್ಲವನ ತೀರ್ಮಾನವು ಅದನ್ನರಿಯದ ಸಹಸ್ರಜನರ ತೀರ್ಮಾನಕ್ಕಿಂತ ಶ್ರೇಷ್ಠ

ಬೆಂಗಳೂರು.



ಎಂದು ಶಾಸ್ತ್ರ ನಿರ್ದೇಶವೇ ಇದೆ (ಮನು ೧೨,೧೧೩). ಸರ್ಕಾರದ, ಅದರ ಶೂದ್ರ ಅಧಿಕಾರಿಗಳ, ಪ್ರಜಾ ಬಹುಮಂತದ ಕ್ರಮ ನಮ್ಮ ದಿವ್ಯ ದೇವಸ್ಥಾನಗಳ ನಾಶವನ್ನು ಸಾಧಿಸದಿರದು. ಆ ಮೇಲೆ ಅವು ಬ್ರಾಹ್ಮಣರಿಗೂ ಇಲ್ಲ, ಶೂದ್ರರಿಗೂ ಇಲ್ಲ, ಯಾರಿಗೂ ಇಲ್ಲವಾದೀತು. ನಮ್ಮ ಕೇವಲ ನಾಸ್ತಿಕ ಧೋರಣೆಯ ಸೆಕ್ಯುಲರ್‌ರಾಜ್ಯಕ್ಕೆ ಪ್ರಜೆಗಳ ಒಂದುಪಂಗಡಕ್ಕೆ ಕೇವಲ ಹಿಂದೂ ಧರ್ಮ ಕಲಿಸಲೇಬೇಕೆಂಬ ಧ್ಯೇಯ ಎಲ್ಲಿಂದ ಬಂತು ? ಹರಿಜನರನ್ನು ಬಿಟ್ಟು ಮಂತ್ಯಾರ ವಿಚಾರದಲ್ಲೂ ಅದಿಲ್ಲವಲ್ಲ ! ಅದನ್ನು ಕೇವಲ ದೇವಸ್ಥಾನಗಳ ನಾಶಕ್ಕೇ ಹಿಡಕೊಂಡದ್ದೆಂದಾಗದೇ ?

ತಮಿಳುನಾಡಿನಲ್ಲಿ ಒಂದು ದೇವಸ್ಥಾನಕ್ಕೆ ನಾಸ್ತಿಕ ಎ.ಡಿ.ಎಂ.ಕೆ. ಸರ್ಕಾರವು ಒಬ್ಬ ಹರಿಜನನನ್ನು ಮಂಕ್ತೇಸರನಾಗಿ ನೇಮಿಸಿತು, ಅವ ಕೂಡಲೇ ದೇಮಸ್ಥಾನದ ಬ್ರಾಹ್ಮಣ ಅರ್ಚಕನ ಮೇಲೆ ಸವಾರಿ ಮಾಡಲಾರಂಭಿಸಿದ. ಅರ್ಚಕ ಇದನ್ನು ಸಹಿಸಲಾರದೆ ಧರ್ಮದ ಲೋಪಕ್ಕೆ ಹೆದರಿ ಜೀವನದ ವೃತ್ತಿ ಹೋದರೂ ಅಡ್ಡಿ ಇಲ್ಲ ಎಂದು ಆ ಹುದ್ದೆ ಬಿಟ್ಟೇ ಹೋಗಿಬಿಟ್ಟ. ಅಂದಿನಿಂದ ದೇವಸ್ಥಾನದಲ್ಲಿ ಪೂಜೆ, ನೈವೇದ್ಯ, ಅರ್ಚನೆ ನಿಂತಿತು. ದೇವರು ಉಪವಾಸ ಬೀಳುವಂತಾಯಿತಲ್ಲ ! ತಮಗೆ ಕೇಡಾಗದೇ ? ಎಂದು ಭಕ್ತರಿಗೆ ಸಿಟ್ಟುಬಂತು. ಬೇರೆರೀತಿಗಳಲ್ಲಿಯೂ ಕೆಲವು ಹರಿಜನರ ದಬ್ಬಾಳಿಕೆ ಅವರನ್ನು ಸಿಟ್ಟಿಗೆಬ್ಬಿಸಿತು. ಪರಿಣಾಮವಾಗಿ ಅವರು ಹರಿಜನರ ಕೇರಿಗೇ ಬೆಂಕಿಕೊಟ್ಟರು ! ಒಂದು ದೇವಸ್ಥಾನವನ್ನು ಕಟ್ಟಿಸಿ ಅದರಲ್ಲಿ ದೈವೀಕಳೆ ಸೇರಿಸಿ ಜನಪ್ರಿಯ ಮಾಡುವುದು ಎಷ್ಟು ಕಷ್ಟ ! ಆದರೆ ನಾಶಮಾಡುವುದು ಸರ್ಕಾರಕ್ಕೆ ಎಷ್ಟು ಸುಲಭ ! ಅವರಿಗೆ ಆಡಳಿತ ಬಿಟ್ಟರೆ ದೇವಸ್ಥಾನಗಳ ಅವನತಿ ತೀರಾ ತೀರಾ ಖಂಡಿತ ಎಂಬುದನ್ನು ಸನಾತನಿಗಳು ಅರ್ಥಮಾಡಿಕೊಳ್ಳಲೇಬೇಕು.

**೩) ಸರ್ಕಾರದ ಆಡಳಿತದಿಂದ ದೇವಸ್ಥಾನಗಳು ಧರ್ಮದ ಶತ್ರುಗಳ ಕೈಗೆ ಸಿಕ್ಕುವಂತಾಗಿದೆ :** ನಮ್ಮ ರಾಜಕೀಯ ಪಕ್ಷಗಳಲ್ಲಿ ದೇವರೆಂದರೆ ಸುಳ್ಳು, ಧರ್ಮವು ವಂಚನೆ, ಅವು ನಾಶಮಾಡಬೇಕಾದವು ಎಂದು ದೃಢವಾಗಿ ನಂಬುವ ಕಮ್ಯೂನಿಸ್ಟರು ಬಂಗಾಳದಲ್ಲಿ, ಕೇರಳದಲ್ಲಿ ಪ್ರಾಂತೀಯ ಸರ್ಕಾರದ ಅಧಿಕಾರಕ್ಕೆ ಬಂದರು. ಅಂಥ ಡಿ.ಎಂ.ಕೆ.ಯವರು, ಎ.ಡಿ.ಎಂ.ಕೆ.ಯವರು ತಮಿಳುನಾಡಿನಲ್ಲಿ ಅಧಿಕಾರಕ್ಕೆ ಬಂದರು. ಒಳಗೊಳಗಿಂದ ಹಿಂದೂ ಧರ್ಮ ನಾಶವಾಗಬೇಕು, ದೇಶವಿಡೀ ಮುಸ್ಲೀಂ ಆಗಬೇಕು ಎಂದು ಆಶಿಸುವ ಮುಸಲ್ಮಾನರು ಕಾಶ್ಮೀರದಲ್ಲಿ ಸರ್ಕಾರದ ಅಧಿಕಾರಕ್ಕೆ ಬಂದರು. ಇವರೆಲ್ಲ ತಮ್ಮ

ಬಲವಾದ ಒಲವಿನಂತೆ ತಮ್ಮ ಆಡಳಿತದ ದೇವಸ್ಥಾನಗಳ ಹಾನಿ ನಡೆಸದೆ ಬಿಟ್ಟಾರೆಯೇ ? ಕೇರಳದಲ್ಲಿ ದೇವಸ್ಥಾನಗಳ ಆಸ್ತಿಗಳಲ್ಲಿ ಕಮ್ಯೂನಿಸ್ಟರ ಆಕ್ರಮಣ ನಡೆದು ಸರ್ಕಾರ ಏನೂಮಾಡದೆ, ದೇವಸ್ಥಾನಗಳು ಕೋಟಿಗಟ್ಟಲೆ ರೂಪಾಯಿಗಳ ನಷ್ಟ ಹೊಂದಿದ್ದವು. ತಮಿಳುನಾಡಲ್ಲಿ ಸಂಸ್ಕೃತದ ಮಂತ್ರ ದೇವಸ್ಥಾನದಲ್ಲಿ ಬಹಿಷ್ಕರಿಸಲಿಕ್ಕೆ ಬಹಳ ಯತ್ನ ನಡೆದಿತ್ತು. ಬಂಗಾಳದಲ್ಲೂ ಕಾಶ್ಮೀರದಲ್ಲಿಯೂ ಮತ್ತೆ ಏನೆಲ್ಲ ತರದ ಹಾನಿ ನಡೆದಿದೆಯೋ ! ಈ ನಾಸ್ತಿಕ ಸರ್ಕಾರಗಳು ದೇವಸ್ಥಾನಗಳ ಸಿಬ್ಬಂದಿಯಾಗಿ ತಮ್ಮ ಪಕ್ಷದ ಧರ್ಮದ್ವೇಷೀ ಜನರನ್ನು ನೇಮಕ ಮಾಡದೆ ಬಿಟ್ಟಿರಲಿಕ್ಕಿಲ್ಲ. ಅವರು ನಿವೃತ್ತರಾಗುವವರೆಗೂ ದೇವಸ್ಥಾನಗಳ ಕೇಡುಬಗೆಯದೆ ಬಿಡರು. ಪ್ರತ್ಯಕ್ಷ ಈ ಭಯಂಕರ ಅನ್ಯಾಯ ನಡೆದದ್ದು ಕಂಡಾದರೂ ಕೇಂದ್ರದ ಕಾಂಗ್ರೆಸ್ ಸರ್ಕಾರದ ಹಿಂದೂಧರ್ಮದ ಮುಖಂಡರು ವ್ಯಥೆಪಟ್ಟು ಸರ್ಕಾರದ ಆಡಳಿತದಕ್ರಮ ತಿದ್ದಲು ಯತ್ನಿಸಿದ್ದಿಲ್ಲ! ಕೇವಲ ಪ್ರಧಾನಿಯನ್ನು ಮೆಚ್ಚಿಸಿ ಸ್ವಪ್ರಯೋಜನ ಪಡೆಯುವ ಗುರಿಯಲ್ಲಿ ಮುಳುಗಿದ್ದಾರಲ್ಲ ! ಅವರನ್ನು ಈ ಭಾಗದ ಪಾಪ ಲಕ್ಷಾಂತರ ವರ್ಷ ಬಾಧಿಸದೇ ? ಆದರೆ ಬ್ರಾಹ್ಮಣರಾದರೂ ಈ ಅಪಾಯದ ಕ್ರಮ ನಿಲ್ಲಿಸಲು ಸೊಂಟ ಕಟ್ಟಬೇಕು. ಏಕೆಂದರೆ ಮುಂದೆ ಕೇಂದ್ರದಲ್ಲೇ ಕೇವಲ ಧರ್ಮದ್ವೇಷಿಗಳು ಥಕ್ಕನೆ ಅಧಿಕಾರಕ್ಕೆ ಬಂದರೆ, ಕಾಂಗ್ರೆಸ್ ಸರ್ಕಾರವೇ ಮೇಲ್ಪಂಕ್ತಿ ಹಾಕಿ ನಡೆಸಿಕೊಂಡು ಬಂದ ಈ ದುಷ್ಟಕ್ರಮವನ್ನು ಮತ್ತಷ್ಟು ನಮ್ಮ ಧರ್ಮದ ನಾಶಕದ ಮಟ್ಟಕ್ಕೆ ಏರಿಸದೆ ಬಿಟ್ಟಾರೆಯೇ ? ಆದ್ದರಿಂದ ಅದಕ್ಕಿಂತ ಎಷ್ಟೋ ಮುಂಚೆ ಸರ್ಕಾರದ ಈ ಆಡಳಿತ ತಪ್ಪಿಸಿ, ದೇವಸ್ಥಾನಗಳಲ್ಲಿ ವಿಶೇಷ ಪ್ರಚಾರ ಶಕ್ತಿ ಬೆಳೆಸಿ, ಸನಾತನಿಗಳಲ್ಲಿ ಧಾರ್ಮಿಕಶಕ್ತಿ ತುಂಬಿಸಿ, ನಾಸ್ತಿಕ ಸರ್ಕಾರ ಅಧಿಕಾರಕ್ಕೆ ಬಾರದಂತೆ ಧಾರಾಳ ಕೆಲಸ ನಡೆಯುವಂತಾಗಲಿ.

**೪) ಹಲವು ಧರ್ಮಗಳ ಪ್ರತಿನಿಧಿಗಳಿರುವ ಲೋಕಸಭೆ ಕೇವಲ ಒಂದು ಧರ್ಮಕ್ಕೆ ಮಾತ್ರ ಕಾನೂನು ಮಾಡುವುದರ ತಪ್ಪು :** ಹಿಂದೊಮ್ಮೆ ಶ್ರೀ ನೆಹರೂ ಅವರ ಹಿಂದೂ ಕೋಡ್ ಲೋಕಸಭೆಯಲ್ಲಿ ಚರ್ಚೆಯಲ್ಲಿದ್ದಾಗ, ಯಾವ ಹಿಂದುವೂ ಪತ್ನಿ ಇದ್ದಾಗ ಪುನಃ ವಿವಾಹವಾಗಕೂಡದು ಎಂಬ ಕಾನೂನಿನ ಕರಡು ಚರ್ಚೆಗೆ ಬಂತು. ಮಕ್ಕಳಿಂದ ಅಂತಿಮಕ್ರಿಯೆ, ಶ್ರಾದ್ಧ ಮುಂದೆ ನಡೆಯಬೇಕಾದ್ದರಿಂದ ಪತ್ನಿಯಲ್ಲಿ ಬಹಳಕಾಲ ಮಕ್ಕಳಾಗದಿದ್ದರೆ, ಅದಕ್ಕಾಗಿ ಪುನಃ ವಿವಾಹವಾಗುವುದನ್ನು ನಮ್ಮ ಧರ್ಮ ಒಪ್ಪುತ್ತದೆ. ತನ್ಮೂಲಕ ಜನಿಸಿದವ ಮುಂಚಿನಪತ್ನಿಗೂ ಮಗನಾಗಿ ಅವಳಿಗೂ ಪಿಂಡಹಾಕುವ

ಅರ್ಹತೆ ಹೊಂದುತ್ತಾನೆ. ಆದ್ದರಿಂದ ಅವಳೂ ವಿವಾಹಕ್ಕೆ ಅನುಮತಿ ಕೊಡುತ್ತಾಳೆ. ಆದರೆ ಈ ನಮ್ಮ ಶಾಸ್ತ್ರಕ್ಕೆ ವಿರುದ್ಧವಾದ ಕಾನೂನಿಗೆ, ಕೇವಲ ಭೋಗಕ್ಕಾಗಿ ಈಗಲೂ ನಾಲ್ಕು ವಿವಾಹವಾಗುವ ಹಕ್ಕಿರುವ ಮುಸಲ್ಮಾನ ಸದಸ್ಯರು, ತಮ್ಮ ಓಟಿನ ಬೆಂಬಲ ಕೊಟ್ಟಿದ್ದರು ! ತರತರದ ಧರ್ಮದವರು, ನಾಸ್ತಿಕರು, ಧರ್ಮದ್ವೇಷಿಗಳು ಸದಸ್ಯರಾಗಿರುವ ನ್ಯಾಯವಿಧಾಯಕ ಸಭೆಗಳಲ್ಲಿ ದೇಶದ ಕೇವಲ ಒಂದು ಸನಾತನಧರ್ಮ ಆರಿಸಿ ಸರ್ಕಾರದಆಡಳಿತಕ್ಕೆ ಕಾನೂನು ಮಾಡುವಾಗ ತಿದ್ದುವಾಗ ಆಡಳಿತದ ಕ್ರಮ ತೀರ್ಮಾನಿಸಲು ಅದರ ಕ್ರಿಶ್ಚನ್, ಮುಸಲ್ಮಾನ, ನಾಸ್ತಿಕ ಕಮ್ಯೂನಿಸ್ಟ್ ಸದಸ್ಯರಿಗೆಲ್ಲ ಹಕ್ಕುಬರುವುದು ಯಾವ ನ್ಯಾಯ! ಅವರು ಅವರ ಧರ್ಮಕ್ಕೆ ಸರ್ಕಾರ ಕೈಹಾಕಲು ಬಿಟ್ಟವರೇ ಅಲ್ಲವಲ್ಲ! ಸಂಯುಕ್ತ ಅಮೇರಿಕದಲ್ಲಿ ಹಲವು ಧರ್ಮಗಳಿದ್ದು ದೇಶವು ಸೆಕ್ಯುಲರ್‌ಕ್ರಮ ಆರಿಸಿತು. ಆದರೆ ಅಲ್ಲಿ ದೇಶದ ಕೇವಲ ಒಂದೊಂದೇ ಧರ್ಮಹಿಡಿದು ಘಾಸಿ ಮಾಡುವುದಕ್ಕೆ ಅಲ್ಲಿನ ಸಂವಿಧಾನದಲ್ಲಿ ಆಸ್ಪದವೇ ಇಲ್ಲ ! ನಮ್ಮ ಸಂವಿಧಾನ ದಲ್ಲೂ ಇರುವ ವಿಧಿ ಳಿಳರಂತೆಯೇ ಮಾತ್ರ ಇಲ್ಲಿಯೂ ಕಾನೂನು ಮಾಡಿದರೆ ಅದು ಎಲ್ಲ ಪ್ರಜೆಗಳಿಗೂ ಅನ್ವಯಿಸುವ ತರದ್ದು ಮಾತ್ರ ಆಗುತ್ತದೆ.

ಹಿಂದೂ ಧರ್ಮದವರು ತುಂಬಿರುವ ನಮ್ಮಲ್ಲಿ ಮಾತ್ರ ನಮ್ಮ ಮುಖಂಡರು ದೇಶಕ್ಕೆ ಹಿಂದೂಧರ್ಮದ ಬೆಂಬಲವಿರುವ ಸರ್ಕಾರ ಬರಲು ಬಿಡಲಿಲ್ಲ! ಪಾಕಿಸ್ತಾನ, ಇಂಡೊನೇಶಿಯ ಮಲೇಸಿಯ ಮುಸ್ಲಿಂ ಬೆಂಬಲದ ಸರ್ಕಾರ ಆರಿಸಿದವು; ಬರ್ಮಾ ಸಿಲೋನ್ ಬುದ್ಧಧರ್ಮದ ಬೆಂಬಲದ ಸರ್ಕಾರ ಕ್ರಮ ಆರಿಸಿದವು. ಕೇವಲ ಅಧಿಕಾರದ ಆಸೆಯಿಂದ ಶ್ರೀ ನೆಹರೂ ಅವರನ್ನು ಸ್ವಲ್ಪವೂ ಎದುರಿಸಲು ಬಯಸದ ಹಿಂದೂಧರ್ಮದವರೇ ಹಿಂದೂ ಧರ್ಮದವರ ಕೊರಳಿಗೆ ಹಗ್ಗ ಸುತ್ತುವ ಕ್ರಮ ಉಂಟುಮಾಡಿದ್ದು ಎಷ್ಟು ಶೋಚನೀಯ !

ಸ್ವರಾಜ್ಯಕ್ಕಿಂತ ಮುಂಚೆ ನಾವು ಬ್ರಿಟಿಷರ ಗುಲಾಮರಾಗಿದ್ದಾಗ ನಮಗೆ ನಮ್ಮ ದೇವಸ್ಥಾನಗಳನ್ನು ಆಳುವ ಹಕ್ಕು ಇತ್ತು. ಜೀವನದಲ್ಲಿ ಧರ್ಮಕ್ಕೆ ಅತಿ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕಾದ ಸನಾತನಿಗಳಿಗೆ ಆ ತರದಲ್ಲಾದರೂ ಸ್ವರಾಜ್ಯವಿದ್ದುದೇ ಅತಿ ಮುಖ್ಯವಾಗಿತ್ತು, ಆದರೂ ದೇಶದ ಸ್ವರಾಜ್ಯಕ್ಕೆ ಮುಖ್ಯವಾಗಿ ಹೋರಾಡಿದವರು ಸನಾತನಿಗಳೇ; ಇತರರಲ್ಲ. ಆದರೆ ಈಗ ಆ ಹಕ್ಕು ಇರುವ ಪೂರ್ಣಪ್ರಜೆಗಳೆಂದರೆ ಕ್ರಿಶ್ಚನರು, ಮುಸಲ್ಮಾನರು, ಹರಿಜನರು! ನಮ್ಮ ದೇವಸ್ಥಾನಗಳನ್ನು ಕಟ್ಟಲು, ದೈವೀಕಳೆ ತುಂಬಿಸಲು ಸ್ವಲ್ಪವೂ ಶ್ರಮಿ

ಸಿರದ ಹರಿಜನರವ ಅಲ್ಲಿ ಕೂಡಲೆ ಮ್ಯಾನೇಜರ, ಮುಕ್ತೇಸರ ಆಗಿ ಬಂದು ಆಳ ಬಹುದು ! ಆದರ ಶಕ್ತಿಹಾಳುಮಾಡಬಹುದು ! ಭೂಲೋಕದ ಎಲ್ಲ ಜನರಿಗೂ ಅವರವರ ಧರ್ಮದಂತೆ ಬಾಳುವ ಹಕ್ಕು ಅಗತ್ಯವೆಂದು UNESCO ಸಾರಿದಾಗ ಅದಕ್ಕೆ ನಮ್ಮ ಸರ್ಕಾರ ಪೂರ್ಣ ಬೆಂಬಲ ಕೊಟ್ಟಿತ್ತು ! ಇದು ಕೇವಲ ತಕ್ಕು ಅಲ್ಲವೇ ? ಸರ್ಕಾರದ ಆಡಳಿತದ ಕೆಲವು ಮುಖ್ಯದೋಷಗಳನ್ನು ಮಾತ್ರ ಇಲ್ಲಿ ಸೂಚಿಸಲಾಗಿದೆ ; ಸನಾತನಿಗಳು ಅವನ್ನು ಮೆಲಕು ಹಾಕಲಿ ಎಂದು.

ಕೆಲವರಿಗೆ ನಾವು ನಮ್ಮ ಜಾತಿಕ್ರಮಬಿಟ್ಟು ಹರಿಜನರನ್ನು ಕೂಡಿಕೊಳ್ಳದಿದ್ದರೆ, ಅವರು ಮುಸಲ್ಮಾನರಾಗಿ ಆ ಧರ್ಮದವರ ಸಂಖ್ಯೆ ಬಹಳ ಬೆಳೆದು ಮುಂದೆ ನಮ್ಮ ಧರ್ಮಕ್ಕೆ ತಲೆಎತ್ತದಂತಾದೀತು ಎಂಬ ಭಯವಿದೆ. ಅದಕ್ಕೆ ನಮ್ಮ ಧರ್ಮವನ್ನು ಕೆಲವುಮಟ್ಟಿಗೆ ತ್ಯಜಿಸಿಯಾದರೂ ಲೌಕಿಕಶಕ್ತಿ ಬೆಳೆಸ ಬೇಕೆಂಬುದರ ಅರ್ಥ ನಮ್ಮನ್ನು ನಮ್ಮ ಧರ್ಮರಕ್ಷಿಸದು ಎಂದಾಗುವುದಿಲ್ಲವೇ? ಆದರೆ ಶಾಸ್ತ್ರದ ಹೇಳಿಕೆ—ತನ್ನ ಧರ್ಮ ಕೆಡಿಸಿದವನನ್ನು ಅದು ನಾಶಮಾಡುತ್ತದೆ, ರಕ್ಷಿಸಿದವನನ್ನು ಅದು ರಕ್ಷಿಸುತ್ತದೆ—ಎಂಬುದು ಮಾತ್ರ. ಅದು ಸನಾತನಿಗಳಿಗೆ ಧ್ಯೇಯವಾಗಲಿ. ಮತ್ತು ಬ್ರಾಹ್ಮಣ ಎಂದರೇ ವರ್ಣಧರ್ಮ ಬೇಕಾದವ, ಪಾಲಿಸುವವನಾದ್ದರಿಂದ ಧರ್ಮದ ಬೆಂಬಲಬಿಡದೆಯೇ ಅದನ್ನು ಪಾಲಿಸಿಕೊಳ್ಳುವ ದಾರಿಮಾತ್ರ ಹುಡುಕುವ. ನನಗೆ ತೋರಿದಂತೆ ಅವನ್ನು ವಿವರಿಸುತ್ತೇನೆ.

ಈಗಿನ ಸಮಸ್ಯೆಎಬ್ಬಿಸಿದ ಅಂತ್ಯವಾಸಿಗಳ ಹತ್ತುಪಾಲಾದರೂ ಗಿರಿಜನರಿದ್ದಾರೆ. ಅವರ ಹತ್ತುಪಾಲಾದರೂ ಈಗ ನಮ್ಮ ಧರ್ಮಅರಿಯಂದ, ಅದರಂತೆ ಬಾಳದ ತಾತ್ಸರಿಸುವ ಸನಾತನಿಯುವಕರೇ ಇದ್ದಾರೆ. ನಮ್ಮ ಅತ್ಯಧಿಕ ಯತ್ನ ಮತ್ತು ಪ್ರಾಥಮಿಕಯತ್ನ ಈ ನಮ್ಮಯುವಕರನ್ನು ಧರ್ಮದಲ್ಲಿಬಾಳಿಸಿಕೊಳ್ಳುದಾಗಲೇಬೇಕು. ಅದನ್ನು ಸ್ವಲ್ಪವೂಮಾಡದೆ ಈಗ ಹರಿಜನರ ಬೆನ್ನುಹಿಡಿದು ಅವರ ಉದ್ಧಾರದ ಯತ್ನಮಾಡುವುದನ್ನು ಜಾತಿಬೇಡವಾದ "ಹಿಂದೂ ಧರ್ಮ"ದವರಿಗೆ ಬಿಡುವ ; ಸನಾತನಿಗಳಿಗೆ ಬೇಡ. ನಾಲ್ಕೂವರ್ಣದ ಯುವಕರಿಗೆ ಧರ್ಮದಲ್ಲಿ ಅಭಿರುಚಿ, ಗೌರವಬೆಳೆಸಲಿಕ್ಕೆ ನಮ್ಮ ಎಲ್ಲ ದೇವಸ್ಥಾನಗಳನ್ನೂ ಅತ್ಯಧಿಕ ಹೆಚ್ಚಿನ ಮಟ್ಟದಲ್ಲಿ ಮತ್ತು ಪರಸ್ಪರ ಸಂಘಟನೆಯ ಮೂಲಕ, ಅಲ್ಲಿ ಧರ್ಮ ಕಲಿಸುವುದು, ಪುಸ್ತಕ ಭಂಡಾರ, ಭಜನೆ, ಕ್ಯಾಸೆಟ್ ಮೂಲಕ ಅತ್ಯುತ್ತಮ ಸಂಕೀರ್ತನೆ, ಹರಿಕತೆ, ಧಾರ್ಮಿಕ ಸಿನೆಮಾಫಿಲ್ಮ್ಸ್, ಅತಿಕಡಿಮೆ ಬೆಲೆಗೆ ಉತ್ತಮ ಕಥಾಪುಸ್ತಕಗಳು, ಧಾರ್ಮಿಕ ಪಠ್ಯಪುಸ್ತಕಗಳು ಮುಂತಾದವು

ಗಳ ಮಾರಾಟ ಮುಂತಾದ್ದು ಕೈಗೊಳ್ಳಬೇಕು. ಬ್ರಾಹ್ಮಣರು ಅತ್ಯಂತ ಸುಲಭ ಜೀವನ ನಡೆಸುತ್ತ ಫೇಶನ್‌ರೋಗ ಪೂರ್ಣಬಿಟ್ಟು, ಇಂಥ ಕಾರ್ಯಕ್ರಮಗಳಿಗೆ ಧಾರಾಳ ಸಹಾಯ ಕೊಡಬೇಕು. ಜಾತಿ ಬೇಕಾದವರ ಮಕ್ಕಳನ್ನು ನಾಸ್ತಿಕ ಪಿಶಾಚದಕೈಯಿಂದ ರಕ್ಷಿಸಬೇಕು. ಮತ್ತು ನಮ್ಮೆಲ್ಲರ ಧರ್ಮ ಅತ್ಯಂತ ಹೆಚ್ಚಿನ ಮಟ್ಟದಲ್ಲಿ ಕೆಡಿಸುತ್ತ ಬಂದ ಸೆಕ್ಯುಲರ್ ರಾಜ್ಯಕ್ರಮ ಬದಲಾಯಿಸುವುದು ಎಲ್ಲ ಹಿಂದೂಗಳ ಮುಖ್ಯ ಗುರಿಯಾಗಲಿ.

ನಮ್ಮ ಶಕ್ತಿಬೆಳೆಸುವ ಎರಡನೆಭಾಗವಾಗಿ ಗಿರಿಜನರನ್ನು ನಮ್ಮ ಧರ್ಮಕ್ಕೆ ಆಕರ್ಷಿಸುವ ಕಾರ್ಯಮಾಡಬಹುದು. ಅವರಲ್ಲಿ ಅಂತ್ಯವಾಸಿಗಳಷ್ಟು ದೋಷ ವಿಲ್ಲ. ಅವರು ತೀರಾತಾಮಸಿಕ ಆಹಾರವಾದ ಸತ್ತದನ, ಕಾಗೆ, ನಾಯಿ ತಿನ್ನು ವುದಿಲ್ಲ. ಅವರಲ್ಲಿ ರಾಜಪುತಾನದ ಭಿಲ್ಲರೆಂಬವರ ಒಂದು ಅಂಶ ಕ್ರಮೇಣ ಅಂತ್ಯಜ ವರ್ಗವಾಗಿ ಮಾರ್ಪಟ್ಟಿರಬೇಕು. ಏಕೆಂದರೆ ಶಾಸ್ತ್ರದಲ್ಲಿ ಆ ವರ್ಗದ ವರ ಹೆಸರುಗಳಲ್ಲಿ ಇದೂ ಸೇರಿದೆ. ಅಸ್ಸಾಮಿನ ಒಬ್ಬರು ಸಂತರು ಅಲ್ಲಿ ಒಂದುಕಡೆಯ ಗಿರಿಜನರನ್ನು ವೈಷ್ಣವಧರ್ಮಕ್ಕೆ ಆಕರ್ಷಿಸಿ ಅವರಿಗೆ ಅವರದ್ದೇ ಆದ ಬೇರೆ ಜಾತಿ ನಿರ್ಮಿಸಿದ್ದನ್ನು ಆ ಧರ್ಮದವರು ಪಾಲಿಸಿಕೊಂಡು ಬಂದಿ ದ್ದಾರೆ. ನಮ್ಮ ಧರ್ಮವನ್ನು ಇಡೀ ಲೋಕದ ಜನರು ಕಲಿಯಬೇಕು ಎಂದು ಮನುಸ್ಮೃತಿ ಸಾರಿದೆ (೧,೨೦). ಈ ದೇಶದಿಂದ ಅವರ ತಪ್ಪಿಗಾಗಿ ಬಹಿಷ್ಕರಿಸಲ್ಪಟ್ಟ ಕ್ಷತ್ರಿಯ ರಾಜರು ಐಗುಪ್ತದೇಶ, ಪೇರು ಮುಂತಾದ ಕಡೆ ಗಳಲ್ಲಿ ಅಲ್ಲಿನ ಗಿರಿಜನರನ್ನು ಹಿಂದೂಧರ್ಮಕ್ಕೆ ಪ್ರೇರಿಸಿದರು (ಮನು ೧೦,೪೩) ಆದರೆ ಆ ಕಾಲದಲ್ಲಿ ಅವರಿಗೆ ಧರ್ಮಮುಂದರಿಸಲು ಬೇಕಾದ ಇಲ್ಲಿನ ಸಂಪರ್ಕ ವಿಲ್ಲದೆ ಕ್ರಮೇಣ ಆ ಜಾತಿಗಳು ನಾಶವಾದವು! ಕುರುಹುಗಳು ಮಾತ್ರ ಉಳಿ ದಿವೆ. ಗಿರಿಜನರು ಬಾಳುವುದು ದೊಡ್ಡ ದೊಡ್ಡ ತಂಡವಾಗಿ. ರೂರ್ಕಿ ಡಿಸ್ಟ್ರಿಕ್ಟಿನಲ್ಲಿ ೩೦ ಶತಾಂಶ ಅವರೇ. ಅಂಥ ಎಡೆಗಳಿಗೆ ಅನತಿ ದೂರದ ದೇವ ಸ್ಥಾನದಿಂದ ವರ್ಷಕ್ಕೆರಡು ಸಾರಿ ಉತ್ಸವಮೂರ್ತಿಯನ್ನು ಕೊಂಡುಹೋಗಿ ಅಲ್ಲಿ ಮೂರುದಿನ ಪ್ರತಿವರ್ಷ ಜಾತ್ರೆಮಾಡಿ ಪೂಜೆ, ಪ್ರಸಾದವಿತರಣೆ, ಭಜನೆ, ಕೀರ್ತನೆ, ಧಾರ್ಮಿಕ ನಾಟಕ, ಆಟ, ಸಿನೆಮಾ, ಧಾರ್ಮಿಕ ಕತೆ ಪುಸ್ತಕಗಳ ವಿತರಣೆ, ಹರಿಕತೆ ಮುಂತಾದವನ್ನು ನಡೆಸಿದಾಗ ಅವರಲ್ಲಿ ಧಾರ್ಮಿಕ ಒಲವು, ಉತ್ಸಾಹ ತೋರಿಸಿದವರಿಗೆ ಅಲ್ಲಿ ತಮ್ಮದೇ ಜಾತಿ ಮಾಡಿಕೊಂಡು ಧರ್ಮದಂತೆ ಬಾಳಲು ದೇವಸ್ಥಾನ ಉಂಟುಮಾಡಿ ಸಹಾಯ, ಸಂಪರ್ಕ, ಬೆಳೆಸ ಬಹುದು. ಪುನರ್ಜನ್ಮದ ಕತೆಗಳನ್ನು ಧಾರಾಳ ಉದಹರಿಸಿ ನಮಗೆ ಮರಣದ

ಅನಂತರವೂ ಪ್ರೇತಜನ್ಮ, ಮಾನವಜನ್ಮ, ಪ್ರಾಣಿಜನ್ಮ ಖಂಡಿತ ಬರಲಿದೆ, ಆ ಭಾಗಕ್ಕೆ ಭೂತದ ಸಹಾಯು ವ್ಯರ್ಥ, ದೇವರನ್ನು ನಂಬಬೇಕು ಎಂದು ವಿವರಿಸ ಬಹುದು. ಸನಾತನ ಧರ್ಮದ ಇತರ ಜಾತಿಗಳಂತೆ ಈ ಹೊಸ ಜಾತಿಯು ಪ್ರತ್ಯೇಕ ಬಾಳಲಿ.

ಅಂತ್ಯವಾಸಿಗಳೆಲ್ಲ ಊರ ದೇವಸ್ಥಾನಗಳ ಹತ್ತಿರವಿರುವವರೇ. ಅವರಲ್ಲಿ ಮುಖಂಡರು ಬುದ್ಧಿಶಕ್ತಿ ಹೆಚ್ಚಿರುವವರು ಹಿಂದೆ ಹೇಳಿದ ಹಿಂದಿನ ಜನ್ಮದ ದೋಷದಿಂದ ಪತಿತರಾಗಿ ಜನಿಸಿದವರು. ಅವರಿಗೆ ಕೇವಲ ಲೌಕಿಕ ಸರಿ ಸಮಾನತೆಯು ಆಸೆ, ಮೇಲ್ಜಾತಿಯವರ ಕನ್ಯಾಸಂಬಂಧ, ಸರಿಸಮಾನತೆ ಬೇಕಾ ಗಿದೆ. ಅವರಿಗೆ ಪುನರ್ಜನ್ಮ ಕರ್ಮಫಲದ ನಿಜತ್ವ ಸನಾತನಧರ್ಮದ ಮೆಟ್ಟಿಲು ಕ್ರಮದ ಆತ್ಮರ ತರಬೇತಿಯು ಅವಶ್ಯಕತೆ ತಳಿಶಾಸ್ತ್ರದ ಬೆಂಬಲದ ಜಾತಿಯು ಕ್ರಮದ ವಿವಾಹದ ಅವಶ್ಯಕತೆ ತಿಳಿಸಬೇಕು. ಪುನರ್ಜನ್ಮವಿದೆ ಎಂಬುದಕ್ಕೆ ಅತಿ ಧಾರಾಳವಾಗಿ ಬೇಕಾದಷ್ಟು ದೃಷ್ಟಾಂತಗಳಿವೆ. ಆದರೆ ಜೀವಾತ್ಮನಿಗೆ ಕೇವಲ ಒಂದು ಜನ್ಮಮಾತ್ರ ಎಂಬ ನಿಜವಲ್ಲದ ತಳಹದಿಯುಮೇಲೆ, ಕರ್ಮಫಲ ಒಪ್ಪದ ನಿಜವಲ್ಲದ ತಳಹದಿಯು ಮೇಲೆ ರಚಿಸಲ್ಪಟ್ಟ ಕ್ರಿಶ್ಚನ್ ಮುಸಲ್ಮಾನ ಧರ್ಮಗಳು ಅಪೂರ್ಣ ಧರ್ಮಗಳು. ಅಂತ್ಯವಾಸಿಗಳು ತಮ್ಮ ಲೌಕಿಕ ಸಮಾನತೆಗಾಗಿ ಮುಸಲ್ಮಾನರಾದರೆ, ಅವರ ಗಂಡಸರಿಗೆ ಸರಿಸಮಾನತೆ ಸಿಕ್ಕಿ ದರೂ ಅವರ ಅರ್ಧಪಾಲು ಜನರಾದ ಹೆಂಗಸರಿಗೆ ಕಷ್ಟದ್ದಾದ ಪರ್ದಾಕ್ರಮ. ಗಂಡಸರು ನಾಲ್ಕು ವಿವಾಹವಾಗುವ, ಬೇಕಾದಂತೆ ಪತ್ನಿಯರನ್ನು ತ್ಯಜಿಸುವ ಹಕ್ಕು, ಮಸೀದಿಗೆ ಕರಕೊಂಡುಹೋಗದೆ ಕೆಳಧಾರ್ಮಿಕಮಟ್ಟದಲ್ಲಿಡುವ ಹಾನಿ, ವಿವರಿಸಿ ಮುಂದಿನ ಜನ್ಮದಲ್ಲಾದರೂ ಅತ್ಯಂತ ಕಾರಣಯುಕ್ತವಾದ ಏಕ ಮಾತ್ರವಾದ ಸನಾತನಧರ್ಮದಲ್ಲಿ ಜನ್ಮಪಡೆಯುವ ಆಸೆಯಿರುವುದು ಉತ್ತಮ ಎಂದು ಆ ದಾರಿ ವಿವರಿಸಬಹುದು ಹೊರತು ಅವರ ಕೇಳಿಕೆಯಂತೆ ನಮ್ಮ ಜಾತಿ ಕ್ರಮ ಬಲಿಕೊಡುವುದು ಎಷ್ಟಕ್ಕೂ ಮಾಡಕೂಡದು.

ಬಂಗಾಳದ ಶ್ರೀಕೃಷ್ಣ ಚೈತನ್ಯರ ಕಾಲದಲ್ಲಿದ್ದ, ಮುಸಲ್ಮಾನರಾಗಿ ಜನ್ಮ ಪಡೆದಿದ್ದರೂ ನಮ್ಮ ಧರ್ಮದಲ್ಲಿ ಅತ್ಯಂತ ಭಕ್ತಿ ಶ್ರದ್ಧೆ ಬೆಳೆಸಿ ಬಹಳ ಶ್ರೇಷ್ಠ ರೆನಿಸಿದ್ದ ಹರಿದಾಸರು, ಶ್ರೀ ಚೈತನ್ಯರೊಡನೆ ಪುರಿಯಲ್ಲಿದ್ದಾಗ ಶ್ರೀಚೈತನ್ಯರು ಅವರಿಗೆ ಶ್ರೀ ಜಗನ್ನಾಥ ದೇವಸ್ಥಾನದ ಶಿಖರಕ್ಕೆ ಕೈಮುಗಿದರೆ ಸಾಕುಬೇಕಾದ ಫಲ ಬರುತ್ತದೆ ಎಂದರೇ ಹೊರತು, ದೇವಸ್ಥಾನ ಪ್ರವೇಶ ಮಾಡಿಸಲಿಲ್ಲ. ಅಂತೆಯೇ ಚಂಡಾಲ ಮುಂತಾದವರಲ್ಲಿ ಯಾರಾದರೂ ಭಕ್ತಿಯಿಂದ ದೂರ

ದಿಂದ ದೇವಸ್ಥಾನದ ಶಿಖರಕ್ಕೆ, ರಥದಲ್ಲಿರುವ ಅಥವಾ ಉತ್ಸವ ಮೆರವಣಿಗೆಯ ಮೂರ್ತಿಗೆ, ಧ್ವಜಸ್ತಂಬದ ಶಿಖರಕ್ಕೆ ನಮಸ್ಕರಿಸಿದರೆ ಮೇಲ್ಜಾತಿಯವರು ದೇವಸ್ಥಾನ ಪ್ರವೇಶಮಾಡಿ ನಮಸ್ಕರಿಸಿದಷ್ಟೇ ಪುಣ್ಯಪಡೆಯುತ್ತಾರೆ. ಆ ಮೇಲೆ ಅವರು ಸನಾತನಧರ್ಮದಲ್ಲಿ ಅಂತ್ಯಜರಾಗಿ ಜನಿಸದಿರರು. ಆ ಕಾಲ ದಲ್ಲೇ ಅವರಿಗೆ ಮುಸಲ್ಮಾನರ, ಕ್ರಿಶ್ಚನರ ಮತಾಂತರದ ಆಕರ್ಷಣೆಗಳು ಹೆಚ್ಚಿ ರುವುದರಿಂದ ಪ್ರಾಯಶಃ ಮೇಲಿನ ಕ್ರಮಕ್ಕಿಂತ ಒಂದು ಹೆಜ್ಜೆ ಮುಂದೆಹೋಗಿ ನಮ್ಮ ದೇವಸ್ಥಾನಗಳ ಹೊರಪ್ರಾಕಾರದ ಮೂಲೆಯಲ್ಲಿ ಎದುರು ದಳಿ ಮಾತ್ರ ಇರುವ ದೇವರಕೋಣೆ ಅದರಲ್ಲಿ ಸುಂದರವಾದ ಅಮೃತಶಿಲೆ ದೇವರಮೂರ್ತಿ, ಅದಕ್ಕೆ ಮೂಲ ದೇವರಿಗೆ ಎತ್ತಿದ ಆರತಿ ಇಲ್ಲೂ ಎತ್ತಿ ದೈವೀಕಳೆ ಅದರಲ್ಲಿ ಸೇರಿಸುವುದು ಮಾಡಬಹುದು. ಅಲ್ಲಿ ಚಂಡಾಲರು ದಳಿಯ ಮೂಲಕ ದರ್ಶನ, ಹಣ್ಣು ಕಾಯಿ ಅವರೇ ಅರ್ಪಿಸುವುದು ಹೊರಗಿಂದ ನಮಸ್ಕಾರ ಅಲ್ಲಿಟ್ಟ ಪ್ರಸಾದ ಪಡಕೊಳ್ಳವುದು, ಅವರ ಹೊಸ ದಂಪತಿಗಳು ದೇವರ ದರ್ಶನ ಮಾಡುವ ಕ್ರಮ ಅನುಸರಿಸುವುದು ಮುಂದಿನ ಜನ್ಮ ನಮ್ಮ ಧರ್ಮ ದಲ್ಲಿ ತಂದೀತು ಹೊರತು ತಮಿಳುನಾಡಲ್ಲಿ ದೇವಸ್ಥಾನದ ಇಲಾಖೆ ಮಾಡಿ ದಂತೆ ದೇವಸ್ಥಾನದೊಳಗೆ ಪ್ರವೇಶ, ಅಲ್ಲಿ ದೇವಸ್ಥಾನದ ಖರ್ಚಿಂದ ಸಹಪಂಕ್ತಿ ಊಟ, ಅವರ ಎಂಜಲು ತುಂಬಿಸುವುದು, ದೇವಸ್ಥಾನದ ಕಳೆ ಖಂಡಿತ ನಾಶ ಮಾಡದಿರದು. ಅವರಲ್ಲಿ ಕೆಲವರಿಗೆ ತಮ್ಮದೇ ದೇವಸ್ಥಾನಬೇಕೆಂಬ ಆಸೆ ಬಹಳ ಉಂಟಾದರೆ ಪ್ರಾಯಶಃ ಅವರದ್ದೇ ಜಾತಿಯವರ ಪ್ರತ್ಯೇಕ ದೇವ ಸ್ಥಾನಕ್ಕೆ ಬೇಕಾದ ಸಹಾಯ ಕೂಡ ಕೊಡಬಹುದು.

ನಮ್ಮ ಧರ್ಮಕ್ಕೆ ವಿರುದ್ಧವಾಗಿಯಾದರೂ ಹರಿಜನರ ಮತಾಂತರ, ಜಾತಿನಾಶ ಮಾಡಿ ನಮ್ಮ ಶಕ್ತಿ ಬೆಳೆಸಬೇಕೆಂಬವರ ದೃಷ್ಟಿ ಸ್ವಲ್ಪ ಶಬರಿಮಲೆ ಐಯ್ಯಪ್ಪನ ಭಕ್ತರು ಒಂದು ತಿಂಗಳ ಶಿಸ್ತು ಪಾಲಿಸಿ ಶ್ರೀ ಅಯ್ಯಪ್ಪನ ದರ್ಶನ ೨೦ ಲಕ್ಷ. ೮೦ ಲಕ್ಷ, ೧೦೦ ಲಕ್ಷ, ಪಡೆಯಲಿಕ್ಕೆ ಹೋದುದು ಯಾವ ಸಂಸ್ಥೆಯ ಪ್ರಚಾರವೂ ಕಾರಣವಾಗಿ ಅಲ್ಲ; ಕೇವಲ ದೇವರ ಕೃಪೆ ಅದನ್ನು ಮಾಡಿ ಕಮ್ಯೂನಿಸ್ಟರಾಗುವ ಅನೇಕರನ್ನು ಒಲಿಸೀತು ಎಂಬ ದೃಷ್ಟಾಂತ ಸಾಲದೇ ?

ಹರಿಜನರ ವಿಚಾರ ನಮ್ಮ ಶಾಸ್ತ್ರ ಏನು ಹೇಳಿದೆ ಎಂಬ ಭಾಗದಲ್ಲಿ ಕೇವಲ ಲೌಕಿಕನಾದ ನನ್ನ ಜ್ಞಾನ ಈ ಹಿಂದೆ ವಿವರಿಸಿದಂತೆ ಇದೆ. ಅದು ಸಾಲದು. ಶ್ರದ್ಧಾವಂತ ಸಂಪ್ರದಾಯ ಪ್ರಿಯ ವಿಪ್ರ ವಿದ್ವಾಂಸರು ಸಭೆಕೂಡಿ

ಈ ಭಾಗದಲ್ಲಿ ಬ್ರಾಹ್ಮಣರ ನಿಲುವು ಏನಿರಬೇಕೆಂದು ನಿರ್ಧರಿಸಬೇಕಾಗಿ ಬಹಳ ನಮ್ರತೆಯಿಂದ ಕೋರುತ್ತೇನೆ. ನಮ್ಮ ದೇವಸ್ಥಾನಗಳು, ಸರ್ಕಾರದ್ದೂ ಅಲ್ಲ, ಸುಧಾರಕರದ್ದೂ ಅಲ್ಲ ; ಮುಖ್ಯವಾಗಿ ಬಹುಮಟ್ಟಿನವರಾದ ಸಂಪ್ರದಾಯ ಪ್ರಿಯರದ್ದು. ಅವರ ಮಾನಸಿಕ ಗೊಂದಲ ವಿದ್ವಾಂಸರಿಂದ ತಣಿಯುವಂತಾಗಿ, ಬ್ರಾಹ್ಮಣ ಸಂಘಗಳ ಮೂಲಕ ಕಾರ್ಯಕ್ರಮ ತಾಳಿ ಆಡಳಿತ ಶಾಸ್ತ್ರದಂತೆ ನಡೆಯುವ ದಾರಿ ಸಾಧಿಸುವಂತಾಗಲಿ, ಭಗವಂತ ಸಹಾಯ ಮಾಡಲಿ ಎಂದು ಪ್ರಾರ್ಥಿಸುತ್ತೇನೆ.

## ೨೪. ನಮ್ಮ ಸೆಕ್ಯುಲರ್ ರಾಜ್ಯಕ್ರಮದಿಂದ ನೈತಿಕತೆಯ ನಾಶ

ನಮ್ಮಲ್ಲೀಗ ಲಂಚದ ವಿಚಾರ ಮಾತಾಗಿ ದೂರಿದಾಗ, ಅದು ಎಲ್ಲ ದೇಶಗಳಲ್ಲಿಯೂ ಇವೆ ಎಂಬ ಉತ್ತರ ಬರುತ್ತದೆ. ಹಾಗಲ್ಲ, ನಮ್ಮ ಪುಣ್ಯ ಭೂಮಿಯ ಹಿರಿಮೆ ನೈತಿಕತೆ ಅತ್ಯಂತ ವಿಶೇಷ ಮಟ್ಟದಾಗಿತ್ತು ಎಂಬುದನ್ನು ಸ್ವಲ್ಪ ತಿಳಕೊಳ್ಳುವ.

**ಭಾರತೀಯರ ಶೀಲದ ಹಿರಿಮೆ :** ೨೨೦೦ ವರ್ಷಗಳ ಹಿಂದೆ ಪ್ರವಾಸಿ ಎರಿಯನ್ಸ್ ಹೇಳಿದ್ದರು—"ನಿಜಕ್ಕೂ ಯಾವ ಭಾರತೀಯನೂ ಸುಳ್ಳಾಡಿದನೆಂದು ಯಾರೂ ದೂರುವುದಿಲ್ಲ" ಎಂದು. ೧೫೦೦ ವರ್ಷಗಳ ಹಿಂದೆ ಚೈನಾದಿಂದ ಇಲ್ಲಿಗೆ ಬಂದಿದ್ದ ಬೌದ್ಧ ವಿದ್ವಾಂಸ ಹುವೆನ್‌ಸಾಂಗನು ಮಗಧ ದೇಶದ ಜನರ ಅತ್ಯುತ್ತಮ ರೀತಿನೀತಿಗಳನ್ನು ಕಂಡು ಬೆರಗಾಗಿದ್ದ. ಜನರು ಮನೆಗೆ ಬೀಗ ಹಾಕುವ ಕ್ರಮವೇ ಇರಲಿಲ್ಲ. ಬೀಗಕ್ಕೆ ಸಂಸ್ಕೃತದಲ್ಲಿ ಶಬ್ದವೇ ಇಲ್ಲ ಎಂದು ಬರೆದಿಟ್ಟದ್ದ.

ಬ್ರಾಹ್ಮಣ ಕೌಟಿಲ್ಯನು ಚಕ್ರವರ್ತಿ ಚಂದ್ರಗುಪ್ತನ ಗುರುವಾಗಿದ್ದರೂ ಕೇವಲ ಒಂದು ಪರ್ಣಶಾಲೆಯಲ್ಲಿ ವಾಸಿಸುತ್ತಿದ್ದ. ಶ್ರೀ ಹರ್ಷ ಚಕ್ರವರ್ತಿ ಪ್ರತಿ ಐದು ವರ್ಷಕ್ಕೊಮ್ಮೆ ತನ್ನ ಐಶ್ವರ್ಯವನ್ನೆಲ್ಲವನ್ನೂ ವಿದ್ವಾಂಸರಿಗೂ ಬಡವರಿಗೂ ಸಂಪೂರ್ಣ ಹಂಚುತ್ತಿದ್ದ.

ಪ್ರವಾಸಿ ಮಾರ್ಕೊಪೋಲೋ ಹೇಳಿದ್ದ : "ಭೂಲೋಕದಲ್ಲಿಯೇ ಹಿಂದೂ ವರ್ತಕರು ಸತ್ಯವಂತರು ಸುಳ್ಳು ಹೇಳರು" ಎಂದು. ಕರ್ನಲ್

ಸ್ಲೀಪೆಂನ್ ಬರೆದಿದ್ದ : "ನನ್ನ ಮುಂದೆ ಹಿಂದೂಗಳು ಜೀವವನ್ನು, ಜೀವನದ ಅತಿ ಹೆಚ್ಚಿನ ವಸ್ತುಗಳನ್ನೂ, ಉಳಿಸಿಕೊಳ್ಳಲು ಒಂದು ಸುಳ್ಳು ಹೇಳಿದರೆ ಸಾಕಾಗಿರುವಾಗಲೂ ಅದನ್ನು ಹೇಳದ ನೂರಾರು ಸಂದರ್ಭಗಳನ್ನು ಕಂಡಿದ್ದೇನೆ" ಎಂದು. ಚಾರ್ಲ್ಸ್ ವೋರ್ಸೆಸ್ ಹೇಳಿದ್ದುಂಟು : ಇಂಡಿಯಾದಲ್ಲಿ ೨೨ ವರ್ಷ, ಇಲ್ಲಿ (ಇಂಗ್ಲೆಂಡಲ್ಲಿ) ೧೭ ವರ್ಷ ನಾನು ಜೀವಿಸಿರುವೆ. ನನ್ನವರನ್ನು ಕುಡಪ್ಪೂ, ಇಂಡಿಯಾದ ಜನರನ್ನು ನಾನು ಹೆಚ್ಚು ಹೆಚ್ಚು ಮೆಚ್ಚುತ್ತೇನೆ" ಎಂದಿದ್ದ.

ಶಿವಾಜೀ ಮಹಾರಾಜರು, ತನ್ನ ಗುರು ಸಮರ್ಥ ರಾಮದಾಸರು ಭಿಕ್ಷೆ ಬೇಡುವುದನ್ನು ಕಂಡು, ತಾನು ಅತಿ ಕಷ್ಟಪಟ್ಟು ಗೆದ್ದಿದ್ದ ರಾಜ್ಯವನ್ನೆಲ್ಲ ಅವರಿಗೆ ದಾನವಾಗಿ ಬರೆದು ಅವರ ಭಿಕ್ಷೆಯ ಪಾತ್ರೆಗೆ ಹಾಕಿದ್ದ ! ತನ್ನ ದಿಗ್ವಿಜಯದ ಕಾಲದಲ್ಲಿ ತನ್ನ ಸೇನಾಪತಿಯು ಶತ್ರು ಭಾಗದ ಅತ್ಯಂತ ಸುಂದರಿಯೊಬ್ಬಳನ್ನು ಸೆರೆ ಹಿಡಿದು ಕಾಣಿಕೆಯಾಗಿ ಶಿವಾಜಿಗೆ ಒಪ್ಪಿಸಿದಾಗ ಅವರು ಅತ್ಯಂತ ಗೌರವದಿಂದ ಅವಳನ್ನು ಅವಳ ಪತಿಯ ಕಡೆಗೆ ಕಳುಹಿಸಿದ್ದರು. ಅವರ ಶತ್ರು ಔರಂಗಜೇಬನ ಮೊಮ್ಮಗಳು ಅವರ ಕೈವಶವಾದಾಗ ಅವಳ ಧರ್ಮದ ಅಭ್ಯಾಸ ಮುಂದರಿಯಲಿಕ್ಕೆ ದೂರದಿಂದ ಮುಸಲ್ಮಾನೀ ಉಪಾಧ್ಯಾಯಿನಿಯನ್ನು ತರಿಸಿ ಪಾಠ ಹೇಳಿಸುತ್ತಿದ್ದರು. ಮುಸಲ್ಮಾನರ ಭಯಂಕರ ಅತ್ಯಾಚಾರ ಚೆನ್ನಾಗಿ ಕಂಡಿದ್ದ ಅವರು ಒಂದೇ ಒಂದು ಮಸೀದಿಯನ್ನೂ ಕುರಾನಿನ ಪ್ರತಿಯನ್ನೂ ನಾಶಮಾಡಿದವರಲ್ಲ. ರಜಪೂತ ವೀರರ ಕ್ಷಾತ್ರತೇಜವು ಪ್ರತಿ ಹಿಂದೂ ಬಾಲಕನೂ ಓದಿ ಹೆಮ್ಮೆಪಡಬೇಕಾದ ಅಸಮಾನ ಶೌರ್ಯದ್ದು ; ಲಾರ್ಡ್ ವೆಲ್ಲಿಂಗ್‌ಟನ್ನರು ಹೇಳಿದ್ದುಂಟು, ಇಂಡಿಯಾದ ಜನರು ಭೂಲೋಕದಲ್ಲಿಯೇ ಅತಿಹೆಚ್ಚಿನ ಮರ್ಯಾದಾ ಕ್ರಮದವರು, ಎಂದು. ಕಾಲಿಫೋರ್ನಿನ ಡಾ॥ ಗ್ರೇಹೆಮರು, ಹಿಂದೂ ಜನರು ಹೋಗಿ ನೆಲೆಸಿದ ಪರ ದೇಶಗಳಲ್ಲೆಲ್ಲ ಅಲ್ಲಿನ ಮೂಲನಿವಾಸಿಗಳ ಧಾರ್ಮಿಕಮಟ್ಟ ಸುಧಾರಿಸಿದ್ದಾರೆ ಎಂದಿದ್ದರು. ಪರರಿಂದ ನಮ್ಮ ದೇಶದ ವಿಶೇಷ ನೈತಿಕಮಟ್ಟದ ಹೊಗಳಿಕೆ ಈ ಶತಮಾನದ ಪ್ರಥಮ ಘೋರ ಯುದ್ಧದ ಅನಂತರ ಕೂಡ, ಬ್ರಿಟೀಷರ ಗುಲಾಮರಾಗಿದ್ದಾಗ ಕೂಡ ಮುಂದರಿದಿತ್ತು. ಲೀಗ್ ಆಫ್ ನೇಶನ್ಸ್ ಅದರ ಒಂದು ವಾರ್ಷಿಕ ವರದಿಯಲ್ಲಿ ಅದನ್ನು ಸಾರಿತ್ತು.

ಆಮೇಲೆ ಸ್ವರಾಜ್ಯ ಬಂತು. ನೈತಿಕತೆ ಬಾಳಲಿಕ್ಕೆ ಧರ್ಮದ ತಳಹದಿ ಬೇಡ, ಕೇವಲ ಪ್ರಜೆಗಳ (ಅವರಲ್ಲಿಯೂ ಅತ್ಯಧಿಕರು ನಿರಕ್ಷರ ಕುಕ್ಷಿಗಳ)

ಪ್ರತಿನಿಧಿಗಳ ಬುದ್ಧಿಶಕ್ತಿ ದೇಶದ ಸರ್ವಮುಖದ ಉದ್ಧಾರಕ್ಕೆ ಧಾರಾಳ ಸಾಕು ಎಂದು ಸೆಕ್ಯುಲರ್ ರಾಜ್ಯಕ್ರಮವು ನಾಸ್ತಿಕರಾಗಿದ್ದ ದಿ॥ ನೆಹರೂ ಅವರ ಮುಖಂಡತ್ವದಲ್ಲಿ ಸ್ಥಾಪಿತವಾಯಿತು. ಅಂದಿನಿಂದ ಈ ದೇಶದಲ್ಲಿ ಅನೈತಿಕತೆ ಭಯಂಕರ ಮಟ್ಟದಲ್ಲಿ ದಿನದಿನಕ್ಕೂ ಬೆಳೆಯುತ್ತಾ ಬಂದಿದೆ. ಸ್ವರಾಜ್ಯದ ಅನಂತರದ ಕೇವಲ ೮ ವರ್ಷಗಳಲ್ಲಿಯೇ ಮುಖ್ಯ ನ್ಯಾಯಾಧೀಶ ಮಹಾಜನರವರು, ದೇಶದಲ್ಲೀಗ ನ್ಯಾಯಪರತೆ ಬಹಳ ಕೆಡುತ್ತಿದೆ. ಸತ್ಯದ ಕೊಲೆ ಬಹಳ ನಡೆದಿದೆ ಎಂದು ಎಚ್ಚರ ಕೊಟ್ಟಿದ್ದರು. ಸ್ವರಾಜ್ಯದ ಹನ್ನೆರಡು ವರ್ಷಗಳ ನಂತರ ಕಲ್ಕತ್ತಾದ ವಿಶ್ವವಿದ್ಯಾಲಯದ ವೈಸ್ ಚಾನ್ಸೆಲ ರಾಗಿದ್ದ ಡಾ॥ ಎನ್. ಎಸ್. ಬೆನರ್ಜಿಯವರು, ಯುವಕರು ನೈತಿಕತೆಯ ಬೆಲೆ ಪೂರ್ಣ ಕಳಕೊಂಡಿದ್ದಾರೆ ಎಂದು ಎಚ್ಚರಿಸಿದ್ದರು. ಆಮೇಲೆ ಶ್ರೀ ಗಿರಿಯವರು ದೇಶದ ಅಧ್ಯಕ್ಷರಾದಾಗ ದೇಶದಲ್ಲಿ ಅನೈತಿಕತೆ ವಿಪರೀತ ಬೆಳೆಯು ವುದಕ್ಕೆ ಲಕ್ಷ್ಯ ಸೆಳೆದಿದ್ದರು.

೧೯೭೭ ರಲ್ಲಿ ರಾಷ್ಟ್ರಾಧ್ಯಕ್ಷ ಶ್ರೀ ರೆಡ್ಡಿಯವರು, ಸ್ವಾತಂತ್ರ್ಯ ದಿನದ ಭಾಷಣದಲ್ಲಿ, ರಾಜಕಾರಣಿಗಳು ಈಗ ನೈತಿಕ ತತ್ವಗಳನ್ನು ತಾತ್ಸರಿಸಿದಷ್ಟು ಮುಂಚೆ ಎಂದೂ ಮಾಡಿದ್ದಿಲ್ಲ, ಸಾರ್ವಜನಿಕರ ಜೀವನಕ್ಕೆ ಇದು ಬಹಳ ಹಾನಿಕರ, ಇದಕ್ಕೆ ಬೇಗ ಲಕ್ಷ್ಯ ಕೊಡಬೇಕು ಎಂದು ಎಚ್ಚರಿಸಿದರು. ಅದೇ ವರ್ಷ ತಮಿಳುನಾಡಿನ ಗವರ್ನರ್ ಪಟ್ವಾರಿಯವರು, ದೇಶದಲ್ಲೀಗ ಲಂಚ ಕೋರತನ ಕಾಳಸಂತೆ ಎಲ್ಲೆಲ್ಲೂ ತಾಂಡವವಾಡುತ್ತಿದೆ, ರಾಜಕೀಯ ಕ್ಷೇತ್ರ ಮಂತೂ ಬಹಳ ಹಾಳಾಗಿದೆ ಎಂದರು. ಆದರೆ ಅನೈತಿಕತೆ ಮಾತ್ರ ಮತ್ತಷ್ಟೂ ಹೆಚ್ಚುತ್ತಲೇ ಬಂತು. ಶ್ರೀ ರೆಡ್ಡಿಯವರು ಅವರ ೧೯೮೨ರ ಸ್ವಾತಂತ್ರ್ಯದಿನದ ಅಧ್ಯಕ್ಷ ಭಾಷಣದಲ್ಲಿ, ಮಹಾತ್ಮಾಗಾಂಧಿಯವರ ಸತ್ಯಾಗ್ರಹದ ಕರೆಯು ಜನ ರನ್ನು ವಿಶೇಷ ತ್ಯಾಗಕ್ಕೆ ಪ್ರೇರಿಸಿದ್ದ ಕಾಲ ದಾಟಿ ಕೇವಲ ಇಷ್ಟೊಂದು ಸ್ವಲ್ಪ ದಶಕಗಳಲ್ಲಿಯೇ ದೇಶದಲ್ಲಿ ಭಯಂಕರಅನಾಚಾರಗಳು ಹೆಚ್ಚುತ್ತಲೇ ಬರುತ್ತಿರು ವುದರ ಪರಿಣಾಮ—Too Frightening to Contemplate—ಎಣಿಸಲು ಅಸಾಧ್ಯವಾದಷ್ಟು ಭಯಾನಕವಾಗಿದೆ ಎಂದು ಸಾರಿದರು. ಪತ್ರಿಕೆಗಳಲ್ಲಿ ದಿನ ದಿನಕ್ಕೂ ಹೊಸ ಮಟ್ಟದ ಹೊಸ ಹೊಸ ತರದ ಭಯಂಕರ ಅನಾಚಾರಗಳ ವಾರ್ತೆಗಳು ಬರುತ್ತಲೇ ಇವೆ! ದೇಶದ ಉತ್ತರ ಭಾಗದಲ್ಲಿ ದರೋಡೆಗಳು ಹೆಚ್ಚುತ್ತ ಬಂದದ್ದು, ಅವು ಮುಂಚೆ ಇದ್ದಿಲ್ಲದಲ್ಲೂ ಹಬ್ಬುತ್ತಿರುವುದು, ಅವಲ್ಲಿ ಜನರಿಗೆ ಪೊಲೀಸರ ಸಹಾಯ ಸಿಕ್ಕದಿರುವುದು, ದರೋಡೆಕೋರರಿಗೆ

ರಾಜಕೀಯ ಮುಖಂಡರ ಸಹಾಯ, ಸರ್ಕಾರಿ ಕಾರ್ಖಾನೆಗಳ ಕೋವಿ ಮದ್ದು ಲಭಿಸುವುದು, ರೈಲ್ವೆಗಳಲ್ಲಿ ದರೋಡೆ, ಕೊಲೆಗಳು, ಪೊಲೀಸರಿಂದಲೇ ಕೊಲೆ ಮತ್ತು ಅನಾಚಾರಗಳು, ಈ ರಕ್ಷಕ ವರ್ಗವೇ ಮುಷ್ಕರ ಹೂಡುವ ಹಕ್ಕು ಪಡೆದದ್ದು, ಸರ್ಕಾರಗಳು ಲಂಚದಲ್ಲಿ ಮುಳುಗಿಬಿಟ್ಟಿರುವುದು, ವ್ಯಾಪಾರಸ್ಥರು ಸಂದರ್ಭ ಸಿಕ್ಕಿದಾಗಲೆಲ್ಲ ಸಾಮಾನುಗಳ ಬೆಲೆ ಏರಿಸುತ್ತ ಜನರ ಸುಲಿಗೆ ಮಾಡು ವುದು, ರಾಜಕೀಯ ಮುಖಂಡರು ಗಾಂಧಿಯವರ ಮುಖಂಡತ್ವದಲ್ಲಿ ಧಾರಾಳ ವಾಗಿ ತ್ಯಾಗ, ದೇಶಸೇವೆಯ ಧ್ಯೇಯ ಹಿಡಿದದ್ದು ತ್ಯಜಿಸಿ ವಿಪರೀತ ಸ್ವಾರ್ಥತೆ ಮಾತ್ರ ಬೆಳೆಸುತ್ತ ೪೫ ರಾಜಕೀಯ ಪಕ್ಷಗಳನ್ನು ಮಾಡಿಕೊಂಡು ಅಂತಃಕಲಹ ದಲ್ಲಿ ಮುಳುಗಿರುವುದು, ಸರ್ಕಾರವು ಹಣದುಬ್ಬರವನ್ನು ತಡೆಗಟ್ಟುತ್ತೇವೆಂದು ಸಾರುತ್ತ ಬಂದಂತೆಯೇ ಅದು ತೀವ್ರವಾಗಿ ಏರುತ್ತ ಬಂದು, ಮುಖ್ಯವಾಗಿ ತುಟ್ಟಿಭತ್ಯೆ ಪಡೆಯದವರ, ತಮ್ಮ ಕೂಲಿ ದರ. ಆದಾಯ ಏರಿಸಲಾರದವರ, ವರ್ಗದ ಜೀವನ ಕೇವಲ ನರಕ ಮಾಡುತ್ತಿರುವುದು, ದೇಶದಲ್ಲಿ ಕೇವಲ ಎರಡು ಊಟಕ್ಕೇ ಹಣ ಸಾಕಾಗದ ಬಡವರ್ಗ ಹೆಚ್ಚುತ್ತ ಬಂದುದು, ಅದು ಈಗ ದೇಶದ ಅರ್ಧ ಭಾಗವೇ ಆಗಿದ್ದರೂ ಉಳಿದ ಅರ್ಧಭಾಗಕ್ಕೆ ಅದು ದೇಶದ ಪ್ರಥಮ ಮಟ್ಟದ ಸಮಸ್ಯೆಯಾಗಿ ತೋರದೆ ಅವರಿಂದ ವಿಶೇಷ ಶ್ರಮ ತ್ಯಾಗ ಪಡೆಯದಿರುವುದು, ನಮ್ಮ ದೇಶದ ಗಡಿಯ ಆಚೆ ಇರುವ ವಿಪರೀತ ಶಿಸ್ತು ಸಮರ್ಥತೆ ಬೆಳೆಸಿದ ರಷ್ಯಾ ಮತ್ತು ಚೈನಾಗಳ ಹೆದರಿಕೆ, ಮುಸಲ್ಮಾನ ಧರ್ಮದ ವಿಸ್ತಾರಕ್ಕೆ ವಿಪರೀತ ಹವಣಿಸುವ ಅರಬ್ ದೇಶಗಳ ಐಶ್ವರ್ಯ ಶಕ್ತಿ ಗಗನಕ್ಕೇರಿದುದರ ಹೆದರಿಕೆ ಇಲ್ಲದಿರುವುದು, ನಮ್ಮ ಯುವಕ ಜನಾಂಗ ಸಮರ್ಥತೆಯೇ ಬೇಡವಾದ ನಕಲು ತೆಗೆದು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಅನಂತರ ಸರ್ಕಾರ ಸೇರಿ ದಂಡಕ್ಕೆ ಸಂಬಳ ಪೆನ್ಶನ್ ಪಡೆಯುವ ಗುರಿ ಹಿಡಿದಿರುವುದು, ಬಡವರ ಆರ್ಥಿಕ ಮಟ್ಟ ನಿರ್ಲಕ್ಷಿಸಿ ಬಟ್ಟೆಬರೆಯ ಫ್ಯಾಶನ್ನಿನ ಗುಲಾಮರಾಗುತ್ತಿರುವುದು, ಶಿಸ್ತಿಲ್ಲದ ನೈತಿಕತೆ ಬೇಡವಾದ ಅಡ್ಡದಾರಿ ಗಳನ್ನು ಹೆಚ್ಚು ಹೆಚ್ಚಾಗಿ ಹಿಡಿಯುತ್ತಿರುವುದು, ನಮ್ಮ ಕಾರ್ಮಿಕರು ಐಶ್ವರ್ಯ ಹೆಚ್ಚಾಗುವ ಮುಂಚೆಯೇ ಧಾರಾಳ ಐಶ್ವರ್ಯ ಬೆಳೆಸಿದ ದೇಶಗಳಿ ಗಿಂತ ಹೆಚ್ಚು ಹಕ್ಕಿನ ಸ್ಥಾಪನೆಯ ಮುಷ್ಕರಗಳನ್ನು ನಡೆಸುತ್ತಲೇ ಇರುವುದು, ಲಂಚಕೋರತನಕ್ಕೆ ಮಿತಿಯೇ ಇಲ್ಲದಾದುದು, ಬಹಳ ಹೆಚ್ಚುತ್ತಿರುವ ದರೋಡೆ ಕೊಲೆಗಳಲ್ಲಿ ಯುವಕರ ಪಾತ್ರ ಅತಿ ಹೆಚ್ಚಿದ್ದು ಮುಂದಿನ ಪರಿಸ್ಥಿತಿಗೆ ಮತ್ತಷ್ಟೂ ಹೆದರಬೇಕಾದುದು, ಹಾಳು ಶರಾಬಿನ ಉಪಯೋಗ ಗಗನಕ್ಕೇರು

ತ್ತಿರುವುದು, ತನ್ಮೂಲಕ ಆಗುವ ಹಲವು ಹಾನಿಗಳು, ಅವೆಲ್ಲ ಈ ಧರ್ಮ ಬೇಡದ ಸೆಕ್ಯುಲರ್ ರಾಜ್ಯಕ್ರಮ ನಮಗೆ ಏನೇನೂ ಒಗ್ಗದು ಎಂದು ಸಾರುತ್ತಿರುವುದು ಸಾಲದೇ?

ದೇಶದ ಒಂದು ಅತ್ಯಾಶ್ಚರ್ಯಕರವಾದ ವಿಷಯವೆಂದರೆ ಇಲ್ಲಿ ನೈತಿಕ ಅವನತಿ ಇಷ್ಟು ತೀವ್ರವಾಗಿ ಕೆಡುತ್ತ ಬಂದ ೩೩ ವರ್ಷಗಳಲ್ಲಿಯೂ, ಈ ಸಂಪೂರ್ಣ ಹೊಸ ರೋಗಕ್ಕೆ ಕಾರಣವೇನು ಎಂಬುದಕ್ಕೆ ನಮ್ಮ ಪ್ರತಿನಿಧಿ ಸಭೆಗಳು ಒಮ್ಮೆಯೂ ಲಕ್ಷ್ಯ ಕೊಟ್ಟಿದ್ದಿಲ್ಲ! ಬೇಕೆಂದೇ ಎಂಬಂತೆ ಅವರ ಲಕ್ಷ್ಯವೆಲ್ಲ ದೇಶದ ಆರ್ಥಿಕ ಪರಿಸ್ಥಿತಿಯ ಕಡೆಗೆ ಮಾತ್ರ ತಿರುಗಿ ಇದೆ. ಆದರೆ ಆಂಗ್ಲಗಾದೆ ಇದೆ. When character is lost, all is lost, ಶೀಲದ ನಾಶದಿಂದ ಸರ್ವನಾಶ, ಎಂದು. ನಮಗೆ ಸ್ವರಾಜ್ಯ ಬಂದಾಗ ಹೊಸ ಸರ್ಕಾರಕ್ಕೆ ಹಾಕಿದ ಹಾಳು ನಾಸ್ತಿಕ ತಳಹದಿಯಿಂದ ೩೩ ವರ್ಷಗಳಲ್ಲಾದ ಆರ್ಥಿಕ ಹಾನಿಯನ್ನು ತೀರಾ ಅಪೂರ್ವ ಶಕ್ತಿಯ ಈಗಿನ ಪ್ರಧಾನಿ ಸರಿಪಡಿಸಿದರೂ, ಆ ತಪ್ಪು ತಳಹದಿ ಮುಂದುವರಿದು ಅವರ ಕಾಲದ ಅನಂತರ ಮತ್ತೆ ೩೦ ವರ್ಷಗಳಲ್ಲಿ ದೇಶ ಸಂಪೂರ್ಣ ಹಾಳಾಗದೆ ಇದ್ದೀತೇ? ರಾಜಕೀಯ ಮುಖಂಡರು ಸೆಕ್ಯುಲರ್ ಸರ್ಕಾರ ಉಂಟು ಮಾಡಿದ ತಮ್ಮ ಅನೈತಿಕತೆ ತಿದ್ದಿಕೊಳ್ಳಲು ಎಷ್ಟಕ್ಕೂ ತಯಾರಿಲ್ಲ ಎಂಬುದು ಮಾತ್ರವೇ ಈ ಪರಿಸ್ಥಿತಿಯ ಅರ್ಥವಲ್ಲವೇ?

ರಾಜಕೀಯ ಮುಖಂಡರಲ್ಲಿ ಅತ್ಯಧಿಕ ಸಂಖ್ಯೆಯವರು ಆ ತರದವರಾಗಿರುವಾಗ ಅವರನ್ನು ಸಂಪೂರ್ಣ ಬದಲಾಯಿಸುವ ಕಾರ್ಯ ನಡೆಯಲು ಅವರು ಬಿಡರು. ಈ ಮುಖಂಡರಿಗೆ ಅವರ ಮಕ್ಕಳೂ ಮುಂದೆ ಮುಖಂಡರಾಗುವರು ಎಂಬ ಭರವಸೆ ಇರಲು ಸಾಧ್ಯವಿಲ್ಲ. ಆದರೆ ಅವರೂ ಮುಂದೆ ಸುಖದಲ್ಲಿ ಬಾಳಬೇಕೆಂಬ ಆಸೆ ಇರುವವರೇ ಆಗಿರಬೇಕು. ಆ ಮಕ್ಕಳ ಕಾಲದಲ್ಲಾದರೂ ದೇಶದಲ್ಲಿ ನೈತಿಕತೆಯ ಪುನರುದ್ಧಾರವಾಗುವ ಕ್ರಮಕ್ಕೆ ಅವರು ಬೆಂಬಲ ಕೊಟ್ಟರೆ ಸಾಕು. ಆ ಕ್ರಮ ಯಾವುದೆಂದರೆ ಮುಂದಿನ ಜನರಲ್ಲಿ ಪುನಃ ಧರ್ಮದ ಅಭ್ಯಾಸ, ದೇವರ ಭಯ, ಪಾಪದ ಭೀತಿ ತುಂಬುವಂತೆ ಈಗಳಿಂದಲೇ ಆರಂಭ ಮಾಡಬೇಕು. ಸ್ವರಾಜ್ಯದ ಮುಂಚೆ ಹಿಂದೂ ಧರ್ಮದ ಮಕ್ಕಳಿಗೆ ಧಾರ್ಮಿಕ ಪಾಠ ಕಲಿಸುವ ಕ್ರಮವಿರಲಿಲ್ಲ. ಆದರೆ ಅವಲ್ಲಿ ತಂದೆ, ತಾಯಿ ಪುರೋಹಿತರ ಬಗ್ಗೆ ಧಾರಾಳ ವಿಧೇಯತೆ ಗೌರವ ಇದ್ದು, ಅವರ ಸಂಪರ್ಕದಿಂದ ಧರ್ಮದ ಅಭ್ಯಾಸ ಬರುತ್ತಿತ್ತು. ಜಾತಿಕ್ರಮದ ಖಂಡನೆ ಆ ಗೌರವ ಕೆಡಿಸಿದೆ. ಕಳೆದ ೩೩ ವರ್ಷಗಳಲ್ಲಿ ಬೆಳೆದು ತಂದೆಯಾದ

ವರ ಧರ್ಮದ ಜ್ಞಾನ ಬಹಳ ಕಡಿಮೆ, ಸಾಲದು. ಶಾಲೆಗಳಲ್ಲಿ ಹಲವು ತರದ ಅಭ್ಯಾಸಗಳ ಮಕ್ಕಳ ನಿಕಟ ಸಂಬಂಧ, ಕೇವಲ ನಮ್ಮ ಧರ್ಮದಲ್ಲಿ ಹುಳುಕು ತೋರಿಸುವ ಅಲ್ಪರ ಲೇಖನಗಳು, ಹೊಲಸು ಓದು, ಮುಂತಾದ ವುಗಳ ಹಾವಳಿ ತಪ್ಪಿಸಲಿಕ್ಕೆ ಇನ್ನು ಶಾಲೆಗಳಲ್ಲಿ ಕಡ್ಡಾಯವಾಗಿ ಅವರವರಿಗೆ ಅವರ ಧರ್ಮ ಕಲಿಸುವ ಏರ್ಪಾಡು ಅಗತ್ಯ.

ರಾಜಕೀಯ ಮುಖಂಡರು ಈ ವಿಚಾರ ಇನ್ನೂ ಸ್ವಲ್ಪ ಯೋಚಿಸಲಿ. ಈಗ ಸೆಕ್ಯುಲರ್ ಸರ್ಕಾರವು ದೇಶದ ನೈತಿಕತೆ ಬಾಳಿಸಲಿಕ್ಕೆ ಕೇವಲ ಅದರ ಪೊಲೀಸರನ್ನು ನಂಬುತ್ತಿದೆ. ಆದರೆ ಅವರು ಎಲ್ಲೆಲ್ಲೂ ಯಾವಾಗಲೂ ಇರಲಾರರು. ಬಹುಮಟ್ಟಿನ ಅನಾಚಾರಗಳಾಗುವುದು, ಪೊಲೀಸರ ಕಣ್ಣು ತಪ್ಪಿಸಿಯೇವು ಎಂಬ ಭರವಸೆಯಿಂದ, ಮತ್ತು ಪೊಲೀಸರೂ ಲಂಚಕ್ಕೆ ಮಾರಿದವರಲ್ಲ ಎಂಬ ಭರವಸೆಯಿಂದ. ಅಮೇರಿಕದ ಅರ್ಧಕ್ಕೂ ಮಿಕ್ಕಿದ ಕೊಲೆಗಳು ಈಗ ತುಬ್ಬಾಗುವುದಿಲ್ಲ. ಆದರೆ ದೇವರು ಎಲ್ಲೆಲ್ಲೂ ಇದ್ದಾನೆ, ಪ್ರತಿ ಕೆಟ್ಟ ಕಾರ್ಯ ಕಾಣುತ್ತಾನೆ; ಅವನಿಂದ ಅದಕ್ಕೆ ಶಿಕ್ಷೆ ಖಂಡಿತ, ತಪ್ಪಿಸಿ ಕೊಳ್ಳುವುದು ಅಸಾಧ್ಯ. ಅಂತೆಯೇ ಪ್ರತಿ ಚಿಕ್ಕ ಉತ್ತಮ ಕಾರ್ಯ ಕೂಡ, ಸರ್ಕಾರ ನಿರ್ಲಕ್ಷಿಸಿದರೂ, ದೇವರು ಕಂಡು ಮೆಚ್ಚಿ ಪ್ರೇರಿಸುತ್ತಾನೆ. ಆದ್ದರಿಂದಲೇ ಮುಂಚೆ ದೇಶದಲ್ಲಿ ಆಸ್ತಿಕ ಸರ್ಕಾರಗಳಿದ್ದಾಗ ಪಾಪದ ಭೀತಿ ದೇವರ ಭೀತಿ ಇದ್ದು ಅನ್ಯಾಯಗಳು ತೀರಾ ಕಡಿಮೆ ಇದ್ದವು. ಈಗ ಭಯಂಕರ ಮಟ್ಟಕ್ಕೆ ಏರುತ್ತಲೇ ಇವೆ.

ಈ ಬಡ ದೇಶದಲ್ಲಿ ಅನೈತಿಕತೆ ಹೆಚ್ಚುತ್ತ ಬಂದ ದಾವಾಶೆಯಲ್ಲಿ ಪೊಲೀಸರ ಸಂಖ್ಯೆಯನ್ನು ಏರಿಸುವುದು ಅಸಾಧ್ಯ. ಡಿಲ್ಲಿಯಲ್ಲಿ ಬ್ರಿಟಿಷರ ಕಾಲದಲ್ಲಿ ೧,೦೦೦ ಪೊಲೀಸರಿದ್ದರು, ಭದ್ರತೆ ಇತ್ತು. ಈಗ ೩,೦೦,೦೦೦ ಇದ್ದಾರೆ, ಹೆಂಗಸರು ಹಗಲಲ್ಲಿ ಕೂಡ ಚಿನ್ನ ಹಾಕಿಕೊಂಡು ತಿರುಗಲಾರರು! ಆದ್ದರಿಂದ ಕೇವಲ ಆ ದಾರಿ ನಂಬಬಾರದು.

ಸರ್ಕಾರ ಭದ್ರತೆಗೆ ಕೇವಲ ಕಾನೂನು ನಂಬುವುದೂ ವ್ಯರ್ಥ. ಈಗ ಕಾನೂನು ಕಾಡೇ ಉತ್ಪನ್ನವಾಗಿದೆ. ಅವುಗಳ ಅರ್ಥ ಸಾಮಾನ್ಯರಿಗಾಗದು. ಜಡ್ಜರೂ ಭಿನ್ನರೀತಿಗಳಲ್ಲಿ ಅರ್ಥಮಾಡಿಕೊಳ್ಳುವುದುಂಟು. ನ್ಯಾಯ ಸಿಕ್ಕಲಿಕ್ಕೆ ವ್ಯವಹರಣೆ ಹೂಡಿದ ಅಪ್ಪನ ಕಾಲದಲ್ಲಲ್ಲ, ಮಗನ ಕಾಲದವರೆಗೂ ಕಾಯ ಬೇಕು. ಆದರೆ ಅವ ದೂರ ಎಲ್ಲೋ ಇದ್ದು ನ್ಯಾಯ ಪಡೆಯುವ ಉತ್ಸಾಹ ಪೂರ್ಣ ಕಳಕೊಂಡಿರುತ್ತಾನೆ. ಬ್ರಿಟೀಷರಿಂದ ಕಾಪಿಹೊಡೆದು ಜೀರ್ಣಿಸದಿರುವ

ಕೋರ್ಟುಗಳ ಕ್ರಮವನ್ನು ಕೇಂದ್ರದ ಕಾನೂನು ಮಂತ್ರಿಯೇ (Rotten to the core) ಸಂಪೂರ್ಣಕೊಳೆತದ್ದು ಎಂದು ಖಂಡಿಸಿದ್ದರು! ಆದರೆ ಧರ್ಮದ ನೈತಿಕ ನಿರ್ದೇಶಗಳು ಸುಳ್ಳು ಕಳವು ವಂಚನೆ ಬೇಡ ಮುಂತಾದವನ್ನು ಮಕ್ಕಳಿಗೂ ಕಲಿಸಬಹುದು. ಅವು ಪರಂಪರಾನುಗತವಾಗಿ ಬಾಳಿ ಬಂದು ಭರವಸೆ ಹುಟ್ಟಿಸಿ ಅತ್ಯಂತ ಮಾನ್ಯತೆಪಡೆದಿವೆ. ಆದರೆ ನಮ್ಮ ಅತಿಮುಖ್ಯ ಕಾನೂನಾದ ಸಂವಿಧಾನವೇ ೩೩ ವರ್ಷಗಳಲ್ಲಿ ೪೫ಕ್ಕೂ ಹೆಚ್ಚು ಸಾರಿ ತಿದ್ದಲ್ಪಟ್ಟಿತು! ಧಾರ್ಮಿಕ ಗ್ರಂಥಗಳಲ್ಲಿರುವ ಭರವಸೆ, ಮಾನ್ಯತೆ, ಶಾಸಕರ ಕಾನೂನುಗಳಿಗೆ ಎಷ್ಟಕ್ಕೂ ಬಾರದು ; ಕೆಲಸ ಮಾಡದು. ಆದರೆ ಧರ್ಮದ ಶಿಸ್ತುಗಳಿಗೆ ಭಕ್ತರ ಮೇಲೆ ಅದ್ಭುತ ಶಕ್ತಿಯಿದೆ ; ಖರ್ಚಿಲ್ಲ, ಪೊಲೀಸರು ಬೇಡ !

ಆದರೆ ಸೆಕ್ಯುಲರ್‌ರಾಜ್ಯಕ್ರಮ ಬೇರೆ ದೇಶಗಳಲ್ಲಿ ಚೆನ್ನಾಗಿ ಕೆಲಸಮಾಡುತ್ತಿದೆಯಲ್ಲ, ಏಕೆ ಬಿಡಬೇಕು ಎಂಬ ಆಕ್ಷೇಪ ಬರುತ್ತದೆ. ಅದನ್ನು ವಿವೇಚಿಸುವ. ಅದು ಚೆನ್ನಾಗಿ ಕೆಲಸ ಮಾಡುತ್ತದೆ ಎಂಬುದು ಆ ದೇಶಗಳ ಆರ್ಥಿಕ ಮಟ್ಟದಿಂದ ಮಾತ್ರ ಪಾಶ್ಚಾತ್ಯ ದೇಶಗಳಲ್ಲಿ ಕಾಮುಕತೆ ಎಷ್ಟೆಲ್ಲ ವಿಪರೀತ ಮಟ್ಟ ಮುಟ್ಟಿದೆ! ಅದು ನಾಗರೀಕತೆಯ ವಿನಾಶದ ಚಿಹ್ನೆಯೂ ಹೌದು. ಅಮೇರಿಕ ಸೆಕ್ಯುಲರ್‌ದೇಶ. ಆದರೆ ಅಲ್ಲಿ ಕೊಲೆಗಳು ತೀರಾ ಮೇರೆ ಮೀರಿವೆ. ಆದರೆ ಆ ದೇಶ ಇಲ್ಲಿನವರಷ್ಟು ನಾಸ್ತಿಕತೆಗೆ ಹೋಗಲಿಲ್ಲ. ಇಲ್ಲಿ ಮೂರು ಯುದ್ಧಗಳ ಅಪಾಯದ ಕಾಲದಲ್ಲಿಯೂ ಸರ್ಕಾರವು ದೇವರ ಸಹಾಯ ಬೇಡಲು ಧಿಕ್ಕರಿಸಿತ್ತಾದರೂ, ಅಮೇರಿಕದ ಅಧ್ಯಕ್ಷ ಐಸೆನ್ ಹೋವರನು ಪ್ರತಿ ಮಂತ್ರಿಮಂಡಲಿಯ ಮೀಟಿಂಗನ್ನೂ ದೇವರಪ್ರಾರ್ಥನೆಯೊಡನೆ ಆರಂಭಿಸುತ್ತಿದ್ದ. ಯುರೋಪಲ್ಲಿ ನಡೆಯುತ್ತ ಬಂದ ಯುದ್ಧಗಳು ವಿಪರೀತ ಸಂಖ್ಯೆಯವು. ಅವುಗಳ ಕಾಲದಲ್ಲೆಲ್ಲ ಅತಿ ಚಿಕ್ಕ ದೇಶಗಳಾದ ಬೆಲ್ಜಿಯಂ, ನಾರ್ವೆ, ಸ್ವಿಟ್ಜರ್‌ಲೆಂಡ್ ತಮ್ಮ ಸ್ವತಂತ್ರ ಕಾಪಾಡಿಕೊಳ್ಳಲಿಕ್ಕೆ ಪ್ರಜೆಗಳಲ್ಲಿ ಅತಿಧಾರಾಳವಾಗಿ ದೇಶ ಪ್ರೇಮ ಬೆಳೆಸುತ್ತ ಬಂದವು. ಯುರೋಪಿನ ದೇಶಗಳು ಒಬ್ಬರಿಂದೊಬ್ಬರು ಹುರುಪು ಪಡೆದು ಲೋಕವೆಲ್ಲ ಸುತ್ತಿ ತಮ್ಮ ಹಿರಿಮೆ ಸ್ಥಾಪಿಸಿ ಎಷ್ಟೆಲ್ಲಾ ಪರದೇಶಗಳಲ್ಲಿ ಅಧಿಕಾರ ಸ್ಥಾಪಿಸಿದವು, ಐಶ್ವರ್ಯ ಬೆಳೆಸಿದವು! ಆಮೇಲೆ ವಿಜ್ಞಾನ ಕಂಡುಕೊಂಡು ಅದನ್ನು ಬೆಳೆಸಿ ಫಲ ಪಡೆಯುವುದರಲ್ಲಿ ಪೈಪೋಟಿ ಬೆಳೆಸಿದವು. ಅಲ್ಲಿನ ಯುವಕರೆಲ್ಲ ಈ ತರದ ತಮ್ಮ ದೇಶದ ಹಿರಿಮೆ ಸಮರ್ಥತೆ ಬೆಳೆಸುವ ವಾತಾವರಣದಲ್ಲಿ ಬೆಳೆಯುತ್ತಲೇ ಬಂದವರು. ಆದರೆ ನಮ್ಮ ರಾಜಕೀಯ ಮುಖಂಡರು ಯುವಕರೆದುರಲ್ಲಿ ಯಾವ ಧ್ಯೇಯ

ವನ್ನೂ ಇಟ್ಟವರಲ್ಲ, ಕೇವಲ ತಮ್ಮ ಸ್ವಾರ್ಥಸಾಧನೆಯಲ್ಲಿ ಮುಳುಗಿದ್ದವರು. ಯಥಾ ರಾಜಾ ತಥಾ ಪ್ರಜಾ.

ಇನ್ನೊಂದು ಅತಿ ಮುಖ್ಯ ವಿಚಾರವೆಂದರೆ ನಮ್ಮ ದೇಶದ ಬಗ್ಗೆ ನಮ್ಮ ಇಷ್ಟರವರೆಗಿನ ಸ್ವಂತ ಅನುಭವ ನಮಗೆ ಸಾಕಾಗಲಿ. ಏಕೆಂದರೆ ಸ್ವಾಮಿ ವಿವೇಕಾನಂದರು ಎಚ್ಚರಿಸಿದ್ದರು, ಪ್ರತಿ ದೇಶಕ್ಕೆ ಸಮರ್ಥತೆ ಕೊಡುವ ಅದರದ್ದೇ ಲಕ್ಷಣವಿದೆ. ನಮ್ಮದು ಹಲವು ವರ್ಷಗಳ ಅಭ್ಯಾಸದ ಧರ್ಮದ ದಾರಿ. ಅದನ್ನು ಹಿಡಿದರೆ ನಮ್ಮ ಉನ್ನತಿ ಸುಲಭ. ತ್ಯಜಿಸಿದರೆ ನಮ್ಮ ನಾಶ ಖಂಡಿತ, ಎಂದಿದ್ದರು. ಅವರ ಈ ಮಾತಿನ ಪ್ರಥಮ ಭಾಗದ ನಿಜತ್ವವು, ನಾವು ಗಾಂಧಿಯವರ ಧಾರ್ಮಿಕ ಸತ್ಯಾಗ್ರಹದ ಚಳವಳದಲ್ಲಿ ಕೋವಿ ಬಾಂಬು ವಿಮಾನವಿಲ್ಲದೆಯೆ ಬ್ರಿಟೀಷರ ಭಯಂಕರ ಮಿಲಿಟರಿ ಸಮರ್ಥತೆ ನಿಶ್ಶಕ್ತಮಾಡಿ ಸ್ವರಾಜ್ಯ ಸೆಳಕೊಂಡದ್ದು ರುಜುಪಡಿಸಿತು. ಸ್ವಾಮೀಜಿಯವರ ಎಚ್ಚರಿಕೆಯ ಎರಡನೆ ಭಾಗವನ್ನು ದೇಶದಲ್ಲಿ ಹಿಂದೆ ಎಂದೆಂದೂ ಇದ್ದಿರದ ನಾಸ್ತಿಕ ತರದ ಸೆಕ್ಯುಲರ್ ಸರ್ಕಾರ ಆರಿಸಿದಂದಿನಿಂದ ಉಂಟಾದ ನಮ್ಮ ನೈತಿಕ ಪತನವು ರುಜುಪಡಿಸುತ್ತಿದೆ. ಆದ್ದರಿಂದ ನಮಗಿರುವ ಏಕಮಾತ್ರ ದಾರಿ ಪುನಃ ಜನರಲ್ಲಿ ಧರ್ಮದ ಅಭ್ಯಾಸ, ದೇವರ ಭಯ, ಪಾಪದ ಭೀತಿ, ಸ್ಥಾಪಿಸುವುದು ಮಾತ್ರ.

ನೈತಿಕತೆಯನ್ನು ಅವರವರ ಧರ್ಮದ ಮೂಲಕ ಕಲಿಸುವುದು ಮಾತ್ರ ಫಲದಾಯಕ. ಏಕೆಂದರೆ ಕೆಥೊಲಿಕನಿಗೆ ತನ್ನ ಧರ್ಮವೇ ಅತ್ಯುತ್ತಮವೆಂಬ ಭಾವನೆ, ಶೀಯಾ ಮುಸಲ್ಮಾನನಿಗೆ ತನ್ನ ಧರ್ಮ, ಬ್ರಾಹ್ಮಣನಿಗೆ ತನ್ನ ಧರ್ಮ ಮಾತ್ರ ಅತ್ಯುತ್ತಮ ತೋರುವುದು ದೇವರೇ ಆ ತರದ ಒಲವು ಕೊಟ್ಟದ್ದರಿಂದ ಹೊರತು, ಎಲ್ಲ ಧರ್ಮಗಳ ತುಲನೆ ಮಾಡಿ ಬಂದ ನಿರ್ಧಾರ ದಿಂದಲ್ಲ. ಗಾಂಧಿಯವರು ಹೇಳುತ್ತಿದ್ದರು, ನನಗೆ ದೇವರು ಎಂಬ ಶಬ್ದ ಸಂತೋಷ ತರುತ್ತದೆ. ಆದರೆ ರಾಮ ಎಂಬುದು ಸಾವಿರ ಪಾಲು ಹೆಚ್ಚು ಸಂತೋಷ ಉಂಟು ಮಾಡುತ್ತದೆ ಎಂದು. ಆದ್ದರಿಂದ ಎಲ್ಲ ಮಕ್ಕಳಿಗೂ ಅವರವರ ಧರ್ಮವನ್ನು ಮಾತ್ರವೇ ಕಲಿಸುವ ಏರ್ಪಾಡಾಗಬೇಕು. ನಮ್ಮಲ್ಲಿ ಹಲವು ಧರ್ಮಗಳಿವೆ. ಅಂಥ ಇತರ ದೇಶಗಳಲ್ಲೆಲ್ಲ ಧರ್ಮಕ್ಕೆ ಪ್ರಾಧಾನ್ಯ ಇರುವ ಸರ್ಕಾರ ಕಟ್ಟುವಾಗ ದೇಶದ ಕೇವಲ ಮುಖ್ಯ ಧರ್ಮ ಆರಿಸುವುದು ಕ್ರಮ. ಆದರೆ ಏಕಮಾತ್ರವಾಗಿ ಹಿಂದೂ ಧರ್ಮವು ಮಾತ್ರ ಎಲ್ಲ ಧರ್ಮ ಗಳೂ ದೇವರಿಂದ ಬಂದವು, ಚೆನ್ನಾಗಿ ಬಾಳಲಿ ಎಂಬ ಉದಾರಭಾವನೆಯದು. ಆದ್ದರಿಂದ ನಮಗೀಗ ಇರುವ ಭದ್ರವಾದ ದಾರಿ 'ದೇಶದಲ್ಲಿ ಪುನಃ

ದೇವರ ಭಯ ಪಾಪದ ಭೀತಿ ಪ್ರೇರಿಸುವುದಕ್ಕಾಗಿ ಸರ್ಕಾರದಲ್ಲಿ ಸರ್ವಧರ್ಮ ಶಿಕ್ಷಣ ವಿಭಾಗ ಸೇರಿಸಬೇಕು. ಆ ವಿಭಾಗಕ್ಕೆ ಆಯಾಯ ಧರ್ಮಗಳ ಪ್ರತಿನಿಧಿಗಳು, ಅವರವರ ಸಂಖ್ಯೆಯ ದಾಮಾಶೆಯಲ್ಲಿ ಆವರಿಂದ ಆರಿಸಲ್ಪಟ್ಟಿದ್ದು ಸದಸ್ಯರಾಗಿ ಬರಬೇಕು. ಅವರಿಗೆ ಸರ್ಕಾರವು ಕೆಲವು ನೂರು ಕೋಟಿ ರೂ. ಕೊಟ್ಟು, ಆಯಾಯ ಧರ್ಮದವರು ಅವರ ದಾಮಾಶೆಯಲ್ಲಿ ಹಂಚಿಕೊಂಡು ಅವರವರ ಧರ್ಮದ ಭಾಗದ ಮಕ್ಕಳಿಗೆ ಶಾಲೆಗಳಲ್ಲಿ ಕಡ್ಡಾಯವಾಗಿ ಅವುಗಳ ರಕ್ಷಕರು ಹೇಳಿದ ಧರ್ಮ ಕಲಿಸಲು ವ್ಯವಸ್ಥೆ ಮಾಡಬೇಕು (ತಂದೆ ಧರ್ಮ ಬೇಡದ ನಾಸ್ತಿಕನಾದರೆ ಮಗನಿಗೆ ರಷ್ಯಾ, ಚೈನಾದಂತೆ ದೇಶದಲ್ಲಿ ಭಕ್ತಿ, ನೈತಿಕತೆ, ದೇಶದ ಹಿರಿಮೆ ಸಾಧಿಸುವ ದಾರಿಗಳ ವಿಚಾರ ಕಡ್ಡಾಯ ಪಾಠಗಳಿರಬೇಕು). ಹೀಗೆ ಧರ್ಮ ಕಲಿಸಲಿಕ್ಕೆ ಅತ್ಯುತ್ತಮ ಪಠ್ಯಪುಸ್ತಕಗಳನ್ನು ತಯಾರಿಸಿ ಕಡಿಮೆ ಬೆಲೆಗೆ ಕೊಡಬೇಕು. ಅಂತೆಯೇ ಧರ್ಮದ ಹಿರಿಮೆ ತಿಳಿಸುವ, ಅದರ ರಕ್ಷಣೆಗೆ ಬೇಕಾದ ಇತರ ಪುಸ್ತಕಗಳನ್ನೂ ತಯಾರಿಸಿ ಧರ್ಮ ಬಾಳಿಸಬೇಕು. ಈ ತರದ ಬೇರೆ ಬೇರೆ ಧಾರ್ಮಿಕ ವಿಭಾಗಗಳ ಕಾರ್ಯಕ್ರಮಗಳಲ್ಲಿ ವಿರುದ್ಧತೆ ಬಾರದಂತೆ ನೋಡಿಕೊಳ್ಳಲಿಕ್ಕೆ, ಭಿನ್ನಾಭಿಪ್ರಾಯಗಳ ಇತ್ಯರ್ಥಕ್ಕೆ ಸುಪ್ರೀಂ ಕೋರ್ಟಿನ ನ್ಯಾಯಾಧೀಶರ ಒಂದು ಉಪಸಮಿತಿ ಜವಾಬ್ದಾರಿ ಹೊಂದಬೇಕು. ಜನರಲ್ಲಿ ಅನೈತಿಕತೆ ಹೆಚ್ಚುತ್ತ ಬಂದು ಜನರಲ್ಲಿ ಭೀತಿ ಹೆಚ್ಚುತ್ತಿರುವುದು, ಸರ್ಕಾರದಲ್ಲಿ ಸಮರ್ಥತೆ ಹೆಚ್ಚುತ್ತಿರುವುದು, ದೇವರ ಭಯ ಪಾಪದಭೀತಿ ನಾಶವಾಗುತ್ತ ಬಂದುದರಿಂದ ಎಂಬುದರ ಪ್ರಚಾರ ಬ್ರಾಹ್ಮಣರು ಮಾಡುತ್ತ ಬಂದಂತೆ, ಪರಿಹಾರವಾಗಿ ಸರ್ಕಾರದಿಂದ ಕಡ್ಡಾಯ ಧಾರ್ಮಿಕ ಶಿಕ್ಷಣದ ಕ್ರಮ ಬೇಕು ಎಂಬುದೂ ಅರ್ಥವಾಗಿ ಸರ್ಕಾರದ ಸೆಕ್ಯುಲರ್ ಧೋರಣೆ ಬದಲಾಯಿಸುವುದು ಸಾಧ್ಯವಾದೀತು.

ಈ ಕ್ರಮದಿಂದ ಮುಂದೆ ತನ್ನ ಧರ್ಮ ಚೆನ್ನಾಗಿಕಲಿತ ಹಿಂದೂಧರ್ಮದ ವಿದ್ಯಾರ್ಥಿ ಲಂಚ ತಿನ್ನುವ ನೌಕರನಾಗನು, ವ್ಯಾಪಾರದಲ್ಲಿ ಜನರ ಸುಲಿಗೆ ಮಾಡುವವನಾಗನು, ಸಂಬಳಕ್ಕೆ ತಕ್ಕ ಕೆಲಸ ಮಾಡದ ಆಲಸಿಯಾಗನು ; ಏಕೆಂದರೆ ಅವನಿಗೆ ವಂಚನೆಯ ಮೂಲಕ ಬಂದ ಹಣಕ್ಕಿಂತ ಹೆಚ್ಚು ಋಣ ಸಂದಾಯ ಶಿಕ್ಷೆ ನಡೆಸಲ್ಪಡುವುದು ಎಂಬ ಭೀತಿ ಇರುವುದು. ಡ್ರೈವರನಾಗಿ ಕೆಲಸ ಮಾಡುವಾಗ ಮದ್ಯ ಸೇವಿಸನು, ಏಕೆಂದರೆ ತನ್ಮೂಲಕ ಅಪಘಾತಕ್ಕೆ ಕಾರಣನಾಗಿ ಭಯಂಕರ ಕೊಲೆಗಳ ಪಾಪ ಅನುಭವಿಸಬೇಕಾಗುತ್ತದೆ, ಎಂದು. ಧಾರಾಳಯೋಗ್ಯತೆ ಸಾಲದೆಯೂ ಮಂತ್ರಿಯಾಗಲು ಯತ್ನಿಸನು. ಏಕೆಂದರೆ

ಸರ್ಕಾರದಿಂದ ಸಹಾಯ ಪಡೆಯಬೇಕಾದ ಲಕ್ಷಗಟ್ಟಲೆ ಜನರಿಗೆ ತಕ್ಕ ಸಹಾಯ ಕೊಡದ ಪಾಪಕ್ಕೆ ಲಕ್ಷಾಂತರ ಪಾಲು ನರಕ ಶಿಕ್ಷೆ ತಪ್ಪದು. ವಿದ್ಯಾರ್ಥಿ ವಿದ್ಯೆ ಕಲಿಯದ ನಕಲು ತೆಗೆದು "ಪಾಸಾಗಿ" ಸರ್ಕಾರೀ ಹುದ್ದೆ ಪಡೆದು ದೇಶದ ಬಡವರ ಹಣದ ಸಂಬಳ ನುಂಗುತ್ತ ಹೋಗುವ ಭಯಂಕರ ಅನ್ಯಾಯಕ್ಕೆ ಶಿಕ್ಷೆ ಉಂಟಾಗುವುದೆಂದು ಎಂದೂ ಮಾಡನು. ಮಾತ್ರವಲ್ಲ ಇವರೆಲ್ಲರೂ ದೇವರ ಕೃಪೆಗಾಗಿ ಪರೋಪಕಾರ, ದಾನ, ತಂದೆ ತಾಯಿಯರಲ್ಲಿ ವಿಧೇಯತೆ, ಪ್ರೀತಿ, ಜೀವನದಲ್ಲಿ ಶಿಸ್ತು, ಸಂಯಮನ, ಉದಾರತೆ ಅಹಿಂಸೆ, ಸತ್ಯತೆ, ಭಕ್ತಿ ಎಲ್ಲ ಅಭ್ಯಸಿಸದಿರರು. ದೇಶದ ಉದ್ಧಾರ ಸಾಧಿಸದಿರರು.

ಈ ದಾರಿ ಲೋಕಕ್ಕೆ ಮಾರ್ಗದರ್ಶಕವಾಗಬಹುದು. ಮತ್ತು ತುಂಬಾ ಕಾರಣಯುಕ್ತವಾದ ಜಾತಿ ಕ್ರಮ ಬಾಳಿಸಲಿಕ್ಕೆ ಪಾಶ್ಚಾತ್ಯದ ಪ್ರಜಾರಾಜ್ಯ ಕ್ರಮವನ್ನು ಕೇವಲ ಕುರುಡು ಅನುಕರಣೆ ಮಾಡಿದ್ದರ ಅಪಾರ ಹಾನಿ ಪ್ರತ್ಯಕ್ಷ ಕಂಡ ಮೇಲಾದರೂ, ನಮ್ಮದೇ ಧರ್ಮ ಬಾಳಿಸುವ ಕ್ರಮ, ಹಿಂದೆ ನಮ್ಮದೇ ಸತ್ಯಾಗ್ರಹ ಕಂಡುಕೊಂಡಂತೆ, ಇನ್ನು ನಿರ್ಮಿಸುವ. ದೇಶದ ಸಮಸ್ಯೆಗಳು ಹೆಚ್ಚುತ್ತ ಬರುತ್ತಿವೆ. ಪರಿಹಾರಕ್ಕೆ ಕೇವಲ ಮುಖಂಡರ ಬುದ್ಧಿ ಸಾಲದು. ಅದಕ್ಕೆ ದೇವರ ಪ್ರಾರ್ಥನೆಯ ಸಹಾಯ ಸೇರಿಸುವ ಕ್ರಮ ಉಂಟುಮಾಡುವ.

## ೨೫. ಉತ್ತಮ ಬ್ರಾಹ್ಮಣ ಜೀವನ ನಡೆಸುವ

ದೇಶದ ಮಕ್ಕಳಿಗೆಲ್ಲ ಅವರವರ ಧರ್ಮವನ್ನು ಧಾರಾಳವಾಗಿ ಕಡ್ಡಾಯವಾಗಿ ಕಲಿಸುವ, ತನ್ಮೂಲಕ ದೇಶದ ನೈತಿಕ ಉದ್ಧಾರಕ್ಕಿರುವ, ಏಕ ಮಾತ್ರ ದಾರಿಯನ್ನು ಸರ್ಕಾರ ಯಾವಾಗ ಹಿಡಿದೀತು ಎಂದು ಹೇಳುವಂತಿಲ್ಲ. ಆದರೆ ಬ್ರಾಹ್ಮಣರು ಅದಕ್ಕಾಗಿ ಕಾಯದೆ ತಮ್ಮ ಉದ್ಧಾರದ ಹಾದಿ ಈ ಜನ್ಮದಲ್ಲಿಯೇ ಆದಷ್ಟು ಸಾಧಿಸಲೇಬೇಕು. ವಿಷ್ಣು ಪುರಾಣ ಹೇಳುತ್ತದೆ :

ತತ್ರಾಪಿ ಭಾರತಂ ಶ್ರೇಷ್ಠಂ ಜಂಬೂದ್ವೀಪೇ ಮಹಾಮುನೇ ।
ಯತೋ ಹಿ ಕರ್ಮಭೂರೇಷಾ ತತೋಽನ್ಯಾಭೋಗ ಭೂಮಯಃ ॥

ಜಂಬೂ ದ್ವೀಪದಲ್ಲಿರುವ ಭಾರತವರ್ಷವು ಶ್ರೇಷ್ಠವಾದದ್ದು, ಅದು ಕರ್ಮ ಭೂಮಿ (ಎಂದರೆ ಶಾಸ್ತ್ರೋಕ್ತ ಕರ್ಮಗಳನ್ನು ಅತಿ ಧಾರಾಳವಾಗಿ

ಆಚರಿಸಿ ಮುಕ್ತಿಯ ದಾರಿ ಹಿಡಿಯಲು ಅತ್ಯುಪಯುಕ್ತ ಭೂಮಿ), ಮಿಕ್ಕವು ಭೋಗ ಭೂಮಿಗಳು (ಆದ್ದರಿಂದಲೇ ನಮ್ಮಲ್ಲಿಯೇ ಎಲ್ಲಾ ಧರ್ಮಗಳ ಮೂಲವಾದ ವೇದ ಪ್ರಕಟವಾಯಿತಾದರೆ ಪಾಶ್ಚಾತ್ಯ ದೇಶಗಳಲ್ಲಿ ಕೇವಲ ದೇಹದ ಭೋಗ ಹೆಚ್ಚಿಸುತ್ತಿರುವ, ಪಾಪದ ಕುಂಡಕ್ಕಿಳಿಸುವ, ಕಾಮುಕತೆ ವಿಪರೀತ ಬೆಳೆಸುವ, ವಿಜ್ಞಾನವು ಜನಿಸಿ ವೃದ್ಧಿ ಹೊಂದುತ್ತಿದೆ). ಈ ದೇಶ ದಲ್ಲಿ ಮಾತ್ರವೇ, ಧರ್ಮದ ಗ್ಲಾನಿ ಬಹಳ ನಡೆದಾಗ, ಭಗವಂತನೇ ಅದರ ರಕ್ಷಣೆಗೆ ಅವತರಿಸುತ್ತೇನೆಂದು ಮಾತು ಕೊಟ್ಟಿದ್ದಾನೆ. ಇಲ್ಲಿ ಮಾತ್ರವೇ ಎಷ್ಟೆಲ್ಲ ಅದ್ಭುತ ತರದ ದೇವರ ಅವತಾರಗಳು, ಅತ್ಯಂತ ಶ್ರೇಷ್ಠ ಮಹಾ ಪುರುಷರ ಜನ್ಮಗಳು, ನಡೆಯುತ್ತ ಬಂದಿವೆ. ಕೇವಲ ಕಳೆದ ೧೦೦ ವರ್ಷಗಳ ಲ್ಲಿಯೇ ಶ್ರೀ ತ್ರೈಲಿಂಗಸ್ವಾಮಿಯವರು, ಶ್ರೀ ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಶ್ರೀ ಅರವಿಂದೋರವರು, ಶ್ರೀ ರಮಣ ಮಹಾ ಋಷಿಗಳು, ಶ್ರೀ ಪರಮಹಂಸ ಯೋಗಾನಂದರು, ಶ್ರೀ ಸತ್ಯಸಾಯಿ ಬಾಬರು ಮುಂತಾದ, ಲೋಕದಲ್ಲಿಯೇ ಅದ್ವಿತೀಯ ಮಟ್ಟದ, ಮಹಾಪುರುಷರು ಇಲ್ಲಿ ಮಾತ್ರವೇ ಜನ್ಮ ತಳೆದಿರುವರಲ್ಲ! ಈಗ ಕೂಡ ದೈವೀಲೀಲೆಯಿಂದಲೇ ಎಂಬಂತೆ ಥಕ್ಕನೆ ಎಷ್ಟೆಲ್ಲ ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನಗಳು ಉದ್ಭವ ವಾದವು! ಸ್ವಾಮಿ ಅಯ್ಯಪ್ಪನ ಭಕ್ತರು ಧಾರಾಳ ಹೆಚ್ಚಿದ್ದು ಕೇವಲ ದೈವೀ ಶಕ್ತಿಯಿಂದಲೇ ಅಲ್ಲವೇ! ಹೌದು. ನಮ್ಮದು ಮಾತ್ರ ಕರ್ಮಭೂಮಿ; ಪುಣ್ಯಭೂಮಿ. ಇಲ್ಲಿ ಜನ್ಮ ಪಡೆದವರಲ್ಲೂ (ಮನು ೧,೯೬) :

ಬುದ್ಧಿಮತ್ಸು ನರಾಃ ಶ್ರೇಷ್ಠಾ ನರೇಷು ಬ್ರಾಹ್ಮಣಾಃ ಸ್ಮೃತಾ ।

ಹೀಗೆ ನರರಲ್ಲಿ ಶ್ರೇಷ್ಠನಾಗಿ ಜನ್ಮ ಪಡೆದು ಬಂದವ ಬ್ರಾಹ್ಮಣನು. ಭಾಗವತ (೧೧–೧೭–೪೨) ಹೇಳುತ್ತದೆ :

ಬ್ರಾಹ್ಮಣಸ್ಯ ಹಿದೇಹೋऽಯಂ ಕ್ಷುದ್ರ ಕಾಮಾಯನೇಷ್ಯತೇ ।
ಕೃಛ್ರಾಯ ತಪಸೇ ಚೇಹ ಪ್ರೇತ್ಯಾನಂತಸುಖಾಯ ಚ ॥

ಹೀಗೆ ಲಭಿಸಿದ ಬ್ರಾಹ್ಮಣ ಶರೀರವು ಅಲ್ಪವಾದ ಇಂದ್ರಿಯ ಸುಖಗಳ ಭೋಗಕ್ಕಾಗಿ ಉಂಟಾದುದಲ್ಲ. ಈ ಲೋಕದಲ್ಲಿ ಕಷ್ಟತರದ ತಪಸ್ಸನ್ನು ಮಾಡಿ ಮರಣಾನಂತರ ಮೋಕ್ಷವೆಂಬ ಅನಂತ ಸುಖ ಪಡೆಯಲು ಅದು ಉಂಟಾಗಿದೆ. ಸಾಧನೆ ಮಾಡಲಿಕ್ಕೆ ಈಗಲೇ ಕಾಲ ಬಹಳ ಕೆಟ್ಟಿದೆಯಲ್ಲ ಎಂಬ ಆಕ್ಷೇಪಕ್ಕೆ ಶ್ರೀ ಶ್ರೀ ಚಂದ್ರಶೇಖರ ಭಾರತಿಗಳು ಎಚ್ಚರಿಸಿದ್ದರು, ೫೦–೧೦೦ ವರ್ಷಗಳ ಅನಂತರ ಪುನಃ ಜನಿಸಿದಾಗ ಕಲಿಕಾಲದ ಅಧರ್ಮ ವಾತಾವರಣ

ಮತ್ತಷ್ಟು ಕೆಟ್ಟಿರದೇ ? ಸಾಧ್ಯವಾದ ಅಭ್ಯಾಸ ಈಗಲೇಮಾಡುವುದು ಮಾತ್ರ ವಿವೇಕ, ಎಂದು. ಇಲ್ಲವಾದರೆ ಹಾಗೆ ಮಾಡದಿರದ ಪಾಪ, ಮುಂದೆ ಮಾತ್ರ ಹೆಚ್ಚು ತುಂಬಿಸಿಕೊಳ್ಳುತ್ತ ಹೋಗುವ ಪಾಪ, ಕಲಿಯುಗದ ಅಂತ್ಯದವರೆಗೂ ನಮ್ಮನ್ನು ಮತ್ತೂ ಮತ್ತೂ ಅಧೋಗತಿಗೆ ಜಾರಿಸುತ್ತ ಹೋಗುವುದು ಖಂಡಿತ. ತಪಸ್ಸೆಂದರೆ ಅವರವರ ಜಾತಿಧರ್ಮದ ಆದಷ್ಟು ಹೆಚ್ಚಿನ ಅಭ್ಯಾಸವನ್ನು ದೇಹದ ಶ್ರಮ ನಿರ್ಲಕ್ಷಿಸಿ ಮಾಡಬೇಕಾದ ಸಾಧನೆ ; ದೃಷ್ಟಾಂತಕ್ಕೆ ಕೆಲಸದಿಂದ ನಿವೃತ್ತರಾದ ಮೇಲಾದರೂ ೧೦೦೮ ಗಾಯತ್ರೀ ಜಪ, ಪೂಜೆ, ವ್ರತೋಪವಾಸಗಳು ಇತ್ಯಾದಿ ಸಾಧ್ಯ. ಇದು ನಿವೃತ್ತರ ಕ್ರಮವಾಗಲಿ.

ನಮಗೆ ಬ್ರಾಹ್ಮಣ್ಯದ ಸಾಧನೆಗೆ ಸ್ಫೂರ್ತಿ ಕೊಡಲಿಕ್ಕೆ ನಮ್ಮ ಹಿರಿಯರು ಸಹಸ್ರಾರು ವರ್ಷಗಳ ಕಾಲದಲ್ಲಲ್ಲ ಮತ್ತು ಕೇವಲ ಇತ್ತೀಚಿನವರೆಗೂ ಎಂಥ ಹಿರಿಮೆ ಬ್ರಾಹ್ಮಣ ಜೀವನ ನಡೆಸಿಕೊಂಡು ಬಂದಿದ್ದರು ಎಂಬುದಕ್ಕೆ ಸ್ವಲ್ಪ ದಾಖಲೆಗಳನ್ನು ಕೊಡುತ್ತೇನೆ. ಏಕೆಂದರೆ ಆ ಅತಿ ಹಿರಿಮೆಯ ರಕ್ತ ನಮ್ಮಲ್ಲಿ ಇನ್ನೂ ಹರಿಯುತ್ತಿದೆ ಎಂಬ ಭಾವನೆ ಬರಲಿ. ೧೮೦೦ನೇ ಇಸವಿಯಲ್ಲಿ ಥಾಮಸ್ ಮೋರೀಸ್ ಎಂಬ ಆಂಗ್ಲೇಯನು ಬ್ರಾಹ್ಮಣರ ಜೀವನದ ವಿಚಾರ Indian Antiquity Vol. V ನಲ್ಲಿ ಬರೆದಿದ್ದ : “ಅವರ ಜೀವನವು ಯಾವ ರೀತಿಯಲ್ಲೂ ಹುಳುಕಿಲ್ಲದ್ದು ; ಅವರ ನಡತೆ ತೀರಾ ಸರಳ ; ಅವರ ಅಮಲು ಪದಾರ್ಥಗಳ ವರ್ಜ್ಯತೆ, ಪಾತಿವ್ರತ್ಯ, ಬಹಳ ಆಳವಾದ ಧಾರ್ಮಿಕ ಮತ್ತು ರಾಜಕೀಯ ಜ್ಞಾನ ಎಲ್ಲ ಕೆಳಮಟ್ಟದವರನ್ನೂ ಬೆರಗು ಮಾಡುತ್ತಿತ್ತು ; ಸಿಂಹಾಸನಾರೂಢರನ್ನೂ ಹಾಗೆ ಮಾಡುತ್ತಿತ್ತು......ಕಾಮವನ್ನು ಮಿತದಿಂದ ಬಿಗಿಹಿಡಿದು ಬಾಹ್ಯಾಭಿಲಾಷೆಗಳನ್ನು ಅತ್ಯಲ್ಪಬಯಕೆಗಳಿಂದ ತೃಪ್ತಿಸಿ ಜೀವಿಸುತ್ತಿದ್ದ ಬ್ರಾಹ್ಮಣರಿಗೆ ತಮ್ಮ ಧರ್ಮದ ಪರಿಪಾಲನೆಯಿಂದ ಮನಸ್ಸನ್ನು ಅಡ್ಡ ಸೆಳೆಯಲು ಏನೂ ಇರಲಿಲ್ಲ. ಬ್ರಾಹ್ಮಣ ಹುಡುಗರಿಗೆ ಪಾಠ ಕಲಿಸುವುದು ಶಾಸ್ತ್ರ ಹೇಳುವ ಅನೇಕಾನೇಕ ಒಂದರ ಹಿಂದೆ ಒಂದಾಗಿ ಬರುತ್ತಿರುವ ಸ್ನಾನ, ಹೋಮ, ಇಷ್ಟದೇವತೆಯ ಆಳವಾದ ಧ್ಯಾನ, ಬಾಹ್ಯಕಾರ್ಯವಾಗಿ ಅತಿಥಿ ಸತ್ಕಾರ ಅವು ಅವರ ಇಡೀದಿನವನ್ನು ತುಂಬಿ ಸಫಲ ಮಾಡುತ್ತಿದ್ದವು. ರಾತ್ರಿ ದೇವರ ಪ್ರಾರ್ಥನೆ, ಸಂಕೀರ್ತನೆ, ಉಳಿದ ಭಾಗವು ಮಿತಜೀವನದವರಿಗೆ ಯಾರಿಗೂ ಅನ್ಯಾಯ ಮಾಡದೆ ಬದುಕುವವರಿಗೆ ಬೇಕಾಗುವ ಅಲ್ಪಸ್ವಲ್ಪ ನಿದ್ರೆಯಲ್ಲಿ ಕಳೆಯುತ್ತಿತ್ತು (ಈಗಿನ ಪ್ರತಿಕೂಲ ಕಾಲದಲ್ಲಿ ಕೂಡ). ಅದು ಅನೇಕ ಬ್ರಾಹ್ಮಣರು ಯಾರಿಗೂ ತೊಂದರೆ ಕೊಡದೆ ಬದುಕುವ ಕ್ರಮವೂ

ಆಗಿದೆ". ಬಹಳ ಅನಂತರ ಸರ್ ಜಾರ್ಜ್ ಬರ್ಡ್ ವುಡ್ಡರು : "ಹಿಂದೂಸ್ಥಾನದ ಒಕ್ಕಲಿಗರಿಗೆ ಬ್ರಾಹ್ಮಣರು ಅವರ ದೇವರೇ ಆಗಿದ್ದಾರೆ. ಅವರ ಆತ್ಮದ ಏಳಿಗೆಯನ್ನು ಸಾಧಿಸಿ ಮೋಕ್ಷ ಕೊಡಿಸುವವರಾಗಿದ್ದಾರೆ. ರಜಪೂತ ಮತ್ತು ಇತರ ರಾಜಮನೆತನಗಳು ಬ್ರಿಟಿಷ್ ರಾಜರ ನಿಷ್ಠರಾಗಿದ್ದಾರೆ ಸರಿ. ಆದರೆ ಅವರ ಆತ್ಮದ ಮೇಲೆ ಸಾರ್ವಭೌಮ್ಯತೆ ಉಳ್ಳವರು ಬ್ರಾಹ್ಮಣರು. ಮತ್ತು ಹಾಗಿರಲಿಕ್ಕೆ ಅವರು ಅರ್ಹರೇ ಆಗಿದ್ದಾರೆ. ಏಕೆಂದರೆ ಅವರು ಬಲ್ಲ ಮನುಸ್ಮೃತಿಯಲ್ಲಿರುವ ಜ್ಞಾನವೇ ಹಿಂದೂಗಳದ್ದಾದ ಹಿಂದೂದೇಶದಲ್ಲಿ ಕಳೆದ ೩೦೦೦ ವರ್ಷಗಳಿಂದ ಅಪರಿಮಿತ ರಾಜಕೀಯ ಕ್ರಾಂತಿಗಳಲ್ಲೂ ಜಾತಿ ಮತ್ತು ಧರ್ಮದ ಐಕ್ಯಮತ್ಯ ಸಂಪೂರ್ಣಬಾಳಿಸಿಕೊಂಡು ಬಂದಿದೆ" ಎಂದು ಬರೆದರು.

ಕವಿ ರವೀಂದ್ರನಾಥ ಠಾಕೂರರು ಬರೆದಿದ್ದರು : "ಹಿಂದಿನ ಕಾಲದಲ್ಲಿ ಬ್ರಾಹ್ಮಣರಿಗಿದ್ದ ಗೌರವವು ಸಮಾಜಕ್ಕೆ ತುಂಬಾ ಪ್ರಯೋಜನಕಾರಿಯಾಗಿತ್ತು. ಸಮಾಜಕ್ಕೆ ದಾರಿ ತೋರಿಸುವ, ಎಚ್ಚರಿಕೆ ಕೊಡುವ, ರಕ್ಷಿಸುವ ಕೆಲಸದಲ್ಲಿ ಅವರ ಹಕ್ಕನ್ನು ಯಾರೂ ಅಲ್ಲಗಳೆಯುತ್ತಿರಲಿಲ್ಲ ; ಮತ್ತು ಬ್ರಾಹ್ಮಣರಲ್ಲಿ ಇದಕ್ಕೆ ಬೇಕಾದ ತ್ಯಾಗವಿಲ್ಲ ಎಂಬ ಭಾವನೆಗೆ ಎಡೆಯೇ ಇದ್ದಿಲ್ಲ. ಅವರ ಮೇಲಿನ ವಿಶ್ವಾಸವು ಬ್ರಾಹ್ಮಣರ ಮೇಲಿನ ಗೌರವವನ್ನು ಉಳಿಸಲು ಅಗತ್ಯವಾಗಿತ್ತು ಮತ್ತು ಅಂಥ ಗೌರವವು ಆಗಿನ ಇಂಡಿಯಾದ ಸಮಾಜದ ರಚನೆಯಲ್ಲಿ ಅತೀ ಅವಶ್ಯಕವಾಗಿತ್ತು." ಬ್ರಾಹ್ಮಣ ಹೆಂಗಸರ ವಿಚಾರ ಬರ್ಡ್‌ವುಡ್ ಬರೆದಿದ್ದರು, "ನಿರ್ದೋಷೀ ಮಗಳಂದಿರು, ನಿರ್ದೋಷೀ ಪತ್ನಿಯರು ಮತ್ತು ನಿರ್ದೋಷೀ ತಾಯಂದಿರು" ಎಂದು. ಸಹೋದರಿ ನಿವೇದಿತಾಳ ಹೇಳಿಕೆಯಂತೆ "ಹಿಂದೂ ಮಹಿಳೆಯರು ನಿಜಕ್ಕೂ ಮಾನವರಿಗೆ ಸಾಧ್ಯವಾದ ಪರಿಮಿತಿಯ ಪರಿಪೂರ್ಣತೆಯನ್ನು ಮುಟ್ಟಿದ್ದಾರೆ" ಎಂದು (ಜಾತಿಗಳೊಳಗೆ ಏನೇನೂ ಕಲಹಗಳಿರಲಿಲ್ಲ ಎಂಬುದಕ್ಕೂ ಇವೆಲ್ಲ ಧಾರಾಳ ಆಧಾರಗಳೇ).

ನಾವು ಬ್ರಾಹ್ಮಣ ಜನ್ಮ ಪಡೆದೂ ಬ್ರಾಹ್ಮಣ್ಯ ಬಾಳಿಸಿಕೊಳ್ಳದಿರುವುದೆಂದರೆ ಕರ್ನಾಟಕದ ಶಿವಭಕ್ತ ಕಾಶಿಕ್ಷೇತ್ರಕ್ಕೆ ಅತಿ ಸಮೀಪ ಹೋಗಿಯೂ ಗಂಗಾಸ್ನಾನ, ವಿಶ್ವನಾಥನ ದರ್ಶನ ಮಾಡದಿದ್ದಂತೆ. ನಾವು ಬ್ರಾಹ್ಮಣರು ಈಗ ಒಂದು ಅತ್ಯಂತ ಮಹತ್ವದ ಸಂದಿಗ್ಧ ಕಾಲದಲ್ಲಿ ಸಿಕ್ಕಿಬಿದ್ದಿದ್ದೇವೆ. ಮುಂಚಿನ ಕಾಲದವರೆಲ್ಲ (ಮುಖ್ಯವಾಗಿ ಹಳ್ಳಿಯವರು, ಇಂಗ್ಲೀಷು ವಿದ್ಯೆ ಕಲಿಯದಿದ್ದವರು ಎಲ್ಲರೂ) ಜಪ, ಪೂಜೆ, ಶುದ್ಧ ಆಹಾರ, ಜಾತಿ ಆಚಾರಗಳನ್ನು ಬಾಳಿಸಿಕೊಂಡು ಬಂದವರೇ ಆಗಿದ್ದರು. ತಮ್ಮ ಗಾಯತ್ರೀ ಜಪದಿಂದ

ಮುಂದೆ ಬ್ರಾಹ್ಮಣ ಜನ್ಮ ಹೊಂದುವವರಾಗಿದ್ದರು (ಕೇವಲ ೪೫ ವರ್ಷಗಳ ಸೆಕ್ಯುಲರ್ ಸರ್ಕಾರದ ಭಯಂಕರ ಹಾನಿ ಕಂಡರೆ ಅದು ತಿದ್ದಲ್ಪಡದೆ ಮುಂಬರಿಯುತ್ತ ಹೋದರೆ). ಮುಂದೆ ಜನಿಸುವವರು ಅತಿ ಹೆಚ್ಚಿನವರೆಲ್ಲ ಬ್ರಾಹ್ಮಣ ಸದಾಚಾರಗಳನ್ನು ಪಾಲಿಸಲು ಸಮರ್ಥತೆ ಪೂರ್ಣ ಕಳಕೊಂಡವರೇ ಆಗದಿರರು. ಇಡೀ ಕಲಿಯುಗದ ಬಾಕಿ ಕಾಲವಾದ ಸುಮಾರು ೪,೨೭,೦೦೦ ವರ್ಷಗಳಲ್ಲೆಲ್ಲ ಅವರು ಅತಿ ಅಲ್ಪ ಪ್ರಾಣಿಜನ್ಮಗಳನ್ನು ಅತಿ ಕೆಟ್ಟಮಾನವ ಜನ್ಮಗಳನ್ನು ಮಾತ್ರ ಪಡೆಯುತ್ತ, ಹಾಳಾಗುತ್ತ ಹೋದಾರು. ಆದರೆ ನಾವು ಈಗಿನ ಸಂದಿಗ್ಧ ಕಾಲದವರು ಮಾತ್ರ ಅತ್ಯಂತ ದೃಢಮನಸ್ಸು ಮಾಡಿ ವಿಶೇಷ ಧಾರ್ಮಿಕಶಿಸ್ತು ಹಿಡಿದು ಉದ್ಧಾರದ ದಾರಿಹಿಡಿಯುವುದು ಸಾಧ್ಯ. ಅವರಲ್ಲಿ ನನ್ನ ಈ ಪುಸ್ತಕ ಪೂರ್ಣ ಓದಿದ ತಾಳ್ಮೆಇದ್ದವರು ಧರ್ಮದವಿಚಾರ ಮತ್ತೂ ಹೆಚ್ಚುಓದುತ್ತ, ಕಲಿಯುತ್ತ, ಜಪ ತಪ್ಪದೆ ಹೆಚ್ಚುಹೆಚ್ಚು ಚೆನ್ನಾಗಿಮಾಡುತ್ತ, ಸಾಧ್ಯವಾದ ಇತರ ಸದಾಚಾರಗಳನ್ನೂ, ಮಡಿಮೈಲಿಗೆ, ಸಾತ್ವಿಕತೆ, ಉತ್ತಮ ಶೀಲ ಮುಂತಾದವನ್ನೂ ಬೆಳೆಸುತ್ತ ಮೋಕ್ಷದ ದಾರಿಯಲ್ಲಿ ಮುಂದರಿಯುವುದು ಸಾಧ್ಯ.

ಆದರೆ ಈ ಕಾಲದ ದೊಡ್ಡ ಕಷ್ಟ, ಪ್ರಥಮ ಕರ್ತವ್ಯವಾಗಿ ಕೇವಲ ಬದುಕಿರುವುದು. ಅದಕ್ಕೆ ಸ್ವತಂತ್ರರಾಗಿ ವೃತ್ತಿ ನಡೆಸುವುದು ಉತ್ತಮ. ಆದರೆ ಅದಕ್ಕೆ ಧೈರ್ಯಸಾಲದೆ ಹೆಚ್ಚಿನವರು ಹುದ್ದೆಗೆ ಆಶಿಸುತ್ತಾರೆ. ಅಲ್ಪರ ಕೆಳಗೆ ಕೆಲಸ ಧರ್ಮಕ್ಕೆ ಹಾನಿ ತಾರದಿರದು. ಅಂಥ ಕೆಲಸ ನಾಯಿಜನ್ಮದಂತೆ ಎಂದು ಮನುಸ್ಮೃತಿ ಹೇಳುತ್ತದೆ. ಆದರೆ ದೊಡ್ಡ ಸಂಸ್ಥೆಗಳಲ್ಲಿ ಕೆಲವು ನಿರ್ದಿಷ್ಟ ಕ್ರಮಗಳಿರುವುದರಿಂದ ಅವು ನೌಕರರನ್ನು ಅನ್ಯಾಯದ ವರ್ತನೆಗೆ ಹಿಡಿಸುವುದು ಅಪರೂಪ. ಅವಲ್ಲಿ ಸೇವೆ ಕಡಿಮೆ ಹಾನಿಕರ. ಸರ್ಕಾರದಲ್ಲಿ ಈಗ ಹರಿಜನರು ಮೇಲಾಧಿಕಾರಿಗಳಾಗಿ ಬಂದು ವಿಪರೀತ ತರದ ಹೊಸ ಸಮಸ್ಯೆ, ಬೇಸರ ಉಂಟುಮಾಡುವ ಸಂಭವವಿದೆ. ಖಾಸಗಿ ಕಂಪೆನಿಗಳಲ್ಲಿ ಯೋಗ್ಯರಿಗೆ ಬೆಲೆ ಹೆಚ್ಚು. ಆದರೆ ಎಲ್ಲೇ ಆಗಲಿ ಸೇವಾ ಕೆಲಸದಲ್ಲಿ ನಮ್ಮ ಅತಿ ಮುಖ್ಯ ಶರ್ತವಾಗಿ, ಧರ್ಮಕ್ಕೆ ಹಾನಿ ಬರುವ ಸಂದರ್ಭಗಳು ಬಂದಾಗ ಕೆಲಸತ್ಯಜಿಸುವ ನಿರ್ಧಾರ, ಅದಕ್ಕೆ ಬೇಕಾಗಿ ನಿರಂತರ ತಯಾರಿಕೆ ಬೇಕೇಬೇಕು. ದಕ್ಷತೆ ಸಮರ್ಥತೆಗಳಿಂದ ಕೆಲಸಮಾಡುವವನನ್ನು ಕಂಪೆನಿಗಳು ತೆಗೆದುಹಾಕುವ ಸಂಭವ ಕಡಿಮೆ. ಆದರೆ ಅಲ್ಲೂ ವೈರಕಟ್ಟಿ ಸುಳ್ಳು ಉಪಯೋಗಿಸುವ ಮೇಲಾಧಿಕಾರಿಗಳು ಇರಬಹುದು. ಆದ್ದರಿಂದ ಎಲ್ಲೇ ಆಗಲಿ ಅತ್ಯಂತ ಸುಲಭ

ಜೀವನ ನಡೆಸಿ ಇಂಥ ಸಂದರ್ಭ ಬಂದ ಕಾಲದ ಧೈರ್ಯಕ್ಕೆ, ಸಹಾಯಕ್ಕೆ, ಕ್ಷೇಮನಿಧಿ ಬೆಳೆಸುತ್ತಿರಬೇಕು. ಬ್ರಾಹ್ಮಣಸಂಘಗಳು ಫಂಡ್‌ಮಾಡಿ ತತ್ಕಾಲದ ಸಹಾಯ ಕೊಡುವ ಕ್ರಮ ತರಬೇಕಾದೀತು.

ತಾವು ಸನಾತನಿ ಬ್ರಾಹ್ಮಣರಾಗಿ ಬಾಳಬೇಕೆಂದಿರುವವರು ತಮ್ಮ ಕ್ಷೇತ್ರ ಯಾವುದೇ ಆಗಲಿ ಅದರಲ್ಲಿ ಅತ್ಯಂತ ಸುಲಭ ಸರಳಜೀವನ, ಮನಃಪೂರ್ವಕತೆ ನಿರ್ವಂಚನೆ, ಉತ್ತಮ ಶೀಲ, ಸಾಧ್ಯವಾದಷ್ಟು ಸಮರ್ಥತೆ, ಧಾರ್ಮಿಕದೃಷ್ಟಿ ಯಿಂದ ತ್ಯಾಗ, ಸಾಧ್ಯವಾದ ಪರೋಪಕಾರ, ಮುಖ್ಯವಾಗಿ ಜನರು ಸ್ವಾರ್ಥತೆ ಯಲ್ಲಿ ಮುಳುಗಿರುವ ಈಗಿನ ಲೋಕದಲ್ಲಿ ತಮ್ಮ ದಾರಿ ಬೇರೆ, ಧಾರ್ಮಿಕ ಧ್ಯೇಯದ್ದು, ಜೀವನ ಕಷ್ಟವಾದರೂ ಆ ಧ್ಯೇಯ ಬಿಡಲಾರೆವು ಎಂಬ ಭಾವನೆ ಸ್ಥಾಪಿಸಿ ಬಾಳಬೇಕು. ಲಂಚ ಸಂಪೂರ್ಣ ವರ್ಜ್ಯ; ಪಡೆಯುವ ಸಂಬಳಕ್ಕೆ ಸ್ವಲ್ಪವೂ ಕೊರತೆ ಬಾರದ ಪೂರ್ಣ ಸೇವೆ ಮತ್ತು ಆದಷ್ಟು ಹೆಚ್ಚಿನ ದಕ್ಷತೆಯ ಕೆಲಸ, ಅಧಿಕಾರ ಚಲಾಯಿಸುವಲ್ಲಿ ವಿಶೇಷ ನಿಷ್ಪಕ್ಷಪಾತ, ನ್ಯಾಯಪರತೆ, ತನ್ನ ಆಲಸ್ಯ ಅಥವಾ ಅಜಾಗ್ರತೆಯಿಂದ ಇತರರಿಗೆ ಕೆಡುಕಾಗದ ಜಾಗ್ರತೆ, ಸೌಮ್ಯತೆ ಗರ್ವಹೀನತೆ ಮುಂತಾದ ಗುಣಗಳು ಈ ವರ್ಗದ ಎಲ್ಲ ನೌಕರರ ಧ್ಯೇಯ ವಾಗಲಿ. ಕಾಲ ಬಹಳ ಕೆಡುತ್ತಿರುವಾಗ ಇತರ ಜನರಿಗೆ ಹೆಚ್ಚು ಹೆಚ್ಚಾಗಿ ಈ ವರ್ಗದವರ ಈ ಗುಣಗಳು ಎದ್ದು ಕಾಣುವಂತಾಗಲಿ. ಅದಕ್ಕಿಂತ ಹೆಚ್ಚಾಗಿ ಬ್ರಾಹ್ಮಣ ಉದ್ಯೋಗಿಗೆ ತನ್ಮೂಲಕ ಬರುವ ಮನಃಶಾಂತತೆ, ಸಮಾಧಾನ, ತನ್ನದೇ ಆದ ವಿಶೇಷ ತೃಪ್ತಿ, ಶಾಂತಿ ಧಾರಾಳವಾಗಲಿ. ಸುತ್ತಲೂ ಹೆಚ್ಚು ತ್ತಿರುವ ಇತರರ ಕ್ಷುದ್ರವಾದ ಕ್ಷಣಿಕವಾದ ದೇಹದ ಅಲ್ಪ ಭೋಗಗಳ ದಾರಿ ಯನ್ನು, ಜನ್ಮ ಜನ್ಮಾಂತರಗಳಲ್ಲೆಲ್ಲ ಕೇಡು ತರುವ ಅಂಧತೆಯ ದಾರಿಯನ್ನು ತ್ಯಜಿಸಲು ದೇವರು ನನಗೆ ಶಕ್ತಿ ಕೊಟ್ಟನಲ್ಲ, ಆತ್ಮದ ಹಿರಿಮೆ ಅರಿತು ಅದರ ಶಕ್ತಿ ಬೆಳೆಸುವ ಆಸೆ, ಉಲ್ಲಾಸ ಆ ಭಗವಂತ ಕೊಟ್ಟನಲ್ಲ, ಇದು ಎಷ್ಟೊಂದು ನನ್ನ ಭಾಗ್ಯ ಎಂಬ ಕೃತಜ್ಞತಾಭಾವನೆ ನಮ್ಮಲ್ಲಿ ತುಂಬಿಕೊಂಡಿರುವಂತಾಗಲಿ. ನಿಂದೆ ಹೊಗಳಿಕೆಗಳಿಗೆ ಲಕ್ಷ್ಯ ಕೊಡದೆ ನಮ್ಮ ಹಿರಿಮೆಯ ಜನ್ಮ ಒದಗಿಸಿದ ಧ್ಯೇಯ ಸಾಧಿಸಬೇಕು.

ಇದರಿಂದಾಗಿ ಜನರು ಹೆಚ್ಚು ಹೆಚ್ಚಾಗಿ ಹೀಗೆ ಆಡುವಂತಾಗಬೇಕು; ಆ ಅಧಿಕಾರಿ ಬ್ರಾಹ್ಮಣನು ಲಂಚ ತೆಗೆದುಕೊಳ್ಳನು, ಅವನಿಂದ ಶೀಘ್ರವಾಗಿ ನ್ಯಾಯ ಸಿಕ್ಕದಿರದು; ಆ ನನ್ನ ಬ್ರಾಹ್ಮಣ ಗುರುಗಳ ಬಗೆಗೆ ನನಗೆ ಈಗಲೂ ಅಭಿಮಾನ, ಸಂತೋಷ, ಕೃತಜ್ಞತಾ ಭಾವನೆ, ಧಾರಾಳವಾಗಿ ಇದೆ; ಈ

ಬ್ರಾಹ್ಮಣರ ಅಂಗಡಿಯಲ್ಲಿ ಸಂದರ್ಭ ಕಂಡು ಸುಲಿಗೆ ಮಾಡುವ ಕ್ರಮ ಇಲ್ಲ, ತುಂಬಾ ನ್ಯಾಯಸ್ತರು; ಈ ವಠಾರದಲ್ಲಿ ಬಡವರ ಕಷ್ಟ ಅರ್ಥಮಾಡಿಕೊಳ್ಳುವ ಸಮರ್ಥ ಡಾಕ್ಟರೆಂದರೆ ಆ ಬ್ರಾಹ್ಮಣ ಡಾಕ್ಟರರು ಮಾತ್ರ, ಅವರು ಮಾತ್ರ ಅನುಕೂಲವಾದೀತು ಎಂದು ಮುಂತಾಗಿ ಜನರು ಆಡಿಕೊಳ್ಳುವಂತಾಗಲಿ.

ಈಗ ಜಾತಿ ಕಟ್ಟಿನ ಕ್ರಮವಿಲ್ಲದಿದ್ದರೂ ನಮ್ಮ ವರ್ಗದಲ್ಲಿರುವ ನಾಸ್ತಿಕರು, ಮದ್ಯ ಮಾಂಸ ಸೇವಿಸುವವರು ಎಷ್ಟಕ್ಕೂ ಬ್ರಾಹ್ಮಣ ಕುಟುಂಬದವರಾಗರು, ಅಂಥವರ ಸಂಬಂಧ ಬಹಳ ಹಾನಿಕರ. ಪರದೇಶದ ವಾಸದಿಂದ ಭ್ರಷ್ಟತೆ ಖಂಡಿತ. ಬ್ರಾಹ್ಮಣನಿಗೆ ಅದು ಆಪದ್ಧರ್ಮವಲ್ಲ. ಪಾಶ್ಚಾತ್ಯದೇಶಗಳಲ್ಲಿ ಚಿಕ್ಕಮಕ್ಕಳೂ ವ್ಯಭಿಚಾರ ಶುರು ಮಾಡುತ್ತವೆ! ನಮ್ಮ ಪರಿಶುದ್ಧತೆಯ ಕಲ್ಪನೆ ಅಲ್ಲಿ ಅಸಾಧ್ಯ.

ಬ್ರಾಹ್ಮಣರು, ಮುಖ್ಯವಾಗಿ ಅವರ ಸ್ತ್ರೀಯರೂ ಈ ಕಾಲದ ಫ್ಯಾಶನ್ ರೋಗಕ್ಕೆ ಸಂಪೂರ್ಣ ತಿರಸ್ಕಾರ ಹಾಕಬೇಕು. ಅದನ್ನು ಪಾಶ್ಚಾತ್ಯರು ಉಂಟು ಮಾಡಿದ್ದು ವರ್ಷವರ್ಷಕ್ಕೆ ಫ್ಯಾಶನ್ ಬದಲಿಸಿ ಬಟ್ಟೆ ತಯಾರಿಸುವವರು, ಅಂಗಡಿಯುವರು, ಹೊಲಿಗೆಯುವರು ತಮ್ಮ ಲಾಭ ಧಾರಾಳವಾಗಿ ಹೆಚ್ಚಿಸಿಕೊಳ್ಳಲಿಕ್ಕೆ ; ಕೇವಲ ಬಟ್ಟೆಬರೆಗಳ ಚಂದ ಹೆಚ್ಚಿಸಲಿಕ್ಕಲ್ಲ ; ಏಕೆಂದರೆ ಚಂದ ಹೆಚ್ಚಿಸುತ್ತ ಹೋದಂತೆ ಅತ್ಯುತ್ತಮ ಮಟ್ಟ ಮುಟ್ಟಿದರೂ ನಂತರ ಪುನಃ ವಾರ್ಷಿಕ ಬದಲಾವಣೆ ಅನಿವಾರ್ಯ! ತೀರಾ ಚಂದವಿಲ್ಲದ blue jeans ದೊಡ್ಡ ಫ್ಯಾಶನ್ನಾಗಿ ಉಳಿದಿದೆ! ಒಂದು ವಿಶೇಷ ಕಾರ್ಯಕ್ರಮಕ್ಕೆ ಹೆಂಗಸು ಒಂದು ಸೀರೆ ಉಟ್ಟುಕೊಂಡು ಹೋದಮೇಲೆ ಮತ್ತೊಮ್ಮೆ ಆ ಕಾರ್ಯಕ್ರಮಕ್ಕೆ ಆ ಸೀರೆ ತೊಡಲೇಕೂಡದು ! ಹೆಂಗಸರಿಗೆ ೪೦-೫೦ ಸೀರೆ, ೧೦–೧೫ ಜೊತೆ ಮೆಟ್ಟು ಈಗ ಫ್ಯಾಶನ್. ಕುತ್ತಿಗೆಗೆ ಟೈ ಕಟ್ಟುವುದೂ ಬ್ರಾಹ್ಮಣರಿಗೆ ಬೇಡ. ಪೂರ್ಣ ಗುಬ್ಬಿಗಳ ಅಂಗಿಮಾತ್ರ ಕ್ರಮವಾಗಲಿ. ಎಲ್ಲ ಆಡಂಬರದ ಚಿಹ್ನೆಯೂ ತ್ಯಜಿಸಲ್ಪಡಲಿ. ಕೋಟ್ಯಾಂತರ ಜನರು ಫ್ಯಾಶನ್ ರೋಗದಿಂದ ಸಾವಿರಾರು ಬಟ್ಟೆ ತಯಾರಿಸುವವರ, ದರ್ಜಿಗಳ ಕೇವಲ ಗುಲಾಮರಂತೆ ಅವರ ಸಂಪಾದನೆ ಹೆಚ್ಚಿಸಲು ಅವರಿಂದ ಉಪಯೋಗಿಸಲ್ಪಡುವುದು ಬುದ್ಧಿಶೂನ್ಯತೆ ಹೆಚ್ಚಿಸೀತು ಮಾತ್ರ. ಬಡದೇಶಕ್ಕಂತೂ ಅದು ಕರುಣೆಯಿಲ್ಲದ ಐಶ್ವರ್ಯದ ದುರುಪಯೋಗ.

ಮೂರನೇ ಅಖಿಲ ಕರ್ನಾಟಕ ಬ್ರಾಹ್ಮಣ ಸಮ್ಮೇಳನದಲ್ಲಿ ಹೆಂಗಸರಿಗೆ ಮನೆಯಲ್ಲಿ ೩–೪ ಗಂಟೆಕಾಲ ಸಂಪಾದನೆ ಮಾಡುವ ದಾರಿಯ ವೃತ್ತಿಗಳ ಚರ್ಚೆ

ಚೆನ್ನಾಗಿ ನಡೆದಿತ್ತು. ಈ ಸಂಘವು ಮಂತ್ರಷ್ಟೂ ಈ ಭಾಗದ ಜ್ಞಾನ ಸಂಗ್ರಹ ಮಾಡಿ ಒಂದು ಉತ್ತಮ ಕೈಪಿಡಿ ತಯಾರಿಸಿದರಾದೀತು. ಕಾಲ ಹೋದಂತೆ **ಬ್ರಾಹ್ಮಣ ಸ್ತ್ರೀಯರು ಆಫೀಸುಗಳಲ್ಲಿ ಕೆಲಸ ಮಾಡುವುದು ಹೆಚ್ಚು ಹೆಚ್ಚು ಹಾನಿಕರವಾಗದಿರದು.** ಆ ದಾರಿ ಹಿಡಿಯುವುದು ಬ್ರಾಹ್ಮಣ್ಯಕ್ಕೆ ಹಿತಕರವೇ ಅಲ್ಲ. ಕೇವಲ ಲೌಕಿಕ ವಿದ್ಯೆ ಬಹಳ ಕಲಿಯುವುದೂ ಹಿತಕರವೇ ಅಲ್ಲ. ವ್ಯಭಿಚಾರ ಮಾಡಿದ ಹುಡುಗಿ ವಿವಾಹವಾಗಿ ಹೆತ್ತಾಗಲೂ ಹಿಂದಿನ ಪ್ರಿಯನ ಸ್ಪಷ್ಟ ಗುಣಗಳು ಈ ಮಗುವಲ್ಲೂ ಕಂಡು ಬರುವುದನ್ನು ವಿಜ್ಞಾನದ ಶೋಧನೆ ರುಜುಪಡಿಸಿದೆ ; ವರ್ಣಸಂಕರದ ಅತಿ ಕೆಟ್ಟ ಅಪಾಯಕ್ಕೆ ಕಾರಣ (ಗೀತೆ ೧,೪೨).

ಸ್ತ್ರೀಯು ಕಲಿಯುಗದಲ್ಲಿ ವಿವಾಹವಾಗಲೇಬೇಕು (ಮಹಾಭಾರತ, ಶಲ್ಯಪರ್ವ ಅ. ೫೨) ಇಲ್ಲವಾದರೆ ಮುಂದೆ ಮರಣದ ಆಚೆ ಬಹಳ ಕೆಡುಕಿದೆ. **'ಮಗಳಿಗೆ ಧರ್ಮಬೋಧೆ'** ನೋಡಿರಿ. ಅವರ ತರಬೇತಿ ಉತ್ತಮ ಭಾರ್ಯೆ ಗೃಹಿಣಿ ಆಗುವ ದೃಷ್ಟಿಯಿಂದ ಮಾತ್ರ ಇರಲಿ. ಗಂಡಸು ಹೆಂಗಸರ ಸಮಾನ ಭಾವನೆ ಸಮಾಜ ಪೂರ್ಣ ಕೆಡಿಸದಿರದು ; ಅಧಾರ್ಮಿಕ.

ಮಕ್ಕಳನ್ನು ಧರ್ಮದ ದಾರಿಯಲ್ಲಿ ಧಾರಾಳವಾದ ಶಿಸ್ತಿನ ಅಭ್ಯಾಸ ದಿಂದ ಬೆಳೆಸುವ ಹೊಣೆ ತಂದೆ ತಾಯಿಗಳಿಗೆ ಸೇರಿದೆ (ಮನು ೧೧, ೫೩). ಈ ಶಿಸ್ತು ಮುಂದರಿದು ಶಾಲೆಯಲ್ಲಿ ಕಲಿಸುವ ಸ್ವಲ್ಪ ಪಾಠ ಚೆನ್ನಾಗಿ ಕಲಿ ಯಲು, ಅನಂತರ ಉತ್ತಮ ಪ್ರಜೆಯಾಗಲು ಸಹಾಯವಾಗುತ್ತದೆ. ಆದರೆ ಈ ಕಾಲದ ಕಷ್ಟ ಶಾಲೆಗಳಲ್ಲಿ ಚೆನ್ನಾಗಿ ಕಲಿಸುವುದು, ಮನೆಕೆಲಸ ಕೊಡು ವುದು, ಅವನ್ನು ತಿದ್ದುವುದು, ನಡೆಯುವುದಿಲ್ಲ. ಕಲಿಸಲು ಹೆಚ್ಚುಹೆಚ್ಚು ಆಲಸ್ಯದವರು, ಅಸಮರ್ಥರು ಅಲ್ಲಿ ತುಂಬಿ ತಮ್ಮ ಮಟ್ಟಕ್ಕೆ ಮಕ್ಕಳನ್ನು ಎಳೆದು ಹಾಳು ಮಾಡ್ಯಾರು. ಆದರೆ ಮುಂದೆ ಬ್ರಾಹ್ಮಣರಿಗೆ ಆರ್ಥಿಕ ಜೀವನ ಬಹಳ ಕಷ್ಟವಾಗಲಿಕ್ಕಿದೆಯಾದ್ದರಿಂದ ಈ ಕೊರತೆ ತುಂಬಲಿಕ್ಕೆ ತಕ್ಕ ವ್ಯವಸ್ಥೆ ಅತ್ಯಗತ್ಯ. ನಿವೃತ್ತ ಉಪಾಧ್ಯಾಯರಿಂದ, ವಿದ್ಯಾವಂತ ಗೃಹಿಣಿ ಯರಿಂದ, ಇತರ ಕಲಿತ ನಿವೃತ್ತರಿಂದ, ಅವರಿಗೆ ಜಾಸ್ತಿಯಾಗಿ ಪಾಠ ಹೇಳಿ ಸುವ ವ್ಯವಸ್ಥೆ ಬ್ರಾಹ್ಮಣ ಸಮಾಜ ಮಾಡಿಸಬೇಕು, ಏಕೆಂದರೆ ಸಮರ್ಥತೆ, ಶೀಲ, ಶಿಸ್ತು, ಮನಃಪೂರ್ವಕ ಕೆಲಸ ಮಾಡುವ ಯುವಕನಿಗೆ ಖಾಸಗಿ ಕಂಪನಿಗಳು ಖಂಡಿತ ಆಸ್ಪದ ಕೊಟ್ಟಾವು. ಸಮಯ ಹಾಳುಮಾಡದಿರುವ ಅಭ್ಯಾಸ ಅತ್ಯಂತ ಬೆಲೆಯುಳ್ಳದ್ದು. ಆಲಸ್ಯ ಕೇವಲ ತಮೋಗುಣ.

ಬ್ರಾಹ್ಮಣನ ದೇಹಗೆಲ್ಲುವ ಸಾಧನೆಗೆ ನಾಲಗೆಯನ್ನು ಹತೋಟಿಗೆ ತರುವುದು ಒಂದು ಮುಖ್ಯ ಭಾಗ. ಮಾಂಸ ಮದ್ಯ ಅತ್ಯಂತ ಪಾಪ ತರುವ, ಧರ್ಮ ಕೆಡಿಸುವ ತರದವು. ಅವುಗಳ ಬಗ್ಗೆ ಮುಂಚೆ ಬ್ರಾಹ್ಮಣ ಯುವಕರಿಗೆ ತೀರಾ ಅಸಹ್ಯ ಭಾವನೆ ಸರ್ವತ್ರ ಕ್ರಮವಾಗಿತ್ತು. ಅದು ಮುಂದರಿಯಲಿ; ಮತ್ತು ಇತರರ ಎಂಜಲ ನಿಷೇಧ ಬೇಕು. ಆದರೆ ಈಗ ಬ್ರಾಹ್ಮಣರು ತೀರಾ ರಾಜಸಿಕವಾದ ಟೀ, ಕಾಫಿಗೆ ಬಲಿ ಬಿದ್ದಿದ್ದಾರೆ. ಅದು ಆರೋಗ್ಯಕ್ಕೂ ಹಾನಿ ಕರ; ಅನಗತ್ಯವಾದ ಖರ್ಚು. ಅದನ್ನು ಬಿಡಲಾರದವರು ಕೇವಲ ಬೆಳಗ್ಗೆ ಮಾತ್ರ ಸೇವಿಸುವ ಮಟ್ಟಕ್ಕಿಳಿಸಲಿ. ಉಪವಾಸಕ್ಕೆ ತೊಂದರೆ ಕೊಡದಂತೆ ಮುಂಚಿನ ೨–೩ ದಿನಗಳಲ್ಲಿ ಅದನ್ನು ತಡವಾಗಿ ಮಾತ್ರ ಸೇವಿಸಲಿ.

ಈಗ ಹೆಚ್ಚು ಹೆಚ್ಚು ಮಟ್ಟದಲ್ಲಿ ಪಾಶ್ಚಾತ್ಯ ಕ್ರಮದ ಮದ್ದು ನುಂಗುವುದೂ ಸರಿಯಲ್ಲ. ಕೆಲವು ಪ್ರಾಣಿಜನ್ಯ ಮೂಲದವು; ಅಶುದ್ಧ ಮೂಲದವು; ಮತ್ತು ಹೆಚ್ಚು ಬಿಂಕವಾಗುತ್ತ ಬಂದು, ರೋಗ ಗುಣ ಮಾಡಿದರೂ ಅನೇಕ ವೇಳೆ ಮತ್ತೊಂದು ರೋಗಕ್ಕೆ ತಳಹದಿ ಹಾಕಿ ಹೋಗುತ್ತವೆ. ಆಸ್ಪತ್ರೆ ರೋಗಿಗಳಲ್ಲಿ ೭೦ ಶತಾಂಶ ಹೀಗೆ ಹಿಂದಿನ ಮದ್ದಿನ ಪರಿಣಾಮದವರು ಎಂದು ಖ್ಯಾತಪಾಶ್ಚಾತ್ಯವೈದ್ಯರೇ ಒಪ್ಪಿದ್ದುಂಟು. ಆದರೆ ಪ್ರಕೃತಿಚಿಕಿತ್ಸೆಯು–ಮುಖ್ಯವಾಗಿ ಉಪವಾಸದ ಕ್ರಮ–ಅತ್ಯಂತ ಫಲಕಾರಿ. ದೇಹ ಉತ್ತಮ ಮಾಡುತ್ತದೆ. ಕೆಲವುಮಟ್ಟಿಗೆ ಸಾಮಾನ್ಯರೂ ಧೈರ್ಯದಿಂದ ಚಿಕಿತ್ಸೆ ನಡೆಸಿಕೊಳ್ಳಬಹುದು. ಅಲೆಕ್ಸಾಂಡರನು ಈ ದೇಶಕ್ಕೆ ಬಂದಾಗ ಕಾಯಿಲೆ ಬಿದ್ದವರನ್ನು ಪ್ರಥಮತವಾಗಿ ಉಪವಾಸಹಾಕಿ, ಹೆಚ್ಚಿನವುಗಳ ನಿವಾರಣೆನಡೆಸುತ್ತಿದ್ದ ಕ್ರಮವಿದ್ದುದಕ್ಕೆ ದಾಖಲೆ ಇದೆ. Practical Nature Cure by Lakshmana Sarma ಒಂದು ಬಹಳ ಉತ್ತಮ ಪುಸ್ತಕ (ಅವರ ಸಂಸ್ಕೃತದ ಆ ಭಾಗದ ಗ್ರಂಥವೂ ಇದೆ). ಕೆಲವು ಯೋಗಾಸನಗಳೂ ಬಹಳ ಪ್ರಯೋಜನಕಾರಿ. ಸುಲಭ ಖರ್ಚು ಬೇಕಾದ ಬ್ರಾಹ್ಮಣವರ್ಗಕ್ಕೆ ಇವೆಲ್ಲ ಅತ್ಯಂತ ಸಹಾಯಕಗಳು. ಏಕಾದಶಿ (ಅಥವಾ ಪ್ರದೋಷದ) ಉಪವಾಸ ಕ್ರಮ ಆರೋಗ್ಯದಲ್ಲಿರಲಿಕ್ಕೆ ಬಹಳ ಫಲಕಾರಿ.

ಕೆಲವು ಲೌಕಿಕರಿಗೆ ಒಂದು ತೊಂದರೆಯೆಂದರೆ ಧಾರ್ಮಿಕ ಪುಸ್ತಕ ಓದಲು ಹಿಡಿದೊಡನೆ ನಿದ್ರೆ ಬರುತ್ತದೆ. ಧರ್ಮ ಓದಲೇಬೇಕಾದ್ದರಿಂದ ಈ ಕೇವಲ ತಾಮಸಿಕ ನಿದ್ರೆ ಗೆಲ್ಲಬೇಕು. ನಮ್ಮ ಪ್ರಕೃತಿ ಚಿಕಿತ್ಸೆಯ ವೈದ್ಯರ ಅಭಿಪ್ರಾಯ, ನಾವು ಸಾಮಾನ್ಯವಾಗಿ ಬೇಕಾದುದರ ಮೂರು ಪಾಲು ಹೆಚ್ಚು

ಆಹಾರ ತಿನ್ನುತ್ತೇವೆ ಎಂದು! ಆಹಾರ ಅತಿ ಚೆನ್ನಾಗಿ ಅಗಿದು ತಿನ್ನಬೇಕು. ಕುಡಿಯುವುದೂ ನಿಧಾನವಾಡಬೇಕು. ಅದರಿಂದ ತನ್ನಷ್ಟಕ್ಕೆ ಕಡಿಮೆ ಆಹಾರ ಸಾಕಾಗಿ ಹಗಲ ನಿದ್ರೆಯೂ ಕಡಿಮೆಯಾಗುತ್ತದೆ. ಆರೋಗ್ಯ, ಮನೋ ಧಾರ್ಢ್ಯ ಹೆಚ್ಚುತ್ತವೆ.

ಲೌಕಿಕರು ಯಾವ ಮಂತ್ರ ಹೇಳುವಾಗಲೂ ತಮ್ಮ ಲೌಕಿಕ ತಾಪತ್ರಯ ತಲೆಗೆ ಬರುತ್ತಿರುವುದುಂಟು. ಮಂತ್ರ ಅವಸರ ಮಾಡಿ ಕ್ರಮೇಣವಾಗಿ ಬಹಳ ಲೋಪದೋಷಗಳು ಸೇರಿಕೊಳ್ಳುತ್ತವೆ. ಆದ್ದರಿಂದ ಕಲಿತ ಮಂತ್ರಗಳೆಲ್ಲ ಮಕ್ಕೂ ಲಿಖಿತ ಪ್ರತಿ ಇಟ್ಟುಕೊಂಡಿದ್ದು ವರ್ಷಕ್ಕೊಮ್ಮೆ ಅವುಗಳ ಪರಿಶೀಲನೆ ಮಾಡಬೇಕು.

ಊರಲ್ಲಿ ಹೊಸ ಸಾಂಕ್ರಾಮಿಕರೋಗದ ಹಾವಳಿಯುಂಟಾದಾಗ ಅದರ ವಿಚಾರ ತಿಳಕೊಂಡು, ಅದರ ಹಾನಿ ತಡೆಗಟ್ಟುವ ಅಥವಾ ನಾವಾದರೂ ತಪ್ಪಿಸಿಕೊಳ್ಳುವ ಕ್ರಮ ಅರಿತು ಪಾಲಿಸುವಂತೆ, ನಮ್ಮ ಧರ್ಮಕ್ಕೆ ಈಗ ಉಂಟಾದ ಹೊಸ ಕ್ರಮಗಳ ಹಾನಿ ಬ್ರಾಹ್ಮಣ ಸಮಾಜದ, ಅದರ ಧರ್ಮ ಕಾಪಾಡುವ ಹೊಣೆಯಿರುವ ಮಠಗಳ ಲಕ್ಷ್ಯವೆಂದೇ ಪಡೆಯಬೇಕಿತ್ತು. ಪ್ರಜಾ ರಾಜ್ಯ ಕ್ರಮದಲ್ಲಿ ಧರ್ಮಬೇಡವಾದ ಪ್ರಜೆಗಳು ಒಂದುತರದ ರಾಜ್ಯ ಕಟ್ಟಿದರೆ ಧರ್ಮ ಬೇಕಾದವರು ಆ ತಪ್ಪಿನ ಅಪಾರ ಹಾನಿ, ಅಪಾಯ, ಪ್ರಚಾರಮಾಡಿ ಧರ್ಮ ಬಾಳಿಸುವ ಸರ್ಕಾರ ಕ್ರಮ ತರಲಿಕ್ಕೆ ಯತ್ನಿಸಬೇಕು. ಈಗಿನ ಮಂತ್ರಿ ಗಳು "ರಾಜಾ ಪ್ರತ್ಯಕ್ಷ ದೇವತಾ" ಕ್ರಮದವರೇ ಅಲ್ಲ. ಅವರು ಕೇವಲ ದೇಶ ದಲ್ಲಿರುವ ರಾಜಕೀಯಪಕ್ಷಗಳ ತಾತ್ಕಾಲಿಕ ನಿರ್ಮಾಣ, ಕ್ರಿಶ್ಚನರೂ ಮುಸಲ್ಮಾ ನರೂ ಒಗ್ಗಟ್ಟಿಂದ ತಮ್ಮ ಧರ್ಮ ಕಾಪಾಡಿಕೊಳ್ಳುತ್ತಿದ್ದಾರೆ. ಸನಾತನಿಗಳು ಮಾತ್ರ ತಟಸ್ಥ ಅಪಾಯದ ಕ್ರಮದಿಂದ ನಾಶಕ್ಕೆ ಬಲಿಯಾಗುತ್ತ ಬಂದಿದ್ದೇವೆ. ದಿನದಿನಕ್ಕೂ ಬ್ರಾಹ್ಮಣ್ಯ ನಾಶವಾಗುತ್ತಿದೆ. ನಮ್ಮ ಹಿಂದಿನವರು ಧರ್ಮ ಬಿಡಲಾರದೆ ಲಕ್ಷಗಟ್ಟಲೆಯಲ್ಲಿ ಮುಸಲ್ಮಾನರಿಗೆ ಜೀವ ತೆತ್ತರು! ಕೆಲವರಿಗೆ ಸನಾತನಧರ್ಮ ನಾಶವಾಗದು ಎಂಬ ಸಮಾಧಾನವಿದೆ. ಆದರೆ ಅದು ದೇಶದ ಎಲ್ಲೋ ಮೂಲೆಯಲ್ಲಿ ಮಾತ್ರ ಬಾಳಿ, ನಮಗೆ ನಮ್ಮ ಮಕ್ಕಳಿಗೆ, ಇಲ್ಲಿ ಇರದೆ ನಾವು ಅಧೋಗತಿಗೆ ಇಳಿದರೆ ಏನು ಪ್ರಯೋಜನ? ನಮ್ಮನ್ನು ಎದುರಿ ಸುವ ಧರ್ಮದ ಅಪಾಯದ ಕುರಿತು ಮೂರು ಗ್ರಂಥಗಳನ್ನು ಬರೆದೆ. ಅವು ಬಹುಮಟ್ಟಿಗೆ ಯಾರಿಗೂ ಬೇಡ! ಒಗ್ಗಟ್ಟಲ್ಲಿ ಬಲವಿದೆ. ಆದ್ದರಿಂದ ಬ್ರಾಹ್ಮಣ ಸಂಘಗಳಿಗೆ ಬ್ರಾಹ್ಮಣರು ಬೆಂಬಲ ಕೊಡಬೇಕು. ಆದರೆ ಆ ಭಾಗ

ದಲ್ಲೂ ತೀರಾ ಅಸಡ್ಡೆ ! ಪುರೋಹಿತರ ಬೆಂಬಲ ತೀರಾ ಕಡಿಮೆ. ದೇವರು ಬ್ರಾಹ್ಮಣ ಪ್ರಿಯ ಎಂದು ಶಾಸ್ತ್ರ ಸಾರುತ್ತದೆ. ಏಕೆಂದರೆ ಅವರು ಸನಾತನಿಗಳಲ್ಲಿ ಅತಿ ಹೆಚ್ಚಾಗಿ ಆ ಧರ್ಮ ಪಾಲಿಸುವವರು, ಅದರ ಪ್ರಚಾರ ಮಾಡುವವರು.

ಪ್ರತಿ ಜೀವಾತ್ಮನೂ ಸಾಧಿಸಿದ ಧರ್ಮದ ಮಟ್ಟಕ್ಕಿಂತ ಮತ್ತೂ ಹತ್ತು ಹೆಜ್ಜೆ ದೇವರಕಡೆಗೆ ಮುಂದೆ ಹೋಗಲಿಕ್ಕೆ ತಕ್ಕ ಜನ್ಮಗಳನ್ನು ನಮಗೆ ದೇವರು ಕೊಡುವಂತಾಗಬೇಕು. ಏಳನೇ ಕ್ಲಾಸಿನ ಬಾಲಕ ಕೇವಲ ಆ ಕ್ಲಾಸಿನ ಪಾಠ ಕಲಿಯುವುದನ್ನು ಅಭಿಮಾನದಿಂದ ಮಾಡಬೇಕಾದಂತೆ, ದೇವರು ಪ್ರತಿಯೊಬ್ಬನಿಗೂ ಅವನ ಜನ್ಮದಿಂದ ಬಂದ ಧರ್ಮದಲ್ಲಿ ವಿಶೇಷ ಅಭಿಮಾನ, ಅದೇ ಅತ್ಯುತ್ತಮ ಧರ್ಮ ಎಂಬ ಶ್ರದ್ಧೆ ಕೊಟ್ಟಿದ್ದಾನೆ; ಆದರೆ ನಮ್ಮ ದೇಶದ ನಿರಂತರ ಜಾತಿನಾಶದ ಕರೆಯಿಂದ ಹಿಂದೂ ಯುವಕರಲ್ಲಿ ಮಾತ್ರ ಆ ಅಭಿಮಾನ ಉಂಟಾಗಲಿಕ್ಕೇ ಸರ್ಕಾರ ಬಿಡಲಿಲ್ಲ. ಆದರೆ ಬ್ರಾಹ್ಮಣರು ಆ ಅಭಿಮಾನ ತಮ್ಮಲ್ಲಿ, ತಮ್ಮ ಮಕ್ಕಳಲ್ಲಿ ಆಮೇಲೆ ದೇವಸ್ಥಾನಗಳ ಮೂಲಕ ಇತರ ವರ್ಣದವರಲ್ಲಿ ಪುನಃ ತುಂಬುವಂತೆ ಮಾಡಿ ತಮ್ಮ ಜನ್ಮ ಸಾರ್ಥಕ ಮಾಡಿಕೊಳ್ಳಲಿ.

ದೇಶದಲ್ಲಿ ಇನ್ನು ವರ್ಣಕ್ರಮ ಬೇಡವಾದ "ಹಿಂದೂ ಧರ್ಮದವರು", ವರ್ಣಧರ್ಮ ಅಗತ್ಯವೆಂದು ಚೆನ್ನಾಗಿ ಪಾಲಿಸುವ "ಸನಾತನ ಧರ್ಮದವರು" ಎಂಬ ಎರಡು ವರ್ಗಗಳಾಗಲಿ, ಎರಡನೇ ವರ್ಗ ತೀರಾ ಚಿಕ್ಕದಾಗಿ ಅದರ ಬ್ರಾಹ್ಮಣರಾದರೂ ದಂಡ್ಗೇ ದೇವರಲ್ಲ ಎಂಬ ಧ್ಯೇಯದಿಂದ ಬಾಳಲಿ. ಅದು ದೇವರು ಪ್ರೀತಿಸಿ ಬೆಂಬಲ ಕೊಡುವ ವರ್ಗವಾಗದಿರದು. ಬ್ರಾಹ್ಮಣ್ಯಕ್ಕೆ ಜಯವಾಗಲಿ !

# ಸಾಧಕ ಜೀವನ

ಶ್ರೀ ವಾದಿರಾಜ ಆಚಾರ್ಯರ ಪ್ರಾರ್ಥನಾ ದಶಕ ಸ್ತೋತ್ರ

ಅಯೋಗ್ಯವಿಷಯೇ ಸ್ವಾಮಿನ್ ಸರ್ವಥಾ ನ ಮನೋ ಭವೇತ್ ।
ಚಾಂಚಲ್ಯಂ ಮೂಲತಃ ಛಿಂಧಿ ದುರಾಶಾಂ ಹರದೂರತಃ ॥ ೧ ॥

ದುರ್ಬುದ್ಧಿಂ ಚ ನ ಮೇ ದೇಹಿ ದುಃಶಾಸ್ತ್ರಾವರ್ತನೇ ರತಿಂ ।
ಹಾಪಯಸ್ವ ಚ ದುರ್ಮಾನಂ ದುರ್ಗುಣಂ ಮೋಚಯಪ್ರಭೋ ॥ ೨ ॥

ದುಸ್ಸಂಗಂ ದುಷ್ಕ್ರಿಯಹಾಂ ಛಿಂಧಿ ಹರ ಲೋಕಾಟನಾತ್ಪದೌ ।
ನ ನಿಯೋಜಯ ಚಕ್ಷೂಂಷಿ ಪರದಾರಾದಿ ದರ್ಶನೇ ॥ ೩ ॥

ದುಷ್ಪ್ರತಿಗ್ರಹದುಸ್ಸ್ಪರ್ಶೇ ಕರೌವಹಾಚೋದಯಂ ಧ್ರುವಂ ।
ಅಪಕರ್ಷತಂ ಜಿಹ್ವಾಂ ಮೇ ಲೋಕವಾರ್ತಾದುರನ್ನತಃ ।
ದುರ್ವಾರ್ತಾದುಷ್ಟಶಬ್ದೇಭ್ಯೋ ನಿವರ್ತಯ ಹರೇ ಶ್ರುತೀ ॥ ೪ ॥
ಭವದಿಚ್ಛಾನುಗಂ ಚೇತೋ ಯೋಗ್ಯಸದ್ವಿಷಯಂ ಭವೇತ್ ।
ಯದೃಚ್ಛಾಲಾಭ ಸಂತೃಪ್ತಂ ನಿಶ್ಚಾಂಚಲ್ಯಂ ಭವೇತ್ತ್ವಯೀ ॥ ೫ ॥

೧. ಭಗವಾನ್! ನನ್ನ ಮನಸ್ಸು ಅಯೋಗ್ಯ ವಿಷಯಗಳಿಗೆ ಎಂದೂ ಹೋಗದಿರಲಿ. ಅದರ ಚಂಚಲತೆಯು ಬೇರನ್ನೇ ಕತ್ತರಿಸು. ದುರಾಶೆ ದೂರ ಮಾಡು.

೨. ನನಗೆ ಕೆಟ್ಟ ಭಾವನೆ, ಕೆಟ್ಟ ಗ್ರಂಥ ಓದುವ ಆಸೆ ಕೊಡದಿರು. ದೇವರೇ! ನನ್ನ ದುರಭಿಮಾನ, ದುರ್ಗುಣ ತೆಗೆ.

೩. ದುಷ್ಟಸಂಗ ದುಷ್ಟಕ್ರಿಯೆ ಛಿದ್ರ ಮಾಡು. ಕಾಲುಗಳನ್ನು ವ್ಯರ್ಥ ತಿರುಗಾಟದಿಂದ ತಡೆದು ಹಾಕು. ಕಣ್ಣು ಪರಪತ್ನಿ ಮುಂತಾದವಕ್ಕೆ ತಿರುಗ ದಿರಲಿ.

೪. ಕೈಗಳು ಕೆಟ್ಟವರಿಂದ ದಾನ ಹಿಡಿಯಲಿಕ್ಕೆ, ಮುಟ್ಟಕೂಡದ್ದು ಮುಟ್ಟಲಿಕ್ಕೆ, ಕಾತುರತೆ ಹೊಂದದಾಗಲಿ. ನಾಲಿಗೆಯು ಗೊಡ್ಡು ಹರಟೆ ದುರಾನ್ನಗಳಿಂದ ದೂರಸೆಳೆಯಲಿ. ಹರಿಯೇ ಕಿವಿಗಳು ಚಾಡಿಯಿಂದ ವಿಮುಖ ವಾಗಲಿ.

೫. ನನ್ನ ಮನಸ್ಸು ನಿನ್ನ ಇಷ್ಟದ ಅನುವರ್ತಿಯಾಗಿ ಯೋಗ್ಯ ಉತ್ತಮ ವಿಷಯಗಳಲ್ಲಿ ಮಾತ್ರ ನಿಲ್ಲಲಿ. ತಾನಾಗಿ ಲಭಿಸಿದ್ದರಲ್ಲಿ ತೃಪ್ತಿಪಡುತ್ತ ಚಂಚಲತೆ ಇಲ್ಲದ್ದಾಗಲಿ.

## ವಿಷ್ಣು ಸ್ತುತಿ

ವಿಷ್ಣು ಧರ್ಮೋತ್ತರ ಪುರಾಣ ೧, ಅ. ೫೮.

ಅಹಿಂಸಾ ಸತ್ಯವಚನಂ ದಯಾ ಭೂತೇಷ್ವನುಗ್ರಹಃ ।
ಯಸ್ಯೈತಾನಿ ಸದಾರಾಮ ತಸ್ಯ ತುಷ್ಯತಿ ಕೇಶವಃ ॥ ೧ ॥

ಮಾತಾಪಿತೃಗುರೂಣಾಂ ಚ ಯಸ್ಯಮ್ಯಗಿಹ ವರ್ತತೇ ।
ವರ್ಜಕೋ ಮಧುಮಾಂಸಸ್ಯ ತಸ್ಯ ತುಷ್ಯತಿ ಕೇಶವಃ ॥ ೨ ॥

ಪರಪೀಡಾಕರಂ ಕರ್ಮ ಯಸ್ಯ ನಾಸ್ತಿ ಮಹಾತ್ಮನಃ ।
ಸಂವಿಭಾಗೀ ಚ ಭೂತಾನಾಂ ತಸ್ಯ ತುಷ್ಯತಿ ಕೇಶವಃ ॥ ೩ ॥

ಶೃಣುತೇ ಸರ್ವಧರ್ಮಾಶ್ಚ ಸರ್ವಾಂದೇವಾನ್ನಮಸ್ಯತಿ ।
ಅನಸೂಯುರ್ಜಿತಕ್ರೋಧಸ್ತಸ್ಯ ತುಷ್ಯತಿ ಕೇಶವಃ ॥ ೪ ॥

ಮಿತ್ರ ಸ್ವಾಮಿ ಗುರು ದ್ರೋಹೋ ಯಸ್ಯ ನಾಸ್ತಿ ಮಹಾತ್ಮನಃ ।
ಪರದಾರಧನೇಚ್ಛಾ ನ ತಸ್ಯ ತುಷ್ಯತಿ ಕೇಶವಃ ॥ ೫ ॥

ಕೃಷ್ಣೇ ಪಶ್ಯತಿ ಯಸ್ಸರ್ವಂ ಕೃಷ್ಣಂ ಸರ್ವಸ್ಯ ಪಶ್ಯತಿ ।
ಮಹಾತ್ಮಾ ಬುದ್ಧಿಸಂಪನ್ನ ತಸ್ಯ ತುಷ್ಯತಿ ಕೇಶವಃ ॥ ೬ ॥

೧. ಯಾರಲ್ಲಿ ಅಹಿಂಸೆ, ಸತ್ಯವಚನ, ದಯೆ, ಎಲ್ಲ ಜೀವಿಗಳ ಬಗ್ಗೆ ಅನುರಾಗ ಇವೆಯೋ ಅವನನ್ನು ಶ್ರೀ ವಿಷ್ಣುವು ಮೆಚ್ಚುತ್ತಾನೆ.

೨. ಯಾರು ತಂದೆ ತಾಯಿ ಆಚಾರ್ಯರ ಬಗ್ಗೆ ಚೆನ್ನಾಗಿ ವರ್ತಿಸುತ್ತಾನೆಯೋ ಮದ್ಯಮಾಂಸ ತ್ಯಜಿಸುತ್ತಾನೋ ಅವನನ್ನು ಶ್ರೀವಿಷ್ಣು ಮೆಚ್ಚುತ್ತಾನೆ.

೩. ಯಾವ ಮಹಾತ್ಮನು ಪರಪೀಡನೆಯ ಒಂದು ಕ್ರಿಯೆ ಕೂಡ ಮಾಡನೋ ಸರ್ವ ಪ್ರಾಣಿಗಳಲ್ಲಿ ಬಂಧುತ್ವ ಭಾವಿಸುತ್ತಾನೋ ಅವನನ್ನು ಶ್ರೀವಿಷ್ಣು ಮೆಚ್ಚುತ್ತಾನೆ.

೪. ಯಾರು ಎಲ್ಲಾ ಬೋಧನೆಗಳನ್ನೂ ಕೇಳುತ್ತಾನೋ ಎಲ್ಲಾ ದೇವರುಗಳಿಗೂ ಅಸಹನೆ ಇಲ್ಲದೆ ನಮಸ್ಕರಿಸುತ್ತಾನೋ ಮತ್ತು ಕ್ರೋಧ ಗೆದ್ದಿರುವನೋ ಅವನನ್ನು ಶ್ರೀವಿಷ್ಣು ಮೆಚ್ಚುತ್ತಾನೆ.

೫. ಯಾವ ಮಹಾತ್ಮನಲ್ಲಿ ಮಿತ್ರ ಯಜಮಾನ ಗುರುಗಳ ಬಗ್ಗೆ ದ್ರೋಹವಿಲ್ಲವೋ ಪರಪತ್ನಿ ಪರ ಐಶ್ವರ್ಯದ ಬಯಕೆ ಇಲ್ಲವೋ ಅವನನ್ನು ಶ್ರೀವಿಷ್ಣು ಮೆಚ್ಚುತ್ತಾನೆ.

೬. ಯಾವ ಮಹಾತ್ಮನು ದಿವ್ಯಜ್ಞಾನ ಪಡೆದಿದ್ದು ಎಲ್ಲವನ್ನೂ ಶ್ರೀ ವಿಷ್ಣುವೆಂದು ಕಾಣುತ್ತಾನೋ ಶ್ರೀವಿಷ್ಣುವನ್ನು ಎಲ್ಲದರಲ್ಲೂ ಕಾಣುತ್ತಾನೋ ಅವನನ್ನು ಶ್ರೀವಿಷ್ಣು ಮೆಚ್ಚುತ್ತಾನೆ.

# ಬ್ರಾಹ್ಮಣ್ಯ ಹಾಗೂ ನೆಹರೂ ಮನೆತನ

ಧಾರ್ಮಿಕ ಜೀವನದ ನೆಲೆಗಟ್ಟಿರುವುದು ವ್ಯಕ್ತಿಯು ಇಹಜೀವನದ ನೆಮ್ಮದಿ ಹಾಗೂ ಆತ್ಮಕ್ಕೆ ಪರಲೋಕದಲ್ಲಿ ಅಥವಾ ಪುನರ್ಜನ್ಮದಲ್ಲಿ ಉತ್ತಮವಾದ ಜೀವನಾವಕಾಶದ ಪ್ರಾಪ್ತಿಗಾಗಿ ಸಿದ್ಧತೆ ನಡೆಸುವುದಕ್ಕೆ ಮಾತ್ರ. ಇಹ ಜೀವನದಲ್ಲಿ ಆತ್ಮವಂಚನೆಯ ಮೂಲಕ ದೇಹಭೋಗ ಹಾಗೂ ಪರಲೋಕದಲ್ಲಿ ಅಥವಾ ಪುನರ್ಜನ್ಮದಲ್ಲಿ ಅತ್ಯಂತ ಹೀನಾಯ ತರದ ಜೀವನ ನಿರ್ವಹಣೆಗೆ ಬುನಾದಿ ಹಾಕಲು ಧರ್ಮದವೇಷಧಾರಿಯಾಗಬೇಕೆಂಬುದಂತೂ ಖಂಡಿತ ಸರಿಯಾದುದಲ್ಲ. "ಅನಾಯಾಸೇನ ಮರಣಂ; ವಿನಾದೈನ್ಯೇನಜೀವನಂ" ಎಂಬುದು ವ್ಯಕ್ತಿಯು ಇಹ ಜೀವನದ ಸಾರ್ಥಕತೆಯನ್ನು ಕುರಿತಂತೆ ಭಾರತೀಯ ದರ್ಶನ ಶಾಸ್ತ್ರವು ಪ್ರತಿಪಾದಿಸುವ ಮಾರ್ಗದ ಸಾರಸರ್ವಸ್ವ. "ಶರಣರ ಗುಣವನ್ನು ಮರಣದಲ್ಲಿ ನೋಡು" ಎಂಬ ನಾಣ್ಣುಡಿಯೂ ಇದನ್ನೇ ಸಂಪೂರ್ಣವಾಗಿ ಧ್ವನಿಸುತ್ತದೆ. ಅಂದರೆ ವ್ಯಕ್ತಿಯು ಹೊಂದುವ ಮರಣದ ರೀತಿಯಿಂದ ಅವನು/ಅವಳು ಎಷ್ಟರ ಮಟ್ಟಿಗೆ ಧರ್ಮಬದ್ಧವಾಗಿ ಜೀವಿಸಿದ್ದರೆಂಬುದನ್ನು ತಿಳಿಯಬಹುದು. ಇದಕ್ಕೆ ಒಂದು ಸೂಕ್ತ ಉದಾಹರಣೆಯಾಗಿ ನಾವು ಪೂಜ್ಯ ಕಾರಂತರು ಈ ಕೃತಿಯ ಮೊದಲ ಅಧ್ಯಾಯದಲ್ಲಿ ಸೂಚಿಸಿರುವ ದಿ॥ ನೆಹರೂ ಅವರ ಕುಟುಂಬವನ್ನೇ ಪರಿಶೀಲಿಸಬಹುದು.

ಜವಹರಲಾಲ್ ನೆಹರೂರವರ ಕುಟುಂಬದ ಪೂರ್ವಿಕರು ಮೊದಲಿಗೆ ತುಂಬಾ ನಿಷ್ಠಾವಂತ ಬ್ರಾಹ್ಮಣ್ಯವನ್ನು ಪಾಲಿಸಿದವರು. ಪಾಶ್ಚಿಮಾತ್ಯ ಸಂಸ್ಕೃತಿಯ ಕಾಲಕ್ಕೆ ಧರ್ಮಬದ್ಧ ಜೀವನಕ್ರಮವೆಂಬುದು ಅರ್ಥಹೀನವೆನಿಸಿತು. ಪೂರ್ವಾರ್ಜಿತ ಸುಕೃತದಿಂದಾಗಿ ತಮಗೆ ದೊರೆತಿದ್ದ ಲೌಕಿಕ ಸಂಪತ್ತು ಹಾಗೂ ಅಸಾಧಾರಣ ಮೇಧಾಶಕ್ತಿಯನ್ನು ನೆಹರೂ ಅವರು ಕೇವಲ ಐಹಿಕ ಸುಖ ಸಂಪತ್ತಿನ ವೃದ್ಧಿಗಾಗಿ ಸಂಪೂರ್ಣ ವಿನಿಯೋಗಿಸಿ, ತಮ್ಮ ನಂತರದ ತಮ್ಮ ರಾಜಕೀಯ ಬೆಂಬಲಿಗರ ಪಡೆಗೂ ಇದೇ ಹಾದಿಯಲ್ಲಿ ತರಬೇತಿ ನೀಡಿ, ಜೀವನರಂಗದಿಂದ ನಿರ್ಗಮಿಸಿದರು.

ಅವರ ನಂತರ ಭಾರತದ ಪ್ರಧಾನಿಯಾದ ಲಾಲ್ ಬಹಾದ್ದೂರ್‌ಶಾಸ್ತ್ರಿಗಳವರು ನೆಹರೂ ಅವರ ಜೀವನ ಧೋರಣೆಗೆ ಸಂಪೂರ್ಣ ವಿರುದ್ಧವಾದ

ದೃಷ್ಟಿಕೋನ ಹೊಂದಿದ್ದ ಸನಾತನಿಗಳು. ಆದರೆ ಅಂಥ ಸಾತ್ವಿಕ ಗುಣ ಸಂಪನ್ನನನ್ನು ಉಳಿಸಿಕೊಳ್ಳುವ ಪುಣ್ಯವು ಈ ನಾಡಿನ ಜನಸ್ತೋಮಕ್ಕಿರಲಿಲ್ಲ. ಜಗತ್ತಿನಲ್ಲಿ ತಾಂಡವವಾಡತೊಡಗಿದ ನಾಸ್ತಿಕ ನಾಯಕರ ಕ್ರೌರ್ಯದ ಕೈಗಳಲ್ಲಿ ಸಿಕ್ಕಿಬಿದ್ದ ಲಾಲ್‌ಬಹಾದೂರರು ರಾಷ್ಟ್ರನಾಯಕರಾದ ಅತ್ಯಲ್ಪ ಕಾಲದಲ್ಲೇ ವಿಧಿವಶರಾದರು. ಇವರ ನಂತರ ರಾಷ್ಟ್ರದ ಪ್ರಧಾನಿಯಾದ ಇಂದಿರಾಗಾಂಧಿಯವರು ಹೊಂದಿದ್ದ ಅಲ್ಪಸ್ವಲ್ಪ ಸಂಸ್ಕಾರ ಬಲದಿಂದ, ಲೌಕಿಕ ಸ್ತರದಲ್ಲಿ ಇದ್ದುದರಲ್ಲಿ ಸ್ವಲ್ಪ ಮಟ್ಟಿಗೆ ಉತ್ತಮವೆನಿಸುವ ನಾಯಕತ್ವವನ್ನೇ ನಾವು ಪಡೆದಂತಾದರೂ ರಾಷ್ಟ್ರಮಟ್ಟದಲ್ಲಿ ಅನೈತಿಕ ಜೀವನ ಕ್ರಮವು ಉಲ್ಬಣಾವಸ್ಥೆಗೇರಿತು. ಈಕೆಯೂ ನಾಸ್ತಿಕರ ಕೈಗೊಂಬೆಯಾಗುವುದರೊಂದಿಗೆ ಸನಾತನ ಧರ್ಮದ ಜೀವನ ಕ್ರಮದ ಬಗ್ಗೆ ಸಾಕಷ್ಟು ಆಕ್ಷೇಪಕಾರಿಯಾದ ನಿಲುವು ತಾಳಿದ ಕಾರಣದಿಂದಾಗಿ ತನ್ನ ಅಂಗರಕ್ಷಕ ಪಡೆಯವರಿಂದಲೇ ಅತ್ಯಂತ ದಾರುಣ ರೀತಿಯಲ್ಲಿ ಕೊಲೆಗೈಯ್ಯಲ್ಪಟ್ಟರು.

ರಾಷ್ಟ್ರಾಡಳಿತದ ಉತ್ತರಾಧಿಕಾರಿಯ ಪಟ್ಟವು ಈಕೆಯ ಮಗ ರಾಜೀವ ಗಾಂಧಿಯ ಪಾಲಿಗೆ ಬಂತು. ತನ್ನ ಅಲ್ಪಕಾಲಾವಧಿಯ ಆಡಳಿತದಲ್ಲಿ ಹಲವಾರು ಏರಿಳಿತಗಳನ್ನು ಕಂಡ ರಾಜೀವಗಾಂಧಿಯು ಧಾರ್ಮಿಕ ಜೀವನ ಪರಂಪರೆಯ ಬಗ್ಗೆ ಹೊಂದಿದ್ದ ನಿಜವಾದ ಭಾವನೆಯು ಅತ್ಯಂತ ನಿಗೂಢವೂ ಸಂದೇಹಾಸ್ಪದವೂ ಆದುದಾಗಿತ್ತು. ಹಲವಾರು ಮಹತ್ವಾಕಾಂಕ್ಷೆಗಳನ್ನು ಹೊಂದಿದ್ದ ಈತನು ಹುಟ್ಟಿ ಬೆಳೆದು ಬಂದ ಪರಿಸರವು ನಮ್ಮ ಸನಾತನ ಧಾರ್ಮಿಕ ಪರಂಪರೆಗೆ ಸಂಪೂರ್ಣ ವಿರುದ್ಧವಾದುದು ! ಆದರೂ ಈತನನ್ನು ರಾಷ್ಟ್ರನಾಯಕನೆಂದು ಒಪ್ಪಿಕೊಳ್ಳುವಂಥ ಔದಾರ್ಯ ಅಥವಾ ದೌರ್ಭಾಗ್ಯ ಈ ನಾಡಿನ ಪ್ರಜೆಗಳಲ್ಲಿತ್ತು.

ಸಮಯ ಸನ್ನಿವೇಶಗಳಿಗೆ ತಕ್ಕಂತೆ ತಕ್ಷಣವೇ ತಾತ್ಕಾಲಿಕವಾಗಿ ಪರಿವರ್ತನೆಗೊಂಡಂತೆ ವರ್ತಿಸುವುದು ಈತನು ಸಾಧಿಸಿಕೊಂಡಿದ್ದ ಚಾತುರ್ಯದ ಗುರುತು. ಸಾವಿರಾರು ಜನ ಬ್ರಾಹ್ಮಣರನ್ನು ದೆಹಲಿಗೆ ಕರೆಸಿ, ಹವನ ಹೋಮಾದಿ ಧಾರ್ಮಿಕ ವಿಧಿ ವಿಧಾನಗಳನ್ನು ನಡೆಸಿ, ತಾನೊಬ್ಬ ಧರ್ಮಪರಾಯಣನೆಂಬ ವರ್ತನೆಯನ್ನೂ ಈತ ಪ್ರಕಟಿಸಿದ್ದುಂಟು. ನಾಡಿನ ಜನತೆಯ ಅಂತರ್ಯದಲ್ಲಿ ಸ್ವಾಭಾವಿಕವಾಗಿಯೇ ಬೇರುಬಿಟ್ಟಿರುವ ಧಾರ್ಮಿಕ ಭಾವನೆಯನ್ನು ಶೋಷಿಸುವುದರಲ್ಲಿ ಈತನು ಮಹಾಚಾಣಾಕ್ಷನಾಗಿದ್ದನು. ಆದರೆ ಇಂಥ ಚಾಣಾಕ್ಷತನವು ಧರ್ಮದಎದುರಲ್ಲಿ ಎಷ್ಟು ನಿಷ್ಪ್ರಯೋಜಕವೆಂಬುದನ್ನು

ತಿಳಿಯಬೇಕಾದರೆ, ಈತನು ಹೊಂದಿದ ಅತ್ಯಂತ ಹೀನವೂ, ದಾರುಣವೂ ಆದ ದುರ್ಮರಣವನ್ನು ಗಮನಿಸಬೇಕು.

ಅಂತಸ್ಸಾಕ್ಷಿಯಾಗಿ ಧರ್ಮವನ್ನು ಪಾಲಿಸಿದವನನ್ನು ಧರ್ಮವು ಖಂಡಿತವಾಗಿಯೂ ಪಾಲಿಸುತ್ತದೆ. ಕೇವಲ ವೇಷಧಾರಿಯಂತೆ, ತೋರಿಕೆಗೆ ಧರ್ಮಾವಲಂಬಿಯಂತೆ ನಟಿಸುವವರು ಅಜ್ಞಾನಿಗಳಾದ ಸಾಮಾನ್ಯ ಜನರನ್ನು ನಂಬಿಸಿ ವಂಚಿಸಬಲ್ಲರೇ ವಿನಾ; ಧರ್ಮವನ್ನು ವಂಚಿಸುವುದು ಅಸಂಭವ. ಪ್ರತಿಯೊಬ್ಬರೂ ತಾವು ಪಡೆದುಬಂದುದನ್ನು ಅನುಭವಿಸಿಯೇ ತೀರಬೇಕೆಂಬುದಕ್ಕೆ ಇದಕ್ಕಿಂತ ಸ್ಪಷ್ಟವಾದ ಉದಾಹರಣೆ ಇನ್ನೇನು ಬೇಕು?

ನೆಹರೂ ಅವರ ಹಿಂಬಾಲಕರಪಡೆಯಲ್ಲಿ ಅಳಿದುಳಿದ ಸ್ವಾರ್ಥಲಾಲಸೆಯ ರಾಜಕಾರಣಿಗಳು ಹಾಗೂಅವರ ಬೆಂಬಲಿಗರಪಡೆ ಈಗ ತಮ್ಮ ಆಶೋತ್ತರಗಳ ಈಡೇರಿಕೆಗಾಗಿ ರಾಜೀವಗಾಂಧಿಯ ಉತ್ತರಾಧಿಕಾರಿಗಳನ್ನು ಅನುಚಿತವಾದ ರೀತಿಯಲ್ಲಿ ರಾಷ್ಟ್ರದ ಅಧಿಕಾರದ ಗದ್ದುಗೆಯ ಮೇಲೆ ಕೂರಿಸಲು ಸತತವಾಗಿ ಪ್ರಯತ್ನ ನಡೆಸಿದ್ದಾರೆ. ಇದರ ಫಲವೇನು ಎಂಬುದನ್ನು ಕಾಲವೇ ನಿರ್ಧರಿಸಬೇಕು. ಬ್ರಾಹ್ಮಣ್ಯವನ್ನು ತಿರಸ್ಕರಿಸಿದ ನೆಹರೂವಂಶದ ಜೀವನಧೋರಣೆಯೇ ಈ ರಾಷ್ಟ್ರದ ಆದರ್ಶವಾಗಬೇಕೇ? ಎಂಬುದನ್ನು ವಿವೇಕಿಗಳು ಆಲೋಚಿಸಬೇಕು.

—ಸುಧಾರ್ಥಿ, ಹಾಸನ

DEPARTMENT OF PUBLIC LIBRARIES
COPY RIGHT
STATE CENTRAL LIBRARY

# ನಮ್ಮ ಬ್ರಾಹ್ಮಣ್ಯ

ಮಾನವ ಜನಾಂಗಕ್ಕೆ ಜ್ಞಾನದೀವಿಗೆಯನ್ನು ಬೆಳಗಿಸಿ ಮಹೋನ್ನತವಾದ ಮಾರ್ಗದರ್ಶನ ಮಾಡಿದ ಮಹನೀಯರು ಶ್ರೀ ಶಂಕರಭಗವತ್ಪಾದರು. ಅವರ ಶಿಷ್ಯ ಪರಂಪರೆಯಲ್ಲಿ ಇತ್ತೀಚಿನ ದಿನಗಳಲ್ಲೂ ಮಹಾತಪಸ್ವಿಗಳು ತ್ರಿಕಾಲಜ್ಞಾನಿಗಳು ಎಂದು ಚಿರಪರಿಚಿತರಾಗಿದ್ದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ಬ್ರಾಹ್ಮಣರ ನಿತ್ಯಕರ್ಮವಾದ ಸಂಧ್ಯಾವಂದನೆಯನ್ನು ಕುರಿತು,

ವಿಪ್ರೋ ವೃಕ್ಷಃ ತಸ್ಯಮೂಲಂ ಹಿ ಸಂಧ್ಯಾ । ವೇದಾಃ ಶಾಖಾಃ ಸರ್ವಕರ್ಮಾಣಿ ಪತ್ರಂ ।
ತಸ್ಮಾನ್ಮೂಲಂ ಸರ್ವಯತ್ನೇನ ರಕ್ಷೇತ್ । ಮೂಲೇನಷ್ಟೇನೈವಶಾಖಾ ನ ಪತ್ರಂ ॥

ಎಂದು ಸೂಚಿಸಿದ್ದಾರೆ. ಅಂದರೆ ; "ಬ್ರಾಹ್ಮಣನೇ ವೃಕ್ಷವು. ಸಂಧ್ಯಾವಂದನೆಯೇ ಅದರ ಬೇರು. ವೇದಗಳೇ ಕೊಂಬೆಗಳು. ಶಾಸ್ತ್ರೋಕ್ತವಾದ ಕರ್ಮಗಳೇ ಎಲೆಗಳು (ಮರವು ಪುಷ್ಟಿಯಾಗಿ ಬೆಳೆದು ಫಲಕೊಡಬೇಕಾದರೆ) ಅದರ ಬೇರನ್ನು ಎಲ್ಲ ಪ್ರಯತ್ನಗಳಿಂದಲೂ ರಕ್ಷಿಸಬೇಕು. ಬೇರೇ ನಷ್ಟವಾದರೆ ಕೊಂಬೆಯೂ ಇಲ್ಲ ; ಪತ್ರವೂ ಇಲ್ಲ" ಎಂದು ಎಚ್ಚರಿಕೆ ನೀಡಿದ್ದಾರೆ. ಸನಾತನಧರ್ಮದ ಸಾರಸರ್ವಸ್ವವನ್ನೂ ಅರಿತ ಮಹಾನ್ ಜ್ಞಾನಿಗಳು ಮಾತ್ರ ಇಂಥ ಉನ್ನತಮಾರ್ಗದರ್ಶನ ನೀಡಬಲ್ಲರು. ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ಉತ್ತರಾಧಿಕಾರಿಯವರಾದ ಶ್ರೀ ಅಭಿನವ ವಿದ್ಯಾತೀರ್ಥರಿಂದ "ಕನ್ನಡದ ಧಾರ್ಮಿಕ ಸಾಹಿತ್ಯಕ್ಷೇತ್ರದಲ್ಲಿ ಅನನ್ಯಲೇಖಕ" ಎಂದು ಪ್ರಶಂಸೆ ಪಡೆದ **ಅಭಿನವ ವ್ಯಾಸ** ದಿ॥ ಕೋಟ ವಾಸುದೇವ ಕಾರಂತರ ಧಾರ್ಮಿಕ ಶ್ರದ್ಧೆ ಮಹತ್ತರವಾದುದು. ಕಾರಂತರಷ್ಟು ನಿಸ್ವಾರ್ಥವಾಗಿ, ತೀವ್ರವಾಗಿ, ಸೂಕ್ತವಾಗಿ, ಸಕಾರಣವಾಗಿ ಸನಾತನ ಧರ್ಮದ ಮಹತ್ವವನ್ನು ಸಮರ್ಥಿಸಿ ಸಾಹಿತ್ಯ ರಚಿಸಿದ ಲೇಖಕರು ಕನ್ನಡನಾಡಿನಲ್ಲಷ್ಟೇ ಏಕೆ ; ಇಡೀ ಭರತಖಂಡದಲ್ಲೇ ಇಂದಿನ ದಿನಗಳಲ್ಲಿ ಇನ್ನೊಬ್ಬರಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಈ ಮಹಾನ್ ಚೇತನವು ವಿವೇಚಿಸಿ ರೂಪಿಸಿದ ಅತ್ಯುತ್ತಮ ಮಾರ್ಗದರ್ಶನ ಗ್ರಂಥ **ನಮ್ಮ ಬ್ರಾಹ್ಮಣ್ಯ**. ಬ್ರಾಹ್ಮಣ್ಯಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ನೀವು ತಿಳಿಯ ಬಯಸಿದರೂ, ಅದನ್ನು ಕುರಿತು ಸಮಗ್ರವಾಗಿ ವಿವರಿಸಬಲ್ಲ ವಿವರಣೆಗಳು ಈ ಕೃತಿಯಲ್ಲಿ ತುಂಬಿವೆ.

"ಇಂಥ ಕೃತಿಯೊಂದು ಇಂದಿನ ದಿನಗಳಲ್ಲಿ ನಮಗೆ ಓದಲು ದೊರೆತದ್ದು ಒಂದು ಪೂರ್ವಾರ್ಜಿತ ಪುಣ್ಯಫಲ" ಎಂದು ಎಂಥವರೂ ಅಂತಃಕರಣಪೂರ್ವಕವಾಗಿ ನುಡಿಯುವಂಥ ಸಾರ್ಥಕ ಸಾಹಿತ್ಯಕೃತಿ **ನಮ್ಮ ಬ್ರಾಹ್ಮಣ್ಯ**.

---

ರಕ್ಷಾಪುಟ ಮುದ್ರಣ : ಶ್ರೀ ಶಕ್ತಿ ಗಣೇಶ್ ಪ್ರಿಂಟರ್ಸ್, ಬೆಂಗಳೂರು-೫೬೦ ೦೦೪